


ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ

ಲಲಿತ ಮಹಲ್ ರಸ್ತೆ, ಮೈಸೂರು

ದೂರವಾಣಿ : 0821– 0821-2522902-906 ಫ್ಯಾಕ್ಸ್ : 0821-2444078

email: anssird@rediffmail.com

website: sirdmysore.gov.in


ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ - ಕರ್ನಾಟಕ

# ಮಹಾತ್ಮ ಗಾಂಧಿ
# ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ - ಕರ್ನಾಟಕ

# MG NREGA

## ಅಧಿಸೂಚನೆಗಳು, ನಿಯಮಗಳು ಹಾಗೂ ಸುತ್ತೋಲೆಗಳ ಸಂಪುಟ


ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ

ಲಲಿತ ಮಹಲ್ ರಸ್ತೆ, ಮೈಸೂರು - 570 011

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

# ಅಧಿಸೂಚನೆಗಳು, ನಿಯಮಗಳು ಹಾಗೂ ಸುತ್ತೋಲೆಗಳ ಸಂಪುಟ

## (2005–ಮಾರ್ಚ್ 2012)


**ಸಂಕಲನ**

**ಶ್ರೀ ಕೆ. ಕೃಷ್ಣಸ್ವಾಮಿ,** ಬೋಧಕರು, ಅನಸಾರಾಗ್ರಾ ಸಂಸ್ಥೆ, ಮೈಸೂರು

**ಶ್ರೀ ಕೆ.ಆರ್. ಶಂಕರ್,** ಬೋಧಕರು, ಅನಸಾರಾಗ್ರಾ ಸಂಸ್ಥೆ, ಮೈಸೂರು

**ಶ್ರೀ ನಿಂಗೇಗೌಡ,** ಪೀಠಾಧಿಕಾರಿ (ನಿವೃತ್ತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ, ಕ.ಸ.ಸಚಿವಾಲಯ



**ಸಹಕಾರ**

**ನಿರ್ದೇಶನಾಲಯ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಬಹುಮಹಡಿ ಕಟ್ಟಡ, ಬೆಂಗಳೂರು

ANSSIRD

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ**

**ಲಲಿತಮಹಲ್ ರಸ್ತೆ, ಮೈಸೂರು–570 011**

**ಎಂಜಿ ಎನ್‌ಆರ್‌ಇಜಿಎಸ್ ಅಧಿಸೂಚನೆ, ಅಧಿಕೃತ ಜ್ಞಾಪನ, ಆದೇಶ ಮತ್ತು ಸುತ್ತೋಲೆಗಳ ಸಂಪುಟ**ವನ್ನು ಕಾರ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರೂಪಿಸಲಾಗಿದೆ. ಸಂಸ್ಥೆಯ ಬೋಧಕರುಗಳಾದ ಶ್ರೀ ಕೆ. ಕೃಷ್ಣಸ್ವಾಮಿ ಮತ್ತು ಶ್ರೀ ಕೆ.ಆರ್. ಶಂಕರ್‌ರವರುಗಳು ಸಂಪಾದಿಸಿ, ಮೈಸೂರಿನ ಅನಸಾರಾಗ್ರಾಸಂಸ್ಥೆ ನಿರ್ದೇಶಕರಾದ ಶ್ರೀ ಎಸ್.ಎ. ಅಶ್ರಫುಲ್‌ಹಸನ್‌ರವರಿಂದ ಪ್ರಕಟಿಸಲ್ಪಟ್ಟಿದೆ.

ಪುಟಗಳು : 667+ v + 4

ಪ್ರಥಮ ಮುದ್ರಣ: 2011–12 – 15,000 ಪ್ರತಿಗಳು

ಹಕ್ಕುಗಳು: ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು

ಮುದ್ರಕರು: ಮೆ॥ ಕಮಲ್ ಇಂಪ್ರೆಷನ್ಸ್, ಮೈಸೂರು

ಅನಸಾ ರಾಗ್ರಾಸಂಸ್ಥೆ

# ಮುನ್ನುಡಿ ................



ಗ್ರಾಮೀಣ ಜನತೆಯು ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿಗೊಂಡಾಗ ಮಾತ್ರ ಭಾರತದ ರಾಜಕೀಯ ಸ್ವಾತಂತ್ರ್ಯದ ಮೂಲ ಉದ್ದೇಶ ಈಡೇರುವುದೆಂದು ಮಹಾತ್ಮಗಾಂಧಿಜೀಯವರು ಅಭಿಪ್ರಾಯಪಟ್ಟಿದ್ದರು. ಗ್ರಾಮೀಣ ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿದ್ದರೂ ಸಹ ಗ್ರಾಮೀಣ ಜನತೆಯು ಉದ್ಯೋಗವಕಾಶಕ್ಕಾಗಿ ಪಟ್ಟಣ ಮತ್ತು ಇತರೆ ಔದ್ಯಮಿಕ ಕೇಂದ್ರಗಳಿಗೆ ವಲಸೆ ಹೋಗುತ್ತಿರುವುದನ್ನು ತಡೆಗಟ್ಟಲು, ಅವರುಗಳಿಗೆ ಸ್ಥಳೀಯವಾಗಿ ಉದ್ಯೋಗ ನೀಡುವ ದೂರದೃಷ್ಟಿಯಿಂದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – 2005 ಎಂಬ ಮಹಾತ್ವಾಕಾಂಕ್ಷೆ ಯೋಜನೆಯನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಡನೆ ರಾಷ್ಟ್ರವ್ಯಾಪ್ತಿ ಜಾರಿಗೆ ತಂದಿರುತ್ತದೆ. ಈ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಆಯ – ವ್ಯಯದಲ್ಲಿ ಬೃಹತ್ ಪ್ರಮಾಣದ ಅನುದಾನವನ್ನು ನಿಗದಿಗೊಳಿಸಲಾಗಿರುತ್ತದೆ. ಈ ಯೋಜನೆಯ ಅನುಷ್ಠಾನದ ಮೂಲಕ ಗ್ರಾಮೀಣ ಜನತೆಯ ಅನುಕೂಲಕ್ಕಾಗಿ ಸ್ಥಳೀಯ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸುವುದು ಹಾಗೂ ನಿರಂತರ ಉಪಯೋಗವೆನಿಸಬಹುದಾದ ಆಸ್ತಿಗಳನ್ನು ಸೃಜಿಸುವ ಉದ್ದೇಶವನ್ನೂ ಸಹ ಈ ಯೋಜನೆಯು ಹೊಂದಿರುತ್ತದೆ. ಇಂತಹ ಬಹುಪಯೋಗಿ ಯೋಜನೆಯನ್ನು ಸಮರ್ಥನೀಯವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಮತ್ತು ಹೊಣೆಗಾರಿಕೆ ಪಂಚಾಯತ್ ರಾಜ್ ಸಂಸ್ಥೆಗಳ ಮೇಲೆ ಅದರಲ್ಲೂ ಪ್ರಮುಖವಾಗಿ ಗ್ರಾಮ ಪಂಚಾಯತಿಯ ಆಡಳಿತ ವ್ಯವಸ್ಥೆಯ ಮೇಲಿರುತ್ತದೆ.

ಈ ಯೋಜನೆಯುನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿ ಶಾಸನಬದ್ಧವಾಗಿರುವುದರಿಂದ ಪಂಚಾಯತ್ ರಾಜ್ ಸಂಸ್ಥೆಗಳ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳ ಅನುಷ್ಠಾನಾಧಿಕಾರಿಗಳ ಹೊಣೆಗಾರಿಕೆ ಹೆಚ್ಚಿನದಾಗಿರುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ಅಧಿಸೂಚನೆ, ಆದೇಶ, ಅಧಿಕೃತ ಜ್ಞಾಪನಗಳು, ಸುತ್ತೋಲೆಗಳು ಹಾಗೂ ಹಲವಾರು ಪತ್ರಗಳ ಮುಖಾಂತರ ಮಾರ್ಗದರ್ಶನಗಳನ್ನು ನೀಡುತ್ತಿರುತ್ತವೆ. ಯೋಜನೆಯನ್ನು ಅನುಷ್ಠಾನಗೊಳಿಸುವ ಸಮಯದಲ್ಲಿ ಮೇಲಿನ ಎಲ್ಲಾ ಮಾರ್ಗಸೂಚಿಗಳು ಮತ್ತು ನಿರ್ದೇಶನಗಳನ್ನು ಅನುಸರಿಸುವುದು ಅನುಷ್ಠಾನಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಅನುಷ್ಠಾನ ಪ್ರಕ್ರಿಯೆಗಳಲ್ಲಿ ಸಂಭವಿಸಬಹುದಾದ ಲೋಪಗಳು ಯೋಜನೆಯ ಉದ್ದೇಶವನ್ನು ನಿರರ್ಥಕಗೊಳಿಸುವುದಲ್ಲದೆ ಸಂಬಂಧಿಸಿದ ಅಧಿಕಾರಿಗಳು ಮತ್ತು ನೌಕರರುಗಳ ಮೇಲೆ ಕರ್ತವ್ಯ ಲೋಪದ ಆಧಾರದ ಮೇರೆಗೆ ಶಿಸ್ತು ಕ್ರಮ ಜರುಗಿಸಲು ಅನುವು ಮಾಡಿಕೊಡುತ್ತದೆ. ಇಂತಹ ಸಂದಿಗ್ಧತೆಯನ್ನು ನಿವಾರಿಸಲು ಸರ್ಕಾರವು ಹೊರಡಿಸುವ ಸುತ್ತೋಲೆ, ಆದೇಶ ಮತ್ತು ಇತರೆ ಮಾರ್ಗಸೂಚಿಗಳನ್ನು ಮನನ ಮಾಡಿಕೊಳ್ಳುವುದು ಪ್ರತಿಯೊಬ್ಬರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಆದುದರಿಂದ ಯೋಜನೆಯ ಪ್ರಾರಂಭದ ವರ್ಷದಿಂದ (2005 – ಮಾರ್ಚ್ 2012 ರವರೆಗೆ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೊರಡಿಸಿರುವ ಅಧಿಸೂಚನೆ, ಆದೇಶ, ಅಧಿಕೃತ ಜ್ಞಾಪನಗಳು, ಸುತ್ತೋಲೆಗಳು ಹಾಗೂ ಹಲವಾರು ಪತ್ರಗಳ ಪ್ರತಿಗಳನ್ನಾಧರಿಸಿ "ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸುತ್ತೋಲೆಗಳ ಸಂಕಲನ"ವನ್ನು ನಮ್ಮ ಸಂಸ್ಥೆಯ ಎಂ.ಜಿ.ಎನ್.ಆರ್.ಇ.ಜಿ.ಎಸ್. ತರಬೇತಿ ವಿಭಾಗದ ಬೋಧಕ ವರ್ಗ, ತರಬೇತಿ ಸಮಾಲೋಚಕರು ಹಾಗೂ ಸಿಬ್ಬಂದಿ ವರ್ಗದವರಿಂದ ಸಿದ್ಧಪಡಿಸಲಾಗಿರುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಿಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಈ ಸಂಪುಟವು ಸುವ್ಯವಸ್ಥಿತ ಹಾಗೂ ಪರಿಣಾಮಕಾರಿಯಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಹಾಯಕವಾಗಲಿ ಎಂದು ಶುಭ ಹಾರೈಸುತ್ತೇವೆ.

**ಡಾ॥ ಅಮಿತಾ ಪ್ರಸಾದ್** ಭಾ.ಆ.ಸೇ.
ಮಹಾ ನಿರ್ದೇಶಕರು

# ಸಂಪುಟ ಕುರಿತು...............



ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನಸಾಮಾನ್ಯರ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ರೂಪಿಸುವ ಹಲವಾರು ನೀತಿ ನಿಯಮಗಳು ಶ್ರೀಸಾಮಾನ್ಯರಿಗೆ ತಲುಪಿಸಲು ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದ ಅಧಿಕಾರವನ್ನು ವಿಕೇಂದ್ರೀಕರಿಸಲು ಕೆಳಸ್ತರದ ಚುನಾಯಿತ ಪಂಚಾಯತ್ ರಾಜ್ ಸಂಸ್ಥೆಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಹೀಗೆ ರೂಪಿಸಲಾದ ಮೂರು ಸ್ತರಗಳ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಯ ಪಾತ್ರ ಪ್ರಮುಖವಾಗಿದ್ದು, ಇದು ಸ್ಥಳೀಯ ಜನತೆಯ **ಗ್ರಾಮಸರ್ಕಾರ**ವೆಂದು ಬಿಂಬಿತವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗಾಗಿ ರೂಪಿಸುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಂತಿಮವಾಗಿ ಗ್ರಾಮಗಳ ಹಂತದಲ್ಲಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಮತ್ತು ನೌಕರ ವರ್ಗದವರು, ಸರ್ಕಾರವು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸುವ ಮಾರ್ಗಸೂಚಿಗಳ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿರುವುದರ ಜೊತೆಗೆ ಸ್ಥಳೀಯ ಜನತೆಗೆ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸೂಕ್ತ ತಿಳುವಳಿಕೆ ಕೊಡುವ ಸಾಮರ್ಥ್ಯವನ್ನು ಹೊಂದಿರಬೇಕಾಗಿರುವುದು ಆಡಳಿತಾತ್ಮಕವಾಗಿ ಅತ್ಯಾವಶ್ಯಕವಾಗಿರುತ್ತದೆ.

ಅಕುಶಲ ಗ್ರಾಮೀಣ ಜನತೆಯು, ಅನಾವೃಷ್ಟಿ ಅಥವಾ ಅತಿವೃಷ್ಟಿ ಸಮಯದಲ್ಲಿ, ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸ್ಥಳೀಯವಾಗಿ ಉದ್ಯೋಗ ದೊರಕದ ಕಾರಣ, ಉದ್ಯೋಗವನ್ನರಸಿ ಪಟ್ಟಣಗಳಿಗೆ ವಲಸೆ ಹೋಗುವುದರಿಂದ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುವುದರ ಜೊತೆಗೆ ಗ್ರಾಮೀಣ ಕುಟುಂಬದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಮೇಲೆ ಅನಿಷ್ಠ ಪರಿಣಾಮಗಳನ್ನುಂಟುಮಾಡುತ್ತದೆ. ಇದನ್ನು ನಿವಾರಿಸಲು ಭಾರತ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – 2005ನ್ನು ಜಾರಿಗೆ ತಂದಿರುತ್ತದೆ. ಇದು ಶಾಸನಬದ್ಧ ಜವಾಬ್ದಾರಿಯಾಗಿದ್ದು, ಪಂಚಾಯತ್ ರಾಜ್ ಸಂಸ್ಥೆಗಳು ಈ ಜವಾಬ್ದಾರಿಯನ್ನು ಅತ್ಯಂತ ಹೊಣೆಗಾರಿಕೆಯಿಂದ ನಿರ್ವಹಿಸಬೇಕಾಗಿರುತ್ತದೆ. ಗ್ರಾಮೀಣ ಜನತೆಗೆ ಸ್ಥಳೀಯವಾಗಿ ಉದ್ಯೋಗ ನೀಡುವುದರ ಜೊತೆಗೆ ಗ್ರಾಮ ಪಂಚಾಯತಿ ಹಂತದಲ್ಲಿ ಬಹು ಉಪಯೋಗಿ ಶಾಶ್ವತ ಸ್ವತ್ತನ್ನು ಸೃಜಿಸಬಹುದಾಗಿರುತ್ತದೆ. ಈ ಅಭಿವೃದ್ಧಿ ಕಾರ್ಯಕ್ರಮವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಜಾರಿಗೊಳಿಸಲಾಗಿದ್ದು, ಅನುಷ್ಠಾನದ ಸಂಬಂಧ ಹಲವಾರು ಅಧಿಸೂಚನೆ, ನಿಯಮಗಳು, ಸುತ್ತೋಲೆ ಹಾಗೂ ಮಾರ್ಗಸೂಚಿಗಳನ್ನು ಸರ್ಕಾರ ಆಗಿಂದಾಗ್ಗೆ ಹೊರಡಿಸುತ್ತಿರುತ್ತದೆ. ಈ ಮಾರ್ಗಸೂಚಿಗಳಿಗನುಸಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನೆರವಾಗಲು ಅನುವಾಗುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ – 2005ಕ್ಕೆ ಸಂಬಂಧಿಸಿದಂತೆ ಸರ್ಕಾರವು 2005 ರಿಂದ ಮಾರ್ಚ್ 2012 ರವರೆವಿಗೆ ಹೊರಡಿಸಿರುವ ಎಲ್ಲಾ ಅಧಿಸೂಚನೆ, ಆದೇಶ, ಅಧಿಕೃತ ಜ್ಞಾಪನಗಳು, ಸುತ್ತೋಲೆಗಳು ಹಾಗೂ ಹಲವಾರು ಪತ್ರಗಳ ಪ್ರತಿಗಳನ್ನಾಧರಿಸಿ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ತಾಲ್ಲೂಕು ಪಂಚಾಯತಿ ಕಾರ್ಯಾಲಯದ ಸಹಾಯಕ ನಿರ್ದೇಶಕರು (ಉದ್ಯೋಗ), ಕಾರ್ಯಕ್ರಮ ಅಧಿಕಾರಿಗಳೆಂದು ಗುರುತಿಸಿರುವ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಹಾಗೂ ಇತರೆ ಅಭಿವೃದ್ಧಿ ಇಲಾಖೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಅಧಿಕಾರಿಗಳಿಗೆ ಉಪಯುಕ್ತವಾಗಲಿದೆ ಎಂಬ ಶುಭ ಹಾರೈಕೆಯಿಂದ ಈ ಸಂಪುಟವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹೊರತಂದಿರುತ್ತದೆ. ಈ ಸಂಪುಟವನ್ನು ಹೊರತರಲು ತರಬೇತಿ ಸಮಾಲೋಚಕರುಗಳಾದ ಶ್ರೀ ಸಿ. ವಿಜಯಕುಮಾರ್, ಶ್ರೀ ಶಂಕರ ಬಳ್ಳೆಕೆರೆ ಮತ್ತು ಶ್ರೀ ಹನುಮಂತ ಟಕ್ಕನ್ನವರ ಮತ್ತು ಸಂಸ್ಥೆಯ ಸಿಬ್ಬಂದಿ ಸಹಕಾರವನ್ನು ನೀಡಿರುತ್ತಾರೆ. ಯೋಜನೆಯ ಉದ್ದೇಶವನ್ನು ಸಾರ್ಥಕಪಡಿಸುವ ನಿಟ್ಟಿನಲ್ಲಿ ಎಲ್ಲಾ ಅನುಷ್ಠಾನಾಧಿಕಾರಿಗಳಿಗೂ ಈ ಸಂಪುಟ ಅನುಕೂಲವಾಗುವುದೆಂಬ ಆಶಯ ಹೊಂದಲಾಗಿದೆ.

**ಎಸ್.ಎ. ಅಶ್ರಫುಲ್ ಹಸನ್**
ನಿರ್ದೇಶಕರು

# ಕಾಯ್ದೆ ಮತ್ತು ತಿದ್ದುಪಡಿಗಳು

ಅನಸೂ ರಾಗಸಂಸ್ಥೆ

// The Gazette of India

## ಭಾರತ ರಾಜ ಪತ್ರ

**(EXTRAORDINARY)**

**(ವಿಶೇಷ ಸಂಚಿಕೆ)**

**PART IX** — **SECTION 1**

ಭಾಗ ೧ — ವಿಭಾಗ – ೧

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

**No. 2 New Delhi, Thursday, January – 12, 2011, Pushya 23, 1932 (Saka) Vol. 44**

**ಸಂ.೨. ನವದೆಹಲಿ, ಗುರುವಾರ ಜನವರಿ ೧೩, ೨೦೧೧ ಪುಷ್ಯ ೨೩, ೧೯೩೨ (ಶಕ) ಸಂಪುಟ ೪೪**

**Ministry of Law and Justicie**

**(Legislative Department)**

**New Delhi, 13th January – 2011**

**ಕಾನೂನು ಮತ್ತು ನ್ಯಾಯ ಪಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, ೧೩ನೇ ಜನವರಿ,೨೦೧೧**

The Translation in Kannada of the following Act, namely :- The Mahatma Gandhi National Rural Employment Guarantes Act, 2005 – is hereby published under the authority of the President and shall be deemed to be authoritative text therof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ, ಎಂದರೆ:– ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ – ೨೦೦೫ ಇದರ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ (೧೯೭೩ರ ೫೦) ೨ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005
# (2005ರ ಅಧಿನಿಯಮ ಸಂಖ್ಯೆ 42)

[5ನೇ ಸೆಪ್ಟೆಂಬರ್, 2005]

ಅಕುಶಲ ದೈಹಿಕ ಕೆಲಸವನ್ನು ತಾನಾಗಿ ಮಾಡಲಿಚ್ಛಿಸುವ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರಿಗೆ ಪ್ರತಿಯೊಂದು ಹಣಕಾಸು ವರ್ಷದಲ್ಲಿ ಕನಿಷ್ಠ ಒಂದು ನೂರು ದಿನಗಳ ಖಾತರಿ ಮಜೂರಿ ಉದ್ಯೋಗ ಒದಗಿಸುವ ಮೂಲಕ ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ಜೀವನಾಧಾರ ಭದ್ರತೆ ಹೆಚ್ಚಿಸಲು ಮತ್ತು ಇದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಅನುಷಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು: –

## ಅಧ್ಯಾಯ – I
## ಪ್ರಾರಂಭಿಕ

### 1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:

1. ಈ ಅಧಿನಿಯಮವನ್ನು [ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ], 2005 ಎಂದು ಕರೆಯತಕ್ಕದ್ದು.
2. ಇದು [ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ] ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.
3. ಇದು ಕೇಂದ್ರ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ವಿವಿಧ ರಾಜ್ಯಗಳಿಗೆ ಅಥವಾ ರಾಜ್ಯದ ವಿವಿಧ ಪ್ರದೇಶಗಳಿಗೆ ವಿವಿಧ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದ ಯಾವುದೇ ಅಂತಹ ಉಲ್ಲೇಖವನ್ನು ಆ ಉಪಬಂಧವು ಅಂತಹ ರಾಜ್ಯದಲ್ಲಿ ಅಥವಾ ಸಂದಾರ್ಭನುಸಾರ ಅಂತಹ ಪ್ರದೇಶದಲ್ಲಿ ಜಾರಿಗೆ ಬರುವ ದಿನಾಂಕಕ್ಕೆ ಸಂಬಂಧಿಸಿದಂತೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

ಪರಂತು, ಈ ಅಧಿನಿಯಮವನ್ನು ಅಧಿನಿಯಮಿಸಿದ ದಿನಾಂಕದಿಂದು ಐದು ವರ್ಷಗಳ ಅವಧಿಯೊಳಗಾಗಿ ಈ ಅಧಿನಿಯಮವು ವ್ಯಾಪ್ತವಾಗುವ ಇಡೀ ರಾಜ್ಯಕ್ಷೇತ್ರಕ್ಕೆ ಅದು ಅನ್ವಯವಾಗತಕ್ಕದ್ದು.

### 2. ಪರಿಭಾಷೆಗಳು: ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು –

(ಎ) 'ವಯಸ್ಕ' ಎಂದರೆ ಹದಿನೆಂಟು ವರ್ಷಗಳ ವಯಸ್ಸು ಪೂರ್ಣವಾಗಿರುವ ವ್ಯಕ್ತಿ ಎಂದು ಅರ್ಥ

(ಬಿ) 'ಅರ್ಜಿದಾರ' ಎಂದರೆ ಈ ಕಾರ್ಯಯೋಜನೆಯ ಮೇರೆಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿರುವ ಕುಟುಂಬದ ಮುಖ್ಯಸ್ಥ ಅಥವಾ ಅದರ ಇತರ ವಯಸ್ಕ ಸದಸ್ಯರು ಎಂದು ಅರ್ಥ.

(ಸಿ) 'ಕ್ಷೇತ್ರ'ಎಂದರೆ ಜಿಲ್ಲೆಯೊಳಗಿನ ಗ್ರಾಮ ಪಂಚಾಯಿತಿಗಳ ಒಂದು ಸಮೂಹವನ್ನು ಒಳಗೊಂಡಿರುವ ಒಂದು ಸಮುದಾಯ ಅಭಿವೃದ್ಧಿ ಪ್ರದೇಶ ಎಂದು ಅರ್ಥ.

(ಡಿ) 'ಕೇಂದ್ರ ಪರಿಷತ್ತು' ಎಂದರೆ 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಕೇಂದ್ರ ಉದ್ಯೋಗ ಖಾತರಿ ಪರಿಷತ್ತು ಎಂದು ಅರ್ಥ.

(ಇ) 'ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ' ಎಂದರೆ ಜಿಲ್ಲೆಯಲ್ಲಿ ಕಾರ್ಯ ಯೋಜನೆಯನ್ನು ಕಾರ್ಯಗತಗೊಳಿಸಲು

---

* 2009 ಅಧಿನಿಯಮ ಸಂಖ್ಯೆ 46ರ ಮೂಲಕ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ' ಎಂಬ ಪದಗಳಿಗೆ ಬದಲಾಗಿ (ದಿ.2.10.2009 ರಿಂದ ಜಾರಿ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
* ಜಮ್ಮು ಮತ್ತುಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ' ಎಂಬ ಪದಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವಿಸ್ತರಣೆ) ಅಧಿನಿಯಮ 2007 (ಅ.ಸಂ 2007/23) ಜಾರಿಗೆ ಬಂದ ತಕ್ಷಣ ತೆಗೆದುಹಾಕತಕ್ಕದ್ದು)

14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಹೆಸರಿಸಲಾದ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ ಎಂದು ಅರ್ಥ.

(ಎಫ್) 'ಕುಟುಂಬ' ಎಂದರೆ ರಕ್ತ ಸಂಬಂಧ, ವಿವಾಹ ಅಥವಾ ದತ್ತಕದ ಮೂಲಕ ಪರಸ್ಪರ ಸಂಬಂಧ ಹೊಂದಿರುವ ಮತ್ತು ಸಾಮಾನ್ಯವಾಗಿ ಒಟ್ಟಾಗಿ ವಾಸವಾಗಿರುವ ಮತ್ತು ಜೊತೆಯಲ್ಲಿ ಊಟ ಮಾಡುವ ಅಥವಾ ಒಂದೇ ಪಡಿತರ ಚೀಟಿ ಹೊಂದಿರುವ ಕುಟುಂಬದ ಸದಸ್ಯರು ಎಂದು ಅರ್ಥ.

(ಜಿ) 'ಅನುಷ್ಠಾನ ಏಜೆನ್ಸಿ'ಯು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಇಲಾಖೆ, ಜಿಲ್ಲಾ ಪರಿಷತ್ತು, ಮಧ್ಯಂತರ ಹಂತದ ಪಂಚಾಯಿತಿ, ಗ್ರಾಮ ಪಂಚಾಯಿತಿ ಅಥವಾ ಯಾವುದೇ ಸ್ಥಳಿಯ ಪ್ರಾಧಿಕಾರ ಅಥವಾ ಸರ್ಕಾರಿ ಉದ್ಯಮ ಅಥವಾ ಒಂದು ಕಾರ್ಯಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಯಾವುದೇ ಕೆಲಸದ ಅನುಷ್ಠಾನವನ್ನು ಕೈಗೊಳ್ಳು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತಗೊಳಿಸಲ್ಪಟ್ಟ ಸರ್ಕಾರೇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ:

(ಹೆಚ್) ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ 'ಕನಿಷ್ಠ ಮಜೂರಿ' ಎಂದರೆ ಆ ಪ್ರದೇಶಕ್ಕೆ ಅನ್ವಯವಾಗುವಂತೆ ಕನಿಷ್ಠ ಮಜೂರಿಗಳ ಅಧಿನಿಯಮ, 1948ರ (1948ರ 11) 3ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಕೃಷಿ ಕಾರ್ಮಿಕರಿಗೆ ನಿಗಧಿಪಡಿಸಿದ ಕನಿಷ್ಠ ಮಜೂರಿ.

(ಐ) 'ರಾಷ್ಟ್ರೀಯ ನಿಧಿ' ಎಂದರೆ 20ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿ ಎಂದು ಅರ್ಥ;

(ಜೆ) 'ಅಧಿಸೂಚನೆ' ಎಂದರೆ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ ಎಂದು ಅರ್ಥ;

(ಕೆ) 'ಆದ್ಯತಾ ಕೆಲಸ' ಎಂದರೆ ಕಾರ್ಯಯೋಜನೆಯ ಮೇರೆಗೆ ಆದ್ಯತೆಯ ಆಧಾರದ ಮೇಲೆ ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳಲಾದ ಯಾವುದೇ ಕೆಲಸ ಎಂದು ಅರ್ಥ.

(ಎಲ್) 'ನಿಯಮಿಸಲಾದುದು' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಂದ ನಿಯಮಿಸಲಾದುದು ಎಂದು ಅರ್ಥ;

(ಎಂ) 'ಕಾರ್ಯಕ್ರಮ ಅಧಿಕಾರಿ' ಎಂದರೆ ಕಾರ್ಯಯೋಜನೆಯ ಅನುಷ್ಠಾನಕ್ಕಾಗಿ 15ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನೇಮಕಗೊಂಡಿರುವ ಅಧಿಕಾರಿ ಎಂದು ಅರ್ಥ.

(ಎನ್) 'ಪರಿಯೋಜನೆ' ಎಂದರೆ ಅರ್ಜಿದಾರರಿಗೆ ಉದ್ಯೋಗ ಒದಗಿಸುವ ಉದ್ದೇಶಕ್ಕಾಗಿ ಒಂದು ಕಾರ್ಯಯೋಜನೆಯ ಮೇರೆಗೆ ಕೈಗೆತ್ತಿಕೊಳ್ಳಲಾದ ಯಾವುದೇ ಕೆಲಸ ಎಂದು ಅರ್ಥ;

(ಒ) 'ಗ್ರಾಮೀಣ ಪ್ರದೇಶ' ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾದ ಅಥವಾ ರಚಿತವಾದ ಯಾವುದೇ ನಗರ ಸ್ಥಳೀಯ ಮಂಡಲಿ ಅಥವಾ ದಂಡು ಪ್ರದೇಶ ಮಂಡಲಿಗೆ ಒಳಪಟ್ಟ ಪ್ರದೇಶವನ್ನು ಹೊರತುಪಡಿಸಿ ರಾಜ್ಯದಲ್ಲಿನ ಯಾವುದೇ ಪ್ರದೇಶ ಎಂದು ಅರ್ಥ;

(ಪಿ) 'ಕಾರ್ಯಯೋಜನೆ' ಎಂದರೆ 4ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಕಾರ್ಯಯೋಜನೆ ಎಂದು ಅರ್ಥ;

(ಕ್ಯೂ) 'ರಾಜ್ಯ ಪರಿಷತ್ತು' ಎಂದರೆ 12ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಉದ್ಯೋಗ ಖಾತರಿ ಪರಿಷತ್ತು ಎಂದು ಅರ್ಥ;

(ಆರ್) 'ಅಕುಶಲ ದೈಹಿಕ ಕೆಲಸ' ಎಂದರೆ ಯಾವುದೇ ಕೌಶಲ್ಯ ಅಥವಾ ವಿಶೇಷ ತರಬೇತಿ ಇಲ್ಲದೆ ಯಾರೇ ವಯಸ್ಕ ವ್ಯಕ್ತಿ ಮಾಡಲು ಸಾಧ್ಯವಿರುವ ಯಾವುದೇ ದೈಹಿಕ ಕೆಲಸ ಎಂದು ಅರ್ಥ;

(ಎಸ್) 'ಮಜೂರಿ ದರ' ಎಂದರೆ 6ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಮಜೂರಿ ದರ ಎಂದು ಅರ್ಥ.

# ಅಧ್ಯಾಯ – II
# ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಖಾತರಿ

## 3. ಕುಟುಂಬಗಳಿಗೆ ಗ್ರಾಮೀಣ ಉದ್ಯೋಗ ಖಾತರಿ

1. ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂತೆ ರಾಜ್ಯದಲ್ಲಿನ ಅಂಥ ಗ್ರಾಮೀಣ ಪ್ರದೇಶಗಳಲ್ಲಿ ಈ ಅಧಿನಿಯಮದ ಮೇರೆಗೆ ರೂಪಿಸಿದ ಕಾರ್ಯಯೋಜನೆಗೆ ಅನುಸಾರವಾಗಿ ಒಂದು ಹಣಕಾಸು ವರ್ಷದಲ್ಲಿ ಒಂದು ನೂರು ದಿನಗಳಿಗೆ ಕಡಿಮೆ ಇಲ್ಲದಂತೆ ಅಕುಶಲ ದೈಹಿಕ ಕೆಲಸವನ್ನು ತಾನಾಗಿ ಮಾಡಲಿಚ್ಛಿಸುವ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರಿಗೆ ಅಂಥ ಕೆಲಸವನ್ನು ಒದಗಿಸತಕ್ಕದ್ದು.
2. ಈ ಕಾರ್ಯಯೋಜನೆಯ ಮೇರೆಗೆ ತನಗೆ ನೀಡಿರುವ ಕೆಲಸವನ್ನು ಮಾಡಿದ ಪ್ರತಿಯೊಬ್ಬ ವ್ಯಕ್ತಿಯು ಪ್ರತಿಯೊಂದು ದಿನದ ಕೆಲಸಕ್ಕಾಗಿ ಇರುವ ಮಜೂರಿಯ ದರದಲ್ಲಿ ಮಜೂರಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.
3. ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಒಂದು ವಾರದ ಆಧಾರದ ಮೇಲೆ ಅಥವಾ ಅಂಥ ಕೆಲಸವನ್ನು ಮಾಡಿದ ದಿನಾಂಕದ ನಂತರ ಯಾವುದೇ ಸಂದರ್ಭದಲ್ಲಿ ಹದಿನೈದು ದಿನಗಳಿಗೆ ಮೀರದಂತೆ, ದಿನದ ಮಜೂರಿಯನ್ನು ವಿತರಣೆ ಮಾಡತಕ್ಕದ್ದು.
4. ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ (1)ನೇ ಉಪಪ್ರಕರಣದ ಮೇರೆಗೆ ಖಾತರಿ ನೀಡಲಾದ ಅವಧಿಯ ನಂತರದ ಯಾವುದೇ ಅವಧಿಗೆ ಯುಕ್ತವೆಂದು ಭಾವಿಸಬಹುದಾದಂತೆ ಕಾರ್ಯಯೋಜನೆಯ ಮೇರೆಗೆ ಒಂದು ಕುಟುಂಬದ ಪ್ರತಿಯೊಬ್ಬ ವಯಸ್ಕ ಸದಸ್ಯನಿಗೆ ಕೆಲಸವನ್ನು ದೊರಕಿಸಿಕೊಡಲು ಉಪಬಂಧವನ್ನು ಕಲ್ಪಿಸಬಹುದು.

ಅನುಸಂಧಾನ

# ಅಧ್ಯಾಯ – III

# ಉದ್ಯೋಗ ಖಾತರಿ ಕಾರ್ಯಯೋಜನೆಗಳು ಮತ್ತು ನಿರುದ್ಯೋಗ ಭತ್ಯೆ

## 4. ಗ್ರಾಮೀಣ ಪ್ರದೇಶಗಳಿಗೆ ಉದ್ಯೋಗ ಖಾತರಿ ಕಾರ್ಯಯೋಜನೆಗಳು

(1) 3ನೇ ಪ್ರಕರಣದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಗಳಿಗಾಗಿ, ಈ ಕಾರ್ಯಯೋಜನೆಯ ಮೇರೆಗೆ ಒಳಗೊಂಡ ಗ್ರಾಮೀಣ ಪ್ರದೇಶಗಳಲ್ಲಿನ ಪ್ರತಿಯೊಂದು ಕುಟುಂಬಕ್ಕೆ ಮತ್ತು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಮತ್ತು ಈ ಕಾರ್ಯಯೋಜನೆಯಲ್ಲಿ ಹೇಳಲಾದ ಷರತ್ತುಗಳಿಗೊಳಪಟ್ಟು ಅಕುಶಲ ದೈಹಿಕ ಕೆಲಸವನ್ನು ಮಾಡಲು ಅರ್ಜಿಯ ಮೂಲಕ ತಾನಾಗಿ ಇಚ್ಛಿಸುವ ಕುಟುಂಬಗಳ ವಯಸ್ಕ ಸದಸ್ಯರಿಗೆ ಒಂದು ಹಣಕಾಸು ವರ್ಷದಲ್ಲಿ ಒಂದು ನೂರು ದಿನಗಳಿಗೆ ಕಡಿಮೆ ಇಲ್ಲದಂತೆ ಖಾತರಿ ಉದ್ಯೋಗವನ್ನು ಒದಗಿಸುವುದಕ್ಕಾಗಿ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗಾಗಿ ಪ್ರತಿಯೊಂದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕಾರ್ಯಯೋಜನೆಯನ್ನು ರಚಿಸತಕ್ಕದ್ದು.

ಪರಂತು, ರಾಜ್ಯ ಸರ್ಕಾರವು ಅಂಥ ಯಾವುದೇ ಕಾರ್ಯಯೋಜನೆಯನ್ನು ಅಧಿಸೂಚಿಸುವವರೆಗೆ, ಅಂಥ ಅಧಿಸೂಚನೆಗೆ ನಿಕಟಪೂರ್ವದಲ್ಲಿ ಸಂಬಂಧಪಟ್ಟ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಗಾಗಿ (ಎಸ್‌ಜಿಆರ್‌ವೈ) ಅಥವಾ ರಾಷ್ಟ್ರೀಯ ಕೂಲಿಗಾಗಿ ಕಾಳು ಕಾರ್ಯಕ್ರಮಕ್ಕಾಗಿ ಇರುವ (ಎನ್‌ಎಫ್‌ಎಫ್‌ಡಬ್ಲ್ಯೂಪಿ) ವಾರ್ಷಿಕ ಕ್ರಿಯಾ ಯೋಜನೆ ಅಥವಾ ವಾಸ್ತವಿಕ ದೃಷ್ಟಿ ಆಧಾರಿತ ಯೋಜನೆಯನ್ನು, ಈ ಅಧಿನಿಯಮದ ಉದ್ದೇಶಗಳಿಗೆ ಕಾರ್ಯಯೋಜನೆಗಾಗಿ ಇರುವ ಕ್ರಿಯಾ ಯೋಜನೆ ಎಂಬುದಾಗಿ ಭಾವಿಸತಕ್ಕದ್ದು.

(2) ರಾಜ್ಯ ಸರ್ಕಾರವು, ತಾನು ರೂಪಿಸಿದ ಕಾರ್ಯಯೋಜನೆಯ ಸಾರಾಂಶವನ್ನು, ಕಾರ್ಯಯೋಜನೆಯು ಅನ್ವಯವಾಗುವ ಪ್ರದೇಶದಲ್ಲಿ ಅಥವಾ ಪ್ರದೇಶಗಳಲ್ಲಿ ಪ್ರಸಾರದಲ್ಲಿರುವ ಕೊನೆಯ ಪಕ್ಷ ಎರಡು ಸ್ಥಳೀಯ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು. ಅವುಗಳಲ್ಲಿ ಒಂದು ಸ್ಥಳೀಯ ಭಾಷೆಯದಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ರೂಪಿಸಲಾದ ಕಾರ್ಯಯೋಜನೆಯು ಅನುಸೂಚಿ–1 ರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ರೂಪುರೇಷೆಗಳನ್ನು ವಿವರಿಸತಕ್ಕದ್ದು,

## 5. ಉದ್ಯೋಗವನ್ನು ಖಾತರಿಯಾಗಿ ಒದಗಿಸುವುದಕ್ಕಾಗಿ ಷರತ್ತುಗಳು

(1) ರಾಜ್ಯ ಸರ್ಕಾರವು, ಅನುಸೂಚಿ–II ರಲ್ಲಿ ನಿರ್ಧಿಷ್ಟಪಡಿಸಿರುವ ಷರತ್ತುಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಮೇರೆಗೆ ಉದ್ಯೋಗವನ್ನು ಖಾತರಿಯಾಗಿ ಒದಗಿಸುವುದಕ್ಕಾಗಿ ಕಾರ್ಯಯೋಜನೆಯಲ್ಲಿ ಷರತ್ತುಗಳನ್ನು ನಿರ್ಧಿಷ್ಟಪಡಿಸಬಹುದು.

(2) ಈ ಅಧಿನಿಯಮದ ಮೇರೆಗೆ ರೂಪಿಸಿದ ಯಾವುದೇ ಕಾರ್ಯಯೋಜನೆಯ ಮೇರೆಗೆ ನಿಯೋಜಿತರಾದ ವ್ಯಕ್ತಿಗಳು ಅನುಸೂಚಿ–IIರಲ್ಲಿ ನಿರ್ಧಿಷ್ಟಪಡಿಸಿದ ಕನಿಷ್ಠ ಸೌಲಭ್ಯಗಳಿಗಿಂತ ಕಡಿಮೆ ಇಲ್ಲದಷ್ಟು ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

## 6. ಮಜೂರಿ ದರ

(1) ಕನಿಷ್ಠ ಮಜೂರಿಗಳ ಅಧಿನಿಯಮ, 1948 (1948ರ 1) ರಲ್ಲಿ ಏನೇ ಒಳಗೊಂಡಿದ್ದರೂ, ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ನಿರ್ಧಿಷ್ಟ ಮಜೂರಿ ದರವನ್ನು ಅದಿಸೂಚನೆಯ ಮೂಲಕ ನಿರ್ಧಿಷ್ಟಪಡಿಸಬಹುದು.

ಪರಂತು, ಬೇರೆ ಬೇರೆ ಪ್ರದೇಶಗಳಿಗಾಗಿ ಬೇರೆ ಬೇರೆ ಮಜೂರಿ ದರಗಳನ್ನು ನಿರ್ಧಿಷ್ಟಪಡಿಸಬಹುದು.

ಮತ್ತೂ ಪರಂತು, ಅಂಥ ಅಧಿಸೂಚನೆಯ ಮೇರೆಗೆ ಕಾಲಕಾಲಕ್ಕೆ ನಿರ್ಧಿಷ್ಟಪಡಿಸಿದ ಮಜೂರಿ ದರವು ದಿನ ಒಂದಕ್ಕೆ ಅರವತ್ತು ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(2) ಒಂದು ರಾಜ್ಯದಲ್ಲಿನ ಯಾವುದೇ ಪ್ರದೇಶದ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಮಜೂರಿ ದರವನ್ನು

ನಿಗಧಿಪಡಿಸುವವರೆಗೆ, ಕನಿಷ್ಠ ಮಜೂರಿಗಳ ಅಧಿನಿಯಮ, 1948 (1948ರ 1) ರ 3ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಕೃಷಿ ಕಾರ್ಮಿಕರಿಗಾಗಿ ನಿಗಧಿಪಡಿಸಿದ ಕನಿಷ್ಠ ಮಜೂರಿಯನ್ನು ಆ ಪ್ರದೇಶಕ್ಕೆ ಅನ್ವಯವಾಗುವಂತೆ ಮಜೂರಿ ದರ ಎಂಬುದಾಗಿ ಪರಿಗಣಿಸತಕ್ಕದ್ದು.

## 7. ನಿರುದ್ಯೋಗ ಭತ್ಯದ ಸಂದಾಯ

(1) ಈ ಕಾರ್ಯಯೋಜನೆ ಮೇರೆಗೆ ಉದ್ಯೋಗವನ್ನು ಕೋರಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ಅಥವಾ ಮುಂಗಡ ಅರ್ಜಿಯ ಸಂಬಂಧದಲ್ಲಿ ಉದ್ಯೋಗವನ್ನು ಕೋರಿರುವ ದಿನಾಂಕದಿಂದ – ಇದರಲ್ಲಿ ಯಾವುದು ನಂತರದ್ದೋ ಅದರೊಳಗಾಗಿ ಅಂಥ ಉದ್ಯೋಗವನ್ನು ಒದಗಿಸದಿದ್ದರೆ, ಈ ಪ್ರಕರಣದ ಅನುಸಾರವಾಗಿ ಅವನು ದಿನದ ನಿರುದ್ಯೋಗ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ನಿಗಧಿಪಡಿಸಬಹುದಾದಂಥ ಅರ್ಹತೆಯ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಈ ಅಧಿನಿಯಮದ ಉಪಬಂಧಗಳು ಮತ್ತು ಕಾರ್ಯಯೋಜನೆಗಳು ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಾಮರ್ಥ್ಯಕ್ಕೊಳಪಟ್ಟು, (1)ನೇ ಉಪ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಿರುದ್ಯೋಗ ಭತ್ಯೆಯನ್ನು ರಾಜ್ಯ ಪರಿಷತ್ತಿನೊಂದಿಗೆ ಸಮಾಲೋಚಿಸಿ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ನಿರ್ಧಿಷ್ಟಪಡಿಸಬಹುದಾದಂಥ ದರದಲ್ಲಿ ಕುಟುಂಬದ ಹಕ್ಕುಗಳಿಗೊಳಪಟ್ಟು ಆ ಕುಟುಂಬದ ಅರ್ಜಿದಾರರಿಗೆ ಸಂದಾಯ ಮಾಡತಕ್ಕದ್ದು.

ಪರಂತು, ಅಂಥ ದರವು ಹಣಕಾಸು ವರ್ಷದ ಮೊದಲ ಮೂವತ್ತು ದಿವಸಗಳ ಅವಧಿಗೆ ಮಜೂರಿಯ ದರದ ನಾಲ್ಕನೇ ಒಂದರಷ್ಟಕ್ಕಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಹಣಕಾಸು ವರ್ಷದ ಉಳಿದ ಅವಧಿಗೆ ಮಜೂರಿಯ ದರದ ಅರ್ಧಕ್ಕಿಂತ ಕಡಿಮೆಯಿರತಕ್ಕದ್ದಲ್ಲ

(3) ಯಾವುದೇ ಹಣಕಾಸು ವರ್ಷದ ಅವಧಿಯಲ್ಲಿ ಒಂದು ಕುಟುಂಬಕ್ಕೆ ನಿರುದ್ಯೋಗ ಭತ್ಯವನ್ನು ಸಂದಾಯ ಮಾಡಲು ರಾಜ್ಯ ಸರ್ಕಾರಕ್ಕೆ ಇರುವ ಹೊಣೆಗಾರಿಯು:

(ಎ) ಕೆಲಸಕ್ಕೆ ಹಾಜರಾಗಲು ತಾನೇ ಸ್ವತಃ ಬರುವಂತೆ ಅಥವಾ ಅವನ ಕುಟುಂಬದ ಕೊನೆಯ ಪಕ್ಷ ಒಬ್ಬ ವಯಸ್ಕ ಸದಸ್ಯನನ್ನು ನಿಯೋಜಿಸುವಂತೆ ಗ್ರಾಮ ಪಂಚಾಯಿತಿ ಅಥವಾ ಕಾರ್ಯಕ್ರಮ ಅಧಿಕಾರಿಯ ಅರ್ಜಿದಾರನಿಗೆ ನಿರ್ದೇಶಿಸಿದ ಕೂಡಲೇ ಅಥವಾ

(ಬಿ) ಅಂಥ ಉದ್ಯೋಗವನ್ನು ಕೋರಿರುವ ಅವಧಿಯು ಕೊನೆಗೊಂಡರೆ ಮತ್ತು ಅರ್ಜಿದಾರನ ಕುಟುಂಬದ ಯಾರೇ ಸದಸ್ಯನೂ ಉದ್ಯೋಗಕ್ಕೆ ಬಾರದೆ ಇದ್ದ ಕೂಡಲೇ ಅಥವಾ

(ಸಿ) ಅರ್ಜಿದಾರನ ಕುಟುಂಬದ ವಯಸ್ಕ ಸದಸ್ಯರು ಆ ಹಣಕಾಸು ವರ್ಷದಲ್ಲಿ ಒಟ್ಟಾರೆ ಕೊನೆಯ ಪಕ್ಷ ಒಂದು ನೂರು ದಿವಸಗಳ ಕೆಲಸವನ್ನು ಮಾಡಿದ ಕೂಡಲೇ ಅಥವಾ

(ಡಿ) ಅರ್ಜಿದಾರನ ಕುಟುಂಬವು ಹಣಕಾಸು ವರ್ಷದಲ್ಲಿ ಮಜೂರಿ ಮತ್ತು ನಿರುದ್ಯೋಗ ಭತ್ಯೆ ಎರಡನ್ನೂ ಒಟ್ಟಿಗೆ ಸೇರಿಸಿದಾಗ ಒಂದು ನೂರು ಕೆಲಸದ ದಿವಸಗಳ ಮಜೂರಿಗೆ ಸಮನಾದಷ್ಟನ್ನು ಗಳಿಸಿದ ಕೂಡಲೇ – ಕೊನೆಗೊಳ್ಳತಕ್ಕದ್ದು.

(4) ಅರ್ಜಿದಾರನ ಕುಟುಂಬಕ್ಕೆ ಜಂಟಿಯಾಗಿ ಸಂದಾಯ ಮಾಡಬೇಕಾದ ನಿರುದ್ಯೋಗ ಭತ್ಯೆವನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಈ ಸಂಬಂಧದಲ್ಲಿ ಅಧಿಕೃತಗೊಳಿಸಬಹುದಾದ ಕಾರ್ಯಕ್ರಮ ಅಧಿಕಾರಿಯು ಅಥವಾ ಅಂಥ ಸ್ಥಳೀಯ ಪ್ರಾಧಿಕಾರವು (ಜಿಲ್ಲಾ, ಮಧ್ಯವರ್ತಿ ಅಥವಾ ಗ್ರಾಮ ಮಟ್ಟದ ಪಂಚಾಯಿತಿಗಳೂ ಸೇರಿದಂತೆ) ಮಂಜೂರು ಮಾಡತಕ್ಕದ್ದು ಮತ್ತು ವಿತರಣೆ ಮಾಡತಕ್ಕದ್ದು.

(5) (1)ನೇ ಉಪಕರಣದ ಮೇರೆಗೆ ನಿರುದ್ಯೋಗ ಭತ್ಯದ ಪ್ರತಿಯೊಂದು ಸಂದಾಯವನ್ನು ಅದು ಸಂದಾಯಕ್ಕಾಗಿ ಬಾಕಿ ಇರುವಂಥ ದಿನಾಂಕದಿಂದ ಹದಿನೈದು ದಿವಸಗಳಿಗೆ ತಡವಾಗದಂತೆ ನೀಡತಕ್ಕದ್ದು ಅಥವಾ ಕೊಡಮಾಡತಕ್ಕದ್ದು.

(6) ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡುವುದಕ್ಕಾಗಿ ಕಾರ್ಯ ವಿಧಾನವನ್ನು ನಿಯಮಿಸಬಹುದು.

## 8. ಕೆಲವು ಸಂದರ್ಭಗಳಲ್ಲಿ ನಿರುದ್ಯೋಗ ಭತ್ಯೆಯನ್ನು ವಿತರಣೆ ಮಾಡದಿರುವುದು

(1) ಕಾರ್ಯಕ್ರಮ ಅಧಿಕಾರಿಯು ನಿರುದ್ಯೋಗ ಭತ್ಯವನ್ನು ಸಕಾಲದಲ್ಲಿ ಅಥವಾ ತನ್ನ ನಿಯಂತ್ರಣಕ್ಕೂ ಮೀರಿದ ಯಾವುದೇ ಕಾರಣಕ್ಕಾಗಿ ವಿತರಣೆ ಮಾಡುವ ಸ್ಥಿತಿಯಲ್ಲಿಲ್ಲದಿದ್ದರೆ, ಆತನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ವಿಷಯವನ್ನು ವರದಿ ಮಾಡತಕ್ಕದ್ದು ಮತ್ತು ಒಂದು ಸೂಚನೆಯಲ್ಲಿ ಅಂಥ ಕಾರಣಗಳನ್ನು ತಿಳಿಸಿ ಅದನ್ನು ತನ್ನ ಸೂಚನಾ ಫಲಕದ ಮೇಲೆ ಮತ್ತು ಗ್ರಾಮ ಪಂಚಾಯತಿಯ ಸೂಚನಾ ಫಲಕದಲ್ಲಿ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದಂಥ ಎದ್ದು ಕಾಣುವ ಇತರೆ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

(2) ನಿರುದ್ಯೋಗ ಭತ್ಯವನ್ನು ಸಂದಾಯ ಮಾಡದ ಅಥವಾ ವಿಳಂಬ ಸಂದಾಯದ ಪ್ರತಿಯೊಂದು ಸಂದರ್ಭವನ್ನು ಹಾಗೆ ಸಂದಾಯ ಮಾಡದಿರುವ ಅಥವಾ ಸಂದಾಯ ಮಾಡಲು ವಿಳಂಬವಾಗಿರುವ ಬಗ್ಗೆ ಕಾರಣಗಳೊಂದಿಗೆ ರಾಜ್ಯ ಸರ್ಕಾರಕ್ಕೆ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಸಲ್ಲಿಸುವ ವಾರ್ಷಿಕ ವರದಿಯಲ್ಲಿ ವರದಿ ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದ ಮೇರೆಗೆ ವರದಿ ಮಾಡಿದ ನಿರುದ್ಯೋಗ ಭತ್ಯವನ್ನು ರಾಜ್ಯ ಸರ್ಕಾರವು ಸಾಧ್ಯವಾದಷ್ಟು ತ್ವರಿತವಾಗಿ ಸಂಬಂಧಪಟ್ಟ ಕುಟುಂಬಕ್ಕೆ ಸಂದಾಯ ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

## 9. ಕೆಲವು ಸಂದರ್ಭಗಳಲ್ಲಿ ನಿರುದ್ಯೋಗ ಭತ್ಯವನ್ನು ಪಡೆಯಲು ಹಕ್ಕು ಇಲ್ಲದಿರುವುದು – ಒಬ್ಬ ಅರ್ಜಿದಾರನು,

(ಎ) ಒಂದು ಕಾರ್ಯಯೋಜನೆಯ ಮೇರೆಗೆ ಅವನ ಕುಟುಂಬಕ್ಕೆ ಒದಗಿಸಲಾದ ಉದ್ಯೋಗವನ್ನು ಅಂಗೀಕರಿಸದಿದ್ದರೆ, ಅಥವಾ

(ಬಿ) ಕಾರ್ಯಕ್ರಮ ಅಧಿಕಾರಿ ಅಥವಾ ಅನುಷ್ಠಾನ ಏಜೆನ್ಸಿಯ ಕೆಲಸಕ್ಕೆ ಹಾಜರಾಗುವಂತೆ ಅಧಿಸೂಚಿಸಲಾದ ಹದಿನೈದು ದಿನಗಳೊಳಗಾಗಿ ಕೆಲಸಕ್ಕೆ ಗೈರುಹಾಜರಾಗಿದ್ದರೆ; ಅಥವಾ

(ಸಿ) ಸಂಬಂಧಪಟ್ಟ ಅನುಷ್ಠಾನ ಏಜೆನ್ಸಿಯಿಂದ ಅನುಮತಿಯನ್ನು ಪಡೆಯದೆ ಒಂದು ವಾರಕ್ಕಿಂತ ಹೆಚ್ಚಿನ ಅವಧಿಯವರೆಗೆ ಕೆಲಸಕ್ಕೆ ನಿರಂತರವಾಗಿ ಗೈರುಹಾಜರಾಗಿದ್ದರೆ, ಅಥವಾ ಯಾವುದೇ ತಿಂಗಳಿನಲ್ಲಿ ಒಟ್ಟು ಒಂದು ವಾರಕ್ಕಿಂತ ಹೆಚ್ಚಿನ ಅವಧಿಯವರೆಗೆ ಗೈರುಹಾಜರಾಗಿದ್ದರೆ.

– ಅವನು, ಮೂರು ತಿಂಗಳ ಅವಧಿಯವರೆಗೆ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬಹುದಾದ ನಿರುದ್ಯೋಗ ಭತ್ಯವನ್ನು ಕ್ಲೇಮು ಮಾಡುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ, ಈ ಕಾರ್ಯಯೋಜನೆಯ ಮೇರೆಗೆ ಯಾವುದೇ ಸಮಯದಲ್ಲಿ ಉದ್ಯೋಗವನ್ನು ಪಡೆಯುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

# ಅಧ್ಯಾಯ – IV
# ಅನುಷ್ಠಾನ ಮತ್ತು ಮೇಲ್ವಿಚಾರಣಾ ಪ್ರಾಧಿಕಾರಗಳು

## 10. ಕೇಂದ್ರ ಉದ್ಯೋಗ ಖಾತರಿ ಪರಿಷತ್ತು

(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಹಿಸಲಾದ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಮತ್ತು ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ಕೇಂದ್ರ ಉದ್ಯೋಗ ಖಾತರಿ ಪರಿಷತ್ತು ಎಂದು ಕರೆಯಲಾಗುವ ಒಂದು ಮಂಡಲಿಯನ್ನು ಸ್ಥಾಪಿಸತಕ್ಕದ್ದು.

(2) ಕೇಂದ್ರ ಪರಿಷತ್ತಿನ ಕೇಂದ್ರ ಕಾರ್ಯಾಲಯವು ದೆಹಲಿಯಲ್ಲಿರತಕ್ಕದ್ದು.

(3) ಕೇಂದ್ರ ಪರಿಷತ್ತು, ಕೇಂದ್ರ ಸರ್ಕಾರವು ನೇಮಕ ಮಾಡುವ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:

(ಎ) ಒಬ್ಬ ಅಧ್ಯಕ್ಷ:

(ಬಿ) ಯೋಜನಾ ಆಯೋಗವೂ ಸೇರಿದಂತೆ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಸಂಖ್ಯೆಗಿಂತ ಹೆಚ್ಚಿಲ್ಲದ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಕೇಂದ್ರ ಸಚಿವಾಲಯಗಳ ಪ್ರತಿನಿಧಿಗಳು;

(ಸಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಸಂಖ್ಯೆಗಿಂತ ಹೆಚ್ಚಿಲ್ಲದ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು:*

(ಡಿ) ಪಂಚಾಯತ್ ರಾಜ್ಯ ಸಂಸ್ಥೆಗಳನ್ನು, ಕಾರ್ಮಿಕರ ಸಂಘಟನೆಗಳನ್ನು ಮತ್ತು ಅನುಕೂಲವಂಚಿತ ಸಮೂಹಗಳನ್ನು ಪ್ರತಿನಿಧಿಸುವ ಹದಿನೈದು ಮಂದಿಗಿಂತ ಹೆಚ್ಚಿಲ್ಲದ ಸಂಖ್ಯೆಯ ಸರ್ಕಾರೇತರ ಸದಸ್ಯರು.

ಪರಂತು, ಅಂಥ ಸರ್ಕಾರೇತರ ಸದಸ್ಯರಲ್ಲಿ ಒಂದು ಬಾರಿಗೆ ಒಂದು ವರ್ಷದ ಅವಧಿಯವರೆಗೆ ಸರದಿಯ ಮೇಲೆ, ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತರಾದ ಜಿಲ್ಲಾ ಪಂಚಾಯಿತಿಗಳ ಇಬ್ಬರು ಅಧ್ಯಕ್ಷರು ಇರತಕ್ಕದ್ದು;

ಮತ್ತೂ ಪರಂತು, ಈ ಖಂಡದ ಮೇರೆಗೆ ನಾಮ ನಿರ್ದೇಶಿತರಾದ ಸರ್ಕಾರೇತರ ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಮಹಿಳಾ ಸದಸ್ಯರು ಇರತಕ್ಕದ್ದು.

ಮತ್ತೂ ಪರಂತು, ಸರ್ಕಾರೇತರ ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಇತರ ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪ ಸಂಖ್ಯಾತರ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು;

(ಇ) ಕೇಂದ್ರ ಸರ್ಕಾರವು, ನಿಯಮಗಳ ಮೂಲಕ ಈ ಬಗ್ಗೆ ನಿರ್ಧರಿಬಹುದಾದಷ್ಟು ರಾಜ್ಯಗಳ ಪ್ರತಿನಿಧಿಗಳ ಸಂಖ್ಯೆ:

(ಎಫ್) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಸದಸ್ಯ ಕಾರ್ಯದರ್ಶಿ.

(4) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕೇಂದ್ರ ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಿಸಬಹುದೋ ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಕೇಂದ್ರ ಪರಿಷತ್ತಿನ ಸಭೆಗಳ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ಸಮಯ, ಸ್ಥಳ ಮತ್ತು ಕಾರ್ಯವಿಧಾನಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

---

* ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆ ದಿನಾಂಕ 12ನೇ ಮಾರ್ಚ್ 2009 ಜಿಎಸ್ಆರ್ 162 (ಇ) ನೋಡಿ

## 11. ಕೇಂದ್ರ ಪರಿಷತ್ತಿನ ಪ್ರಕಾರ್ಯಗಳು ಮತ್ತು ಕರ್ತವ್ಯಗಳು:

(1) ಕೇಂದ್ರ ಪರಿಷತ್ತು, ಈ ಮುಂದಿನ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಒಂದು ಕೇಂದ್ರ ಮೌಲ್ಯ ಮಾಪನ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸುವುದು.

(ಬಿ) ಈ ಅಧಿನಿಯಮದ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು.

(ಸಿ) ಮೇಲ್ವಿಚಾರಣೆ ಮತ್ತು ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯನ್ನು ಕಾಲಕಾಲಕ್ಕೆ ಪುನರವಲೋಕನ ಮಾಡುವುದು ಮತ್ತು ಅಗತ್ಯವಾದ ಸುಧಾರಣೆಗಳನ್ನು ಶಿಫಾರಸ್ಸು ಮಾಡುವುದು.

(ಡಿ) ಈ ಅಧಿನಿಯಮದ ಮೇರೆಗೆ ಸಿದ್ದಪಡಿಸಲಾದ ಕಾರ್ಯಯೋಜನೆಗಳನ್ನು ಕುರಿತ ಮಾಹಿತಿಯ ಬಗೆಗೆ ಸಾಧ್ಯವಾದಷ್ಟು ವ್ಯಾಪಕ ಪ್ರಸಾರವನ್ನು ಉತ್ತೇಜಿಸುವುದು.

(ಇ) ಈ ಅಧಿನಿಯಮದ ಅನುಷ್ಠಾನದ ಮೇಲ್ವಿಚಾರಣೆ ನಡೆಸುವುದು.

(ಎಫ್) ಈ ಅಧಿನಿಯಮದ ಅನುಷ್ಠಾನದ ಬಗೆಗೆ, ಕೇಂದ್ರ ಸರ್ಕಾರವು ಸಂಸತ್ತಿನ ಮುಂದೆ ಇರಿಸಬೇಕಾದ ವಾರ್ಷಿಕ ವರದಿಗಳನ್ನು ಸಿದ್ದಪಡಿಸುವುದು;

(ಜಿ) ಕೇಂದ್ರ ಸರ್ಕಾರವು ಅದಕ್ಕೆ ವಹಿಸಬಹುದಾದಂಥ ಯಾವುದೇ ಇತರ ಕರ್ತವ್ಯ ಅಥವಾ ಪ್ರಕಾರ್ಯ.

(2) ಕೇಂದ್ರ ಪರಿಷತ್ತು, ಈ ಅಧಿನಿಯಮದ ಮೇರೆಗೆ ರೂಪಿಸಲಾದ ವಿವಿಧ ಕಾರ್ಯ ಯೋಜನೆಗಳ ಮೌಲ್ಯಮಾಪವನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು, ಮತ್ತು ಆ ಉದ್ದೇಶಕ್ಕಾಗಿ, ಗ್ರಾಮೀಣ ಅರ್ಥವ್ಯವಸ್ಥೆ ಮತ್ತು ಕಾರ್ಯಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ಸಂಗ್ರಹಿಸತಕ್ಕದ್ದು ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದು.

## 12. ರಾಜ್ಯ ಉದ್ಯೋಗ ಖಾತರಿ ಪರಿಷತ್ತು

(1) ರಾಜ್ಯ ಮಟ್ಟದಲ್ಲಿ ಈ ಅಧಿನಿಯಮದ ಅನುಷ್ಠಾನವನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವ ಮತ್ತು ಪುನರಾವಲೋಕಿಸುವ ಉದ್ದೇಶಗಳಿಗಾಗಿ, ಪ್ರತಿಯೊಂದು ರಾಜ್ಯ ಸರ್ಕಾರವು, . . . . . . . . . . (ರಾಜ್ಯದ ಹೆಸರು) ರಾಜ್ಯ ಉದ್ಯೋಗ ಖಾತರಿ ಪರಿಷತ್ತು ಎಂದು ಕರೆಯಲಾಗುವ ಒಂದು ರಾಜ್ಯ ಪರಿಷತ್ತನ್ನು ಸ್ಥಾಪಿಸತಕ್ಕದ್ದು ಮತ್ತು ಈ ಪರಿಷತ್ತಿನಲ್ಲಿ ಒಬ್ಬ ಅಧ್ಯಕ್ಷ ಮತ್ತು ರಾಜ್ಯ ಸರ್ಕಾರವು ನಿರ್ಧರಿಸಬಹುದಾದಷ್ಟು ಸಂಖ್ಯೆಯ ಸರ್ಕಾರಿ ಸದಸ್ಯರು ಮತ್ತು ರಾಜ್ಯ ಸರ್ಕಾರವು, ಪಂಚಾಯತ್ ರಾಜ್ ಸಂಸ್ಥೆಗಳು, ಕಾರ್ಮಿಕರ ಸಂಘಟನೆಗಳು ಮತ್ತು ಅನುಕೂಲವಂಚಿತ ಸಮೂಹಗಳಿಂದ ನಾಮನಿರ್ದೇಶಿಸಿರುವ ಹದಿನೈದು ಮಂದಿಗಿಂತ ಹಚ್ಚಿಲ್ಲದ ಸರ್ಕಾರೇತರ ಸದಸ್ಯರು ಇರತಕ್ಕದ್ದು.

ಪರಂತು, ಈ ಖಂಡದ ಮೇರೆಗೆ ನಾಮ ನಿರ್ದೇಶಿಸಲಾದ ಸರ್ಕಾರೇತರ ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಲ್ಲದಷ್ಟು ಮಹಿಳಾ ಸದಸ್ಯರು ಇರತಕ್ಕದ್ದು;

ಮತ್ತೂ ಪರಂತು, ಸರ್ಕಾರೇತರ ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಸದಸ್ಯರು, ಅನುಸೂಚಿತ ಜಾತಿಗಳಿಗೆ, ಅನುಸೂಚಿತ ಪಂಗಡಗಳಿಗೆ, ಇತರ ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು.

(2) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟ ರಾಜ್ಯ ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ನೇಮಿಸಬಹುದೋ ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ರಾಜ್ಯ ಪರಿಷತ್ತಿನ ಸಭೆಗಳ (ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ) ಸಮಯ, ಸ್ಥಳ ಮತ್ತು ಕಾರ್ಯವಿಧಾನಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ರಾಜ್ಯ ಪರಿಷತ್ತಿನ ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು.

(ಎ) ಕಾರ್ಯಯೋಜನೆ ಮತ್ತು ರಾಜ್ಯದಲ್ಲಿ ಅದರ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

(ಬಿ) ಆದ್ಯತಾ ಕೆಲಸಗಳನ್ನು ನಿರ್ಧರಿಸುವುದು,

(ಸಿ) ಕಾಲಕಾಲಕ್ಕೆ ಮೇಲ್ವಿಚಾರಣೆ ಮತ್ತು ನಿವಾರಣಾ ವ್ಯವಸ್ಥೆಯನ್ನು ಮರು ಪರಿಶೀಲಿಸುವುದು ಮತ್ತು ಸುಧಾರಣೆಗಳಿಗೆ ಶಿಫಾರಸು ಮಾಡುವುದು.

(ಡಿ) ಈ ಅಧಿನಿಯಮ ಮತ್ತು ಅದರ ಮೇರೆಗೆ ಕಾರ್ಯಯೋಜನೆಗಳನ್ನು ಕುರಿತು ಮಾಹಿತಿಯ ಬಗ್ಗೆ ಸಾಧ್ಯವಾದಷ್ಟು ವ್ಯಾಪಕ ಪ್ರಸಾರವನ್ನು ಉತ್ತೇಜಿಸುವುದು,

(ಇ) ರಾಜ್ಯದಲ್ಲಿ ಈ ಅಧಿನಿಯಮ ಮತ್ತು ಕಾರ್ಯಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ನಡೆಸುವುದು ಮತ್ತು ಅಂಥ ಅನುಷ್ಠಾನವನ್ನು ಕೇಂದ್ರ ಪರಿಷತ್ತಿನೊಂದಿಗೆ ಸಮನ್ವಯಗೊಳಿಸುವುದು.

(ಎಫ್) ರಾಜ್ಯ ಸರ್ಕಾರವು ರಾಜ್ಯ ವಿಧಾನ ಮಂಡಲದ ಮುಂದೆ ಇರಿಸಬೇಕಾದ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು,

(ಜಿ) ಕೇಂದ್ರ ಪರಿಷತ್ತು ಅಥವಾ ರಾಜ್ಯ ಸರ್ಕಾರವು ಅದಕ್ಕೆ ವಹಿಸಬಹುದಾದ ಯಾವುದೇ ಇತರ ಕರ್ತವ್ಯ ಅಥವಾ ಪ್ರಕಾರ್ಯಗಳು,

(3) ರಾಜ್ಯ ಪರಿಷತ್ತು, ರಾಜ್ಯದಲ್ಲಿ ಜಾರಿಯಲ್ಲಿರುವ ಕಾರ್ಯಯೋಜನೆಗಳ ಮೌಲ್ಯಮಾಪನವನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಗ್ರಾಮೀಣ ಅರ್ಥವ್ಯವಸ್ಥೆ ಮತ್ತು ರಾಜ್ಯದಲ್ಲಿನ ಕಾರ್ಯಯೋಜನೆಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸತಕ್ಕದ್ದು ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದು.

## 13. ಕಾರ್ಯಯೋಜನೆಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಧಾನ ಪ್ರಾಧಿಕಾರಗಳು

(1) ಜಿಲ್ಲಾ, ಮಧ್ಯಂತರ ಮತ್ತು ಗ್ರಾಮ ಮಟ್ಟಗಳಲ್ಲಿನ ಪಂಚಾಯಿತಿಗಳು ಈ ಅಧಿನಿಯಮದ ಮೇರೆಗಿನ ಕಾರ್ಯಯೋಜನೆಗಳನ್ನು ರೂಪಿಸಲು ಮತ್ತು ಅನುಷ್ಠಾನಗೊಳಿಸಲು ಪ್ರಧಾನ ಪ್ರಾಧಿಕಾರಗಳಾಗಿರತಕ್ಕದ್ದು.

(2) ಜಿಲ್ಲಾ ಮಟ್ಟದಲ್ಲಿನ ಪಂಚಾಯಿತಿಯ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು –

(ಎ) ಕಾರ್ಯಯೋಜನೆಯ ಮೇರೆಗಿನ ಒಂದು ಕಾರ್ಯಕ್ರಮದ ಮೇರೆಗೆ ಕೈಗೊಳ್ಳಬೇಕಾದ ಪರಿಯೋಜನೆಗಳ ಕ್ಷೇತ್ರವಾರು ವರ್ಗವನ್ನು ಅಂತಿಮಗೊಳಿಸುವುದು ಮತ್ತು ಅನುಮೋದಿಸುವುದು,

(ಬಿ) ಕ್ಷೇತ್ರ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೈಗೊಂಡ ಪರಿಯೋಜನೆಗಳ ಮೇಲೆ ಉಸ್ತುವಾರಿ ಮಾಡುವುದು ಮತ್ತು ಮೇಲ್ವಿಚಾರಣೆ ನಡೆಸುವುದು, ಮತ್ತು

(ಸಿ) ರಾಜ್ಯ ಪರಿಷತ್ತು ಕಾಲಕಾಲಕ್ಕೆ ತನಗೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

(3) ಮಧ್ಯಂತರ ಮಟ್ಟದಲ್ಲಿನ ಪಂಚಾಯಿತಿಯ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು –

(ಎ) ಜಿಲ್ಲಾ ಮಟ್ಟದ ಜಿಲ್ಲಾ ಪಂಚಾಯಿತಿಯ ಅಂತಿಮ ಅನುಮೋದನೆಗಾಗಿ ಕಳುಹಿಸಿಕೊಡುವುದಾಗಿ ಕ್ಷೇತ್ರ ಮಟ್ಟದ ಕಾರ್ಯಯೋಜನೆಯನ್ನು ಅನುಮೋದಿಸುವುದು.

(ಬಿ) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮತ್ತು ಕ್ಷೇತ್ರ ಮಟ್ಟದಲ್ಲಿ ಕೈಗೊಂಡ ಯೋಜನೆಗಳ ಉಸ್ತುವಾರಿ ಮಾಡುವುದು ಮತ್ತು ಮೇಲ್ವಿಚಾರಣೆ ನಡೆಸುವುದು, ಮತ್ತು

(ಸಿ) ರಾಜ್ಯ ಪರಿಷತ್ತು ಕಾಲಕಾಲಕ್ಕೆ ತನಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

(4) ಈ ಅಧಿನಿಯಮದ ಮೇರೆಗೆ ಜಿಲ್ಲಾ ಮಟ್ಟದ ಪಂಚಾಯಿತಿಗಳ ಪ್ರಕಾರ್ಯಗಳನ್ನು ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಕಾರ್ಯಯೋಜನೆಯನ್ನು ನಿರ್ವಹಿಸುವಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಅದಕ್ಕೆ ನೆರವಾಗತಕ್ಕದ್ದು.

## 14. ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ

(1) ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಜಿಲ್ಲಾಧಿಕಾರಿ ಅಥವಾ ರಾಜ್ಯ ಸರ್ಕಾರವು ತೀರ್ಮಾನಿಸಬಹುದಾದಂಥ ಸೂಕ್ತ ದರ್ಜೆಯ ಜಿಲ್ಲಾ ಮಟ್ಟದ ಇತರೆ ಯಾರೇ ಅಧಿಕಾರಿಯನ್ನು ಜಿಲ್ಲೆಯಲ್ಲಿ ಕಾರ್ಯಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯೆಂದು ಹೆಸರಿಸತಕ್ಕದ್ದು.

(2) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

(3) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು: –

(ಎ) ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಮತ್ತು ಅದರ ಮೇರೆಗೆ ಮಾಡಿದ ಯಾವುದೇ ಕಾರ್ಯಯೋಜನೆಯನ್ನು ನಿರ್ವಹಿಸಲು ಜಿಲ್ಲಾ ಪಂಚಾಯಿತಿಗೆ ನೆರವಾಗುವುದು;

(ಬಿ) ಜಿಲ್ಲಾ ಮಟ್ಟದ ಪಂಚಾಯಿತಿಯು ಅನುಮೋದಿಸಬೇಕಾದ, ಕ್ಷೇತ್ರಗಳು ಸಿದ್ಧಪಡಿಸಿದ ಯೋಜನೆಗಳನ್ನು ಮತ್ತು ಪರಿಯೋಜನೆಗಳ ವರ್ಗಗಳಲ್ಲಿ ಸೇರಿಸುವುದಕ್ಕಾಗಿ ಇತರ ಅನುಷ್ಠಾನ ಏಜೆನ್ಸಿಗಳಿಂದ ಸ್ವೀಕರಿಸಿದ ಪರಿಯೋಜನೆ ಪ್ರಸ್ತಾವಗಳು ಕ್ರೋಢೀಕರಿಸುವುದು;

(ಸಿ) ಅಗತ್ಯವಿರುವೆಡೆಗಳಲ್ಲಿ ಅಗತ್ಯ ಮಂಜೂರಾತಿ ಮತ್ತು ಆಡಳಿತಾತ್ಮಕ ಒಪ್ಪಿಗೆ ನೀಡುವುದು,

(ಡಿ) ಈ ಅಧಿನಿಯಮದ ಮೇರೆಗೆ ಅರ್ಜಿದಾರರ ಹಕ್ಕಿಗನುಸಾರ ಅವರಿಗೆ ಉದ್ಯೋಗವನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಯಕ್ರಮ ಅಧಿಕಾರಿಗಳು ಮತ್ತು ಅನುಷ್ಠಾನ ಏಜೆನ್ಸಿಗಳೊಂದಿಗೆ ಸಮನ್ವಯ ಸಾಧಿಸುವುದು;

(ಇ) ಕಾರ್ಯಕ್ರಮ ಅಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಪುನರವಲೋಕಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ಉಸ್ತುವಾರಿ ನೋಡಿಕೊಳ್ಳುವುದು;

(ಎಫ್) ಪ್ರಗತಿಯಲ್ಲಿರುವ ಕೆಲಸಗಳ ಬಗ್ಗೆ ನಿಯತಕಾಲಿಕವಾಗಿ ಪರಿಶೀಲನೆ ನಡೆಸುವುದು. ಮತ್ತು

(ಜಿ) ಅರ್ಜಿದಾರರ ಕುಂದುಕೊರತೆಗಳನ್ನು ನಿವಾರಿಸುವುದು.

(4) ರಾಜ್ಯ ಸರ್ಕಾರವು, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಈ ಅಧಿನಿಯಮದ ಮೇರೆಗೆ ಅವನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲು ಅಗತ್ಯವಿರಬಹುದಾದಂಥ ಆಡಳಿತಾತ್ಮಕ ಮತ್ತು ಹಣಕಾಸು ಅಧಿಕಾರಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(5) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕವಾದ ಕಾರ್ಯಕ್ರಮ ಅಧಿಕಾರಿ ಮತ್ತು ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಮತ್ತು ಸ್ಥಳೀಯ ಪ್ರಾಧಿಕಾರಗಳ ಮತ್ತು ನಿಕಾಯಗಳ ಎಲ್ಲಾ ಇತರ ಅಧಿಕಾರಿಗಳು, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಈ ಅಧಿನಿಯಮದ ಮೇರೆಗಿನ ಅವನ ಪ್ರಕಾರ್ಯಗಳನ್ನು ಮತ್ತು ಅದರ ಮೇರೆಗೆ ಮಾಡಿದ ಕಾರ್ಯಯೋಜನೆಗಳನ್ನು ಕಾರ್ಯಗತಗೊಳಿಸುವಾಗ ನೆರವು ನೀಡಲು ಜವಾಬ್ದಾರರಾಗಿರತಕ್ಕದ್ದು.

(6) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಮುಂದಿನ ಹಣಕಾಸು ವರ್ಷಕ್ಕೆ ಜಿಲ್ಲೆಯಲ್ಲಿ ಅಕುಶಲ ದೈಹಿಕ ಕೆಲಸಕ್ಕೆ ಇರುವ ನಿರೀಕ್ಷಿತ ಬೇಡಿಕೆಯ ವಿವರಗಳನ್ನು ಹಾಗೂ ಕಾರ್ಯಯೋಜನೆಯ ಮೇರೆಗೆ ಬರುವ ಕಾಮಗಾರಿಗಳಲ್ಲಿ ಕಾರ್ಮಿಕರನ್ನು ತೊಡಗಿಸುವ ಯೋಜನೆಯ ವಿವರಗಳನ್ನೊಳಗೊಂಡ ಕಾರ್ಮಿಕ ಬಜೆಟನ್ನು ಪ್ರತಿ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸತಕ್ಕದ್ದು,

## 15. ಕಾರ್ಯಕ್ರಮ ಅಧಿಕಾರಿ

(1) ಮಧ್ಯಂತರ ಮಟ್ಟದ ಪ್ರತಿಯೊಂದು ಪಂಚಾಯಿತಿಯಲ್ಲಿ, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಅರ್ಹತೆಗಳು ಹಾಗೂ ಅನುಭವವುಳ್ಳ ಕ್ಷೇತ್ರಾಭಿವೃದ್ಧಿ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವ್ಯಕ್ತಿಯನ್ನು, ಮಧ್ಯಂತರ ಮಟ್ಟದ ಪಂಚಾಯಿತಿಯಲ್ಲಿ ಕಾರ್ಯಕ್ರಮ ಅಧಿಕಾರಿಯೆಂದು ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು,

(2) ಕಾರ್ಯಕ್ರಮ ಅಧಿಕಾರಿಯು, ಮಧ್ಯಂತರ ಮಟ್ಟದ ಪಂಚಾಯಿತಿಗೆ ಈ ಅಧಿನಿಯಮದ ಮೇರೆಗಿನ ಅದರ ಪ್ರಕಾರ್ಯಗಳನ್ನು ಮತ್ತು ಅದರ ಮೇರೆಗೆ ಮಾಡಿದ ಯಾವುದೇ ಕಾರ್ಯಯೋಜನೆಯನ್ನು ನಿರ್ವಹಿಸುವಲ್ಲಿ ನೆರವಾಗತಕ್ಕದ್ದು,

(3) ಕಾರ್ಯಕ್ರಮ ಅಧಿಕಾರಿಯು, ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಉದ್ಯೋಗದ ಬೇಡಿಕೆಯನ್ನು

ಯೋಜನೆಗಳಿಂದ ಉಂಟಾಗುವ ಉದ್ಯೋಗಾವಕಾಶಗಳೊಂದಿಗೆ ಸರಿಹೊಂದಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(4) ಕಾರ್ಯಕ್ರಮ ಅಧಿಕಾರಿಯು ಗ್ರಾಮ ಪಂಚಾಯಿತಿಗಳು ಸಿದ್ದಪಡಿಸಿದ ಯೋಜನಾ ಪ್ರಸ್ತಾವಗಳು ಹಾಗೂ ಮಧ್ಯಂತರ ಪಂಚಾಯಿತಿಗಳಿಂದ ಬಂದ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ತನ್ನ ಅಧಿಕಾರ ವ್ಯಾಪ್ತಿಯ ಮೇರೆಗಿನ ಕ್ಷೇತ್ರಕ್ಕೆ ಒಂದು ಯೋಜನೆಯನ್ನು ಸಿದ್ದಪಡಿಸತಕ್ಕದ್ದು.

(5) ಕಾರ್ಯಕ್ರಮ ಅಧಿಕಾರಿಯ ಪ್ರಕಾರ್ಯಗಳು ಈ ಮುಂದಿನವನ್ನು ಒಳಗೊಂಡಿರತಕ್ಕದ್ದು –

(ಎ) ಕ್ಷೇತ್ರ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿಗಳು ಮತ್ತು ಇತರ ಅನುಷ್ಠಾನ ಏಜೆನ್ಸಿಗಳು ಕೈಗೆತ್ತಿಕೊಂಡ ಪರಿಯೋಜನೆಗಳ ಉಸ್ತುವಾರಿ ನೋಡಿಕೊಳ್ಳುವುದು.

(ಬಿ) ಅರ್ಹ ಕುಟುಂಬಗಳಿಗೆ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡುವುದು ಮತ್ತು ಸಂದಾಯ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.

(ಸಿ) ಕ್ಷೇತ್ರವ್ಯಾಪ್ತಿಯಲ್ಲಿನ ಕಾರ್ಯಯೋಜನಾ ಕಾರ್ಯಕ್ರಮದ ಮೇರೆಗೆ ನಿಯೋಜಿಸಿಕೊಳ್ಳಲಾದ ಎಲ್ಲ ಕಾರ್ಮಿಕರಿಗೆ ಮಜೂರಿಗಳು ತ್ವರಿತವಾಗಿ ಮತ್ತು ನ್ಯಾಯಯುತವಾಗಿ ಸಂದಾಯವಾಗುತ್ತಿದೆಯೆಂಬುದನ್ನು ಖಚಿತಪಡಿಸಿಕೊಳ್ಳುವುದು;

(ಡಿ) ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿನ ಎಲ್ಲಾ ಕಾಮಗಾರಿಗಳ ಬಗ್ಗೆ ನಿಯತವಾಗಿ ಸಾಮಾಜಿಕ ಪರಿಶೋಧನೆಯನ್ನು ಗ್ರಾಮ ಸಭೆಯು ನಡೆಸುತ್ತಿದೆಯೆಂದು ಮತ್ತು ಸಾಮಾಜಿಕ ಪರಿಶೋಧನೆಯಲ್ಲಿ ಎತ್ತಲಾದ ಆಕ್ಷೇಪಣೆಗಳ ಬಗ್ಗೆ ತ್ವರಿತ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಖಚಿತಪಡಿಸಿಕೊಳ್ಳುವುದು,

(ಇ) ಕ್ಷೇತ್ರ ವ್ಯಾಪ್ತಿಯಲ್ಲಿ ಕಾರ್ಯಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉದ್ಭವಿಸಬಹುದಾದ ಎಲ್ಲಾ ದೂರುಗಳ ಬಗ್ಗೆ ತ್ವರಿತವಾಗಿ ವ್ಯವಹರಿಸುವುದು; ಮತ್ತು

(ಎಫ್) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಅಥವಾ ರಾಜ್ಯ ಸರ್ಕಾರವು ಅವನಿಗೆ ವಹಿಸಿಕೊಡಬಹುದಾದಂಥ ಯಾವುದೇ ಇತರ ಕಾರ್ಯ.

(6) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯ ನಿರ್ದೇಶನ, ನಿಯಂತ್ರಣ ಮತ್ತು ಅಧೀಕ್ಷಣೆಯ ಮೇರೆಗೆ ಕಾರ್ಯಕ್ರಮ ಅಧಿಕಾರಿಗಳು ಕಾರ್ಯನಿರ್ವಹಿಸತಕ್ಕದ್ದು.

(7) ಕಾರ್ಯಕ್ರಮ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಪ್ರಕಾರ್ಯವನ್ನು ಗ್ರಾಮ ಪಂಚಾಯಿತಿ ಅಥವಾ ಸ್ಥಳೀಯ ಪ್ರಾಧಿಕಾರವು ನಿರ್ವಹಿಸತಕ್ಕದ್ದೆಂದು ರಾಜ್ಯಸರ್ಕಾರವು ಆದೇಶದ ಮೂಲಕ ನಿರ್ದೇಶನ ನೀಡಬಹುದು.

## 16. ಗ್ರಾಮ ಪಂಚಾಯಿತಿಗಳ ಜವಾಬ್ದಾರಿ:

(1) ಗ್ರಾಮ ಪಂಚಾಯಿತಿಯು, ಗ್ರಾಮಸಭೆ ಮತ್ತು ವಾರ್ಡ್ ಸಭೆಗಳ ಶಿಫಾರಸುಗಳ ಪ್ರಕಾರ ಕಾರ್ಯಯೋಜನೆಯ ಮೇರೆಗೆ ಕೈಗೆತ್ತಿಕೊಳ್ಳಬೇಕಾದ ಗ್ರಾಮ ಪಂಚಾಯಿತಿ ಪ್ರದೇಶದಲ್ಲಿನ ಯೋಜನೆಗಳನ್ನು ಗುರುತಿಸುವ ಮತ್ತು ಅಂಥ ಕಾಮಗಾರಿಗಳನ್ನು ನಿರ್ವಹಿಸುವ ಹಾಗೂ ಮೇಲ್ವಿಚಾರಣೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಗ್ರಾಮ ಪಂಚಾಯಿತಿಯು, ತನ್ನ ವ್ಯಾಪ್ತಿಯಲ್ಲಿನ ಕಾರ್ಯಯೋಜನೆ ಮೇರೆಗೆ ಕಾರ್ಯಕ್ರಮ ಅಧಿಕಾರಿಯು ಮಂಜೂರು ಮಾಡಬಹುದಾದಂಥ ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳಬಹುದು.

(3) ಪ್ರತಿಯೊಂದು ಗ್ರಾಮ ಪಂಚಾಯಿತಿಯು, ಗ್ರಾಮಸಭೆಯ ಮತ್ತು ವಾರ್ಡ್ ಸಭೆಗಳ ಶಿಫಾರಸ್ಸುಗಳನ್ನು ಪರಿಶೀಲಿಸಿದ ತರುವಾಯ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸತಕ್ಕದ್ದು ಮತ್ತು ಕೆಲಸಕ್ಕೆ ಬೇಡಿಕೆ ಉಂಟಾದಂತೆ ಕಾರ್ಯಯೋಜನೆಯ ಮೇರೆಗೆ ಕೈಗೆತ್ತಿಕೊಳ್ಳಲಾಗುವ ಸಂಭವನೀಯ ಕಾಮಗಾರಿಗಳ ವರ್ಗಗಳನ್ನು ನಿರ್ವಹಿಸತಕ್ಕದ್ದು.

(4) ಗ್ರಾಮ ಪಂಚಾಯಿತಿಯು, ವಿವಿಧ ಕಾಮಗಾರಿಗಳ ನಡುವಿನ ಆದ್ಯತಾ ಕ್ರಮದ ಸಹಿತ ಅಭಿವೃದ್ಧಿ ಯೋಜನೆಗಳನ್ನು ಕುರಿತ ತನ್ನ ಪ್ರಸ್ತಾವಗಳನ್ನು, ಅದನ್ನು ನಿರ್ವಹಿಸಲು ಉದ್ದೇಶಿಸಿರುವ ವರ್ಷವು ಪ್ರಾರಂಭವಾಗುವುದಕ್ಕೆ ಮುಂಚೆ ಪರಿಷ್ಕರಣೆಗಾಗಿ ಮತ್ತು ಪೂರ್ವಭಾವಿ ಅನುಮೋದನೆಗಾಗಿ ಕಾರ್ಯಕ್ರಮ ಅಧಿಕಾರಿಗೆ ಕಳುಹಿಸತಕ್ಕದ್ದು.

(5) ಕಾರ್ಯಕ್ರಮ ಅಧಿಕಾರಿಯು, ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನ ಗೊಳ್ಳಬೇಕಾಗಿರುವ ಕಾರ್ಯಯೋಜನೆಯ ಮೇರೆಗೆ ಕಾಮಗಾರಿ ವೆಚ್ಚದಲ್ಲಿ ಕೊನೆಪಕ್ಷ ಶೇಕಡಾ ಐವತ್ತರಷ್ಟನ್ನು ಹಂಚಿಕೆ ಮಾಡತಕ್ಕದ್ದು.

(6) ಕಾರ್ಯಕ್ರಮ ಅಧಿಕಾರಿಯು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ –

(ಎ) ಗ್ರಾಮ ಪಂಚಾಯಿತಿಯು ನಿರ್ವಹಿಸಬೇಕಾದ ಮಂಜೂರಾದ ಕಾಮಗಾರಿಗಳ ಹಾಜರಿ ಪಟ್ಟಿಯನ್ನು ಮತ್ತು

(ಬಿ) ಗ್ರಾಮ ಪಂಚಾಯಿತಿಯ ನಿವಾಸಿಗಳಿಗೆ ಬೇರೆಡೆಗಳಲ್ಲಿ ಲಭ್ಯವಿರುವ ಉದ್ಯೋಗವಕಾಶಗಳ ಪಟ್ಟಿಯನ್ನು – ಒದಗಿಸತಕ್ಕದ್ದು,

(7) ಗ್ರಾಮ ಪಂಚಾಯಿತಿಯು ಅರ್ಜಿದಾರರಿಗೆ ಉದ್ಯೋಗವಕಾಶಗಳನ್ನು ಹಂಚತಕ್ಕದ್ದು ಮತ್ತು ಅವರಿಗೆ ಕೆಲಸಕ್ಕೆ ಹಾಜರಾಗುವಂತೆ ತಿಳಿಸತಕ್ಕದ್ದು.

(8) ಈ ಕಾರ್ಯಯೋಜನೆಯ ಮೇರೆಗೆ ಗ್ರಾಮ ಪಂಚಾಯಿತಿಯು ಕೈಗೊಳ್ಳುವ ಕಾಮಗಾರಿಗಳು ಅಗತ್ಯ ತಾಂತ್ರಿಕ ಮಾನದಂಡಗಳು ಮತ್ತು ಅಳತೆಗಳನ್ನು ಪೂರೈಸತಕ್ಕದ್ದು..

## 17. ಗ್ರಾಮಸಭೆಯ ಕೆಲಸದ ಸಾಮಾಜಿಕ ಪರಿಶೋಧನೆ

(1) ಗ್ರಾಮಸಭೆಯು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಮಗಾರಿ ನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

(2) ಗ್ರಾಮಸಭೆಯು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೊಂಡ ಕಾರ್ಯ ಯೋಜನೆಯಡಿಯಲ್ಲಿನ ಎಲ್ಲಾ ಪರಿಯೋಜನೆಗಳ ಕ್ರಮಬದ್ಧ ಸಾಮಾಜಿಕ ಪರಿಶೋಧನೆಯನ್ನು ನಡೆಸತಕ್ಕದ್ದು.

(3) ಗ್ರಾಮ ಪಂಚಾಯಿತಿಯು, ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವ ಉದ್ದೇಶಕ್ಕಾಗಿ ಗ್ರಾಮ ಸಭೆಗೆ ಹಾಜರಿಪಟ್ಟಿ, ಬಿಲ್ಲುಗಳು, ವೋಚರ್‌ಗಳು, ಅಳತೆ ಪುಸ್ತಕಗಳು, ಮಂಜೂರಾತಿ ಆದೇಶದ ಪ್ರತಿಗಳು ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಇತರೆ ಪುಸ್ತಕಗಳು ಮತ್ತು ಕಾಗದ ಪ್ರತ್ರಗಳನ್ನು ಒಳಗೊಂಡ ಎಲ್ಲಾ ಸೂಕ್ತ ದಸ್ತಾವೇಜುಗಳನ್ನು ಲಭ್ಯವಾಗುವಂತೆ ಮಾಡತಕ್ಕದ್ದು.

## 18. ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಗಳು

ರಾಜ್ಯ ಸರ್ಕಾರವು, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ಕಾರ್ಯಕ್ರಮ ಅಧಿಕಾರಿಗಳಿಗೆ ಕಾರ್ಯಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯವೆನಿಸಬಹುದಾಂಥ ಅವಶ್ಯಕ ಸಿಬ್ಬಂದಿ ಮತ್ತು ತಾಂತ್ರಿಕ ನೆರವು ಲಭ್ಯವಾಗುವಂತೆ ಮಾಡತಕ್ಕದ್ದು..

## 19. ಕುಂದು–ಕೊರತೆ ನಿವಾರಣಾ ವ್ಯವಸ್ಥೆ

ರಾಜ್ಯ ಸರ್ಕಾರವು, ನಿಯಮಗಳ ಮೂಲಕ, ಕಾರ್ಯಯೋಜನೆಯ ಅನುಷ್ಠಾನದ ಸಂಬಂಧದಲ್ಲಿ ಯಾರೇ ವ್ಯಕ್ತಿಯು ನೀಡಿದ ಯಾವುದೇ ದೂರನ್ನು ವ್ಯವಹರಿಸುವುದಕ್ಕಾಗಿ ಕ್ಷೇತ್ರ ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಕುಂದುಕೊರತೆಯ ಸೂಕ್ತ ನಿವಾರಣಾ ವ್ಯವಸ್ಥೆಯನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ದೂರುಗಳ ಇತ್ಯರ್ಥಕ್ಕಾಗಿ ಕಾರ್ಯವಿಧಾನವನ್ನು ರೂಪಿಸತಕ್ಕದ್ದು.

# ಅಧ್ಯಾಯ – V

# ರಾಷ್ಟ್ರೀಯ ಮತ್ತು ರಾಜ್ಯ ಉದ್ಯೋಗ ಖಾತರಿ ನಿಧಿಗಳ ಸ್ಥಾಪನೆ ಮತ್ತು ಲೆಕ್ಕಪತ್ರ ಪರಿಶೋಧನೆ

## 20. ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿ

(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಕ್ಕಾಗಿ ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ ಮಾಡಿದ ಯಕ್ತ ವಿನಿಯೋಜನೆಯ ನಂತರ, ರಾಷ್ಟ್ರೀಯ ನಿಧಿಗೆ ಅವಶ್ಯಕವೆಂದು ಪರಿಗಣಿಸಬಹುದಾದಷ್ಟು ಹಣದ ಮೊತ್ತವನ್ನು ಅನುದಾನಗಳು ಅಥವಾ ಸಾಲಗಳ ರೂಪದಲ್ಲಿ ಜಮೆ ಮಾಡಬಹದು.

(3) ರಾಷ್ಟ್ರೀಯ ನಿಧಿಯ ಜಮೆಯಲ್ಲಿರುವ ಮೊಬಲಗನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು ಬಳಸತಕ್ಕದ್ದು

## 21. ರಾಜ್ಯ ಉದ್ಯೋಗ ಖಾತರಿ ನಿಧಿ

(1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಕಾರ್ಯಯೋಜನೆಯ ಅನುಷ್ಠಾನದ ಉದ್ದೇಶಗಳಿಗಾಗಿ ರಾಜ್ಯ ಉದ್ಯೋಗ ಖಾತರಿ ನಿಧಿಯೆಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸಬಹುದು.

(2) ರಾಜ್ಯ ನಿಧಿಯಲ್ಲಿ ಜಮೆಯಿರುವ ಮೊಬಲಗನ್ನು, ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ಕಾರ್ಯಯೋಜನೆಗಳ ಅನುಷ್ಠಾನದ ಉದ್ದೇಶಕ್ಕಾಗಿ ಮತ್ತು ಈ ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವುದಕ್ಕಾಗಿ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಮತ್ತು ಮಿತಿಗಳಿಗೆ ಒಳಪಟ್ಟು ವೆಚ್ಚ ಮಾಡತಕ್ಕದ್ದು.

(3) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಪ್ರಾಧಿಕಾರವು ರಾಜ್ಯ ಸರ್ಕಾರದ ಪರವಾಗಿ ರಾಜ್ಯ ನಿಧಿಯನ್ನು, ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

## 22. ನಿಧಿ ಒದಗಿಸುವ ವಿಧಾನ

(1) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ರಚಿಸಬಹುದಾದ ನಿಯಮಗಳಿಗೆ ಒಳಪಟ್ಟು ಕೇಂದ್ರ ಸರ್ಕಾರವು ಈ ಮುಂದಿನ ವೆಚ್ಚಗಳನ್ನು ಭರಿಸತಕ್ಕದ್ದು, ಎಂದರೆ:–

(ಎ) ಕಾರ್ಯಯೋಜನೆಯ ಮೇರೆಗೆ ಅಕುಶಲ ದೈಹಿಕ ಕೆಲಸಕ್ಕೆ ಮಜೂರಿಗಳ ಸಂದಾಯಕ್ಕಾಗಿ ಅಗತ್ಯವಿರುವ ಮೊಬಲಗು;

(ಬಿ) ಅನುಸೂಚಿ–IIರ ಉಪಬಂಧಗಳಿಗೆ ಒಳಪಟ್ಟು ಕುಶಲ ಮತ್ತು ಅರೆಕುಶಲ ಕಾರ್ಮಿಕರ ಮಜೂರಿಗಳ ಸಂದಾಯವನ್ನೂ ಒಳಗೊಂಡಂತೆ ಕಾರ್ಯಯೋಜನೆಯ ಮುಖ್ಯ ವೆಚ್ಚದ ನಾಲ್ಕನೇ ಮೂರರಷ್ಟು.

(ಸಿ) ಕಾರ್ಯಕ್ರಮ ಅಧಿಕಾರಿಗಳು ಮತ್ತು ಅವರ ಪೂರಕ ಸಿಬ್ಬಂದಿಗಳ ಸಂಬಳಗಳು ಮತ್ತು ಭತ್ಯೆಗಳು, ಕೇಂದ್ರ ಪರಿಷತ್ತಿನ ಆಡಳಿತ್ಮಾಕ ವೆಚ್ಚಗಳು, ಅನುಸೂಚಿ–IIರ ಮೇರೆಗೆ ಒದಗಿಸಬೇಕಾದ ಸೌಲಭ್ಯಗಳು ಮತ್ತು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಬಾಬ್ತುಗಳನ್ನೂ ಒಳಗೊಂಡಂತೆ ಆಡಳಿತಾತ್ಮಕ ವೆಚ್ಚಗಳಿಗಾಗಿ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತೆ ಯೋಜನೆಯ ಒಟ್ಟು ವೆಚ್ಚದ ಶೇಕಡಾವಾರು.

(2) ರಾಜ್ಯ ಸರ್ಕಾರವು ಈ ಮುಂದಿನ ವೆಚ್ಚವನ್ನು ಭರಿಸತಕ್ಕದ್ದು, ಎಂದರೆ:–

(ಎ) ಕಾರ್ಯಯೋಜನೆಯ ಮೇರೆಗೆ ಸಂದಾಯ ಮಾಡಬೇಕಾದ ನಿರುದ್ಯೋಗ ಭತ್ಯದ ವೆಚ್ಚ.

(ಬಿ) ಅನುಸೂಚಿ–IIರ ಉಪಬಂಧಗಳಿಗೆ ಒಳಪಟ್ಟು ಕುಶಲ ಮತ್ತು ಅರೆ – ಕುಶಲ ಕೆಲಸಗಾರರಿಗೆ ಮಜೂರಿಗಳ ಸಂದಾಯವನ್ನೂ ಒಳಗೊಂಡಂತೆ ಕಾರ್ಯಯೋಜನೆಯ ಮುಖ್ಯ ವೆಚ್ಚದ ನಾಲ್ಕನೇ ಒಂದರಷ್ಟು

(ಸಿ) ರಾಜ್ಯ ಪರಿಷತ್ತಿನ ಆಡಳಿತಾತ್ಮಕ ವೆಚ್ಚಗಳು

## 23. ಪಾರದರ್ಶಕತೆ ಮತ್ತು ಉತ್ತರದಾಯಿತ್ವ

(1) ಜಿಲ್ಲೆಯಲ್ಲಿನ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ಎಲ್ಲಾ ಅನುಷ್ಠಾನ ಏಜೆನ್ಸಿಗಳು ಕಾರ್ಯಯೋಜನೆಯ ಅನುಷ್ಠಾನದ ಉದ್ದೇಶಕ್ಕಾಗಿ ಅವುಗಳ ವಶದಲ್ಲಿರುವ ನಿಧಿಗಳ ಸರಿಯಾದ ಬಳಕೆ ಮತ್ತು ನಿರ್ವಹಣೆಗೆ ಜವಾಬ್ದಾರರಾಗಿರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ಮಾಡಲಾದ ಕಾರ್ಯಯೋಜನೆಗಳ ಅನುಷ್ಠಾನಕ್ಕೆ ಮತ್ತು ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಸೂಕ್ತ ಪುಸ್ತಕಗಳ ಮತ್ತು ಲೆಕ್ಕಪತ್ರಗಳ ಮತ್ತು ಭರಿಸಲಾದ ವೆಚ್ಚದ ನಿರ್ವಹಣೆಯ ರೀತಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದು.

(3) ರಾಜ್ಯ ಸರ್ಕಾರವು, ನಿಯಮಗಳ ಮೂಲಕ, ಕಾರ್ಯಯೋಜನೆಯ ಮೇರೆಗೆ ಯೋಜನೆಗಳ ಮತ್ತು ಕಾರ್ಯಕ್ರಮಗಳ ಸಮರ್ಥ ನಿರ್ವಹಣೆ ಮತ್ತು ಕಾರ್ಯಯೋಜನೆಗಳ ಅನುಷ್ಠಾನದಲ್ಲಿ ಎಲ್ಲಾ ಹಂತಗಳಲ್ಲೂ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ಖಚಿತಪಡಿಸಿಕೊಳ್ಳಲು ಮಾಡಬೇಕಾದ ವ್ಯವಸ್ಥೆಗಳನ್ನು ನಿರ್ಧರಿಸಬಹುದು.

(4) ನಗದು ರೂಪದಲ್ಲಿನ ಮಜೂರಿಗಳ ಎಲ್ಲಾ ಸಂದಾಯಗಳನ್ನು ಮತ್ತು ನಿರುದ್ಯೋಗ ಭತ್ಯೆಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಮೊದಲೇ ಪ್ರಕಟಿಸಿದ ದಿನಾಂಕಗಳಂದು ನೇರವಾಗಿ ಮತ್ತು ಸಮುದಾಯದ ಸ್ವತಂತ್ರ ವ್ಯಕ್ತಿಗಳ ಸಮಕ್ಷಮದಲ್ಲಿ ಮಾಡತಕ್ಕದ್ದು.

(5) ಗ್ರಾಮ ಪಂಚಾಯಿತಿ ಮೂಲಕ ಕಾರ್ಯಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಅಥವಾ ದೂರು ಉದ್ಭವಿಸಿದಲ್ಲಿ, ಆ ವಿಷಯವನ್ನು ಕಾರ್ಯಕ್ರಮ ಅಧಿಕಾರಿಗಳಿಗೆ ಕಳುಹಿಸತಕ್ಕದ್ದು.

(6) ಕಾರ್ಯಕ್ರಮ ಅಧಿಕಾರಿಯು, ತಾನು ನಿರ್ವಹಿಸುವ ದೂರುಗಳ ರಿಜಿಸ್ಟರಿನಲ್ಲಿ ಪ್ರತಿಯೊಂದು ದೂರನ್ನೂ ನಮೂದಿಸತಕ್ಕದ್ದು ಮತ್ತು ಅವುಗಳನ್ನು ಸ್ವೀಕರಿಸಿದ ಏಳು ದಿನಗಳ ಒಳಗೆ ವಿವಾದಗಳು ಮತ್ತು ದೂರುಗಳನ್ನು ವಿಲೆ ಮಾಡತಕ್ಕದ್ದು ಮತ್ತು ಅದು ಯಾವುದೇ ಇತರ ಪ್ರಾಧಿಕಾರವು ಪರಿಹರಿಸಬೇಕಾದ ವಿಷಯಕ್ಕೆ ಸಂಬಂಧಪಟ್ಟಿದ್ದಲ್ಲಿ, ಅದನ್ನು ಫಿರ್ಯಾದಿಗೆ ತಿಳಿಸಿ ಅಂತಹ ಪ್ರಾಧಿಕಾರಕ್ಕೆ ಅದನ್ನು ಕಳುಹಿಸತಕ್ಕದ್ದು.

## 24. ಲೆಕ್ಕಪತ್ರಗಳ ಪರಿಶೋಧನೆ

(1) ಕೇಂದ್ರ ಸರ್ಕಾರವು, ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕರೊಂದಿಗೆ ಸಮಾಲೋಚಿಸಿ, ಎಲ್ಲ ಹಂತಗಳಲ್ಲಿ ಕಾರ್ಯಯೋಜನೆಗಳ ಲೆಕ್ಕಪತ್ರಗಳ ಪರಿಶೋಧನೆಗಾಗಿ ಸೂಕ್ತ ವ್ಯವಸ್ಥೆಗಳನ್ನು ನಿಯಮಿಸತಕ್ಕದ್ದು.

(2) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಕಾರ್ಯಯೋಜನೆಯ ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು.

# ಅಧ್ಯಾಯ – IV
# ಸಂಕೀರ್ಣ

## 25. ಪಾಲಿಸದಿರುವುದಕ್ಕಾಗಿ ದಂಡ

ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯದ ನಂತರ ಒಂದು ಸಾವಿರ ರೂಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ ಗುರಿಯಾಗತಕ್ಕದ್ದು.

## 26. ಪ್ರತ್ಯಾಯೋಜಿಸುವುದಕ್ಕೆ ಅಧಿಕಾರ

(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ತಾನು ಚಲಾಯಿಸಬಹುದಾದ ಅಧಿಕಾರಗಳನ್ನು (ನಿಯಮ ರಚನಾಧಿಕಾರವನ್ನು ಹೊರತುಪಡಿಸಿ) ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಸಂದರ್ಭದಲ್ಲಿ ಮತ್ತು ಅಂಥ ಷರತ್ತು ಮತ್ತು ಮಿತಿಗಳಿಗೆ ಒಳಪಟ್ಟು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಂಥ ಅಧೀನ ಅಧಿಕಾರಿಯೂ ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ತಾನು ಚಲಾಯಿಸಬಹುದಾದ ಅಧಿಕಾರಗಳನ್ನು (ನಿಯಮ ಮತ್ತು ಕಾರ್ಯಯೋಜನೆಗಳನ್ನು ಮಾಡುವ ಅಧಿಕಾರವನ್ನು ಹೊರತುಪಡಿಸಿ) ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳು ಮತ್ತು ಮಿತಿಗಳಿಗೆ ಒಳಪಟ್ಟು ಅದಕ್ಕೆ ಅಧೀನನಾಗಿರುವ ಅಧಿಕಾರಿಯೂ ಸಹ ಚಲಾಯಿಸಬಹುದೆಂದು ನಿರ್ದೇಶಿಸಬಹುದು.

## 27. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ

(1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ತಾನು ಅಗತ್ಯವೆಂದು ಪರಿಗಣಿಸಬಹುದಾದಂಥ ನಿರ್ದೇಶನಗಳನ್ನು ರಾಜ್ಯ ಸರ್ಕಾರಕ್ಕೆ ನೀಡಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಕೇಂದ್ರ ಸರ್ಕಾರವು, ಯಾವುದೇ ಕಾರ್ಯಯೋಜನೆಯ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಮಂಜೂರಾದ ನಿಧಿಗಳ ನೀಡಿಕೆ ಅಥವಾ ಅನುಚಿತ ಬಳಕೆಗೆ ಸಂಬಂಧಿಸಿದಂತೆ ಯಾವುದೇ ದೂರನ್ನು ಸ್ವೀಕರಿಸಿದ ಮೇಲೆ, ಮೊದಲ ನೋಟಕ್ಕೆ ಸಮ್ಮತವಾದ ವಾದವಿದೆಯೆಂದು ಮನದಟ್ಟಾದರೆ, ಆ ದೂರಿನ ಬಗ್ಗೆ ತಾನು ಹೆಸರಿಸುವ ಯಾವುದೇ ಏಜೆನ್ಸಿಯಿಂದ ತನಿಖೆ ಮಾಡಬಹುದು ಮತ್ತು ಅಗತ್ಯವಿದ್ದರೆ ಕಾರ್ಯಯೋಜನೆಗೆ ನಿಧಿಗಳನ್ನು ಬಿಡುಗಡೆ ಮಾಡುವುದನ್ನು ನಿಲ್ಲಿಸುವಂತೆ ಆದೇಶಿಸಬಹುದು ಮತ್ತು ಸಮಂಜಸ ಅವಧಿಯೊಳಗೆ ಅವುಗಳ ಯೋಗ್ಯ ಅನುಷ್ಠಾನಕ್ಕಾಗಿ ಯುಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬಹುದು.

## 28. ಅಧಿನಿಯಮವು ಅಧ್ಯಾರೋಹೀ ಪರಿಣಾಮವನ್ನು ಹೊಂದಿರುವುದು

ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರೂಪಿಸಲಾದ ಕಾರ್ಯಯೋಜನೆಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಅಂಥ ಕಾನೂನಿನ ಕಾರಣದಿಂದ ಪರಿಣಾಮಕಾರಿಯಾಗಿರುವ ಲಿಖಿತ ದಾಖಲೆಯಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದರೂ, ಅದು ಪರಿಣಾಮಕಾರಿಯಾಗಿರತಕ್ಕದ್ದು.

ಪರಂತು, ಈ ಅಧಿನಿಯಮದ ಉಪಬಂಧಗಳಿಗೆ ಸಂಗತವಾಗಿರುವಂತೆ ಗ್ರಾಮೀಣ ಕುಟುಂಬಗಳಿಗೆ ಅಕುಶಲ ದೈಹಿಕ ಕೆಲಸಕ್ಕಾಗಿ ಉದ್ಯೋಗ ಖಾತರಿಯನ್ನು ಒದಗಿಸುವ ಯಾವುದೇ ರಾಜ್ಯ ಅಧಿನಿಯಮ ಇದ್ದರೆ ಅಥವಾ ಅಧಿನಿಯಮಿತಿಗೊಳಿಸಿದ್ದರೆ ಮತ್ತು ಅದರ ಮೇರೆಗೆ ಕುಟುಂಬಗಳಿಗೆ ಕೊಡಲಾದ ಹಕ್ಕು ಮತ್ತು ಉದ್ಯೋಗದ ಷರತ್ತುಗಳು ಈ ಅಧಿನಿಯಮದ ಮೇರೆಗೆ ಖಾತರಿ ನೀಡಲಾಗಿರುವುದಕ್ಕಿಂತ ಕಡಿಮೆಯಿಲ್ಲದಿದ್ದರೆ ಮತ್ತು ಕೆಳದರ್ಜೆಯವಾಗಿರದಿದ್ದರೆ, ರಾಜ್ಯ ಸರ್ಕಾರವು ತನ್ನದೇ ಆದ ಅಧಿನಿಯಮವನ್ನು ಅನುಷ್ಠಾನಗೊಳಿಸುವ ಅಯ್ಕೆಯನ್ನು ಹೊಂದಿರತಕ್ಕದ್ದು.

ಮತ್ತೂ ಪರಂತು, ಅಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ನಿರ್ಧರಿಸತಕ್ಕಂಥ ರೀತಿಯಲ್ಲಿ, ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ಹಣಕಾಸು ನೆರವನ್ನು ಸಂದಾಯ ಮಾಡತಕ್ಕದ್ದು, ಅದು, ಈ ಅಧಿನಿಯಮದ ಮೇರೆಗೆ ರೂಪಿಸಲಾದ ಕಾರ್ಯಯೋಜನೆಯನ್ನು ಜಾರಿಗೊಳಿಸಬೇಕಿದ್ದರೆ ಈ ಅಧಿನಿಯಮದ ಮೇರೆಗೆ ರಾಜ್ಯವು ಎಷ್ಟು ನೆರವನ್ನು ಪಡೆಯಲು ಹಕ್ಕನ್ನು ಹೊಂದಿರುತ್ತಿತ್ತೋ ಅಷ್ಟನ್ನು ಮೀರತಕ್ಕದ್ದಲ್ಲ.

## 29. ಅನುಸೂಚಿಗಳನ್ನು ತಿದ್ದುಪಡಿ ಮಾಡುವ ಅಧಿಕಾರ

(1) Iನೇ ಅನುಸೂಚಿ ಅಥವಾ IIನೇ ಅನುಸೂಚಿಯನ್ನು ತಿದ್ದುಪಡಿ ಮಾಡುವುದು ಅಗತ್ಯ ಅಥವಾ ವಿಹಿತವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಧಿಸೂಚನೆಯ ಮೂಲಕ ತಿದ್ದುಪಡಿ ಮಾಡಬಹುದು ಮತ್ತು ಆ ನಂತರ I ನೇ ಅಧಿಸೂಚಿ ಮತ್ತು II ನೇ ಅನುಸೂಚಿಗಳು ಸಂದರ್ಭಾನುಸಾರ ತದನುಸಾರವಾಗಿ ತಿದ್ದುಪಡಿಯಾಗಿವೆಯೆಂದು ಭಾವಿಸತಕ್ಕದ್ದು.

(2) (1) ನೇ ಉಪ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯ ಒಂದು ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು

## 30. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

ಈ ಅಧಿನಿಯಮ ಅಥವಾ ನಿಯಮಗಳ ಅಥವಾ ಅದರ ಮೇರೆಗೆ ರೂಪಿಸಲಾದ ಕಾರ್ಯಯೋಜನೆಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂದರ್ಭದಲ್ಲಿ ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನಾಗಿರುವ ಅಥವಾ ಲೋಕ ನೌಕರನಾಗಿರುವುದಾಗಿ ಭಾವಿಸಲಾಗಿರುವ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ಕಾರ್ಯಕ್ರಮ ಅಧಿಕಾರಿ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

## 31. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ

(1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಿಗಳಿಗೆ ಭಾದಕವಾಗದಂತೆ, ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 10ನೇ ಪ್ರಕರಣದ (3)ನೇ ಉಪ ಪ್ರಕರಣದ (ಇ) ಖಂಡದ ಮೇರೆಗೆ ರಾಜ್ಯ ಸರ್ಕಾರಗಳ ಪ್ರತಿನಿಧಿಗಳ ಸಂಖ್ಯೆ.

(ಬಿ) 10ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಕೇಂದ್ರ ಪರಿಷತ್ತಿನ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡಬಹುದೋ ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಕೇಂದ್ರ ಪರಿಷತ್ತಿನ ಸಭೆಗಳ (ಅಂಥ ಸಭೆಗಳ ಕೋರಂ ಅನ್ನು ಒಳಗೊಂಡು) ಕಾಲ, ಸ್ಥಳ ಮತ್ತು ಕಾರ್ಯ ವಿಧಾನ,

(ಸಿ) 20ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ರಾಷ್ಟ್ರೀಯ ನಿಧಿಯನ್ನು ಬಳಸಿಕೊಳ್ಳತಕ್ಕದ್ದೋ ಆ ರೀತಿ ಮತ್ತು ಷರತ್ತುಗಳು ಮತ್ತು ಪರಿಮಿತಿಗಳು;

(ಡಿ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೆಲವು ಬಾಬ್ತುಗಳ ವೆಚ್ಚಗಳನ್ನು ಭರಿಸಲು ಹಣ ಒದಗಿಸಬೇಕಾದ ರೀತಿಗೆ ಸಂಬಂಧಿಸಿದ ನಿಯಮಗಳು;

(ಇ) ಕೇಂದ್ರ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ ಅಥವಾ ಉಪಬಂಧವನ್ನು ಮಾಡಬೇಕಾದ ಯಾವುದೇ ಇತರ ವಿಷಯ.

## 32. ನಿಯಮಗಳನ್ನು ರಚಿಸಿಲು ರಾಜ್ಯ ಸರ್ಕಾರದ ಅಧಿಕಾರ

(1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ ಪ್ರಕಟಣೆಯ ಷರತ್ತುಗಳಿಗೊಳಪಟ್ಟು ಈ ಅಧಿನಿಯಮ ಮತ್ತು ಕೇಂದ್ರ ಸರ್ಕಾರವು ರಚಿಸಿದ ನಿಯಮಗಳಿಗೆ ಸಂಗತವಾಗಿರುವಂತೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ;–

(ಎ) (7)ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರುದ್ಯೋಗ ಭತ್ಯೆಗೆ ಅರ್ಹತೆ ನಿರ್ಧರಿಸಲು ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 7ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ನಿರುದ್ಯೋಗ ಭತ್ಯೆ ಸಂದಾಯ ಮಾಡುವುದಕ್ಕಾಗಿ ಕಾರ್ಯವಿಧಾನ;

(ಸಿ) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಪರಿಷತ್ತಿನ ಅಧ್ಯಕ್ಷ ಮತ್ತು ಸದಸ್ಯರ ನೇಮಕ ಮಾಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ರಾಜ್ಯ ಪರಿಷತ್ತಿನ ಸಭೆಗಳ (ಅಂಥ ಸಭೆಗಳ ಕೋರಂ ಅನ್ನು ಒಳಗೊಂಡಂತೆ) ವೇಳೆ, ಸ್ಥಳ ಮತ್ತು ಕಾರ್ಯವಿಧಾನ;

(ಡಿ) 19ನೇ ಪ್ರಕರಣದ ಮೇರೆಗೆ ಕ್ಷೇತ್ರ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿನ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ ಮತ್ತು ಅಂಥ ವಿಷಯದಲ್ಲಿ ಪಾಲಿಸಬೇಕಾದ ಕಾರ್ಯವಿಧಾನ;

(ಇ) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯವು ನಿಧಿಯನ್ನು ಬಳಸಿಕೊಳ್ಳತಕ್ಕ ರೀತಿ ಮತ್ತು ಷರತ್ತುಗಳು ಮತ್ತು ಪರಿಮಿತಿಗಳು;

(ಎಫ್) 21ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ನಿಧಿಯನ್ನು ನಿರ್ವಹಿಸಬಹುದಾದ ಪ್ರಾಧಿಕಾರ ಮತ್ತು ಅದನ್ನು ಹೊಂದಿರಬಹುದಾದ ರೀತಿ;

(ಜಿ) 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕೆಲಸಗಾರರ ಉದ್ಯೋಗದ ಲೆಕ್ಕ ಪುಸ್ತಕಗಳ ಮತ್ತು ವೆಚ್ಚದ ನಿರ್ವಹಣೆಯ ರೀತಿ;

(ಹೆಚ್) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕಾರ್ಯಯೋಜನೆಗಳ ಯೋಗ್ಯ ಜಾರಿಗಾಗಿ ಅಗತ್ಯವಾದ ಏರ್ಪಾಡುಗಳು;

(ಐ) 24ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಕಾರ್ಯಯೋಜನೆಗಳ ಲೆಕ್ಕಪುಸ್ತಕಗಳನ್ನು ನಿರ್ವಹಿಸತಕ್ಕ ನಮೂನೆ ಮತ್ತು ರೀತಿ;

(ಜೆ) ರಾಜ್ಯ ಸರ್ಕಾರವು ನಿಯಮಗಳ ಮೂಲಕ ಗೊತ್ತುಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದ ಇತರ ಯಾವುದೇ ವಿಷಯ ಅಥವಾ ಈ ಸಂಬಂಧದಲ್ಲಿ ಉಪಬಂಧಿಸಬೇಕಾದ ಇತರ ವಿಷಯ.

## 33. ನಿಯಮಗಳನ್ನು ಮತ್ತು ಕಾರ್ಯಯೋಜನೆಗಳನ್ನು ಸದನದ ಮುಂದಿರಿಸುವುದು

(1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ

ಪರಿಣಾಮಕಾರಿಯಾಗತಕ್ಕದ್ದಲ್ಲ. ಅದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ಪ್ರತಿಯೊಂದು ನಿಯಮವನ್ನು ಅಥವಾ ಕಾರ್ಯಯೋಜನೆಯನ್ನು ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಎರಡು ಸದನಗಳು ಇದ್ದಲ್ಲಿ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು ಮತ್ತು ರಾಜ್ಯ ವಿಧಾನ ಮಂಡಲದಲ್ಲಿ ಒಂದೇ ಸದನ ಇದ್ದಲ್ಲಿ ಆ ಸದನದ ಮುಂದೆ ಇರಿಸತಕ್ಕದ್ದು.

## 34. ತೊಂದರೆಗಳ ನಿವಾರಣೆಗೆ ಅಧಿಕಾರ

(1) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶ ಹೊರಡಿಸುವುದರ ಮೂಲಕ, ತೊಂದರೆಯ ನಿವಾರಣೆಗೆ ಅಗತ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು.

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಮೂರು ವರ್ಷಗಳ ಮುಕ್ತಾಯದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು.

ಅನುಷ್ಠಾನ ರಾಗ್ರಂಥ

# ಅನುಸೂಚಿ – I

[4(3)ನೇ ಪ್ರಕರಣವನ್ನು ನೋಡಿ]

# ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಯೋಜನೆಯ ಕನಿಷ್ಠ ರೂಪರೇಷೆಗಳು

* 1. ಎಲ್ಲ ರಾಜ್ಯಗಳು 4ನೇ ಪ್ರಕರಣದ ಮೇರೆಗೆ ಅಧಿಸೂಚಿಸಿದ ಕಾರ್ಯಯೋಜನೆಯನ್ನು 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಯೋಜನೆ' ಎಂದು ಕರೆಯತಕ್ಕದ್ದು ಮತ್ತು ಸದರಿ ಕಾರ್ಯಯೋಜನೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳಲ್ಲಿ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005' (2005ರ 42) ಎಂದು ನಮೂದಿಸತಕ್ಕದ್ದು.

1ಎ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾರ್ಯಯೋಜನೆಯನ್ನು ಇಲ್ಲಿ ಇನ್ನು ಮುಂದೆ 'ಮಹಾತ್ಮ ಗಾಂಧಿ ಎನ್ ಆರ್‌ಇಜಿಎಸ್' ಎಂದು ಉಲ್ಲೇಖಿಸತಕ್ಕದ್ದು ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ ಕಾರ್ಯಯೋಜನೆಯಲ್ಲಿನ ಯಾವುದೇ ಉಲ್ಲೇಖವನ್ನು 'ಮಹಾತ್ಮ ಗಾಂಧಿ ಎನ್‌ಆರ್‌ಇಜಿಎ' ಎಂದು ಉಲ್ಲೇಖಿಸತಕ್ಕದ್ದು]

**[1ಬಿ.] ಕಾರ್ಯಯೋಜನೆಯು ಮುಖ್ಯವಾಗಿ ಅದ್ಯತಾ ಕ್ರಮದಲ್ಲಿ ಈ ಕೆಳಗೆ ನೀಡಲಾದ ಕಾಮಗಾರಿಗಳಿಗೆ ಗಮನ ನೀಡತಕ್ಕದ್ದು:

(i) ಜಲ ಸಂರಕ್ಷಣೆ ಮತ್ತು ಜಲ ಸಂಗ್ರಹಣೆ

(ii) ಬರ ನಿರೋಧಕ ವ್ಯವಸ್ಥೆ (ವನ ನಿರ್ಮಾಣ ಮತ್ತು ಮರ ನೆಡುತೋಪು ಸೇರಿದಂತೆ).

(iii) ಅತಿ ಸಣ್ಣ ಮತ್ತು ಸಣ್ಣ ನೀರಾವರಿ ಕಾಮಗಾರಿಗಳೂ ಸೇರಿದಂತೆ ನೀರಾವರಿ ಕಾಲುವೆಗಳು;

***[(iv) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಕುಟುಂಬಗಳು ಅಥವಾ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಅಥವಾ ಭೂ ಸುಧಾರಣೆಗಳ ಫಲಾನುಭವಿಗಳು ಅಥವಾ ಭಾರತ ಸರ್ಕಾರದ ಇಂದಿರಾ ಆವಾಸ್ ಯೋಜನೆಯ ಮೇರೆಗಿನ ಫಲಾನುಭವಿಗಳು ಅಥವಾ ಕೃಷಿ ಸಾಲ ಮನ್ನ ಮತ್ತು ಸಾಲ ಪರಿಹಾರ ಕಾರ್ಯಯೋಜನೆ, 2008ರಲ್ಲಿ ಪರಿಭಾಷಿಸಿರುವ ಸಣ್ಣ ರೈತರು ಅಥವಾ ಅತಿ ಸಣ್ಣ ರೈತರುಗಳು ಒಡೆತನ ಹೊಂದಿರುವ ಜಮೀನಿಗೆ ನೀರಾವರಿ ಸೌಲಭ್ಯವನ್ನು, ತೋಟಗಾರಿಕೆ, ನೆಡತೋಪು ಮತ್ತು ಭೂ ಅಭಿವೃದ್ಧಿ ಸೌಲಭ್ಯಗಳನ್ನು ಕಲ್ಪಿಸುವುದು;]

**** [ಪರಂತು, ಈ ಮುಂದಿನ ಷರತ್ತುಗಳನ್ನು ಪೂರೈಸಬೇಕು, ಎಂದರೆ:

(ಎ) ಪ್ರತಿಯೊಬ್ಬ ಭೂ ಮಾಲೀಕನು ಕೆಲಸದ ಚೀಟಿಯನ್ನು ಹೊಂದಿರತಕ್ಕದ್ದು ಮತ್ತು ಪರಿಯೋಜನೆಯಲ್ಲಿ ಕೆಲಸವನ್ನು ಸಹ ಮಾಡತಕ್ಕದ್ದು.

(ಬಿ) ಅಂಥ ಪ್ರತಿಯೊಂದು ಪರಿಯೋಜನೆಗಾಗಿ, ಕೆಲಸದ ಸಾಮಗ್ರಿಗಳ ಅನುಪಾತವನ್ನು 60:40 ರಂತೆ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ನಿರ್ವಹಿಸತಕ್ಕದ್ದು;

(ಸಿ) ಪರಿಯೋಜನೆಗಳು ಗ್ರಾಮಸಭೆಯಿಂದ ಮತ್ತು ಗ್ರಾಮ ಪಂಚಾಯಿತಿಯಿಂದ

---

* ದಿನಾಂಕ 30.07.2010 ಅಧಿಸೂಚನೆ ಎಸ್.ಓ. 1860 (ಇ) ಮೂಲಕ 1 ಮತ್ತು 1ಎ ಪ್ಯಾರಾ ಗ್ರಾಫ್‌ಗಳನ್ನು ಸೇರಿಸಲಾಗಿದೆ.

** ದಿನಾಂಕ 30.07.2010 ಅಧಿಸೂಚನೆ ಎಸ್.ಓ. 1860 (ಇ) ಮೂಲಕ 1ಬಿ ಎಂದು ಪುನರಂಕಿಸಲಾಗಿದೆ.

*** ದಿನಾಂಕ 22.07.2009ರ ಅಧಿಸೂಚನೆ ಎಸ್.ಓ 1824 (ಇ) ಮೂಲಕ (**iv**)ನೇ ಉಪ ಪ್ಯಾರಾ ಗ್ರಾಫ್‌ನ್ನು ಪ್ರತ್ಯಾಯೋಜಿಸಲಾಗಿದೆ.

**** ದಿನಾಂಕ 18.06.2008ರ ಅಧಿಸೂಚನೆ ಎಸ್.ಓ. 1489 (ಇ) ಮೂಲಕ ಪರಂತುಕವನ್ನು ಸೇರಿಸಲಾಗಿದೆ.

ಅನುಮೋದಿತವಾಗಿರತಕ್ಕದ್ದು ಮತ್ತು ಅವು ವಾರ್ಷಿಕ ಪರಿಯೋಜನೆಗಳ ವರ್ಗಗಳ ಭಾಗವಾಗಿರತಕ್ಕದ್ದು.

(ಡಿ) ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಯಾರೇ ಗುತ್ತಿಗೆದಾರರನ್ನು ಅಥವಾ ಯಾವುದೇ ಯಂತ್ರಗಳನ್ನು ಬಳಸಿಕೊಳ್ಳತಕ್ಕದ್ದಲ್ಲ; ಮತ್ತು

(ಇ) ಯಾವುದೇ ಯಾಂತ್ರಗಳನ್ನು ಖರೀದಿ ಮಾಡತಕ್ಕದ್ದಲ್ಲ.]

(V) ಕೆರೆಗಳ ಹೂಳೆತ್ತುವುದೂ ಸೇರಿದಂತೆ ಸಾಂಪ್ರದಾಯಿಕ ಜಲ ಸಂಗ್ರಹಾಗಾರಗಳ ಪುನಶ್ಚೇತನ;

(VI) ಭೂ ಅಭಿವೃದ್ಧಿ;

(VII) ಪ್ರವಾಹ ನಿಯಂತ್ರಣ ಮತ್ತು ನೀರು ನಿಲ್ಲುವ ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆಯೂ ಸೇರಿದಂತೆ ಸಂರಕ್ಷಣಾ ಕಾಮಗಾರಿಗಳು;

(VIII) ಸರ್ವ ಋತುಗಳಲ್ಲಿ ಅನುಕೂಲವಾಗುವಂತೆ ಗ್ರಾಮೀಣ ಸಂಪರ್ಕ ವ್ಯವಸ್ಥೆ ಕಲ್ಪಿಸುವುದು; ಮತ್ತು

(IX) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚಿಸಬಹುದಾದಂಥ ಇತರ ಯಾವುದೇ ಕಾಮಗಾರಿ.

2. ಗ್ರಾಮೀಣ ಬಡಜನರಿಗಾಗಿ ಬಾಳಿಕೆ ಬರಬಹುದಾದ ಸ್ವತ್ತುಗಳನ್ನು ಸೃಜಿಸುವುದು ಮತ್ತು ಜೀವನಾಧಾರ ಸಂಪನ್ಮೂಲಗಳನ್ನು ಬಲಗೊಳಿಸುವುದು ಕಾರ್ಯಯೋಜನೆಯ ಮುಖ್ಯ ಉದ್ದೇಶವಾಗಿರತಕ್ಕದ್ದು.

*3. ಈ ಕಾರ್ಯಯೋಜನೆ ಅಡಿಯಲ್ಲಿ ಕಾಮಗಾರಿಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಕೈಗೊಳ್ಳತಕ್ಕದ್ದು ಮತ್ತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:–

(ಎ) ಪ್ರತಿಯೊಂದು ಕೆಲಸಕ್ಕೆ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡತಕ್ಕದ್ದು.

(ಬಿ) ಎಲ್ಲಾ ಕೆಲಸಗಳನ್ನು ಕೆಲಸದ ಚೀಟಿಗಳನ್ನು ಹೊಂದಿರುವ ಮತ್ತು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿರುವ ಕೆಲಸಗಾರರೇ ನಿರ್ವಹಿಸತಕ್ಕದ್ದು.

(ಸಿ) 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾರೇ ವ್ಯಕ್ತಿಗೂ ಎನ್‌ಆರ್‌ಇಜಿಎ ಪರಿಯೋಜನೆಗಳ ಅಡಿಯಲ್ಲಿ ಕೆಲಸ ಮಾಡಲು ಅನುಮತಿ ನೀಡತಕ್ಕದ್ದಲ್ಲ.

(ಡಿ) ಪ್ರತಿಯೊಂದು ಹಾಜರಾತಿ ಪಟ್ಟಿಯು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಕಾರ್ಯಕ್ರಮ ಅಧಿಕಾರಿಯು ಪ್ರಮಾಣೀಕರಿಸತಕ್ಕದ್ದು. ಹಾಜರಾತಿ ಪಟ್ಟಿಯ ನಮೂನೆಯ ಭಾರತ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(ಇ) ಕಾರ್ಯಕ್ರಮ ಅಧಿಕಾರಿಯು ಯುಕ್ತವಾಗಿ ಸಹಿ ಮಾಡಿದ ಮತ್ತು ಸೂಕ್ತವಾಗಿ ಸಂಖ್ಯೆ ಹಾಕಿದ ಹಾಜರಾತಿ ಪಟ್ಟಿಗಳನ್ನು ಕೆಲಸದ ಸ್ಥಳದಲ್ಲಿ ಇಟ್ಟಿರತಕ್ಕದ್ದು, ಕಾರ್ಯಕ್ರಮ ಅಧಿಕಾರಿಯು ಯುಕ್ತವಾಗಿ ಸಹಿ ಮಾಡಿರದ ಮತ್ತು ಸೂಕ್ತವಾಗಿ ಸಂಖ್ಯೆ ನೀಡಿರದ ಯಾವುದೇ ಹಾಜರಾತಿ ಪಟ್ಟಿಯನ್ನು ಅನಧಿಕೃತವೆಂದು ಪರಿಗಣಿಸಲಾಗುವುದು ಮತ್ತು ಅದನ್ನು ಕೆಲಸದ ಸ್ಥಳದಲ್ಲಿ ಇಡತಕ್ಕದ್ದಲ್ಲ.

(ಎಫ್) ಕೆಲಸಗಾರರು ಕೆಲಸದ ಸ್ಥಳದಲ್ಲಿರುವ ಹಾಜರಾತಿ ಪಟ್ಟಿಯಲ್ಲಿ ತಮ್ಮ ಹಾಜರಾತಿಗೆ ಮತ್ತು ತಾವು ಗಳಿಸಿದ ಮಜೂರಿಗಳ ಮೊತ್ತಕ್ಕೆ ಮೇಲು ರುಜು ಹಾಕುತ್ತಾರೆ.

(ಜಿ) ಹಾಜರಾತಿ ಪಟ್ಟಿಗಳ ವಿವರವಾದ ದಾಖಲೆಯನ್ನು ಕಾಲಕಾಲಕ್ಕೆ ಭಾರತ ಸರ್ಕಾರವು ನಿಗಧಿಪಡಿಸಿದಂತೆ ರಿಜಿಸ್ಟರುಗಳಲ್ಲಿ ಇಡಲಾಗುತ್ತದೆ.

(ಹೆಚ್) ಕೆಲಸವು ಪ್ರಗತಿಯಲ್ಲಿರುವಾಗ, ಆ ಕೆಲಸದಲ್ಲಿ ತೊಡಗಿರುವ ಕೆಲಸಗಾರರು, ಕನಿಷ್ಠ ಪಕ್ಷ ವಾರಕೊಮ್ಮೆ ತಮ್ಮ ಕೆಲಸದ ಸ್ಥಳದ ಎಲ್ಲಾ ಬಿಲ್‌ಗಳನ್ನು. ವೋಚರ್‌ಗಳನ್ನು ಪರಿಶೀಲಿಸುವುದಕ್ಕೆ ಮತ್ತು ಪ್ರಮಾಣೀಕರಿಸುವುದಕ್ಕೆ ವಾರದ ಸರದಿಯ ಆಧಾರದಲ್ಲಿ ಅವರುಗಳ ಪೈಕಿ ಐವರಿಗಿಂತ ಕಡಿಮೆಯಿಲ್ಲದ ಕೆಲಸಗಾರರನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

(ಐ) ಕೆಲಸದ ಸ್ಥಳದಲ್ಲಿ ಸಾರ್ವಜನಿಕ ಪರಿಶೀಲನೆಗಾಗಿ ಮಂಜೂರಾತಿ. ಕಾಮಗಾರಿ ಆದೇಶದ ಒಂದು ಪ್ರತಿಯು ಲಭ್ಯವಿರತಕ್ಕದ್ದು.

---

* ದಿನಾಂಕ 13.12.2008ರ ಅಧಿಸೂಚನೆ ಎಸ್.ಓ. 3000 (ಇ) ಮೂಲಕ 3ನೇ ಪ್ಯಾರಾಗ್ರಾಫ್‌ನ್ನು ಸೇರಿಸಲಾಗಿದೆ.

(ಜೆ) ಕೆಲಸದ ಅಳತೆಯನ್ನು ಕೆಲಸದ ಸ್ಥಳದ ಪ್ರಭಾರದಲ್ಲಿರುವ ಅರ್ಹ ತಾಂತ್ರಿಕ ಸಿಬ್ಬಂದಿಯು ಇಟ್ಟಿರುವ ಅಳತೆ ಪುಸ್ತಕದಲ್ಲಿ ದಾಖಲಿಸತಕ್ಕದ್ದು.

(ಕೆ) ಪ್ರತಿಯೊಂದು ಕೆಲಸಕ್ಕೆ ಸಂಬಂಧಿಸಿದ ಅಳತೆಯ ದಾಖಲೆಗಳು ಮತ್ತು ಪ್ರತಿಯೊಬ್ಬ ಕೆಲಸಗಾರನಿಗೆ ಸಂಬಂಧಿಸಿದ ದಾಖಲೆಗಳು ಸಾರ್ವಜನಿಕ ಪರಿಶೀಲನೆಗಾಗಿ ಲಭ್ಯವಿರಬೇಕು.

(ಎಲ್) ಪ್ರತಿಯೊಂದು ಕೆಲಸದ ಸ್ಥಳದಲ್ಲಿ ನಾಗರಿಕ ಮಾಹಿತಿ ಫಲಕವನ್ನು ಹಾಕಬೇಕು ಮತ್ತು ಅದರಲ್ಲಿ ಭಾರತ ಸರ್ಕಾರವು ನಿಗಧಿಪಡಿಸಿದ ರೀತಿಯಲ್ಲಿ ನಿಯತವಾಗಿ ತಹಲ್‌ವರೆಗಿನ ಮಾಹಿತಿ ಇರಬೇಕು.

(ಎಂ) ಎಲ್ಲಾ ದಿನಗಳ ಎಲ್ಲಾ ಕೆಲಸದ ವೇಳೆಗಳಲ್ಲಿ ಕೆಲಸದ ಸ್ಥಳದಲ್ಲಿ ಯಾರೇ ವ್ಯಕ್ತಿಯು ಕೋರಿದಾಗ ಆ ಯಾರೇ ವ್ಯಕ್ತಿಗೆ ಹಾಜರಾತಿ ಪಟ್ಟಿಗಳನ್ನು ನೋಡುವ ಅವಕಾಶವಿರಬೇಕು.

(ಎನ್) ಭಾರತ ಸರ್ಕಾರದ ಸೂಚನೆಗಳಿಗೆ ಅನುಸಾರವಾಗಿ ಸ್ಥಾಪಿತವಾದ ಜಾಗೃತ ಮತ್ತು ಉಸ್ತುವಾರಿ ಸಮಿತಿಯು ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸುತ್ತದೆ ಮತ್ತು ಅದು ಮಾಡಿದ ಮೌಲ್ಯಮಾಪನ ವರದಿಯನ್ನು ಭಾರತ ಸರ್ಕಾರವು ನಿಗಧಿಪಡಿಸಿದ ನಮೂನೆಯಲ್ಲಿ ಕಾಮಗಾರಿಗಳ ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ ಮತ್ತು ಸಾಮಾಜಿಕ ಪರಿಶೋಧನೆಯ ಸಂದರ್ಭದಲ್ಲಿ ಗ್ರಾಮಸಭೆಗೆ ಅದನ್ನು ಸಲ್ಲಿಸಬೇಕು.

4. ಬಾಳಿಕೆ ಬರಬಹುದಾದ ಸ್ವತ್ತುಗಳನ್ನು ಸೃಜಿಸುವ ಸಾಮರ್ಥ್ಯದ ಆಧಾರದ ಮೇಲೆ ರಾಜ್ಯ ಪರಿಷತ್ತು ವಿವಿಧ ಪ್ರದೇಶಗಳಿಗೆ ಸಂಬಂಧಿಸಿದ ಆದ್ಯತಾ ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು.

5. ಕಾರ್ಯಯೋಜನೆಯು, ಕಾರ್ಯಯೋಜನೆಯ ಮೇರೆಗೆ ಸೃಜಿಸಲಾದ ಸಾರ್ವಜನಿಕ ಸ್ವತ್ತುಗಳ ಸಮುಚಿತ ನಿರ್ವಹಣೆಗಾಗಿ ಅದು ಹೊರಡಿಸಿರುವ ನಿಯಮಗಳ ಮೇರೆಗೆ ರಾಜ್ಯ ಸರ್ಕಾರವು ವಿಧಿಸಬಹುದಾದ ಯೋಗ್ಯ ವ್ಯವಸ್ಥೆಗಳಿಗೆ ಒಳಪಟ್ಟಿರತಕ್ಕದ್ದು.

6. ಯಾವುದೇ ಸನ್ನಿವೇಶಗಳಲ್ಲೂ, ಕಾರ್ಮಿಕರಿಗೆ ಮಜೂರಿ ದರಕ್ಕಿಂತ ಕಡಿಮೆ ಮಜೂರಿಯನ್ನು ಸಂದಾಯ ಮಾಡತಕ್ಕದ್ದಲ್ಲ.

7. ಮಜೂರಿಗಳು ಕೆಲಸದ ಪ್ರಮಾಣಕ್ಕೆ ನೇರವಾಗಿ ಸಂಬಂಧಪಟ್ಟಿದ್ದರೆ, ಆಗ ರಾಜ್ಯ ಸರ್ಕಾರವು, ರಾಜ್ಯ ಪರಿಷತ್ತಿನೊಂದಿಗೆ ಸಮಾಲೋಚಿಸಿ, ಪ್ರತಿ ವರ್ಷ ವಿವಿಧ ರೀತಿಯ ಕಾಮಗಾರಿಗಳಿಗೆ ನಿಗಧಿಪಡಿಸಲಾದ ದರಗಳ ಪಟ್ಟಿಗೆ ಅನುಸಾರವಾಗಿ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

*8. (1) ವಿವಿಧ ಅಕುಶಲ ಕಾರ್ಮಿಕರಿಗೆ ಸಂಬಂಧಿಸಿದ ಮಜೂರಿಗಳ ದರಗಳ ಪಟ್ಟಿಯನ್ನು, ಒಂಭತ್ತು ಗಂಟೆಗಳ ಕಾಲ ಕೆಲಸ ಮಾಡುವ ಒಬ್ಬ ವಯಸ್ಕ ವ್ಯಕ್ತಿಯು ಸಾಮಾನ್ಯವಾಗಿ ಪಡೆಯುವ ಮಜೂರಿ ದರಗಳಿಗೆ ಸಮನಾದ ಮಜೂರಿಯನ್ನು ಪಡೆಯುವ ಹಾಗೆ ನಿಗದಿಪಡಿಸತಕ್ಕದ್ದು.

(2) ಒಬ್ಬ ವಯಸ್ಕ ಕೆಲಸಗಾರನ ಕೆಲಸದ ದಿವಸಗಳನ್ನು, ವಿಶ್ರಾಂತಿಗಾಗಿ ಬಿಡುವು ಯಾವುದಾದರೂ ಇದ್ದರೆ, ಅದನ್ನೂ ಒಳಗೊಂಡಂತೆ, ಯಾವುದೇ ದಿನದಲ್ಲಿ ಅದು ಹನ್ನೆರಡು ಗಂಟೆಗಳಿಗಿಂತ ಹೆಚ್ಚಾಗದ ಹಾಗೆ ವ್ಯವಸ್ಥಿತಗೊಳಿಸತಕ್ಕದ್ದು.

8ಎ. ಪುರುಷ ಮತ್ತು ಮಹಿಳಾ ಕೆಲಸಗಾರರು ಒಂದು ಗುಂಪಿನಲ್ಲಿ ಮಾಡುವ ಕೆಲಸದ ಸರಾಸರಿ ಪ್ರಮಾಣವು ಕೆಲಸ ಆಧಾರಿತ ಮಜೂರಿ ದರಗಳ ಪಟ್ಟಿಯನ್ನು ನಿಗದಿಪಡಿಸುವುದಕ್ಕೆ ಆಧಾರವಾಗಿರುತ್ತದೆ. ಇದರಿಂದ ಮಜೂರಿ ದರಗಳ ಪಟ್ಟಿಯಲ್ಲಿ ಲಿಂಗ ಆಧಾರಿತ ತಾರತಮ್ಯ ಇರುವುದಿಲ್ಲ.

9. ಕಾರ್ಯಯೋಜನೆಯ ಮೇರೆಗೆ ಕೈಗೆತ್ತಿಕೊಳಲಾದ ಕುಶಲ ಮತ್ತು ಅರೆ–ಕುಶಲ ಕೆಲಸಗಾರರ ಮಜೂರಿಗಳೂ ಸೇರಿದಂತೆ ಪರಿಯೋಜನೆಗಳ ಮುಖ್ಯ ಘಟಕದ ವೆಚ್ಚವು, ಒಟ್ಟು ಪರಿಯೋಜನೆಯ ವೆಚ್ಚದ ಶೇಕಡ ನಲವತ್ತರಷ್ಟನ್ನು ಮೀರತಕ್ಕದ್ದಲ್ಲ.

10. ಕಾರ್ಯಯೋಜನೆಯ ಮೇರೆಗೆ ಅವಕಾಶವಿರಬಹುದಾದ ಯಾವುದೇ ರೀತಿಯ ಕೆಲಸವನ್ನು ಮಾಡುವುದಕ್ಕೆ ಕಾರ್ಯಯೋಜನೆಯ ಮೇರೆಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿರುವ ಯಾರೇ ವ್ಯಕ್ತಿಗೆ ನಿರ್ದೇಶನ

* ದಿನಾಂಕ 14–01–2008ರ ಅಧಿಸೂಚನೆ ಎಸ್.ಓ 88 (ಇ) ಮೂಲಕ 8ನೇ ಮತ್ತು 8ಎ ಪ್ಯಾರಗ್ರಾಫ್‌ನ್ನು ಸೇರಿಸಲಾಗಿದೆ

ನೀಡುವುದಕ್ಕೆ ಕಾರ್ಯಕ್ರಮ ಅಧಿಕಾರಿಗೆ ಮತ್ತು ಗ್ರಾಮ ಪಂಚಾಯಿತಿಗೆ ಮುಕ್ತ ಅವಕಾಶವಿರತಕ್ಕದ್ದು.

11. ಕಾರ್ಯಯೋಜನೆಯ ಮೇರೆಗಿನ ಪರಿಯೋಜನೆಗಳ ಅನುಷ್ಠಾನಕ್ಕಾಗಿ ಯಾರೇ ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡತಕ್ಕದ್ದಲ್ಲ.

12. ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಕಾರ್ಯಯೋಜನೆಯ ಮೇರೆಗೆ ಯಾವ ಕೆಲಸಕ್ಕೆ ನಿಧಿ ಒದಗಿಸಲಾಗಿದೆಯೋ ಆ ಕೆಲಸವನ್ನು, ದೈಹಿಕ ಶ್ರಮದಿಂದ ಮಾಡಬೇಕೇ ಹೊರತು ಯಂತ್ರಗಳ ಮೂಲಕವಲ್ಲ.

*13. ಪ್ರತಿಯೊಂದು ಕಾರ್ಯಯೋಜನೆಯು, ಅನುಷ್ಠಾನದ ಎಲ್ಲ ಹಂತಗಳಲ್ಲಿ ಪಾರದರ್ಶಕವಾಗಿದೆಯೆಂಬುದನ್ನು ಮತ್ತು ಉತ್ತರದಾಯಿತ್ವದಿಂದ ಕೂಡಿದೆಯೆಂಬುದನ್ನು ಖಚಿತಪಡಿಸಿಕೊಳ್ಳಲು ಈ ಕೆಳಗೆ ತಿಳಿಸಿದಂತೆ ಸಾಕಷ್ಟು ಉಪಬಂಧಗಳನ್ನು ಒಳಗೊಂಡಿರತಕ್ಕದ್ದು:–

**(ಎ) ಪೂರ್ವಯೋಜಿತ ಪ್ರಕಟಣೆ**

(i) ಅಧಿಕೃತಗೊಳಿಸಿದ ವ್ಯಕ್ತಿಯು, ಕೆಲಸದ ಸ್ಥಳದಲ್ಲಿ, ನಾಗರಿಕ ಮಾಹಿತಿ ಫಲಕಗಳಲ್ಲಿ ಮಾಹಿತಿಯನ್ನು ಪ್ರದರ್ಶಿಸುವ ಮೂಲಕ ಪೂರ್ವಯೋಜಿತ ಪ್ರಕಟಣೆಯನ್ನು ನೀಡತಕ್ಕದ್ದು, ದಿನದ ಕೊನೆಯಲ್ಲಿ, ಕೆಲಸಗಾರರ ಸಮ್ಮುಖದಲ್ಲಿ ಹಾಜರಾತಿಗೆ ಸಂಬಂಧಿಸಿದಂತೆ ಹಾಜರತಿ ಪಟ್ಟಿಗಳಲ್ಲಿನ ಮಾಹಿತಿಯನ್ನು, ಮಾಡಿದ ಕೆಲಸದ ಮತ್ತು ಸಂದಾಯ ಮಾಡಿದ ಮಜೂರಿಗಳ ವಿವರವನ್ನು ಓದಿ ಹೇಳತಕ್ಕದ್ದು. ಕಾಮಗಾರಿಗಳನ್ನು ಅಳತೆ ಮಾಡುವ ಸಮಯದಲ್ಲಿ ಅಳತೆ ಪುಸ್ತಕದಲ್ಲಿನ ಅಳತೆಗಳನ್ನು ಕೂಡ ಕೆಲಸಗಾರರ ಮುಂದೆ ಓದಿ ಹೇಳತಕ್ಕದ್ದು.

(ii) ಗ್ರಾಮ ಪಂಚಾಯಿತಿ ಮತ್ತು ಬ್ಲಾಕ್ ಕಾರ್ಯಕ್ರಮ ಕಛೇರಿಯಲ್ಲಿ ಪೂರ್ವಯೋಜಿತ ಪ್ರಕಟಣೆಯನ್ನು ಫಲಕಗಳಲ್ಲಿ ಮಾಹಿತಿಯನ್ನು ಪ್ರದರ್ಶಿಸುವ ಮೂಲಕ ಮಾಡತಕ್ಕದ್ದು ಮತ್ತು ಆ ಪೂರ್ವಯೋಜಿತ ಪ್ರಕಟಣೆಯು, ಉದ್ಯೋಗಾವಕಾಶ, ಸ್ವೀಕರಿಸಿದ ನಿಧಿಗಳು ಮತ್ತು ಮಾಡಿದ ವೆಚ್ಚ, ಅನುಮೋದಿಸಿದ ಪರಿಯೋಜನೆಗಳ ವರ್ಗ – ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನಾದರೂ ಒಳಗೊಂಡಿರತಕ್ಕದ್ದು.

(iii) ಎನ್‌ಆರ್‌ಇಜಿಎ ಕುರಿತ ಎಲ್ಲಾ ಮಾಹಿತಿಯನ್ನು, ಭಾರತ ಸರ್ಕಾರವು ನಿಗಧಿಪಡಿಸಿದಂತೆ, ಎನ್‌ಆರ್‌ಇಜಿಎಯು ವೆಬ್‌ಸೈಟ್ ಮುಖಾಂತರ ಸಾರ್ವಜನಿಕ ಅವಗಾಹನೆಗೆ ಇಡತಕ್ಕದ್ದು ಮತ್ತು ಆ ಮಾಹಿತಿಯು ಉಚಿತವಾಗಿ ಡೌನ್‌ಲೋಡ್ ಮಾಡಬಹುದಾದ ವಿದ್ಯುನ್ಮಾನ ನಮೂನೆಯ ಮುಖಾಂತರ ದೊರೆಯುವಂತಿರತಕ್ಕದ್ದು.

**(ಬಿ) ಸಾಮಾಜಿಕ ಪರಿಶೋಧನೆ**

(i) ಸಾಮಾಜಿಕ ಪರಿಶೋಧನೆಯು ಕನಿಷ್ಠ ಪಕ್ಷ ಪ್ರತೀ ಆರು ತಿಂಗಳಿಗೊಮ್ಮೆ ನಡೆಯತಕ್ಕದ್ದು.

(ii) ಸಾಮಾಜಿಕ ಪರಿಶೋಧನೆಯ ಪ್ರಕಟಣೆಯನ್ನು, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಅಥವಾ ಕಾರ್ಯಕ್ರಮ ಅಧಿಕಾರಿಯು ಕನಿಷ್ಠ ಪಕ್ಷ ಮೂವತ್ತು ದಿನಗಳ ಮುಂಚಿತವಾಗಿ ಮಾಡತಕ್ಕದ್ದು.

(iii) ಗ್ರಾಮ ಸಭೆಯು ಮಾಡುವ ಪ್ರತಿಯೊಂದು ಸಾಮಾಜಿಕ ಪರಿಶೋಧನೆಗಾಗಿ, ಗ್ರಾಮಸಭೆಯು, ಅದೇ ಗ್ರಾಮ ಪಂಚಾಯಿತಿಗಳ ಎನ್‌ಆರ್‌ಇಜಿಎ ಅಡಿಯಲ್ಲಿ ಪ್ರಸಕ್ತ/ ಹಿಂದಿನ ಕಾಮಗಾರಿಗಳಲ್ಲಿ ಕೆಲಸ ಮಾಡಿದ ಕೆಲಸಗಾರರಿಂದಲೇ ಸಾಮಾಜಿಕ ಪರಿಶೋಧನಾ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳುತ್ತದೆ ಮತ್ತು ಸಾಮಾಜಿಕ ಪರಿಶೋಧನಾ ಸಮಿತಿಯ ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆಯಲ್ಲದಷ್ಟು ಮಹಿಳೆಯರು ಇರತಕ್ಕದ್ದು.

(iv) ಕಾರ್ಯಕ್ರಮ ಅಧಿಕಾರಿಯು, ಕಾಮಗಾರಿಗಳ ಸಂಪೂರ್ಣ ಕಡತಗಳು ಅಥವಾ ಅವುಗಳ ಪ್ರತಿಗಳು ಒಳಗೊಂಡಂತೆ ಆ ಗ್ರಾಮ ಪಂಚಾಯಿತಿಯ ಅಧಿಕಾರ ವ್ಯಾಪ್ತಿಯಲ್ಲಿ ಇರುವ ಅನುಷ್ಠಾನ ಏಜೆನ್ಸಿಗಳ ಕಾಮಗಾರಿಗಳಿಗೆ ಎಲ್ಲಾ ಸಂಬಂಧಪಟ್ಟ ದಸ್ತಾವೇಜುಗಳು ಗ್ರಾಮ ಪಂಚಾಯಿತಿಯಲ್ಲಿ ಪರಿಶೀಲನೆಗೆ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(v) ಗ್ರಾಮ ಪಂಚಾಯಿತಿಯು ಸಾಮಾಜಿಕ ಪರಿಶೋಧನಾ ಸಮಿತಿಗೆ ಎಲ್ಲಾ ಅಗತ್ಯ ಮಾಹಿತಿಯನ್ನು ಮತ್ತು ದಸ್ತಾವೇಜುಗಳನ್ನು ಕನಿಷ್ಠ ಪಕ್ಷ 15 ದಿವಸಗಳ ಮುಂಚಿತವಾಗಿ ಸಲ್ಲಿಸತಕ್ಕದ್ದು.

(vi) ಸಾಮಾಜಿಕ ಪರಿಶೋಧನಾ ಸಮಿತಿಯು, ಎಲ್ಲಾ ದಸ್ತಾವೇಜುಗಳನ್ನು ಮತ್ತು ಮಾಹಿತಿಯನ್ನು ಪರಿಶೀಲಿಸುತ್ತದೆ.

---

* ದಿನಾಂಕ 31–12–2008ರ ಅಧಿಸೂಚನೆ ಎಸ್.ಓ. 3000 (ಇ) ಮೂಲಕ 13ನೇ ಪ್ಯಾರಾಗ್ರಾಫ್‌ನ್ನು ಸೇರಿಸಲಾಗಿದೆ.

ಯಾರೇ ವ್ಯಕ್ತಿಯು, ಸುಸಂಬದ್ಧವೆಂದು ಭಾವಿಸುವಂಥ ಯಾವುದೇ ಮಾಹಿತಿಯನ್ನು ಸಾಮಾಜಿಕ ಪರಿಶೋಧನಾ ಸಮಿತಿಗೆ ಸಲ್ಲಿಸಬಹುದು.

(vii) ಕಾರ್ಯಕ್ರಮ ಅಧಿಕಾರಿಯು, ಎಲ್ಲಾ ಸಾರ್ವಜನಿಕ ಪ್ರತಿನಿಧಿಗಳಿಗೆ ಮತ್ತು ಎನ್‌ಆರ್‌ಇಜಿಎಯನ್ನು ಅನುಷ್ಠಾನಗೊಳಿಸುತ್ತಿರುವ ಸಂಬಂಧಪಟ್ಟ ಸಿಬ್ಬಂದಿಗೆ ಸಾಮಾಜಿಕ ಪರಿಶೋಧನೆಯ ಪ್ರಕ್ರಿಯೆಯ ಬಗ್ಗೆ ತಿಳಿಸಲಾಗಿದೆಯೆಂಬುದನ್ನು ಮತ್ತು ಸಾಮಾಜಿಕ ಪರಿಶೋಧನೆಯಲ್ಲಿ ಅವರು ಹಾಜರಿರುವರೆಂಬುದನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಮುಂಚಿತವಾಗಿ ಅವರಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು.

(viii) ಸಾಮಾಜಿಕ ಪರಿಶೋಧನಾ ಸಮಿತಿಯು ತನ್ನ ನಿರ್ಣಯಗಳನ್ನು ಗ್ರಾಮಸಭೆಯಲ್ಲಿ ಬಹಿರಂಗವಾಗಿ ಓದಿ ಹೇಳತಕ್ಕದ್ದು ಮತ್ತು ಗ್ರಾಮ ಪಂಚಾಯಿತಿಯಿಂದ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ಕೋರಲು ಮತ್ತು ಪಡೆಯಲು ಹಾಗೂ ದಾಖಲೆಗಳನ್ನು ಪರಿಶೀಲಿಸಲು ಜನರಿಗೆ ಅವಕಾಶವನ್ನು ನೀಡತಕ್ಕದ್ದು.

(ix) ಹಿಂದಿನ ಸಾಮಾಜಿಕ ಪರಿಶೋಧನೆಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮದ ಬಗೆಗಿನ ವರದಿಯನ್ನು ಪ್ರತಿಯೊಂದು ಸಾಮಾಜಿಕ ಪರಿಶೋಧನೆಯ ಪ್ರಾರಂಭದಲ್ಲಿ ಓದಿ ಹೇಳತಕ್ಕದ್ದು.

(x) ನಡವಳಿಕೆಗಳನ್ನು ಕಾರ್ಯದರ್ಶಿಯು ದಾಖಲಿಸತಕ್ಕದ್ದು ಮತ್ತು ಸಾಮಾಜಿಕ ಪರಿಶೋಧನೆಗೆ ಮುಂಚೆ ಮತ್ತು ಸಾಮಾಜಿಕ ಪರಿಶೋಧನೆ ಮುಕ್ತಾಯವಾದ ನಂತರ ಅದರಲ್ಲಿ ಭಾಗವಹಿಸಿದವರೆಲ್ಲರೂ ನಡವಳಿಕೆ ಪುಸ್ತಕಕ್ಕೆ ಸಹಿ ಮಾಡತಕ್ಕದ್ದು. ಯಾವುದೇ ಅಸಮ್ಮತಿ/ ಅಕ್ಷೇಪಣೆಗಳಿದ್ದರೆ ತಿಳಿಸತಕ್ಕದ್ದು ಮತ್ತು ನಡಾವಳಿಗಳಲ್ಲಿ ಅದನ್ನು ದಾಖಲಿಸತಕ್ಕದ್ದು.

(xi) ಸಾಮಾಜಿಕ ಪರಿಶೋಧನೆಯಲ್ಲಿ, ಸಾರ್ವಜನಿಕರು ಭಾಗವಹಿಸಲು ಮುಕ್ತ ಅವಕಾಶವಿರತಕ್ಕದ್ದು. ಗ್ರಾಮಸಭೆಯ ಹೊರತಾಗಿ ಹೊರಗಿನ ಯಾರೇ ವ್ಯಕ್ತಿಗೆ, ಸಾಮಾಜಿಕ ಪರಿಶೋಧನೆಯ ವ್ಯವಹರಣೆಗಳಲ್ಲಿ ಮಧ್ಯಪ್ರವೇಶಿಸದೆ, ಸಾಮಾಜಿಕ ಪರಿಶೋಧನೆಯಲ್ಲಿ ವೀಕ್ಷಕರಾಗಿ ಹಾಜರಾಗಲು ಅವಕಾಶ ನೀಡತಕ್ಕದ್ದು.

(xii) ತೆಗೆದುಕೊಂಡ ಕ್ರಮದ ಎಲ್ಲಾ ವರದಿಗಳನ್ನು ಸಾಮಾಜಿಕ ಪರಿಶೋಧನೆ ನಡೆದ ಒಂದು ತಿಂಗಳೊಳಗಾಗಿ ಸಲ್ಲಿಸತಕ್ಕದ್ದು,

(xiii) ಅಧಿನಿಯಮದ ಉಲ್ಲಂಘನೆಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಎಲ್ಲಾ ನಿರ್ಣಯಗಳನ್ನು ದೂರು ಎಂಬುದಾಗಿ ಪರಿಗಣಿಸತಕ್ಕದ್ದು ಮತ್ತು ನಿರ್ಣಯಗಳಲ್ಲಿನ ಯಾವುದೇ ವಿವಾದದ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು.

(xiv) ಯಾವುದೇ ಹಣ ದುರ್ಬಳಕೆಯ ಬಗ್ಗೆ ಸಂಬಂಧಪಟ್ಟ ವ್ಯಕ್ತಿಯ ವಿರುದ್ದ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಆ ಹಣವನ್ನು ತ್ವರಿತವಾಗಿ ವಸೂಲಿ ಮಾಡತಕ್ಕದ್ದು.

(xv) ಎನ್‌ಆರ್‌ಇಜಿಎಸ್‌ನ ಲೆಕ್ಕಪತ್ರಗಳನ್ನು ಪ್ರಮಾಣೀಕರಿಸುವಾಗ, ಸರ್ಕಾರದ ಲೆಕ್ಕಪರಿಶೋಧಕನು, ಲೆಕ್ಕಪತ್ರಗಳನ್ನು ಪ್ರಮಾಣೀಕರಿಸುವ ಮುಂಚೆ, ಸಾಮಾಜಿಕ ಪರಿಶೋಧನೆಯಲ್ಲಿ ಎತ್ತಿದ ಹಣಕಾಸಿನ ಅಕ್ರಮಗಳಿಗೆ ಅಥವಾ ದುರುಪಯೋಗಗಳಿಗೆ ಸಂಬಂಧಿಸಿದ ಯಾವುದೇ ದೂರನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

14. ಕಾಮಗಾರಿಗಳ ಸಮುಚಿತ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಮತ್ತು ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕಾಗಿ ಸಂದಾಯ ಮಾಡಲಾದ ಒಟ್ಟು ಮಜೂರಿಗಳು, ಹಾಗೆ ಮಾಡಿದ ಕಾಮಗಾರಿಗಳ ಗುಣಮಟ್ಟ ಮತ್ತು ಪ್ರಮಾಣಕ್ಕೆ ಅನುಗುಣವಾಗಿದೆ ಎಂಬುದನ್ನು ಸಹ ಖಚಿತಪಡಿಸಿಕೊಳ್ಳಲು, ಕಾರ್ಯಯೋಜನೆಯ ಮೇರೆಗೆ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ನಿಯತ ಪರಿಶೀಲನೆ ಮತ್ತು ಮೇಲ್ವಿಚಾರಣೆಗಾಗಿ ಉಪಬಂಧಗಳನ್ನು ಕಲ್ಪಿಸತಕ್ಕದ್ದು.

15. ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ಕಾರ್ಯಕ್ರಮ ಅಧಿಕಾರಿ, ಮತ್ತು ಗ್ರಾಮ ಪಂಚಾಯಿತಿಗಳು, ಆತನ ಅಥವಾ ಅದರ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಮತ್ತು ಸಾಧನೆಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ಸಿದ್ದಪಡಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸಾರ್ವಜನಿಕರು ಕೋರಿದಾಗ ಮತ್ತು ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದಾಗ ಅವರಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.

*16. ಕಾರ್ಯಯೋಜನೆಗೆ ಸಂಬಂಧಿಸಿದ ಎಲ್ಲಾ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಸಾರ್ವಜನಿಕ ಪರಿಶೀಲನೆಗೆ ಉಚಿತವಾಗಿ ಲಭ್ಯವಾಗುವಂತೆ ಮಾಡತಕ್ಕದ್ದು. ಅದರ ಪ್ರತಿಯನ್ನು ಅಥವಾ ಅದರಿಂದ ಸಂಬಂಧಪಟ್ಟ ಉದ್ಧೃತ ಭಾಗಗಳನ್ನು ಪಡೆಯಲು ಇಚ್ಛಿಸುವ ಯಾರೇ ವ್ಯಕ್ತಿಯು ಕೋರಿದಾಗ, ಅರ್ಜಿಯನ್ನು ಸಲ್ಲಿಸಿದ ಸಮಯದಿಂದ ಮೂರು ಕೆಲಸದ ದಿನಗಳಿಗೆ ಮೀರದ ಅವಧಿಯೊಳಗೆ ಮತ್ತು ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ತರುವಾಯ, ಅಂಥ ಪ್ರತಿಯನ್ನು ಅಥವಾ ಉದ್ಧೃತ ಭಾಗಗಳನ್ನು ಒದಗಿಸತಕ್ಕದ್ದು.

17. ಆಸಕ್ತಿ ಹೊಂದಿರುವ ಯಾವನೇ ವ್ಯಕ್ತಿಯು, ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ನಂತರ ಆ ವ್ಯಕ್ತಿಗೆ ಪರಿಶೀಲನೆಗಾಗಿ ಕಾರ್ಯಯೋಜನೆಯ ಮೇರೆಗಿನ ಪ್ರತಿಯೊಂದು ಕಾರ್ಯಯೋಜನೆ ಅಥವಾ ಪರಿಯೋಜನೆ ಹಾಜರಿಪಟ್ಟಿಗಳ ಒಂದು ಪ್ರತಿಯನ್ನು ಗ್ರಾಮ ಪಂಚಾಯಿತಿ ಮತ್ತು ಕಾರ್ಯಕ್ರಮ ಅಧಿಕಾರಿಯ ಕಛೇರಿಗಳಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

ಅನಸೂ ರಾಗ್ರಸಂಸ್ಥೆ

* ದಿನಾಂಕ 31.12.2008ರ ಅಧಿಸೂಚನೆ ಎಸ್. ಓ. 3000 (ಇ) ಮೂಲಕ 16ನೇ ಪ್ಯಾರಾಗ್ರಾಫ್‌ನ್ನು ಪ್ರತ್ಯಾಯೋಜಿಸಲಾಗಿದೆ.

# ಅನುಸೂಚಿ – II

## (5ನೇ ಪ್ರಕರಣವನ್ನು ನೋಡಿ)

# ಕಾರ್ಯಯೋಜನೆಯ ಮೇರೆಗೆ ಖಾತರಿ ನೀಡಲಾದ ಗ್ರಾಮೀಣ ಉದ್ಯೋಗಕ್ಕೆ ಸಂಬಂಧಿಸಿದ ಷರತ್ತುಗಳು ಮತ್ತು ಕಾರ್ಮಿಕರ ಕನಿಷ್ಠ ಹಕ್ಕುಗಳು

1. (i) ಯಾವುದೇ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವಂಥ, ಮತ್ತು
   (ii) ಅಕುಶಲ ದೈಹಿಕ ಕೆಲಸವನ್ನು ಮಾಡಲು ಇಚ್ಛಿಸುವಂಥ
   – ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರು, ಕೆಲಸದ ಚೀಟಿ ನೀಡಿಕೆಗೆ ಸಂಬಂಧಿಸಿದಂತೆ ತಮ್ಮ ಕುಟುಂಬದ ನೋಂದಣಿಗಾಗಿ ಅವರು ಯಾವ ಗ್ರಾಮ ಮಟ್ಟದಲ್ಲಿ ಯಾವ ಗ್ರಾಮ ಪಂಚಾಯಿತಿಯ (ಈ ಅನುಸೂಚಿಯಲ್ಲಿ ಇನ್ನು ಮುಂದೆ ಗ್ರಾಮ ಪಂಚಾಯಿತಿಯೆಂದು ಉಲ್ಲೇಖಿಸಲಾಗಿದೆ) ಅಧಿಕಾರ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದಾರೋ ಆ ಗ್ರಾಮ ಪಂಚಾಯತಿಗೆ ತಮ್ಮ ಹೆಸರು, ವಯಸ್ಸು ಮತ್ತು ಮನೆಯ ವಿಳಾಸವನ್ನು ನೀಡಬಹುದು.

*2. (1) ಗ್ರಾಮ ಪಂಚಾಯಿತಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಕುಟುಂಬಗಳನ್ನು ನೋಂದಣಿ ಮಾಡಿಕೊಳ್ಳುವುದು ಮತ್ತು ಕುಟುಂಬದ ನೋಂದಾಯಿತ ವಯಸ್ಕ ಸದಸ್ಯರ ಬಗ್ಗೆ ಈ ಮುಂದಿನ ಅವಶ್ಯಕ ವಿವರಗಳನ್ನು ಒಳಗೊಂಡಿರುವ ಕೆಲಸದ ಚೀಟಿಯನ್ನು ನೀಡುವುದು ಪಂಚಾಯಿತಿಯ ಕರ್ತವ್ಯವಾಗಿರತಕ್ಕದ್ದು, ಎಂದರೆ:–

   (i) ಕೆಲಸದ ಚೀಟಿ ಸಂಖ್ಯೆ
   (ii) ಕುಟುಂಬದ ಸದಸ್ಯರವಾರು ಕೆಲಸದ ಬೇಡಿಕೆ ಮತ್ತು ಕೆಲಸದ ಹಂಚಿಕೆ
   (iii) ಮಾಡಿದ ಕೆಲಸದ ವಿವರಗಳು
   (iv) ಕೆಲಸ ಮಾಡಿದ ದಿನಾಂಕಗಳು ಮತ್ತು ದಿವಸಗಳು.
   (v) ಯಾವ ಹಾಜರಿ ಪಟ್ಟಿ ಸಂಖ್ಯೆಗಳಿಗನುಸಾರವಾಗಿ ಮಜೂರಿಗಳನ್ನು ಸಂದಾಯು ಮಾಡಲಾಗುತ್ತಿದೆಯೇ ಆ ಹಾಜರಿ ಪಟ್ಟಿ ಸಂಖ್ಯೆಗಳು;
   (vi) ಸಂದಾಯ ಮಾಡಿದ ಮಜೂರಿಗಳ ಮೊಬಲಗು,
   (vii) ನಿರುದ್ಯೋಗ ಭತ್ಯೆಯನ್ನೇನಾದರೂ ಸಂದಾಯ ಮಾಡಿದ್ದರೆ, ಅದರ ವಿವರ:
   (viii) ಅಂಚೆ ಖಾತೆ / ಬ್ಯಾಂಕ್ ಖಾತೆ ಸಂಖ್ಯೆ
   (ix) ವಿಮೆಪಾಲಿಸಿ ಸಂಖ್ಯೆ ಮತ್ತು
   (x) ಮತದಾರನ ಭಾವಚಿತ್ರವಿರುವ ಗುರುತಿನ ಚೀಟಿ ಸಂಖ್ಯೆ ಮತದಾರನ ಗುರುತು ಯಾವುದಾದರೂ ಇದ್ದರೆ ಅದರ ವಿವರ

   (2) ಕೆಲಸದ ಚೀಟಿಯಲ್ಲಿನ ಎಲ್ಲ ನಮೂದುಗಳನ್ನು ಅಧಿಕೃತಗೊಳಿಸಿದ ಅಧಿಕಾರಿಯ ಸಹಿಯ ಮೂಲಕ ಕ್ರಮಬದ್ಧವಾಗಿ ಅಧಿಪ್ರಮಾಣೀಕರಿಸತಕ್ಕದ್ದು.

   (3) (1)ನೇ ಉಪ ಪ್ಯಾರಾದ ಮೇರೆಗೆ ನೀಡಿದ ಕೆಲಸದ ಚೀಟಿಯು ಯಾವ ಕುಟುಂಬದ ನೋಂದಾಯಿತ ವಯಸ್ಕ ಸದಸ್ಯರಿಗೆ ಕೆಲಸದ ಚೀಟಿಯನ್ನು ನೀಡಲಾಗಿದೆಯೋ ಆ ವಯಸ್ಕ ಸದಸ್ಯರ ಭಾವಚಿತ್ರವನ್ನು ಮಾತ್ರ ಹೊಂದಿರತಕ್ಕದ್ದು.

   (4) ಯಾವ ಕುಟುಂಬದ ನೋಂದಾಯಿತ ವಯಸ್ಕ ಸದಸ್ಯರಿಗೆ ಆ ಕೆಲಸದ ಚೀಟಿ ಸೇರಿದೆಯೋ ಆ ಸದಸ್ಯನ ಹೊರತು, ಇತರೆ ಯಾರೇ ವ್ಯಕ್ತಿಯ ಭಾವಚಿತ್ರವನ್ನು, ಹೆಸರನ್ನು ಅಥವಾ ವಿವರಗಳನ್ನು ಆ ಕೆಲಸದ ಚೀಟಿಯಲ್ಲಿ ಅಂಟಿಸತಕ್ಕದ್ದಲ್ಲ ಅಥವಾ ದಾಖಲಿಸತಕ್ಕದ್ದಲ್ಲ.

   (5) ಎಲ್ಲ ಕೆಲಸದ ಚೀಟಿಗಳು, ಅವು ಯಾರಿಗೆ ಸೇರಿರುವವೋ ಆ ಕೆಲಸದ ಚೀಟಿಗಳನ್ನು ಹೊಂದಿರುವವರ ಅಭಿರಕ್ಷೆಯಲ್ಲಿರತಕ್ಕದ್ದು.

---

* ದಿನಾಂಕ 2.4.2008ರ ಅಧಿಸೂಚನೆ ಎಸ್.ಓ. 802 (ಇ) ಮೂಲಕ 2ನೇ ಪ್ಯಾರವನ್ನು ಪ್ರತ್ಯಾಯೋಜಿಸಲಾಗಿದೆ.

3. 2ನೇ ಪ್ಯಾರಾದ ಮೇರೆಗೆ ಮಾಡಿಕೊಳ್ಳಲಾದ ನೋಂದಣಿಯು, ಕಾರ್ಯಯೋಜನೆಯಲ್ಲಿ ವಿಧಿಸಲಾದಂಥ ಅವಧಿಯವರೆಗೆ ಇರತಕ್ಕದ್ದು, ಆದರೆ, ಯಾವುದೇ ಸಂದರ್ಭದಲ್ಲೂ ಐದು ವರ್ಷಗಳಿಗಿಂತ ಕಡಿಮೆ ಇರತಕ್ಕದ್ದಲ್ಲ. ಮತ್ತು ಕಾಲ – ಕಾಲಕ್ಕೆ ನವೀಕರಣ ಮಾಡಬಹುದು.

4. ಕೆಲಸದ ಚೀಟಿಯಲ್ಲಿ ಹೆಸರಿರುವ ನೋಂದಾಯಿತ ಕುಟುಂಬದ ಪ್ರತಿಯೊಬ್ಬ ವಯಸ್ಕ ಸದಸ್ಯನು, ಕಾರ್ಯಯೋಜನೆಯ ಮೇರೆಗೆ ಅಕುಶಲ ದೈಹಿಕ ದುಡಿಮೆಗಾಗಿ ಅರ್ಜಿಯನ್ನು ಸಲ್ಲಿಸುವದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

5. ಒಂದು ಕುಟುಂಬಕ್ಕೆ ಸೇರಿದ ಎಲ್ಲ ನೋಂದಾಯಿತ ವ್ಯಕ್ತಿಗಳು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾದ ಕಾರ್ಯಯೋಜನೆಗನುಸಾರವಾಗಿ, ಒಂದು ಹಣಕಾಸು ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ಗರಿಷ್ಠ ಒಂದು ನೂರು ದಿನಗಳ ಮಿತಿಗೆ ಒಳಪಟ್ಟು, ಪ್ರತಿಯೊಬ್ಬ ಅರ್ಜಿದಾರನು ಕೇಳಬಹುದಾದಷ್ಟು ದಿನಗಳವರೆಗೆ ಉದ್ಯೋಗಕ್ಕೆ ಅರ್ಹನಾಗಿರತಕ್ಕದ್ದು.

6. ಕಾರ್ಯಕ್ರಮ ಅಧಿಕಾರಿಯು, 5ನೇ ಪ್ಯಾರಾದಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ಅರ್ಜಿದಾರನಿಗೆ, ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಅಥವಾ ಮುಂಗಡ ಅರ್ಜಿಯ ಸಂದರ್ಭದಲ್ಲಿ ಅವನು ಕೆಲಸವನ್ನು ಕೇಳುವ ದಿನಾಂಕದಿಂದ, ಇವುಗಳಲ್ಲಿ ಯಾವುದು ತರುವಾಯವೋ ಆ ದಿನಾಂಕದಿಂದ, ಕಾರ್ಯಯೋಜನೆಯ ಉಪಬಂಧಗಳಿಗನುಸಾರವಾಗಿ ಅಕುಶಲ ದೈಹಿಕ ಕೆಲಸವನ್ನು ನೀಡತಕ್ಕದ್ದು.

ಪರಂತು, ಈ ಅಧಿನಿಯಮದ ಮೇರೆಗೆ ನೋಂದಾಯಿಸಿಕೊಂಡಿರುವ ಮತ್ತು ಕೆಲಸಕ್ಕಾಗಿ ಕೇಳಿರುವವರ ಪೈಕಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಮಹಿಳಾ ಫಲಾನುಭವಿಗಳು ಇರುವಂತೆ ಆದ್ಯತೆಯನ್ನು ನೀಡತಕ್ಕದ್ದು.

7. ಕೆಲಸದ ಅರ್ಜಿಗಳನ್ನು, ಕನಿಷ್ಠ ಹದಿನಾಲ್ಕು ದಿನಗಳ ನಿರಂತರ ಕೆಲಸಕ್ಕಾಗಿ ಸಲ್ಲಿಸಿರಬೇಕು.

8. ಒಬ್ಬ ವ್ಯಕ್ತಿಯು ಅರ್ಜಿ ಸಲ್ಲಿಸಬಹುದಾದ ಉದ್ಯೋಗದ ದಿನಗಳ ಸಂಖ್ಯೆಯ ಮೇಲೆ, ಅಥವಾ ಕುಟುಂಬದ ಒಟ್ಟು ಹಕ್ಕಿಗೆ ಒಳಪಟ್ಟು, ಆತನಿಗೆ ವಾಸ್ತವಿಕವಾಗಿ ನೀಡಲಾದ ಉದ್ಯೋಗದ ದಿನಗಳ ಸಂಖ್ಯೆಯ ಮೇಲೆ ಯಾವುದೇ ಪರಿಮಿತಿ ಇರತಕ್ಕದ್ದಲ್ಲ.

9. ಕೆಲಸಕ್ಕಾಗಿ ಅರ್ಜಿಗಳನ್ನು, ಗ್ರಾಮ ಪಂಚಾಯಿತಿ ಅಥವಾ ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾರ್ಯಕ್ರಮ ಅಧಿಕಾರಿಗೆ ಲಿಖಿತದಲ್ಲಿ ಸಲ್ಲಿಸಬಹುದು.

10. ಗ್ರಾಮ ಪಂಚಾಯಿತಿ ಮತ್ತು ಸಂದರ್ಭಾನುಸಾರ, ಕಾರ್ಯಕ್ರಮ ಅಧಿಕಾರಿಯು ಸಿಂಧುವಾದ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಮತ್ತು ಅರ್ಜಿದಾರನಿಗೆ ದಿನಾಂಕವನ್ನು ನಮೂದಿಸಿರುವ ಸ್ವೀಕೃತಿ ಪತ್ರವನ್ನು ನೀಡುವುದಕ್ಕೆ ಬದ್ಧವಾಗಿರತಕ್ಕದ್ದು. ಸಾಮೂಹಿಕವಾಗಿ ಅರ್ಜಿಗಳನ್ನು ಸಹ ಸಲ್ಲಿಸಬಹುದು.

11. ಯಾವ ಅರ್ಜಿದಾರನಿಗೆ ಕೆಲಸವನ್ನು ಒದಗಿಸಲಾಗಿದೆಯೋ ಆ ಅರ್ಜಿದಾರನಿಗೆ ಬರಹದಲ್ಲಿ ಕೆಲಸದ ಚೀಟಿಯಲ್ಲಿ ನೀಡಲಾದ ವಿಳಾಸಕ್ಕೆ ಆತನಿಗೆ ಪತ್ರ ಕಳುಹಿಸುವ ಮೂಲಕ ಮತ್ತು ಜಿಲ್ಲೆಗಳಲ್ಲಿ ಮಧ್ಯವರ್ತಿ ಅಥವಾ ಗ್ರಾಮ ಮಟ್ಟದ ಪಂಚಾಯಿತಿ ಕಛೇರಿಗಳಲ್ಲಿ ಸಾರ್ವಜನಿಕ ನೋಟೀಸನ್ನು ಪ್ರದರ್ಶಿಸುವ ಮೂಲಕ ತಿಳಿಸತಕ್ಕದ್ದು.

12. ಸಾಧ್ಯವಾದಷ್ಟುಮಟ್ಟಿಗೆ, ಅರ್ಜಿದಾರನು ಅರ್ಜಿ ಸಲ್ಲಿಸುವಾಗ ವಾಸವಾಗಿರುವಂಥ ಗ್ರಾಮದ ಐದು ಕಿಲೋ ಮೀಟರ್‌ಗಳ ವ್ಯಾಪ್ತಿಯೊಳಗೆ ಉದ್ಯೋಗವನ್ನು ಒದಗಿಸತಕ್ಕದ್ದು.

*13. ಕಾರ್ಯಯೋಜನೆಯ ಮೇರೆಗಿನ ಹೊಸ ಕಾಮಗಾರಿಯನ್ನು ಕನಿಷ್ಠ ಪಕ್ಷ ಹತ್ತು ಜನ ಕಾರ್ಮಿಕರು ಕಾಮಗಾರಿಗೆ ದೊರೆಯುವಂತಿದ್ದರೆ ಪ್ರಾರಂಭಿಸಬಹುದು;

ಪರಂತು, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಬೆಟ್ಟ ಪ್ರದೇಶಗಳಲ್ಲಿ ಮತ್ತು ವನ ನಿರ್ಮಾಣದ ಸಂದರ್ಭದಲ್ಲಿ ಹೊಸ ಕಾಮಗಾರಿಗಳಿಗೆ ಈ ಷರತ್ತು ಅನ್ವಯಿಸತಕ್ಕದ್ದಲ್ಲ.

14. ಅಂಥ ವ್ಯಾಪ್ತಿಯ ಹೊರಗಡೆ ಉದ್ಯೋಗ ಒದಗಿಸುವ ಸಂದರ್ಬಗಳಲ್ಲಿ, ಕ್ಷೇತ್ರದ ಒಳಗಡೆ ಒದಗಿಸಬೇಕು, ಮತ್ತು ಕಾರ್ಮಿಕರಿಗೆ ಹೆಚ್ಚಿನ ಸಾರಿಗೆ ಮತ್ತು ಜೀವನ ನಿರ್ವಹಣೆಯ ವೆಚ್ಚಗಳನ್ನು ಭರಿಸಲು ಮಜೂರಿಯ ಶೇಕಡಾ ಹತ್ತರಷ್ಟು ಹೆಚ್ಚಿನ ಮಜೂರಿಯಾಗಿ ಸಂದಾಯು ಮಾಡತಕ್ಕದ್ದು.

---

* ದಿನಾಂಕ 06–03–2007ರ ಅಧಿಸೂಚನೆ ಎಸ್.ಓ. 324(ಇ) ಮೂಲಕ 13 ಪ್ಯಾರವನ್ನು ಪ್ರತಿ ಯೋಜಿಸಲಾಗಿದೆ.

15. ಉದ್ಯೋಗದ ಅವಧಿಯು ಸಾಮಾನ್ಯವಾಗಿ ವಾರದಲ್ಲಿ ಆರು ದಿನಗಳಿಗಿಂತ ಹೆಚ್ಚಾಗಿರದಂತೆ, ಕನಿಷ್ಠ ಹದಿನಾಲ್ಕು ದಿನಗಳು ನಿರಂತರವಾಗಿ ಇರತಕ್ಕದ್ದು.

16. ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡುವ ಅಥವಾ ಸಂದಾಯ ಮಾಡುವುದು ಬಾಕಿಯಿರುವ ಎಲ್ಲಾ ಸಂದರ್ಭಗಳಲ್ಲಿ ಕಾರ್ಯಕ್ರಮ ಅಧಿಕಾರಿಯು ಅರ್ಜಿದಾರರಿಗೆ ಉದ್ಯೋಗವನ್ನು ಒದಗಿಸಲು ಆತನಿಗೆ ಏಕೆ ಸಾಧ್ಯವಾಗಲಿಲ್ಲ ಅಥವಾ ಉದ್ಯೋಗವನ್ನು ಒದಗಿಸುವಂತೆ ಮಾಡಲಾಗಲಿಲ್ಲ ಎಂಬುದಕ್ಕೆ ಕಾರಣಗಳನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಬರಹದಲ್ಲಿ ತಿಳಿಸತಕ್ಕದ್ದು.

17. ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು, ರಾಜ್ಯ ಪರಿಷತ್ತಿಗೆ ಸಲ್ಲಿಸುವ ತನ್ನ ವಾರ್ಷಿಕ ವರದಿಯಲ್ಲಿ, ನಿರುದ್ಯೋಗ ಭತ್ಯೆಯ ಸಂದಾಯಕ್ಕೆ ಸಂಬಂಧಿಸಿದಂಥ ಸಂದರ್ಭಗಳಲ್ಲಿ ಉದ್ಯೋಗವನ್ನು ಏಕೆ ಒದಗಿಸಲು ಸಾಧ್ಯವಾಗಲಿಲ್ಲವೆಂದು ವಿವರಿಸತಕ್ಕದ್ದು.

18. ಮುಂಗಡ ಅರ್ಜಿಗಳಿಗೆ ಎಂದರೆ ಉದ್ಯೋಗವನ್ನು ಕೇಳಿದ ದಿನಾಂಕಕ್ಕಿಂತ ಮುಂಚಿತವಾಗಿ ಸಲ್ಲಿಸಬಹುದಾದಂಥ ಅರ್ಜಿಗಳಿಗೆ ಕಾರ್ಯ ಯೋಜನೆಯಲ್ಲಿ ಅವಕಾಶ ಕಲ್ಪಿಸತಕ್ಕದ್ದು.

19. ಒಬ್ಬನೇ ವ್ಯಕ್ತಿ ಅನೇಕ ಅರ್ಜಿಗಳನ್ನು ಸಲ್ಲಿಸಲು ಕಾರ್ಯಯೋಜನೆಯಲ್ಲಿ ಅವಕಾಶ ಕಲ್ಪಿಸತಕ್ಕದ್ದು, ಆದರೆ, ಕೇಳಿದ ಉದ್ಯೋಗಕ್ಕೆ ಸಂಬಂಧಿಸಿದ ಅವಧಿಗಳು ಒಂದರ ಮೇಲೊಂದು ಏಕಕಾಲದಲ್ಲಿ ಬರಕೂಡದು.

20. ಗ್ರಾಮ ಪಂಚಾಯಿತಿಯಲ್ಲಿ ನೀಡಲಾದ ಕೆಲಸದ ಚೀಟಿಗಳು ಮತ್ತು ಪಾಸ್ ಪುಸ್ತಕಗಳು, ನೋಂದಾಯಿಸಲಾದ ಕುಟುಂಬದ ಮುಖ್ಯಸ್ಥನ ಹಾಗೂ ಕುಟುಂಬದ ವಯಸ್ಕ ಸದಸ್ಯರ ಹೆಸರು, ವಯಸ್ಸು ಮತ್ತು ವಿಳಾಸದ ವಿವರಗಳನ್ನು ಒಳಗೊಂಡಿರುವಂಥ ರಿಜಿಸ್ಟರ್‌ಗಳು, ವೋಚರ್‌ಗಳು ಮತ್ತು ಇತರ ದಸ್ತಾವೇಜುಗಳನ್ನು ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೂಪದಲ್ಲಿ ಮತ್ತು ರೀತಿಯಲ್ಲಿ ಗ್ರಾಮ ಪಂಚಾಯಿತಿಯು ಸಿದ್ಧಪಡಿಸತಕ್ಕದ್ದು ಮತ್ತು ನಿರ್ವಹಿಸತ್ಕದ್ದು ಅಥವಾ ಈ ರೀತಿ ಸಿದ್ಧಪಡಿಸುವಂತೆ ಮತ್ತು ನಿರ್ವಹಿಸುವಂತೆ ಮಾಡತಕ್ಕದ್ದು.

21. ಕಾರ್ಯಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಳಲ್ಲಿ ಮತ್ತು ಅಂಥ ನಮೂನೆಯಲ್ಲಿ ಸಂಬಂಧಿಸಿದ ಕಾರ್ಯಕ್ರಮ ಅಧಿಕಾರಿಗೆ ಗ್ರಾಮ ಪಂಚಾಯಿತಿಯು ತನ್ನಲ್ಲಿ ನೋಂದಾಯಿಸಲಾದ ಕುಟುಂಬಗಳ ಮತ್ತು ಅವುಗಳ ವಯಸ್ಕ ಸದಸ್ಯರ ಹೆಸರುಗಳ ಮತ್ತು ವಿಳಾಸಗಳ ಅಂಥ ಪಟ್ಟಿ ಅಥವಾ ಪಟ್ಟಿಗಳನ್ನು ಕಳುಹಿಸತಕ್ಕದ್ದು ಮತ್ತು ಅಂಥ ಇತರ ಮಾಹಿತಿಯನ್ನು ಒದಗಿಸತಕ್ಕದ್ದು.

22. ಯಾವ ವ್ಯಕ್ತಿಗಳಿಗೆ ಕೆಲಸ ಒದಗಿಸಲಾಗಿದೆಯೋ ಆ ವ್ಯಕ್ತಿಗಳ ಪಟ್ಟಿಯನ್ನು ಗ್ರಾಮ ಪಂಚಾಯಿತಿಯ ಸೂಚನಾ ಫಲಕದ ಮೇಲೆ ಮತ್ತು ಕಾರ್ಯಕ್ರಮ ಅಧಿಕಾರಿಯ ಕಛೇರಿಯಲ್ಲಿ ಮತ್ತು ಕಾರ್ಯಕ್ರಮ ಅಧಿಕಾರಿಯು ಅವಶ್ಯವೆಂದು ಭಾವಿಸಬಹುದಾದಂಥ ಇತರ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಪಟ್ಟಿಯು ರಾಜ್ಯ ಸರ್ಕಾರದ ಅಥವಾ ಯಾರೇ ಆಸಕ್ತ ವ್ಯಕ್ತಿಯ ತಪಾಸಣೆಗೆ ಮುಕ್ತವಾಗಿರತಕ್ಕದ್ದು.

23. ಒಬ್ಬ ವ್ಯಕ್ತಿಯು ತಪ್ಪು ಮಾಹಿತಿಯನ್ನು ಒದಗಿಸುವ ಮೂಲಕ ನೋಂದಾಯಿತನಾಗಿರುವನೆಂದು ಯಾವುದೇ ಸಮಯದಲ್ಲಿ ಗ್ರಾಮ ಪಂಚಾಯಿತಿಗೆ ಮನವರಿಕೆಯಾದಲ್ಲಿ, ಆ ವ್ಯಕ್ತಿಯ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಲು ಕಾರ್ಯಕ್ರಮ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಕೆಲಸದ ಚೀಟಿಯನ್ನು ಹಿಂದಿರುಗಿಸಲು ಅರ್ಜಿದಾರನಿಗೆ ಆದೇಶಿಸಬಹುದು.

ಪರಂತು, ಇಬ್ಬರು ಸ್ವತಂತ್ರ ವ್ಯಕ್ತಿಗಳ ಸಮಕ್ಷಮದಲ್ಲಿ ಅಹವಾಲು ಹೇಳಿಕೊಳ್ಳಲು ಅರ್ಜಿದಾರನಿಗೆ ಅವಕಾಶ ನೀಡಿದ ಹೊರತು, ಈ ಪ್ಯಾರಾದ ಮೇರೆಗೆ ಅಂಥ ಯಾವುದೇ ಕ್ರಮಕೈಗೊಳ್ಳಲು ನಿರ್ದೇಶಿಸತಕ್ಕದ್ದಲ್ಲ.

24. ಕಾರ್ಯಯೋಜನೆಯ ಮೇರೆಗೆ ನಿಯೋಜಿತನಾದ ಯಾರೇ ವ್ಯಕ್ತಿ ತನ್ನ ಕೆಲಸದಿಂದ ಅಥವಾ ಕೆಲಸದ ಅವಧಿಯಲ್ಲಿ ಅಪಘಾತದಿಂದ ಗಾಯಗೊಂಡರೆ, ಕಾರ್ಯಯೋಜನೆಯ ಮೇರೆಗೆ ಅಂಗೀಕಾರಾರ್ಹವಾದಂಥ ಉಚಿತ ವೈದ್ಯಕೀಯ ಚಿಕಿತ್ಸೆಗೆ ಹಕ್ಕುಳ್ಳವನಾಗತಕ್ಕದ್ದು.

25. ಗಾಯಗೊಂಡ ಕೆಲಸಗಾರರನ್ನು ಆಸ್ಪತ್ರೆಗೆ ಸೇರಿಸುವುದು ಅವಶ್ಯಕವಿದ್ದಲ್ಲಿ, ರಾಜ್ಯ ಸರ್ಕಾರವು ಸ್ಥಳಾವಕಾಶ, ಚಿಕಿತ್ಸೆ ಔಷಧಿಗಳೂ ಸೇರಿದಂತೆ ಆಸ್ಪತ್ರೆ ಸೌಲಭ್ಯಕ್ಕೆ ಮತ್ತು ಗಾಯಾಳು ಕೆಲಸದಲ್ಲಿ ತೊಡಗಿದ್ದರೆ ಕೊಡಬೇಕಾಗಿದ್ದ ಮಜೂರಿಯ ದರದ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು ದಿನಭತ್ಯೆಯ ಸಂದಾಯಕ್ಕೆ ವ್ಯವಸ್ಥೆ ಮಾಡತಕ್ಕದ್ದು.

26. ಒಂದು ಕಾರ್ಯಯೋಜನೆಯ ಮೇರೆಗೆ ಉದ್ಯೋಗ ಹೊಂದಿದ ವ್ಯಕ್ತಿಯು ಮೃತನಾದರೆ ಅಥವಾ ಕೆಲಸದಿಂದ ಮತ್ತು ಕೆಲಸದ ಅವಧಿಯಲ್ಲಿ ನಡೆದ ಅಪಘಾತದಿಂದ ಶಾಶ್ವತವಾಗಿ ಅಂಗವಿಕಲನಾದರೆ,

ಅನುಷ್ಠಾನ ಏಜೆನ್ಸಿಯು ಇಪ್ಪತ್ತೈದು ಸಾವಿರ ರೂಪಾಯಿಗಳ ದರದಲ್ಲಿ ಅಥವಾ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಅನುಗ್ರಹಪೂರ್ವಕ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಆ ಮೊಬಲಗನ್ನು ಮೃತನ ಕಾನೂನುಸಮ್ಮತ ವಾರಸುದಾರರಿಗೆ ಅಥವಾ ಸಂದರ್ಭಾನುಸಾರ ಅಂಗವಿಕಲನಿಗೆ ಸಂದಾಯ ಮಾಡತಕ್ಕದ್ದು.

27. ಕೆಲಸ ನಡೆಯುತ್ತಿರುವ ಸ್ಥಳದಲ್ಲಿ ಸ್ವಚ್ಛ ಕುಡಿಯುವ ನೀರು, ಮಕ್ಕಳಿಗೆ ನೆರಳು ಮತ್ತು ವಿಶ್ರಾಂತಿಯ ಸಮಯಗಳು, ಸಣ್ಣಪುಟ್ಟ ಗಾಯಗಳಿಗೆ ಮತ್ತು ನಿರ್ವಹಿಸುತ್ತಿರುವ ಕೆಲಸಕ್ಕೆ ಸಂಬಂಧಿಸಿದ ಇತರ ಆರೋಗ್ಯದ ಅಪಾಯಗಳಲ್ಲಿ ತುರ್ತುಚಿಕಿತ್ಸೆಗಾಗಿ ಸಾಕಷ್ಟು ಸಾಮಗ್ರಿಗಳಿರುವ ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ಸೌಕರ್ಯಗಳನ್ನು ಒದಗಿಸತಕ್ಕದ್ದು.

28. ಯಾವುದೇ ಸ್ಥಳದಲ್ಲಿ ಕೆಲಸ ಮಾಡುವ ಮಹಿಳೆಯರ ಜೊತೆಯಲ್ಲಿ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಐದು ಅಥವಾ ಹೆಚ್ಚಿನ ಸಂಖ್ಯೆಯ ಮಕ್ಕಳಿರುವ ಸಂದರ್ಭದಲ್ಲಿ, ಅಂಥ ಮಹಿಳಾ ಕೆಲಸಗಾರರಲ್ಲಿ ಒಬ್ಬರನ್ನು ಅಂಥ ಮಕ್ಕಳನ್ನು ನೋಡಿಕೊಳ್ಳಲು ನಿಯೋಜಿಸತಕ್ಕದ್ದು.

29. ಪ್ಯಾರಾ 28ರ ನಿಯೋಜಿಸಲಾದ ವ್ಯಕ್ತಿಗೆ ಮಜೂರಿ ದರವನ್ನು ಸಂದಾಯ ಮಾಡತಕ್ಕದ್ದು.

30. ಕಾರ್ಯಯೋಜನೆಯ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಜೂರಿಯ ಸಂದಾಯವನ್ನು ಮಾಡದಿದ್ದ ಸಂದರ್ಭದಲ್ಲಿ, ಕಾರ್ಮಿಕರು ಮಜೂರಿ ಸಂದಾಯ ಅಧಿನಿಯಮ, 1936 (1936ರ 4) ಉಪಬಂಧಗಳಿಗನುಸಾರವಾಗಿ ನಷ್ಟ ಪರಿಹಾರದ ಸಂದಾಯವನ್ನು ಪಡೆಯಲು ಅರ್ಹರಾಗಿರತಕ್ಕದ್ದು.

*31. ಕೇಂದ್ರ ಸರ್ಕಾರದ ನಿರ್ದೇಶನಗಳಿಗೆ ಅನುಸಾರವಾಗಿ ಬ್ಯಾಂಕುಗಳಲ್ಲಿ ಅಥವಾ ಅಂಚೆ ಕಛೇರಿಗಳಲ್ಲಿ ತೆರೆಯಲಾದ ಕೆಲಸಗಾರರ ವೈಯಕ್ತಿಕ ಅಥವಾ ಜಂಟಿ ಉಳಿತಾಯ ಖಾತೆಗಳ ಮೂಲಕ ಮಜೂರಿಗಳನ್ನು ಸಂದಾಯ ಮಾಡತಕ್ಕದ್ದು.

[**32. ಬಿಟ್ಟು ಬಿಡಲಾಗಿದೆ.**]

33. ಕಾರ್ಯಯೋಜನೆಯ ಮೇರೆಗೆ ನಿಯೋಜಿತನಾದ ಯಾರೇ ವ್ಯಕ್ತಿಯ ಜೊತೆಯಲ್ಲಿರುವ ಮಗುವಿಗೆ ಅಪಘಾತದಿಂದ ಯಾವುದೇ ದೈಹಿಕ ಗಾಯವುಂಟಾದರೆ, ಆ ವ್ಯಕ್ತಿಯು ಆ ಮಗುವಿಗೆ ಕಾರ್ಯ ಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉಚಿತ ವೈದ್ಯಕೀಯ ಚಿಕಿತ್ಸೆ ಮತ್ತು ಸಾವು ಅಥವಾ ಅಂಗವಿಕಲತೆಯುಂಟಾದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ಅನುಗ್ರಹಪೂರ್ವಕ ಹಣವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

34. ಕಾರ್ಯಯೋಜನೆಯ ಮೇರೆಗೆ ಪ್ರತಿಯೊಂದು ಉದ್ಯೋಗದ ಸಂದರ್ಭದಲ್ಲಿ, ಲಿಂಗದ ಆಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯ ಮಾಡತಕ್ಕದ್ದಲ್ಲ ಮತ್ತು ಸಮಾನ ಪರಿಶ್ರಮಧನ ಅಧಿನಿಯಮ, 1976ರ (1976ರ 25) ಉಪಬಂಧಗಳನ್ನು ಪಾಲಿಸತಕ್ಕದ್ದು.

**35 (1) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ ಅನುಸೂಚಿ II ರ 1ನೇ, 3ನೇ, 9ನೇ ಮತ್ತು 14ನೇ ಪ್ಯಾರಾಗಳಲ್ಲಿ ಏನೇ ಒಳಗೊಂಡಿದ್ದರೂ, ಪ್ರವಾಹ, ಚಂಡಮಾರುತ, ಸುನಾಮಿ ಮತ್ತು ಭೂಕಂಪ ಸ್ವರೂಪದ ರಾಷ್ಟ್ರೀಯ ವಿಪತ್ತುಗಳು ಉಂಟಾದ ಸಂದರ್ಭದಲ್ಲಿ, ಗ್ರಾಮೀಣ ಪ್ರದೇಶದ ನಿವಾಸಿಗಳು ಸಾಮೂಹಿಕವಾಗಿ ಸ್ಥಳಾಂತರಗೊಂಡ ಪರಿಣಾಮವಾಗಿ ತೊಂದರೆಗೊಳಗಾದ ಆ ಪ್ರದೇಶಗಳ ಗ್ರಾಮೀಣ ಕುಟುಂಬಗಳ ವಯಸ್ಕ ಸದಸ್ಯರು, –

(i) ನೋಂದಣಿಗಾಗಿ ಕೋರಬಹುದು ಮತ್ತು ತಾತ್ಕಾಲಿಕ ವಲಸೆ ಪ್ರದೇಶದ ಗ್ರಾಮ ಪಂಚಾಯಿತಿಯು ಅಥವಾ ಕಾರ್ಯಕ್ರಮ ಅಧಿಕಾರಿ ನೀಡುವ ಕೆಲಸದ ಚೀಟಿ ಪಡೆಯಬಹುದು;

(ii) ತಾತ್ಕಾಲಿಕ ವಲಸೆ ಪ್ರದೇಶದ ಕಾರ್ಯಕ್ರಮ ಅಧಿಕಾರಿಗೆ ಅಥವಾ ಆ ಪ್ರದೇಶದ ಗ್ರಾಮ ಪಂಚಾಯಿತಿಗೆ ಕೆಲಸಕ್ಕಾಗಿ ಲಿಖಿತ ಅರ್ಜಿಯನ್ನು ಸಲ್ಲಿಸಬಹುದು ಅಥವಾ ಮೌಖಿಕವಾಗಿ ಮನವಿ ಮಾಡಿಕೊಳ್ಳಬಹುದು; ಮತ್ತು

(iii) ಕೆಲಸದ ಚೀಟಿಯು ಕಳೆದು ಹೋಗಿರುವ ಅಥವಾ ನಾಶವಾಗಿರುವ ಸಂದರ್ಭದಲ್ಲಿ

* ದಿನಾಂಕ 19.2.2009ರ ಅಧಿಸೂಚನೆ ಎಸ್.ಓ. 513 (ಇ) ಮೂಲಕ 31ನೇ ಪ್ಯಾರಾವನ್ನು ಪ್ರತ್ಯಾಯೋಜಿಸಲಾಗಿದೆ.. 32ನೇ ಪ್ಯಾರವನ್ನು ಬಿಟ್ಟುಬಿಡಲಾಗಿದೆ.

** ದಿನಾಂಕ 11.09.2008ರ ಅಧಿಸೂಚನೆ ಎಸ್.ಓ. 2188 (ಇ) ಮೂಲಕ ಪ್ಯಾರಾ 35ನ್ನು ಸೇರಿಸಲಾಗಿದೆ.

*** ದಿನಾಂಕ 31.12.2008ರ ಅಧಿಸೂಚನೆ ಎಸ್. ಓ. 2999 (ಇ) ಮೂಲಕ ಪ್ಯಾರಾ 36 ನ್ನು ಸೇರಿಸಲಾಗಿದೆ.)

ಮರುನೋಂದಣಿಗಾಗಿ ಮತ್ತು ಕೆಲಸದ ಚೀಟಿಯ ಪುನರ್ ನೀಡಿಕೆಗಾಗಿ ಅರ್ಜಿ ಸಲ್ಲಿಸಬಹುದು.

(2) ಮಾಮೂಲು ಸ್ಥಿತಿಗೆ ಮರಳಿದ ಸಂದರ್ಭದಲ್ಲಿ, ಹಾಗೆ ನೀಡಿದ್ದ ಕೆಲಸದ ಚೀಟಿಯನ್ನು ಅವನು ವಾಸವಾಗಿದ್ದ ಮೂಲಸ್ಥಳಕ್ಕೆ ಮರುಹಿಂಬರಹ ಮಾಡತಕ್ಕದ್ದು ಮತ್ತು ಆ ಕೆಲಸದ ಚೀಟಿಯನ್ನು ಪರಿಸ್ಥಿತಿ ಸುಧಾರಣೆ ಆದ ಮೇಲೆ ಮೂಲ ಕೆಲಸದ ಚೀಟಿಯೊಂದಿಗೆ ಸೇರಿಸತಕ್ಕದ್ದು.

(3) ಹಾಗೆ ಒದಗಿಸಲಾದ ಉದ್ಯೋಗದ ದಿನಗಳ ಸಂಖ್ಯೆಯನ್ನು, ಪ್ರತಿಯೊಂದು ಕುಟುಂಬಕ್ಕೆ 100 ದಿನಗಳ ಉದ್ಯೋಗದ ಖಾತರಿಯನ್ನು ಲೆಕ್ಕಹಾಕುವಾಗ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

***36. ಅಧಿನಿಯಮದ ಅಥವಾ ಅದರಲ್ಲಿನ ಅನುಸೂಚಿಯ ಮೇರೆಗೆ ಅನ್ಯಥಾ ಉಪಬಂಧಿಸಲಾದಂತೆ ಸ್ವೀಕರಿಸಿದ, ತಾನಾಗಿಯೇ **ಸಂಜ್ಞಾನಕ್ಕೆ ತೆಗೆದುಕೊಂಡ ದೂರುಗಳ ಬಗ್ಗೆ ಈ ಕೆಳಗೆ ನಿಯಮಿಸಿದಂತೆ ವ್ಯವಹರಿಸತಕ್ಕದ್ದು :–**

(ಎ) ಕಾರ್ಯಕ್ರಮ ಅಧಿಕಾರಿಯು, ಅವನು ಇಟ್ಟಿರುವ ದೂರು ದಾಖಲಾತಿ ರಿಜಿಸ್ಟರ್‌ನಲ್ಲಿ ಪ್ರತಿಯೊಂದು ದೂರನ್ನು ನಮೂದಿಸತಕ್ಕದ್ದು ಮತ್ತು ದಿನಾಂಕ ಹಾಕಿದ ಮತ್ತು ಸಂಖ್ಯೆ ಇರುವ ಸ್ವೀಕೃತಿಯನ್ನು ನೀಡತಕ್ಕದ್ದು.

(ಬಿ) ಸ್ಥಳ ಪರಿಶೀಲನೆಯ ಮೂಲಕ ವಿಚಾರಣೆ ಮಾಡುವುದು, ಪರಿಶೀಲನೆ ಮತ್ತು ವಿಲೆಯನ್ನು 7 ಕೆಲಸದ ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು.

(ಸಿ) ಗ್ರಾಮ ಪಂಚಾಯಿತಿಯು ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ದೂರುಗಳನ್ನು ಒಳಗೊಂಡಂತೆ ಕಾರ್ಯಕ್ರಮ ಅಧಿಕಾರಿಯ ಅಧಿಕಾರ ವ್ಯಾಪ್ತಿಯೊಳಗೆ ಬರುವ ದೂರುಗಳನ್ನು, ಅಧಿನಿಯಮದ 23(6) ನೇ ಪ್ರಕರಣದ ಮೇರೆಗೆ ನಿಯಮಿಸಲಾದಂತೆ 7 ದಿನಗಳೊಳಗಾಗಿ ಕಾರ್ಯಕ್ರಮ ಅಧಿಕಾರಿಯು ವಿಲೆ ಮಾಡತಕ್ಕದ್ದು. ಯಾವುದೇ ಇತರ ಪ್ರಾಧಿಕಾರವು ಬಗೆಹರಿಸಬೇಕಾದ ವಿಷಯಕ್ಕೆ ಸಂಬಂಧಿಸಿದ ದೂರಿನ ಸಂದರ್ಭದಲ್ಲಿ, ಕಾರ್ಯಕ್ರಮ ಅಧಿಕಾರಿಯು ಪ್ರಾರಂಭಿಕ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು 7 ದಿನಗಳೊಳಗಾಗಿ ಅಂಥ ಪ್ರಾಧಿಕಾರಕ್ಕೆ ವಿಷಯವನ್ನು ಕಳುಹಿಸತಕ್ಕದ್ದು ಹಾಗೂ ದೂರು ನೀಡಿದವನಿಗೆ ಅದನ್ನು ತಿಳಿಸತಕ್ಕದ್ದು.

(ಡಿ) 7 ದಿನಗಳೊಳಗೆ ದೂರನ್ನು ವಿಲೆ ಮಾಡಲು ವಿಫಲವಾಗುವುದನ್ನು 25ನೇ ಪ್ರಕರಣದ ಮೇರೆಗೆ ದಂಡನೀಯವಾದ, ಕಾರ್ಯಕ್ರಮ ಅಧಿಕಾರಿಯು ಮಾಡಿದ ಅಧಿನಿಯಮದ ಉಲ್ಲಂಘನೆಯೆಂದು ಪರಿಗಣಿಸಲಾಗುವುದು. ಅಂಥ ವಿಫಲತೆಯ ವಿರುದ್ಧದ ದೂರುಗಳನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯಲ್ಲಿ ದಾಖಲ್ಮಾಡಲಾಗುವುದು.

(ಇ) ಹಣಕಾಸಿನ ಅಕ್ರಮಗಳಿಗೆ ಸಂಬಂಧಪಟ್ಟಂತೆ, ಮೇಲುನೋಟದ ಸಾಕ್ಷ್ಯದ ಸಂದರ್ಭದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

(ಎಫ್) ರಾಜ್ಯ ಸರ್ಕಾರವು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು/ ಕಾರ್ಯಕ್ರಮ ಅಧಿಕಾರಿಯು ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಇತರ ಪ್ರಾಧಿಕಾರವು, ತನ್ನ ಸ್ವಯಿಚ್ಛೆಯಿಂದ ಅಥವಾ ಅಭಿಪ್ರಾಯ ಕೋರುವ ಮೂಲಕ ಯಾವುದೇ ದೂರನ್ನು ವಿಚಾರಣೆ ಮಾಡಬಹುದು ಮತ್ತು ದೋಷ ಸಾಬೀತಾದರೆ, ಅಧಿನಿಯಮದ 25ನೇ ಪ್ರಕರಣದ ಮೇರೆಗೆ ಸಂಬಂಧಪಟ್ಟ ತಪ್ಪಿಸ್ಥರ ವಿರುದ್ಧ ದಂಡನೆ ವಿಧಿಸಬೇಕು.

(ಜಿ) ಸಂಬಂಧಪಟ್ಟ ಪ್ರಾಧಿಕಾರಕ್ಕೆ, ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಕಂಡು ಬಂದ ಸಂದರ್ಭದಲ್ಲಿ ಬಾಧಿತನಾದ ವ್ಯಕ್ತಿಗೆ/ ಪಕ್ಷಕಾರನಿಗೆ ಮಾಹಿತಿ ನೀಡುವುದು ಮತ್ತು ಪರಿಹಾರ ಒದಗಿಸುವುದು ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ. ಒಂದು ವಾರದೊಳಗೆ ಮತ್ತು 15 ದಿನಗಳಿಗೆ ಮೀರದಂತೆ ಅಂಥ ಕುಂದು ಕೊರತೆಗಳನ್ನು ನಿವಾರಿಸುವುದು ಸಂಬಂಧಪಟ್ಟ ಪ್ರಾಧಿಕಾರದ ಜವಾಬ್ದಾರಿಯಾಗಿರುತ್ತದೆ.

(ಹೆಚ್) ಕೈಗೊಂಡ ಕ್ರಮದ ಬಗ್ಗೆ ದೂರು ನೀಡಿದವನಿಗೆ ತಿಳಿಸತಕ್ಕದ್ದು ಮತ್ತು ಮೂರು ತಿಂಗಳಿಗೆ

ಒಂದು ಬಾರಿ, ನಿಯಮಿಸಿದ ನಮೂನೆಯಲ್ಲಿ ಎರಡು ದೇಶೀಯ ಭಾಷೆಯ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು.

(ಐ) ಕಾರ್ಯಕ್ರಮ ಅಧಿಕಾರಿಯು ಮತ್ತು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಸ್ವೀಕರಿಸಿದ ದೂರುಗಳ ಬಗ್ಗೆ ಕೈಗೊಂಡ ಕ್ರಮವನ್ನು ಅನುಕ್ರಮವಾಗಿ ಮಧ್ಯಂತರ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿಯ ಸಭೆಗಳ ಮುಂದೆ ಇಡತಕ್ಕದ್ದು.

(ಜೆ) ಗ್ರಾಮ ಪಂಚಾಯಿತಿಯ ಆದೇಶಗಳ ವಿರುದ್ಧದ ಅಪೀಲನ್ನು ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸತಕ್ಕದ್ದು; ಕಾರ್ಯಕ್ರಮ ಅಧಿಕಾರಿಯ ಆದೇಶಗಳ ವಿರುದ್ಧದ ಅಪೀಲನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಸಲ್ಲಿಸತಕ್ಕದ್ದು; ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯ ಆದೇಶಗಳ ವಿರುದ್ದದ ಅಪೀಲನ್ನು ರಾಜ್ಯ ಆಯುಕ್ತರಿಗೆ (ಎನ್‌ಆರ್‌ಇಜಿಎಸ್), ವಿಭಾಗೀಯ ಆಯುಕ್ತರಿಗೆ (ಎನ್‌ಆರ್‌ಇಜಿಎಸ್) ಮತ್ತು ರಾಜ್ಯ ಕುಂದುಕೊರತೆಗಳ ನಿವಾರಣಾಧಿಕಾರಿಗೆ ಸಲ್ಲಿಸತಕ್ಕದ್ದು.

(ಕೆ) ಎಲ್ಲ ಅಪೀಲುಗಳನ್ನು, ಆದೇಶವನ್ನು ಹೊರಡಿಸಿದ 45 ದಿನಗಳೊಳಗೆ ಸಲ್ಲಿಸತಕ್ಕದ್ದು.

(ಎಲ್) ಎಲ್ಲ ಅಪೀಲುಗಳನ್ನು ಒಂದು ತಿಂಗಳೊಳಗಾಗಿ ವಿಲೆ ಮಾಡತಕ್ಕದ್ದು.

**(ವಿ.ಕೆ. ಭಸೀನ್)**
ಕಾರ್ಯದರ್ಶಿ
ಸುವರ್ಣ ಕರ್ನಾಟಕ – 2006
ಭಾರತ ಸರ್ಕಾರ

ಅನಸೂ ರಾಗ್ರಸಂಸ್ಥೆ

# ನಿಯಮಗಳು

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ ಗ್ರಾಅಪ 16 ಉಖಾಯೋ 2009, ಬೆಂಗಳೂರು, ದಿನಾಂಕ: 04.04.2010**
**ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ತಿದ್ದುಪಡಿ) ಅಧಿನಿಯಮ, 2009 ರಂತೆ ಕೇಂದ್ರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮಕ್ಕೆ ತಿದ್ದುಪಡಿಯನ್ನು ತರಲಾಗಿದ್ದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಎಂದು ಇರುವ ಹೆಸರನ್ನು ಬದಲಾಯಿಸಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂದು ಮಾಡಲಾಗಿರುತ್ತದೆ. ಈ ಅಧಿನಿಯಮವು ಅಕ್ಟೋಬರ್ 2, 2009 ರಿಂದ ಜಾರಿಗೆ ಬಂದಿರುವುದಾಗಿ ಪರಿಗಣಿಸತಕ್ಕದ್ದು.

ಆದುದರಿಂದ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು,

1) ಅಧಿನಿಯಮದ ಆಧಾರಿತ ಅಧಿಸೂಚಿಸಲಾಗಿರುವ ರಾಜ್ಯದ ಯೋಜನೆ, ನಿಯಮಗಳನ್ನು ಇನ್ನು ಮುಂದೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಎಂದು ಓದಿಕೊಳ್ಳತಕ್ಕದ್ದು.
2) ಅಧಿನಿಯಮದಿಂದ ರೂಪಿಸಲಾದ ಯೋಜನೆಯನ್ನು ಇನ್ನು ಮುಂದೆ "ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಎಂದು ಕರೆಯತಕ್ಕದ್ದು.
3) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಪಟ್ಟ ಎಲ್ಲ ಶಾಸನಬದ್ದ ಮತ್ತು ಇತರೆ ದಾಖಲೆಗಳ ಅರ್ಜಿ ನಮೂನೆ, ಹಾಜರಾತಿ ಪಟ್ಟಿ, ಉದ್ಯೋಗ ಚೀಟಿ, ಉದ್ಯೋಗ ಚೀಟಿ ವಹಿ ಮುಂತಾದವುಗಳಲ್ಲಿ ಒಂದೇ ತೆರನಾದ ಹೊಸ ಹೆಸರನ್ನು ಹೊಂದಿರತಕ್ಕದ್ದು.
4) ಸಾಧ್ಯವಾದಷ್ಟು ಮಟ್ಟಿಗೆ ಹೊಸದಾಗಿ ಮುದ್ರಿಸುವ ದಾಖಲೆಗಳು/ನಮೂನೆಗಳಲ್ಲಿ ಹೊಸ ಹೆಸರುಗಳು ಒಳಗೊಂಡಿರತಕ್ಕದ್ದು, ಇದು ಸಾಧ್ಯವಾಗದ ಪಕ್ಷದಲ್ಲಿ ಅವಶ್ಯಕ ಬದಲಾವಣೆಗಳನ್ನು ರಬ್ಬರ್ ಸ್ಟ್ಯಾಂಪ್ ಮುಖಾಂತರ ಮಾಡುವುದು. ಅದೇ ರೀತಿ ಮಾಹಿತಿ ಫಲಕಗಳು, ಸೂಚನಾ ಫಲಕಗಳು, ಪ್ರಚಾರ ಸಾಮಾಗ್ರಿಗಳು ಮುಂತಾದವುಗಳಲ್ಲಿ ಸಹ ಬದಲಾವಣೆಯನ್ನು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು,
ಮಹಾತ್ಮ ಗಾಂಧಿ ರಾಷ್ಟ್ರೀಯ
ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**

1. ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ರವರಿಗೆ ಕಳುಹಿಸುತ್ತಾ, ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, 500 ಪ್ರತಿಗಳನ್ನು ಈ ಕಛೇರಿಗೆ ಒದಗಿಸಲು ಕೋರಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳೂ/ಕಾರ್ಯ ನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಎಲ್ಲಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ ಮೈಸೂರು/ಗುಲ್ಬರ್ಗಾ/ ಬೆಳಗಾಂ.
8. ರಾಜ್ಯದ ಎಲ್ಲಾ ಅಧಿಕಾರಿಗಳು.
9. ರೇಷ್ಮೆ ಅಭಿವೃದ್ಧಿ ಆಯುಕ್ತರು, ಬಹುಮಹಡಿ ಕಟ್ಟಡ ಬೆಂಗಳೂರು.
10. ಆಯುಕ್ತರು, ಕಾರ್ಮಿಕ ಇಲಾಖೆ ,ಕಾರ್ಮಿಕ ಭವನ ಬನ್ನೇರುಘಟ್ಟ ರಸ್ತೆ, ಬೆಂಗಳೂರು.
11. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
12. ಆಯುಕ್ತರು, ಪಶುಸಂಗೋಪನಾ ಇಲಾಖೆ, ಬೆಂಗಳೂರು.
13. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
14. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
15. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
16. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
17. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ ಬೆಂಗಳೂರು
18. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು.
19. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶನಾಲಯದ ನಿರ್ದೇಶಕರುಗಳು
20. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
21. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಮಗಾಂರಾಗ್ರಾಉಖಾಯೋ ನಿರ್ದೇಶನಾಲಯ, ಬಹುಮಹಡಿ ಕಟ್ಟಡ ಬೆಂಗಳೂರು

**ಹೆಚ್ಚಿನ ಪ್ರತಿಗಳು/ ರಕ್ಷಾ ಕಡತ**

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ: ೪೧: ರಾಗ್ರಾಉ: ೦೬, ಬೆಂಗಳೂರು, ದಿನಾಂಕ ೧ನೇ ಫೆಬ್ರವರಿ ೨೦೦೭**

**ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ**

**(ಕಗ್ರಾಉಖಾಯೋ)**

**(ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ೨೦೦೫ರ, ೪ನೇ ಪ್ರಕರಣದಡಿ)**

ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗ ಒದಗಿಸುವುದಕ್ಕಾಗಿ, ಭಾರತ ಸರ್ಕಾರ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, ೨೦೦೫ (ಕೇಂದ್ರ ಅಧಿನಿಯಮ ಸಂಖ್ಯೆ: ೪೨/೨೦೦೫)ನ್ನು ಜಾರಿಗೆ ತಂದಿದ್ದು, ಕೇಂದ್ರ ಸರ್ಕಾರ ಕಾಲಕಾಲಕ್ಕೆ ಅಧಿಸೂಚಿಸುವ ಜಿಲ್ಲೆಗಳಲ್ಲಿ ಈ ಅಧಿನಿಯಮ ಆ ದಿನಾಂಕಗಳಿಂದ ಜಾರಿಗೆ ಬರುವುದರಿಂದಲೂ:

ಕೂಲಿಯಾದಾರಿತ ಉದ್ಯೋಗವನ್ನು ಸೃಜಿಸಿ, ಗ್ರಾಮೀಣ ಜನರ ಜೀವನಕ್ಕೆ ಭದ್ರತೆಯನ್ನು ಒದಗಿಸುವುದು ಈ ಅಧಿನಿಯಮದ ಉದ್ದೇಶವಾಗಿದ್ದು, ಇದರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು, ಬರಗಾಲ, ಅರಣ್ಯನಾಶ ಮತ್ತು ಮಣ್ಣಿನ ಸವೆತ ಇವುಗಳಿಂದಾಗಿ ಉದ್ಭವಿಸುವ ದೀರ್ಘಕಾಲದ ಬಡತನಕ್ಕೆ, ಪರಿಹಾರ ಸೂಚಿಸುತ್ತದೆ.ಅ ಸಮರ್ಪಕವಾಗಿ ಜಾರಿಗೊಳಿಸಿದಲ್ಲಿ, ಗ್ರಾಮೀಣ ಭಾಗದ ಬಡತನದ ಚಿತ್ರವನ್ನೇ ಬದಲಿಸುವ ಸಾಮರ್ಥ್ಯ ಈ ಅಧಿನಿಯಮದಡಿಯಲ್ಲಿ ಸೃಜಿಸಲಾಗುವ ಉದ್ಯೋಗಕ್ಕೆ ಇರುವುದರಿಂದಲೂ,

ಅಧಿನಿಯಮದ ಅನುಷ್ಠಾನಕ್ಕಾಗಿ, ರಾಜ್ಯ ಸರ್ಕಾರಗಳು, ಅನುಸೂಚಿ–೧ ಮತ್ತು ಅನುಸೂಚಿ–೨ರಲ್ಲಿ ಸೂಚಿಸಿರುವ ಕನಿಷ್ಠ ಅಂಶಗಳನ್ನು ಒಳಗೊಂಡಂತೆ, ಇತರೆ ಅಗತ್ಯ ಅಂಶಗಳೊಂದಿಗೆ, ತಮ್ಮ ರಾಜ್ಯಗಳ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ರೂಪಿಸಬೇಕಾಗಿರುವುದರಿಂದಲೂ; ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ, ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಅಧಿನಿಯಮ ಮತ್ತು ಈ ಯೋಜನೆಯಡಿಯಲ್ಲಿನ ಷರತ್ತುಗಳಿಗೆ ಒಳಪಟ್ಟು ಒದಗಿಸಲು, ಕರ್ನಾಟಕ ಸರ್ಕಾರ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, ೨೦೦೫ರ ಪ್ರಕರಣ (೪) ರ ಉಪಪ್ರಕರಣ (೧)ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಗ್ರಾಮೀಣ ಪ್ರದೇಶಗಳ ಕುಟುಂಬಗಳಿಗೆ ಖಾತರಿ ಉದ್ಯೋಗ ಒದಗಿಸಲು, ಈ ಕೆಳಗಿನಂತೆ ಉದ್ಯೋಗ ಖಾತರಿ ಯೋಜನೆಯನ್ನು ಸಿದ್ಧಪಡಿಸಿ, ಕರ್ನಾಟಕ ಸರ್ಕಾರ ಅಧಿಸೂಚನೆಯನ್ನು ಹೊರಡಿಸುತ್ತದೆ.

### ೧. ಸಂಕ್ಷಿಪ್ತ ಶೀರ್ಷಿಕೆ, ಪ್ರಾರಂಭ ಮತ್ತು ವ್ಯಾಪ್ತಿ:

(೧) ಈ ಯೋಜನೆಯನ್ನು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಕಗ್ರಾಉಖಾಯೋ) ಎಂದು ಕರೆಯತಕ್ಕದ್ದು.

(೨) ಈ ಯೋಜನೆಯು, ಕರ್ನಾಟಕ ರಾಜ್ಯದ ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ, ಅಧಿಸೂಚಿತ ದಿನಾಂಕದಿಂದ ಹಾಗೂ ಕೇಂದ್ರ ಸರ್ಕಾರ ಅಧಿನಿಯಮವನ್ನು ಬೇರೆ ಜಿಲ್ಲೆಗಳ ಅಥವಾ ಆ ಜಿಲ್ಲೆಗಳ ಭಾಗಗಳಿಗೆ ಅಧಿಸೂಚಿಸುವ ದಿನಾಂಕಗಳಂದು, ಆ ಜಿಲ್ಲೆಗಳಲ್ಲಿ ಅಥವಾ ಆ ಜಿಲ್ಲೆಗಳ ಭಾಗಗಳಲ್ಲಿ ಜಾರಿಗೆ ಬರುತ್ತದೆ.

### ೨. ಉದ್ದೇಶಗಳು

ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಉದ್ದೇಶಗಳು ಈ ಕೆಳಗಿನಂತಿವೆ.

(೧) ಅಧಿಸೂಚಿತ ಜಿಲ್ಲೆಗಳಲ್ಲಿ, ಸ್ವಯಂ ಪ್ರೇರಣೆಯಿಂದ ಅರ್ಜಿ ಸಲ್ಲಿಸುವ ಮೂಲಕ ಅಕುಶಲ ದೈಹಿಕ ಕೆಲಸ ಬಯಸುವ ಗ್ರಾಮೀಣ ಪ್ರದೇಶದ ವಯಸ್ಕ ಸದಸ್ಯರ ಪ್ರತೀ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ಒದಗಿಸುವುದು.

(೨) ದೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲ ಆಧಾರಗಳನ್ನು ಬಲಪಡಿಸುವುದು.

## ೩. ರಾಜ್ಯ ಉದ್ಯೋಗ ಖಾತರಿ ನಿಧಿ:

ರಾಜ್ಯ ಸರ್ಕಾರ, ಅಧಿಸೂಚನೆಯ ಮೂಲಕ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಿ, ಯೋಜನೆಯ ಉದ್ದೇಶಗಳಿಗಾಗಿ ನಿಯಮಾನುಸಾರ ಇದನ್ನು ಬಳಸತಕ್ಕದ್ದು.

## ೪. ನಿಧಿಯ ನಿರ್ವಹಣಾ ವಿಧಾನ

(೧) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸುಮಾರು ೯೦:೧೦ ರ ಅನುಪಾತದಲ್ಲಿ ಅನುದಾನವನ್ನು ಒದಗಿಸುವ ಮೂಲಕ ಇದನ್ನು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯನ್ನಾಗಿ ಅನುಷ್ಠಾನಗೊಳಿಸತಕ್ಕದ್ದು.

(೨) ಕೇಂದ್ರ ಸರ್ಕಾರ ಒದಗಿಸುವ ಅನುದಾನವನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದು;
- (i) ಅಕುಶಲ ಕೂಲಿ ಪಾವತಿಗಾಗಿ;
- (ii) ಸಾಮಗ್ರಿಗಳ ವೆಚ್ಚದ ಶೇ ೭೫ರಷ್ಟನ್ನು ಭರಿಸಲು, *
- (iii) ಆಡಳಿತಾತ್ಮಕ ವೆಚ್ಚಗಳಿಗಾಗಿ;
- (iv) ಸಾಮರ್ಥ್ಯ ಅಭಿವೃದ್ಧಿಗಾಗಿ;
- (v) ಕಾರ್ಯಕ್ರಮ ಅಧಿಕಾರಿ ಮತ್ತು ಅವರ ಸಹಾಯಕ ಸಿಬ್ಬಂದಿಯ ನಿರ್ವಹಣೆಗೆ;

(೩) ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದು;
- (i) ಸಾಮಗ್ರಿಗಳ ವೆಚ್ಚದ ಶೇ ೨೫ರಷ್ಟನ್ನು ಭರಿಸಲು;*
- (ii) ನಿರುದ್ಯೋಗ ಭತ್ಯೆ ಪಾವತಿಸಲು;
- (iii) ರಾಜ್ಯ ಉದ್ಯೋಗ ಖಾತರಿ ಪರಿಷತ್ತಿನ ಆಡಳಿತಾತ್ಮಕ ವೆಚ್ಚಗಳಿಗಾಗಿ;
- (iv) ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಆದರೆ ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ, ಖರ್ಚು ಮಾಡಲಾಗದ ಬಾಬ್ತುಗಳಿಗಾಗಿ;

***ಸಾಮಗ್ರಿ ವೆಚ್ಚ:** ಸಾಮಗ್ರಿಗಳಿಗಾಗಿನ ವೆಚ್ಚ, ಕುಶಲ ಮತ್ತು ಅರೆ ಕುಶಲ ಕಾರ್ಮಿಕರಿಗೆ ಕೂಲಿ ಪಾವತಿ ಸಹ ಒಳಗೊಂಡಿರುತ್ತದೆ.

(೪) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ರಾಜ್ಯ ಸರ್ಕಾರದ ಮೂಲಕ ಸಲ್ಲಿಸುವ ಪ್ರಸ್ತಾವನೆಗಳಿಗೆ ಮತ್ತು ವಿನಿಯೋಗಕ್ಕೆ ಅನುಗುಣವಾಗಿ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ತಮ್ಮ ಪಾಲಿನ ಅನುದಾನಗಳನ್ನು, ಜಿಲ್ಲೆಗಳಿಗೆ ನೇರವಾಗಿ ಬಿಡುಗಡೆ ಮಾಡಬೇಕು. ತಾಲ್ಲೂಕುಗಳಿಂದ ಬಂದ ಪ್ರಸ್ತಾವನೆಗಳು ಮತ್ತು ವಿನಿಯೋಗದ ಆಧಾರದ ಮೇಲೆ ಮತ್ತು ಪರಿಶೀಲನೆಯ ನಂತರ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ತಾಲ್ಲೂಕುಗಳಿಗೆ ಅನುದಾನ ಬಿಡುಗಡೆ ಮಾಡುತ್ತಾರೆ. ಗ್ರಾಮ ಪಂಚಾಯಿತಿಗಳ ಪ್ರಸ್ತಾವನೆಗಳ ಪರಿಶೀಲನೆಯ ನಂತರ, ಅವುಗಳ ಬೇಡಿಕೆಯ ಮತ್ತು ವಿನಿಯೋಗದ ಆಧಾರದ ಮೇಲೆ, ಕಾರ್ಯಕ್ರಮ ಅಧಿಕಾರಿ, ಗ್ರಾಮ ಪಂಚಾಯಿತಿಗಳಿಗೆ ಅನುದಾನ ಬಿಡುಗಡೆ ಮಾಡುತ್ತಾರೆ.

## ೫. ಆಡಳಿತಾತ್ಮಕ ವೆಚ್ಚಗಳಿಗಾಗಿ ಅವಕಾಶ

ಕೇಂದ್ರ ಸರ್ಕಾರ, ಕಾಲಕಾಲಕ್ಕೆ ನಿಗದಿಪಡಿಸುವ ಪ್ರಮಾಣದಲ್ಲಿ, ಆಡಳಿತಾತ್ಮಕ ವೆಚ್ಚವನ್ನು ಮಾಡತಕ್ಕದ್ದು, ಮಾಹಿತಿ, ಶಿಕ್ಷಣ ಮತ್ತು ಸಂವಹನ, ಸಿಬ್ಬಂದಿಯ ವೆಚ್ಚ, ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚ, ಸಾಮರ್ಥ್ಯ ನಿರ್ಮಾಣ ಇತ್ಯಾದಿಗಳು ಈ ಆಡಳಿತಾತ್ಮಕ ವೆಚ್ಚದಲ್ಲಿ ಒಳಗೊಂಡಿರುತ್ತದೆ.

## ೬. ಸಂದಾನ ಮಾಡಲು ಬಾರದ ವಿಷಯಗಳು

(೧) ಒಂದು ಆರ್ಥಿಕ ವರ್ಷದಲ್ಲಿ ಉದ್ಯೋಗ ಬಯಸುವ ಪ್ರತಿ ನೋಂದಾಯಿತ ಕುಟುಂಬಕ್ಕೆ ನೂರು ದಿನಗಳಿಗೆ ಕಡಿಮೆ ಇಲ್ಲದ ಅಕುಶಲ ಕೆಲಸವನ್ನು ಒದಗಿಸತಕ್ಕದ್ದು.

(೨) ಕನಿಷ್ಠ ಹದಿನೈದು ದಿನಗಳಿಗೊಮ್ಮೆ ಕೂಲಿಯನ್ನು ಪಾವತಿಸತಕ್ಕದ್ದು.

(೩) ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ಕೂಲಿಯನ್ನು ಪಾವತಿಸತಕ್ಕದ್ದು.

(೪) ಗುತ್ತಿಗೆದಾರರನ್ನು ಮತ್ತು ಜನರು ಮಾಡಬಹುದಾದ ಕೆಲಸಗಳಿಗೆ ಯಂತ್ರಗಳನ್ನು ಬಳಸತಕ್ಕದ್ದಲ್ಲ.

(೫) ಗ್ರಾಮದ ಹಂತದಲ್ಲಿ, ಗ್ರಾಮಸಭೆ ಗುರುತಿಸಿ ಗ್ರಾಮ ಪಮಚಾಯಿತಿ ಅನುಮೋದಿಸುವ; ತಾಲ್ಲೂಕು ಮಟ್ಟದಲ್ಲಿ, ತಾಲ್ಲೂಕು ಪಂಚಾಯಿತಿ ಅನುಮೋದಿಸುವ; ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಅನುಮೋದಿಸುವ; ಕಾಮಗಾರಿಗಳನ್ನು ಮಾತ್ರ ತೆಗೆದುಕೊಳ್ಳತಕ್ಕದ್ದು.

## ೭. ಹಕ್ಕುಗಳು ಮತ್ತು ಅಧಿಕಾರಿಗಳು

(೧) ಕುಟುಂಬ ಉದ್ಯೋಗ ಚೀಟಿಯಲ್ಲಿ ಹೆಸರಿರುವ ಕುಟುಂಬದ ಪ್ರತಿ ವಯಸ್ಕ ಸದಸ್ಯ ಅಕುಶಲ ದೈಹಿಕ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿರುತ್ತಾರೆ.

(೨) ಒಂದು ಆರ್ಥಿಕ ವರ್ಷದಲ್ಲಿ, ಒಂದು ಕುಟುಂಬಕ್ಕೆ ನೂರು ದಿನಗಳಿಗೆ ಮೀರದಂತೆ ಈ ಕುಟುಂಬದ ಪ್ರತಿಯೊಬ್ಬ ನೋಂದಾಯಿತ ವಯಸ್ಕ ಸದಸ್ಯರ ತಾನು ಬಯಸುವಷ್ಟು ದಿನಗಳ ಅಕುಶಲ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಹಕ್ಕುಳ್ಳವರಾಗಿರುತ್ತಾರೆ.

(೩) ಅಕುಶಲ ಉದ್ಯೋಗ ಕೋರಿದ ಹದಿನೈದು ದಿನಗಳು ಅಥವಾ ಮುಂಗಡ ಅರ್ಜಿಯಲ್ಲಿ ಸೂಚಿಸಿದ ದಿನಾಂಕ ಇವುಗಳಲ್ಲಿ ಯಾವುದು ನಂತರವೋ ಅದರ ಒಳಗಾಗಿ ಉದ್ಯೋಗ ಒದಗಿಸದಿದ್ದಲ್ಲಿ, ಆ ಅರ್ಜಿದಾರರು, ಆ ಆರ್ಥಿಕ ವರ್ಷದ ಮೊದಲ ಮೂವತ್ತು ದಿನಗಳಿಗೆ ಕನಿಷ್ಠ ಕೂಲಿಯ ಒಂದನೇ (ಶೇಕಡ ೨೫) ನಾಲ್ಕರಷ್ಟು ಮತ್ತು ಉಳಿದ ಅವಧಿಗೆ, ಕನಿಷ್ಠ ಕೂಲಿಯ ಶೇಕಡ ೫೦ರಷ್ಟನ್ನು ನಿರುದ್ಯೋಗ ಭತ್ಯೆಯಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೪) ಸಾಧ್ಯವಾದಷ್ಟು ಮಟ್ಟಿಗೆ ಕೆಲಸವನ್ನು, ಆ ಗ್ರಾಮದ ವ್ಯಾಪ್ತಿಯಲ್ಲಿ ಒದಗಿಸಬೇಕು. ಅವರು ವಾಸವಿರುವ ಗ್ರಾಮದಿಂದ ಐದು ಕಿ.ಮೀ ಗಿಂತ ಹೆಚ್ಚಿನ ದೂರದಲ್ಲಿ ಕೆಲಸವನ್ನು ಒದಗಿಸಿದ್ದೇ ಆದರೆ, ಕನಿಷ್ಠ ಕೂಲಿಯ ಶೇಕಡ ೧೦ರಷ್ಟನ್ನು ಹೆಚ್ಚುವರಿಯಾಗಿ, ಅವರು ಸಾರಿಗೆ ಮತ್ತು ಜೀವನ ವೆಚ್ಚವಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೫) ಕೆಲಸ ಕೋರುವ, ನೋಂದಾಯಿತ ಅರ್ಜಿದಾರರ ಪೈಕಿ, ಕನಿಷ್ಠ ಒಂದನೇ ಮೂರರಷ್ಟಿರುವಂತೆ ಮಹಿಳೆಯರಿಗೆ, ಆದ್ಯತೆಯ ಮೇರೆಗೆ ಉದ್ಯೋಗ ಒದಗಿಸಬೇಕು.

(೬) ಪಾವತಿಗೆ ಬಾಕಿಯಾದ, ೧೫ ದಿನಗಳ ಒಳಗಾಗಿ ಕೂಲಿಯನ್ನು ಪಾವತಿಸದಿದ್ದಲ್ಲಿ, ಅವರು ಕೂಲಿ ಪಾವತಿ ಅಧಿನಿಯಮ ೧೯೩೬ (೪/೧೯೩೬)ರ ಅನ್ವಯ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೭) ಸಮಾನ ವೇತನ ಅಧಿನಿಯಮ ೧೯೭೬ (೨೫/೧೯೭೬) ರ ಅನ್ವಯ ಲಿಂಗಾಧಾರಿತ ತಾರತಮ್ಯ ಮಾಡತಕ್ಕದಲ್ಲ.

(೮) ಸ್ವಚ್ಛವಾದ ಕುಡಿಯುವ ನೀರು, ಮಕ್ಕಳ ಮತ್ತು ಕಾರ್ಮಿಕರ ವಿಶ್ರಾಂತಿ ಸಮಯಕ್ಕೆ ನೆರಳಿನ ವ್ಯವಸ್ಥೆ, ಕೆಲಸದ ಅವಧಿಯಲ್ಲಿ ಉಂಟಾಗಬಹುದಾದ ಸಣ್ಣಪುಟ್ಟ ಗಾಯಗಳಿಗಾಗಿ ಚಿಕಿತ್ಸೆ ನೀಡಲು ಸಾಕಷ್ಟು ಸಾಮಗ್ರಿಗಳಿರುವ ಪ್ರಥಮ ಚಿಕಿತ್ಸೆಯ ಪೆಟ್ಟಿಗೆ, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇವುಗಳನ್ನು ಕಾಮಗಾರಿಯ ಸ್ಥಳದ ಸಮೀಪ ಒದಗಿಸಬೇಕು.

(೯) ಕಾಮಗಾರಿಯ ಸ್ಥಳಕ್ಕೆ ಆರುವರ್ಷಕ್ಕೂ ಕಡಿಮೆ ವಯಸ್ಸಿನ, ಐದಕ್ಕಿಂತ ಹೆಚ್ಚಿನ ಮಕ್ಕಳು ಕಾರ್ಮಿಕರೊಂದಿಗೆ ಬಂದಲ್ಲಿ, ಅವರನ್ನು ನೋಡಿಕೊಳ್ಳಲು ಒಬ್ಬ ಮಹಿಳೆಯನ್ನು ನೇಮಿಸಬೇಕು ಮತ್ತು ಕನಿಷ್ಠ ಕೂಲಿಯನ್ನು ಆ ಮಹಿಳೆಗೆ ಪಾವತಿಸಬೇಕು.

(೧೦) ಕಾಮಗಾರಿಯ ಸ್ಥಳದಲ್ಲಿ ಅಥವಾ ಕಾಮಗಾರಿಗೆ ಸಂಬಂಧಿಸಿದಂತೆ, ಕಾರ್ಮಿಕರಿಗೆ ಗಾಯಗಳಾದಲ್ಲಿ ಅವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವುದು.

(೧೧) ಕಾಮಗಾರಿಯ ಸ್ಥಳದಲ್ಲಿ ಯಾವುದೇ ಕಾರ್ಮಿಕರಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಬೇಕಾದ ಅಗತ್ಯ ಬಂದಲ್ಲಿ, ಅವರು ಔಷಧಿ, ವೈದ್ಯಕೀಯ, ಚಿಕಿತ್ಸೆ, ವಸತಿ ಇತ್ಯಾದಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಲು ಅರ್ಹರಾಗುತ್ತಾರೆ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆಯುವ ಅವಧಿಗೆ ಪ್ರತಿ ದಿನಕ್ಕೆ ಆ ದಿನದ ಕನಿಷ್ಠ ಕೂಲಿಯ ಶೇಕಡ ೫೦ ಅರ್ಹರಾಗಿರುತ್ತಾರೆ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆಯುವ ಅವಧಿಗೆ ಪ್ರತಿ ದಿನಕ್ಕೆ ಆ ದಿನದ ಕನಿಷ್ಠ ಕೂಲಿ ಶೇಕಡ ೫೦ಕ್ಕಿಂತ ಕಡಿಮೆ ಇಲ್ಲದ ಕೂಲಿಯನ್ನು ದಿನಭತ್ಯೆಯಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೧೨) ಕಾಮಗಾರಿಯ ಕಾರಣದಿಂದಾಗಿ ಕಾರ್ಮಿಕರು, ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ಸಂದರ್ಭಕ್ಕೆ ತಕ್ಕಂತೆ ಅವರು ಅಥವಾ ಅವರ ವಾರಸುದಾರರು ರೂ ೨೫,೦೦೦/- ಅಥವಾ ಕೇಂದ್ರ ಸರ್ಕಾರ ನಿಗಧಿ ಪಡಿಸಬಹುದಾದ ಪರಿಹಾರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

(೧೩) ಕಾಮಗಾರಿಯ ಸ್ಥಳದಲ್ಲಿ ಇರುವ ಮಗುವಿಗೆ ವೈಯಕ್ತಿಕ ಗಾಯಗಳಾದಲ್ಲಿ ಶಾಶ್ವತ ಅಂಗವಿಕಲತೆಯಾದಲ್ಲಿ ಅಥವಾ ಮೃತಪಟ್ಟಲ್ಲಿ ಅವರೂ ಸಹ ಮೇಲಿನ ಕ್ರಮ ಸಂಖ್ಯೆ ೧೧ ಮತ್ತು ೧೨ರಲ್ಲಿ ತೋರಿಸಿರುವಂತೆ ಚಿಕಿತ್ಸೆ ಹಾಗೂ ಪರಿಹಾರವನ್ನು, ಅನುಕ್ರಮವಾಗಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

## ೮. ಅನುಷ್ಠಾನ ವ್ಯವಸ್ಥೆ

(೧) ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯಿತಿ ಯೋಜನೆಯ ಅನುಷ್ಠಾನದ ಪ್ರಮುಖ ಪ್ರಾಧಿಕಾರವಾಗಿರುತ್ತದೆ. ವಾರ್ಡ್‌ಸಭೆ ಮತ್ತು ಗ್ರಾಮಸಭೆ ಮೂಲಕ ಶಿಫಾರಸ್ಸಾಗಿ ಬರುವ ಕಾಮಗಾರಿಗಳ ಪೈಕಿ ಆದ್ಯತೆಯನ್ನು ಗುರುತಿಸಿ ಅವುಗಳನ್ನು ಅನುಷ್ಠಾನಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಗ್ರಾಮ ಪಂಚಾಯಿತಿಯದ್ದಾಗಿರುತ್ತದೆ.

(೨) ನೋಂದಣಿಗಾಗಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಉದ್ಯೋಗ ಚೀಟಿಗಳನ್ನು ವಿತರಿಸಲು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯು ಜವಾಬ್ದಾರರಾಗಿರುತ್ತಾನೆ/ಳೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ಮತ್ತು ಕಾರ್ಯನಿವಾಹಣಾ ಏಜೆನ್ಸಿಯ ತಾಂತ್ರಿಕ ಸಿಬ್ಬಂದಿಗೆ ನೆರವಾಗಲು ಒಬ್ಬ ಗ್ರಾಮ ಅಭಿವೃದ್ಧಿ ಸಹಾಯಕ ಇರತಕ್ಕದ್ದು.

(೩) ತಾಲ್ಲೂಕು ಮಟ್ಟದಲ್ಲಿ, ತಾಲ್ಲೂಕು ಪಂಚಾಯಿತಿ ಯೋಜನೆಯ ಅನುಷ್ಠಾನದ ಪ್ರಮುಖ ಪ್ರಾಧಿಕಾರವಾಗಿರುತ್ತದೆ. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಯೋಜನೆಯ ಕಾರ್ಯಕ್ರಮ ಅಧಿಕಾರಿಯಾಗಿರುತ್ತಾರೆ. ಅವರು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಈ ಯೋಜನೆ ಅಡಿಯಲ್ಲಿ ತಮ್ಮ ಕಾರ್ಯಗಳನ್ನು ನಿರ್ವಹಿಸಲು, ಸಹಾಯ ಮಾಡುತ್ತಾರೆ. ಕಾರ್ಯಕ್ರಮ ಅಧಿಕಾರಿಗೆ ಕಾಲ ಕಾಲಕ್ಕೆ ಅಗತ್ಯವಿರುವ ಸಹಾಯವನ್ನು ಒದಗಿಸತಕ್ಕದ್ದು.

(೪) ಕಾರ್ಯಕ್ರಮ ಅಧಿಕಾರಿಯು, ತಾಲ್ಲೂಕು ಹಂತದಲ್ಲಿ ಈ ಯೋಜನೆಯ ವಿವಿಧ ಪ್ರಕ್ರಿಯೆಗಳ ಬಗ್ಗೆ ಸಮನ್ವಯ ಮಾಡುವ ರೀತಿ ಮುಖ್ಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಇವರು ಗ್ರಾಮ ಪಂಚಾಯಿತಿ ಸಲ್ಲಿಸುವ ಗ್ರಾಮ ಪಂಚಾಯಿತಿ ಯೋಜನೆಗಳನ್ನು ಪರಿಶೀಲಿಸಿ ಇವು ಬೇಡಿಕೆಗೆ ತಕ್ಕಂತೆ ಇರುವುದನ್ನು ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಾಹಣಾ ಏಜೆನ್ಸಿಗಳು ಕೆಲಸಗಳು ಪ್ರಾರಂಭಿಸುವುದನ್ನು, ಸಮಯದ ಒಳಗೆ ಕೆಲಸ ನೀಡುವುದನ್ನು ಮತ್ತು ಅಕುಶಲ ಕಾರ್ಮಿಕರಿಗೆ ಲಭ್ಯವಿರುವ ಹಕ್ಕುಗಳು ಒದಗುವಂತೆ ಮಾಡಲು ಜವಾಬ್ದಾರರಾಗಿರುತ್ತಾರೆ. ಗ್ರಾಮಸಭೆಗಳ ಮೂಲಕ ಸಾಮಾಜಿಕ ಲೆಕ್ಕಪರಿಶೋಧನೆ ಮಾಡಿಸುವುದು, ಸಾರ್ವಜನಿಕ ಕುಂದು-ಕೊರತೆಗಳನ್ನು ವಿಚಾರಣೆ ಮಾಡುವುದೂ ಸಹ ಅವರ ಮುಖ್ಯ ಕೆಲಸವಾಗಿರುತ್ತದೆ. ತಾಲ್ಲೂಕು ಪಂಚಾಯಿತಿ ಈ ಯೋಜನೆಯಡಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಇವರು ಸಹಾಯ ಮಾಡುತ್ತಾರೆ. ಕಾರ್ಯಕ್ರಮ ಅಧಿಕಾರಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯ ನಿರ್ದೇಶನ, ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಮತ್ತು ತಾಲ್ಲೂಕು ಪಂಚಾಯಿತಿಗೆ ಜವಾಬ್ದಾರರಾಗಿರುತ್ತಾರೆ.

(೫) ಕಾರ್ಯಕ್ರಮ ಅಧಿಕಾರಿಗೆ ಸಹಾಯ ಮಾಡಲು ಪ್ರತಿ ತಾಲ್ಲೂಕು ಪಂಚಾಯಿತಿಯಲ್ಲಿ ಒಬ್ಬ ಸಹಾಯ ಕಾರ್ಯಕ್ರಮ ಅಧಿಕಾರಿ ಇರತಕ್ಕದ್ದು, ಪೂರ್ಣಕಾಲಿಕ ಸಹಾಯಕ ಕಾರ್ಯಕ್ರಮ ಅಧಿಕಾರಿಯನ್ನು ನಿಯೋಜನೆ ಅಥವಾ ಗುತ್ತಿಗೆ ಆಧಾರದ ಮೇರೆಗೆ ನೇಮಿಸಿಕೊಳ್ಳಬಹುದು.

(೬) ಜಿಲ್ಲಾ ಮಟ್ಟದಲ್ಲಿ ಈ ಯೋಜನೆಯ ಅನುಷ್ಠಾನದ ಪ್ರಮುಖ ಪ್ರಾಧಿಕಾರ ಜಿಲ್ಲಾ ಪಂಚಾಯತಿಯಾಗಿರುತ್ತದೆ. ತಾಲ್ಲೂಕು ಪಂಚಾಯಿತಿ, ಸಂಪರ್ಕ ಇಲಾಖೆಗಳು, ಇತರೆ ಅನುಷ್ಠಾನ ಏಜೆನ್ಸಿಗಳಾದ; ಸ್ಥಳೀಯ ಪ್ರಾಧಿಕಾರಗಳು, ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮನ್ನಣೆ ಹಾಗೂ ಉತ್ತಮ ಕೆಲಸ ನಿರ್ವಹಿಸಿದ; ಸ್ಥಳೀಯ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರಧಾನ ಷೇರು ಹೊಂದಿರುವ, ಸಹಕಾರಿ ಸಂಘಗಳು, ಸ್ವಸಹಾಯ ಗುಂಪುಗಳು, ಯೋಜನೆಯಡಿ, ಅನುಷ್ಠಾನಕ್ಕೆ ಸಿದ್ಧಪಡಿಸಿ ಸಲ್ಲಿಸುವ ಕಾಮಗಾರಿಗಳ ಪ್ರಸ್ತಾವನೆಗಳ ಜೊತೆ, ತಾನು ಅನುಷ್ಠಾನಗೊಳಿಸಲು ಸಿದ್ದಪಡಿಸಿರುವ, ಈ ಎಲ್ಲ ಕಾಮಗಾರಿಗಳ ಪ್ರಸ್ತಾವನೆಯನ್ನೊಳಗೊಂಡ ಜಿಲ್ಲಾ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನೆಯ ಅನುಷ್ಠಾನದ ಪರಿಶೀಲನೆ, ಮೇಲ್ವಿಚಾರಣೆಯನ್ನು ಸಹ ಜಿಲ್ಲಾ ಪಂಚಾಯಿತಿ ಮಾಡತಕ್ಕದ್ದು.

(೭) ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಈ ಯೋಜನೆಯಡಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯಾಗಿರುತ್ತಾರೆ. ಇವರಿಗೆ ಕಾಲ ಕಾಲಕ್ಕೆ ಅಗತ್ಯವಿರುವ ಸಹಾಯವನ್ನು ಒದಗಿಸತಕ್ಕದ್ದು.

(೮) ರಾಜ್ಯಮಟ್ಟದಲ್ಲಿ, ಈ ಯೋಜನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ರಾಜ್ಯ ಕಾರ್ಯಕ್ರಮ ಸಮನ್ವಯಾಧಿಕಾರಿಯಾಗಿರುತ್ತಾರೆ. ಇವರಿಗೆ ಕಾಲಕಾಲಕ್ಕೆ ಅಗತ್ಯವಿರುವ ಸಹಾಯವನ್ನು, ನಿರ್ದೇಶಕರು, ವಿಷಯ ತಜ್ಞರು ಮತ್ತು ಇತರೆ ಸಿಬ್ಬಂದಿ ಮಾಡತಕ್ಕದ್ದು.

(೯) ರಾಜ್ಯ ಸರ್ಕಾರ, ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿತಕ್ಕದ್ದು, ರಾಜ್ಯದಪಾಲನ್ನು ಬಿಡುಗಡೆ ಮಾಡಲು ಅಗತ್ಯವಿರುವ ಅನುದಾನವನ್ನು ಅಯವ್ಯಯದಲ್ಲಿ ಒದಗಿಸತಕ್ಕದ್ದು, ನಿಗಧಿತ ಗ್ರಾಮೀಣ ದರಗಳ ಅನುಸೂಚಿ ಪ್ರಕಟಿಸತಕ್ಕದ್ದು, ಯೋಜನೆಯ ಪರಿಣಾಮಗಳನ್ನು ತಿಳಿಯಲು, ಮೌಲ್ಯಮಾಪನಗಳನ್ನು ಮಾಡಿಸತಕ್ಕದ್ದು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ೨೦೦೫ರ ಪ್ರಕರಣ೧೨(೧)ರ ಅಡಿಯಲ್ಲಿ, ರಾಜ್ಯ ಉದ್ಯೋಗ ಖಾತರಿ ಪರಿಷತ್ತನ್ನು ರಚಿಸತಕ್ಕದ್ದು, ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಉದ್ದೇಶಗಳಿಗೆ ಸಂಬಂಧಿಸಿದಂತೆ ಉದ್ಯೋಗ ಖಾತರಿ ಪರಿಷತ್ತು, ಮೇಲ್ವಿಚಾರಣೆ ಮತ್ತು ಸಲಹಾ ಸಮಿತಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

(೧೦) ಈ ಯೋಜನೆಯಡಿಯಲ್ಲಿ ಕೆಲಸ ಮಾಡುವ ಕಾರ್ಮಿಕರ ಹಕ್ಕುಗಳ ಸಂರಕ್ಷಣೆ ಸಾಮರ್ಥ್ಯ ನಿರ್ಮಾಣ, ಸಾಮಾಜಿಕ ಲೆಕ್ಕಪರಿಶೋಧನೆ ಇತ್ಯಾದಿ ಪ್ರಕ್ರಿಯೆಗಳ ಮೇಲ್ವಿಚಾರಣೆಗೆ ಅನುಕೂಲವಾಗುವಂತೆ ಸರ್ಕಾರೇತರ ಸಂಸ್ಥೆಗಳು ಪಾಲುದಾರರಂತೆ ಭಾಗವಹಿಸಬಹುದು.

## ೯. ನೋಂದಣಿ ಮತ್ತು ಉದ್ಯೋಗ ಚೀಟಿ ವಿತರಣೆ

(೧) ಈ ಯೋಜನೆಯಡಿ ನೋಂದಣಿಗಾಗಿ ಮತ್ತು ಉದ್ಯೋಗ ಚೀಟಿಗಾಗಿ, ಕುಟುಂಬದ ವಯಸ್ಕ ಸದಸ್ಯರ ಹೆಸರು, ವಯಸ್ಸು, ವಿಳಾಸ ಇತ್ಯಾದಿ ವಿವರಗಳನ್ನು ದಾಖಲಿಸಿ, ತಾನು ವಾಸವಿರುವ ಗ್ರಾಮ ಪಂಚಾಯಿತಿಗೆ ನಮೂನೆ–೧ರಲ್ಲಿ, ಆ ಕುಟುಂಬದ ಯಾವುದೇ ವಯಸ್ಕ ಸದಸ್ಯ ಅರ್ಜಿ ಸಲ್ಲಿಸಬೇಕು. ಅರ್ಜಿದಾರರಿಗೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ದಿನಾಂಕ ಸೂಚಿಸುವ ಸ್ವೀಕೃತಿ ನೀಡಿ, ವಿವರಗಳನ್ನು ಅರ್ಜಿಗಳನ್ನು ನೋಂದಣಿ ವಹಿ(ನಮೂನೆ–೨) ಮತ್ತು ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗದ ವಹಿ (ನಮೂನೆ–೩)ರಲ್ಲಿ ದಾಖಲಿಸಬೇಕು. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಅಗತ್ಯ ವಿಚಾರಣೆ ಮಾಡಿ ನಂತರ ಉದ್ಯೋಗ ಚೀಟಿಯನ್ನು ವಿತರಿಸಬೇಕು.

(೨) ನೋಂದಾಯಿತ ಪ್ರತಿ ಕುಟುಂಬಕ್ಕೆ ಪ್ರತ್ಯೇಕ ಸಂಖ್ಯೆ ಇರುವ ಕುಟುಂಬ ಉದ್ಯೋಗ ಚೀಟಿಯನ್ನು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ನಮೂನೆ–೪ರಲ್ಲಿ ಇರುವಂತೆ ವಿತರಿಸಬೇಕು. ಈ ವಿವರಗಳನ್ನು ಅವರು ಕುಟುಂಬ ಉದ್ಯೋಗ ಚೀಟಿ ವಿತರಣಾ ವಹಿ (ನಮೂನೆ–೫)ರಲ್ಲಿ ದಾಖಲಿಸಬೇಕು. ಉದ್ಯೋಗ ಚೀಟಿ ನೀಡಿದ ಒಂದು ತಿಂಗಳ ಒಳಗಾಗಿ ಕುಟುಂಬದ ನೋಂದಾಯಿತ ಪ್ರತಿ ಸದಸ್ಯರ ಸ್ಟ್ಯಾಂಪ್ ಅಳತೆಯ ಭಾವಚಿತ್ರವನ್ನು ಉದ್ಯೋಗ ಚೀಟಿಗೆ ಅಂಟಿಸಬೇಕು.

(೩) ನೀಡಿದ ಕೂಲಿಯ ದಿನಗಳ ಮತ್ತು ಪಾವತಿಸಿದ ಕೂಲಿಯ ವಿವರಗಳನ್ನು ಉದ್ಯೋಗ ಚೀಟಿಯಲ್ಲಿ ಹಾಗೂ ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗದ ವಹಿಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಆಗಿದ್ದಾಂಗ್ಗೆ ದಾಖಲಿಸಬೇಕು.

(೪) ಹೆಚ್ಚುವರಿ ಸದಸ್ಯರನ್ನು ಉದ್ಯೋಗ ಚೀಟಿಯಲ್ಲಿ ಸೇರಿರುವ ಅಥವಾ ತೆಗೆದುಹಾಕುವ ಕಾರ್ಯವನ್ನು ಅಗತ್ಯವಿದ್ದಾಗಲೆಲ್ಲ ಮಾಡಬೇಕು ಮತ್ತು ಈ ರೀತಿ ನವೀಕರಿಸಿದ ವಿವರಗಳ ಪಟ್ಟಿಯನ್ನು ಪ್ರತಿ ತಿಂಗಳು ಕಾರ್ಯಕ್ರಮ ಅಧಿಕಾರಿಗೆ ಕಳುಹಿಸಿಕೊಡಬೇಕು.

(೫) ಮೂಲ ಉದ್ಯೋಗ ಚೀಟಿ ಕಳೆದು ಹೋದಲ್ಲಿ ಅಥವಾ ಹರಿದುಹೋದಲ್ಲಿ ಉದ್ಯೋಗ ಚೀಟಿಯ ನಕಲಿಗಾಗಿ ಗ್ರಾಮ ಪಂಚಾಯಿತಿಗೆ ನಿಗಧಿತ ಶುಲ್ಕಪಾವತಿಸಿ ಅರ್ಜಿ ಸಲ್ಲಿಸಬಹುದು. ಇದರ ಬಗ್ಗೆ ಪರಿಶೀಲಿಸಿ, ಅರ್ಜಿ ಸ್ವೀಕರಿಸಿದ ಏಳು ದಿನಗಳ ಒಳಗಾಗಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಉದ್ಯೋಗ ಚೀಟಿಯ ನಕಲನ್ನು ಅರ್ಜಿದಾರರಿಗೆ ವಿತರಿಸಬೇಕು.

## ೧೦. ಕೆಲಸಕ್ಕಾಗಿ ಅರ್ಜಿ ಹಾಗೂ ಉದ್ಯೋಗ ನೀಡಿಕೆ

(೧) ಉದ್ಯೋಗ ಚೀಟಿ ಹೊಂದಿದ ಕಾರ್ಮಿಕರು, ವೈಯಕ್ತಿಕವಾಗಿ ಅಥವಾ ಒಟ್ಟಾಗಿ ಉದ್ಯೋಗದ ಬೇಡಿಕೆಯ ವಿವರಗಳನ್ನು ನಮೂನೆ–೬ರಲ್ಲಿ ದಾಖಲಿಸಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಬಹುದು. ಒಂದು ವರ್ಷದಲ್ಲಿ ನಿಗಧಿತ

ಅವಧಿಗೆ ಉದ್ಯೋಗವನ್ನು ಕೋರಿ ಮುಂಗಡ ಅರ್ಜಿಯನ್ನು ಸಹ ಸಲ್ಲಿಸಬಹುದು. ಒಬ್ಬನೇ ವ್ಯಕ್ತಿ ಅಥವಾ ಒಂದು ಗುಂಪು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಒಮ್ಮೆಗೆ ಸಲ್ಲಿಸಬಹುದು. ಆದರೆ ಇವುಗಳಲ್ಲಿನ ಉದ್ಯೋಗ ಬೇಡಿಕೆಯ ಅವಧಿ ಬೇರೆ ಬೇರೆಯಾಗಿರಬೇಕು.

(೨) ಉದ್ಯೋಗಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸ್ವೀಕರಿಸಬೇಕು. ಕನಿಷ್ಠ ಹದಿನಾಲ್ಕು ದಿನಗಳಿಗಿಂತ ಹೆಚ್ಚಿನ ಅವಧಿಗೆ ಮತ್ತು ಒಂದು ವರ್ಷದಲ್ಲಿ ಅರ್ಜಿದಾರರ ಕುಟುಂಬ ನೂರು ದಿನಗಳನ್ನು ಪೂರೈಸದಿರುವಂತಿದ್ದಲ್ಲಿ, ಅಂತಹ ಅರ್ಜಿಗಳನ್ನು ಮಾನ್ಯತೆ ಮಾಡಬೇಕು. ಈ ರೀತಿ ಪಡೆದ ಅರ್ಜಿಗಳನ್ನು ಉದ್ಯೋಗ ಬೇಡಿಕೆ ವಹಿ ನಮೂನೆ–೭ರಲ್ಲಿ ದಾಖಲಿಸಬೇಕು.

(೩) ಮುಂಗಡ ಅರ್ಜಿಯಲ್ಲಿ ಉದ್ಯೋಗ ಕೋರಿದ ದಿನಾಂಕ ಅಥವಾ ಇತರೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ಹದಿನೈದು ದಿನಗಳು, ಇವುಗಳ ಪೈಕಿ ಯಾವುದು ನಂತರವೋ ಅಷ್ಟರ ಒಳಗಾಗಿ ಚಾಲ್ತಿಯಲ್ಲಿರುವ ಅಥವಾ ಹೊಸದಾಗಿ ಪ್ರಾರಂಭಿಸುವ ಕಾಯಗಾರಿಯಲ್ಲಿ, ಉದ್ಯೋಗಕ್ಕಾಗಿ ಅರ್ಜಿಸಲ್ಲಿಸಿದವರಿಗೆ ಗ್ರಾಮ ಪಂಚಾಯಿತಿ ಉದ್ಯೋಗ ನೀಡಿ, ನಮೂನೆ–೮ರಲ್ಲಿ ನೋಟೀಸ್‌ನ್ನು ಜಾರಿ ಮಾಡಬೇಕು ಮತ್ತು ಇದನ್ನು ನಮೂನೆ–೯ರಲ್ಲಿ ಸಹ ಸಾರ್ವಜನಿಕ ತಿಳುವಳಿಕೆಗಾಗಿ ಪ್ರಚುರಪಡಿಸಬೇಕು.

(೪) ಅಂಗವಿಕಲ ವ್ಯಕ್ತಿಗಳಿಗೆ ಯೋಜನೆಯ ಭಾಗವಾಗಿರುವ ಹಾಗೂ ಸೂಕ್ತವಿರುವ ಕೂಲಿ ಕೆಲಸಗಳನ್ನು ವಹಿಸಬೇಕು.

(೫) ಒಂದು ವೇಳೆ ಒಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಅರ್ಜಿದಾರರಿಗೆ ಕೆಲಸವನ್ನು ಕೊಡಲು ಸಾಧ್ಯವಾಗದಿದ್ದಲ್ಲಿ, ಅವರ ಅರ್ಜಿಗಳನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸಬೇಕು. ಕಾರ್ಯಕ್ರಮ ಅಧಿಕಾರಿಯು ಆ ತಾಲ್ಲೂಕಿನಲ್ಲಿನ ಇತರೆ ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರಬಹುದಾದ ಕೆಲಸಕ್ಕೆ ಇವರನ್ನು ತೊಡಗಿಸಲು ಅಗತ್ಯವಿರುವ ಸಮನ್ವಯತೆ ಮಾಡಿ, ಉದ್ಯೋಗ ನೀಡಿಕೆ ಪತ್ರವನ್ನು ಹೊರಡಿಸಿ ಅದನ್ನು ಸಂಬಂಧಿಸಿದ ಎರಡೂ ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಗಳಿಗೆ ಕಳುಹಿಸಬೇಕು.

## ೧೧. ನಿರುದ್ಯೋಗ ಭತ್ಯೆ ಪಾವತಿ

(೧) ಅಕುಶಲ ಉದ್ಯೋಗ ಕೋರಿ ಅರ್ಜಿ ಸಲ್ಲಿಸಿದ ಹದಿನೈದು ದಿನಗಳ ಒಳಗಾಗಿ ಅಥವಾ ಮುಂಗಡ ಅರ್ಜಿಯಲ್ಲಿ ಸೂಚಿಸಿದ ದಿನಾಂಕ ಇವುಗಳಲ್ಲಿ ಯಾವುದು ನಂತರವೊ, ಅದರ ಒಳಗಾಗಿ ಉದ್ಯೋಗ ನೀಡದಿದ್ದಲ್ಲಿ ನಿರುದ್ಯೋಗ ಭತ್ಯೆ ಪಾವತಿಗಾಗಿ ಅವರು ಗ್ರಾಮ ಪಂಚಾಯಿತಿ ಕಾಯದರ್ಶಿಗೆ ಅರ್ಜಿ ಸಲ್ಲಿಸಬಹುದು, ಈ ಅರ್ಜಿಗಳನ್ನು ಪರಿಶೀಲಿಸಿ ಅಗತ್ಯ ವಿವರಗಳೊಂದಿಗೆ,
ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸತಕ್ಕದ್ದು. ಕಾರ್ಯಕ್ರಮ ಅಧಿಕಾರಿ, ಇವುಗಳನ್ನು ಪರಿಶೀಲಿಸಿ, ಅರ್ಹರಿದ್ದಲ್ಲಿ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಬೇಕು, ಅರ್ಹರಿಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಿ ಹಿಂಬರಹ ನೀಡಬೇಕು.

(೨) ಈ ಕೆಳಗಿನ ಯಾವುದೇ ಸಂದರ್ಭದಲ್ಲಿ, ಗ್ರಾಮ ಪಂಚಾಯಿತಿ, ನಿರುದ್ಯೋಗ ಭತ್ಯೆಯನ್ನು ಪಾವತಿಸಲು ಬದ್ಧರಾಗುವುದಿಲ್ಲ.

(i) ಅರ್ಜಿದಾರರು ಅಥವಾ ಅವರ ಕುಟುಂಬದ ಇತರೆ ವಯಸ್ಕ ಸದಸ್ಯ, ಕೆಲಸಕ್ಕೆ ವರದಿ ಮಾಡಿಕೊಳ್ಳುವಂತೆ ಗ್ರಾಮ ಪಂಚಾಯತಿ ಅಥವಾ ಕಾರ್ಯಕ್ರಮ ಅಧಿಕಾರಿ ಅರ್ಜಿದಾರರಿಗೆ ಸೂಚಿಸಿದ್ದರೂ, ಅವರು ವರದಿ ಮಾಡಿಕೊಳ್ಳದೇ ಇರುವುದು.

(ii) ಅರ್ಜಿದಾರರು ಕೋರಿದ ಅವಧಿಯು ಮುಕ್ತಾಯಗೊಂಡಿದ್ದು ಆ ಕುಟುಂಬದ ಯಾವೊಬ್ಬ ಸದಸ್ಯರು ಕೆಲಸಕ್ಕೆ ಹಾಜರಾಗದೇ ಇರುವುದು.

(iii) ಆ ಕುಟುಂಬ ಒಂದು ಆರ್ಥಿಕ ವರ್ಷದಲ್ಲಿ ಒಂದು ನೂರು ದಿನಗಳಿಗೆ ಸಮನಾದ ಉದ್ಯೋಗವನ್ನು ಆ ಆರ್ಥಿಕ ವರ್ಷದಲ್ಲಿ, ಈಗಾಗಲೇ ಪಡೆದಿರುವುದು;

(iv) ಒಂದು ಕುಟುಂಬ ನಿರುದ್ಯೋಗ ಭತ್ಯೆಯನ್ನು ಒಳಗೊಂಡಂತೆ ಆರ್ಥಿಕ ವರ್ಷದಲ್ಲಿ ಒಂದು ನೂರು ದಿವಸಗಳಿಗೆ ಲಭ್ಯವಾಗುವಷ್ಟು ಕೂಲಿಯನ್ನು ಪಡೆದಿರುವುದು.

## ೧೨. ಕಾಮಗಾರಿಗಳ ವಿಧ

ಈ ಯೋಜನೆಯಡಿಯಲ್ಲಿ ಈ ಕೆಳಗಿನ ಆದ್ಯತೆಯಂತೆ ಕಾಮಗಾರಿಗಳನ್ನು ತೆಗೆದುಕೊಳ್ಳತಕ್ಕದ್ದು.

(i) ಜಲ ಸಂರಕ್ಷಣೆ ಮತ್ತು ನೀರಿನ ಕೊಯ್ಲು

(ii) ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ ಮತ್ತು ಗಿಡ ನಡೆವುದೂ ಸೇರಿದಂತೆ)

(iii) ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ, ನೀರಾವರಿ ಕಾಲುವೆಗಳು

(iv) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಕುಟುಂಬಗಳ ಒಡೆತನದ, ಭೂ ಸುಧಾರಣಾ ಫಲಾನುಭವಿಗಳ, ಭಾರತ ಸರ್ಕಾರದ ಇಂದಿರಾ ಆವಾಸ್ ಯೋಜನೆ ಫಲಾನುಭವಿಗಳ ಜಮೀನಿನಲ್ಲಿ; ನೀರಾವರಿ ಸೌಲಭ್ಯವನ್ನು ಒದಗಿಸುವುದು.

(v) ಸಾಂಪ್ರಾದಾಯಿಕ ನೀರು ಸಂಚಯಗಳ ಜೀರ್ಣೋದ್ದಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು.

(vi) ಜಮೀನಿನ ಅಭಿವೃದ್ಧಿ

(vii) ನೀರು ನಿಂತ ಪ್ರದೇಶಗಳಲ್ಲಿ ಚರಂಡಿಯೂ ಸೇರಿದಂತೆ, ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು

(viii) ಎಲ್ಲಾ ರೀತಿಯ ಹವಾಮಾನ ಪರಿಸ್ಥಿತಿಯಲ್ಲಿ ಉಪಯೋಗಿಸಬಹುದಾದ ಗ್ರಾಮೀಣ ಸಂಪರ್ಕಗಳ ಕಾಮಗಾರಿಗಳು

(ix) ರಾಜ್ಯ ಸರ್ಕರದೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರ ಅಧಿಸೂಚಿಸುವ ಇತರೆ ಯಾವುದೇ ಕಾಮಗಾರಿ ಗಿಡ ನೆಡುವ ಕಾಮಗಾರಿಗಳಿಗೆ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುವ ದೃಷ್ಟಿಯಿಂದ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಆರ್ಥಿಕ ವರ್ಷದಲ್ಲಿ ತೆಗೆದುಕೊಳ್ಳುವ ಎಲ್ಲಾ ಕಾಮಗಾರಿಗಳಿಗೆ ವಿನಿಯೋಗಿಸುವ ಮೊತ್ತದ ಕನಿಷ್ಠ ೨೦ರಷ್ಟನ್ನಾದರೂ ಒಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಗಿಡ ನೆಡುವ ಕಾರ್ಯಕ್ರಮಕ್ಕಾಗಿ ವಿನಿಯೋಗಿಸತಕ್ಕದ್ದು. ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ ಶೇಕಡ ೧೦ಕ್ಕಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳತಕ್ಕದ್ದು.

## ೧೩. ಕಾಮಗಾರಿಗಳ ಪಟ್ಟಿ ತಯಾರಿಕೆ

(೧) ಜಿಲ್ಲಾ ಪಂಚಾಯಿತಿಯ ಅನುಮೋದನೆಯನ್ನು ಒಳಗೊಂಡಂತೆ, ಮುಂದಿನ ವರ್ಷಕ್ಕಾಗಿ ಅಗತ್ಯವಿರುವ ಎಲ್ಲಾ ಯೋಜನಾ ಪ್ರಕ್ರಿಯೆಗಳು, ಹಿಂದಿನ ವರ್ಷದ ಡಿಸೆಂಬರ್ ಕೊನೆಯ ವೇಳೆಗೆ ಮುಕ್ತಾಯಗೊಂಡಿರಬೇಕು. ಮುಂದಿನ ವರ್ಷಕ್ಕೆ ನಿರೀಕ್ಷಿಸಲಾಗುವ ಅಕುಶಲ ಉದ್ಯೋಗ ಬೇಡಿಕೆಯ ಆಧಾರದ ಮೇಲೆ "ಕೂಲಿ ಆಯವ್ಯಯ" (Labour Budget) ವನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ ಸಿದ್ಧಪಡಿಸಬೇಕು. ಇದು ಯೋಜನೆಗಳನ್ನು ರೂಪಿಸಲು ಆಧಾರವಾಗಿರಬೇಕು.

(೨) ಮುಂದಿನ ವರ್ಷದ ಉದ್ಯೋಗ ಬೇಡಿಕೆಗೆ ತಕ್ಕಂತೆ ಬೇಕಾಗುವ ಒಟ್ಟು ಕಾಮಗಾರಿಗಳ ಮೌಲ್ಯವನ್ನು ಲೆಕ್ಕಹಾಕಿ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಯಾವ ಮೊತ್ತಕ್ಕೆ ಕಾಮಗಾರಿಗಳನ್ನು ಗುರುತಿಸಬೇಕು ಎಂಬುದನ್ನು ಅವುಗಳಿಗೆ ಸೂಚಿಸಬೇಕು.

(೩) ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು, ತಮ್ಮ ಪಾಲಿನ ಒಟ್ಟು ಕಾಮಗಾರಿಗಳ ವೆಚ್ಚದಲ್ಲಿ, ಅಕುಶಲ ಕೂಲಿಗಾಗಿ ಮತ್ತು ಸಾಮಗ್ರಿಗಾಗಿ ೬೦:೪೦ ಅನುಪಾತವನ್ನು ಪಾಲನೆ ಮಾಡಬೇಕು, ಸಾಮಗ್ರಿ ಭಾಗವು, ಸಾಮಗ್ರಿಗಳ ಖರೀದಿ, ಕುಶಲ ಮತ್ತು ಅರೆ ಕುಶಲ ಕಾರ್ಮಿಕರ ಕೂಲಿಯನು ಸಹ ಒಳಗೊಂಡಿರುತ್ತದೆ.

(೪) ತಮಗೆ ನಿಗಧಿಪಡಿಸಿರುವ ಮೊತ್ತದಲ್ಲಿ, ಆದ್ಯತೆಯ ಮೇರೆಗೆ ಕಾಮಗಾರಿಗಳನ್ನು ಗುರುತಿಸಲು ಗ್ರಾಮ ಪಂಚಾಯಿತಿಗಳು ವಾರ್ಡ್‌ಸಭೆ ಮತ್ತು ಗ್ರಾಮಸಭೆಗಳನ್ನು ಕರೆಯತಕ್ಕದ್ದು.

(೫) ಈ ರೀತಿ ಗ್ರಾಮ ಪಂಚಾಯಿತಿ ಅನುಮೋದನೆ ನೀಡಿದ ಕಾಮಗಾರಿಗಳ ಆದ್ಯತಾ ಪಟ್ಟಿಯನ್ನು ಸಿದ್ದಪಡಿಸತಕ್ಕದ್ದು.

(೬) ಈ ರೀತಿ ಅನುಮೋದಿಸಿ ಸಿದ್ದಪಡಿಸಿದ ಕಾಮಗಾರಿಗಳ ಪಟ್ಟಿಯೊಂದಿಗೆ, ಇವುಗಳ ಪೈಕಿ ತಾನು ಅನುಷ್ಠಾನಗೊಳಿಸುವ ಕಾಮಗಾರಿಗಳನ್ನು ಗುರುತಿಸಿ, ಗ್ರಾಮ ಪಂಚಾಯಿತಿಯು, ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸಬೇಕು.

(೭) ಪಟ್ಟಿಯಲ್ಲಿನ ಕಾಮಗಾರಿಗಳಿಂದ ನಿರೀಕ್ಷಿಸಲಾದ ಅಕುಶಲ ಕೂಲಿಯನ್ನು ಒದಗಿಸಲು ಸಾಕಾಗುವುದಿಲ್ಲವೆಂದು ಕಂಡುಬಂದಲ್ಲಿ ಹೆಚ್ಚುವರಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ಕಾರ್ಯಕ್ರಮ ಅಧಿಕಾರಿ, ಆ ಗ್ರಾಮ ಪಂಚಾಯಿತಿಗೆ ಸೂಚಿಸಬಹುದು.

(೮) ಈ ಹಿಂದಿನ ಅನುಭವ, ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉದ್ಯೋಗಕ್ಕಾಗಿ ನೋಂದಣಿ ಮಾಡಿರುವವರ

ಸಂಖ್ಯೆಯನ್ನು ಆಧರಿಸಿ, ಗ್ರಾಮ ಪಂಚಾಯಿತಿಯು ಸಲ್ಲಿಸಿರುವ ಕಾಮಗಾರಿಗಳು ಸಾಕಷ್ಟು ಸಂಖ್ಯೆಯಲ್ಲಿರುವ ಹಾಗೂ ತಾಂತ್ರಿಕವಾಗಿ ಸರಿಯಿರುವ ಬಗ್ಗೆ, ಕಾರ್ಯಕ್ರಮ ಅಧಿಕಾರಿಯು ಪರಿಶೀಲಿಸಬೇಕು.

(೯) ಈ ಮೇಲಿನಂತೆ ಗ್ರಾಮ ಪಂಚಾಯಿತಿಗಳ ಯೋಜನೆಯ ಪಟ್ಟಿಯನ್ನು ಪರಿಶೀಲಿಸಿ ಕ್ರೋಢೀಕರಿಸಿ ತನ್ನ ಷರಾದೊಂದಿಗೆ, ತಾಲ್ಲೂಕು ಪಂಚಾಯಿತಿಗೆ ಕಾರ್ಯಕ್ರಮ ಅಧಿಕಾರಿ ಪ್ರಸ್ತಾವನೆ ಸಲ್ಲಿಸಬೇಕು.

(೧೧) ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ತಾಲ್ಲೂಕು ಪಂಚಾಯಿತಿಗೆ ಸೂಚಿಸಿರುವ ಮೊತ್ತಕ್ಕೆ ಅನುಗುಣವಾಗಿ, ತಾಲ್ಲೂಕು ಪಂಚಾಯಿತಿ ತನಗೆ ಸಂಬಂಧಿಸಿದ ಕಾಮಗಾರಿಗಳನ್ನು ಪ್ರಸ್ತಾಪಿಸಿ, ಆದ್ಯತಾ ಪಟ್ಟಿಯನ್ನು ಸಿದ್ದಪಡಿಸಬೇಕು. ಗ್ರಾಮ ಪಂಚಾಯಿತಿಗಳ ಯೋಜನೆಗಳ ಮತ್ತು ತಾಲ್ಲೂಕು ಪಂಚಾಯಿತಿಯ ಪ್ರಸ್ತಾಪಿತ ಯೋಜನೆಗಳನ್ನು ಒಳಗೊಂಡ ಕ್ರೋಢೀಕೃತ ಪಟ್ಟಿಯನ್ನು ಕಾರ್ಯಕ್ರಮ ಅಧಿಕಾರಿ ತಾಲ್ಲೂಕು ಪಂಚಾಯಿತಿಯ ಅನುಮೋದನೆಗೆ ಮಂಡಿಸಬೇಕು. ಗ್ರಾಮ ಪಂಚಾಯಿತಿಗಳು ಸೂಚಿಸಿದ ಆದ್ಯತೆಯನ್ನು ತಾಲ್ಲೂಕು ಪಂಚಾಯಿತಿಯು ಮುಂದುವರಿಸತಕ್ಕದ್ದು. ಎಲ್ಲಾ ರೀತಿಯಲ್ಲಿ ಸರಿ ಇದ್ದ ಪ್ರಸ್ತಾವನೆಗಳನ್ನು ತಾಲ್ಲೂಕು ಪಂಚಾಯಿತಿಯ ಅನುಮೋದನೆಗೆ ಮಂಡಿಸಬೇಕು. ಗ್ರಾಮ ಪಂಚಾಯಿತಿಯ ಪ್ರಸ್ತಾವನೆಗಳನ್ನು ತಾಲ್ಲೂಕು ಪಂಚಾಯಿತಿಯು ತಿರಸ್ಕರಿಸತಕ್ಕದ್ದಲ್ಲ. ನಿಗಧಿತ ಮಾನದಂಡಗಳಿಗೆ ಅನುಸಾರವಾಗಿಲ್ಲದ ಪ್ರಸ್ತಾವನೆಗಳನ್ನು ಗ್ರಾಮ ಪಂಚಾಯಿತಿಗೆ ಹಿಂದಿರುಗಿಸಿ ಸೂಕ್ತವಾದ ಪ್ರಸ್ತಾವನೆಗಳನ್ನು ಸಲ್ಲಿಸಲು ತಿಳಿಸತಕ್ಕದ್ದು. ಸರಿ ಇರುವ ಹಾಗೂ ಅನುಮೋದನೆಯಾದ ಪ್ರಸ್ತಾವನೆಗಳನ್ನು, ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಸಲ್ಲಿಸತಕ್ಕದ್ದು.

(೧೨) ತಾಲ್ಲೂಕು ಪಂಚಾಯಿತಿಗಳಿಂದ ಪಡೆದ ತಾಂತ್ರಿಕವಾಗಿ ಹಾಗೂ ಇತರೆ ರೀತಿಯಲ್ಲಿ ಸಮರ್ಪಕವಾಗಿರುವ ಬಗ್ಗೆ, ಆಗತ್ಯಕ್ಕೆ ತಕ್ಕಂತೆ ಸಾಕಷ್ಟು ಇರುವ ಬಗ್ಗೆ, ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಪರಿಶೀಲಿಸಬೇಕು, ಅವರು, ಇತರೆ ಅನುಷ್ಠಾನ ಏಜೆನ್ಸಿಗಳಾದ; ಸಂಪರ್ಕ ಇಲಾಖೆಗಳು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ; ಸ್ಥಳೀಯ ಸಂಸ್ಥೆಗಳು ಅಥವಾ ಸರ್ಕಾರಿ ಸ್ವಾಯತ್ತ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಹೆಚ್ಚಿನ ಷೇರು ಬಂಡವಾಳ ಹೊಂದಿರುವ ಸಹಕಾರ ಸಂಘಗಳು ಮತ್ತು ಸ್ವಸಹಾಯ ಸಂಘಗಳು; ಯೋಜನೆಯಡಿ ತೆಗೆದುಕೊಳ್ಳುವ ಉದ್ದೇಶಿಸಿರುವ ಕಾಮಗಾರಿಗಳನ್ನು, ಅವುಗಳಿಂದ ಆಹ್ವಾನಿಸಬಹುದು. ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಈ ರೀತಿ ಪಡೆದು, ಪರಿಶೀಲಿಸಿದ ಎಲ್ಲ ಪ್ರಸ್ತಾವನೆಗಳನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸಬೇಕು, ಜಿಲ್ಲಾ ಪಂಚಾಯಿತಿಯು ತನ್ನ ಪಾಲಿನ ಮೊತ್ತಕ್ಕೆ ಕಾಮಗಾರಿಗಳ ಯೋಜನೆಯ ಪ್ರಸ್ತಾವನೆ ಸಿದ್ಧಪಡಿಸಬೇಕು. ತಾಲ್ಲೂಕು ಪಂಚಾಯಿತಿಗಳು ಅಥವಾ ಗ್ರಾಮ ಪಂಚಾಯಿತಿಗಳು ಸಲ್ಲಿಸಿದ ಕಾಮಗಾರಿಗಳ ಪಟ್ಟಿಯ ಆದ್ಯತೆಯನ್ನು ಜಿಲ್ಲಾ ಪಂಚಾಯಿತಿ ಬದಲಾಯಿಸತಕ್ಕದ್ದಲ್ಲ. ಜಿಲ್ಲಾ ಪಂಚಾಯಿತಿ ಹೀಗೆ ಪರಿಗಣಿಸಿ ಅನುಮೋದಿಸಿದ ಜಿಲ್ಲಾ ಯೋಜನೆಯ, ಎಲ್ಲ ಕಾಮಗಾರಿಗಳಿಗೆ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಆಡಳಿತಾತ್ಮಕ ಮಂಜೂರಾತಿ ನೀಡಬೇಕು.

(೧೩) ಆಡಳಿತಾತ್ಮಕ ಅನುಮೋದನೆ ನೀಡಿದ, ಪ್ರತಿ ಕಾಮಗಾರಿಗೆ ಪ್ರತ್ಯೇಕವಾದ ಸಂಖ್ಯೆಯನ್ನು ಕೊಡಬೇಕು.

(೧೪) ಈ ರೀತಿ ಆಡಳಿತಾತ್ಮಕವಾಗಿ ಅನುಮೋದಿಸಲ್ಪಟ್ಟ ಕಾಮಗಾರಿಗಳ ಪಟ್ಟಿಯನ್ನು ಸಂಬಂಧಿಸಿದ ಕಾರ್ಯಕ್ರಮ ಅಧಿಕಾರಿಗೆ ಕಳುಹಿಸಬೇಕು. ಕಾರ್ಯಕ್ರಮ ಅಧಿಕಾರಿಯು ಸಂಬಂಧಪಟ್ಟ ಕಾರ್ಯನಿರ್ವಹಣಾ ಏಜೆನ್ಸಿಗಳಿಗೆ ಇವುಗಳನ್ನು ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಕೊಡಬೇಕು. ತಾಂತ್ರಿಕವಾಗಿ ಅನುಮೋದಿಸಲ್ಪಟ್ಟ ಕಾಮಗಾರಿಗಳನ್ನು ಕಾರ್ಯಕ್ರಮ ಅಧಿಕಾರಿಯು ಪಡೆದು ಇವುಗಳನ್ನು ಯೋಜನೆಗಳ ಪಟ್ಟಿ (Shelf of Project)ಯಾಗಿ ನಿರ್ವಹಿಸಬೇಕು.

## ೧೪. ನಿಗಧಿತ ಗ್ರಾಮೀಣ ದರಗಳ ಅನುಸೂಚಿ

ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳುವ ಕಾಮಗಾರಿಗಳಿಗಾಗಿ ಪ್ರತ್ಯೇಕವಾದ ಗ್ರಾಮೀಣ ಮಾದರಿ ಅನುಸೂಚಿತ ದರಗಳ ಪಟ್ಟಿ ಇರತಕ್ಕದ್ದು. ಒಂದು ದಿನದಲ್ಲಿ ಏಳು ಗಂಟೆಗಳ ಕಾಲ ಕೆಲಸ ನಿರ್ವಹಿಸಿದಲ್ಲಿ, ರಾಜ್ಯ ಸರ್ಕಾರ ಕಾಲಕಾಲಕ್ಕೆ ನಿಗಧಿಪಡಿಸುವ ಕನಿಷ್ಠ ಕೂಲಿಯನ್ನು ಒಬ್ಬ ಕಾರ್ಮಿಕ ಪಡೆಯುವ ರೀತಿಯಲ್ಲಿ ವಿವಿಧ ಕೆಲಸಗಳಿಗೆ ಘಟಕದ ದರಗಳನ್ನು ನಿಗಧಿಪಡಿಸಬೇಕು.

## ೧೫. ಅಂದಾಜು ಪಟ್ಟಿ ಮತ್ತು ತಾಂತ್ರಿಕ ಮಂಜೂರಾತಿಗಳು

ಅಂದಾಜುಗಳ ತಯಾರಿಕೆ, ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳು, ಕೆಲಸದ ಅಳತೆ, ಇತ್ಯಾದಿಗಳು, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲಾ ಪಂಚಾಯಿತಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಗಳ ನಿಯಮಗಳು) ಪ್ರಕಾರ ಇರತಕ್ಕದ್ದು.

## ೧೬. ಕಾಮಗಾರಿಗಳ ಅನುಷ್ಠಾನ

(೧) ಕಾಮಗಾರಿಗಳ ಒಟ್ಟು ಮೊತ್ತದ ಕನಿಷ್ಠ ವೇತನ ಶೇಕಡ ೫೦ರಷ್ಟು ಕಾಮಗಾರಿಗಳನ್ನು, ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿಗಳಿಗೆ ವಹಿಸತಕ್ಕದ್ದು. ಉದ್ಯೋಗ ಬೇಡಿಕೆಗೆ ಅನುಸಾರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಲು, ಕಾಮಗಾರಿ ಪ್ರಾರಂಭ ಪತ್ರ ನೀಡುವಂತೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕಾರ್ಯಕ್ರಮ ಅಧಿಕಾರಿಗೆ ಕೋರಿಕೆ ಸಲ್ಲಿಸಬೇಕು. ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ, ಆಡಳಿತಾತ್ಮಕ ಅನುಮೋದನೆ ನೀಡಿರುವ ಪಟ್ಟಿಯಲ್ಲಿರುವ ಅನುಕ್ರಮದಂತೆ, ಕಾಮಗಾರಿಗಳನ್ನು ಪ್ರಾರಂಭಿಸಲು, ಕಾರ್ಯಕ್ರಮ ಅಧಿಕಾರಿ ಗ್ರಾಮ ಪಂಚಾಯಿತಿಗಳಿಗೆ ಕಾಮಗಾರಿ ಪ್ರಾರಂಭ ಪತ್ರ ನೀಡಬೇಕು. ಒಂದು ಆರ್ಥಿಕ ವರ್ಷದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ನೀಡಿದ ಈ ಪತ್ರಗಳ ವಿವರಗಳನ್ನು ಗ್ರಾಮ ಪಂಚಾಯಿತಿಯು ಒಂದು ವಹಿಯಲ್ಲಿ ನಿರ್ವಹಿಸತಕ್ಕದ್ದು.

(೨) ಕಾಮಗಾರಿ ಪ್ರಾರಂಭ ಪತ್ರ ಪಡೆದ ಕೂಡಲೆ, ಕಾರ್ಯನಿರ್ವಾಹಣಾ ಏಜೆನ್ಸಿಗಳು ಕಾಮಗಾರಿಗಳನ್ನು ಪ್ರಾರಂಭಿಸಬೇಕು.

(೩) ಉದ್ಯೋಗ ಖಾತರಿ ಯೋಜನೆಯಲ್ಲಿ ಸೂಚಿಸಿರುವ ಕ್ರಮಗಳನ್ನು ಕಾಮಗಾರಿಗಳ ಅನುಷ್ಠಾನದಲ್ಲಿ ಅನುಸರಿಸಬೇಕು.

(೪) ಪ್ರತ್ಯೇಕ ಕ್ರಮ ಸಂಖ್ಯೆಯನ್ನು ಹೊಂದಿರುವ ಹಾಜರಿಪಟ್ಟಿಗಳನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ, ಕಾರ್ಯಕ್ರಮ ಅಧಿಕಾರಿಗೆ ಪ್ರತಿ ಕಾರ್ಯನಿರ್ವಾಹಣಾ ಏಜೆನ್ಸಿಗೆ, ಕಾಮಗಾರಿಗಳ ಅಗತ್ಯಕ್ಕೆ ಅನುಸಾರವಾಗಿ ಈ ಹಾಜರಿ ಪಟ್ಟಿಗಳನ್ನು ವಿತರಿಸಬೇಕು. ಕಾರ್ಯನಿರ್ವಾಹಣಾ ಇಲಾಖೆಗಳು ಹಾಜರಿಪಟ್ಟಿಗಳ ದಾಸ್ತಾನು ವಹಿಗಳನ್ನು ನಿರ್ವಹಿಸಬೇಕು. ಹಾಜರಿಪಟ್ಟಿಗಳನ್ನು ಪ್ರತಿ ವಾರಕ್ಕೊಮ್ಮೆ ಅಂತಿಮಗೊಳಿಸಬೇಕು.

## ೧೭. ಅಕುಶಲ ಕೆಲಸಗಾರರಿಗೆ ಕೂಲಿ ಪಾವತಿ

(೧) ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ಕೂಲಿ ಪಾವತಿಸಬೇಕು, ಕೂಲಿಯನ್ನು ಕನಿಷ್ಠ ಹದಿನೈದು ದಿನಗಳಿಗೊಮ್ಮೆಯಾದರೂ ಪಾವತಿಸಬೇಕು. ಜಿಲ್ಲಾವಾರು ಗಳಿಸುವ ಸರಾಸರಿ ಕೂಲಿಯ ವಿವರಗಳನ್ನು ರಾಜ್ಯ ಕಾರ್ಯಕ್ರಮ ಸಮನ್ವಯ ಅಧಿಕಾರಿ ಪ್ರತಿ ವರ್ಷ ರಾಜ್ಯ ಪರಿಷತ್ತಿನ ಗಮನಕ್ಕೆ ಸಲ್ಲಿಸಬೇಕು. ಕಾರ್ಯನಿರ್ವಾಹಣಾ ಏಜೆನ್ಸಿ ಯಾವುದೇ ಆದರು ಸಹ, ಅಕುಶಲ ಕಾರ್ಮಿಕರ ಕೂಲಿಯನ್ನು ಗ್ರಾಮ ಪಂಚಾಯಿತಿಯ ಮೂಲಕವೇ ಪಾವತಿಸತಕ್ಕದ್ದು.

(೨) ಉದ್ಯೋಗ ನೀಡಿದ ದಿನಗಳ ಸಂಖ್ಯೆ ಮತ್ತು ಪಾವತಿಸಿದ ಕೂಲಿಯ ವಿವರಗಳನ್ನು ಕುಟುಂಬ ಉದ್ಯೋಗ ಚೀಟಿಯಲ್ಲಿ ಮತ್ತು ಗ್ರಾಮ ಪಂಚಾಯಿತಿ ನಿರ್ವಹಿಸುವ ಉದ್ಯೋಗಕಾಂಕ್ಷಿಗಳ ಮತ್ತು ಉದ್ಯೋಗ ವಹಿಯಲ್ಲಿ ಆಗಿಂದಾಗ್ಗೆ ದಾಖಲಿಸುತ್ತಿರಬೇಕು. ಯಾವ ಗ್ರಾಮಗಳಲ್ಲಿ ಬ್ಯಾಂಕ್ ಶಾಖೆ ಅಥವಾ ಅಂಚೆ ಕಛೇರಿ ಇದೆಯೋ, ಕೂಲಿ ಪಾವತಿಗಾಗಿ ಅವುಗಳಲ್ಲಿ ಖಾತೆಗಳನ್ನು ತೆರೆಯಲು ಕಾರ್ಮಿಕರಿಗೆ ಸಹಾಯ ಮಾಡಬೇಕು.

## ೧೮. ಕಾಮಗಾರಿಗಳ ಮುಕ್ತಾಯ ಮತ್ತು ಮಾಹಿತಿಯ ನಿರ್ವಹಣೆ

ಮುಕ್ತಾಯದ ವರದಿಯೊಂದಿಗೆ ಕಾರ್ಯನಿರ್ವಹಣಾ ಏಜೆನ್ಸಿಗಳು ಕಾಮಗಾರಿಯನ್ನು ಅಂತಿಮಗೊಳಿಸಬೇಕು, ಪ್ರತಿ ಗ್ರಾಮ ಪಂಚಾಯಿತಿ ಮತ್ತು ಪ್ರತಿ ಕಾರ್ಯನಿರ್ವಾಹಣಾ ಏಜೆನ್ಸಿ, ಮಂಜೂರಿಯಾದ, ಅನುಷ್ಠಾನಗೊಳಿಸಿದ ಮತ್ತು ಮುಕ್ತಾಯಗೊಂಡ ಕಾಮಗಾರಿಗಳ ವಿಷಯಗಳನ್ನು ವಹಿಯಲ್ಲಿ ದಾಖಲಿಸಿ ನಿರ್ವಹಿಸಬೇಕು.

## ೧೯. ಲೆಕ್ಕಪರಿಶೋಧನೆ

ಈ ಯೋಜನೆಯಡಿಯ ಲೆಕ್ಕಗಳ ಲೆಕ್ಕಪರಿಶೋಧನೆ ಮಾಡುವುದು ಕಡ್ಡಾಯ, ಜಾರಿಯಲ್ಲಿರುವ ನಿಯಮಗಳ ಪ್ರಕಾರ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಲೆಕ್ಕಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು, ಲೆಕ್ಕಪರಿಶೋಧನೆ ಮಾಡತಕ್ಕದ್ದು, ರಾಜ್ಯ ಸರ್ಕಾರ ಪಟ್ಟಿಮಾಡಿರುವ ನೋಂದಾಯಿತ ಚಾರ್ಟರ್ಡ್ ಅಕೌಂಟೆಟ್ಸ್ ಮೂಲಕ ಹಣಕಾಸಿನ ಲೆಕ್ಕಪರಿಶೋಧನೆಯನ್ನು ಮಾಡಲು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ, ವ್ಯವಸ್ಥೆ ಮಾಡತಕ್ಕದ್ದು.

## ೨೦. ಜಾಗೃತಿ ಮತ್ತು ಗುಣನಿಯಂತ್ರಣ

(೧) ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಮಾಡಲು, ಸ್ವತಂತ್ರವಾದ ಜಾಗೃತಿ ಮತ್ತು ಗುಣನಿಯಂತ್ರಣ ತಂಡಗಳನ್ನು ನೇಮಿಸತಕ್ಕದ್ದು.

(೨) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ ೬೧(ಎ) ಅಡಿಯಲ್ಲಿ ಪ್ರತಿ ಗ್ರಾಮಕ್ಕೆ ರಚಿಸಲಾಗಿರುವ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಈ ಯೋಜನೆಯಡಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಾಗಿಯೂ ಸಹ ಕಾರ್ಯನಿರ್ವಹಿಸತಕ್ಕದ್ದು.

## ೨೧. ಸಾಮಾಜಿಕ ಲೆಕ್ಕಪರಿಶೋಧನೆ ಮತ್ತು ಮಾಹಿತಿ ಹಕ್ಕು

(೧) ಉದ್ಯೋಗ ಖಾತರಿ ಯೋಜನೆಯಡಿ ಮಾಡಲಾಗುವ ಯೋಜನೆ, ಅನುಷ್ಠಾನ ಮತ್ತು ಮೌಲ್ಯಮಾಪನಗಳಲ್ಲಿ, ಜನರ ಭಾಗವಹಿಸುವಿಕೆ, ಪಾರದರ್ಶಕತೆ ಮತ್ತು ಜವಾಬ್ದಾರಿಯಿಂದ ಕೂಡಿರುವಂತೆ ಮಾಡಲು ಸಾಮಾಜಿಕ ಲೆಕ್ಕಪರಿಶೋಧನೆಯ ವ್ಯವಸ್ಥೆ ಮಾಡತಕ್ಕದ್ದು. ಈ ಯೋಜನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನ್ಯಾಯಯುತವಾಗಿ ದೊರೆಯಬೇಕಾಗಿರುವ ಹಕ್ಕುಗಳು ಅವರಿಗೆ ದೊರೆಯುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಸಾಮಾಜಿಕ ತಪಾಸಣೆಯನ್ನು, ಪೂರ್ವಾನ್ವಯವಾಗುವಂತೆ ಮಾಡದೆ, ಚಾಲ್ತಿಯಲ್ಲಿರುವ ಪ್ರಕ್ರಿಯೆಗಳಲ್ಲಿ ಮಾಡತಕ್ಕದ್ದು. ಇದನ್ನು; ಅನುಷ್ಠಾನಕ್ಕೆ ಮೊದಲು, ಅನುಷ್ಠಾನದ ಸಮಯದಲ್ಲಿ ಮತ್ತು ಅನುಷ್ಠಾನದ ನಂತರ, ಹೀಗೆ ಮೂರು ಹಂತದಲ್ಲಿ ಮಾಡಬೇಕು ಹಾಗೂ ಇದು ಉದ್ಯೋಗ ಖಾತರಿ ಯೋಜನೆಯ ಮುಖ್ಯ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿರತಕ್ಕದ್ದು.

(೨) ಗ್ರಾಮ ಪಂಚಾಯಿತಿಯ ಕೇಂದ್ರ ಸ್ಥಾನದಲ್ಲಿ ಮಾಹಿತಿ ಗೋಡೆ/ ಫಲಕವನ್ನು ಗ್ರಾಮ ಪಂಚಾಯಿತಿ ನಿರ್ಮಿಸಬೇಕು, ಗೋಡೆಯ ಒಂದು ಭಾಗದಲ್ಲಿ, ಬಹುಕಾಲದವರೆಗೆ ಅಗತ್ಯವಿರುವ ಮಾಹಿತಿಯಾದ ಕಾಮಗಾರಿವಾರು ದರಪಟ್ಟಿ, ಮಾರ್ಪಡಿಸಲಾಗದ ಬಾಬ್ತುಗಳು, ಮುಖ್ಯವಾದ ಮಾರ್ಗಸೂಚಿಗಳು, ಗುರುತಿಸಲಾದ ಕಾಮಗಾರಿಗಳ ಪಟ್ಟಿ, ಇತ್ಯಾದಿಗಳನ್ನು, ಬಣ್ಣದಲ್ಲಿ ಬರೆಯಬೇಕು. ಗೋಡೆಯ ಮತ್ತೊಂದು ಬದಿಯಲ್ಲಿ, ಪ್ರತಿವಾರ ಬದಲಾಗುವ ಮಾಹಿತಿಯಾದ ಕಾಮಗಾರಿವಾರು ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ, ಖರೀದಿಸಲಾದ ಮತ್ತು ಉಪಯೋಗಿಸಲಾದ ಸಾಮಗ್ರಿಗಳು, ಇವುಗಳ ವೆಚ್ಚ, ಇತ್ಯಾದಿ ವಿವರಗಳನ್ನು ಬರೆಯಬೇಕು.

The Director NREGS and EX- Officio, Dy-Secretary, RDPR Dept. has informed that some branches of public sector Banks and co-operative Banks in Mandya District are demanding initial deposit of Rs.250/- to Rs.500/- from wage earners under NREGS for opening of No Frill Accounts. In this regard, we wish to inform that the Banks, as per EPB guidelines are required to open NFAs with zero or minimum balance to extend the outreach of banking facilities.

In view of the foregoing, we request you to advise all your branches, not to insist for keeping minimum deposit while opening of No Frill Accounts.

Yours faithfully,
Sd/-
**(G.RAMANATHAN)**
Convenor –SLBC &
GM, Syndicate Bank

CC:
**Dr. P.C. Jaffer**
Director
NREGS and Ex –Officio, Dy. Secretary
Govt. of Karnataka
RDPR Dept.
M S Building, Bangalore - 1

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 115 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು,
ದಿನಾಂಕ : 24–8–2009

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿಕಾರರು ಬ್ಯಾಂಕ್‌ಗಳಲ್ಲಿ No frills accountನ್ನು ತೆರೆಯುವ ಕುರಿತು.

ಉಲ್ಲೇಖ: ಸಮನ್ವಯ ಅಧಿಕಾರಿ, ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಪ್ರಧಾನ ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್ ರವರ ಪತ್ರದ ಸಂ. 354/0479/ SLBC/F–101–110 ದಿನಂಕ: 10–8–02009.

* * *

ರಾಜ್ಯದ ಕೆಲವು ಜಿಲ್ಲೆಗಳ ತಾಲ್ಲೂಕುಗಳ ಗ್ರಾಮ ಪಂಚಾಯತ್‌ಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರಿಗೆ ಬ್ಯಾಂಕ್‌ಗಳಲ್ಲಿ ವೈಯುಕ್ತಿಕ ಖಾತೆ ತೆರೆಯಲು ಮುಂಗಡ ಠೇವಣಿ ರೂ. 250/– ಗಳಿಂದ ರೂ. 500/– ಗಳವರೆಗೆ ಇಡುವಂತೆ, ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಅದರ ನಿವಾರಣೆಗಾಗಿ, ರಾಜ್ಯ ಮಟ್ಟದಲ್ಲಿರುವ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಪ್ರಧಾನ ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು ಇವರಿಗೆ ಪತ್ರ ಬರೆದಿದ್ದು ಇದಕ್ಕೆ ಪ್ರತ್ಯುತ್ತರವಾಗಿ ಉಲ್ಲೇಖಿತ ಪತ್ರದಲ್ಲಿ ಸಂಚಾಲಕರು, ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ ಇವರು ತಮ್ಮ ನಿಯಂತ್ರಣಕ್ಕೆ ಬರುವ ಎಲ್ಲಾ ಬ್ಯಾಂಕ್ ಅಧಿಕಾರಿಗಳಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರು, ಮಾರ್ಗಸೂಚಿಗಳ ಪ್ರಕಾರ, ಬ್ಯಾಂಕ್‌ಗಳಲ್ಲಿ No frills account ನ್ನು ತೆರೆಯುವಾಗ, ಕನಿಷ್ಠ ಠೇವಣೀಯನ್ನು ಇಡಲು, ಒತ್ತಾಯಿಸಬಾರದು ಎಂದು ತಿಳಿಸಿರುವರು. ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಮಾಹಿತಿಗಾಗಿ ಲಗತ್ತಿಸಿದೆ.

ಈ ನಿಟ್ಟಿನಲ್ಲಿ, ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಎಲ್ಲಾ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಈ ವಿಷಯವನ್ನು ತಿಳಿಸಿ, ಕೂಲಿ ಕಾರ್ಮಿಕರು ಖಾತೆಗಳನ್ನು ತೆರೆಯುವಾಗ/ ಖಾತೆಗಳನ್ನು ತೆರೆದಿದ್ದರೆ, ಬ್ಯಾಂಕಿನವರು ನೀಡಿರುವ ಸೂಚನೆಗಳನ್ನು ಅನುಷ್ಠಾನಗೊಳಿಸುವಂತೆ ಸೂಚಿಸಲು ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಕೆಗಳು

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಗದಿ ಪಡಿಸುವ ಕನಿಷ್ಠ ಕೂಲಿ ದರ ಪಾವತಿಗಾಗಿ ನಿಗದಿಪಡಿಸಿರುವ ಕೆಲಸದ ಪರಿಮಾಣ ಕುರಿತು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 05 ಉಖಾಯೋ 2008. ದಿನಾಂಕ : 02.01.2009.

* * *

### ಪ್ರಸ್ತಾವನೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿ ನಿಯಮ – 2005 ರನ್ವಯ ಕಾಲಕಾಲಕ್ಕೆ ನಿಗದಿ ಪಡಿಸಲಾಗುವ ಕನಿಷ್ಠ ಕೂಲಿ ದರವನ್ನು ಯೋಜನೆಯಡಿ ಕೆಲಸ ನಿರ್ವಹಿಸುವ ನೋಂದಾಯಿತ ಕೂಲಿ ಕಾರ್ಮಿಕರಿಗೆ ನೀಡಬೇಕಾಗಿರುತ್ತದೆ. ಈ ಸಂಬಂಧ ವೈಜ್ಞಾನಿಕವಾಗಿ ಅಕುಶಲ ಕೂಲಿ ಕಾರ್ಮಿಕರು ದಿನದ ಒಂದು ಗಂಟೆ ವಿರಾಮವೂ ಸೇರಿದಂತೆ ಒಟ್ಟು ಒಂಬತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿದಲ್ಲಿ ಯಾವ ಯಾವ ಚಟುವಟಿಕೆಗಳಲ್ಲಿ ಎಷ್ಟು ಪರಿಮಾಣದ ಕೆಲಸ ನಿರ್ವಹಿಸಲು ಸಾಧ್ಯ ಎಂಬ ಬಗ್ಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಲ ಮತ್ತು ಚಲನೆ ಅಧ್ಯಯನ ನಡೆಸಿ ಕೆಲಸದ ಪರಿಮಾಣವನ್ನು ನಿರ್ಧರಿಸಲಾಗಿರುತ್ತದೆ. ಸದರಿ ಕೆಲಸದ ಪರಿಮಾಣವನ್ನು ಓದಲಾಗಿರುವ ಆದೇಶದಲ್ಲಿ ಯೋಜನೆಯಡಿ ನಿಗದಿಪಡಿಸಲಾಗಿದ್ದ ಕನಿಷ್ಠ ಕೂಲಿ ದರ ರೂ. 82.00 ಕ್ಕೆ ಸರಿಹೊಂದಿಸಿ ವಿವಿಧ ಚಟುವಟಿಕೆಗಳನ್ನು ಅಳತೆಮಾಡಲು ಇರುವ ಘಟಕ ಒಂದಕ್ಕೆ ದರವನ್ನು ನಿಗದಿಪಡಿಸಿ ತಿಳಿಸಲಾಗಿದೆ. ಕನಿಷ್ಠ ಕೂಲಿ ದರವು ಅಧಿನಿಯಮದಡಿ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿದ್ದು ಕನಿಷ್ಠ ಕೂಲಿದರ ಬದಲಾವಣೆಯಾದ ಪ್ರತಿ ಸಮಯದಲ್ಲೂ ಓದಲಾಗಿರುವ ಆದೇಶದಲ್ಲಿ ವಿವಿಧ ಚಟುವಟಿಕೆಗಳ ಪ್ರತಿಘಟಕಕ್ಕೆ ನಿಗದಿಪಡಿಸಿರುವ ದರವನ್ನೂ ಕೂಡ ಪರಿಷ್ಕರಿಸಿ ಆದೇಶಿಸಬೇಕಾಗಿದೆ. ಆದರೆ, ಕೂಲಿ ಕಾರ್ಮಿಕರು ದಿನ ಒಂದರಲ್ಲಿ ಒಂದು ಗಂಟೆ ವಿರಾಮವೂ ಸೇರಿದಂತೆ ಒಟ್ಟು ಒಂಬತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿ ವಿವಿಧ ಚಟುವಟಿಕೆಗಳಡಿ ಉತ್ಪತ್ತಿಮಾಡಲಾಗುವ ಕೆಲಸದ ಪರಿಮಾಣದಲ್ಲಿ ಮಾತ್ರ ಯಾವುದೇ ಬದಲಾವಣೆ ಇರುವುದಿಲ್ಲ. ಇದನ್ನು ಗಮನಿಸಿ ಯೋಜನೆಯಡಿ ಕನಿಷ್ಠ ಕೂಲಿ ದರವನ್ನು ಪಾವತಿಸಲು ಕೆಲಸದ ಪರಿಮಾಣವನ್ನು ನಿಗದಿಪಡಿಸಿ ಆದೇಶಿಸಬೇಕಾಗಿದೆ. ಆದುದರಿಂದ, ಈ ಕೆಳಕಂಡ ಆದೇಶ.

### ಆದೇಶ ಸಂಖ್ಯೆ : ಗ್ರಾಅಪ 05 ಉಖಾಯೋ 2008, ದಿನಾಂಕ : 23.12.2009

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಲ ಕಾಲಕ್ಕೆ ನಿಗದಿಪಡಿಸಲಾಗಿರುವ ಕನಿಷ್ಠ ಕೂಲಿ ದರವನ್ನು ನೀಡಲು ಪ್ರತಿ ನೋಂದಾಯಿತ ಕೂಲಿ ಕಾರ್ಮಿಕರು ದಿನವೊಂದಕ್ಕೆ ಒಂದು ಗಂಟೆಯ ವಿರಾಮವೂ ಸೇರಿದಂತೆ ಒಟ್ಟು ಒಂಬತ್ತು ಗಂಟೆಗಳ ಕಾಲ ಕೆಲಸ ನಿರ್ವಹಿಸಿ ವಿವಿಧ ಚಟುವಟಿಕೆಗಳಡಿ ಉತ್ಪತ್ತಿಮಾಡಬೇಕಾಗಿರುವ ಕೆಲಸದ ಪರಿಮಾಣವನ್ನು ನಿಗದಿಪಡಿಸಿ ಆದೇಶಿಸಿದೆ.

ಯೋಜನೆಯಡಿ ನೀಡಲಾಗಿರುವ ಕನಿಷ್ಠ ಕೂಲಿ ದರ ಪಡೆಯಲು ವಿವಿಧ ಚಟುವಟಿಕೆಗಳಡಿ ನಿಗಧಿಪಡಿಸಿರುವ ಕೆಲಸದ ಪರಿಮಾಣದ ವಿವರಗಳನ್ನು ಮತ್ತು ಕನಿಷ್ಠ ಕೂಲಿ ದರದ ರೂ. 82/– ಹಾಗೂ ರೂ. 100/– ಕ್ಕೆ ಅನುಗುಣವಾಗಿ ಸದರಿ ಚಟುವಟಿಕೆಗಳಡಿ ನಿರ್ವಹಿಸಲಾಗುವ ಕೆಲಸದ ಪರಿಮಾಣದಲ್ಲಿ ಪ್ರತಿ ಘಟಕಕ್ಕೆ ನೀಡಬೇಕಾಗಿರುವ ದರವನ್ನು ಕೂಡ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಿದೆ.

ಕರ್ನಾಟಕ ರಾಜ್ಯ ಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಾ: ಪಿ.ಸಿ. ಜಾಫರ್)**
ನಿರ್ದೇಶಕರು,
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಮತ್ತು ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 61 ಉಖಾಯೋ : 07

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 04–01–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಕೂಲಿಕಾರರ ಕೂಲಿಯ ಹಣದ ಪಾವತಿಗಾಗಿ ಅಂಚೆ ಕಛೇರಿಗಳಲ್ಲಿ ಸಾಕಷ್ಟು ಅನುದಾನವನ್ನು ಮುಂಗಡವಾಗಿ ಇಡುವ ಬಗ್ಗೆ.

**ಉಲ್ಲೇಖ:** 1. ಅಂಚೆ ಇಲಾಖೆ, ಅಂಚೆ ಕಛೇರಿಯ Chief Post Master General, Karnataka Circle, ಬೆಂಗಳೂರು ಇವರ ಪತ್ರದ ದಿನಾಂಕ: 22–12–09

2. ಸರ್ಕಾರದ ಸಮಸಂಖ್ಯೆ ಪತ್ರದ ದಿನಾಂಕ : 03.09.2009.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಅಂಚೆ ಇಲಾಖೆಯ Chief Post Master General, Karnataka Circle ಬೆಂಗಳೂರು ಇವರು ಉಲ್ಲೇಖ (1)ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರ ಕೂಲಿ ಪಾವತಿಯ ವಿಷಯದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಎಲ್ಲಾ ಕೂಲಿಕಾರರಿಗೆ ಸಕಾಲದಲ್ಲಿ ವಿತರಣೆ ಮಾಡಲು ಅನುಕೂಲವಾಗುವಂತೆ ಸಾಕಷ್ಟು ಅನುದಾನವನ್ನು ಆಯಾ ಜಿಲ್ಲೆಗಳ ಸಂಬಂಧಪಟ್ಟ ಅಂಚೆ ಕಛೇರಿಗಳಲ್ಲಿ ಮುಂಗಡವಾಗಿ ಇಡುವಂತೆ, ರಾಜ್ಯದಲ್ಲಿ ಇರುವ ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಇದರ ಸಂಬಂಧ ಈಗಾಗಲೇ ಉಲ್ಲೇಖ(2)ರಲ್ಲಿ ಸರ್ಕಾರದಿಂದ ಅನುದಾನವನ್ನು ಮುಂಗಡವಾಗಿ ಅಂಚೆ ಕಛೇರಿಗಳಲ್ಲಿ ಇಡುವಂತೆ ಆದೇಶಿಸಲಾಗಿದೆ. ಸರ್ಕಾರದಿಂದ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲನೆ ಮಾಡಲು ಸೂಚಿಸಿದೆ ಮತ್ತು ಯಾವುದೇ ಕಾರಣಕ್ಕೂ ಅನುದಾನದ ಕೊರತೆ ಇಲ್ಲದಂತೆ ಖಚಿತಪಡಿಸಿಕೊಂಡು ಕೂಲಿಕಾರರ ಹಣವನ್ನು ಸಕಾಲದಲ್ಲಿ ಪಾವತಿಸಲು ಕ್ರಮ ವಹಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಡಾ: ಪಿ.ಸಿ. ಜಾಫರ್)**
ನಿರ್ದೇಶಕರು,
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 115 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 25–02–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿಯನ್ನು ಅಂಚೆ ಕಛೇರಿಯ ಮೂಲಕ ಪಾವತಿಸುವ ಕುರಿತು.

**ಉಲ್ಲೇಖ:** Chief Postmaster General, ಕರ್ನಾಟಕ ವೃತ್ತ, ಬೆಂಗಳೂರು–1 ಇವರ ಪತ್ರದ ಸಂ.FS/ 10-5/Trg/NREGS ಬೆಂಗಳೂರು ದಿನಂಕ: 3–2–2010.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರಿಗೆ ಕೂಲಿ ಪಾವತಿ ಮಾಡುವ ಕುರಿತು, ವಿಧಿವಿಧಾನಗಳ ಬಗ್ಗೆ ಅಂಚೆ ಕಛೇರಿಯ ಸಿಬ್ಬಂದಿಗಳಿಗೆ ತರಬೇತಿಯಲ್ಲಿ ವಿಶದವಾಗಿ ತಿಳಿಸಲು ಅಂಚೆ ಇಲಾಖೆಯವರು ವಿಭಾಗೀಯ ಮಟ್ಟದಲ್ಲಿ (ಅಂದರೆ ವಿಭಾಗದ ತರಬೇತಿ ಕೇಂದ್ರಗಳಲ್ಲಿ) ಸದ್ಯದಲ್ಲಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಿರುತ್ತಾರೆ. ಈ ಸಂಬಂಧ ತರಬೇತಿ ಕಾರ್ಯಕ್ರಮದಲ್ಲಿ ಪ್ರತಿ ತಾಲ್ಲೂಕು ಪಂಚಾಯತಿಯಿಂದ ಕಾರ್ಯಕ್ರಮ ಅಧಿಕಾರಿಗಳನ್ನು (ಅಂದರೆ ಕಾರ್ಯ ನಿರ್ವಾಹಕ ಅಧಿಕಾರಿಗಳು) ಭಾಗವಹಿಸುವಂತೆ ಸೂಚಿಸಲು ಸೂಚಿಸಿದೆ. ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಪಂಚಾಯತಿಯ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳು, ಅಂಚೆ ಇಲಾಖೆಯವರು ನಡೆಸುವ ತರಬೇತಿ ಕಾರ್ಯಕ್ರಮಕ್ಕೆ ತಮ್ಮ ಪೂರ್ಣ ಸಹಕಾರ ಹಾಗೂ ಬೆಂಬಲವನ್ನು ನೀಡಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಅಗತ್ಯವೆನಿಸಿದರೆ, ಜಿಲ್ಲಾ ಪಂಚಾಯಿತಿಯಿಂದ ಒಬ್ಬ ಸಂಪನ್ಮೂಲ ವ್ಯಕ್ತಿಯನ್ನು ಭಾಗವಹಿಸುವಂತೆ, ಸೂಚಿಸುವುದು

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು,
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ, 2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : Karnregs@gmail.com

ಸಂ: ಗ್ರಾಅಪ 133 ಮಗಾಂಉಖಾಯೋ 2008

ದಿನಾಂಕ : 22–6–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಎಲ್ಲಾ ಕೂಲಿ ಕಾರ್ಮಿಕರಿಗೆ ಆಮ್‌ಆದ್ಮಿಬಿಮಾ ಯೋಜನೆಯ ವಿಮೆಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಸಮ ಸಂಖ್ಯೆ ಪತ್ರದ: ದಿನಾಂಕ: 9–4–2009
2. ಕೇಂದ್ರ ಸರ್ಕಾರದ ಅ.ಸ.ಪತ್ರ ಸಂಖ್ಯ: J-11060/11/2006-MGNREGA, Dt : $28^{th}$ May 2010

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿಯೇ ಮುಖ್ಯ ಧ್ಯೇಯವಾಗಿರುತ್ತದೆ ಎಂದು ಕೇಂದ್ರ ಸರ್ಕಾರವು ತಿಳಿಸಿರುತ್ತದೆ. ಕೂಲಿ ಕಾರ್ಮಿಕರ ಕುಟುಂಬಗಳಿಗೆ ಕೇಂದ್ರ ಸರ್ಕಾರ ಪರಿಚಯಿಸಿರುವ ಆಮ್ ಆದ್ಮಿ ಬಿಮಾ ಯೋಜನೆಯಲ್ಲಿ ವಿಮೆಯನ್ನು ವಿಸ್ತರಿಸಲು ಶಿಫಾರಸ್ಸು ಮಾಡಿದ್ದು, ರಾಜ್ಯ ಸರ್ಕಾರವು ಸದರಿ ವಿಷಯದಲ್ಲಿ ಮುಖ್ಯವಾಗಿ ಆಮ್ ಆದ್ಮಿ ಬಿಮಾ ಯೋಜನೆಯಡಿ ನೋಂದಾಯಿಸಿರುವ ಗ್ರಾಮೀಣ ಭೂ ರಹಿತ ಕುಟುಂಬಗಳ ಜೊತೆಗೆ ಒಂದು ಆರ್ಥಿಕ ವರ್ಷದಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರು ಕಾಮಗಾರಿಗಳಲ್ಲಿ ಯಾರು 50 ದಿನಗಳನ್ನು ಪೂರ್ಣಗೊಳಿಸಿರುತ್ತಾರೋ, ಅಂತಹವರನ್ನು ಗುರುತಿಸಿ, ಪಟ್ಟಿ ಮಾಡಿ ಪಟ್ಟಿಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಿ, ವಿಮೆಯ ಸೌಲಭ್ಯವನ್ನು ವಿಸ್ತರಿಸುವಂತೆ ತಿಳಿಸಲಾಗಿರುತ್ತದೆ. ಈ ಸಂಬಂಧ ಕೇಂದ್ರ ಸರ್ಕಾರವು ಉಲ್ಲೇಖ(2) ಆಮ್ ಆದ್ಮಿ ಬಿಮಾ ಯೋಜನೆಯಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರಿಗೆ ವಿಮೆಯ ಸೌಲಭ್ಯವನ್ನು ವಿಸ್ತರಿಸಿರುವ ಬಗ್ಗೆ ವಿವರಗಳನ್ನು ನೀಡುವಂತೆ ರಾಜ್ಯ ಸರ್ಕಾರವನ್ನು ಕೋರಿರುತ್ತದೆ. ಆಮ್ ಆದ್ಮಿ ಬಿಮಾ ಯೋಜನೆಯ ಸಾಮಾನ್ಯ ವಿಮೆಯನ್ನು ಸಮನ್ವಯ ಮಾಡಲು ಕಂದಾಯ ಇಲಾಖೆಯನ್ನು ನೋಡಲ್ ಏಜೆನ್ಸಿಯಾಗಿ ನೇಮಕಾತಿ ಮಾಡಲಾಗಿರುತ್ತದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10ನೇ ಸಾಲಿನಲ್ಲಿ ಮಾರ್ಚ್ 31ರ ಅಂತ್ಯಕ್ಕೆ 60,45,000 ಕುಟುಂಬಗಳು ನೋಂದಾಯಿಸಲ್ಪಟ್ಟಿದ್ದು ಅದರಲ್ಲಿ 35,35,296 ಕುಟುಂಬಗಳಿಗೆ

ಉದ್ಯೋಗವನ್ನು ನೀಡಲಾಗಿರುತ್ತದೆ. ಸದರಿ ವಿವರಗಳಲ್ಲಿ ಯಾವ ಕುಟುಂಬವು ಕನಿಷ್ಠ 50 ದಿನಗಳಿಗೂ ಮೇಲ್ಪಡುವ ಕೆಲಸವನ್ನು ನಿರ್ವಹಿಸಿರುತ್ತಾರೋ, ಅಂತಹ ಪಟ್ಟಿಯನ್ನು ಕೂಡಲೇ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಸಂಬಂಧಿಸಿದ ತಹಸೀಲ್ದಾರ್‌ರವರಿಗೆ ಕಳುಹಿಸಿ ಆಮ್ ಆದ್ಮಿ ಬಿಮಾ ಯೋಜನೆಯ ವಿಮೆಯನ್ನು ವಿಸ್ತರಿಸಲು ಸೂಕ್ತ ಕ್ರಮ ಜರುಗಿಸುವಂತೆ ಕೋರಿದೆ. ಈ ರೀತಿ ತೆಗೆದುಕೊಂಡ ಕ್ರಮದ ವಿವರವನ್ನು MIS ನಲ್ಲಿ ದಾಖಲಿಸಲು ಕ್ರಮ ಜರುಗಿಸಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No.M-12014/8/2006-NREGA(Part)**
**Government of India**
**Ministry of Rural Development**
**(MGNREGA Division)**

Krishi Bhavan,

New Delhi

Dated the 25th

June, 2010

# CIRCULAR

Subject : Time Schedule for payment of wages to the Mahatma Gandhi NREGA Workers.

* * *

Sub Section 3 of Section 3 of the Mahatma Gandhi NREGA provides that the disbursement of daily wages shall be made on a weekly basis or in any case not later than a fortnight after the date on which such work was done. In any case delay in payment, the labours are entitled to receive payment of compensation as per the provisions of the Payment of Wages Act, 1936

Under section 4, States are to make arrangements for the proper implementation of the Scheme. It is expected that the States have established administrative modalities for ensuring fortnighty wage payments.

The Operations Guidelines, 2008 provides that in order to avoid delays in clearance of cheques or shortage of staff in bank/post office branches or reluctance of bankers/postal authorities, State Government may discuss the matter in the State level banking coordination committee meetings and Post Master General of the State.

A well laid procedure has also been provided for payment to the Mahatma Gandhi NREGS workers by issuing a pay order/pay advise/wages list to be generated in favour of group of workers in the muster roll addressed to the Branch Manager or Sub Post Master from crediting the amount soon against workers in the account of the workers and requesting him to make the payment to the workers on demand. When the amount is paid, a wage information slip may be generated for intimation of the worker. The format of the wage slip is enclosed. The amount should be disbursed to the worker on production of wage slip and the withdrawal slip by the worker or his authorized representative. No third party should be allowed to withdraw money from the bank/post office without due authoritarian of the worker in writing.

The reports from Press & Media, CEGC Members, Area Officers and NLMs have revealed that there is inordinate delay in payment of wages to the Mahatma Gandhi NREGS workers resulting into undue hardships to them and violation of the provisions of the Act as well. Some

To ensure payment of wages within a fortnight to all laboures, a flow chart with time schedule is suggested below which may be considered by the States to reduce administrative delays.

| Sl. No. | Activity | Time Schedule |
|---|---|---|
| 1. | Closing of muster roll | 6th Day after start of the Work |
| 2. | Bringing muster roll & measurement book | 8th Day |
| 3. | (i) Entry of muster roll in MIS<br>(ii) Generation of pay order (consolidated as well individual) | 9th & 10th Day |
| 4. | (i) Submission of pay order at the block post office/bank<br>(ii) Generation of wage slip<br>(iii) Transfer of pay order at the village post office/bank Deposit of wages in the account of wage earnes. | 11th Day & 12th Day 13th Day |
| 5. | Entry of disbursement of wage in to MIS | 16th Day.3 |

Suggestions for streamlining the administrative procedure to ensure wage payment within a fortnight of work done are also elicited from States so that the objective of the Act to enhance the livelihood security of the rural households is not defeated by delay in payment of wages. States are urged to review the reasons for administrative delays in wage payments and take immediate steps for remedying them. This will also help in identifying such factors affecting timely wage payments as may be related to banks and post offices to be able to coordinate such issues at Government of India level. Action taken in this regard will be reviewed in the forthcoming PRC.

Sd/-
**(AMITA SHARMA)**
Joint Secretary

To,

Principal Secretaty/Secretary
All States & UTs

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 115 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ-2
ಬೆಂಗಳೂರು, ದಿನಾಂಕ : 3-8-2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರರ ಕೂಲಿಯನ್ನು ಪಾವತಿಸಲು, ಜಿಲ್ಲಾ ಮಟ್ಟದ ಅಂಚೆ ಕಛೇರಿಯಲ್ಲಿ ಹಣವನ್ನು ಮುಂಗಡವಾಗಿ ಇಡುವ ಬಗ್ಗೆ.

**ಉಲ್ಲೇಖ:** ದಿನಾಂಕ: 30-7-2010ರಂದು, ಕಾರ್ಯದರ್ಶಿಗಳು ಗ್ರಾಪಂರಾಜ್ ಇಲಾಖೆ ಇವರ ಕೊಠಡಿಯಲ್ಲಿ ಅಂಚೆ ಇಲಾಖೆಯ Chief Post Master General ಮತ್ತು ಇನ್ನಿತರೆ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪರಿಣಾಮಕಾರಿಯಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಕೂಲಿಕಾರರ ಕೂಲಿಯನ್ನು ಬ್ಯಾಂಕ್ ಮತ್ತು ಅಂಚೆ ಕಛೇರಿ ಉಳಿತಾಯ ಖಾತೆಗಳ ಮೂಲಕ ಪಾವತಿಸುತ್ತಿರುವುದು ಸರಿಯಷ್ಟೆ. ಅಂಚೆ ಕಛೇರಿ ಉಳಿತಾಯ ಖಾತೆಗಳ ಮೂಲಕ ಕೂಲಿಕಾರರ ಕೂಲಿಯನ್ನು ಪಾವತಿಸುವ ಸಂಬಂಧ ರಾಜ್ಯದಲ್ಲಿ ಮೇಲೆ ಸೂಚಿಸಲಾದ ಎಂಟು ಜಿಲ್ಲೆಗಳು, ಹಣವನ್ನು ಮುಂಗಡವಾಗಿ ಜಿಲ್ಲಾ ಮಟ್ಟದ ಅಂಚೆ ಕಛೇರಿಯಲ್ಲಿ ಇಡದೇ ಕೂಲಿಕಾರರ ಕೂಲಿಯನ್ನು ಪಾವತಿಸುವಲ್ಲಿ ವಿಳಂಬವಾಗುತ್ತಿರುವ ವಿಷಯವನ್ನು ದಿನಾಂಕ: 30-7-2010 ರಂದು ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಅವರ ಕೊಠಡಿಯಲ್ಲಿ Chief Post Master General ಮತ್ತು ಇನ್ನಿತರೆ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಸಭೆಯ ಅಧ್ಯಕ್ಷರು ಅಂಚೆ ಕಛೇರಿಯಲ್ಲಿ ಹಣವನ್ನು ಮುಂಗಡವಾಗಿ ಇಡದೆ ಇರುವ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ, ಹಣವನ್ನು ಮುಂಗಡವಾಗಿ ಕೂಡಲೇ ಇಡುವಂತೆ ಸೂಚಿಸಲು ಮತ್ತು ಯಾವುದೇ ಕಾರಣಕ್ಕೂ, ಕೂಲಿಕಾರರಿಗೆ ಕೂಲಿಯನ್ನು ವಿಳಂಬವಾಗಿ ಪಾವತಿಸುವಂತಿಲ್ಲವೆಂದು ತಿಳಿಸಿರುತ್ತಾರೆ. ಕೂಲಿಕಾರರಿಗೆ ಕೂಲಿ ಪಾವತಿಸಲು ಹಣವನ್ನು ಅಂಚೆ ಕಛೇರಿಯಲ್ಲಿ ಮುಂಗಡವಾಗಿ ಇಡುವುದು, ಅಂಚೆ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಮಾಡಿರುವ ಒಡಂಬಡಿಕೆ ಪ್ರಕಾರ ಒಂದು ಅವಿಭಾಜ್ಯ ಅಂಗವಾಗಿರುತ್ತದೆ. ಆದುದರಿಂದ ಸಭೆಯಲ್ಲಿ ತೀರ್ಮಾನಿಸಿದಂತೆ ತಾವು ಕೂಡಲೇ ಹಿಂದಿನ ತಿಂಗಳಿನಲ್ಲಿ ಅಂಚೆ ಕಛೇರಿ ಉಳಿತಾಯದ ಖಾತೆಗಳ ಮೂಲಕ ಕೂಲಿಕಾರರಿಗೆ ವಿತರಿಸಿದ ಸರಾಸರಿ ಕೂಲಿಯ ಮೊತ್ತವನ್ನು ಪರಿಗಣಿಸಿ

ಅದರಂತೆ ಅದೇ ಮೊತ್ತವನ್ನು ಮುಂಗಡವಾಗಿ ಇನ್ನು ಮುಂದೆ ನಿಯಮಿತವಾಗಿ ಜಿಲ್ಲಾ ಮಟ್ಟದ ಅಂಚೆ ಕಛೇರಿಯಲ್ಲಿ ಇಡಲು ಕ್ರಮ ವಹಿಸಲು ಸೂಚಿಸಿದೆ ಮತ್ತು ಯಾವುದೇ ಕಾರಣಕ್ಕೂ ಕೂಲಿಕಾರರ ಕೂಲಿ ಪಾವತಿಯ ವಿಳಂಬಕ್ಕೆ ಆಸ್ಪದ ಕೊಡದಂತೆ, ಎಚ್ಚರ ವಹಿಸುವುದು.

ತಮ್ಮ ವಿಶ್ವಾಸಿ,
ಸಹಿ/-
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 145 ಮಗಾಂಉಖಾಯೋ 2010 ದಿನಾಂಕ : 16–08–2010

**ಗೆ.**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿಗಳು
**ಧಾರವಾಡ/ಮಂಡ್ಯ/ಚಾಮರಾಜನಗರ/**
**ಗುಲ್ಬರ್ಗ/ಬಳ್ಳಾರಿ/ಚಿತ್ರದುರ್ಗ.**

**ಮಾನ್ಯರೆ,**

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಕೂಲಿಯನ್ನು ಮಾಹಿತಿ ತಂತ್ರಜ್ಞಾನ ನೆರವಿನಿಂದ (EBT – Electronic Benefit Transfer) ಸ್ಮಾರ್ಟ್ ಕಾರ್ಡ್ ಆಧಾರಿತ ಬ್ಯಾಂಕ್ ಖಾತೆಗಳ ಮೂಲಕ ಹಣ ಪಾವತಿಸುವ ಬಗ್ಗೆ.

ಉಲ್ಲೇಖ: EBT – Electronic Benefit Transfer ಯೋಜನೆ ಅನುಷ್ಠಾನ ಸಂಬಂಧ ದಿನಾಂಕ:27–07–2010 ರಂದು ನಡೆದ ಸಭಾ ನಡಾವಳಿಗಳು

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖದಲ್ಲಿನ ಸಭೆಯಲ್ಲಿ (EBT – Electronic Benefit Transfer) ಅನುಷ್ಠಾನದ ಕುರಿತು ಚರ್ಚಿಸಲಾಗಿರುತ್ತದೆ. ತಮಗೆ ಈಗಾಗಲೇ ತಿಳಿಸಿರುವಂತೆ EBT –Electronic Benefit Transfer ಯೋಜನೆಯನ್ನು ಪ್ರಾಯೋಗಿಕವಾಗಿ **ಧಾರವಾಡ, ಮಂಡ್ಯ, ಚಾಮರಾಜನಗರ, ಗುಲ್ಬರ್ಗ, ಬಳ್ಳಾರಿ, ಚಿತ್ರದುರ್ಗ** ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು ಜಿಲ್ಲೆಗಳಲ್ಲಿನ ಪ್ರತಿ ಗ್ರಾಮದಲ್ಲಿರುವ ಸಾಮಾಜಿಕ ಭದ್ರತಾ ಯೋಜನೆ ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಫಲಾನುಭವಿಗಳನ್ನು ಗುರುತಿಸಿ ಸದರಿಯವರ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದೆ. ಸದರಿ ಫಲಾನುಭವಿಗಳು ಸ್ಮಾರ್ಟ್ ಕಾರ್ಡ್ ಮೂಲಕ ಖಾತೆ ನಿರ್ವಹಿಸಬಹುದಾಗಿರುತ್ತದೆ. ಈ ಸ್ಮಾರ್ಟ್ ಕಾರ್ಡ್‌ಗೆ ಸಂಬಂಧಪಟ್ಟ ಬ್ಯಾಂಕ್‌ನಲ್ಲಿ ಒಂದು ಖಾತೆ ಇರುತ್ತದೆ.

ಫಲಾನುಭವಿಗಳೂ ಎಂ.ಜಿ.ಎನ್. ಆರ್.ಇ.ಜಿ.ಎ. ಕೂಲಿ ಕಾರ್ಮಿಕರು ಈ ಸ್ಮಾರ್ಟ್ ಕಾರ್ಡ್ ಮೂಲಕ ಬ್ಯಾಂಕ್‌ಗೆ ಹಣ ಪಡೆಯಲು ಕಡ್ಡಾಯವಾಗಿ ಬ್ಯಾಂಕ್‌ಗೆ ತೆರಳುವ ಅವಶ್ಯಕತೆ ಇಲ್ಲ. ಅವರು ಗ್ರಾಮಗಳಲ್ಲಿಯೇ ಬರುವ ಆಯಾ ಬ್ಯಾಂಕಿನ Business Correspondentನ ಮೂಲಕ ಸದರಿ ಖಾತೆಯ ಮೂಲಕ ಕೂಲಿ ಹಣ ಪಡೆಯಬಹುದು. ಈ ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯ ಕೂಲಿಕಾರರಿಗೆ ಹಣವನ್ನು ಪಾವತಿಸಬಹುದಾಗಿರುತ್ತದೆ. ಈ ವ್ಯವಸ್ಥೆಯನ್ನು ಕಡ್ಡಾಯವಾಗಿ ಬಳಕೆ ಮಾಡಿಕೊಂಡು ಕೂಲಿಯ ಹಣವನ್ನು ವಿತರಿಸಲು ಕ್ರಮ ವಹಿಸುವಂತೆ ತೀರ್ಮಾನಿಸಿದೆ.

ಆದ ಕಾರಣ ಪ್ರಾಯೋಗಿಕವಾಗಿ EBT ಯೋಜನೆಯನ್ನು ಕೈಗೆತ್ತಿಕೊಂಡಿರುವ ಜಿಲ್ಲೆಗಳಲ್ಲಿ ಈ ಪತ್ರಕ್ಕೆ ಲಗತ್ತಿಸಿರುವ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಜರೂರು ಕ್ರಮ ವಹಿಸಲು ಸೂಚಿಸಿದೆ.

1) ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯಡಿ ಉದ್ಯೋಗ ಚೀಟಿಗಳನ್ನು ಸ್ಮಾರ್ಟ್ ಕಾರ್ಡ್ ನೀಡುವುದನ್ನು ಖಚಿತಪಡಿಸಿಕೊಂಡು ಸದರಿ ಸ್ಮಾರ್ಟ್ ಕಾರ್ಡ್‌ನ ಬ್ಯಾಂಕ್ ಖಾತೆ ವಿವರ ಪಡೆದು MGNREGA-MIS ನಲ್ಲಿ ಖಾತಾ ವಿವರಗಳನ್ನು ದಾಖಲಿಸತಕ್ಕದ್ದು.

2) ಸ್ಮಾರ್ಟ್ ಕಾರ್ಡ್ ಹೊಂದಿರುವ ಕೂಲಿಕಾರರಿಗೆ ಕಡ್ಡಾಯವಾಗಿ ಈ ಸ್ಮಾರ್ಟ್ ಕಾರ್ಡಿನ ಬ್ಯಾಂಕ್ ಖಾತೆಗೆ ಹಣ ಪಾವತಿಸಲು ಕ್ರಮ ವಹಿಸುವುದು ಮತ್ತು ಯಾವುದೇ ಕಾರಣಕ್ಕೂ ಬೇರೆ ಖಾತೆಗೆ ಹಣ ಪಾವತಿಸತಕ್ಕದ್ದಲ್ಲ.

3) ಸ್ಮಾರ್ಟ್ ಕಾರ್ಡ್‌ನ್ನು ಕಡ್ಡಾಯವಾಗಿ, ಎಲ್ಲಾ ಫಲಾನುಭವಿಗಳಿಗೆ ನೀಡುವ ಮೂಲಕ ಈ ಯೋಜನೆಯನ್ನು ಯಶಸ್ವಿಗೊಳಿಸಬೇಕಾಗಿರುವುದರಿಂದ ದಿನಾಂಕ: 31–08–2010ರ ನಂತರ ಪಟ್ಟಿಯಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದ ಯಾವುದೇ ಕಾರಣಕ್ಕೂ ಎನ್‌ಆರ್‌ಇಜಿಎ ಹಣವನ್ನು ಸ್ಮಾರ್ಟ್ ಕಾರ್ಡ್ ಮೂಲಕವೇ ಪಾವತಿಸತಕ್ಕದ್ದು, ಆದ ಕಾರಣ ಈ ಸಂಬಂದ MGNREGA ಯೋಜನೆಯಲ್ಲಿನ ಫಲಾನುಭವಿಗಳಿಗೆ ತಪ್ಪದೇ ಸ್ಮಾರ್ಟ್ ಕಾರ್ಡ್ ನೀಡಲು ನಿಯೋಜಿಸಿರುವ ಸಂಸ್ಥೆಗಳ ನಿಯಮದಡಿ ನಿಗದಿತ ದಿನಾಂಕಗಳಲ್ಲಿ ಹಾಜರಾಗಿ ಸ್ಮಾರ್ಟ್ ಕಾರ್ಡ್ ಪಡೆಯಲು ಕ್ರಮ ವಹಿಸ ತಕ್ಕದ್ದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:** ನಿಯಂತ್ರಕರು (AM), ಆರ್ಥಿಕ ಇಲಾಖೆ ಇವರಿಗೆ ಮಾಹಿತಿಗಾಗಿ ಹಾಗೂ ಸ್ಮಾರ್ಟ್ ಕಾರ್ಡ್ ವಿತರಿಸಲು ನಿಯೋಜಿಸಿರುವ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಿದೆ.

ಅನಸೂ ರಾಗ್ಯಶ್ರೀ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 21 ಉಖಾಯೋ : 06

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 07–09–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರಿಗೆ ವೇಳಾಪಟ್ಟಿಯ ರೀತ್ಯಾ, ಕೂಲಿಯನ್ನು ಪಾವತಿಸುವ ಕುರಿತು.

**ಉಲ್ಲೇಖ:** ಕೇಂದ್ರ ಸರ್ಕಾರದ ಸುತ್ತೋಲೆಯ ಪತ್ರದ ಸಂ.ಎಂ–12014/8/2006–ಎನ್‌ಆರ್‌ಇಜಿಎ (Part) ದಿನಾಂಕ: 25–06–2009

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ 3ರ ಉಪ ಪ್ರಕರಣ(3)ರ ಪ್ರಕಾರ, ಯೋಜನೆಯಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಕೂಲಿಯನ್ನು ವಾರದ ಆಧಾರದ ಮೇಲೆ ಅಥವಾ 15 ದಿನಗಳಿಗೆ ಮೀರದಂತೆ ಪಾವತಿಸುವುದು ಕಡ್ಡಾಯವಾಗಿರುತ್ತದೆ. ಮತ್ತು ಕೂಲಿ ಪಾವತಿಯಲ್ಲಿ ವಿಳಂಬವಾದಲ್ಲಿ, ನ್ಯಾಯಯುತವಾದ ಕೂಲಿಯ ಹಣದ ಜೊತೆಗೆ, ಪರಿಹಾರ ಹಣವನ್ನು ನೀಡಬೇಕಾಗುತ್ತದೆ.

ಆದಕಾರಣ, ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ, ಕೂಲಿ ಕಾರ್ಮಿಕರಿಗೆ ಕೂಲಿಯ ಹಣವನ್ನು ವಿಳಂಬವಾಗದಂತೆ ಮತ್ತು ಆಡಳಿತಾತ್ಮಕ ಪ್ರಕ್ರಿಯೆಗಳಲ್ಲಿ ಆಗುವ ವಿಳಂಬವನ್ನು ಕಡಿಮೆ ಮಾಡಲು, ಹದಿನೈದು ದಿನಗಳೊಳಗೆ ಪಾವತಿಸಲು, ವೇಳಾ ಅನುಸೂಚಿತ ಪಟ್ಟಿಯನ್ನು ಸೂಚಿಸಿ ಲಗತ್ತಿಸಿ ತಿಳಿಸಿರುತ್ತದೆ. ಅನುಸೂಚಿತ ವೇಳಾಪಟ್ಟಿಗೆ ಒಳಗೊಂಡ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಮಾರ್ಗದರ್ಶನಕ್ಕಾಗಿ ಹಾಗೂ ಅದರಂತೆ, ಕ್ರಮ ವಹಿಸಲು ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 133 ಮಗಾಂಉಖಾಯೋ 2008 ದಿನಾಂಕ : 09–09–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಫಲಾನುಭವಿಗಳು, ಕಳೆದ ವರ್ಷ ಕಾಮಗಾರಿಗಳಲ್ಲಿ 15 ದಿನಗಳಿಗೆ ಮೇಲ್ಪಟ್ಟು ಕೆಲಸ ನಿರ್ವಹಿಸಿದವರಿಗೆ, ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 133, ಉಖಾಯೋ 2008 ದಿನಾಂಕ: 21.08.2010

2. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಸಂಖ್ಯೆ J-11060/9/2008. MGNREGA ದಿನಾಂಕ : 13.08.2010.

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಫಲಾನುಭವಿಗಳೂ ಕಳೆದ ವರ್ಷ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾಮಗಾರಿಗಳಲ್ಲಿ 15 ದಿನಗಳಿಗಿಂತ ಮೇಲ್ಪಟ್ಟು ಕೆಲಸ ನಿರ್ವಹಿಸಿದ್ದಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯ ಸೌಲಭ್ಯಗಳನ್ನು ವಿಸ್ತರಿಸುವಂತೆ ಕೋರಲಾಗಿದ್ದು, ಸದರಿ ಫಲಾನುಭವಿಗಳ ಮಾಹಿತಿಗಳನ್ನು ಕೇಂದ್ರ ಸರ್ಕಾರವು ನಿಗದಿ ಪಡಿಸಿರುವ ನಮೂನೆಯಲ್ಲಿ ಸಂಬಂದಿಸಿದವರಿಗೆ ಕಳುಹಿಸುವಂತೆ ಮತ್ತು ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಈಗ ಕೇಂದ್ರ ಸರ್ಕಾರವು ಉಲ್ಲೇಖ (2)ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 15 ದಿನಗಳಿಗೆ ಮೇಲ್ಪಟ್ಟು ಕೆಲಸ ನಿರ್ವಹಿಸಿದ ಎಲ್ಲ ಕೂಲಿಕಾರರಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯ ಆರೋಗ್ಯ ವಿಮೆಯ ಸೌಲಭ್ಯಗಳನ್ನು ವಿಸ್ತರಿಸುವ ವಿಷಯದ ಕುರಿತು, ಚರ್ಚಿಸಲು ಒಂದು ದಿನದ ಕಾರ್ಯಗಾರವನ್ನು ತ್ರಿವೇಂದ್ರಂನಲ್ಲಿ ಈ ತಿಂಗಳಿನ ಅಂತ್ಯದಲ್ಲಿ ಏರ್ಪಡಿಸಲಾಗಿದೆಯೆಂದು, ರಾಜ್ಯಕ್ಕೆ ತಿಳಿಸಿರುತ್ತಾರೆ. ಮತ್ತು ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ರಾಜ್ಯ ಮಟ್ಟದ ಅಧಿಕಾರಿಗಳನ್ನು ಆಹ್ವಾನಿಸಿರುತ್ತಾರೆ. ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು, ಉಲ್ಲೇಖ (1)ರಲ್ಲಿ ಕೋರಲಾದ ಮಾಹಿತಿಯನ್ನು

ಕೇಂದ್ರ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ ದಿನಾಂಕ : 20–9–2010 ರೊಳಗೆ Email ನಲ್ಲಿ ಮತು Hard Copy ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ಸದರಿ ವಿಷಯವನ್ನು ಅತಿ ಜರೂರು ಎಂದು ಪರಿಗಣಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರದ ನಡವಳಿಗಳು

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

**ವಿಷಯ : ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2009–10ನೇ ಸಾಲಿನ ಬಿಲ್ಲುಗಳ ಪಾವತಿ ಬಗ್ಗೆ.**

* * *

**ಪ್ರಸ್ತಾವನೆ**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ 2010–11ನೇ ಸಾಲಿನಲ್ಲಿ ಹಣವನ್ನು ಪಾವತಿಸುವ ಕುರಿತು ಸ್ಪಷ್ಟೀಕರಣವನ್ನು ನೀಡುವಂತೆ ಮನವಿಯನ್ನು ಹಾಗೂ ಈ ಬಿಲ್ಲುಗಳ ಪಾವತಿಗಾಗಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತಿವೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ 2009–10ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಗೆ 2010–11ನೇ ಸಾಲಿನಲ್ಲಿ ಹಣ ಪಾವತಿಸುವ ಕುರಿತು ಸ್ಪಷ್ಟ ನಿರ್ದೇಶನ ನೀಡಬೇಕಾಗಿರುವ ಅವಶ್ಯಕತೆ ಇರುತ್ತದೆ ಹಾಗೂ 2010–11ನೇ ಸಾಲಿನ ಕಾಮಗಾರಿಗಳಿಗೆ ಹಣ ಪಾವತಿಸುವ ಕುರಿತು ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಸ್ಪಷ್ಟಪಡಿಸಬೇಕಾಗಿರುತ್ತದೆ. ಭಾರತ ಸರ್ಕಾರದ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 143 ಮಗಾಂಉಖಾಯೊ 2010 ಬೆಂಗಳೂರು, ದಿನಾಂಕ : 05–10–2010**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಗೆ ಹಣ ಪಾವತಿಸುವ ಕುರಿತು ಹಾಗೂ 2010–11ನೇ ಸಾಲಿನ ಕಾಮಗಾರಿಗಳಿಗೆ ಹಣ ಪಾವತಿಸುವ ಸಂಬಂಧ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಆದೇಶಿಸಿದೆ.

1. 2009–10ನೇ ಸಾಲಿನಲ್ಲಿ ನಿರ್ವಹಿಸಿದ ಕಾಮಗಾರಿಯ ವಿವರಗಳನ್ನು 15–04–2010ರೊಳಗೆ ಎಂ.ಐ.ಎಸ್. ನಲ್ಲಿ ದಾಖಲಿಸದೇ ಇದ್ದರೆ ಅಂತಹ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ಹಣ ಪಾವತಿಸಲು ಅವಕಾಶ ಇರುವುದಿಲ್ಲ.
2. ಈಗಾಗಲೇ ಎಂ.ಐ.ಎಸ್. ನಲ್ಲಿ ದಾಖಲಿಸಿರುವ ಮುಂದುವರೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಾಸ್ತವವಾಗಿ ಕೂಲಿಕಾರರು ಕೆಲಸ ನಿರ್ವಹಿಸಿದ ಬಗ್ಗೆ ಎನ್.ಎಂ.ಆರ್. ಗಳನ್ನು ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ, ಸ್ಥಳ ತನಿಖೆ ನಡೆಸಿ ಕಾಮಗಾರಿಗಳು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು / ಜಿಲ್ಲಾ ಪರಿಶೀಲನಾ ತಂಡವು ಪೂರ್ಣಗೊಂಡಿರುವುದನ್ನು ದೃಢೀಕರಿಸಿದ ನಂತರವೇ ಹಣ ಪಾವತಿಸುವುದು. ಕೂಲಿಯ ಹಣವನ್ನು ಪಾವತಿಸುವಾಗ Validated Job Card ಹೊಂದಿರುವವರಿಗೆ ಮಾತ್ರ ಕೂಲಿ ಹಣವನ್ನು ಪಾವತಿಸಲು ಕ್ರಮ ಜರುಗಿಸುವುದು ಹಾಗೂ ಪಾವತಿ ದಿನಾಂಕವನ್ನು ತಪ್ಪದೇ ಎಂ.ಐ.ಎಸ್.ನಲ್ಲಿ ದಾಖಲಿಸುವುದು.
3. 2010–11ನೇ ಸಾಲಿನ ಎಂ.ಐ.ಎಸ್.ನಲ್ಲಿ ದಾಖಲಿಸದೇ ಯಾವುದೇ ಕಾಮಗಾರಿಗೆ ಹಣ ಪಾವತಿಸತಕ್ಕದ್ದಲ್ಲ. ಒಂದು ವೇಳೆ ಎಂ.ಐ.ಎಸ್.ನಲ್ಲಿ ದಾಖಲಿಸದೇ ಹಣ ಪಾವತಿಸಿದಲ್ಲಿ ಸಂಬಂಧಪಟ್ಟ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ಕಾರ್ಯಕ್ರಮ ಅಧಿಕಾರಿಯನ್ನು ನೇರವಾಗಿ ಹೊಣೆಗಾರರನ್ನಾಗಿಸಲಾಗುವುದು.

ಕರ್ನಾಟಕ ರಾಜ್ಯಪಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ


ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in


ಸಂ: ಗ್ರಾಅಪ 115 ಮಗಾಂಉಖಾಯೋ 2008 ದಿನಾಂಕ : 12–10–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ

**ಮಾನ್ಯರೇ,**

**ವಿಷಯ:** ಅಂಚೆ ಕಛೇರಿಗಳ ಮೂಲಕ ಉದ್ಯೋಗ ಖಾತರಿ ಯೋಜನೆಯ ಕೂಲಿ ಸಂದಾಯ ಮಾಡುವ ಕುರಿತು.

**ಉಲ್ಲೇಖ:** Chief Post Master General ಬೆಂಗಳೂರು ಇವರ ಪತ್ರದ ಸಂಖ್ಯೆ FS/10-2/MGNREGS/VI ದಿನಾಂಕ: 30–8–2010

* * *

ರಾಜ್ಯದ ಕೆಲವು ಜಿಲ್ಲಾ ಪಂಚಾಯತಿಗಳು ಮತ್ತು ಗ್ರಾಮ ಪಂಚಾಯಿತಿಯ ಪ್ರಾಧಿಕಾರದವರು, ಕ್ಷೇತ್ರ ಮಟ್ಟದಲ್ಲಿ. ಉದ್ಯೋಗ ಚೀಟಿ ಇಲ್ಲದೇ, ಕೂಲಿಕಾರ್ಮಿಕರಿಗೆ ಉಳಿತಾಯದ ಖಾತೆಯನ್ನು ತೆರೆಯಲು, ಒತ್ತಾಯಿಸುವುದನ್ನು ಉಲ್ಲೇಖದಲ್ಲಿ, Chief Post Master General ಬೆಂಗಳೂರು ಇವರು, ಸರ್ಕಾರಕ್ಕೆ ವರದಿ ಮಾಡಿದ್ದು, ಇದು, ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುತ್ತದೆ. ಎಂದು ತಿಳಿಸಿರುತ್ತಾರೆ ಮತ್ತು ಈ ರೀತಿ ಮರುಕಳಿಸಿದಂತೆ, ಸೂಕ್ತವಾದ ಸೂಚನೆಗಳನ್ನು ಜಿಲ್ಲಾ ಪಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಈ ಸಂಬಂಧ ಕೂಲಿಕಾರ್ಮಿಕರು ಉಳಿತಾಯದ ಖಾತೆಯನ್ನು ತೆರೆಯಬೇಕಾದರೆ, ಮೊದಲು, ಉದ್ಯೋಗ ಚೀಟಿ ಸಂಖ್ಯೆ, ವಿತರಿಸಿದ ದಿನಾಂಕ ಮತ್ತು ಉದ್ಯೋಗ ಚೀಟಿ ಗತಿಸುವ ದಿನಾಂಕ ಮುಂತಾದ ವಿವರಗಳನ್ನು ನಮೂದಿಸುವುದು ಅವಶ್ಯಕವಾಗಿರುತ್ತದೆ. ಈ ವಿವರಗಳನ್ನು ಖಚಿತ ಪಡಿಸಿಕೊಂಡು, ಕೂಲಿಕಾರ್ಮಿಕರಿಗೆ ಅಂಚೆ ಕಛೇರಿಯಲ್ಲಿ ಉಳಿತಾಯದ ಖಾತೆಗಳನ್ನು ತೆರೆಯಲು, ಕ್ರಮವಹಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 **E-mail : nrega-ka@nic.in**

ಸಂ: ಗ್ರಾಅಪ 115 ಉಖಾಯೋ 2008 ದಿನಾಂಕ : 10–11–2010

**ಗೆ.**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ
ಬೆಳಗಾಂ

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿಕಾರರ ಉಳಿತಾಯ ಖಾತೆಗಳನ್ನು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ತೆರೆಯಲು ಅನುಮತಿಸುವ ಕುರಿತು.

**ಉಲ್ಲೇಖ:** ತಮ್ಮ ಪತ್ರದ ಸಂ: ರಾಗ್ರಾಉ/ವಿವ/196/2010–11 ದಿ:22.10.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, ತಾವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉಳಿತಾಯದ ಖಾತೆಯನ್ನು ಡಿ.ಸಿ.ಸಿ ಬ್ಯಾಂಕ್‌ನಲ್ಲಿ ತೆರೆದು ನಿರ್ವಹಿಸಲು ಅನುಮತಿಯನ್ನು ನೀಡುವಂತೆ ಸರ್ಕಾರವನ್ನು ಕೋರಿರುವ ವಿಷಯವನ್ನು ಪರಿಶೀಲಿಸಿದೆ. ಕಾರ್ಯಾಚರಣೆ ಕೈಪಿಡಿ ಪರಿಷ್ಕೃತ 2008 ಖಂಡಿಕೆ 8 ರ ಅನ್ವಯ The account shall be opened in public sector Bank ಎಂದು ಸ್ಪಷ್ಟಪಡಿಸಲಾಗಿರುತ್ತದೆ. ಆದುದರಿಂದ ಸದರಿ ಯೋಜನೆಯಡಿ ಡಿ.ಸಿ.ಸಿ ಬ್ಯಾಂಕ್‌ನಲ್ಲಿ ಖಾತೆಗಳನ್ನು ತೆರೆಯಲು ಅವಕಾಶವಿರುವುದಿಲ್ಲವೆಂದು ಈ ಮೂಲಕ ತಿಳಿಸಿದೆ. ಒಂದು ವೇಳೆ ಡಿ.ಸಿ.ಸಿ ಬ್ಯಾಂಕ್‌ಗಳಲ್ಲಿ ಖಾತೆಗಳನ್ನು ತೆರೆದಿದ್ದರೆ, ಕೂಡಲೇ ರದ್ದುಪಡಿಸಿ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತೆರೆಯಲು ಕ್ರಮವಹಿಸುವುದು. ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಮತ್ತು ಮುಂದೆ ಆಗುಹೋಗುವ ಘಟನೆಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಯುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು: ರಾಜ್ಯದ ಉಳಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 21 ಉಖಾಯೋ 2006 ದಿನಾಂಕ : 29–11–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಡಿ ಕೂಲಿಕಾರರಿಗೆ ಕೂಲಿಯನ್ನು ಪಾವತಿಸುವಲ್ಲಿ ಆಗುತ್ತಿರುವ ವಿಳಂಬವನ್ನು ತಡೆಗಟ್ಟುವಲ್ಲಿ ಅನುಸರಿಸಬೇಕಾದ ಕ್ರಮಗಳು.

**ಉಲ್ಲೇಖ:** 1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : K-11011/2/2008 –NREGA MON)/TS ದಿನಾಂಕ 29.10.2010

2. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ :21: ಉಖಾಯೋ 2006 ದಿನಾಂಕ :07/09/2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (2)ರ ಪತ್ರವನ್ನು ಮುಂದುವರೆಸುತ್ತಾ ಉಲ್ಲೇಖ (1) ರಲ್ಲಿ ಕೇಂದ್ರ ಸರ್ಕಾರವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಡಿ ಕೂಲಿಕಾರರಿಗೆ ಕೂಲಿ ಪಾವತಿಸುವಲ್ಲಿ ಆಗುತ್ತಿರುವ ವಿಳಂಬವನ್ನು ತಡಗಟ್ಟಲು ಅನುಸರಿಸಬೇಕಾದ ಕ್ರಮಗಳ ಕುರಿತು ಮತ್ತಷ್ಟು ವಿಸ್ತೃತವಾದ ಸೂಚನೆಗಳನ್ನು ನೀಡಿರುತ್ತಾರೆ. ಸದರಿ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ ಮತ್ತು ಅದರಂತೆಯೇ ಕ್ರಮವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No. K-11060/3/2009-MGNREGA**
**Government of India**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi

Dated the 29th October, 2010

To,

**Principal Secretary/ Secretary**
Rural development Department
Government of : ——————————————-
: ——————————————-

Subject : Advisory regarding the measures to check delay in payments.

* * *

Sir/Madam,

1. Sub Section 3 of Section 3 of the Mahatma Gandhi NREGA Provides that the disbursement of daily wages shall be made on a weekly basis or in any case not later than a fortnight after the date or which such work was done. In case of delay in payment, the laabourers are entitled to receive payment of compensation as per the provisions of the Payment of Wages Act, 1936.
2. Delays in payment as per feedback received from states are due to shortage of staff leading to delay in measurement of work, non-updated Muster Rolls, Measurement Books. Limited infrastructure, including bank and post office branches, is another major factor.
3. In order to avoid administrative delays following orders have been issued by the Ministry to the States/UTs :
   a) The Operational Guidelines, 2008 provides that in order to avoid delays in clearance of cheques or shortage of staff in banks/post office branches or reluctance of bankers/postal authorities, State Government may discuss the matter in the State level banking coordination committee meetings and with the Post Master General of the State.
   b) Use 6% administrative expenses for placement and training of technical staff (circular dated March, 2009).

Under section 4- States are to make arrangements for the proper implementation of the Scheme. It is expected that the States have established administrative modalities for ensuring fortnightly wage payments. States have been advised (circular dated 4th March, 2010) to identify the unserved areas where the BC

a) model may be required and discuss with Banks the possibility of extending the BC model in these areas.

b) Ministry of Rural Development, GOI, is in discussions with the Department of Financial Services for the operationalization of BC Model.

c) To ensure payment of wages within a fortnight to all labourers, following time schedule is suggested via circular dated 25th June, 2010 which may be considered by the States to reduce administrative delays.

| Sno | Activity | Time Schedule |
|---|---|---|
| 1. | Closing of Muster Roll | 6th Day after start of the work. |
| 2. | Bringing muster roll & measurement book | 8th Day |
| 3. | i) Entry of Muster roll in MIS<br>ii) Generation of pay oder (consolidated as well individual) | 9th & 10th Day |
| 4. | i) Submission of pay order at the block post office/bank.<br>ii) Generating of wage slip<br>iii) Transfer of pay order at the village post office/bank | 11th Day & 12th Day |
| 5. | Deposit of wages in the account of wage earners. | 13th Day |
| 6. | Entry of disbursement of wage into MIS | 16th Day |

1. Module for integration of MGNREGA payments with Banks/Post Offices :

   In addition to this Ministry has developed a module where the Banks and Post Offices can login on the website (http://nrega.nic.in) and can receive the wage lists generated in the Gram Panchayat and sent to them.

The Financial Institutions can give details of credit of account of workers along with the amount credited. The system also facilitates the entry of date of disbursement of wages to the workers and hence can monitor the process wisely

Yours faithfully
Sd/-
**(AMITA SHARMA)**
Joint Secretary

# ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001
ದೂ. 080–22372738 Email : nregs_ka@nic.in

ಸಂಖ್ಯೆ : ಗ್ರಾಅಪ21ಉಖಾಯೋ2006 ದಿನಾಂಕ: 25–01–2011

ಗೆ,

1. ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲಾ ತಾಲ್ಲೂಕು ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

**ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಅಕುಶಲ ಕಾರ್ಮಿಕರಿಗೆ ಕನಿಷ್ಠ ಕೂಲಿ ದರವನ್ನು ರೂ. 100/– ರಿಂದ ರೂ. 125/–ಕ್ಕೆ ಹೆಚ್ಚಿಸುವ ಕುರಿತು.**

**ಉಲ್ಲೇಖ: ಕೇಂದ್ರ ಸರ್ಕಾರದ ಅಧಿಸೂಚನೆಯ ಸಂಖ್ಯೆ: ಜೆ–11011/1/2009–ಎಂಜಿಎನ್‌ಆರ್‌ಇಜಿಎ (ಪಿಟಿ) ದಿ: 14–01–2011**

* * *

ಕೇಂದ್ರ ಸರ್ಕಾರವು ಉಲ್ಲೇಖದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಅಕುಶಲ ಕಾರ್ಮಿಕರಿಗೆ ಪ್ರಸ್ತುತ ನೀಡುತ್ತಿರುವ ರೂ. 100/–ಗಳ ಕೂಲಿ ವೇತನದ ದರವನ್ನು ರೂ. 125/–ಗಳಿಗೆ ಹೆಚ್ಚಿಸಿ ದಿನಾಂಕ 01–01–2011ರಿಂದ ಅನ್ವಯವಾಗುವಂತೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಅಧಿಸೂಚನೆಯ ಪ್ರತಿಯನ್ನು ಈ ಪತ್ರದೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ. ಸದರಿ ಪರಿಷ್ಕೃತ ಕೂಲಿ ವೇತನದ ದರವನ್ನು ತತ್‌ಕ್ಷಣದಿಂದಲೇ ಜಾರಿಗೊಳಿಸಲು ಕ್ರಮ ವಹಿಸುವಂತೆ ಕೋರಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು :

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
10. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
11. ಆಯುಕ್ತರು, ಕಾರ್ಮಿಕ ಇಲಾಖೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು
12. ನಿರ್ದೇಶಕರು, ತೋಟಗಾರಿಕಾ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
13. ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು
14. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು
15. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು
16. ನಿರ್ದೇಶಕರು, ಖಜಾನೆ ಇಲಾಖೆ, ಒಂದನೇ ಮಹಡಿ, ಪೋಡಿಯಂ ಬ್ಲಾಕ್, ಬೆಂಗಳೂರು
17. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಸ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
18. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಂಜಿಎನ್‌ಆರ್‌ಇಜಿಎ) ಅರಣ್ಯ ಇಲಾಖೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
19. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ), ಕೆ.ಆರ್. ವೃತ್ತ, ಬೆಂಗಳೂರು
20. ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
21. ಎಲ್ಲಾ ನಿರ್ದೇಶಕರು/ಆಂತರಿಕ ಆರ್ಥಿಕ ಸಲಹೆಗಾರರು/ ಉಪಕಾರ್ಯದರ್ಶಿ (ಆಡಳಿತ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
22. ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು

रजिस्ट्री सं० डी० एल०-33004/99 REGD. NO. D. L.-33004/99

# भारत का राजपत्र
# The Gazette of India

असाधारण

EXTRAORDINARY

भाग II—खण्ड 3—उप-खण्ड (ii)

PART II—Section 3—Sub-section (ii)

प्राधिकार से प्रकाशित

PUBLISHED BY AUTHORITY

सं. 74] नई दिल्ली, शुक्रवार, जनवरी 14, 2011/पौष 24, 1932

No. 74] NEW DELHI, FRIDAY, JANUARY 14, 2011/PAUSA 24, 1932

## ग्रामीण विकास मंत्रालय

### अधिसूचना

नई दिल्ली, 14 जनवरी, 2011

**का.आ. 82(अ).**—केन्द्रीय सरकार, महात्मा गांधी राष्ट्रीय ग्रामीण रोजगार गारंटी अधिनियम, 2005 (2005 का 42) की धारा 6 की उप-धारा (1) द्वारा प्रदत्त शक्तियों का प्रयोग करते हुए तथा भारत सरकार के ग्रामीण विकास मंत्रालय के दिनांक 1 जनवरी, 2009 की अधिसूचना सं. का.आ. 1(अ) के अधिक्रमण में, इसे अधिक्रमित करने से पहले किए जाने वाले अथवा नहीं किए जाने वाले कार्यों को छोड़कर, नीचे दी गई अनुसूची के कॉलम (2) में उल्लिखित राज्य अथवा संघ राज्य क्षेत्र के मामले में उक्त अधिनियम के अंतर्गत विभिन्न योजनाओं के तहत कार्यरत अकुशल शारीरिक कामगारों को दी जाने वाली मजदूरी दर को तारीख 1 जनवरी, 2011 से कॉलम (3) के तहत निर्धारित करती है, अर्थात् :—

अकुशल शारीरिक कामगारों के लिए राज्य-वार मजदूरी दर
(रु. प्रति दिन)

| क्र. सं. | राज्य/संघ राज्य क्षेत्र का नाम | प्रति दिन मजदूरी दर |
|---|---|---|
| (1) | (2) | (3) |
| 1 | असम | 130.00 रु. |
| 2 | आंध्र प्रदेश | 121.00 रु. |
| 3 | अरूणाचल प्रदेश | क्षेत्र-I (118.00 रु.) |
| | | क्षेत्र-II (118.00 रु.) |
| 4 | बिहार | 120.00 रु. |
| 5 | गुजरात | 124.00 रु. |
| 6 | हरियाणा | 179.00 रु. |
| 7 | हिमाचल प्रदेश | गैर-अनुसूचित क्षेत्र के लिए 120.00 रु. |
| | | अनुसूचित क्षेत्र के लिए 150.00 रु. |
| 8 | जम्मू व कश्मीर | 121.00 रु. |
| 9 | कर्नाटक | 125.00 रु. |
| 10 | केरल | 150.00 रु. |
| 11 | मध्य प्रदेश | 122.00 रु. |
| 12 | महाराष्ट्र | 127.00 रु. |
| 13 | मणिपुर | 126.00 रु. |
| 14 | मेघालय | 117.00 रु. |
| 15 | मिजोरम | 129.00 रु. |
| 16 | नागालैंड | 118.00 रु. |
| 17 | उड़ीसा | 125.00 रु. |
| 18 | पंजाब | |
| 18(क) | होशियारपुर | 124.00 रु. |
| 18(ख) | जालंधर | 124.00 रु. |
| 18(ग) | नवांशहर | 124.00 रु. |
| 18(घ) | अमृतसर | 130.00 रु. |
| 19 | राजस्थान | 119.00 रु. |
| 20 | सिक्किम | 118.00 रु. |
| 21 | तमिलनाडु | 119.00 रु. |

रजिस्ट्री सं० डी० एल०-33004/99

REGD. NO. D. L.-33004/99

भारत का राजपत्र
The Gazette of India

असाधारण

EXTRAORDINARY

भाग-II—खण्ड 3—उप-खण्ड (ii)

PART II—Section 3—Sub-section (ii)

प्राधिकार से प्रकाशित

PUBLISHED BY AUTHORITY

सं. 74] नई दिल्ली, शुक्रवार, जनवरी 14, 2011/पौष 24, 1932

No. 74] NEW DELHI, FRIDAY, JANUARY 14, 2011/PAUSA 24, 1932

## ग्रामीण विकास मंत्रालय

### अधिसूचना

नई दिल्ली, 14 जनवरी, 2011

का.आ. 82(अ).—केन्द्रीय सरकार, महात्मा गांधी राष्ट्रीय ग्रामीण रोजगार गारंटी अधिनियम, 2005 (2005 का 42) की धारा 6 की उप-धारा (1) द्वारा प्रदत्त शक्तियों का प्रयोग करते हुए तथा भारत सरकार के ग्रामीण विकास मंत्रालय के दिनांक 1 जनवरी, 2009 की अधिसूचना सं. का.आ. 1(अ) के अधिक्रमण में, इसे अधिक्रमित करने से पहले किए जाने वाले अथवा नहीं किए जाने वाले कार्यों को छोड़कर, नीचे दी गई अनुसूची के कॉलम (2) में उल्लिखित राज्य अथवा संघ राज्य क्षेत्र के मामले में उक्त अधिनियम के अंतर्गत विभिन्न योजनाओं के तहत कार्यरत अकुशल शारीरिक कामगारों को दी जाने वाली मजदूरी दर को तारीख 1 जनवरी, 2011 से कॉलम (3) के तहत निर्धारित करती है, अर्थात् :—

अकुशल शारीरिक कामगारों के लिए राज्य-वार मजदूरी दर (रु. प्रति दिन)

| क्र. सं. | राज्य/संघ राज्य क्षेत्र का नाम | प्रति दिन मजदूरी दर |
|---|---|---|
| (1) | (2) | (3) |
| 1 | असम | 130.00 रु. |
| 2 | आंध्र प्रदेश | 121.00 रु. |
| 3 | अरूणाचल प्रदेश | क्षेत्र-I (118.00 रु.) |
| | | क्षेत्र-II (118.00 रु.) |
| 4 | बिहार | 120.00 रु. |
| 5 | गुजरात | 124.00 रु. |
| 6 | हरियाणा | 179.00 रु. |
| 7 | हिमाचल प्रदेश | गैर-अनुसूचित क्षेत्र के लिए 120.00 रु. |
| | | अनुसूचित क्षेत्र के लिए 150.00 रु. |
| 8 | जम्मू व कश्मीर | 121.00 रु. |
| 9 | कर्नाटक | 125.00 रु. |
| 10 | केरल | 150.00 रु. |
| 11 | मध्य प्रदेश | 122.00 रु. |
| 12 | महाराष्ट्र | 127.00 रु. |
| 13 | मणिपुर | 126.00 रु. |
| 14 | मेघालय | 117.00 रु. |
| 15 | मिजोरम | 129.00 रु. |
| 16 | नागालैंड | 118.00 रु. |
| 17 | उड़ीसा | 125.00 रु. |
| 18 | पंजाब | |
| 18(क) | होशियारपुर | 124.00 रु. |
| 18(ख) | जालंधर | 124.00 रु. |
| 18(ग) | नवांशहर | 124.00 रु. |
| 18(घ) | अमृतसर | 130.00 रु. |
| 19 | राजस्थान | 119.00 रु. |
| 20 | सिक्किम | 118.00 रु. |
| 21 | तमिलनाडु | 119.00 रु. |

| (1) | (2) | (3) |
|---|---|---|
| 22 | त्रिपुरा | 118.00 रु. |
| 23 | उत्तर प्रदेश | 120.00 रु. |
| 24 | प. बंगाल | 130.00 रु. |
| 25 | छत्तीसगढ़ | 122.00 रु. |
| 26 | झारखण्ड | 120.00 रु. |
| 27 | उत्तराखण्ड | 120.00 रु. |
| 28 | गोवा | 138.00 रु. |
| 29 | अंडमान व निकोबार | अंडमान जिला 170.00 रु.<br>निकोबार जिला 181.00 रु. |
| 30 | दादर व नगर हवेली | 138.00 रु. |
| 31 | दमन व दीव | 126.00 रु. |
| 32 | लक्षद्वीप | 138.00 रु. |
| 33 | पुदुचेरी | 119.00 रु. |
| 34 | चंडीगढ़ | 174.00 रु. |

[फा. सं. जे-11011/1/2009-एमजीएनआरईजीए( भाग) ]

पी. के पाधी, मुख्य आर्थिक सलाहकार

## MINISTRY OF RURAL DEVELOPMENT

## NOTIFICATION

New Delhi, the 14th January, 2011

**S.O. 82(E).**—In exercise of the powers conferred by sub-section (1) of Section 6 of the Mahatma Gandhi National Rural Employment Guarantee Act, 2005 (42 of 2005), and in supersession of the notification of the Government of India in the Ministry of Rural Development number S.O. 1(E), dated the 1st January, 2009, except as respects things done or omitted to be done before such supersession, the Central Government hereby specifies the wage rate payable to the unskilled manual workers under column (3) in respect of the State or the Union Territory mentioned in column (2) of the Schedule given below, working on various Schemes under the said Act, with effect from the 1st day of January, 2011, namely :—

**State Wise Wage rate for Unskilled Manual Workers (Rs. per Day)**

| S. No. | Name of State/Union Territory | Wage rate in Rs. per Day |
|---|---|---|
| (1) | (2) | (3) |
| 1 | Assam | Rs. 130.00 |
| 2 | Andhra Pradesh | Rs. 121.00 |
| 3 | Arunachal Pradesh | Area-I (Rs. 118.00)<br>Area -II(Rs. 118.00) |
| 4 | Bihar | Rs. 120.00 |
| 5 | Gujarat | Rs. 124.00 |
| 6 | Haryana | Rs. 179.00 |
| 7 | Himachal Pradesh | Non-scheduled Areas-Rs. 120.00<br>Scheduled Areas-Rs. 150.00 |
| 8 | Jammu and Kashmir | Rs. 121.00 |
| 9 | Karnataka | Rs. 125.00 |
| 10 | Kerala | Rs. 150.00 |
| 11 | Madhya Pradesh | Rs. 122.00 |
| 12 | Maharashtra | Rs. 127.00 |
| 13 | Manipur | Rs. 126.00 |
| 14 | Meghalaya | Rs. 117.00 |
| 15 | Mizoram | Rs. 129.00 |
| 16 | Nagaland | Rs. 118.00 |
| 17 | Orrisa | Rs. 125.00 |
| 18 | Punjab | |
| 18(a) | Hoshiarpur | Rs. 124.00 |
| 18(b) | Jalandhar | Rs. 124.00 |
| 18(c) | Nawanshar | Rs. 124.00 |
| 18(d) | Amritsar | Rs. 130.00 |
| 19 | Rajasthan | Rs. 119.00 |
| 20 | Sikkim | Rs. 118.00 |
| 21 | Tamil Nadu | Rs. 119.00 |
| 22 | Tripura | Rs. 118.00 |
| 23 | Uttar Pradesh | Rs. 120.00 |
| 24 | West Bengal | Rs. 130.00 |
| 25 | Chhatisgarh | Rs. 122.00 |
| 26 | Jharkhand | Rs. 120.00 |
| 27 | Uttrakhand | Rs. 120.00 |
| 28 | Goa | Rs. 138.00 |
| 29 | Andaman and Nikobar | Andaman District Rs. 170.00<br>Nikobar District Rs. 181.00 |
| 30 | Dadra and Nagar Haveli | Rs. 138.00 |
| 31 | Daman & Diu | Rs. 126.00 |
| 32 | Lakshadweep | Rs. 138.00 |
| 33 | Punducherry | Rs. 119.00 |
| 34 | Chandigarh | Rs. 174.00 |

[F. No. J-11011/1/2009-MGNREGA (Pt)]

P. K. PADHY, Chief Economic Advisor

Printed by the Manager, Govt. of India Press, Ring Road, Mayapuri, New Delhi-110064 and Published by the Controller of Publications, Delhi-110054.

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001
ದೂ. 080–22372738 Email : nregs_ka@nic.in

ಸಂಖ್ಯೆ : ಗ್ರಾಅಪ21ಉಖಾಯೋ2006 ದಿನಾಂಕ : 08–02–2011

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಕುಶಲ ಕಾರ್ಮಿಕರಿಗೆ ಕನಿಷ್ಠ ಕೂಲಿ ದರವನ್ನು ದಿನಾಂಕ: 01–01–2011 ರಿಂದ ಅನ್ವಯವಾಗುವಂತೆ ರೂ. 100/– ರಿಂದ ರೂ. 125/–ಕ್ಕೆ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ಅನುಸೂತ ದರವನ್ನು ನಿಗಧಿಪಡಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರದ ಸಂಖ್ಯೆ : ಗ್ರಾಅಪ/21/ಉಖಾಯೋ/2006 ದಿನಾಂಕ: 25–01–2011
2. ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ/05/ಉಖಾಯೋ/2008 ದಿನಾಂಕ: 23–12–2009

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಉಲ್ಲೇಖ (1)ರಲ್ಲಿ ಅಕುಶಲ ಕಾರ್ಮಿಕರ ಕೂಲಿ ವೇತನವನ್ನು ರೂ. 100/– ರಿಂದ ರೂ. 125/–ಕ್ಕೆ ಹೆಚ್ಚಿನ ದಿನಾಂಕ : 01–01–2011 ರಿಂದ ಅನ್ವಯವಾಗುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ಬರಲು ತಿಳಿಸಿರುವುದು ಸರಿಯಷ್ಟೇ. ಪರಿಷ್ಕೃತ ಕೂಲಿ ದರವನ್ನು ನಿಗಧಿಪಡಿಸಿದ ಮೇಲೆ ಅನುಸೂಚಿತ ದರವನ್ನು ನಿಗಧಿಪಡಿಸಿ ಕಾಮಗಾರಿಗಳ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಲು ತಿಳಿಸಬೇಕೆಂದು ಕೆಲವು ಅನುಷ್ಠಾನಾಧಿಕಾರಿಗಳು ಅಭಿಪ್ರಾಯಪಟ್ಟು ಅದೇ ನಿರೀಕ್ಷಣೆಯಲ್ಲಿರುತ್ತಾರೆಂದು ಭಾವಿಸಲಾಗಿದೆ. ಉಲ್ಲೇಖ (2)ರಲ್ಲಿ ದಿನಾಂಕ: 23–12–2009ರಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಕುಶಲ ಕಾರ್ಮಿಕರು ದಿನವೊಂದಕ್ಕೆ ಒಂದು ಗಂಟೆ ವಿರಾಮವೂ ಸೇರಿದಂತೆ ಒಟ್ಟು 9 ಗಂಟೆಗಳ ಕಾಲದ ಕೆಲಸವನ್ನು ನಿರ್ವಹಿಸಲು ಕೆಲಸದ ಪ್ರಮಾಣವನ್ನು ಘಟಕದ ದರದೊಂದಿಗೆ ಆಯಾ ವರ್ಷಗಳಲ್ಲಿ ಪರಿಷ್ಕರಣೆಯಾದ ಕೂಲಿ ದರಗಳನ್ನು ಅನ್ವಯಿಸಿ ವಿವರಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಕನಿಷ್ಠ ಕೂಲಿ ದರವು ಕಾಲಕಾಲಕ್ಕೆ ಬದಲಾವಣೆಯಾಗುವ ವಿಷಯವು ತಮ್ಮೆಲ್ಲರಿಗೂ ತಿಳಿದಿರುತ್ತದೆ. ಈ ರಀತಿ ಕೂಲಿ ದರವು ಬದಲಾವಣೆಯಾದ ಪ್ರತಿ ಸಮಯದಲ್ಲೂ ಕೆಲಸದ ಪ್ರಮಾಣವನ್ನು ಬದಲಿಸುವ ಅಗತ್ಯವಿರುವುದಿಲ್ಲ ಮತ್ತು ಘಟಕವು ದರವು ಬದಲಾವಣೆಯಾಗುತ್ತದೆ. ಈ ನಿಟ್ಟಿನಲ್ಲಿ ಕೆಲಸದ ಪ್ರಮಾಣವು ಪ್ರತಿ ಸಮಯದಲ್ಲೂ ನಿರಂತರವಾಗಿ ಒಂದೇ ತೆರನಾಗಿರುತ್ತದೆ. (Output remains constant per person days irrespective of wages)

ಆದ ಕಾರಣ ಉಲ್ಲೇಖ (2)ರಲ್ಲಿ ಈಗಾಗಲೇ ಹೊರಡಿಸಿರುವ ಅನುಸೂಚಿತ ದರದಂತೆ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು / ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ಮೂಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು
4. ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾಯನಿರ್ವಾಹಕ ಅಧಿಕಾರಿಗಳು.

**ಪ್ರತಿಯನ್ನು**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂಚಾಯತ್‌ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಗುಲ್ಬರ್ಗಾ / ಬೆಳಗಾಂ.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಹೆಚ್ಚಿನ ಪ್ರತಿಗಳು / ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001
ದೂ. 080–22372738 Email : nregs_ka@nic.in

ಸಂಖ್ಯೆ : ಗ್ರಾಅಪ167ಉಖಾಯೋ2010 ದಿನಾಂಕ : 24–03–2011

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಖಾತರಿ ಯೋಜನೆಯಡಿ ಕನಿಷ್ಠ ಕೂಲಿ ವೇತನವನ್ನು ಕಾರ್ಮಿಕರಿಗೆ ಪಾವತಿಸುವ ಕುರಿತು

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನ ಸಂಬಂಧ ರಾಜ್ಯಮಟ್ಟದಿಂದ ಹಿರಿಯ ಅಧಿಕಾರಿಗಳು ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ನಿಗದಿಪಡಿಸಿದ ಕನಿಷ್ಠ ಕೂಲಿ ವೇತನಕ್ಕಿಂತ ಹೆಚ್ಚಿನ ಕೂಲಿ ವೇತನವನ್ನು ಕೂಲಿ ಕಾರ್ಮಿಕರಿಗೆ ಪಾವತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದಲ್ಲದೇ ಎಂಐಎಸ್‌ನಲ್ಲೂ ಕೂಡ ವೀಕ್ಷಿಸಿದಾಗ ಕೂಲಿಯನ್ನು ಕನಿಷ್ಠ ವೇತನಕ್ಕಿಂತ ಹೆಚ್ಚಿಗೆ ಪಾವತಿಸಿರುವುದು ಗಮನಿಸಲಾಗಿದೆ. ಇದು ಅಧಿನಿಯಮಕ್ಕೆ ವ್ಯತಿರಿಕ್ತವಾಗಿರುತ್ತದೆ. ಅಧಿನಿಯಮದ ಪ್ರಕಾರ ಕನಿಷ್ಠ ಕೂಲಿ ದರಕ್ಕಿಂತ ಹೆಚ್ಚಿನ ಕೂಲಿ ಹಣವನ್ನು ಪಾವತಿಸುವಂತಿಲ್ಲವೆಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರವು ತಿಳಿಸಿರುತ್ತದೆ. ಆದ್ದರಿಂದ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳು ಹೆಚ್ಚಿನ ಕೂಲಿ ವೇತನವನ್ನು ಪಾವತಿಸದಂತೆ ಎಲ್ಲಾ ಅವಶ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ

2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001

ದೂ : 080-22372738 E-mail : nregs-ka@nic.in

ಗ್ರಾಅಪ :08 :ಉಖಾಯೋ:2008 ದಿನಾಂಕ : 22-07-2011

## ಸುತ್ತೋಲೆ

ವಿಷಯ: ಕೂಲಿ ಕಾರ್ಮಿಕರ ಕೂಲಿ ವೇತನವನ್ನು ನೇರವಾಗಿ ರಾಜ್ಯದ ನಿಧಿಯಿಂದ ಅವರುಗಳು ಉಳಿತಾಯದ ಖಾತೆಗಳಿಗೆ

Electronic Transfer ಮೂಲಕ ಜಮೆ ಮಾಡುವ ಕುರಿತು.

ಉಲ್ಲೇಖ: ದಿನಾಂಕ : 27-06-2011 ರಂದು ನೆಲಮಂಗಲ ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಸಭೆಯನ್ನು ನಡೆಸಿರುವ ಕುರಿತು.

ದಿನಾಂಕ : 11-07-2011ರಂದು ಸದರಿ ವಿಷಯದ ಕುರಿತು, ನಿರ್ದೇಶಕರ ಕೊಠಡಿಯಲ್ಲಿ ನಡೆದ ಸಭೆಯ ನಡವಳಿಗಳು.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಕೂಲಿ ಕಾರ್ಮಿಕರಿಗೆ ಕೂಲಿ ವೇತನವನ್ನು ಪಾವತಿಸುತ್ತಿರುವ ಪ್ರಸ್ತುತ ಪದ್ಧತಿಯನ್ನು ಸುವ್ಯವಸ್ಥೆಗೊಳಿಸಲು, ಕೂಲಿಕಾರರು ದುಡಿದ ಕೂಲಿಯು ಮಧ್ಯವರ್ತಿಗಳ ಹಾವಳಿಯಿಂದ ದುರುಪಯೋಗವಾಗದಿರಲು ಹಾಗೂ ಸಕಾಲದಲ್ಲಿ ಪಾವತಿಸುವ ಸಲುವಾಗಿ, ಕೂಲಿಕಾರರ ಕೂಲಿ ವೇತನವನ್ನು ನೇರವಾಗಿ ನಿರ್ದೇಶನಾಲಯದ ರಾಜ್ಯದ ನಿಧಿಯಿಂದ ನೇರವಾಗಿ ಅವರುಗಳ ಉಳಿತಾಯದ ಖಾತೆಗಳಿಗೆ ಜಮೆ ಮಾಡಲು, ಪ್ರಾಯೋಗಿಕವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕನ್ನು ಪರೀಕ್ಷೆಗೆ ಒಳಪಡಿಸಿ, ಫಲಿತಾಂಶವನ್ನು ತಿಳಿದುಕೊಳ್ಳಲು ಆಯ್ಕೆ ಮಾಡಿದ್ದು, ಇದರ ಸಲುವಾಗಿ ನೆಲಮಂಗಲ ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ದಿನಾಂಕ 27-06-2011ರಂದು ಸಭೆಯನ್ನು ನಡೆಸಿದ್ದು, ಅಲ್ಲಿಂದ ಅದೇ ದಿನ ರಾಜ್ಯದಿಂದ ಆಗಮಿಸಿದ ತಂಡವು ನೆಲಮಂಗಲ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಬರುವ ಹಸಿರುವಳ್ಳಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಸಮೀಕ್ಷೆ ಮತ್ತು ಅಧ್ಯಯನ ನಡೆಸಿರುವುದು ತಮಗೆ ತಿಳಿದಿರುವ ವಿಷಯವಾಗಿರುತ್ತದೆ. ಮುಂದುವರೆದು, ರಾಜ್ಯ ಮಟ್ಟದಲ್ಲೂ ಕೂಡ ಉಲ್ಲೇಖ (2)ರಲ್ಲಿ ಇದರ ಸಂಬಂಧ ಸಭೆಯನ್ನು ನಡೆಸಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಈ ಸಂಬಂಧ ಈ ಕೆಳಗೆ ತಿಳಿಸಿರುವ ಅಂಶಗಳಂತೆ ಕ್ರಮವಹಿಸಲು ಸೂಚಿಸಿದೆ.

1. ಮೊದಲಿಗೆ ನೆಲಮಂಗಲ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ Job card validation ಮಾಡಿರುವ ಸಂಖ್ಯೆಗೆ ಅನುಗುಣವಾಗಿ ಉದ್ಯೋಗ ಚೀಟಿಗಳನ್ನು ಹೊಂದಿರುವ ಕಾರ್ಮಿಕರ ಕುಟುಂಬಗಳು ಅಂಚೆ ಕಛೇರಿಗಳಲ್ಲಿ ಸಹಕಾರ ಬ್ಯಾಂಕುಗಳಲ್ಲಿ /ವ್ಯವಸಾಯ ಉತ್ಪನ್ನ ಸೇವಾ ಸಹಕಾರ ಸಂಘಗಳಲ್ಲಿ ತೆರೆದಿರುವ ಉಳಿತಾಯದ ಖಾತೆಗಳನ್ನು ಕೂಡಲೇ ಮುಕ್ತಾಯಗೊಳಿಸಿ ಕೋರ್ ಬ್ಯಾಂಕಿಂಗ್ ಸೌಲಭ್ಯಗಳನ್ನು ಹೊಂದಿರುವ ಬ್ಯಾಂಕುಗಳಲ್ಲಿ ಖಾತೆಗಳಲ್ಲಿ ತೆರೆಯುವಂತೆ ಕೂಲಿಕಾರರಿಗೆ ಮನವರಿಕೆ ಮಾಡಲು ಕ್ರಮ ಜರುಗಿಸುವುದು.
2. ನೆಲಮಂಗಲ ತಾಲ್ಲೂಕು ಪಂಚಾಯಿತಿಯ ವ್ಯಾಪ್ತಿ ಬರುವ ಎಲ್ಲಾ ಗ್ರಾಮ ಪಂಚಾಯಿತಗಳಲ್ಲಿ ಇನ್ನು ಮುಂದೆ ಯಾವುದೇ ಕೂಲಿ ಕಾರ್ಮಿಕರು ಹೊಸದಾಗಿ ಅಂಚೆ ಕಛೇರಿಗಳಲ್ಲಿ /ಸಹಕಾರ ಬ್ಯಾಂಕುಗಳಲ್ಲಿ ವ್ಯವಸಾಯ ಉತ್ಪನ್ನ ಸೇವಾ ಸಹಕಾರ ಸಂಘಗಳಲ್ಲಿ ಖಾತೆಗಳನ್ನು ತೆರೆಯದಂತೆ ಕ್ರಮ ವಹಿಸುವುದು.
3. ಕಾರ್ಮಿಕರ ಉಳಿತಾಯದ ಖಾತೆಗಳನ್ನು National Electronic financial Transaction (NEFT)

ಸೌಲಭ್ಯದ ಪದ್ಧತಿ ಇರುವ ಕೋರ್ ಬ್ಯಾಂಕಿಂಗ್ ಶಾಖೆಗಳಲ್ಲಿ ತೆರೆಯಲು ಕ್ರಮ ಜರುಗಿಸುವುದು.

4. ಅಂಚೆ ಕಛೇರಿಯಲ್ಲಿ ಮತ್ತು ಸಹಕಾರ ಸಂಘದ ಬ್ಯಾಂಕುಗಳಲ್ಲಿ ಇರುವ ಉಳಿತಾಯದ ಖಾತೆಗಳನ್ನು ಕೂಡಲೇ ಕೋರ್ ಬ್ಯಾಂಕಿಂಗ್ ಸಿಸ್ಟಮಿರುವ ಶಾಖೆಗಳಿಗೆ ವರ್ಗಾಯಿಸುವುದು ಮತ್ತು ಈ ಸಂಬಂಧ ಕೈಗೊಂಡ ಕ್ರಮದ ವರದಿಗಯನ್ನು ಸರಕಾರಕ್ಕೆ ಸಲ್ಲಿಸುವುದು.
5. ಬ್ಯಾಂಕುಗಳಿಗೆ ಕಾರ್ಮಿಕರ ಹೆಸರು, ಐಎಫ್ಎಸ್‌ಸಿ ಸಂಕೇತವುಳ್ಳ ಕಾರ್ಮಿಕರ ಉಳಿತಾಯದ ಖಾತೆ ಶಂಕ್ಯೆ ಇತ್ಯಾದಿ ವಿವರಗಳನ್ನು ಒದಗಿಸುವುದು.

ಮೇಲೆ ಸೂಚಿಸಿರುವ ಎಲ್ಲಾ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿಯನ್ನು ದಿನಾಂಕ 16–08–2011ರೊಳಗೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ನಿಗದಿಪಡಿಸಿದ ದಿನಾಂಕವೇ ಅಂತಿಮ ಗಡುವಾಗಿರುತ್ತದೆ. ಇದರ ಸಂಬಂಧ ಯಾವುದೇ ಸಂದೇಹಗಳಿಗೆ ಅಥವಾ ಸ್ಪಷ್ಟೀಕರಣಕ್ಕಾಗಿ ಈ ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸುವುದು ಮತ್ತು ಸದರಿ ಅಧಿಕಾರಿಗಳ ದೂರವಾಣಿ ಮತ್ತು ಇ–ಮೇಲ್ ವಿಳಾಸದ ವಿವರಗಳನ್ನು ಅವರ ಹೆಸರಿನ ಜೊತೆಯಲ್ಲಿ ನಮೂದಿಸಿದೆ.

1. ಶ್ರೀ ಬಿ.ಎಸ್. ಮುರಳಿ
   ಲೆಕ್ಕ ಪರಿಶೋಧನಾ ಅಧಿಕಾರಿ,
   ದೂರವಾಣಿ ಸಂಖ್ಯೆ: 080–22342161
   ಮೊಬೈಲ್ ಸಂಖ್ಯೆ: 94808–50029

2. ಶ್ರೀ ಚೇತನ್ ಐವಾಲಿ
   ಕಾರ್ಯಕ್ರಮ ವ್ಯವಸ್ಥಾಪಕರು
   ದೂರವಾಣಿ ಸಂಖ್ಯೆ: 080–22342162
   ಮೊಬೈಲ್ ಸಂಖ್ಯೆ: 94808–50070
   ಕಛೇರಿಯ ಇ–ಮೇಲ್ ವಿಳಾಸ: nregs_ka@nic.in

**(ಪಿ.ಶಿವಶಂಕರ)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ನೆಲಮಂಗಲ ಇವರ ಮಾಹಿತಿಗಾಗಿ ಕಳುಹಿಸಿದೆ. ಸದರಿ ಮೇಲಿನ ವಿಚಾರವನ್ನು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ತಪ್ಪದೆ ಸೂಕ್ತವಗಿ ತಿಳಿಸಿ ಅದರಂತೆ ಕ್ರಮವಹಿಸಲು ಸೂಚಿಸಿ ಮಾಹಿತಿಯನ್ನು ಗ್ರಾಮ ಪಂಚಾಯಿತಿವಾರು ಪಡೆದು ಕ್ರೋಢೀಕರಿಸಿ ಸರ್ಕಾರಕ್ಕೆ ಮೇಳೆ ತಿಳಿಸಿರುವ ದಿನಾಂಕದೊಳಗೆ ಮುಖ್ಯಕಾರ್ಯನಿರ್ವಾಹಕ ಅಧಿಅಕರಿ ಜಿಲ್ಲಾ ಪಂಚಾಯಿತಿ ಬೆಂಗಳೂರು ಗ್ರಾಮಾಂತರ ಇವರ ಮೂಲಕ ಸಲ್ಲಿಸಲು ಸೂಚಿಸಿದೆ.

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ (ಪ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
2. ಮುಖ್ಯಸ್ಥರು, ಹಣಕಾಸು ಮತ್ತು ಲೆಕ್ಕಪತ್ರಗಳು ಎಂಜಿಎನ್‌ಆರ್‌ಇಜಿಎಸ್ ನಿರ್ದೇಶನಾಲಯ, ಬೆಂಗಳೂರು
3. ಶ್ರೀ ಬಿ.ಜಿ. ಪಾಟೀಲ್, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಎಸ್‌ಬಿಎಂ, ಜೀ ಸೇವಾ, ಬೆಂಗಳೂರು
4. ಮೆ. ಶೋಭಾ ಲತಾ ದೇವಿ, ಉಪವ್ಯವಸ್ಥಾಪಕರು, ಎಂಜಿಎನ್‌ಆರ್‌ಇಜಿಎಸ್ ನಿರ್ದೇಶನಾಲಯ, ಬೆಂಗಳೂರು
5. ಶ್ರೀ ಬಿ.ಎಸ್. ಮುರುಳಿ, ಲೆಕ್ಕಪರಿಶೋಧನಾ ಎಂಜಿಎನ್‌ಆರ್‌ಇಜಿಎಸ್ ನಿರ್ದೇಶನಾಲಯ, ಬೆಂಗಳೂರು
6. ಶ್ರೀ ಚೇತನ್ ಐವಾಲಿ, ಕಾರ್ಯಕ್ರಮ ವ್ಯವಸ್ಥಾಪಕರು, ಎಂಜಿಎನ್‌ಆರ್‌ಇಜಿಎಸ್ ನಿರ್ದೇಶನಾಲಯ, ಬೆಂಗಳೂರು
7. ಶ್ರೀ ಮುರುಳಿ ಕೊಡೂರಿ, ಕಾರ್ಯಕ್ರಮ ವ್ಯವಸ್ಥಾಪಕರು, ಎಂಜಿಎನ್‌ಆರ್‌ಇಜಿಎಸ್ ನಿರ್ದೇಶನಾಲಯ, ಬೆಂಗಳೂರು

**ವಿಶೇಷ ಸೂಚನೆ:** ಸರ್ಕಾರ ಹೊರಡಿಸಿರುವ ಸುತ್ತೋಲೆಗಳನ್ನು ಆಧರಿಸಿ ಈ ಪರತಿಗಳನ್ನು ಸಿದ್ಧಪಡಿಸಲಾಗಿದೆ. ಯಾವುದೇ ವ್ಯತ್ಯಾಸಗಳಿದ್ದರೆ ಮೂಲ ಪ್ರತಿಯನ್ನು ಆಧರಿಸಿ ಅಭ್ಯಸಿಸುವಂತೆ ಕೋರಲಾಗಿದೆ.

ಸಂಖ್ಯೆ: ಗ್ರಾಅಪ 193 ಉಖಾಯೋ 2011

ಮ.ಗಾಂ.ರಾ.ಗ್ರಾ.ಉ.ಖಾ.ಯೋ. ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ,
ಬೆಂಗಳೂರು – 560 001, ದಿನಾಂಕ 10–01–2012.

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಕೂಲಿಕಾರ್ಮಿಕರ ಕುಟುಂಬಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ದಿನಗಳಿಗೆ ಮೇಲ್ಪಟ್ಟು ಉದ್ಯೋಗವನ್ನು ಒದಗಿಸಿ ಕೂಲಿ ಪಾವತಿಸಿರುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ K-11011/2/2008-NREGA-MONTS (FTS-13017) ದಿನಾಂಕ 14/12/2011.

* * *

ಅಧಿನಿಯಮ 3(1)ರ ಪ್ರಕಾರ, ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ವಯಸ್ಕ ಸದಸ್ಯರಿಗೆ ಸ್ವಇಚ್ಛೆಯಿಂದ ಅಕುಶಲ ಕೆಲಸ ಬಯಸಿದವರಿಗೆ 100 ದಿಗಳ ಉದ್ಯೋಗವನ್ನು ನೀಡುವಂತೆ ಸೂಚಿಸುತ್ತದೆ. 100 ದಿನಗಳಿಗೆ ಮೇಲ್ಪಟ್ಟು ಉದ್ಯೋಗವನ್ನು ಕುಟುಂಬಗಳಿಗೆ ನೀಡಿದ್ದರೆ, ಅಂತಹ ಹೆಚ್ಚಿನ ದಿನಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನು ಒದಗಿಸಲು ಅವಕಾಶ ಮಾಡಿರುವುದಿಲ್ಲ. ಈ ನಿಟ್ಟಿನಲ್ಲಿ MGNREGA-MISನಲ್ಲಿ ವೀಕ್ಷಿಸಿದಾಗ, ದಿನಾಂಕ 04–01–2012ರಂತೆ, ಬಹುತೇಕ ಜಿಲ್ಲಾ ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಕೂಲಿಕಾರ್ಮಿಕರ ಕುಟುಂಬಗಳಿಗೆ 100 ದಿನಗಳಿಗೆ ಮೇಲ್ಪಟ್ಟು ಉದ್ಯೋಗವನ್ನು ಒದಗಿಸಿ ಕೂಲಿಯನ್ನು ಪಾವತಿಸಿರುವುದು ವ್ಯಕ್ತವಾಗುತ್ತದೆ. ಜಿಲ್ಲಾವಾರು ಪಟ್ಟಿಯನ್ನು ಇದರೊಂದಿಗೆ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳಲು ಲಗತ್ತಿಸಿ ಕಳುಹಿಸಿದೆ.

ಇದರ ಸಂಬಂಧ, ತಾವುಗಳು, ತಮ್ಮ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಲ್ಲಿ ನಿರ್ವಹಿಸಿದ ಮಾಹಿತಿಯನ್ನು ಪರಿಶೀಲಿಸಿ, ಯಾವ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಕೂಲಿ ಕಾರ್ಮಿಕರ ಕುಟುಂಬಗಳಿಗೆ 100 ದಿನಗಳಿಗೆ ಮೇಲ್ಪಟ್ಟು ಉದ್ಯೋಗವನ್ನು ಒದಗಿಸಿ, ಕೂಲಿ ಪಾವತಿ ಮಾಡಿರುವ ಪ್ರಸಂಗಗಳನ್ನು ಗುರುತಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ವಸೂಲಿ ಮಾಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಖಾತೆಗೆ ಜಮೆ ಮಾಡಲು ಕ್ರಮಕೈಗೊಳ್ಳುವಂತೆ ಈ ಮೂಲಕ ಕೋರಿದೆ. ಇನ್ನು ಮುಂದೆ, ನಿಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತ್‌ಗಳ ಮಾಹಿತಿಯನ್ನು ಕೂಲಂಕುಶವಾಗಿ ಪರಿಶೀಲಿಸುವುದು ಮತ್ತು ಕೂಲಿ ಕಾರ್ಮಿಕರ ಕುಟುಂಬಗಳಿಗೆ ಅಧಿನಿಯಮ ಮತ್ತು ಮಾರ್ಗಸೂಚಿಗಳಲ್ಲಿ ನಿಗಧಿ ಪಡಿಸಿದಂತೆ, 100 ದಿನಗಳೀಗೆ ಮೀರದಂತೆ ಉದ್ಯೋಗವನ್ನು ನೀಡುವ ಅಂಶವನ್ನು ಖಾತರಿ ಪಡಿಸಿಕೊಳ್ಳಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ: ಗ್ರಾಅಪ 69 ಉಖಾಯೋ 2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು – 560 001, ದಿನಾಂಕ 23–01–2012.

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಪ್ರತಿ ಆರು ಕೆಲಸ ನಿರ್ವಹಿಸಿದ ದಿನಗಳ ನಂತರ ಸಂಬಳ ಸಹಿತ ರಜೆಯನ್ನು ನೀಡುವುದರ ಕುರಿತು, ಸ್ಪಷ್ಟೀಕರಣ.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ L-12053/47/2011-MGNREGS-1 (FIS-16470) ದಿನಾಂಕ 16/12/2011.

* * *

ಕೆಲವು ರಾಜ್ಯ ಸರ್ಕಾರಗಳು, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರು, ಸತತವಾಗಿ ಪ್ರತಿ ಆರು ಕೆಲಸ ನಿರ್ವಹಿಸಿದ ದಿನಗಳ ನಂತರ ತಮಗೆ ಸಂಬಳ ಸಹಿತ ರಜೆಯನ್ನು ನೀಡುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡುವಂತೆ, ಕೇಂದ್ರ ಸರ್ಕಾರವನ್ನು ಕೋರಿದ್ದು, ಪ್ರತ್ಯುತ್ತರವಾಗಿ, ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಅಧಿನಿಯಮದ ಪ್ರಕಾರ ಒಂದು ಆರ್ಥಿಕ ವರ್ಷದಲ್ಲಿ ಕೂಲಿ ಕಾರ್ಮಿಕರ ಕುಟುಂಬಗಳು ಸ್ವಇಚ್ಛೆಯಿಂದ 100 ದಿನಗಳ ಖಾತರಿ ಉದ್ಯೋಗವನ್ನು ನೀಡುವಂತೆ ಬಯಸಿದವರಿಗೆ, ಸಂಬಳ ಸಹಿತ ರಜೆಯನ್ನು ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತದೆ. ಉಲ್ಲೇಖದ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No. L–12053/ 47/ 2011–MGNREGA–I (FTS – 16470)**
**Government of India**
**Ministry of Rural Development**
**Department of Rural Development**
**(MG NREGA – I Division)**

Krishi Bhavan, New Delhi
Date 16th December – 2011

To,

Principal Secretary/ Secretary of Rural Development of all States and UTs.

Subject: Clarification regarding paid holding after every 6 working days under MGNREGA.

Sir/Madam,

This Ministry has been receiving references from few State Government seeking clarification on the issue of paid holiday after 6 working days under MGNREGA. In this connection, it is informed that issue has been examined in the Ministry. As per provision 1.1 of Operational Guidelines, the objective of the Act is to enhance livelihood security in rural areas by providing at least 100 days of guarantee wage employment in a financial year to every household whose adult members volunteer to do unskilled manual work.  Act does not provides any paid holiday to the worker.

All the State Rural Development Department are advised to bring into the notice of all the concerned agencies for information and necessary action.

Yours faithfully,
Sd/-
**(P. N. Shukla)**
Under secretary to the Government of India

To,

1. All Deputy Secretary, Joint Director & Directors of MGNREGA Division for information please.

## Proceedings of Government of Karnataka

Sub: Business Correspondence Model for speedy disbursal of payments to workers and authorizing CEOs to make payment of transaction charges to Banks under MGNREGS.

Read:
1. GOI L No. J-11060/01/2011 – MGNREGA-I, dated 27.10.2011.
2. Correspondence ending with the DO No. 7D 18pmu2009m dated 18.02.2012 from Principal Secretary to Government (Budget & Resources) Financial Department.

* * *

### Preamble

With a view to bring a new co0ncept in transparency and enhancing the integrity of the wage payment and also to encourage the savings among the rural poor, it has been made mandatory under the MGNREG Act that the wages should be disbursed to the labourers through the accounts of the Banks and Post Offices. The pace of the outreach of the Bank and Post offices and their current capacity to handle such large number to accounts led to delay in disbursement of wages to the labourers and payment of compensation thereto. As per the above references, State Government has decided to make wage payment through Banks with Bio-Metric authentication at village level by following the Business Correspondent Model. Government of India in this regard has authorized the State Government to make payment of Rs. 80/- per annum per active account through which transaction for MGNREGA works is made during the year. Accepting the Government of India's decision, State Government has entered into MOU with Banks as Rs. 1.5% of transaction. In these circumstances, it is considered necessary to authorize Chief Executive Officers of the Zilla Panchayat to make payment of Rs 1.5% or Rs. 80 per active account per year whichever is less. Hence the following order.

## Government Order No. RDP.233. EGS.2011, Bangalore, dated 26.03.2012

In the circumstances explained in the preamble, Government of Karnataka is pleased to authorize all Chief Executive Officers/District Programme Coordinators to make payment of Rs. 1.5% or Rs..80 per annum per active account whichever is less, subject to following conditions.

1. Rs. 180/- is per annum & per active account.
2. Said amount can be paid only if Bankers provide Business Correspondence Model with EBT.
3. Chief Executive Officers must collect information in the enclosed formats. It has to be verified before making payments.
4. Payment shall be made annually.

By order and in the name of the
Governor of Karnataka

**(Dr. Amita Prasad)**
Principal Secretary to Government
Rural Development & Panchayat Raj Dept.

To

1. The Accountant General (A & E) in Karnataka, Bangalore & Dharwad.
2. All the Chief Executive Officers of Zilla Panchayats in Karnataka State.

3. Convenor-SLBC, Karnataka and General Manager, Syndicate Bank, Corporate Office, Gandhi Nagar, Bangalore-560009.
4. All the Lead Bank Managers of the Districts in Karnataka.

Copu of information to:

1. P.S to the Principal Secretary to the Government, Rural Development & Panchayat Raj Dept, M.S.Building Bangalore.
2. P.S to the Principal Secretary to the Government, (Budget & Resources), Finance Dept, Vidhana Soudha, g Bangalore.
3. P.A to Director (MGNREGA), RD & PR Dept. M.S.Building, Bangalore.
4. Chief (Finance & Accounts), Directorate of MGNREGA, RD &PR Dept, M.S.Building, Bangalore.

**Information about the Claim for reimbursement of 1.5% turnover commission or Rs. 80/- as cost per Active Smart Card submitted by _______________Bank (Information to be givern yearwise).**

| Name of District | |
|---|---|

| Year | |
|---|---|

| Sl. No. | Taluk Name | No of Job Cards | No of Active Job Cards | No of Smart Cards issued | No of accounts through which wages paid | Amount disbursed |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

**Signature of Concerned Bank Manager**

**Verified and found correct**

**Countersigned by Head District Manager**
**________________________District**

**Chief Executive Officer**

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 -22372738 E-mail : nrega-ka@nic.in

ಗ್ರಾಅಪ:21: ಉಖಾಯೋ: 2006 ದಿನಾಂಕ: 02–04–2012

## ಸುತ್ತೋಲೆ

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಕಾರ್ಮಿಕರ ಕನಿಷ್ಠ ಕೂಲಿ ದರವನ್ನು ದಿನಾಂಕ: 01–04–2012ರಿಂದ ಹೆಚ್ಚಿಸಿರುವ ಕುರಿತು

ಉಲ್ಲೇಖ: ಕೇಂದ್ರ ಸರಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆಯ ಸಂಖ್ಯೆ FNo.J-11011/1/2009-mgnrega(pt). ದಿನಾಂಕ: 23–03–2012

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಅಕುಶಲ ಕಾರ್ಮಿಕರಿಗೆ ಪ್ರಸ್ತುತ ನೀಡುತ್ತಿರುವ ಕೂಲಿ ದರವನ್ನು ರೂ.125/–ರಿಂದ ರೂ.155/–ಗಳಿಗೆ ಹೆಚ್ಚಿಸಿ ದಿನಾಂಕ 01–04–2012ರಿಂದ ಅನ್ವಯವಾಗುವಂತೆ ರಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೂಡಲೇ ಜಾರಿಗೊಳಿಸುವಂತೆ ಕೇಂದ್ರ ಸರಕಾರವು ಹೊರಡಿಸಿರುವ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಆದ ಪ್ರಯುಕ್ತ, ಪರಿಷ್ಕೃತ ಕೂಲಿ ವೇತನದ ದರವನ್ನು ದಿನಾಂಕ 01–04–2012ರಿಂದ ಅನ್ವಯವಾಗುವಂತೆ ಕೂಲಿ ಕಾರ್ಮಿಕರಿಗೆ ಪಾವತಿಸಲು ಕೂಡಲೇ ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

ಕೂಲಿ ವೇತನದ ಪರಿಷ್ಕರಣೆಯಿಂದ ಸಾಮಗ್ರಿ ವೆಚ್ಚದ ದರ ರೂ.103.85/–ಗಳಾಗಿರುತ್ತದೆ. ಆದ್ದರಿಂದ ದಿನವೊಂದಕ್ಕೆ ಒಬ್ಬ ಕೂಲಿ ಕಾರ್ಮಿಕನಿಗೆ ಕೂಲಿ ಮತ್ತು ಸಾಮಗ್ರಿ ವೆಚ್ಚವು ಸೇರಿದಂತೆ, ವೆಚ್ಚ ಮಾಡಬೇಕಾಗಿರುವ ಘಟಕದ ದರವು ರೂ.258.85/–ಗಳಾಗಿರುತ್ತದೆ. ಕೂಲಿ ಮತ್ತು ಸಾಮಗ್ರಿ ವೆಚ್ಚದ ಘಟಕದ ದರವನ್ನು ಮೀರದಂತೆ ಯೋಜನೆಯ ಅನುಷ್ಠಾನದಲ್ಲಿ ಅಳವಡಿಸಿಕೊಂಡು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
2. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

# ಹಕ್ಕು ಮತ್ತು ಅಧಿಕಾರಗಳು

ಅನಸೂ ರಂಗಸಂಸ್ಥೆ

ఉచిత పంపిణీ

## ಕರ್ನಾಟಕ ಸಕಾರದ ನಡವಳಿಗಳು

**ವಿಷಯ :** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯ ಕಾಮಗಾರಿಗಳ ಸ್ಥಳದಲ್ಲಿ ಮಾಡಬೇಕಾದ ವ್ಯವಸ್ಥೆಗಳ ಕುರಿತು.

**ಓದಲಾಗಿದೆ:** 1. ರಾಷ್ಟ್ರೀ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಅನುಸೂಚಿ–ಖಖ

2. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅನುಸೂಚಿ – II ಮತ್ತು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ವಯ ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಸ್ಥಳದ ಸಮೀಪದಲ್ಲಿ ಮಾಡಬೇಕಾದ ವ್ಯವಸ್ಥೆಗಳು ಮತ್ತು ಅನುಸರಿಸಬೇಕಾದದ ಸಾಮಾಜಿಕ ಭದ್ರತೆಗಳು ಈ ಕೆಳಗಿನಂತಿವೆ.

1. ಕಾಮಗಾರಿಯ ಸ್ಥಳದಲ್ಲಿ ಶುದ್ಧ ಕುಡಿಯುವ ನೀರು, ಕೂಲಿಗಾರರ ಮತ್ತು ಮಕ್ಕಳ ವಿಶ್ರಾಂತಿಗಾಗಿ ನೆರಳು, ಕೆಲಸ ಮಾಡುವ ಸಮಯದಲ್ಲಿ ಆಗಬಹುದಾದ ಸಣ್ಣ ಪುಟ್ಟ ಗಾಯಗಳು, ಇತ್ಯಾದಿಗಳ ಪ್ರಥಮ ಚಿಕಿತ್ಸೆಗಾಗಿ ವಸ್ತುಗಳನ್ನು ಹೊಂದಿರುವ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇವುಗಳ ವ್ಯವಸ್ಥೆ ಮಾಡಬೇಕು.
2. ಆರು ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತಮ್ಮ ತಾಯಂದಿರೊಂದಿಗೆ ಕೆಲಸ ಮಾಡುವ ಸ್ಥಳಕ್ಕೆ ಬಂದರಲ್ಲಿ ಅ ಮಕ್ಕಳ ಸಂಖ್ಯೆ ಐದು ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಈ ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಪ್ರತ್ಯೇಕ ಮಹಿಳಾ ಕೂಲಿಗಾರರನ್ನು ನೇಮಿಸಬೇಕು ಮತ್ತು ಈ ರೀತಿ ನೇಮಿಸಿದ ಮಹಿಳೆಗೆ ಕೆಲಸ ಮಾಡಿದ ಪ್ರತಿ ದಿನಕ್ಕೆ ಕನಿಷ್ಠ ಕೂಲಿಯನ್ನು ಪಾವತಿಸಬೇಕು.
3. ಈ ಯೋಜನೆಯಡಿ ಕೆಲಸ ಮಾಡುವಾಗ ಅಥವಾ ಆ ಕಾರಣದಿಂದಾಗಿ, ಕೂಲಿಗಾರರಿಗೆ ಗಾಯಗಳಾಗಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗಿದ್ದಲ್ಲಿ, ಅವರನ್ನು ಸರ್ಕಾರಿ ಆಸ್ಪತ್ರೆಗೆ ಅಥವಾ ಸರ್ಕಾರಿ ವೈದ್ಯರು ಸೂಚಿಸುವ ಆಸ್ಪತ್ರೆಗೆ ದಾಖಲು ಮಾಡಲು ಅಗತ್ಯ ಕ್ರಮವನ್ನು ತೆಗೆದುಕೊಂಡು ಅವರಿಗೆ ಅಗತ್ಯವಾಗುವ ಆಸ್ಪತ್ರೆಯ ವಾರ್ಡ್ ಬಾಡಿಗೆಗೆ, ಔಷಧೋಪಚಾರಗಳಿಗಾಗಿ, ಕೂಲಿ ನಿಧಿಯಿಂದ ಹಣವನ್ನು ಪಾವಸಿಬೇಕು ಹಾಗೂ ಅವರು ಆಸ್ಪತ್ರೆಯಲ್ಲಿ ಇರಬೇಕಾದ ಅವಧಿಗೆ ಪ್ರತಿ ದಿನಕ್ಕೆ, ಕನಿಷ್ಠ ಕೂಲಿಯ ಅರ್ಧದಷ್ಟನ್ನು ಪಾವತಿಸಬೇಕು.
4. ಕಾರ್ಮಿಕರೊಂದಿಗೆ ಬರುವ ಮಕ್ಕಳಿಗೆ ಒಂದು ವೇಳೆ ಕಾಮಗಾರಿಯ ಸ್ಥಳದಲ್ಲಿ ಗಾಯಗಳಾದಲ್ಲಿ ಅವರಿಗೆ ಉಚಿತ ಔಷಧೋಪಚಾರವನ್ನು ಒದಗಿಸಬೇಕು. ಅಪಘಾತದಿಂದ ಅಂಗವಿಕಲವಾದಲ್ಲಿ ಅಥವಾ ಮೃತಪಟ್ಟಲ್ಲಿ ರಾಜ್ಯ ಸರ್ಕಾರ ನಿಗಧಿಪಡಿಸಿದ ಮೊತ್ತವನ್ನು ಅವರ ಪೋಷಕರಿಗೆ ಪಾವತಿಸಬೇಕು.
5. ಈ ಯೋಜನೆಯಡಿ ಕೆಲಸ ಮಾಡುವ ಸಮಯದಲ್ಲಿ ಅಥವಾ ಆ ಕಾರಣದಿಂದಾಗಿ ಕಾರ್ಮಿಕರು ಅಪಘಾತಕ್ಕೆ ಒಳಗಾಗಿ ಶಾಶ್ವತವಾಗಿ ಅಂಗವಿಕಲರಾದಲ್ಲಿ ಅಥವಾ ಮೃತಪಟ್ಟದಲ್ಲಿ ಅನುಕ್ರಮವಾಗಿ ಅವರಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ ರೂ. 25 ಸಾವಿರ ಮೊತ್ತವನ್ನು ಪಾವತಿಸಬೇಕು.

ಈ ಮೇಲಿನಂತೆ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳವರಿಗೆ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿಗಳವರಿಗೆ ಮತ್ತು ಎಲ್ಲಾ ಕಾರ್ಯನಿರ್ವಾಹಣಾ ಏಜೆನ್ಸಿಗಳಿಗೆ ಸೂಚಿಸಲಾಗಿದೆ.

ಸಹಿ/–

**(ಆರ್. ಶಾಂತರಾಜ್)**

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.

ಸರ್ಕಾರದ ಅಪರ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 178 ಉಖಾಯೋ 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 30–7–2009

**ಇಂದ:**

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ,**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

**ಮಾನ್ಯರೇ,**

**ವಿಷಯ:** ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ಪರಿಹಾರ ಮಂಜೂರಾತಿ ಕುರಿತು.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ 5ಕ್ಕೆ ಹೊಂದಿ ಕೊಂಡಿರುವ ಅನುಸೂಚಿ–ಕ್ರಮಸಂಖ್ಯೆ: 26ರ ಪ್ರಕಾರ, ಒಬ್ಬ ಕಾರ್ಮಿಕನು ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತಪಟ್ಟರೆ ಅಥವಾ ಪೂರ್ಣವಾಗಿ ಅಂಗವಿಕಲತೆ ಆದಲ್ಲಿ/ಅಶಕ್ತರಾದಲ್ಲಿ ರೂ. 25.000/–ಗಳನ್ನು ಈ ಸಂಬಂಧ, ತಮ್ಮ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು, ಎಷ್ಟು ಆಗಿವೆ ಎಂಬುದಕ್ಕೆ ಮಾಹಿತಿಯನ್ನು ವರ್ಷಾವಾರು ಪ್ರತ್ಯೇಕವಾಗಿ ಸರ್ಕಾರಕ್ಕೆ ಕೂಡಲೇ ಸಲ್ಲಿಸಲು ಸೂಚಿಸಿದೆ.

ಇಂತಹ ಪ್ರಕರಣಗಳನ್ನು ತಡಮಾಡದೇ ಕೂಡಲೇ ಇತ್ಯರ್ಥಗೊಳಿಸಿ, ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ಯೋಜನೆಯ ಶೇಕಡಾ 6 ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಪಾವತಿಸಲು ಕ್ರಮ ಜರುಗಿಸುವುದು. ಕೂಡಲೇ, ಈ ಮಾಹಿತಿಯನ್ನು ನೆನಪೋಲೆಗೆ ಅವಕಾಶ ನೀಡದಂತೆ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಸಹಿ/–
**ನಿರ್ದೇಶಕರ ಪರವಾಗಿ,**
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

**SATYENDRA-KUMAT SINGH**
Director (MGNREGA)
Telefax; 23070129

Ministery of Rural Development
Government of India
D.O.No.J-14022/1/2010-MGNREGA(Pt.)
Dated the 24th March, 2010

Dear Sir,

Please refer to your letter No.RDP 77 NRE 2008 dated the 15th February, 2010 regarding payment of ex-gratia to the deceased wage workers during the course of Employment under the Mahatma Gandhi NREGA.

As mentioned in Para 26 in Schedule II to the Mahatma Gandhi NREGA Act, 2005, if a person employed under a Scheme dies or becomes permanently disabled by accident arising out of and in the course of employment, he shall be paid by the implementing agency an ex gratia payment at the rate of twenty five thousand rupees or such amount as may be notified by the Central Government, and the amount shall be paid to the legal heirs of the deceased or the disabled, as the case may be.

With regards,

Yourrs sincerely,

Sd/-
**(Satyendra Kumat Singh)**

**Shri P. Ravi Kumar**
Secretary
Department of Rural Development
Government of Karnataka
Bangalore.

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 178: ಉಖಾಯೋ :09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 07–04–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
**ತುಮಕೂರು.**

**ಮಾನ್ಯರೆ,**

**ವಿಷಯ:** ಕೆಲಸ ನಿರ್ವಹಿಸುತ್ತಿರುವ ಸಮಯದಲ್ಲಿ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ಪರಿಹಾರ ಮಂಜೂರಾತಿ ಕುರಿತು.

**ಉಲ್ಲೇಖ:** ತಮ್ಮ ಕಛೇರಿಯ ಪತ್ರದ ಸಂ.ತುಜಿಪ/ಅಭಿ/ಎನ್ಆರ್ಇಜಿಎ/ಸಿಆರ್/142/2009–10, ದಿನಾಂಕ: 30–12–2009.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಬರುವ ಚಿನಕವಜ್ರ ಗ್ರಾಮ ಪಂಚಾಯತಿಯಲ್ಲಿ ಉದ್ಯೋಗಮಿತ್ರನಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ.ಜೂಲೇಗೌಡ ಬಿನ್ ಪುಟ್ಟರಂಗಪ್ಪ ಇವರು ದಿನಾಂಕ : 7–10–2009 ರಂದು ಕಾಮಗಾರಿ ಉಸ್ತುವಾರಿ ಮಾಡುತ್ತಿದ್ದ ಸಮಯದಲ್ಲಿ ಮರಣ ಹೊಂದಿದ್ದಾರೆಂದು ವರದಿ ಮಾಡಿ ಸದರಿಯವರಿಗೆ ಅಕುಶಲ ಕಾರ್ಮಿಕರು ಮೃತಪಟ್ಟ ಸಮಯದಲ್ಲಿ ಅವರಿಗೆ ನೀಡುವ ಅನುಗ್ರಹ ಧನವನ್ನು ಇವರಿಗೂ ನೀಡಬಹುದೇ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಸರ್ಕಾರವನ್ನು ಕೋರಲಾಗಿರುತ್ತದೆ. ಸದರಿ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಕೇಂದ್ರ ಸರ್ಕಾರಕ್ಕೆ ಇದರ ಸಂಬಂಧ ಪತ್ರವನ್ನು ಬರೆದಿದ್ದು ದಿನಾಂಕ: 24.3.2010ರ ಪತ್ರದಲ್ಲಿ ಕೇಂದ್ರ ಸರ್ಕಾರವು ಅಧಿನಿಯಮದ ಅನುಸೂಚಿ–IIರ ಕಂಡಿಕೆ 26ರಲ್ಲಿ ಇರುವಂತೆ ಕ್ರಮ ವಹಿಸಲು ತಿಳಿಸಿರುತ್ತದೆ. ಸದರಿ ಕೇಂದ್ರ ಸರ್ಕಾರದ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣದ ಪ್ರಕಾರ ಅಕುಶಲ,ಅರೆಕುಶಲ ಮತ್ತು ಕುಶಲ ಕಾರ್ಮಿಕರಲ್ಲಿ ಭೇದಭಾವವಿರುವುದಿಲ್ಲವೆಂದು ಸೂಚಿಸಿರುತ್ತದೆ. ಮತ್ತು ಆಡಳಿತ ವರ್ಗದಡಿ ಕೆಲಸ ಮಾಡುವವರನ್ನು ಹೊರತುಪಡಿಸಿ, ಕಾಮಗಾರಿ ಸ್ಥಳದಲ್ಲಿ ತೊಡಗಿರುವ ಎಲ್ಲಾ ಕಾರ್ಮಿಕರಿಗೆ ಕೆಲಸದ ಸಮಯದಲ್ಲಿ ಒಂದು ವೇಳೆ ಮೃತಪಟ್ಟಲ್ಲಿ ಅನುಗ್ರಹ ಧನಕ್ಕೆ ಅರ್ಹರಾಗುತ್ತಾರೆ. ಕೇಂದ್ರ ಸರ್ಕಾರವು ನೀಡಿರುವ ಸ್ಪಷ್ಟೀಕರಣದ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಮಾರ್ಗದರ್ಶನಕ್ಕಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

**(ನಿರ್ದೇಶಕರು)**
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಯಥಾ ಪ್ರತಿಯನ್ನು** ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ (ತುಮಕೂರು ಜಿಲ್ಲೆ ಹೊರತುಪಡಿಸಿ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕೆ.

**Letter No L - 12053/52010-MGNREGA**
**Government of India**
**Ministry of Rural Development**
**(Mahatma Gandhi NREGA Division)**

Krishi Bhawan, New Delhi
Dated the 19th July 2011

To.

All State Secretaries of Rural Development

Sir,

It has come to the notice of the Government of India that some that some of the States are going slow in execution of works under the Mahatma Gandhi NREGA or have not been taking up new woriks under the same during the Kharif season. In this regard, the following facts are reiterated:-

1. The Mahatma Gandhi National Rural Employment Guarantee Scheme (MGNREGS) is governed by an Mahatma Gandhi National Rural Employment Guarantee Act (MGNREGA) 2005 promulgated by the Pariiament of India. Section 3 and 4 of this Act make providing every house hold whose members volunteer to do unskilled manual work 100 days of such work in a Financial Year. There is no provision of any suspension in this entitlement in any season. Not providing the work in a manner as prescribed in the Act would be tantamount to a penal offence and is also liable for compensation.
2. New works shall continue to be taken up as per the demand generated in a manner prescribed in the Act as per the necessity to provide employment.
3. It is expected that the provisions of the Act including the above provisions must be implemented in letter and in spirit, any contravention of which shall be dealt with as provided in the Act.

Yours sincerely,

**(D.K. Jain)**
Joint Secretary

## ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :36 :ಉಖಾಯೋ2003 ದಿನಾಂಕ : 22-07-2011

## ಸುತ್ತೋಲೆ

ವಿಷಯ: ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 196/2001ರಡಿ ಆಹಾರ ಹಾಗೂ ಉದ್ಯೋಗಕ್ಕೆ ಸಂಬಂದಿಸಿದ ಯೋಜನೆಗಳ ಮೇಲೆ, ಆಯುಕ್ತರು ಗಮನಿಸಿದ ಅಂಶಗಳ ಮೇಲೆ, ಕೈಗೊಳ್ಳುವ ಕ್ರಮದ ಕುರಿತು.

ಉಲ್ಲೇಖ: ಸರ್ವೋಚ್ಚ ನ್ಯಾಯಾಲಯದ ಆಯುಕ್ತರು ದಿನಾಂಕ 08-07-2011 ರಂದು ಕೊಠಡಿ ಸಂಖ್ಯೆ 313 ವಿಧಾನಸೌಧ ಇಲ್ಲಿ ಪರಿಶೀಲನಾ ಸಭೆಯಲ್ಲಿ ಆದೇಶಿಸಿದನ್ವಯ

* * *

ದಿನಾಂಕ 08-07-2011ರಂದು ಕೊಠಡಿ ಸಂಖ್ಯೆ 313 ವಿಧಾನಸೌಧ ಇಲ್ಲಿ ನಡೆಸಿದ ಸಭೆಯಲ್ಲಿ ಸರ್ವೋಚ್ಚ ನ್ಯಾಯ್ಯಾಲಯದ ವಿಶೇಷ ಆಯುಕ್ತರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಲ್ಲಿ ಅನುಷ್ಠಾನದಲ್ಲಿ ಅಂಗವಿಕಲರನ್ನು ತೊಡಗಿಸಿಕೊಳ್ಳಲು ವಿಶೇಷ ರಿಯಾಯಿತಿಗಳನ್ನು ನೀಡಿರುವ ಬಗ್ಗೆ ಪರಿಶೀಲಿಸಿದರು. ತರುವಾಯ, ವಿಶೇಷ ಆಯುಕ್ತರು, ಯೋಜನೆಯಡಿ ಅಂಗವಿಕಲರನ್ನು ತೊಡಗಿಸಿಕೊಳ್ಳಲು, ಹಗುರವಾದ ಕೆಲಸಗಳನ್ನು ಅವರವರ ದೈಹಿಕ ಸಾಮರ್ಥ್ಯಕ್ಕೆ ಅನುಗುಣವಾಗಿ ನೀಡುವಂತೆ ಸೂಚಿಸಿರುತ್ತಾರೆ. ಈ ಸಂಬಂಧ ಈಗಾಗಲೇ ಈ ಕಛೇರಿಯಿಂದ ದಿನಾಂಕ 24-08-2008 ರ ಪತ್ರದಲ್ಲಿ ಉದ್ಯೋಗವನ್ನು ಅರಸಿಕೊಂಡು ಬರುವ ಅಂಗವಿಕಲರಿಗೆ ಕಾಮಗಾರಿಗಳ ಸ್ಥಳಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕುಡಿಯುವ ನೀರನ್ನು ಕೊಡುವುದು ತಾಯಿಯೊಂದಿಗೆ ಬರುವ ಸಣ್ಣ ಮಕ್ಕಳನ್ನು ನೋಡಿಕೊಳ್ಳುವುದು, ಹಾಜರಾತಿ ಪಟ್ಟಿಗಳ ನಿರ್ವಹಣೆ ಮತ್ತು ಕೂಲಿ ಕಾರ್ಮಿಕರ ಹಾಜರಾತಿಯ ವಹಿಯ ನಿರ್ವಹಣೆ ಲಘುವಾದ ಕೆಲಸಗಳನ್ನು ನೀಡುವಂತೆ, ತಮ್ಮೆಲ್ಲರಿಗೂ ತಿಳಸಲಾಗಿದೆ. ಇದಲ್ಲದೇ ಕೆಲಸದ ಪ್ರಮಾಣದಲ್ಲಿ ಕೂಡ ಅಂಗವಿಕಲರಿಗೆ, ಉತ್ಪತ್ತಿ ಮಾಡುವ ಕೆಲಸದಲ್ಲಿ ಶೇಕಡಾ 25 ರಷ್ಟು ರಿಯಾಯಿತಿಯನ್ನು ನೀಡಿರುವುದನ್ನು ಮತ್ತು ಕಾಮಗಾರಿ ಸ್ಥಳದಲ್ಲಿ ಕೆಲಸ ಮಾಡಲು ಹೋಗಿ ಬರುವುದಕ್ಕೆ ಕೂಲಿಯ ದರದಲ್ಲಿ ಶೇಕಡಾ 10 ರಷ್ಟು ಪ್ರಯಾಣ ಭತ್ಯೆಯ ಸೌಲಭ್ಯವನ್ನು ನೀಡಿರುವುದನ್ನು ಸ್ಮರಿಸಬಹುದಾಗಿರುತ್ತದೆ. ಈ ಹಿಂದೆ ಸರ್ಕಾರದಿಂದ ಅಂಗವಿಕಲರ ಕುರಿತು ನೀಡಿರುವ ಸೂಚನೆಗಳ ಕಡೆಗೆ ಹೆಚ್ಚಿನ ಗಮನ ಮತ್ತು ಆಸಕ್ತಿ ನೀಡಿ, ಅಂಗವಿಕಲರಿಗೆ ಉದ್ಯೋಗವನ್ನು ನಿರಾಕರಣೆ ಮಾಡದೇ ನೀಡುವುದು ಮತ್ತು ಲಘುವಾದ ಕೆಲಸಗಳನ್ನು ಅದಷ್ಟು ಅವಕಾಶ ಮಾಡಿಕೊಂಡು ನೀಡಲು ಕ್ರಮವಹಿಸುವುದು.

ಎರಡನೇಯದಾಗಿ ಕಾಮಗಾರಿಗಳ ಸ್ಥಳಗಳಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು ಈಗಾಗಲೇ ಸರ್ಕಾರದಿಂದ ದಿನಾಂಕ 03-08-2006 ಮತ್ತು 22-05 -2009ರ ಸುತ್ತೋಲೆಗಳಲ್ಲಿ ಅಧಿನಿಯಮ ಮತ್ತು ರೂಪಿಸಿದ ಯೋಜನೆಯಲ್ಲಿ ಇರುವಂತೆ ತಮ್ಮೆಲ್ಲರಿಗೂ ತಿಳಸಲಾಗಿರುತ್ತದೆ ಮತ್ತು ಅವುಗಳನ್ನು ಸ್ಮರಿಸಬಹುದಾಗಿರುತ್ತದೆ. ಅಧಿನಿಯಮದ ಪ್ರಕಾರ ಕಾಮಗಾರಿಗಳ ಸ್ಥಳಗಳ ಸಮಿಪದಲ್ಲಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರಿಗೆ ಶುದ್ಧವಾದ ಕುಡಿಯುವ ನೀರು, ಕೂಲಿಕಾರರ ಮತ್ತು ಮಕ್ಕಳ ವಿಶ್ರಾಂತಿಗಾಗಿ ನೆರಳು ಕೆಲಸ ಮಾಡುವ ಸಮಯದಲ್ಲಿ ಆಗಬಹುದಾದ ಸಣ್ಣ ಪುಟ್ಟ ಗಾಯಗಳು ಇತ್ಯಾದಿಗಳಿಗಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಆರುವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತಮ್ಮ ತಾಯಿಂದಿರೊಂದಿಗೆ ಕೆಲಸ ಮಾಡುವ ಸ್ಥಳಕ್ಕೆ ಬಂದಲ್ಲಿ ಮತ್ತು ಆ ಮಕ್ಕಳ ಸಂಖ್ಯೆ ಐದು ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಮಕ್ಕಳನ್ನು ನೋಡಿಕೊಳ್ಳಲು ಮಹಿಳಾ ಕೂಲಿಕಾರರಲ್ಲಿಯೇ ಒಬ್ಬ ಮಹಿಳಾ ಕೂಲಿಕಾರರನ್ನು ನೇಮಿಸುವುದು ಇತ್ಯಾದಿ ಇವುಗಳನ್ನು ಕಡ್ಡಾಯವಾಗಿ ಕಾಮಗಾರಿಗಳ ಅನುಷ್ಠಾನದಲ್ಲಿ ಪ್ರತಿಯೊಬ್ಬ ಅನುಷ್ಠಾನ ಅಧಿಕಾರಿಯು ತಪ್ಪದೇ ಒದಗಿಸಲು ಕ್ರಮ ಕೈಗೊಳ್ಳುವುದು ತಮ್ಮ ವತಿಯಿಂದ, ತಮ್ಮ ನಿಯಂತ್ರಣದಲ್ಲಿ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಿ ಕಡ್ಡಾಯವಾಗಿ ಮೇಲಿನ ಸೌಲಭ್ಯಗಳನ್ನು ಕಾಮಗಾರಿಗಳ ಸ್ಥಳದ ಸಮೀಪದಲ್ಲಿ ಕೂಲಿಕಾರ್ಮಿಕರಿಗೆ ಒದಗಿಸುವಂತೆ ಸೂಚಿಸಲು ಸೂಚಿಸಿದೆ.

**(ಪಿ.ಶಿವಶಂಕರ)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯ ಕಾಮಗಾರಿಗಳ ಸ್ಥಳದಲ್ಲಿ ಮಾಡಬೇಕಾದ ವ್ಯವಸ್ಥೆಗಳ ಕುರಿತು.

**ಓದಲಾಗಿದೆ :** 1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ–2005ರ ಅನುಸೂಚಿ–ಖಖ

2. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅನುಸೂಚಿ – II ಮತ್ತು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ವಯ ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ಸ್ಥಳದ ಸಮೀಪದಲ್ಲಿ ಮಾಡಬೇಕಾದ ವ್ಯವಸ್ಥೆಗಳು ಮತ್ತು ಅನುಸರಿಸಬೇಕಾದದ ಸಾಮಾಜಿಕ ಭದ್ರತೆಗಳು ಈ ಕೆಳಗಿನಂತಿವೆ.

1) ಕಾಮಗಾರಿಯ ಸ್ಥಳದಲ್ಲಿ ಶುದ್ದ ಕುಡಿಯುವ ನೀರು, ಕೂಲಿಗಾರರ ಮತ್ತು ಮಕ್ಕಳ ವಿಶ್ರಾಂತಿಗಾಗಿ ನೆರಳು, ಕೆಲಸ ಮಾಡುವ ಸಮಯದಲ್ಲಿ ಆಗಬಹುದಾದ ಸಣ್ಣ ಪುಟ್ಟ ಗಾಯಗಳು, ಇತ್ಯಾದಿಗಳ ಪ್ರಥಮ ಚಿಕಿತ್ಸೆಗಾಗಿ ವಸ್ತುಗಳನ್ನು ಹೊಂದಿರುವ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇವುಗಳ ವ್ಯವಸ್ಥೆ ಮಾಡಬೇಕು.

2) ಆರು ವರ್ಷ ಅಥವಾ ಅದಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತಮ್ಮ ತಾಯಂದಿರೊಂದಿಗೆ ಕೆಲಸ ಮಾಡುವ ಸ್ಥಳಕ್ಕೆ ಬಂದರಲ್ಲಿ ಅ ಮಕ್ಕಳ ಸಂಖ್ಯೆ ಐದು ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಈ ಮಕ್ಕಳನ್ನು ನೋಡಿಕೊಳ್ಳಲು ಒಬ್ಬ ಪ್ರತ್ಯೇಕ ಮಹಿಳಾ ಕೂಲಿಗಾರರನ್ನು ನೇಮಿಸಬೇಕು ಮತ್ತು ಈ ರೀತಿ ನೇಮಿಸಿದ ಮಹಿಳೆಗೆ ಕೆಲಸ ಮಾಡಿದ ಪ್ರತಿ ದಿನಕ್ಕೆ ಕನಿಷ್ಠ ಕೂಲಿಯನ್ನು ಪಾವತಿಸಬೇಕು.

3) ಈ ಯೋಜನೆಯಡಿ ಕೆಲಸ ಮಾಡುವಾಗ ಅಥವಾ ಆ ಕಾರಣದಿಂದಾಗಿ, ಕೂಲಿಗಾರರಿಗೆ ಗಾಯಗಳಾಗಿ ಅವರನ್ನು ಆಸ್ಪತ್ರೆಗೆ ದಾಖಲು ಮಾಡಬೇಕಾಗಿದ್ದಲ್ಲಿ, ಅವರನ್ನು ಸರ್ಕಾರಿ ಆಸ್ಪತ್ರೆಗೆ ಅಥವಾ ಸರ್ಕಾರಿ ವೈದ್ಯರು ಸೂಚಿಸುವ ಆಸ್ಪತ್ರೆಗೆ ದಾಖಲು ಮಾಡಲು ಅಗತ್ಯ ಕ್ರಮವನ್ನು ತೆಗೆದುಕೊಂಡು ಅವರಿಗೆ ಅಗತ್ಯವಾಗುವ ಆಸ್ಪತ್ರೆಯ ವಾರ್ಡ್ ಬಾಡಿಗೆಗೆ, ಔಷಧೋಪಚಾರಗಳಿಗಾಗಿ, ಕೂಲಿ ನಿಧಿಯಿಂದ ಹಣವನ್ನು ಪಾವಸಿಬೇಕು ಹಾಗೂ ಅವರು ಆಸ್ಪತ್ರೆಯಲ್ಲಿ ಇರಬೇಕಾದ ಅವಧಿಗೆ ಪ್ರತಿ ದಿನಕ್ಕೆ, ಕನಿಷ್ಠ ಕೂಲಿಯ ಅರ್ಧದಷ್ಟನ್ನು ಪಾವತಿಸಬೇಕು.

4) ಕಾರ್ಮಿಕರೊಂದಿಗೆ ಬರುವ ಮಕ್ಕಳಿಗೆ ಒಂದು ವೇಳೆ ಕಾಮಗಾರಿಯ ಸ್ಥಳದಲ್ಲಿ ಗಾಯಗಳಾದಲ್ಲಿ ಅವರಿಗೆ ಉಚಿತ ಔಷಧೋಪಚಾರವನ್ನು ಒದಗಿಸಬೇಕು. ಅಪಘಾತದಿಂದ ಅಂಗವಿಕಲವಾದಲ್ಲಿ ಅಥವಾ ಮೃತಪಟ್ಟಲ್ಲಿ ರಾಜ್ಯ ಸರ್ಕಾರ ನಿಗಧಿಪಡಿಸಿದ ಮೊತ್ತವನ್ನು ಅವರ ಪೋಷಕರಿಗೆ ಪಾವತಿಸಬೇಕು.

5) ಈ ಯೋಜನೆಯಡಿ ಕೆಲಸ ಮಾಡುವ ಸಮಯದಲ್ಲಿ ಅಥವಾ ಆ ಕಾರಣದಿಂದಾಗಿ ಕಾರ್ಮಿಕರು ಅಪಘಾತಕ್ಕೆ ಒಳಗಾಗಿ ಶಾಶ್ವತವಾಗಿ ಅಂಗವಿಕಲರಾದಲ್ಲಿ ಅಥವಾ ಮೃತಪಟ್ಟದಲ್ಲಿ ಅನುಕ್ರಮವಾಗಿ ಅವರಿಗೆ ಅಥವಾ ಅವರ ಕುಟುಂಬದ ಸದಸ್ಯರಿಗೆ ರೂ. 25 ಸಾವಿರ ಮೊತ್ತವನ್ನು ಪಾವತಿಸಬೇಕು.

ಈ ಮೇಲಿನಂತೆ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳವರಿಗೆ, ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿಗಳವರಿಗೆ ಮತ್ತು ಎಲ್ಲಾ ಕಾರ್ಯನಿರ್ವಾಹಣಾ ಏಜೆನ್ಸಿಗಳಿಗೆ ಸೂಚಿಸಲಾಗಿದೆ.

ಸಹಿ/–

**(ಆರ್. ಶಾಂತರಾಜ್)**

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.

ಸರ್ಕಾರದ ಅಪರ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001 ದೂ : 080-22372738
E-mail : nregs-ka@nic.in

ಗ್ರಾಅಪ :193:ಉಖಾಯೋ2011 ದಿನಾಂಕ : 08-09-2011

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗವನ್ನು ಅರಸಿಬಂದ ಕೂಲಿಕಾರರ ಕುಟುಂಬಗಳಿಗೆ ಉದ್ಯೋಗ ನಿರಾಕರಣೆ ಮಾಡದೇ ಒದಗಿಸುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ L /12053/5/2010 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ. ದಿನಾಂಕ 19/.27.7.2011

* * *

ಕೆಲವು ರಾಜ್ಯಗಳು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೊಜನೆಯಡಿ ಕಾಮಗಾರಿಗಳ ಅನುಷ್ಠಾನವನ್ನು ಮಂದಗತಿಯಲ್ಲಿ ಮಾಡುತ್ತಿರುವುದು ಮತ್ತು ಕೃಷಿ ಚಟುವಟಿಕೆಗಳು ಇರುವ ಮಾಸದಲ್ಲಿ / ಕಾಲದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದೇ ಉದ್ಯೋಗವನ್ನು ಕೂಲಿಕಾರರ ಕುಟುಂಬಗಳಿಗೆ ನೀಡದೇ ಇರುವುದರ ವಿಚಾರವು, ಕೇಂದ್ರ ಸರ್ಕಾರದ ಗಮನಕ್ಕೆ ಬಂದಿರುವುದಾಗಿ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ ಮತ್ತು ಈ ರೀತಿ ಉದ್ಯೋಗವನ್ನು ನೀಡದೆ ಇರುವುದು ಕೂಲಿಕಾರರ ಕನಿಷ್ಠ ಹಕ್ಕುಗಳನ್ನು ಸಂರಕ್ಷಣೆ ಮಾಡದೆ ಇರುವುದು ಅಧಿನಿಯಮವನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಕೂಲಿಕಾರರ ಬೇಡಿಕೆಗೆ ಅನುಗುಣವಾಗಿ ಉದ್ಯೋಗವನ್ನು ಆದಷ್ಟು ಶೇಕಡಾ 100ರಷ್ಟು ಒದಗಿಸಲು, ಕ್ರಮವಹಿಸುವುದು. ದಿನಾಂಕ 08-09-2011 ರಂದು MISನಲ್ಲಿ ಇರುವಂತೆ ಉದ್ಯೋಗದ ವಸ್ತು ಸ್ಥಿತಿಯನ್ನು ಪರಿಶೀಲಿಸಿದಾಗ, ಕೂಲಿಕಾರರ ಉದ್ಯೋಗದ ಬೇಡಿಕೆಗೆ ಮತ್ತು ಉದ್ಯೋಗ ನೀಡಿಕೆಗೆ ವ್ಯತ್ಯಾಸವಿರುತ್ತದೆ. ಆದ್ದರಿಂದ, ಈ ವ್ಯತ್ಯಾಸವನ್ನು ಪರಿಶೀಲಿಸಿ ಉದ್ಯೋಗದ ಬೇಡಿಕೆಗೆ ಮತ್ತು ಉದ್ಯೋಗದ ನೀಡಿಕೆಗೆ ಇರುವ ಅಂತರವನ್ನು ಗರಿಷ್ಠಮಟ್ಟದಲ್ಲಿ ಕಡಿಮೆಮಾಡಲು ಕ್ರಮವಹಿಸುವುದು. ಆದ್ದರಿಂದ ಅಧಿನಿಯಮ ಮತ್ತು ಮಾರ್ಗಸೂಚಿಗಳಂತೆ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಗ್ರಾಮೀಣ ಜನರಿಗೆ ಉದ್ಯೋಗವನ್ನು ನಿರಾಕರಿಸದೆ ಒದಗಿಸುವುದು. ಉಲ್ಲೇಖದಲ್ಲಿ ಸ್ವೀಕರಿದ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕ್ರಮವಹಿಸಿದೆ.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಆಡಳಿತಾತ್ಮಕ ವಿಷಯಗಳು

ಅನಸಾ ರಾಗ್ರಸಂಸ್ಥೆ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ – 2005' ರಡಿ ಕೈಗೊಂಡ ಕಾಮಗಾರಿಗಳ ದಾಖಲಾತಿ, ಲೆಕ್ಕಪತ್ರಗಳ ನಿರ್ವಹಣೆಗಾಗಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯಕಾರಿ ಸಹಾಯಕರನ್ನು ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:** ಈ ಇಲಾಖೆಯ ಸುತ್ತೋಲೆ ಸಂಖ್ಯೆ: ಗ್ರಾಅಪ.12 ಉಖಾಯೋ 2006 ದಿನಾಂಕ 1–4–2006 ಮತ್ತು ಆದೇಶದ ಸಮಸಂಖ್ಯೆಯ ದಿನಾಂಕ 11–12–2006.

* * *

### ಪ್ರಸ್ತಾವನೆ

ಉಲ್ಲೇಖಿತ ಸುತ್ತೋಲೆಯಂತೆ, "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ–2005"ರ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ದಾಖಲಾತಿಗಳ ಹಣಕಾಸಿನ ಲೆಕ್ಕಪತ್ರ ನಿರ್ವಹಣೆ ಮಾಡುವುದಕ್ಕಾಗಿ ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಕಾರ್ಯಕಾರಿ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಲಾಗಿತ್ತು. 'ವಾಣಿಜ್ಯ ಪದವೀಧರರು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತಿಲ್ಲವಾದ ಕಾರಣ, 10+2 ಹಂತದಲ್ಲಿ ವಿಜ್ಞಾನದ ವಿಷಯದಲ್ಲಿ ತೇರ್ಗಡೆಯಾಗಿರುವವರಿಗೆ ಮತ್ತು ವಿಜ್ಞಾನ ಪದವೀಧರರಿಗೂ ಸಹ ಅವಕಾಶ ನೀಡಬೇಕೆಂದು ಬೇಡಿಕೆಗಳು ಜಿಲ್ಲೆಗಳಿಂದ ಬಂದಿದ್ದರಿಂದ ಇದರಂತೆ ದಿನಾಂಕ 11–12–2006ರಂದು ಆದೇಶ ಹೊರಡಿಸಲಾಗಿತ್ತು. ಗ್ರಾಮೀಣ ಪ್ರದೇಶದಲ್ಲಿ ಇವರೂ ಸಹ ಸಾಕಷ್ಟೂ ಸಂಖ್ಯೆಯಲ್ಲಿ ಲಭ್ಯವಾಗುತ್ತಿಲ್ಲವಾದ್ದರಿಂದ ಬಿ.ಎ. ಪದವೀಧರರಿಗೆ ಮತ್ತು 10+2 ಹಂತದಲ್ಲಿ ಕಲಾ ವಿಷಯಗಳನ್ನು ತೆಗೆದುಕೊಂಡು ಉತ್ತೀರ್ಣರಾದವರಿಗೂ ಸಹ ಅವಕಾಶ ನೀಡಬೇಕೆಂದು ಜಿಲ್ಲೆಗಳಿಂದ ಬೇಡಿಕೆಗಳು ಬಂದಿರುವುದರಿಂದ ಇವುಗಳನ್ನು ಸರ್ಕಾರ ಪರಿಗಣಿಸಿ ಉಲ್ಲೇಖಿತ ಆದೇಶವನ್ನು ಭಾಗಶಃ ಮಾರ್ಪಡಿಸಿ ಈ ಕೆಳಗಿನ ಆದೇಶ ಹೊರಡಿಸಿದೆ.

### ಸರ್ಕಾರದ ಆದೇಶ ಸಂ. ಗ್ರಾಅಪ. 12 ಉಖಾಯೋ 2006 ಬೆಂಗಳೂರು, ದಿನಾಂಕ 09–03–2006

"ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005"ರ ಅಡಿಯ "ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ"ಯಲ್ಲಿ ಕೈಗೊಳ್ಳುವ ಕಾಮಗಾರಿಗಳ ದಾಖಲಾತಿ, ಹಣಕಾಸು ಲೆಕ್ಕಪತ್ರ ನಿರ್ವಹಣೆ ಮಾಡಲು ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಕಾರ್ಯಕಾರಿ ಸಹಾಯಕರುಗಳನ್ನು (Executive Assistants) ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿದೆ.

ಸದರಿ ಕಾರ್ಯಕಾರಿ ಸಹಾಯಕರುಗಳ ಸಂಭಾವನೆ ವೆಚ್ಚವನ್ನು, ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ವೆಚ್ಚದ ಅಥವಾ ಆಡಳಿತಾತ್ಮಕ ವೆಚ್ಚದ ನಿಧಿಯಿಂದ ಭರಿಸತಕ್ಕದ್ದು.

### ನೇಮಕಾತಿ ಪ್ರಕ್ರಿಯೆ, ನೇಮಕಾತಿ ನಿಯಮ ಮತ್ತು ಷರತ್ತುಗಳು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 113ರಡಿ ಅಗತ್ಯವಿರುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ಪೂರ್ವಾನುಮೋದನೆಯೊಂದಿಗೆ, ಗ್ರಾಮ ಪಂಚಾಯಿತಿಗಳು, ತಮ್ಮ ಗ್ರಾಮ ಪಂಚಾಯಿತಿಯಲ್ಲಿ ಪೂರ್ಣಕಾಲಿಕವಾಗಿ ಕೆಲಸ ನಿರ್ವಹಿಸಲು ಇಚ್ಛಿಸುವ ಹಾಗು ಈ ಕೆಳಗಿನಂತೆ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಬೇಕು, ಅರ್ಹತೆಯ ಮೇಲೆ ಪಟ್ಟಿ ಮಾಡಿ, ಆ ಪಟ್ಟಿಯಲ್ಲಿ ಪ್ರಥಮ ಇರುವವರನ್ನು ಅರ್ಹತೆಯ ಪರೀಕ್ಷೆಗಾಗಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ನಿರ್ಧರಿಸುವ, ಆ ಜಿಲ್ಲೆಯ

೧. ಯಾವುದಾದರೂ ತಾಲ್ಲೂಕು ಅಥವಾ ಜಿಲ್ಲಾ ಕೇಂದ್ರಕ್ಕೆ ಕಳುಹಿಸಬೇಕು. ಒಂದು ವೇಳೆ ಆ ಅಭ್ಯರ್ಥಿ ಉತ್ತೀರ್ಣರಾಗದಿದ್ದಲ್ಲಿ ಪಟ್ಟಿಯಲ್ಲಿ ಎರಡನೆಯವರನ್ನು, ನಂತರ ನಿಗದಿಪಡಿಸುವ ದಿನಾಂಕಕ್ಕೆ ಪರೀಕ್ಷೆಗೆ ಹಾಜರಾಗಲು ಸೂಚಿಸಬೇಕು. ಅಭ್ಯರ್ಥಿಯ ಸೂಕ್ತತೆ ಬಗ್ಗೆ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ತೀರ್ಮಾನವೇ ಅಂತಿಮ.

೨. ಕಾರ್ಯಕಾರಿ ಸಹಾಯಕರನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು ಆರು ತಿಂಗಳವರೆಗೆ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಬೇಕು.

೩. ಈ ರೀತಿ ನೇಮಕಗೊಂಡವರು ಈ ಹುದ್ದೆಗೆ ಮುಂದೆ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಮನವಿ

ಸಲ್ಲಿಸಲು ಅವಕಾಶ ಇರುವುದಿಲ್ಲ.

೪. ಕಾರ್ಯಕಾರಿ ಸಹಾಯಕರ ವಿದ್ಯಾರ್ಹತೆಯ ವಿವರಗಳು ಈ ಕೆಳಗಿನಂತಿವೆ:

**ಅ) ಮೂಲ ವಿದ್ಯಾರ್ಹತೆ:**

ವಾಣಿಜ್ಯ/ವಿಜ್ಞಾನ/ಕಲಾ ವಿಷಯಗಳಲ್ಲಿ ಪದವಿ ಅಥವಾ ವಾಣಿಜ್ಯ/ವಿಜ್ಞಾನ/ಕಲಾ ವಿಷಯಗಳಲ್ಲಿ ೧೦+೨ ಉತ್ತೀರ್ಣ

ಅಥವಾ ಕಂಪ್ಯೂಟರ್‌ನಲ್ಲಿ ಡಿಪ್ಲೊಮೊ

**ಆ) ಕಂಪ್ಯೂಟರ್ ವಿಜ್ಞಾನ**

ಎಂ.ಎಸ್. ವರ್ಡ್ (M. S. Word), ಎಕ್ಸೆಲ್ (Excel), ಕನ್ನಡ (ನುಡಿ 'ಬಿ' ಅಕ್ಷರ) ಮತ್ತು ಇಂಗ್ಲೀಷಿನಲ್ಲಿ ಬೆರಳಚ್ಚು ಮಾಡುವುದು.

## ೫. ಅ) ಆಯ್ಕೆಯಲ್ಲಿ ಈ ಕೆಳಗಿನಂತೆ ಆದ್ಯತೆ ನೀಡಬೇಕು

1. ವಾಣಿಜ್ಯ ಪದವೀಧರರು – ಮೊದಲನೆಯ
2. ವಿಜ್ಞಾನ ಪದವೀಧರರು – ಎರಡನೆಯ
3. ವಾಣಿಜ್ಯ ಪಠ್ಯದಲ್ಲಿ 10+2 ಉತ್ತೀರ್ಣ – ಮೂರನೆಯ
4. ವಿಜ್ಞಾನ ಪಠ್ಯದಲ್ಲಿ 10+2 ಉತ್ತೀರ್ಣ – ನಾಲ್ಕನೆಯ
5. ಬಿ.ಎ. ಪದವೀಧರರು – ಐದನೆಯ
6. ಕಲಾ ಪಠ್ಯದಲ್ಲಿ 10+2 ಉತ್ತೀರ್ಣ – ಆರನೆಯ

## ಆ) ಸ್ಥಳೀಯರಿಗೆ ಆದ್ಯತೆ

1. ಆ ಗ್ರಾಮ ಪಂಚಾಯಿತಿಯಲ್ಲಿ ಖಾಯಂ ವಾಸವಾಗಿರುವವರಿಗೆ ಪ್ರಥಮ ಆದ್ಯತೆ ನೀಡಬೇಕು.
2. ಆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅರ್ಹ ಅರ್ಜಿದಾರರು ಲಭ್ಯವಾಗದಿದ್ದಲ್ಲಿ, ಆಗ, ಆ ತಾಲ್ಲೂಕಿನಲ್ಲಿ ಖಾಯಂ ವಾಸವಾಗಿರುವವರನ್ನು ಪರಿಗಣಿಸಬೇಕು.
3. ಆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅರ್ಹ ಅರ್ಜಿದಾರರು ಲಭ್ಯವಾಗದಿದ್ದಲ್ಲಿ ಆಗ ಆ ಜಿಲ್ಲೆಯಲ್ಲಿ ಖಾಯಂ ವಾಸವಾಗಿರುವವರನ್ನು ಪರಿಗಣಿಸಬೇಕು.
4. ಒಂದು ಗ್ರಾಮ ಪಂಚಾಯಿತಿಗೆ ಒಬ್ಬರನ್ನು ಮಾತ್ರ ನೇಮಿಸಬೇಕು.
5. 02–03–2007 ಅಥವಾ ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ ಇವುಗಳಲ್ಲಿ ಯಾವುದು ನಂತರವೋ ಆ ದಿನದಿಂದ ಅನ್ವಯವಾಗುವಂತೆ ಪ್ರತಿ ತಿಂಗಳಿಗೆ ರೂ. 2,744/– (ರೂಪಾಯಿ ಎರಡು ಸಾವಿರದ ಏಳು ನೂರ ನಲವತ್ತ ನಾಲ್ಕು ಮಾತ್ರ) ದರದಲ್ಲಿ (ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: KAE 38LMW 01 ದಿನಾಂಕ 14–1–04ರ ಪ್ರಕಾರ) ಸಂಭಾವನೆ ನೀಡಬೇಕು.

ಈ ಇಲಾಖೆಯ ಸುತ್ತೋಲೆ ಸಂಗ್ರಾಅಪ. 12, ಉಖಾಯೋ 2006 ದಿನಾಂಕ 01–04–2006 ಮತ್ತು ಆದೇಶ ಸಮಸಂಖ್ಯೆ ದಿನಾಂಕ 10–8–2006 ಮತ್ತು 11–12–2006ರಂತೆ ನೇಮಕಗೊಂಡವರು ತೃಪ್ತಿಕರವಾಗಿ ಕೆಲಸ ನಿರ್ವಹಿಸುತ್ತಿದ್ದು ಮುಂದುವರೆದಿದ್ದಲ್ಲಿ ಅವರು ಸಹ ದಿನಾಂಕ 2–3–2007 ರಿಂದ ಷರತ್ತು ಸಂಖ್ಯೆ 7ರಂತೆ ಸಂಭಾವನೆ ಪಡೆಯಲು ಅರ್ಹತೆ ಪಡೆಯುತ್ತಾರೆ.

೬. ಈ ಕೆಳಕಂಡ ಕಾರಣಗಳಿಂದಾಗಿ ಒಂದು ತಿಂಗಳ ಮನ್ಸೂಚನೆಯನ್ನು ನೀಡಿ, ನೇಮಕಾತಿಯನ್ನು ರದ್ದುಪಡಿಸಬಹುದು.

ಅ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ಅಥವಾ ಕಾರ್ಯನಿರ್ವಾಹಣಾಧಿಕಾರಿಯವರ ಅಥವಾ ಗ್ರಾಮ ಪಂಚಾಯಿತಿಯವರ ಅಭಿಪ್ರಾಯದಂತೆ ಕಾರ್ಯನಿರ್ವಹಣೆಯು ತೃಪ್ತಿಕರವಾಗಿರದಿದ್ದಲ್ಲಿ

ಆ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಆ ಗ್ರಾಮ ಪಂಚಾಯಿತಿಗೆ ಅನ್ವಯಿಸದೇ ಇರುವಾಗ

೭ ನೇಮಕಾತಿ ಹೊಂದಿರುವರು ಸೇವೆಯಿಂದ ಮುಕ್ತಾಯಗೊಂಡ ಕೂಡಲೇ, ಅವರಿಗೆ ಸಲ್ಲಬೇಕಾಗಿರುವ

ಬಾಕಿ ಹಣವನ್ನು ಯೋಜನೆಯ ನಿಧಿಯಿಂದ ಭರಿಸಲು ಸಾಧ್ಯವಾಗದಿದ್ದಲ್ಲಿ, ಗ್ರಾಮ ಪಂಚಾಯಿತಿ ನಿಧಿಯಿಂದ ಪಾವತಿಸಿ ಲೆಕ್ಕ ಚುಕ್ತ ಮಾಡಬೇಕು.

೮. ಈ ನೇಮಕಾತಿಯು ಕೇವಲ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಉದ್ದೇಶಕ್ಕೆ ಮಾತ್ರ ಸೀಮಿತವಾಗದ್ದು ಪಂಚಾಯಿತಿಗಳಲ್ಲಿ ಇರುವ ಮಂಜೂರಾದ ಹುದ್ದೆಗಳಿಗೆ ಇವುಗಳನ್ನು ನೇಮಕಾತಿ ಮಾಡಲಾಗಿದೆಯೆಂದು ಭಾವಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ ಆಇ/ವೆಚ್ಚ/6/ 2006 ದಿನಾಂಕ 28–2–2006ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು
ಸ್ವಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ – ೨೦೦೫ ರಡಿಯಲ್ಲಿ ಕೈಗೊಂಡ ಕಾಮಗಾರಿಗಳ ದಾಖಲಾತಿ, ಲೆಕ್ಕಪತ್ರಗಳ ನಿರ್ವಹಣೆಗಾಗಿ ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯಕಾರಿ ಸಹಾಯಕರನ್ನು ನೇಮಕಾತಿ ಮಾಡುವ ಬಗ್ಗೆ.

* * *

### ಪ್ರಸ್ತಾವನೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ – ೨೦೦೫ರ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ದಾಖಲಾತಿ, ಲೆಕ್ಕಪತ್ರಗಳ ನಿರ್ವಹಣೆ ಮಾಡಲು ಹಾಗೂ ಯೋಜನೆಗೆ ಸಂಬಂಧಿಸಿದ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಪ್ರತಿ ತಾಲ್ಲೂಕು ಪಂಚಾಯಿತಿಗೆ ಇಬ್ಬರಂತೆ ಕಾರ್ಯಕಾರಿ ಸಹಾಯಕರನ್ನು ನೇಮಕಾತಿ ಮಾಡಿಕೊಳ್ಳಲು ಸಚಿವ ಸಂಪುಟ ಅನುಮತಿಸಿದೆ. ಅದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ ೧೨ ಉಖಾಯೋ: ೨೦೦೫ ಬೆಂಗಳೂರು ದಿನಾಂಕ ೧೦.೦೮.೨೦೦೬**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಉದ್ಯೋಗ ಖಾತರಿ ಯೋಜನೆ ಅನುಷ್ಠಾನಕ್ಕಾಗಿ ಪ್ರತಿ ತಾಲ್ಲೂಕು ಪಂಚಾಯಿತಿಗೆ ಇಬ್ಬರಂತೆ ಕಾರ್ಯಕಾರಿ ಸಹಾಯಕರ (Executive Assistants) ಹುದ್ದೆಗಳನ್ನು ಸೃಜಿಸಲು ಮತ್ತು ಇವುಗಳಿಗೆ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಿದೆ.

ಸದರಿ ಕಾರ್ಯಕಾರಿ ಸಹಾಯಕರುಗಳ ಸಂಭಾವನೆ ವೆಚ್ಚವನ್ನು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವೆಚ್ಚದ ಅಥವಾ ಆಡಳಿತಾತ್ಮಕ ವೆಚ್ಚದ ನಿಧಿಯಿಂದ ಭರಿಸತಕ್ಕದ್ದು.

### ನೇಮಕಾತಿ ಪ್ರಕ್ರಿಯೆ, ನೇಮಕಾತಿ ನಿಯಮ ಮತ್ತು ಷರತ್ತುಗಳು

1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 113ರಡಿ ಅಗತ್ಯವಿರುವಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯ ಪೂರ್ವಾನುಮೋದನೆಯೊಂದಿಗೆ, ತಾಲ್ಲೂಕು ಪಂಚಾಯಿತಿಗಳು, ತಮ್ಮ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಹಾಗೂ ಪೂರ್ಣಕಾಲಿಕವಾಗಿ ಕೆಲಸ ನಿರ್ವಹಿಸಲು ಇಚ್ಛಿಸುವ, ಅರ್ಹ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕ ಮಾಡಿಕೊಳ್ಳಬೇಕು. (ಒಂದು ವೇಳೆ ಅರ್ಹರು ಲಭ್ಯವಿಲ್ಲದಿದ್ದಲ್ಲಿ ತಾಲ್ಲೂಕು ಪಂಚಾಯಿತಿ ಠರಾವಿನ ಮೂಲಕ ಪಕ್ಕದ ತಾಲ್ಲೂಕುಗಳಲ್ಲಿ ಅರ್ಹರಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲು ತೀರ್ಮಾನ ತೆಗೆದುಕೊಳ್ಳಬಹುದು).

2) ಕಾರ್ಯಕಾರಿ ಸಹಾಯಕರನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯತ್‌ಗಳು ಒಂದು ವರ್ಷದ ಮಟ್ಟಿಗೆ ಮಾತ್ರ ಗುತ್ತಿಗೆ ಆಧಾರ ಮೇಲೆ ನೇಮಿಸಿಕೊಳ್ಳತಕ್ಕದ್ದು.
ಈ ರೀತಿ ನೇಮಕಗೊಂಡವರು ಈ ಹುದ್ದೆಗೆ ಮುಂದೆ ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ

3) ಕಾರ್ಯಕಾರಿ ಸಹಾಯಕರ ವಿದ್ಯಾರ್ಹತೆ ಮತ್ತು ಅವರಿಗೆ ತಾಲ್ಲೂಕು ಪಂಚಾಯಿತಿಗಳು ನೀಡಬೇಕಾಗುವ ಸಂಭಾವನೆಯ ವಿವರಗಳನ್ನು ಈ ಕೆಳಕಂಡಂತೆ ಇವೆ.

| ಕ್ರ. ಸಂ. | ವಿದ್ಯಾರ್ಹತೆ | ಸಂಭಾವನೆ ರೂ. |
|---|---|---|
| 1. | ವರ್ಡ್‌ಪ್ರೊಸೆಸಿಂಗ್, ಸ್ಪ್ರೆಡ್‌ಶೀಟ್, ಪ್ರೆಸೆನ್‌ಟೇಷನ್, ಯೂಸ್ ಆಫ್ ಇಂಟರ್‌ನೆಟ್, ಯಾಸ್ ಆಫ್ ಕನ್ನಡ ಲಾಂಗ್‌ವೇಜ್ ಸಾಫ್ಟ್‌ವೇರ್ ಗಣಕಯಂತ್ರದಲ್ಲಿ ಮೂಲ ಜ್ಞಾನದ ಜೊತೆಗೆ ವಾಣಿಜ್ಯ ಪಠ್ಯದಲ್ಲಿ 10+2 ರ ಮಟ್ಟದಲ್ಲಿ ಉತ್ತೀರ್ಣರಾಗಿರುವುದು<br>**ಅಥವಾ**<br>ವರ್ಡ್‌ಪ್ರೊಸೆಸಿಂಗ್, ಸ್ಪ್ರೆಡ್‌ಶೀಟ್, ಪ್ರೆಸೆನ್‌ಟೇಷನ್, ಯೂಸ್ ಆಫ್ ಇಂಟರ್‌ನೆಟ್, ಯಾಸ್ ಆಫ್ ಕನ್ನಡ ಲಾಂಗ್‌ವೇಜ್ ಸಾಫ್ಟ್‌ವೇರ್ ಗಣಕಯಂತ್ರದಲ್ಲಿ ಮೂಲ ಜ್ಞಾನದ ಜೊತೆಗೆ ವಾಣಿಜ್ಯ ಪಠ್ಯದಲ್ಲಿ ಪದವೀಧರರಾಗಿ ಉತ್ತೀರ್ಣರಾಗಿರುವುದು. | 1,625/–<br>2,000/– |
| 2. | ಟ್ಯಾಲಿಯಲ್ಲಿ ಪ್ರೌಢತ್ವ ಹೆಚ್ಚುವರಿ ವಿದ್ಯಾರ್ಹತೆ ಹೊಂದಿದವರು | 500/– ಹೆಚ್ಚುವರಿ |

1) ಈ ಕೆಳಕಂಡ ಕಾರಣಗಳಿಗಾಗಿ ಒಂದು ತಿಂಗಳ ಮುನ್ಸೂಚನೆಯನ್ನು ನೀಡಿ, ನೇಮಕಾತಿಗಳನ್ನು ರದ್ದುಪಡಿಸಿಸಬಹುದು.

   ಅ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ಅಥವಾ ಕಾರ್ಯ ನಿರ್ವಾಹಣಾಧಿಕಾರಿಯವರ ಅಭಿಪ್ರಾಯದಂತೆ ಕಾರ್ಯ ನಿರ್ವಹಣೆಯು ತೃಪ್ತಿಕರವಾಗಿರದಿದ್ದಲ್ಲಿ.

   ಆ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಆ ತಾಲ್ಲೂಕು ಪಂಚಾಯಿತಿಗೆ ಅನ್ವಯಿಸಿದೇ ಇರುವಾಗ.

2) ನೇಮಕಾತಿ ಹೊಂದಿದವರ ಸೇವೆ ಮುಕ್ತಾಯಗೊಂಡ ಕೂಡಲೆ, ಅವರಿಗೆ ಸಲ್ಲಬೇಕಾಗಿರುವ ಬಾಕಿ ಹಣವನ್ನು, ಯೋಜನೆಯ ನಿಧಿಯಿಂದ ಭರಿಸಲು ಸಾಧ್ಯವಾಗದಿದ್ದಲ್ಲಿ, ಅದನ್ನು ತಾಲ್ಲೂಕು ಪಂಚಾಯಿತಿ ನಿಧಿಯಿಂದ ಪಾವತಿಸಿ, ಲೆಕ್ಕ ಚುಕ್ತ ಮಾಡಬೇಕು.

3) ಕಾರ್ಯಕಾರಿ ಸಹಾಯಕರಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಅಡಿಯ ಯೋಜನೆಗಳ ಅನುಷ್ಠಾನ ಹೊರತುಪಡಿಸಿ ಬೇರೆ ಯಾವ ಕೆಲಸವನ್ನು ವಹಿಸಬಾರದು.

4) ಈ ನೇಮಕಾತಿಯು ಕೇವಲ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಉದ್ದೇಶಕ್ಕೆ ಮಾತ್ರ ಸೀಮಿತವಾಗಿದ್ದು, ಪಂಚಾಯಿತಿಗಳಲ್ಲಿ ಇರುವ ಮಂಜೂರಾದ ಹುದ್ದೆಗಳಿಗೆ ಇವುಗಳನ್ನು ನೇಮಕಾತಿ ಮಾಡಲಾಗಿದೆಯೆಂದು ಭಾವಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ.ಸಂಖ್ಯೆ.ಆ.ಇ.193. ವೆಚ್ಚ–6/2006 ದಿನಾಂಕ 28.02.2006ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.
ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ :ಗ್ರಾಅಪ :5 :ಎನ್‌ಎಫ್ ಪಿ :2006 ಕರ್ನಾಟಕ ಸರ್ಕಾರದ ಸಚಿವಾಲಯ

ಬಹುಮಹಡಿ ಕಟ್ಟಡ,

ಬೆಂಗಳೂರು - 560 001 ದಿನಾಂಕ : 04-04-2007

ಇವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ಬಳ್ಳಾರಿ, ಹಾಸನ, ಚಿಕ್ಕಮಗಳೂರು, ಬೆಳಗಾಂ,
ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳು

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ ಇದರ ಅಡಿಯಲ್ಲಿ ಅನುದಾನವನ್ನು ಬಳಸಲು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಪಂಚಾಯತಿ ಮಟ್ಟಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುವ ಬಗ್ಗೆ

ಉಲ್ಲೇಖ: 1. ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ : 28012/10/205 ಎನ್‌ಆರ್‌ಇಜಿಎ ದಿನಾಂಕ : 26-03-2007

2. ಭಾರತ ಸರ್ಕಾರದ ಪತ್ರ ಸಂಖ್ಯೆ ವಿ : 24011/47/2005 ಎನ್‌ಆರ್‌ಇಜಿಎಎಸ್ ಎಲ್ ನಂ. 194 ದಿನಾಂಕ : 22-03-2007

3. GOI No J - 11011/7/2006-nrega Dt. 21-02-2007

* * *

ಉಲ್ಲೇಖ (1) ರ ಪ್ರಕಾರ, ಕೇಂದ್ರ ಸರ್ಕಾರ, ರಾಜ್ಯದ ಬಳ್ಳಾರಿ, ಹಾಸನ, ಚಿಕ್ಕಮಗಳೂರು, ಬೆಳಗಾಂ, ಶಿವಮೊಗ್ಗ ಮತ್ತು ಕೊಡಗು ಈ ಆರು ಜಿಲ್ಲೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿ ನಿಯಮವನ್ನು ವಿಸ್ತರಿಸಿ ಇದು ದಿನಾಂಕ 01-04-2007 ರಿಂದ ಅನ್ವಯವಾಗುವಂತೆ, ಅಧಿಸೂಚನೆ ಹೊರಡಿಸಿದೆ.

ಈ ಯೋಜನೆಯ ಅನುಷ್ಠಾನದ ಸಂಬಂಧ ಅನುದಾನದ ನಿರ್ವಹಣೆಗಾಗಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಪಂಚಾಯಿತಿ ಮಟ್ಟದಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯಬೇಕಾಗುತ್ತದೆ. ಆದುದರಿಂದ ಈ ಕೆಳಗಿನ ಕ್ರಮ ಕೈಗೊಳ್ಳಲು ಸೂಚಿಸಿದೆ.

1. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬ್ಯಾಂಕ್ ಖಾತೆಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇವುಗಳಲ್ಲಿ ಮಾತ್ರ ತೆರೆಯತಕ್ಕದ್ದು.
2. ಗ್ರಾಮ ಪಂಚಾಯಿತಿ ಹಂತದಲ್ಲಿ ಯಾವ ಬ್ಯಾಂಕುಗಳು ಕೂಲಿ ಪಾವತಿಗೆ ಸಂಬಂಧಿಸಿದಂತೆ ಕಾರ್ಮಿಕರ ಖಾತೆಗಳನ್ನು ತೆರೆಯಲು ಮುಂದೆ ಬರುತ್ತಾರೋ ಆ ಬ್ಯಾಂಕಿನಲ್ಲಿ ಗ್ರಾಮಪಂಚಾಯತಿ ಅನುದಾನವನ್ನು

ಇಡುವುದಕ್ಕಾಗಿ ಖಾತೆಯನ್ನು ತೆರೆಯಬೇಕು. (ಒಂದು ಗ್ರಾಮಪಂಚಾಯಿತಿಗೆ ಒಂದರಂತೆ)

3. ಖಾತೆಗಳನ್ನು ತೆರೆದಿರುವ ಬಗ್ಗೆ ಇದಕ್ಕೆ ಲಗತ್ತಿಸಿರುವ ನಮೂನೆಗಳಲ್ಲಿ ವಿವರಗಳನ್ನು ದಾಖಲಿಸಿ ವರದಿಸಬೇಕು.

4. ಅಕುಶಲ ಕೂಲಿ ಬಯಸಿ ಅರ್ಜಿ ಸಲ್ಲಿಸುವ ಕಾರ್ಮಿಕರು, ಅವರು ಗ್ರಾಮಕ್ಕೆ ಸಮೀಪವಿರುವ, ಬ್ಯಾಂಕಿನಲ್ಲಿ (ಇಲ್ಲಿ ಬ್ಯಾಂಕು ಎಂದರೆ, ಅನುಸೂಚಿತ ಬ್ಯಾಂಕ್, ಪ್ರಾಥಮಿಕ ಕೃಷಿ ಸಹಕಾರ ಸಂಘ, ಸಹಕಾರಿ ಬ್ಯಾಂಕ್ ಎಂದು ಸಹ ಅರ್ಥ) ಅವರು ಗಳಿಸಬಹುದಾದ ಕೂಲಿಯನ್ನು ಜಮಾ ಮಾಡಲು ಆ ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ಉಳಿತಾಯ ಖಾತೆಗಳನ್ನು ತೆರೆಯಲು ಅನುಕೂಲವಾಗುವಂತೆ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಉದ್ಯೋಗ ಚೀಟಿಗಳು, ಅಗತ್ಯವಿರುವ ನಮೂನೆ, ವಹಿ ಇತ್ಯಾದಿಗಳನ್ನು ಮುದ್ರಿಸಲು ನೋಂದಣಿ ಮಾಡಿರುವ ಕಾರ್ಮಿಕರ ಭಾವಚಿತ್ರಗಳನ್ನು ತೆಗೆಯಲು, ದಾಖಲೆಗಳ ರಕ್ಷಣೆಗಾಗಿ ಅಗತ್ಯವಿರುವ ಅಲ್ಮೇರಾ ಇತ್ಯಾದಿಗಳನ್ನು ಖರೀದಿಸಲು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಗಣಕೀಕರಣದ ವ್ಯವಸ್ಥೆಯನ್ನು ಬಲಪಡಿಸಲು ಮುನ್ನೋಟ ಯೋಜನೆ ರೂಪಿಸಲು, ಪ್ರತಿ ಜಿಲ್ಲೆಗೆ ರೂ.30-00 ಲಕ್ಷದಂತೆ ಉಲ್ಲೇಖಿತ (2) ರ ಪತ್ರದಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು ಜಿಲ್ಲಾ ಹಂತದಲ್ಲಿ ತೆರೆಯಲಾಗಿರುವ ಖಾತೆಗೆ ಜಮಾ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

ಉಲ್ಲೇಖಿತ (1)ಮತ್ತು (2)ಪತ್ರದ ಪ್ರತಿಗಳನ್ನು ಲಗತ್ತಿಸಲಾಗಿದೆ.

ತಮ್ಮ ವಿಶ್ವಾಸಿ

ಸಹಿ/-

**(ಆರ್. ಶಾಂತರಾಜ್)**

ನಿರ್ದೇಶಕರು ಸ್ವಉದ್ಯೋಗ ಕಾರ್ಯಕ್ರಮ ಹಾಗೂ ಪ.ನಿ.
ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 41 ರಾಗ್ರಾಉ 2006

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 05–04–2007

ಇವರಿಗೆ,

ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ಬಳ್ಳಾರಿ, ಬೆಳಗಾವಿ, ಬೀದರ್, ಚಿತ್ರದುರ್ಗ, ಚಿಕ್ಕಮಗಳೂರು
ದಾವಣಗೆರೆ, ಗುಲ್ಬರ್ಗ, ಹಾಸನ, ಕೊಡಗು, ರಾಯಚೂರು ಮತ್ತು ಶಿವಮೊಗ್ಗ.

ಮಾನ್ಯರೆ,

**ವಿಷಯ:** "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ" ಇದಕ್ಕೆ ಸಂಬಂಧಿಸಿದ, ವಿವಿಧ ವಹಿ, ನಮೂನೆಗಳನ್ನು ಮುದ್ರಿಸುವ ಬಗ್ಗೆ.

**ಉಲ್ಲೇಖ:** 1. ಅಧಿಸೂಚನೆ ಸಂಖ್ಯೆ: ಗ್ರಾಅಪ 41 ರಾಗ್ರಾಉ 06 ದಿನಾಂಕ: 01–02–2007
2. ದಿನಾಂಕ 3–4–2007ರಂದು ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಕಾರ್ಯಾಗಾರ.

* * *

1. "ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ" ಇದರಂತೆ ನಿಗದಿಪಡಿಸಿರುವ ವಹಿ / ನಮೂನೆಗಳನ್ನು ಮುದ್ರಿಸಿ ವಿತರಿಸಿ, ನಿರ್ವಹಿಸುವ ಬಗೆಗಿನ ವಿವರಗಳನ್ನು ಈ ಕೆಳಗೆ ಕೊಟ್ಟಿದೆ.

**ಈ ಯೋಜನೆಯಡಿ**

1. ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸುವ ವಹಿಗಳು ಪ್ರತಿ ಗ್ರಾಮಕ್ಕೆ ಪ್ರತ್ಯೇಕವಾಗಿ ಇರಬೇಕು.
2. ತಾಲ್ಲೂಕು ಪಂಚಾಯಿತಿಯಲ್ಲಿ ನಿರ್ವಹಿಸುವ ವಹಿಗಳು ಗ್ರಾಮ ಪಂಚಾಯಿತಿವಾರು ಪ್ರತ್ಯೇಕವಾಗಿ ಇರಬೇಕು.
3. ಜಿಲ್ಲಾ ಪಂಚಾಯಿತಿಯಲ್ಲಿ ನಿರ್ವಹಿಸುವ ವಹಿಗಳು ತಾಲ್ಲೂಕು ಪಂಚಾಯಿತಿವಾರು ಅದರಲ್ಲಿ ಗ್ರಾಮ ಪಂಚಾಯಿತಿವಾರು ಪ್ರತ್ಯೇಕವಾಗಿ ಇರಬೇಕು.
4. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಣಾ ಏಜೆನ್ಸಿಗಳು ನಿರ್ವಹಿಸುವ ವಹಿಗಳು
   - ಅ. ಪ್ರತಿ ಗ್ರಾಮ ಪಂಚಾಯಿತಿ ಕಾಮಗಾರಿಗಳಿಗೆ ಗ್ರಾಮ ಪಂಚಾಯಿತಿವಾರು ಇರಬೇಕು.
   - ಆ. ತಾಲ್ಲೂಕು ಪಂಚಾಯಿತಿ ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯಿತಿ ಮತ್ತು ಅದರಲ್ಲಿ ಗ್ರಾಮ ಪಂಚಾಯಿತಿವಾರು ಇರಬೇಕು.
   - ಇ. ಜಿಲ್ಲಾ ಪಂಚಾಯತ್ ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯಿತಿ ಮತ್ತು ಅದರಲ್ಲಿ ಗ್ರಾಮ ಪಂಚಾಯಿತಿವಾರು ಇರಬೇಕು.

2. ಒಂದು ಜಿಲ್ಲೆಯಲ್ಲಿ ಒಂದೇ ಮಾದರಿಯನ್ನು ಅನುಸರಿಸಲು ಅನುಕೂಲವಾಗುವಂತೆ ಇವುಗಳನ್ನು ಕೇಂದ್ರಿಯವಾಗಿ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿ ಮುದ್ರಿಸುವುದು ಸೂಕ್ತ (ದರಪಟ್ಟಿಗಳನ್ನು ಕರೆದು).

3. ಕುಟುಂಬ ಉದ್ಯೋಗ ಚೀಟಿಯಲ್ಲಿ ಕವರ್ ಪೇಜ್ (ಹೊರ ಪುಟ)ದಲ್ಲಿ ಎಲ್ಲ ವಿವರಗಳನ್ನು (ಅಂದರೆ, ಕುಟುಂಬದ ವಯಸ್ಕ ಸದಸ್ಯರ ಹೆಸರುಗಳು, ಅವರ ಭಾವಚಿತ್ರಗಳು, ವಿಳಾಸ, ಬ್ಯಾಂಕ್/ ಅಂಚೆ ಕಛೇರಿ ಖಾತೆ ಸಂಖ್ಯೆ, ಅಧಿಕಾರಿಗಳ ದೂರವಾಣಿ ಸಂಖ್ಯೆ ಇತ್ಯಾದಿ) ನಮೂದಿಸಿದ ನಂತರ ಅದನ್ನು ಲ್ಯಾಮಿನೇಟ್ ಮಾಡಿ ಸಂಬಂಧಿಸಿದವರಿಗೆ ವಿತರಿಸಬೇಕು. ಒಂದು ವೇಳೆ ಪೂರ್ಣ ವಿವರಗಳನ್ನು ದಾಖಲಿಸುವುದು ವಿಳಂಬವಾದಲ್ಲಿ, ಉದ್ಯೋಗ ಚೀಟಿಯನ್ನು ಒಂದು ಪ್ಲಾಸ್ಟಿಕ್ ಕವರಿನಲ್ಲಿ ಇಟ್ಟು ಸಂಬಂಧಿಸಿದವರಿಗೆ

ವಿತರಿಸಬೇಕು. ಪೂರ್ಣ ವಿವರಗಳು ನಮೂದಾದ ನಂತರ ಲ್ಯಾಮಿನೇಟ್ ಮಾಡಬೇಕು.

4. ಯಾವ ನಮೂನೆಯನ್ನು ಯಾವ ಅಳತೆಯಲ್ಲಿ ಹಾಗೂ ಎಷ್ಟು ಸಂಖ್ಯೆಯಲ್ಲಿ ಮುದ್ರಿಸಬೇಕು ಎಂಬ ವಿವರಗಳನ್ನು ಈ ಪತ್ರದ ಹಿಂಬದಿಯಲ್ಲಿ ಕೊಡಲಾಗಿದೆ.

5. ಪ್ರತಿ ವಹಿಯ ಮುಂಭಾಗದಲ್ಲಿ **"ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ"** ಎಂದು ಮುದ್ರಿಸಿ ಅದರ ಕೆಳಗಡೆ ವಹಿಯ ಉದ್ದೇಶ, ಜಲ್ಲೆ, ತಾಲ್ಲೂಕು, ಗ್ರಾಮ ಪಂಚಾಯಿತಿ, ಗ್ರಾಮ, ಬರುವಂತೆ ಮುದ್ರಿಸಬೇಕು. ಈ ವಹಿಗಳ ಹಿಂದಿನ ಪುಟದಲ್ಲಿ ಯೋಜನೆಗೆ ಸಂಬಂಧಿಸಿದ ವಿವರಗಳನ್ನು ಮುದ್ರಿಸಬೇಕು (ಇವುಗಳ ಮಾದರಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ).

6. ನಮೂನೆಗಳ ಮಾದರಿಗಳು, ಅವುಗಳ ಅಳತೆ, ಮುದ್ರಿಸಬೇಕಾದ ಸಂಖ್ಯೆ, ಇತ್ಯಾದಿ ವಿವರಗಳನ್ನು ಈ ದಿನ 11 ಜಿಲ್ಲೆಗಳ ಎಲ್ಲ ಜಿಲ್ಲಾ ಪಂಚಾಯತಿಗಳಿಗೆ ಇ–ಮೇಲ್ ಮಾಡಲಾಗಿದೆ. ತ್ವರಿತ ಅಂಚೆಯ ಮೂಲಕ ಸಹ ಕಳುಹಿಸಿದೆ.

ತಮ್ಮ ವಿಶ್ವಾಸಿ,
**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು
ಸ್ವಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅನಸೂ ರಾಗ್ರಹ

## “ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ” ಅಡಿಯಲ್ಲಿ ನಮೂನೆ/ ವಹಿಗಳನ್ನು ಮುದ್ರಿಸುವ ಬಗ್ಗೆ (03–04–2007ರಂದು ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಕಾರ್ಯಾಗಾರದಲ್ಲಿ ತೀರ್ಮಾನಿಸಿದಂತೆ)

| ಕ್ರ. ಸಂ. | ನಮೂನೆ ಸಂಖ್ಯೆ | ವಿವರ | | ಅಳತೆ | ಮುದ್ರಿಸಬೇಕಾದ ಸಂಖ್ಯೆ | ಅವಧಿ | ಮುದ್ರಿಸಬೇಕಾದ ಹಂತ | ಷರಾ |
|---|---|---|---|---|---|---|---|---|
| 1 | ನಮೂನೆ–1 | ಉದ್ಯೋಗ ನೋಂದಣಿಗಾಗಿ ಅರ್ಜಿ | Portrait | ಎ–4 (ಮುಂದೆ–ಹಿಂದೆ) | ಗ್ರಾಮೀಣ ಕುಟುಂಬಗಳ ಸಂಖ್ಯೆಯ ಎರಡರಷ್ಟು (ದ್ವಿಪ್ರತಿಯಲ್ಲಿ ಸಲ್ಲಿಸಬೇಕಾಗಿರುವುದರಿಂದ) | (ಒಮ್ಮೆಗೆ ಮಾತ್ರ) | ಜಿಲ್ಲೆ/ತಾಲ್ಲೂಕು | ಪುಟ ಸಂಖ್ಯೆ ಅಗತ್ಯವಿಲ್ಲ |
| 2 | ನಮೂನೆ –2 | ಅರ್ಜಿಗಳ ನೋಂದಣಿ ವಹಿ | Landscape | ಎ–3 (ಮುಂದೆ–ಹಿಂದೆ) | ಪ್ರತಿ 8 ಕುಟುಂಬಗಳಿಗೆ ಒಂದು ಹಾಳೆಯಂತೆ (ಪ್ರತಿ ಕುಟುಂಬಕ್ಕೆ 3 ಮಂದಿ ವಯಸ್ಕರು ಅಕುಶಲ ಕೆಲಸ ಕೋರುವರೆಂದು ತಿಳಿದಲ್ಲಿ) | (ಒಮ್ಮೆಗೆ ಮಾತ್ರ) | ಜಿಲ್ಲೆ/ತಾಲ್ಲೂಕು | ಪುಟ ಸಂಖ್ಯೆ ಇರಬೇಕು |
| 3 | ನಮೂನೆ –3ಎ | ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗದ ವಹಿ | Landscape | ಎ–3 (ಮುಂದೆ) | ಪ್ರತಿ ಗ್ರಾಮೀಣ ಕುಟುಂಬಕ್ಕೆ ಒಂದು ಹಾಳೆ | (ಒಮ್ಮೆಗೆ ಮಾತ್ರ) | ಜಿಲ್ಲೆ/ತಾಲ್ಲೂಕು | ಪುಟ ಸಂಖ್ಯೆ ಇರಬೇಕು |
| 4 | ನಮೂನೆ–3ಬಿ | ಉದ್ಯೋಗ ನೀಡಿದ ಮತ್ತು ಕೂಲಿ ಪಾವತಿಸಿದ ವಿವರಗಳ ವಹಿ | Landscape | ಎ–4 (ಮುಂದೆ–ಹಿಂದೆ) | ಪ್ರತಿ ಗ್ರಾಮೀಣ ಕುಟುಂಬಕ್ಕೆ 6 ಹಾಳೆಗಳಂತೆ | (5 ವರ್ಷಕ್ಕೆ( | ಜಿಲ್ಲೆ/ತಾಲ್ಲೂಕು | ಪುಟ ಸಂಖ್ಯೆ ಇರಬೇಕು |
| 5 | ನಮೂನೆ–4 | ಕುಟಂಬ ಉದ್ಯೋಗ ಚೀಟಿ | Landscape | ಎ–4 (ಎರಡೂ ಕಡೆ) | ಪ್ರತಿ ಗ್ರಾಮೀಣ ಕುಟುಂಬಕ್ಕೆ ಒಂದರಂತೆ ಮೊದಲ ಹಾಳೆ ಸ್ವಲ್ಪ ದಪ್ಪಗಿರ ಬೇಕು (ನಂತರದ ಒಳ ಹಾಳೆಗಳು 5 ಇರಬೇಕು, ಒಟ್ಟು 24 ಪುಟ) | (ಒಮ್ಮೆಗೆ ಮಾತ್ರ) | ಜಿಲ್ಲೆ/ತಾಲ್ಲೂಕು | ಪ್ರತಿ ಉದ್ಯೋಗ ಚೀಟಿಗೆ ನಿರಂತರವಾಗಿ ಹಾಗೂ ಪ್ರತಿ ಪುಸ್ತಕಕ್ಕೆ 1 ರಿಂದ 24 |
| 6 | ನಮೂನೆ–5 | ಕುಟುಂಬ ಉದ್ಯೋಗ ಚೀಟಿ ವಿತರಣಾ ವಹಿ | Landscape | ಎ–4 (ಮುಂದೆ–ಹಿಂದೆ) | ಪ್ರತಿ 25 ಗ್ರಾಮೀಣ ಕುಟುಂಬಕ್ಕೆ ಒಂದು ಹಾಳೆ | (ಒಮ್ಮೆಗೆ ಮಾತ್ರ) | ಜಿಲ್ಲೆ/ತಾಲ್ಲೂಕು | ಪುಟ ಸಂಖ್ಯೆ ಬೇಕು |
| 7 | ನಮೂನೆ–6 | ಕೆಲಸಕ್ಕಾಗಿ ಅರ್ಜಿ | Portrait | ಎ–4 (ಎರಡೂ ಕಡೆ) | ಗ್ರಾಮೀಣ ಕುಟುಂಬಗಳ ಮೂರರಷ್ಟು (ದ್ವಿಪ್ರತಿಯಲ್ಲಿ ಹಾಗೂ ಆಗಿಂದಾಗ್ಗೆ ಸಲ್ಲಿಸಬೇಕಾಗಿರುವುದರಿಂದ, ಗುಂಪು ಅರ್ಜಿಗೆ ಅವಕಾಶ ಇರುವುದರಿಂದ) | (1 ವರ್ಷಕ್ಕೆ) | ತಾಲ್ಲೂಕು | ಪುಟ ಸಂಖ್ಯೆ ಅಗತ್ಯವಿಲ್ಲ |
| 8 | ನಮೂನೆ–7 | ಉದ್ಯೋಗ ಬೇಡಿಕೆ ವಹಿ | Landscape | ಎ–3 (ಎರಡೂ ಕಡೆ) | ಪ್ರತಿ 10 ಗ್ರಾಮೀಣ ಕುಟುಂಬಕ್ಕೆ ಒಂದು ಹಾಳೆ | (1 ವರ್ಷಕ್ಕೆ) | ತಾಲ್ಲೂಕು | ಪುಟ ಸಂಖ್ಯೆ ಬೇಕು |
| 9 | ನಮೂನೆ–8 | ಕೆಲಸಕ್ಕೆ ವರದಿ ಮಾಡಿ ಕೊಳ್ಳುವುದಕ್ಕಾಗಿ ನೋಟೀಸು ಜಾರಿ ವಹಿ | Landscape | ಎ–3 (ಎರಡೂ ಕಡೆ) | ಪ್ರತಿ 4 ಗ್ರಾಮೀಣ ಕುಟುಂಬಕ್ಕೆ ಒಂದು ಹಾಳೆ | (1 ವರ್ಷಕ್ಕೆ) | ತಾಲ್ಲೂಕು | ಪುಟ ಸಂಖ್ಯೆ ಬೇಕು |
| 10 | ನಮೂನೆ–9 | ಕೆಲಸಕ್ಕೆ ಹಾಜರಾಗಲು ತಿಳಿಸುವ ಸಾರ್ವಜನಿಕ ನೋಟೀಸು | Portrait | ಎ–4 (ಮುಂದೆ–ಹಿಂದೆ) | ಪ್ರತಿ 5 ಗ್ರಾಮೀಣ ಕುಟುಂಬಕ್ಕೆ ಒಂದು ಹಾಳೆ | (1 ವರ್ಷಕ್ಕೆ) | ತಾಲ್ಲೂಕು | ಪುಟ ಸಂಖ್ಯೆ ಬೇಡ |
| 11 | | ಅಕುಶಲ ಕೂಲಿಗಾಗಿ ಹಾಜರಿಪಟ್ಟಿ (Muster roll) | Landscape | ಎ–3 (4ಪುಟ)<br>ಎ–3(8ಪುಟ) | ಪ್ರತಿ 8 ಕುಟುಂಬಗಳಿಗೆ ಒಂದರಂತೆ<br>ಪ್ರತಿ 8 ಕುಟುಂಬಗಳಿಗೆ ಒಂದರಂತೆ | (1 ವರ್ಷಕ್ಕೆ) | ಜಿಲ್ಲೆ | ಹಾಜರಿಪಟ್ಟಿಗಳಿಗೆ ನಿರಂತರವಾಗಿ ಹಾಗೂ ಪ್ರತಿ ಪಟ್ಟಿಗೆ 1 ರಿಂದ 4 ಅಥವಾ 1 ರಿಂದ 8 |
| 12 | | ಕಾಮಗಾರಿಗಳ ವಹಿ | Horizontal | Cash book full scape size | ಪ್ರತಿ ಜಿಪಂ/ತಾ.ಪಂ./ಗ್ರಾ.ಪಂ. ಗೆ 100 ಹಾಳೆಗಳಂತೆ | | ಜಿಲ್ಲೆ | ಪುಟ ಸಂಖ್ಯೆ ಬೇಕು |

ಸೂಚನೆ: ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಬೆಳಗಾಂ ಈ ಜಿಲ್ಲೆಗಳಲ್ಲಿ ಅಕುಶಲ ಕೂಲಿಗಾಗಿ ಉದ್ಯೋಗ ಬೇಡಿಕೆ ಹೆಚ್ಚಿಗೆ ಬಾರದಿರುವ ಸಂದರ್ಭವಿರುವುದರಿಮದ ಎಲ್ಲ ನಮೂನೆಗಳನ್ನು ಕಡಿಮೆ ಪ್ರಮಾಣದಲ್ಲಿ ಮುದ್ರಿಸಿ ಅಗತ್ಯವಿದ್ದಲ್ಲಿ ನಂತರ ಮುದ್ರಿಸಲು ಸೂಚಿಸಿದೆ. ನಮೂನೆ 1, 6, 9 ಇವುಗಳನ್ನು 6 ತಿಂಗಳಿಗೆ ಬೇಕಾಗುವಷ್ಟರಮಟ್ಟಿಗೆ ಮಾತ್ರ ಪ್ರಥಮವಾಗಿ ಮುದ್ರಿಸಿ ಅಗತ್ಯವಿದ್ದಲ್ಲಿ ನಂತರ ಮುದ್ರಿಸಲು ಸೂಚಿಸಿದೆ.

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ: 41:ಉಖಾಯೋ : 2007

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ 11–04–2007

## ಸುತ್ತೋಲೆ

**ವಿಷಯ:** 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ' ಇದರ ಅಡಿಯಲ್ಲಿ ಅಕುಶಲ ಕೂಲಿ ಪಾವತಿಗಾಗಿನ ಹಾಜರಾತಿ ಪಟ್ಟಿ (Muster Roll) ಮುದ್ರಿಸುವ ಮತ್ತು ನಿರ್ವಹಣೆ ಕುರಿತು.

* * *

'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ' ಇದರ ಅಡಿಯಲ್ಲಿ ಅಕುಶಲ ಕೂಲಿ ಪಾವತಿಗಾಗಿನ ಹಾಜರಿ ಪಟ್ಟಿಯನ್ನು ಮುದ್ರಿಸುವ ಮತ್ತು ನಿರ್ವಹಿಸುವ ಕುರಿತು ಸೂಚನೆಗಳನ್ನು ಈ ಕೆಳಗೆ ಕೊಡಲಾಗಿದೆ.

### ಎ. ಹಾಜರಿ ಪಟ್ಟಿಯ ಮುದ್ರಣ ಮತ್ತು ವಿವರಣೆ

1. ಅಕುಶಲ ಕೂಲಿ ಪಾವತಿಗಾಗಿನ ಹಾಜರಿ ಪಟ್ಟಿ ಅನುಬಂಧ–1 ರಂತೆ ಇರತಕ್ಕದ್ದು.
2. ಎ–3 ಅಳತೆಯ, 4 ಪುಟಗಳ ಮತ್ತು 8 ಪುಟಗಳ, ಎರಡು ರೀತಿಯ ಹಾಜರಿ ಪಟ್ಟಿಗಳನ್ನು ಮುದ್ರಿಸಬೇಕು.
3. ಇವಗಳನ್ನು ಪ್ರತಿ 8 ಗ್ರಾಮೀಣ ಕುಟುಂಬಗಳಿಗೆ ಒಂದರಂತೆ, ಮುದ್ರಿಸಬೇಕು, (8 ಪುಟಗಳ ಮತ್ತು 4 ಪುಟಗಳ ಹಾಜರಿ ಪಟ್ಟಿಗಳು ಸಮನಾಗಿ ಇರಬೇಕು. ನಂತರ ಮುದ್ರಿಸುವಾಗ ಅಗತ್ಯಕ್ಕೆ ತಕ್ಕಂತೆ ಇವುಗಳ ಸಂಖ್ಯೆಯನ್ನು ಬದಲಾಯಿಸಬಹುದು)
4. 8 ಪುಟಗಳ ಹಾಜರಿ ಪಟ್ಟಿಯಲ್ಲಿನ ಪುಟ 3ರ ಮೇಲೆ ನಿಗಧಿತ ಸ್ಥಳದಲ್ಲಿ, ಆ ಹಾಜರಾತಿಪಟ್ಟಿಯ ಒಂದನೇ ಪುಟಕ್ಕೆ ನೀಡಿದ ಸಂಖ್ಯೆಯನ್ನೇ ಮುದ್ರಿಸಬೇಕು.
5. ಹಾಜರಿ ಪಟ್ಟಿಗಳ ಮೇಲೆ ನಿರಂತರವಾದ ಕ್ರಮಸಂಖ್ಯೆಗಳನ್ನು (Continuous Sl. No.) ಮುದ್ರಿಸಬೇಕು. (ಜಿಲ್ಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಬೇಕು).
6. 4 ಪುಟದ ಮತ್ತು 8 ಪುಟದ ಹಾಜರಿ ಪಟ್ಟಿಗಳಿಗೆ ಒಂದೇ ಕ್ರಮ ಸಂಖ್ಯೆ ಇರಬಾರದು.
7. 4 ಪುಟದ ಮತ್ತು 8 ಪುಟದ ಹಾಜರಿ ಪಟ್ಟಿಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ, ಮೊದಲಿಗೆ ಸಮನಾಗಿ, ಆಯಾ ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿಯ ಮೂಲಕ ವಿತರಿಸಬೇಕು. (ಅನಂತರ ಬೇಡಿಕೆಗೆ ಅನುಸಾರವಾಗಿ ವಿತರಿಸಬೇಕು).
8. ಈ ರೀತಿ ಹಂಚಿಕೆ ಮಾಡಲಾದ ಹಾಜರಿ ಪಟ್ಟಿಗಳ ವಿವರಗಳನ್ನು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈ ಕೆಳಗಿನ ವಹಿಗಳಲ್ಲಿ ದಾಖಲಿಸಬೇಕು.

**ಅ) ತಾಲ್ಲೂಕು ಪಂಚಾಯಿತಿಗಳಿಗೆ ವಿತರಿಸಲಾಗಿರುವ ಹಾಜರಿ ಪಟ್ಟಿಗಳ ವಿವರ**

**ಜಿಲ್ಲೆ** **ತಾಲ್ಲೂಕು**

| ಕ್ರ. ಸಂ. | ತಾ. ಪಂ. ಹೆಸರು | ಗ್ರಾ. ಪಂ. ಗಳ ಸಂಖ್ಯೆ | ವಿತರಿಸಿದ ಹಾಜರಿ ಪಟ್ಟಿಗಳ ಕ್ರಮ ಸಂಖ್ಯೆಗಳು (೪ ಪುಟದ / ೮ ಪುಟದ) | | ಒಟ್ಟು | ಪಡೆದವರ ಹೆಸರು | ಸಹಿ | ದಿನಾಂಕ | ಷರಾ |
|---|---|---|---|---|---|---|---|---|---|
| | | | ರಿಂದ | ವರೆಗೆ | | | | | |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| | | | | | | | | | |

**ಆ) ಗ್ರಾಮ ಪಂಚಾಯಿತಿಗಳಿಗೆ ವಿತರಿಸಲಾಗಿರುವ ಹಾಜರಿ ಪಟ್ಟಿಗಳ ವಿವರ**

**ಜಿಲ್ಲೆ** **ತಾಲ್ಲೂಕು**

| ಕ್ರ. ಸಂ. | ಗ್ರಾ. ಪಂ. ಹೆಸರು | ವಿತರಿಸಿದ ಹಾಜರಿ ಪಟ್ಟಿಗಳ ಕ್ರಮ ಸಂಖ್ಯೆಗಳು | | ಒಟ್ಟು | ಪಡೆದವರ ಹೆಸರು | ಸಹಿ | ದಿನಾಂಕ | ಷರಾ |
|---|---|---|---|---|---|---|---|---|
| | | ರಿಂದ | ವರೆಗೆ | | | | | |
| ೧ | ೨ | ೩ | ೪ | ೫ | ೬ | ೭ | ೮ | ೯ |
| | | | | | | | | |

**ಇ) ಕಾಮಗಾರಿ ಸ್ಥಳದಲ್ಲಿ ಹಾಜರಿ ಹಾಕುವವರಿಗೆ ವಿತರಿಸಿ, ಹಿಂದಕ್ಕೆ ಪಡೆದ ಹಾಜರಿ ಪಟ್ಟಿಗಳ ವಿವರ**

**ಜಿಲ್ಲೆ:** **ತಾಲ್ಲೂಕು** **ಗ್ರಾಮ ಪಂಚಾಯಿತಿ:**

| ಕ್ರ. ಸಂ. | ಗ್ರಾಮ | ಕಾಮಗಾರಿಯ ಹೆಸರು | ವಿತರಿಸಿದ ಹಾಜರಿ ಪಟ್ಟಿಗಳ ಕ್ರಮ ಸಂಖ್ಯೆಗಳು | | ಒಟ್ಟು | ಪಡೆದವರ ಹೆಸರು | ಸಹಿ | ದಿನಾಂಕ | ಹಿಂದಿರುಗಿಸಿದ ದಿನಾಂಕ | ಸಹಿ | ಷರಾ |
|---|---|---|---|---|---|---|---|---|---|---|---|
| | | | ರಿಂದ | ವರೆಗೆ | | | | | | | |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ |
| | | | | | | | | | | | |

**B. ಹಾಜರಿ ಪಟ್ಟಿ ಭರ್ತಿ ಮಾಡುವ ವಿಧಾನ : (ಗ್ರಾಮ ಪಂಚಾಯತಿ ಕಾರ್ಯದರ್ಶಿ)**

1. ಯಾವ ದಿನಾಂಕದಿಂದ ಹಾಜರಿ ಪಟ್ಟಿಯನ್ನು ಉಪಯೋಗಿಸಬೇಕೋ ಆ ದಿನಾಂಕವನ್ನು ಅವಧಿಯ ಮೊದಲ ಭಾಗದಲ್ಲಿ ದಾಖಲಿಸಬೇಕು. ನಂತರದ ಭಾಗವನ್ನು ಹಾಜರಿ ಪಟ್ಟಿ ಹಿಂದಿರುಗಿ ಬಂದ ನಂತರ ದಾಖಲಿಸಬೇಕು

2. ಕ್ರ. ಸಂ. 4ರಲ್ಲಿ : 12 ಅಂಕಿಗಳ ಗ್ರಾಮದ ಸಂಕೇತ ಸಂಖ್ಯೆಯ ಮುದ್ರೆ (Seal) ಒತ್ತಬೇಕು. (ಪ್ರತಿ ಗ್ರಾಮಕ್ಕೆ ಅನ್ವಯವಾಗುವ ಸಂಕೇತ ಸಂಖ್ಯೆ ಇರುವ ಮುದ್ರೆ (Seal) ಮಾಡಬೇಕು, ಗ್ರಾಮಕ್ಕೆ ಸಂಕೇತ ಸಂಖ್ಯೆ ನೀಡುವ ಬಗ್ಗೆ ಸುತ್ತೋಲೆ ನೋಡಿ)

3. ಕ್ರ. ಸಂ. 5ರಲ್ಲಿ : ಆ ಕಾಮಗಾರಿ ಜಿಲ್ಲಾ ಪಂಚಾಯಿತಿ/ ತಾಲ್ಲೂಕು ಪಂಚಾಯಿತಿ/ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಿದ್ದೇ ಎಂದು ಬರೆಯಬೇಕು. (ಅನುಷ್ಠಾನ ಏಜೆನ್ಸಿ)

4. ಕ್ರ. ಸಂ. 6ರಲ್ಲಿ : ಆ ಕಾಮಗಾರಿಯನ್ನು ಯಾವ ಏಜೆನ್ಸಿಗೆ ವಹಿಸಲಾಗಿದೆ, ಉದಾ: ಅರಣ್ಯ ಇಲಾಖೆ, ಜಲಾನಯನ, ಪಿಆರ್‌ಇಡಿ, ಕಾರ್ಮಿಕರ ಸ್ವ–ಸಹಾಯ ಸಂಘ, ಇತ್ಯಾದಿ ಬರೆಯಬೇಕು.

5. ಕ್ರ. ಸಂ. 8ರಲ್ಲಿ: ಆ ಕಾಮಗಾರಿಯ ಆದ್ಯತೆ 1 ರಿಂದ 9ರ ಪೈಕಿ ಸೂಕ್ತವಾದ ಒಂದನ್ನು ಬರೆಯಬೇಕು. ಯಾವ ಕಾಮಗಾರಿಗೆ ಯಾವ ಆದ್ಯತೆ ಎಂಬುದನ್ನು ಈ ಕೆಳಗೆ ಕೊಟ್ಟಿದೆ.

   ಅ) ಜಲಸಂರಕ್ಷಣೆ ಮತ್ತು ನೀರು ಕೊಯ್ಲು –1
   ಆ) ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ ಮತ್ತು ಗಿಡ ನೆಡುವುದು ಸೇರಿದಂತೆ –2
   ಇ) ಕಿರು ಮತ್ತು ಸಣ್ಣ ನೀರಾವರಿ ಕಾಮಾರಿಗಳಿಗೂ ಸೇರಿದಂತೆ, ನೀರಾವತಿ ಕಾಲುವೆಗಳು –3
   ಈ) ಪ.ಜಾ./ ಪ.ಪಂ/ ಭೂಸುಧಾರಣೆ/ ಐಎವೈ, ಫಲಾನುಭವಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವವರ ಕುಟುಂಬಗಳ ಜಮೀನುಗಳಿಗೆ ನೀರಾವರಿ, ತೋಟಗಾರಿಕೆ ಮತ್ತು ಜಮೀನು ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸುವುದು –4
   ಉ) ಸಾಂಪ್ರದಾಯಿಕ ನೀರು ಸಂಚಯಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು–5
   ಊ) ಮೀನಿನ ಅಭಿವೃದ್ಧಿ –6
   ಋ) ನೀರು ನಿಂತ ಪ್ರದೇಶಗಳ ಚರಂಡಿಯೂ ಸೇರಿದಂತೆ ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣೆ –7
   ೠ) ಎಲ್ಲಾ ರೀತಿಯ ಹವಾಮಾನ ಪರಿಸ್ಥಿತಿಯಲ್ಲಿ ಉಪಯೋಗಿಸಬಹುದಾದ ಗ್ರಾಮೀಣ ಸಂಪರ್ಕಗಳ ನಿರ್ಮಾಣ –8
   ಎ) ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರ ಅಧಿಸೂಚಿಸುವ ಇತರೆ ಯಾವುದೇ ಕಾಮಗಾರಿ –9

6. ಕ್ರ. ಸಂ. 9: ಆ ಕಾಮಗಾರಿಯ ಸಂಕೇತ ಸಂಖ್ಯೆ (18 ಅಂಕಿಗಳ) ಬರೆಯಬೇಕು
   ಪ್ರತಿ ಕಾಮಗಾರಿಗೆ ಈ ಸಂಕೇತ ಸಂಖ್ಯೆಯನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ನೀಡುತ್ತಾರೆ. ಕಾಮಗಾರಿಗಳನ್ನು ಅವುಗಳ ಸಂಕೇತ ಸಂಖ್ಯೆಯ ಅನುಕ್ರಮದಲ್ಲಿ ಒಂದರ ನಂತರ ಮತ್ತೊಂದು ಹೀಗೆ ಮಾತ್ರ ತೆಗೆದುಕೊಳ್ಳಬೇಕು (ವಿವರಗಳಿಗಾಗಿ ಪ್ರತ್ಯೇಕ ಸುತ್ತೋಲೆ ನೋಡಿ)

7. ಕ್ರ. ಸಂ. 10: ಕಾಮಗಾರಿ ಯಾವ ಗ್ರಾಮದಲ್ಲಿ ಮತ್ತು ಯಾವ ಸರ್ವೆ ನಂಬರ್‌ಗಳಲ್ಲಿ ಇರುತ್ತದೆ ಎಂಬುದನ್ನು ಬರೆಯಬೇಕು. ರಸ್ತೆಯಾದಲ್ಲಿ, ಯಾವ ಕಿ.ಮೀ. ನಿಂದ ಯಾವ ಕಿ. ಮೀ.ವರೆಗೆ ಎಂದು ಬರೆಯಬೇಕು.

8. ಕ್ರ. ಸಂ. 11: ಕಾರ್ಯನಿರ್ವಾಹಣಾ ಏಜೆನ್ಸಿ ಸಿದ್ದಪಡಿಸಿರುವ ಕಾಮಗಾರಿಯ ಅಂದಾಜು ಪಟ್ಟಿಯ (Detail Estimate) ಆಧಾರದ ಮೇಲೆ, ಈ ವಿವರಗಳನ್ನು ದಾಖಲಿಸಬೇಕು.
   ಕ್ರ. ಸಂ. 12: ಗ್ರಾಮ ಪಂಚಾಯಿತಿ ಕಾಮಗಾರಿಯಾದರೆ, ಗ್ರಾಮಸಭೆಯ ದಿನಾಂಕ ಮತ್ತು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ನಿರ್ಣಯದ ಸಂಖ್ಯೆ ಮತ್ತು ದಿನಾಂಕ ನಮೂದಿಸಬೇಕು, ತಾಲ್ಲೂಕು ಪಂಚಾಯಿತಿ ಅಥವಾ ಜಿಲ್ಲಾ ಪಂಚಾಯಿತಿಯ–ಕಾಮಗಾರಿಗಳಾದರೆ, ಅನುಕ್ರಮವಾಗಿ ಅವುಗಳ ಸಾಮಾನ್ಯ ಸಭೆಗಳ ನಿರ್ಣಯ ಸಂಖ್ಯೆ ಮತ್ತು ದಿನಾಂಕ ನಮೂದಿಸಬೇಕು

## 10 ವಿಶೇಷ ಸೂಚನೆ

ಅ) ಈ ಹಾಜರಾತಿ ಪಟ್ಟಿಯ, ಕ್ರಮ ಸಂಕ್ಯೆ 22ರಲ್ಲಿ, ಕಾರ್ಮಿಕರ ಹೆಸರು, ಕುಟುಂಬದ ನೋಂದಣಿ ಸಂಖ್ಯೆ, ವೈಯಕ್ತಿಕ ಸಂಖ್ಯೆ, ಅವರ ಪ್ರವರ್ಗ, ಗಂಡಸು/ಹೆಂಗಸು ಎಂಬುದನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯೇ ದಾಖಲಿಸಬೇಕು (ಹಾಜರಿ ಹಾಕುವುವರಲ್ಲ).

ಆ) 4 ಪುಟದ ಹಾಜರುಪಟ್ಟಿಯನ್ನು 26ರ ವರೆಗಿನ ಕಾರ್ಮಿಕರಿಗೆ, 8 ಪುಟದ ಹಾಜರಿ ಪಟ್ಟಿಯನ್ನು 78ರ ವರೆಗಿನ ಕಾರ್ಮಿಕರಿಗೆ ಬಳಸಬೇಕು.

ಇ) ಹಾಜರಿ ಪಟ್ಟಿಯಲ್ಲಿ ಕಾರ್ಮಿಕರ ಹೆಸರು ಇತ್ಯಾದಿಗಳನ್ನು ದಾಖಲಿಸುವಾಗ, ಉದ್ಯೋಗಾಕಾಂಕ್ಷಿಗಳ ಮತ್ತು ಉದ್ಯೋಗದ ವಹಿಯಲ್ಲಿ ದಾಖಲಾಗಿರುವ ಅನುಕ್ರಮದಲ್ಲಿ ಮತ್ತು ಉದ್ಯೋಗ ಬೇಡಿಕೆಯ ಪ್ರಾರಂಭದ ದಿನದ

ಆಧಾರದ ಮೇಲೆ, ಮಾತ್ರ ಬರೆಯಬೇಕು. ಕೊನೆಯ ಫಳಿಗೆವರೆಗೆ ಕಾಯದೆ ಮಸ್ಟರ್ ರೋಲ್ ವಿತರಿಸಬೇಕಾದ ದಿನಾಂಕಕ್ಕೆ ಸುಮಾರು ಮೂರು ದಿನಗಳ ಮುಂಚೆ ಈ ವಿವರಗಳನ್ನು ಆ ಮಸ್ಟರ್ ರೋಲ್‌ನಲ್ಲಿ ದಾಖಲಿಸಬೇಖು.

ಈ) ಒಂದು ಕುಟಂಬದ ಸದಸ್ಯರು ಒಂದೇ ಕಾಮಗಾರಿಗಳಲ್ಲಿ ಕೆಲಸ ಮಾಡುವಂತೆ ಹಂಚಿಕೆ ಮಾಡಬೇಕು. (ಇದರಿಂದ ಅವರಿಗೆ ನೋಟೀಸು ಜಾರಿ ಮಾಡಲು, ನೀಡಿದ ಉದ್ಯೋಗ ಮತ್ತು ಪಾವತಿಸಿದ ಕೂಲಿಯನ್ನು ಕುಟುಂಬದ ಚೀಟಿಯಲ್ಲಿ ದಾಖಲಿಸಲು, ಬ್ಯಾಂಕ್ ಅಡ್ವೈಸ್ ಸಿದ್ದಪಡಿಸಲು, ಅವರ ಖಾತೆಗೆ ಕೂಲಿ ಜಮೆ ಮಾಡಲು, 100 ದಿನಗಳು ಪೂರೈಸಿರುವುದನ್ನು ತಿಳಿಯಲು ಸಾಧ್ಯವಾಗುತ್ತದೆ).

ಉ) ಒಂದು ಹಾಜರಿ ಪಟ್ಟಿಯ ಅವಧಿ ಸಾಮಾನ್ಯವಾಗಿ 6 ದಿನಗಳಿಗೆ ಮಾತ್ರ ಇರಬೇಕು. ಅನಿವಾರ್ಯ ಸಂಧರ್ಭಗಳಲ್ಲಿ 9 ಕೆಲಸದ ದಿನಗಳವರೆಗೆ ಉಪಯೋಗಿಸಬಹುದು.

ಊ) ಪ್ರತಿ 6 ದಿನಗಳ ನಂತರ ಒಂದು ದಿನದ ರಜೆ ಇರಬೇಕು. ಆ ದಿನಾಂಕದಂದು ಹಾಜರಿ ಪಟ್ಟಿಯಲ್ಲಿ ರಜಾ ದಿನ ಎಂದು ದಾಖಲಿಸಬೇಕು.

ಋ) ಇಲಾಖೆಯ ಸ್ಥಳೀಯ ತಾಂತ್ರಿಕ ಅಧಿಕಾರಿ ಸ್ಥಳಕ್ಕೆ ಬಂದು ಕೆಲಸದ ಉತ್ಪತ್ತಿಯ ಬಗ್ಗೆ ಅಳತೆ ತೆಗೆದುಕೊಂಡ ದಿನ ಹಾಜರಾತಿಯನ್ನು ಅಂತಿಮಗೊಳಿಸಬೇಕು.

ೠ) ಕೆಲಸಮಾಡುವವರ ಪೈಕಿ ಒಬ್ಬ ಅಕ್ಷರಸ್ಥರು ಹಾಜರಾತಿ ಹಾಕುವ ಕೆಲಸ ನಿರ್ವಹಿಸುತ್ತಾರೆ. ಪ್ರತಿ ಮಸ್ಟರ್ ರೋಲ್ ಅವಧಿಗೆ ಇವರು ಬದಲಾಗುತ್ತಿರಬಹುದು (ಇದನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ನಿರ್ಧರಿಸಬೇಕು).

ಎ) ಹೆಚ್ಚಿನ ವಿವರಗಳಿಗೆ "ಹಾಜರಿ ಪಟ್ಟಿ ನಿರ್ವಹಿಸುವವರ ಕರ್ತವ್ಯಗಳು' ಇದನ್ನು ನೋಡಿ.

ಏ) ಕಾಮಗಾರಿಯ ಸ್ಥಳದಲ್ಲಿ ಹಾಜರಾತಿ ಪಟ್ಟಿಗಳು, ಕುಟುಂಬದ ಉದ್ಯೋಗ ಚೀಟಿಗಳು, ಪ್ರಥಮ ಚಿಕಿತ್ಸೆ ಪಟ್ಟಿಗೆ, ಇಂಕ್ ಪ್ಯಾಡ್, ಬಾಲ್‌ಪೆನ್ ಇತ್ಯಾದಿಗಳನ್ನು ಜೋಪಾನವಾಗಿಟ್ಟುಕೊಳ್ಳಲು ಅನುಕೂಲವಾಗುವಂತೆ, ಹಾಜರಿ ಪಟ್ಟಿ ನಿರ್ವಹಿಸುವ ವ್ಯಕ್ತಿಗೆ ಬೀಗ ಹಾಕಬಹುದಾದ ಒಂದು ಚಿಕ್ಕ ಪೆಟ್ಟಿಗೆ ಕೊಡಬೇಕು. (ಈ ಪಟ್ಟಿಗೆಗಳನ್ನು ಮತ್ತು ಇತರ ವಸ್ತುಗಳನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿ/ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರತಿ ಗ್ರಾಮಕ್ಕೆ ಎರಡರಂತೆ ಖರೀದಿಸಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ವಿತರಿಸಬೇಕು).

11. ಕ್ರ. ಸಂ. 13 ಮತ್ತು 14ರಲ್ಲಿ ತಾಂತ್ರಿಕ ಮಂಜೂರಾತಿಯ ಮತ್ತು ಆಡಳಿತ ಮಂಜೂರಾತಿಗಳ ಸಂಖ್ಯೆ ಮತ್ತು ದಿನಾಂಕಗಳನ್ನು ನಮೂದಿಸಬೇಕು.

12. ಕ್ರ. ಸಂ. 15ರಲ್ಲಿ: ಕಾಮಗಾರಿಯ ಸ್ಥಳದಲ್ಲಿ ಹಾಜರಿ ಹಾಕುವ ಜವಾಬ್ದಾರಿ, ಯಾರಿಗೆ ಕೊಡಲಾಗಿದೆಯೋ ಅವರ ಹೆಸರನ್ನು ದಾಖಲಿಸಿ, ಅವರ ಸಹಿ, ದಿನಾಂಕ ಪಡೆದು ಹಾಜರಿ ಪಟ್ಟಿಯನ್ನು ಅವರಿಗೆ ಕೊಡಬೇಕು.

## ಸಿ. ಹಾಜರಿ ಪಟ್ಟಿ ಭರ್ತಿ ಮಾಡುವ ವಿಧಾನ (ಕಾರ್ಯನಿರ್ವಾಹಣಾ ಏಜೆನ್ಸಿಯ ಸ್ಥಳೀಯ ಅಧಿಕಾರಿ)

1. ಕ್ರ. ಸಂ. 17: ವಿವಿಧ ಕಾರ್ಯನಿರ್ವಾಹಣಾ ಏಜೆನ್ಸಿಗಳ ಸ್ಥಳೀಯ ತಾಂತ್ರಿಕ ಅಧಿಕಾರಿಗಳು ಈ ಕೆಳಗಿನಂತೆ ಇರುತ್ತಾರೆ.

| | |
|---|---|
| ಅ) ಜಲಾನಯನ | – ಕೃಷಿ ಸಹಾಯಕರ |
| ಆ) ಅರಣ್ಯ | – ವನಪಾಲಕ/ ವನಪಾಲಿ |
| ಇ) ಕೃಷಿ | – ಕೃಷಿ ಸಹಾಯಕ |
| ಈ) ತೋಟಗಾರಿಕೆ | – ತೋಟಗಾರಿಕಾ ಸಹಾಯಕ |
| ಉ) ಪಂಚಾಯತ್ ರಾಜ್ ಇಂಜೀನಿಯರಿಂಗ | – ಕಿರಿಯ ಇಂಜಿನಿಯರ್/ ಸಹಾಯಕ ಇಂ. |
| ಊ) ಲೋಕೋಪಯೋಗಿ | – ಕಿರಿಯ ಇಂಜಿನಿಯರ್/ ಸಹಾಯಕ ಇಂ. |
| ಋ) ಸಣ್ಣ ನೀರಾವರಿ | – ಕಿರಿಯ ಇಂಜಿನಿಯರ್/ ಸಹಾಯಕ ಇಂ. |
| ೠ) ಭೂಸೇನಾ ನಿಗಮ | – ಟಾಸ್ಕ್ ಪೋರ್ಸ್ ಕಮ್ಯಾಂಡರ್ |
| ಎ) ನಿರ್ಮಿತಿ ಕೇಂದ್ರ | – ಪ್ರಾಜಕ್ಟ್ ಇಂಜಿನಿಯರ್ |

## 2. ವಿಶೇಷ ಸೂಚನೆ

ಅ) ಯಾವ ಕಾಮಗರಿಯ ಅಳತೆಯನ್ನು ಯಾವ ದಿನಾಂಕದಂದು ಮಾಡಲಾಗುವುದು ಎಂಬ ಬಗ್ಗೆ ಸ್ಥಳೀಯ ತಾಂತ್ರಿಕ ಅಧಿಕಾರಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ಕನಿಷ್ಠ ೩ ದಿನಗಳ ಮುಂಚಿತವಾಗಿ ತಿಳಿಸಬೇಕು.

ಆ) ಅಳತೆ ಮಾಡುವ ಕೆಲಸ ಒಮ್ಮೆ ೬ ದಿನಗಳಿಗಿಂತ ಮುಂದೆ ಹೋದಲ್ಲಿ, ನಂತರದ ಹಾಜರಿ ಪಟ್ಟಿಯನ್ನು, ಅಳತೆಯ ನಂತರದ ದಿನಾಂಕದಿಂದ ಪ್ರಾರಂಭಿಸಬೇಕು.

ಇ) ಕೆಲಸದ ರಜಾ ದಿನದ ನಂತರದ ೭ ದಿನಗಳ ಪೈಕಿ, ಕೆಲವು ಹಿಂದಿನ ಹಾಜರಿ ಪಟ್ಟಿಯಲ್ಲಿರಬಹುದು, ಉಳಿದ ದಿನಗಳು ನಂತರದ ಹಾಜರಿ ಪಟ್ಟಿಯಲ್ಲಿ ಇರಬಹುದು.

ಈ) ಆದರೆ ಚಾಲ್ತಿಯಲ್ಲಿರುವ ಹಾಜರಿ ಪಟ್ಟಿಯಲ್ಲಿ ಕನಿಷ್ಠ ೭ ಕೆಲಸದ ದಿನಗಳು ಆಗುವವರೆಗೆ, ಅಳತೆ ತೆಗೆದುಕೊಳ್ಳತಕ್ಕದ್ದಲ್ಲ. (ಇದು ಕೆಲಸ ಅಂತಿಮವಾಗಿ ಪೂರ್ಣಗೊಂಡ ದಿನಕ್ಕೆ ಅನ್ವಯಿಸುವುದಿಲ್ಲ. ಕೆಲಸ ಅಂತಿಮವಾಗಿ ಪೂರ್ಣಗೊಂಡರೆ ಆ ದಿನದಂದೇ ಅಳತೆ ಮಾಡಿ ದಾಖಲಿಸಿ, ಹಾಜರಿ ಪಟ್ಟಿಯನ್ನು ಮುಕ್ತಾಯ ಮಾಡಬೇಕು).

3. ಕ್ರ. ಸಂ. ೧೭: ಒಬ್ಬ ವ್ಯಕ್ತಿ ದಿನದ ೮ ಗಂಟೆಗಳಲ್ಲಿ ಯಾವ ಕಾಮಗಾರಿಯ ಎಷ್ಟು ಕೆಲಸವನ್ನು ಮಾಡಬಹುದು ಎಂಬ ಬಗೆಗಿನ ಕೆಲಸದ ಉತ್ಪತ್ತಿಯ ಅನುಸೂಚಿ (Workout put schedule) ಯನ್ನು ಸರ್ಕಾರ ಅಧಿಸೂಚನೆ/ ಆದೇಶದ ಮೂಲಕ, ಕಾಲ ಕಾಲಕ್ಕೆ ಹೊರಡಿಸುತ್ತದೆ. ಇದರ ಆಧಾರದ ಮೇಲೆ ಹಾಜರಾತಿಯನ್ನು ಮುಕ್ತಾಯ ಮಾಡವ ಚಿನದ ಅಂತ್ಯಕ್ಕೆ ಹಾಜರಾತಿಯಲ್ಲಿನ ಒಟ್ಟು ದಿನಗಳಂತೆ, ಆ ಕಾಮಗಾರಿಯಲ್ಲಿ ಉತ್ಪತ್ತಿ ಆಗಬೇಕಾಗಿದ್ದ, ಮಾನವ ದಿನಗಳು ಎಷ್ಟು ಎಂಬುದನ್ನು ದಾಖಲು ಮಾಡಬೇಕು.

4. ಕ್ರ. ಸಂ. ೧೮: ಪ್ರಸ್ತುತ ದಿನದ ಅಳತೆಯ ಪ್ರಕಾರ, ಪ್ರಾರಂಭದಿಂದ ಇಲ್ಲಿಯವರೆಗೆ ಉತ್ಪತ್ತಿಯಾದ ಮಾನವ ದಿನಗಳನ್ನು ದಾಖಲಿಸಬೇಕು, ಇದರಲ್ಲಿ ಈ ಹಿಂದಿನ ಅಳತೆಯ ಪ್ರಕಾರ ಉತ್ಪತ್ತಿಯಾದ ಮಾನವ ದಿನಗಳನ್ನು ಕಳೆದರೆ, ಪ್ರಸ್ತುತ ಹಾಜರ ಪಟ್ಟಿಯ ಅವಧಿಯಲ್ಲಿ ಮಾಡಲಾದ ಕೆಲಸದ ಉತ್ಪತ್ತಿಯ ಪ್ರಮಾಣ (ಮಾನವ ದಿನಗಳಲ್ಲಿ) ಲಭ್ಯವಾಗುತ್ತದೆ. ಇದನ್ನು ದಾಖಲಿಸಿ, ಎಂ.ಬಿ. ಸಂಖ್ಯೆ ಮತ್ತು ಅದರ ಪುಟಗಳ ಸಂಖ್ಯೆಗಳನ್ನು ನಮೂದಿಸಬೇಕು.

5. ಕ್ರ. ಸಂ. ೧೯:೧೮(ಇ)/೧೭) ಇದು ಕೆಲಸದ ಉತ್ಪತ್ತಿಯ ಪರಿಮಾಣ ಸೂಚಿಸುತ್ತದೆ. ಅಂದರೆ ಅಷ್ಟು ಮಾನವ ದಿನಗಳಲ್ಲಿ ಕೆಲಸದ ಉತ್ಪತ್ತಿ ಎಷ್ಟು ಆಗಿದೆ ಮತ್ತು ತಿಂಡಿಞ ಠಣಣ ಠಿಣಣ, ಛಿಜಜಣಟಜ ಪ್ರಕಾರ ಎಷ್ಟು ಆಗಬೇಕಾಗಿತ್ತು, ಎಂಬುದರ, ಅನುಪಾತ ಇದಾಗಿರುತ್ತದೆ. ನಿಗದಿತ ಪ್ರಮಾಣಕ್ಕಿಂತ ಕೆಲಸದ ಉತ್ಪತ್ತಿ ಕಡಿಮೆ ಆಗಿದ್ದಲ್ಲಿ ಈ ಅನುಪಾತ ೧ಕ್ಕಿಂತ ಕಡಿಮೆ ಇರುತ್ತದೆ. ನಿಗದಿತ ಪ್ರಮಾಣದಷ್ಟು ಇದ್ದರೆ ಈ ಅನುಪಾತ ೧ ಆಗಿರುತ್ತದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ ಈ ಅನುಪಾತ ೧ಕ್ಕಿಂತ ಹೆಚ್ಚು ಆಗಿರುತ್ತದೆ. ಈ ರೀತಿ ಇದನ್ನು ದಾಖಲಿಸಬೇಕು.

೬. **ಮುಖ್ಯ ಸೂಚನೆ:** ಈ ಅನುಪಾತ ಸದಾ ಒಂದು ಅಥವಾ ಒಂದಕ್ಕಿಂತ ಕಡಿಮೆ ಇರಬೇಕು. ಇದು ಒಂದಕ್ಕಿಂತ ಹೆಚು ಆದಲ್ಲಿ, ಈ ಮೊತ್ತ ಭರಿಸಲು ಅನುದಾನ ಲಭ್ಯವಾಗುವುದಿಲ್ಲ. ಅದುದರಿಂದ ಕಾರ್ಮಿಕರ ಗುಂಪು ಒಂದು ದಿನದಲ್ಲಿ ನಿಗಧಿತ ಪ್ರಮಾಣದ ಕೆಲಸದ ಉತ್ಪತ್ತಿಯನ್ನಷ್ಟೇ ಮಾಡಬೇಕು. ಬೇಗ ಮುಗಿದಲ್ಲಿ, ಅವರು ಬೇರೆ ಕೆಲಸ ಮಾಡಲು ಹೋಗಬಹುದು.

೭. ಕ್ರ. ಸಂ. ೨೦: (ಅ) ಅಳತೆಗೆ ಮುಂಚೆ, ಈ ದಿನ ಕಾಮಗಾರಿಯ ಸ್ಥಳದಲ್ಲಿರುವ ಕಾರ್ಮಿಕರ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು (ಪ್ರತಿಯೊಬ್ಬರೂ ಮಾಡಿರುವ ಕೆಲಸದ ದಿನಗಳನ್ನು ಅವರಿಗೆ ಗಟ್ಟಿಯಾಗಿ ಓದಿ ಹೇಳುವ ಮೂಲಕ), ಕ್ರ. ಸಂ. ೨೨ರ ಕಲಂ ಆ : ರಲ್ಲಿ, ಹಾಜರಿ ಹಾಕುವವರ ಸಹಾಯದೊಂದಿಗೆ ಪಡೆಯಬೇಕು.

(ಆ) ಹಾಜರಿ ಪಟ್ಟಿಯ ಅಳತೆಯ ಸಮಯದಲ್ಲಿ ಆಗಿರುವ ಕೆಲಸದ ಎರಡು ಛಾಯ ಚಿತ್ರಗಳನ್ನು ತೆಗೆಯಬೇಕು (ಕಾರ್ಮಿಕರನ್ನು ಒಳಗೊಂಡಂತೆ ಒಂದು, ಮೂವರು ಸಾಕ್ಷಿಗಳನ್ನೂ ಒಳಗೊಂಡಂತೆ ಮತ್ತೊಂದು ಹೀಗೆ).

ಕ್ರ. ಸಂ. ೨೩: ಇದರಲ್ಲಿ ಹಾಜರಿಪಟ್ಟಿಯಲ್ಲಿರುವಂತೆ, ಕೆಲಸ ಮಾಡಿದ ಒಟ್ಟು ದಿನಗಳು, ಹೆಂಗಸರು, ಗಂಡಸರು, ಪ.ಜಾ., ಪ.ಪಂ., ಇತರೆ, ಒಟ್ಟು ಹೀಗೆ ವಿವರಗಳನ್ನು ಹಾಜರಿ ಹಾಕುವವರು ಲೆಕ್ಕಹಾಕಿ ದಾಖಲಿಸಬೇಕು.

9. ಕ್ರ. ಸಂ. ೨೨ ಮತ್ತು ೨೩ರಲ್ಲಿನ ಮಾಹಿತಿ ಸರಿ ಇರುವ ಬಗ್ಗೆ ಮತ್ತು ಅಳತೆಯ ದಿನ ಯಾರು ಹಾಜರಾಗಿರುವುದಿಲ್ಲವೋ ಅವರು ಈ ಹಿಂದಿನ ದಿನದವರೆಗೆ ಮಾಡಿರುವ ಕೆಲಸದ ದಿನಗಳು ಸರಿ ಇವೆ ಎಂಬ ಬಗ್ಗೆ, ಆ ಕಾರ್ಮಿಕರ ಪೈಕಿ ಇಬ್ಬರು ಸಾಕ್ಷಿಗಳಾಗಿ, ಕ್ರ. ಸಂ. (೧), (೨) ರಲ್ಲಿ ಹೆಸರು ಬರೆದು ಸಹಿ ಮಾಡಬೇಕು. ಕ್ರ. ಸಂ. (೩)ರಲ್ಲಿ ಹಾಜರಿ ಪಟ್ಟಿ ನಿರ್ವಹಿಸುವವರು ಹೆಸರು ಬರೆದು ಸಹಿ ಮಾಡಬೇಕು.

10. ಕ್ರ. ಸಂ. ೨೧: ಆ ನಂತರ ಅಳತೆ ಮಾಡಿದ ಕಾರ್ಯನಿರ್ವಾಹಣಾ ಏಜೆನ್ಸಿಯ ಸ್ಥಳೀಯ ಅಧಿಖಾರಿ, ಕ್ರ.ಸಂ. ೨೧ರಲ್ಲಿ ಹೆಸರು ಬರೆದು, ದಿನಾಂಕ ನಮೂದಿಸಿ, ಸಹಿ ಮಾಡಬೇಕು.

11. ನಂತರ ಸ್ಥಳೀಯ ತಾಂತ್ರಿಕ ಅಧಿಕಾರಿ ಹಾಜರಿ ಪಟ್ಟಿಯನ್ನು, **ಹಾಜರಿ ಹಾಕುವ ವ್ಯಕ್ತಿಗೆ ಕೂಡಲೇ ಸ್ಥಳದಲ್ಲೇ ಕೊಡಬೇಕು. ತೆಗೆದ ಛಾಯಚಿತ್ರಗಳನ್ನು ೨ ದಿನಗಳ ಒಳಗಾಗಿ ಆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗೆ ತಲುಪಿಸುವ ವ್ಯವಸ್ಥೆ ಮಾಡಬೇಕು.** ಎಂ.ಬಿ. ಪುಸ್ತಕವನ್ನು ತನ್ನಲ್ಲಿಯೇ ಇಟ್ಟುಕೊಳ್ಳಬೇಕು.

**ಡಿ. ಹಾಜರಾತಿ ಪಟ್ಟಿ ಭರ್ತಿ ವಿಧಾನ (ಗ್ರಾಮ ಪಂಚಾಯಿತಿ ಕಾರ್ಯದರ್ಶಿ)**

1. ಹೀಗೆ ದೃಢೀಕರಿಸಿದ, ಹಾಜರಿ ಪಟ್ಟಿಗಳನ್ನು, ಅದನ್ನು ಪಡೆದವರು, ಅದೇ ದಿನದಂದು ಗ್ರಾಮ ಪಂಚಾಯಿತಿ ಕಾಯದರ್ಶಿಗೆ ಹಿಂದಿರುಗಿಸಿ, ಹಿಂದಿರುಗಿಸಿದ ಬಗ್ಗೆ ನಗದಿತ ವಹಿಯಲ್ಲಿ ದಿನಾಂಕ ದಾಖಲಿಸಿ ಸಹಿ ಮಾಡಬೇಕು.
2. ಕ್ರ. ಸಂ. ೨೪: ನಂತರ, ಕಾರ್ಯದರ್ಶಿಯ ಪ್ರತಿಯೊಬ್ಬರಿಗೆ ಲಭ್ಯವಾಗುವ ಕೂಲಿಯನ್ನು ಈ ಕೆಳಗಿನ ಸೂತ್ರದಂತೆ ಲೆಕ್ಕ ಹಾಕಬೇಕು.

| | | | |
|---|---|---|---|
| ಪ್ರತಿಯೊಬ್ಬರಿಗೆ ಲಭ್ಯವಾಗುವ ಕೂಲಿ = **X** -- | ಹಾಜರಿ ಪಟ್ಟಿಯಂತೆ ಆ ಕಾರ್ಮಿಕ ಕೆಲಸ ಮಾಡಿದ ದಿನಗಳ ಸಂಖ್ಯೆ **X--** | ಹಾಜರಿ ಪಟ್ಟಿಯ ಕ್ರ. ಸಂ. ೧೯ ರಂತೆ ಉತ್ಪತ್ತಿಯ/ ಪರಿಮಾಣ **X** -- | ದಿನದ ಕನಿಷ್ಠ ಕೂಲಿ |

3. ಕ್ರ. ಸಂ. ೨೨: ಇದನ್ನು ಗ್ರಾಮ ಪಂಚಾಯತ್ ಕಾರ್ಯದರ್ಶಿ, ಹಾಜರಿ ಪಟ್ಟಿಯಲ್ಲಿ ಅವರವರ ಹೆಸರಿನ ಮುಂದೆ ಕಲಂ, ಕ ರಲ್ಲಿ ದಾಖಲಿಸಬೇಕು.
4. ಕ್ರ. ಸಂ. ೨೩: ಇದರ ಆಧಾರದ ಮೇಲೆ ಈ ಕೆಳಗಿನ ನಮೂನೆಯಲ್ಲಿ Financial Adviceನ್ನು ತ್ರಿಪ್ರತಿಗಳಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸಿದ್ದಪಡಿಸಬೇಕು.

ಜಿಲ್ಲೆ: ತಾಲ್ಲೂಕು: ಗ್ರಾಮ ಪಂಚಾಯಿತಿ:

ಕಾಮಗಾರಿಯ ಹೆಸರು
ಹಾಜರಿ ಪಟ್ಟಿಯ ಅವಧಿ .. . . . . . ರಿಂದ . . . . .. . ರವರೆಗೆ
ಹಾಜರಿ ಪಟ್ಟಿಯ ಕ್ರ. ಸಂ.

| ಕ್ರ. ಸಂ. | **ಕಾರ್ಮಿಕರ ಹೆಸರು** | **ಕುಟುಮಬದ ನೋದಣಿ ಸಂಖ್ಯೆ** | **ವೈಯುಕ್ತಿಕ ಸಂಖ್ಯೆ(2 ಅಂಕಿಗಳು)** | **ಬ್ಯಾಂಕ್ ಅಂಚೆ ಕಛೇರಿ ಖಾತೆ ಸಂಖ್ಯೆ** | **ಕೆಲಸ ಮಾಡಿದ ದಿನಗಳು** | **ಅರ್ಹಕೂಲಿಯ ಮೊತ್ತ (ರೂ)** | **ಷರಾ** |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

5. ಮೂಲ ಹಾಜರಿ ಪಟ್ಟಿ ಮತ್ತು Financial Advice (ತ್ರಿಪ್ರತಿಯಲ್ಲಿ) ಇವುಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯಕ್ರಮ ಅಧಿಕಾರಿಯಿಂದ ಪ್ರಾಧೀಕರಿಸಲ್ಪಟ್ಟ ಅಧಿಕಾರಿಗೆ ಎರಡು ದಿನಗಳ ಒಳಗಾಗಿ ಸಲ್ಲಿಸಬೇಕು.
6. ಕ್ರ. ಸಂ. ೨೫: ಕಾರ್ಯಕ್ರಮ ಅಧಿಕಾರಿ ಅಥವಾ ಅವರಿಂದ ಅಧಿಕಾರ ಪಡೆದ ಇತರೆ ಅಧಿಕಾರಿ ಈ ದಾಖಲೆಗಳನ್ನು ಪರಿಶೀಲಿಸಿ, ಹಾಜರಿ ಪಟ್ಟಿಯ ಅಳತೆ ಮತ್ತು ಕೂಲಿ ಲೆಕ್ಕ ಹಾಕುವಿಕೆ ಸರಿ ಇರುವ ಬಗ್ಗೆ ಪರಿಶೀಲಿಸಿ, ಭಾಗ– V ರಲ್ಲಿ ದಾಖಲಿಸಿ, ವಿವರಗಳನ್ನು ಈ ಕೆಳಗಿನ ನಮೂನೆಯಂತೆ ನಿರ್ವಹಿಸಬೇಕಾದ ವಹಿಯಲ್ಲಿ ದಾಖಲಿಸಿ, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗೆ ಎರಡು ದಿನಗಳಲ್ಲಿ ಹಿಂದಿರುಗಿಸಬೇಕು. (ಬ್ಯಾಂಕ್ ಅಡ್ವೈಸ್‌ನ ಒಂದು ಪ್ರತಿಯನ್ನು ದಾಖಲೆಗಾಗಿ ತಾಲ್ಲೂಕು ಪಂಚಾಯತಿಯಲ್ಲಿಯೇ ಇಟ್ಟುಕೊಳ್ಳಬೇಕು).

**ಜಿಲ್ಲೆ:** **ತಾಲ್ಲೂಕು ಪಂಚಾಯತಿ** **ಗ್ರಾಮ ಪಂಚಾಯತಿ**

| ಕಾಮಗಾರಿಯ ಹೆಸರು | ಕಾಮಗಾರಿಯ ಕೋಡ್ | ಗ್ರಾಮ | ಹಾಜರಿ ಪಟ್ಟಿಗಳ ಸಂಖ್ಯೆ | | ಪಟ್ಟಿಯ ಪ್ರಕಾರ ಮೊತ್ತ (ರೂ) | ಅನುಮೋದಿಸಿದ | | ಹಿಂದಿರುಗಿಸಿದ ದಿನಾಂಕ |
|---|---|---|---|---|---|---|---|---|
| | | | ರಿಂದ | ವರೆಗೆ | | ಮೊತ್ತ (ರೂ) | ದಿನಾಂಕ | |
| ೨ | ೩ | ೪ | ೫ | ೬ | ೭ | ೮ | ೯ | ೧೦ |

***ಸೂಚನೆ:*** *ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಕೆಲವು ಹಾಳೆಗಳನ್ನು ಮೀಸಲಿಟ್ಟು, ಒಂದೇ ವಹಿಯಲ್ಲಿ ಇದನ್ನು ನಿರ್ವಹಿಸಬಹುದು.*

7. ತಾಲ್ಲೂಕು ಪಂಚಾಯಿತಿಯಿಂದ ಪರಿಶೀಲನೆಯಾಗಿ ವಾಪಸ್ಸು ಬಂದ ಕೂಡಲೇ ಅನುಮೋದಿಸಿದ ಮೊತ್ತಕ್ಕೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಚೆಕ್ ಬರೆದು, ವಿವರಗಳನ್ನು ಹಾಜರಿ ಪಟ್ಟಿಯ ಕ್ರ. ಸಂ. ೨೬ರಲ್ಲಿ ದಾಖಲಿಸಬೇಕು. ಆ ಚೆಕ್ಕಿಗೆ ಮತ್ತು ಹಾಜರಾತಿ ಪಟ್ಟಿಯ ಕ್ರ. ಸಂ. ೨೬ರಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಸಹಿ ಪಡೆದು: ಚೆಕ್ ಮತ್ತು ಬ್ಯಾಂಕ್ ಅಡ್ವೈಸ್‌ನ ಒಂದು ಪ್ರತಿಯನ್ನು ಸಂಬಂಧಿಸಿದ ಬ್ಯಾಂಕ್ ವ್ಯವಸ್ಥಾಪಕರಿಗೆ/ ಅಂಚೆ ಕಛೇರಿಯ ಅಧಿಕಾರಿಗೆ, ಕೊಡಬೇಕು. ಬ್ಯಾಂಕ್ ಅಡ್ವೈಸ್‌ನ ಒಂದು ಪ್ರತಿಯನ್ನು ಗ್ರಾಮ ಪಂಚಾಯಿತಿಯಲ್ಲಿ ದಾಖಲೆಗಾಗಿ ಇಡಬೇಕು.
8. ಬ್ಯಾಂಕ್ ಮ್ಯಾನೇಜರ್/ ಅಂಚೆ ಕಛೇರಿಯ ಅಧಿಕಾರಿ ಬ್ಯಾಂಕ್ ಅಡ್ವೈಸ್ ಮತ್ತು ಚೆಕ್ ಆಧಾರದ ಮೇಲೆ ಅವರ ಶಾಖೆಯಲ್ಲಿ ಈ ಯೋಜನೆಯಡಿ ಠೇವಣಿ ಮಾಡಿರುವ ಮೊತ್ತದಿಂದ, ಕಾರ್ಮಿಕರ ಖಾತೆಗಳಿಗೆ, ಅವರವರ ಕೂಲಿಯ ಮೊತ್ತವನ್ನು ಅದೇ ದಿನ ಜಮಾ ಮಾಡಬೇಕು.
9. ಈ ಎಲ್ಲಾ ಪ್ರಕ್ರಿಯೆಗಳು ವಿಳಂಬವಿಲ್ಲದಂತೆ ಜರುಗಿ, ಹಾಜರಿಪಟ್ಟಿಯಲ್ಲಿನ ಪ್ರಥಮ ಹಾಜರಿ ದಿನಾಂಕದಿಂದ ೧೫ ದಿನಗಳ ಒಳಗಾಗಿ, ಕೂಲಿ ಕಾರ್ಮಿಕರ ಖಾತೆಗಳಿಗೆ ಜಮಾ ಆಗುವಂತೆ, ಕ್ರಮ ಜರುಗಿಸಬೇಕು. ವಿಳಂಬವಾದಲ್ಲಿ ಕಾರ್ಮಿಕರಿಗೆ ಪರಿಹಾರ ಪಾವತಿಸಬೇಕಾಗುತ್ತದೆ. ಅಧಿನಿಯಮದ ಪ್ರಕರಣ ೩ (೩) ಈ ಕೆಳಗಿಂತಿದೆ.

   "Save as otherwise provided in this Act, the disbursement if daily wages shall be made on a weekly basis or in any case not later than a fortnight after the date on which such work was done"
10. ಹೀಗೆ ಜಮಾ ಆಗಿರುವುದನ್ನು ನಂತರದ ದಿನ ಕೆಲಸದ ಸ್ಥಳದಲ್ಲಿ ಕಾರ್ಮಿಕರ ಗಮನಕ್ಕೆ ತರಬೇತಕು. ವಿವರಗಳನ್ನು ಅವರ ಕುಟುಂಬ ಉದ್ಯೋಗ ಚೀಟಿಯಲ್ಲಿ ಮತ್ತು ಗ್ರಾಮ ಪಂಚಾಯಿತಿಯಲ್ಲಿ ನಿರ್ವಹಿಸಿರುವ **ನಮೂನೆ–೩ ಬಿ**ಯಲ್ಲಿ ದಾಖಲಿಸಬೇಕು.

**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು
ಸ್ವಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ: 41:ಉಖಾಯೋ : 2007

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 11–04–2007

# ಸುತ್ತೋಲೆ

ವಿಷಯ: 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ' ಇದರ ಅಡಿಯಲ್ಲಿ ಅಕುಶಲ ಕಾರ್ಮಿಕರ ಹಾಜರಿ (ಕೂಲಿ ಪಾವತಿಗಾಗಿನ ಹಾಜರಾತಿ) ಪಟ್ಟಿ ನಿರ್ವಹಿಸುವವರ ಕರ್ತವ್ಯಗಳು

* * *

1. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಿಂದ ಹಾಜರಿ ಪಟ್ಟಿಗಳನ್ನು ಪಡೆದು ಹಾಜರಿ ಪಟ್ಟಿಯ ಕ್ರಮ ಸಂಖ್ಯೆ 15ರಲ್ಲಿ ದಿನಾಂಕವನ್ನು ದಾಖಲಿಸಿ, ತನ್ನ ಹೆಸರು ಬರೆದು ಸಹಿ ಮಾಡಬೇಕು.
2. ಒಂದು ಕಾಮಗಾರಿಯಲ್ಲಿ ಕೆಲಸ ಮಾಡುವವರ ಪೈಕಿ ಅಕ್ಷರಸ್ಥರಾಗಿರುವ ಒಬ್ಬರಿಗೆ ವಹಿಸಿ ಅವರು ಹಾಜರಾತಿಯನ್ನು ಹಾಕಲು ಸೂಚಿಸಬಹುದು. ಆಗ್ಗಿಂದಾಗ್ಗೆ ಈ ಕೆಲಸವನ್ನು ಆ ಗುಂಪಿನ ಬೇರೆಯವರಿಗೆ ವಹಿಸಬಹುದು. ಆದರೆ ಹಾಜರಿ ಪಟ್ಟಿಯನ್ನು ಪಡೆದವರು ಅದು ಮುಕ್ತಾಯವಾಗುವವರೆಗೂ ಈ ಕೆಲಸ ಅವರೇ ನಿರ್ವಹಿಸಬೇಕು (ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರನ್ನು ಆಯ್ಕೆ ಮಾಡುತ್ತಾರೆ).
3. ಕೆಲಸದ ಸ್ಥಳದಲ್ಲಿ ಹಾಜರಾತಿಯನ್ನು ಬೆಳಿಗ್ಗೆ ಮತ್ತು ಮದ್ಯಾಹ್ನ ಈ ಎರಡು ಅವಧಿಗಳಲ್ಲಿ ಹಾಕಬೇಕು.
4. ಹಾಜರಿ ಪಟ್ಟಿಯ ಕಲಂ ಉ ರಲ್ಲಿ ಆ ದಿನದ ದಿನಾಂಕ ಬರೆದು ಬೆಳಗ್ಗೆ ಹಾಜರಾದವರಿಗೆ \ ಎಂದು ಅದೇ ದಿನ ಮದ್ಯಾಹ್ನ ಹಾಜರಾದವರಿಗೆ"/" ಎಂದು ಬಾಲ್ ಪೆನ್ ನಿಂದ ಹಾಜರಾತಿ ಹಾಕಬೇಕು. ಆಗ ಅದು " X ಹೀಗೆ ಆಗುತ್ತದೆ. (ಸದಾ ಎರಡು ಬಾಲ್ ಪೆನ್ ಇರುವುದುದನ್ನು ಖಚಿತಪಡಿಸಿಕೊಳ್ಳಬೇಕು).
5. ಆ ದಿನ ಯಾವುದೇ ಕಾರ್ಮಿಕರು ಕೆಲಸಕ್ಕೆ ಬಾರದಿದ್ದರೆ ಅವರು ಹೆಸರಿನ ಮುಂದೆ ಆ ದಿನಾಂಕದ ಕಲಂ ನಲ್ಲಿ ಂ ಎಂದು ಬರೆಯಬೇಕು.
6. ಇದೇ ರೀತಿ ನಂತರದ ದಿನಗಳಂದು ಮುಂದುವರಿಸಬೇಕು.
7. ಹಾಜರಿ ಪಟ್ಟಿಯಲ್ಲಿ ಹೆಸರು ಇಲ್ಲದವರು ಬಂದರೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತಿಲ್ಲ. (ಕಾರ್ಮಿಕರ ಹೆಸರನ್ನು ಹಾಜರಿ ಪಟ್ಟಿಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮಾತ್ರ ದಾಖಲಿಸಬೇಕು).
8. ಹಾಜರಿ ಪಟ್ಟಿಯಲ್ಲಿರುವವರು, ಅವರು ಕುಟುಂಬದ ಉದ್ಯೋಗ ಚೀಟಿಯನ್ನು ಕೆಲಸದ ಸ್ಥಳಕ್ಕೆ ಪ್ರತಿ ದಿನ ತರುವಂತೆ ತಿಳಿಸಬೇಕು. (ಒಂದು ಕುಟುಂಬದ ಎಲ್ಲ ಸದಸ್ಯರಿಗೆ ಒಂದು ಕುಟುಂಬದ ಉದ್ಯೋಗ ಚೀಟಿ ಇರುತ್ತದೆ).
9. ಆ ಕಾಮಗಾರಿಯಲ್ಲಿ ಕೆಲಸ ಮಾಡಲು ಬರುವವರ (ಹಾಜರಿ ಪಟ್ಟಿಯಲ್ಲಿ ಹೆಸರಿರುವ) ಎಲ್ಲರ ಕುಟುಂಬ ಉದ್ಯೋಗ ಚೀಟಿಗಳನ್ನು ಪಡೆದು ನಿಮಗೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಕೊಡುವ ಸಣ್ಣ ಪೆಟ್ಟಿಗೆಯಲ್ಲಿಟ್ಟು, ಬೀಗ ಹಾಕಿ ಭದ್ರಪಡಿಸಬೇಕು.
10. ಹಾಜರಿ ಪಟ್ಟಿಗಳನ್ನು, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಮಸಿ ಪೆಟ್ಟಿಗೆ (Ink pad), ಕಾರ್ಡ್ ಬೋರ್ಡ್ ಮತ್ತು ಬಾಲ್ ಪೆನ್‌ಗಳನ್ನು ಸಹ ಈ ಪೆಟ್ಟಿಗೆಯಲ್ಲಿ ಇಡಬೇಕು.
11. ಯಾರಾದರೂ ಅಧಿಕೃತ ಅಧಿಕಾರಿಗಳು ಬಂದು ಕೇಳಿದರೆ ಮಾತ್ರ ಅವುಗಳನ್ನು ಅವರಿಗೆ ತೋರಿಸಬೇಕು. ಇತರರಿಗೆ ತೋರಿಸುವಂತಿಲ್ಲ.
12. ದಿನದ ಕೊನೆಯಲ್ಲಿ, ಅವರವರ ಕುಟುಂಬದ ಉದ್ಯೋಗ ಚೀಟಿಗಳನ್ನು ಅವರವರಿಗೆ ವಾಪಸ್ಸು ಕೊಟ್ಟು ನಂತರದ ದಿನ ಅವುಗಳನ್ನು ಪುನಃ ತರುವಂತೆ ತಿಳಿಸಬೇಕು. ಪೆಟ್ಟಿಗೆ, ಪೆನ್ನು, ಕಾರ್ಡ್ ಬೋರ್ಡ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಮಸಿ ಪೆಟ್ಟಿಗೆ (ಖಟಿಞ ಠಿಚಿಜ) ಮತ್ತು ಹಾಜರಿ ಪಟ್ಟಿಗಳನ್ನು ತನ್ನ ಬಳಿಯೇ ಇಟ್ಟುಕೊಳ್ಳಬೇಕು.

13. ಒಂದು ಹಾಜರಿ ಪಟ್ಟಿಯನ್ನು ಕನಿಷ್ಠ 6 ದಿನಗಳವರೆಗೆ, ಗರಿಷ್ಠ 9 ಕೆಲಸದ ದಿನಗಳವರೆಗೆ ಮಾತ್ರ ಬಳಸಬೇಕು.

14. ಆ ಕೆಲಸವನ್ನು ವಹಿಸಿಕೊಂಡಿರುವ ಇಲಾಖೆಯ ಸ್ಥಳಿಯ ಅಧಿಕಾರಿ, ಅಳತೆಗಾಗಿ ಬಂದ ದಿನ ಹಾಜರಿ ಪಟ್ಟಿಯನ್ನು, ಕಾಮಗಾರಿ ಸ್ಥಳದಲ್ಲಿ ಅವರಿಗೆ ಕೊಡಬೇಕು.

15. ಕಾಮಗಾರಿಯ ಅಳತೆ ಸಮಯದಲ್ಲಿ, ಸರಿಯಾಗಿ ಅಳತೆ ಮಾಡಲು, ಅವರಿಗೆ ಸಹಾಯ ಮಾಡಬೇಕು, ಈ ಅಳತೆಯನ್ನು ಅವರು ಅವರಲ್ಲಿರುವ ಎಂ.ಬಿ., ಪುಸ್ತಕದಲ್ಲಿ ಹಾಗೂ ಹಾಜರಿ ಪಟ್ಟಿಯ ಭಾಗ–2ರಲ್ಲಿ ದಾಖಲಿಸುತ್ತಾರೆ.

16. ಆ ದಿನ ಕೆಲಸಕ್ಕೆ ಬಂದ ಎಲ್ಲ ಕಾರ್ಮಿಕರಿಗೆ, ಹಾಜರಿ ಪಟ್ಟಿಯಲ್ಲಿರುವಂತೆ ಅದುವರೆಗೆ ಅವರು ಮಾಡಿದ ಕೆಲಸದ ದಿನಗಳ ಸಂಖ್ಯೆಯನ್ನು ಗಟ್ಟಿಯಾಗಿ ಓದಿ ಹೇಳಿ, ಅವರ ಹೆಸರಿನ ಮುಂದೆ ಕಲಂ, 'ಆಃ' ರಲ್ಲಿ ಅವರ ಸಹಿಯ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಪಡೆಯಬೇಕು.

17. ಆ ದಿನ ಯಾರು ಕೆಲಸಕ್ಕೆ ಬಂದಿಲ್ಲವೋ ಅವರಿಂದ ಇದನ್ನು ಪಡೆಯುವ ಅಗತ್ಯವಿಲ್ಲ. ಆದರೆ, ಆ ದಿನ ಹಾಜರಾಗದಿರುವವರು ಈ ಹಿಂದಿನ ದಿನಗಳಲ್ಲಿ ಹಾಜರಿ ಪಟ್ಟಿಯಲ್ಲಿ ದಾಖಲಿಸಿರುವಂತೆ ಎಷ್ಟು ದಿನಗಳಿಗೆ ಹಾಜರಾಗಿರುತ್ತಾರೆ ಎಂಬ ಬಗ್ಗೆ ಸ್ಥಳದಲ್ಲಿರುವ ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಓದಿ ಹೇಳಬೇಕು. ಹಾಜರಿ ಪಟ್ಟಿಯ ಕ್ರಮ ಸಂಖ್ಯೆ 23ರಲ್ಲಿ, ಕೆಲಸ ಮಾಡಿದ ಒಟ್ಟು ದಿನಗಳು, ಹೆಂಗಸರು, ಗಂಡಸರು, ಪ.ಜಾ., ಪ.ಪಂ., ಇತರೆ, ಇತ್ಯಾದಿ ವಿವರಗಳನ್ನು ದಾಖಲಿಸಬೇಕು. ಆ ದಿನ ಹಾಜರಾದ ಕೆಲಸಗಾರರ ಪೈಕಿ ಇಬ್ಬರ ಸಾಕ್ಷಿಯನ್ನು ಹಾಜರಿ ಪಟ್ಟಿಯ ಕ್ರಮ ಸಂಖ್ಯೆ 23ರಲ್ಲಿನ ನಿಗದಿತ–1, 2ರಲ್ಲಿ ಪಡೆಯಬೇಕು. 3ರಲ್ಲಿ, ಹಾಜರಿ ಪಟ್ಟಿ ನಿರ್ವಹಿಸುವವವರು, ಸಾಕ್ಷಿಯಾಗಿ ಸಹಿ ಮಾಡಬೇಕು.

18. ಆ ದಿನ ಅಳತೆ ಮಾಡಲು ಬಂದ ಕಾರ್ಯನಿರ್ವಾಹಣಾ ಏಜೆನ್ಸಿಯ ಸ್ಥಳೀಯ ಅಧಿಕಾರಿ ಇವುಗಳನ್ನು ಪರಿಶೀಲಿಸಿ, ಅಳತೆಯನ್ನು ಮತ್ತು ಇತರೆ ವಿವರಗಳನ್ನು ಭಾಗ–2ರಲ್ಲಿ ದಾಖಲಿಸುತ್ತಾರೆ. ಹಾಗೂ ಹಾಜರಿ ಪಟ್ಟಿಯನ್ನು ಕೂಡಲೇ (ಸ್ಥಳದಲ್ಲಿಯೇ) ನಿಮಗೆ ಹಿಂದಿರುಗಿಸುತ್ತಾರೆ.

19. ಈ ರೀತಿ ಪೂರ್ಣಗೊಂಡ ಹಾಜರಿ ಪಟ್ಟಿಗಳನ್ನು ಅದೇ ದಿನ ಸಂಬಂಧಿಸಿದ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗೆ ಹಿಂತಿರುಗಿಸಿ, ಇದಕ್ಕೆ ಆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಇಟ್ಟಿರುವ ವಹಿಯಲ್ಲಿ ಸಹಿ ಮಾಡಿ, ದಿನಾಂಕ ನಮೂದಿಸಬೇಕು.

20. ನಂತರದ ದಿನದಿಂದ ಬಳಸಲು ಬೇರೆ ಹಾಜರಿ ಪಟ್ಟಿಗಳನ್ನು (ಭಾಗ–1ರಲ್ಲಿ ವಿವರಗಳನ್ನು ದಾಖಲಿಸಿ, ಪುಟ 2, 3 ರಲ್ಲಿ ಕಾರ್ಮಿಕರ ಹೆಸರು, ಕುಟುಂಬದ ನೋಂದಣಿ ಸಂಖ್ಯೆ/ ವೈಯಕ್ತಿಕ ಸಂಖ್ಯೆ, ಪ್ರವರ್ಗ, ಗಂಡಸು/ ಹೆಂಗಸು, ದಿನದ ಕೂಲಿ ದರ, ಇವುಗಳನ್ನು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ದಾಖಲಿಸಿರುವ) ಸಹಿ ಮಾಡಿ ಪಡೆಯಬೇಕು.

ತಮ್ಮ ವಿಶ್ವಾಸಿ,
**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು
ಸ್ವಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 05 ಉಖಾಯೋ 06

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 23–08–2007

## ಸುತ್ತೋಲೆ

ವಿಷಯ: ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಜಂಟಿ ಖಾತೆಗಳ ವಿಧಾನವನ್ನು ಅನುಸರಿಸುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ ಜೆ–11060/1, 2007 ದಿನಾಂಕ:3.8.2007

* * *

ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳ ಕಂಡಿಕೆ ಸಂಖ್ಯೆ 7,2,7ರ ಪ್ರಕಾರ, ಯೋಜನೆಗೆ ಪ್ರತ್ಯೇಕವಾದ ಬ್ಯಾಂಕಿನ ಖಾತೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸದರಿ ಯೋಜನೆಗೆ ತೆರೆದು ಜಂಟಿ ಖಾತೆದಾರರಿಗಿರಬೇಕು ಎಂದು ತಿಳಿಸಿರುತ್ತದೆ. ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಇದನ್ನೇ ಪುನರುಚ್ಚರಿಸಿ, ಈ ವಿಷಯವನ್ನು ಎಲ್ಲಾ ಅನುಷ್ಠಾನಾಧಿಕಾರಿಗಳ ಗಮನಕ್ಕೆ ತರಲು ಸೂಚಿಸಿರುತ್ತದೆ.

ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಅನುಸರಿಸುವ ಪದ್ಧತಿಯಂತೆ, ಇದೇ ಪದ್ಧತಿಯನ್ನು ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲೂ ಕೂಡ ಅನುಸರಿಸಬೇಕು ಎಂದು ಈ ಮೂಲಕ ಸೂಚಿಸಿದೆ. ವಿಧಾನದ ವಿವರಗಳು, ಈ ಕೆಳಕಂಡಂತಿವೆ.

| | | |
|---|---|---|
| 1. | ಜಿಲ್ಲಾ ಪಂಚಾಯತ್ ಮಟ್ಟದಲ್ಲಿ | ಯೋಜನೆಯ ಲೆಕ್ಕ ಖಾತೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಮುಖ್ಯ ಲೆಕ್ಕಾಧಿಕಾರಿಗಳು, ಜಂಟಿಯಾಗಿ ನಿರ್ವಹಿಸಬೇಕು. |
| 2. | ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ | ಯೋಜನೆಯ ಲೆಕ್ಕ ಖಾತೆಯನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಲೆಕ್ಕಾಧೀಕ್ಷಕರು ಜಂಟಿಯಾಗಿ ನಿರ್ವಹಿಸಬೇಕು. |
| 3. | ಗ್ರಾಮ ಪಂಚಾಯಿತ್ ಮಟ್ಟದಲ್ಲಿ | ಯೋಜನೆಯ ಲೆಕ್ಕ ಖಾತೆಯನ್ನು ಅಧ್ಯಕ್ಷು ಮತ್ತು ಪಂಚಾಯತ್ ಕಾರ್ಯದರ್ಶಿ ಜಂಟಿಯಾಗಿ ನಿರ್ವಹಿಸಬೇಕು. |

ಮೇಲ್ಕಂಡ ಸೂಚನೆಗಳನ್ನು ಖಡ್ಡಾಯವಾಗಿ ಪಾಲನೆ ಮಾಡಲು ಈ ಮೂಲಕ ಸೂಚಿಸಲಾಗಿದೆ.

ಸಹಿ/–
**(ವಿ. ರಶ್ಮಿ ಮಹೇಶ್)**
ನಿರ್ದೇಶಕರು (ಸ್ವಉಕಾ) ಹಾಗೂ
ಪ/ ನಿ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**AMITHA SHRMA**
Joint Secretary
Tel. No. 23385027
Fax No. 23384703

Ministry of Rural Development
Deptt. of Rural Development
Government of India
Krishi Bhavan, New Delhi – 110 114

D. O. No. 28012/ 10/ 2005 – NREGA Date: November 22, 2007

Dear Shri Jairaj,

A Time Line of Preparatory Critical Activities under NREGA for districts notified w.e.f. April 1, 2008, is enclosed for necessary action. This is a summary schedule of critical activities that had been indicated in te Ministry's letter date 8.10.2007. Funds for this purpose have been released; details of which may be viewed on www.nrega.nic.in. Kindly ensure the activities indicated are completed on time to ensure a proper implementation of NREGA in the districts notified w.e.f. April 1, 2008. Minister RD is likely to review the activities undertakne in December. Reports on action taken should be sent in by the first week of December.

Yours sincerely,
Sd/-
**(AMITA SHARMA)**

**SHRI. K. JAIRAJ**
Principal Secretary
Rural Development Department
Government of Karnataka
BANGALORE – 560 001.

**TIME LINE OF PREPARATORY CRITICAL ACTIVITIES UNDER NREGA for districts notified w.e.f. April 1, 2008**

| 1 | 3 | 3 | 4 | 5 | 6 |
|---|---|---|---|---|---|
| Activitiy | Nov. | Dec. | Jan. | Feb. | March |
| I) Information Education Communication (IEC) for Awareness Generation | | | | | |
| 1) Prepration of communication material on NREGA processes in simple local language | //////// | | | | |
| 2) One day orientation of all Sarpanchas at the Block level | | //////// | | | |
| 3) Convening Gram Sabhas to familiarize beneficiaries about NREGA | | | //////// | | |
| 4) Local vernacular Newspaper | | //////// | //////// | //////// | //////// |
| 5) Social Mobilzation campaigns through local cultural forms | //////// | //////// | //////// | //////// | //////// |
| II) Deploying key Personnel | | | | | |
| 1) Designating the DPC | //////// | | | | |

| | | | | | |
|---|---|---|---|---|---|
| 1) Assigning PO charge to a Block level functionary not less than ranks of BDO | //////// | | | | |
| **1** | **3** | **3** | **4** | **5** | **6** |
| **Activitiy** | **Nov.** | **Dec.** | **Jan.** | **Feb.** | **March** |
| 2) Deploying additional dedicated staff | | //////// | //////// | //////// | |
| i) Gram Rozgar Sewak | | //////// | //////// | //////// | |
| ii) Programme Officer | | //////// | //////// | //////// | |
| iii) Engineers | | //////// | //////// | //////// | |
| a) Block | | //////// | //////// | //////// | |
| b) District | | //////// | //////// | //////// | |
| iv) IT Personnel | | //////// | //////// | //////// | |
| a) Block | | //////// | //////// | //////// | |
| b) District | | //////// | //////// | //////// | |
| v) Accounts Personal | | //////// | //////// | //////// | |
| a)Block | | //////// | //////// | //////// | |
| b) District | | //////// | //////// | //////// | |
| III Training | | | | | |
| 1) Calibarating training modules in content and process according to different target groups | //////// | | | | |
| 2) Training of Trainers | | | | | |
| i) State | //////// | | | | |
| ii) Dsitrict | | //////// | | | |
| iii) Block | | //////// | | | |
| 3) Training of Target Groups | | | //////// | //////// | //////// |
| i)Gram Rozgar Sewak | | | //////// | //////// | //////// |
| ii)Programme Officer | | | //////// | //////// | //////// |

| | | | | | |
|---|---|---|---|---|---|
| a) District | | | //////// | //////// | //////// |
| i) IT Personnel | | | //////// | //////// | //////// |
| a)Block | | | //////// | //////// | //////// |
| b)District | | | //////// | //////// | //////// |
| **1** | **3** | **3** | **4** | **5** | **6** |
| **Activitiy** | **Nov.** | **Dec.** | **Jan.** | **Feb.** | **March** |
| v) Accounts Personal | | | //////// | //////// | //////// |
| a)Block | | | //////// | //////// | //////// |
| b)District | | | //////// | //////// | //////// |
| ix)PRIs (GP Sarpanches on priority) | | | | | |
| x)Village level Vigilance Monitoring Committee members | | | | | |
| IV) Priniting essential deocuments | | | | | |
| 1)Application forms for registration, | | //////// | //////// | | |
| 2)Job Cards | | //////// | //////// | | |
| 3)Application Form for employment with counterfoil dated receipt | | //////// | //////// | | |
| 4)Muster Rolls with unique number | | //////// | //////// | | |
| 5)Registers as per NREGA Guidelines, aspeciall for registration and issue of Job Cards, Demand and provision of employment Assets finance and complaints | | //////// | //////// | | |
| 6)Distributing documents to different levels | | | | //////// | |
| V.Planning and | | | | | |

| | | | | | |
|---|---|---|---|---|---|
| a) District | | | //////// | //////// | //////// |
| i) IT Personnel | | | //////// | //////// | //////// |
| a)Block | | | //////// | //////// | //////// |
| b)District | | | //////// | //////// | //////// |
| 1 | 3 | 3 | 4 | 5 | 6 |
| Activitiy | Nov. | Dec. | Jan. | Feb. | March |
| v) Accounts Personal | | | //////// | //////// | //////// |
| a)Block | | | //////// | //////// | //////// |
| b)District | | | //////// | //////// | //////// |
| ix)PRIs (GP Sarpanches on priority) | | | | | |
| x)Village level Vigilance Monitoring Committee members | | | | | |
| IV) Priniting essential deocuments | | | | | |
| 1)Application forms for registration, | | //////// | //////// | | |
| 2)Job Cards | | //////// | //////// | | |
| 3)Application Form for employment with counterfoil dated receipt | | //////// | //////// | | |
| 4)Muster Rolls with unique number | | //////// | //////// | | |
| 5)Registers as per NREGA Guidelines, aspeciall for registration and issue of Job Cards, Demand and provision of employment Assets finance and complaints | | //////// | //////// | | |
| 6)Distributing documents to different levels | | | | //////// | |
| V.Planning and | | | | | |

| | | | | | |
|---|---|---|---|---|---|
| **VI.Operationalising the MIS** | | | | | |
| **1)Reporting on block level ICT infrastructure** | //////// | //////// | | | |
| **2)Making available dedicated computers at block/ district/ State level offices** | //////// | | | | |
| **3)Obtaining connectivity for block/district/state level offices** | | | //////// | | |

| 1 | 3 | 3 | 4 | 5 | 6 |
|---|---|---|---|---|---|
| **Activitiy** | **Nov.** | **Dec.** | **Jan.** | **Feb.** | **March** |
| **4)Recruting full time dedicated IT personnel for operating NREGS MIS at block/district/state level office** | | //////// | //////// | | |
| **5)Training the above personnel** | | | //////// | //////// | |
| **VII.Monitoring and Vigilance** | | | | | |
| **1)Identifying internal monitoring agencies and training them on NREGA** | | //////// | //////// | | |
| **2)Identifying external Monitoring agencies and training them on NREGA** | | //////// | //////// | | |
| **3)Setting up and training local vigilance and monitoring committees** | | //////// | //////// | | |

| | | | | | |
|---|---|---|---|---|---|
| **VIII.Fund Management Systems** | | | | | |
| **1)Opeing dedicated NREGA account in a PSU Bank at district/block/GP levels (This will be done by seed money that will be released for preparatory activities)** | ///// | | | | |
| **2)Authorizing DPC/PO and GP Secretary for operating the account** | //////// | | | | |
| **3)Providing for State share for new districts in State EGS budget head** | | | | //////// | //////// |

ಅಮೃತ ರಂಗಸ್ವಾಮಿ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ 61 ಉಖಾಯೋ 07

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 07–01–2008

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್,
ಬಾಗಲಕೋಟೆ/ಬೆಂಗಳೂರು (ನಗರ)/ಬೆಂಗಳೂರು (ಗ್ರಾ)/ಬಿಜಾಪುರ/ದಕ್ಷಿಣ ಕನ್ನಡ
ಚಾಮರಾಜನಗರ/ಧಾರವಾಡ/ಗದಗ/ಹಾವೇರಿ/ಕೋಲಾರ/ಕೊಪ್ಪಳ/ಮಂಡ್ಯ
ಮೈಸೂರು/ತುಮಕೂರು/ಉಡುಪಿ/ಉತ್ತರ ಕನ್ನಡ/ಚಿಕ್ಕಬಳ್ಳಾಪುರ/ರಾಮನಗರ.

ಮಾನ್ಯರೆ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ–ಕರ್ನಾಟಕ ಇದರಡಿಯಲ್ಲಿ ಅನುದಾನವನ್ನು ಬಳಸಲು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುವ ಬಗ್ಗೆ.

ಉಲ್ಲೇಖ:
1. ಕೇಂದ್ರ ಸರ್ಕಾರದ ಕಾರ್ಯಾಚರಣೆಯ ಮಾರ್ಗಸೂಚಿಗಳು 2006ರ ಪ್ರಕಾರ.
2. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ 28012/10/05–ಎನ್ಆರ್ಇಜಿಎ ದಿನಾಂಕ 8– 10–2007.
3. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಜೆ–11011/7/2006–ಎನ್ಆರ್ಇಜಿಎ ದಿನಾಂಕ 21–03–2007.

* * *

ಉಲ್ಲೇಖ (2)ರಲ್ಲಿ, ಕೇಂದ್ರ ಸರ್ಕಾರವು ಮೂರನೇ ಹಂತದ 18 ಜಿಲ್ಲೆಗಳಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ದಿನಾಂಕ 1–4–2008 ರಿಂದ ಜಾರಿಗೆ ಬರುವಂತೆ ವಿಸ್ತರಿಸಿ, ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಅದರ ಅಧಿಸೂಚನೆಯ ಪತ್ರದ ಪ್ರತಿಯನ್ನು ಈಗಾಗಲೇ ಕಳುಹಿಸಲಾಗಿರುತ್ತದೆ.

ಕೇಂದ್ರ ಸರ್ಕಾರದ ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಯೋಜನೆಯ ಅನುಷ್ಠಾನದ ಅನುದಾನದ ನಿರ್ವಹಣೆಯನ್ನು ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಪ್ರತ್ಯೇಕವಾಗಿ ಬ್ಯಾಂಕ್ ಖಾತೆಗಳನ್ನು (public sector banks) ತೆರೆಯಬೇಕಾಗುತದೆ. ಆದುದರಿಂದ, ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ.

1. ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಬ್ಯಾಂಕ್ ಖಾತೆಗಳನ್ನು Public Sector Banks ನಲ್ಲಿ ಮಾತ್ರ ತೆರೆಯತಕ್ಕದ್ದು.
2. ಗ್ರಾಮ ಪಂಚಾಯತಿ ಹಂತದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಅನುಸೂಚಿತ (Schedule) ಬ್ಯಾಂಕಿನಲ್ಲಿ ಗ್ರಾಮ ಪಂಚಾಯತಿ ಅನುದಾನವನ್ನು ಇಡುವುದಕ್ಕಾಗಿ ಖಾತೆಯನ್ನು ತೆರೆಯಬೇಕು (ಒಂದು ಗ್ರಾಮ ಪಂಚಾಯತಿಗೆ ಒಂದರಂತೆ).
3. ಖಾತೆಗಳನ್ನು ತೆರೆದಿರುವ ಬಗ್ಗೆ ಇದಕ್ಕೆ ಲಗತ್ತಿಸಿರುವ ನಮೂನೆಗಳಲ್ಲಿ ವಿವರಗಳನ್ನು ದಾಖಲಿಸಿ ವರದೀಕರಿಸಬೇಕು.

4. ಅಕುಶಲ ಕೂಲಿ ಬಯಸಿದ ಅರ್ಜಿ ಸಲ್ಲಿಸುವ ಕಾರ್ಮಿಕರು ಅವರು ಸಂಬಂಧಪಟ್ಟ ಗ್ರಾಮದಲ್ಲಿ ಅಥವಾ ಗ್ರಾಮಕ್ಕೆ ಸಮೀಪವಿರುವ ಅನುಸೂಚಿತ ಬ್ಯಾಂಕ್, ಅಥವಾ ಅಂಚೆ ಕಛೇರಿಗಳಲ್ಲಿ ಅವರು ಗಳಿಸಬಹುದಾದ ಕೂಲಿಯನ್ನು ಜಮಾ ಮಾಡಲು ಈ ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ಉಳಿತಾಯ ಖಾತೆಗಳನ್ನು ತೆರೆಯಲು ಅನುಕೂಲವಾಗುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಉಲ್ಲೆಖ (3) ರಲ್ಲಿ ಕೇಂದ್ರ ಸರ್ಕಾರದವರು ಯೋಜನೆಯನ್ನು ಪ್ರಾರಂಭ ಮಾಡಲು ಸಿದ್ಧತಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಈಗಾಗಲೇ ಎರಡನೇ ಹಂತದ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದವರು ನೀಡಲಾದ ಕಟ್ಟುನಿಟ್ಟಾದ ಸೂಚನೆಗಳ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ, ಮುಂದಿನ ಮಾರ್ಗದರ್ಶನಕ್ಕಾಗಿ ಹಾಗೂ ಅದರಂತೆ ಲಗತ್ತಿಸಲಾಗಿದೆ.

ತಮ್ಮ ನಂಬುಗೆಯ,
ಸಹಿ/–
**(ಬಿ.ಎನ್. ಕೃಷ್ಣಯ್ಯ)**
ನಿರ್ದೇಶಕರು
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ ೩೫ ಫೆಬ್ರವರಿ ೦೮

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: ೦೬-೦೨-೨೦೦೮

# ಸುತ್ತೋಲೆ

ವಿಷಯ: ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ನೋಡಲ್ ಅಧಿಕಾರಿ ನೇಮಕ ಇತ್ಯಾದಿಗಳ ಕುರಿತಂತೆ.

* * *

ರಾಷ್ಟ್ರದ ಲಕ್ಷಾಂತರ ಗ್ರಾಮಗಳಲ್ಲಿ ವಾಸಿಸುತ್ತಿರುವ ಪ್ರತಿ ಮನೆಯ ವಯಸ್ಕ ಬಡ ಜನರಿಗೆ ವರ್ಷದಲ್ಲಿ ಗರಿಷ್ಠ ೧೦೦೦ ದಿನಗಳ ಅವಧಿಗೆ ಅಕುಶಲ ದೈಹಿಕ ಶ್ರಮದ ಕೆಲಸ ನೀಡುವ ಯೋಜನೆಯನ್ನು ಅಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದೆ. ಈ ಕಾಯ್ದೆಯ ಮುಲೋದ್ದೇಶವು ಗ್ರಾಮೀಣ ಪ್ರದೇಶದ ಬಡ ಜನರ ಜೀವನ ಭದ್ರತೆಯನ್ನು ಹೆಚ್ಚಿಸುವುದೇ ಆಗಿದೆ. ಈ ಮೂಲ ಉದ್ದೇಶವನ್ನು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಸದರಿ ಕಾಯ್ದೆಯಡಿ ನಿಯಮಾವಳಿಯನ್ನು ರೂಪಿಸಿ ಈಗಾಗಲೇ ಹೊರಡಿಸಿರುವುದು ಸರಿಯಷ್ಟೆ.

ಕೇಂದ್ರ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ದಿನಾಂಕ ೧-೪-೨೦೦೮ ರಿಂದ ದೇಶದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಲು ತೀರ್ಮಾನ ಕೈಗೊಂಡಿದೆ. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರು ತಮ್ಮ ದಿನಾಂಕ ೧೨-೧೧-೨೦೦೫ರ ಪತ್ರದ ಮೂಲಕ ಕರ್ನಾಟಕ ರಾಜ್ಯದಲ್ಲಿ ಮೇಲಿನ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ದಿಶೆಯಲ್ಲಿ ಸನ್ನದ್ಧರಾಗಲು ಸೂಚಿಸಿದ್ದಾರೆ.

ಮೇಲೆ ವಿವರಿಸಿದ ಸನ್ನಿವೇಶಗಳ ಹಿನ್ನೆಲೆಯಲ್ಲಿ, ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಕಾರಿಯಾಗಿ ಅನುಷ್ಠಾನಗೊಳಿಸುವುದು ಕಡ್ಡಾಯವಾಗಿದ್ದು ಅದನ್ನು ಕಾರ್ಯಗತಗೊಳಿಸುವ ಸಲುವಾಗಿ ರೂಪುರೇಷೆಗಳನ್ನು ತಯಾರಿಸಿ ಸನ್ನದ್ಧರಾಗುವ ದಿಸೆಯಲ್ಲಿ ಮೊದಲಿಗೆ ಪ್ರತಿ ಜಿಲ್ಲಾ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ) ಇವರನ್ನು ಈ ಸಂಬಂಧ ಈ ಮೂಲಕ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಇವರು ಈ ಕೆಳಕಂಡ ಪ್ರಕಾರ್ಯಗಳು ಹಾಗೂ ಜವಾಬ್ದಾರಿಗಳನ್ನು ಹೊಂದಿರುತ್ತಾರೆ.

೧. ಪ್ರಧಾನವಾಗಿ ಈ ಯೋಜನೆಯು ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನೋಡಲು ಅಧಿಕಾರಿಯು ತಾಲ್ಲೂಕು ಮಟ್ಟದ ಯೋಜನಾಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಗಳೊಂದಿಗೆ ಅವಿರತ ಸಂಪರ್ಕ ಹೊಂದಿರತಕ್ಕದ್ದು. ಯೋಜನೆಯು ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳುತ್ತಿದೆಯೆಂಬ ಬಗ್ಗೆ ಮಾಹಿತಿ ಸಂಗ್ರಹಿಸಿ, ಈ ಯೋಜನೆಯಡಿಯಲ್ಲಿ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಯಾಗಿ ನಾಮನಿರ್ದೇಗೊಂಡಿರುವ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ವರದಿ ಸಲ್ಲಿಸತಕ್ಕದ್ದು.

೨. ಈ ಯೋಜನೆಯ ಅನುಷ್ಠಾನ ಸಂಬಂಧ ಯಾವುದೇ ರೀತಿಯ ನ್ಯೂನತೆಗಳು, ಕೊರತೆಗಳು ಇದ್ದಲ್ಲಿ ಅದನ್ನೂ ಸಹ ಜಿಲ್ಲಾ ಯೋಜನಾ ಸಂಯೋಜನಾಧಿಕಾರಿ ಗಮನಕ್ಕೆ ನೋಡಲ್ ಅಧಿಕಾರಿಯು ತರತಕ್ಕದ್ದು.

೩. ಪ್ರತಿ ನೋಡಲ್ ಅಧಿಕಾರಿಯು ಅವರ ವ್ಯಾಪ್ತಿಯಲ್ಲಿನ ತಾಲ್ಲೂಕುಗಳು ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನ ಕುರಿತರಂತೆ ಪರಿವೀಕ್ಷಣೆ ನಡೆಸಿ ಆ ಕುರಿತಂತೆ ಪ್ರಥಮ ಮಾಹಿತಿಯನ್ನು ಜಿಲ್ಲಾ ಯೋಜನಾ ಸಂಯೋಜನಾಧಿಕಾರಿಗೆ ಒದಗಿಸತಕ್ಕದ್ದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಗ್ರಾಮೀಣಾಭಿವೃದ್ಧಿ ಯೋಜನೆಗಳ ಪ್ರಗತಿ ಕುರಿತಂತೆ ಪರಿವೀಕ್ಷಿಸಲು ಇಲಾಖೆಯ ನಿರ್ದೇಶಕರುಗಳು ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಬಗ್ಗೆಯೂ ಸಹ ಪರಿವೀಕ್ಷಣೆ ನಡೆಸಿ, ಸದರಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಯವರಿಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಜೊತೆಗೆ ಆಯಾ ನಿರ್ದೇಶಕರುಗಳ ವ್ಯಾಪ್ತಿಯಲ್ಲಿ ೨ನೇ ಹಾಗೂ ೩ನೇ ಸ್ಥರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ನಿರ್ದೇಶಕರು ಮತ್ತು ಉಪ ನಿರ್ದೇಶಕರುಗಳಿಗೂ ಸಹ ರಾಷ್ಟ್ರೀಯ ಗ್ರಾಮೀಣ ಜಿಲ್ಲೆಗಳನ್ನು ಖಾತರಿ ಯೋಜನೆ ಅನುಷ್ಠಾನ ಕುರಿತಂತೆ ಪರಿವೀಕ್ಷಸಿ ವರದಿ ನೀಡುವ ಸಲುವಾಗಿ ಕೆಲವು ಜಿಲ್ಲೆಗಳನ್ನು ಹಂಚಿಕೆ ಮಾಡುವ ದಿಸೆಯಲ್ಲಿ ಕ್ರಮ ವಹಿಸಲು ಸೂಚಿಸಿದೆ. ಗ್ರಾಮ ಸ್ವರಾಜ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಎರಡನೇ ಹಾಗೂ ಮೂರನೇ ಸ್ಥರದ ಅಧಿಕಾರಿಗಳಿಗೆ ಸಂಬಂಧಿಸಿದ್ದು ಈ ರೀತಿಯ ಜವಾಬ್ದಾರಿಯನ್ನು ನಿರ್ದೇಶಕರು, ಪಿ.ಪಿ.ಎಂ.ಯು ರವರು ವಹಿಸಲು ಸೂಚಿಸಿದೆ.

ಕೇಂದ್ರ ಸರ್ಕಾರವು ಗ್ರಾಮೀಣ ಬಡ ಜನರಿಗೆ ಉದ್ಯೋಗ ಖಾತರಿ ನೀಡುವ ದಿಸೆಯಲ್ಲಿ ಕಾಯ್ದೆಯನ್ನು ಜಾರಿಗೆ ತಂದಿರುವ ಮೂಲೋದ್ದೇಶವನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದಲ್ಲಿ ವ್ಯವಸ್ಥಿತವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ದಿಶೆಯಲ್ಲಿ ಸಂಬಂಧಪಟ್ಟ ಎಲ್ಲರೂ ಕೈಜೋಡಿಸಿ ಕಾರ್ಯೋನ್ಮುಖರಾಗಿ ಈ ಯೋಜನೆಯ ಫಲವು ಗರಿಷ್ಠ ಸಂಖ್ಯೆಯ ಗ್ರಾಮೀಣ ಬಡ ಜನರಿಗೆ ತಲುಪುವಂತೆ ವಹಿಸಲು ಕೋರಿದೆ.

ಸಹಿ/–

**(ಕೆ. ಜಯರಾಜ್)**

ಸರ್ಕಾರದ ಪ್ರದಾನ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯುತ್ ರಾಜ್ ಇಲಾಖೆ

# PROCEEDINGS OF THE GOVERNMENT OF KARNATAKA

Sub: Implementation of Nationl Rural Employment Guarantee Scheme in all the District of the State – Creation of new Directorate of NREGA and the posts therefore etc. – Order reg -

Read: (1) Demi – official Letter No. V-24011/5/2005 – SGRY (M) Pt. date 17.11.2005 from the Secretary to Government of India, Ministry of Rural Development, New Delhi.

(2) Demi – official Letter No. V-28012/10/2005 – NREGA date 08.10.2007 from the Joint Secretary to Government of India, Ministry of Rural Development, New Delhi.

(3) Government Circular No. RDP 34 PaBAWa 08 dt: 06.02.2008

* * *

**PREAMBLE:**

The National Rural Employment Guarantee Act (hereinafter referred to as NREGA Act) came to be enacted by Government of India in Septermber 2005 following which the Government of Karnataka has been implementing the Scheme under the said Act in phases since 02-02-2006. The district covered in the I Phase are Bidar, Gulbarga, Raichur, Davanagere and Chitradurga respectively while those covered under the II Phase with effect from 01/04/2007 are Bellary, Belgaum, chikmaglur, Hassan, Shimoga and Kodagu. Implementation of the Scheme in Phase-I & Phase-II districts has already gathered momentum.

1. The main objective of the NREG Act is to enhance livelihood security in rural areas by providing 100 days of guaranteed wage employment in a financial year to every household whose adult members volunteer to do unskilled manual work. This work guarantee also serves other objective such as generating productive assets, protecting the environment, empowering rural women, reducing rural urban migration and fostering social equity among other etc. The NREG Act also envisages a collaborative partnership between to Central Government, the State Governments, the Panchayat Raj Institutions (PRIs) and the local community.

2. Broadly, the main implementation activities are at the village and Block/ Taluk levels, while coordination activities are mainly at the Block/Taluk and District levels. Planning, Supervision and monitoring take place at all levels (Village, Block/Taluk, District and State). At each level, the concerned authorities are accountable to the community. The Gram Sabha is the statutority institutional mechanism for community participation.

3. The overall responsibility for ensuring the implementation of the Scheme as per the NREG Act lies on the State Employment Guarantee Council (SEGC) at the State level, District progamme Coordinator (DPC) at the Disteict level, the Programme Officer (PO) at the Block/Taluk level and Grama Panchayat at the grass root level. The Gram Panchayat has a pivotal role to play in the

implementation of the Scheme. In other words, it is responsible for planning of works, registering households, issuing job cards, allocating employment, executing the works and monitoring the implementation of the Scheme at the village level.

4. The Secretary to Government of India in the Ministry of Rural Development in his letter dated 17-11-2005 read at (1) above, addressed to the Chief Secretary; Govt. of Karnataka had asked the State Government to be fully prepared for the implementation of the Act, which essentially comprised of formulating the Scheme and the rules to facilitate its implementation. In pursuance thereof, the implantation of the Scheme was taken up in Karnataka in two phases as already indicated in paragraph (1) above.

5. In pursuance of the communication dated 08.10.2007 read at (2) above, received from the Government of India in the Ministry of Rural Development, the remaining 18 districts viz. Bagalkote, Bangalore (U), Bangalore ®, Bijapur, Chamarajanagar, Chikkaballapur, Dakshina Kannada, Dharwad, Gadag, Haveri, Kolar, Koppal, Mandya, Mysore, Ramanagar, Tumkur, Udupi and Uttar Kannada have been brought under NREG Act for the purpose of implementing the Employment Guarantee Scheme w.e.f. 01-04-2008. The Information, Education and Communication (IEC) activities in the above districts have already started. The Chief Executive officers of Zilla Panchayats, the Executive Officers of Taluk Panchayats and other implementing agencies have been asked to be fully prepared to launch the Programme as scheduled. The Abdul Nazir Sab State Institute of Rural Development, Mysore is the main organization entrusted with the responsibility of training the officials and non-officials of PRIs. the National Institute of Rural Development, Hyderabad is also involved to train the personel

6. The NREGA Act is an important flagship Programme of the Government of India calling for foolproof and transparent implementation with utmost care, caution, total commitment and responsibility by the implementing agenecies at all levels i.e., State, Zilla Panchayats, Taluk Panchayats and Gram Panchayats. The programme is demand based and not a target oriented one. Conducting Social Audit at all the stages of implantation of the Scheme is a important activity envisaged in the Act and the reposnibility is entrusted to Gram Panchayats.

7. Having regard to the importance of the Scheme, all those involved in its implementation have been properly trained/ are being trained to grow up to the expected level. In all the 5 districts covered under Phase-I, the Social audit is carried out. Frequent inspection by Officers at all levels are being undertaken to ensure effective implantation of the Programme.

In the Circular dated 06.02.2008 read at (3) above, the Deputy Conservators of Forests (Social Forestry) have been appointed as Nodal Officers in every Zilla Panchayat to co-ordinate and

1. monitor effective implementation of the NREG Programme. The said Circular also spells out the functions and responsibilities of these Nodal Officers.
2. Having regard to the size of the Programme and the huge amount allocated for its implementation and the fact that such implementation has been made compulsory under the Act, t is felt necessary to have a delivery mechanism, which has to be oth adequated and effective. Going by the experience, it is felt necessary to have effective planning, monitoring, supervision and follow-up actions not only at the Sate level but also at District and Taluk levels. Gram Panchayats are the agencies to execute the projects with active assistance of respective line departments. In other words, considering the unique features of the Act and the key processes involved in its implementation, there is a need to strengthen the delivery mechanism at different levels.
3. As per the guidelines of Government of India communicated in their letter No. 28012/3/05-06 – NREGA dated 30th March 2007, the key functional areas for deployment of additional full time dedicated personnel for the National Rural Employment Guarantee Scheme at Panchayat Raj Institution are as under.

| Level | Key functional Areas | Personnel to be deployed |
|---|---|---|
| GP | Registration, Job Card issue, employment demand and provision, work implementation, payment, social audit, records | 1 Gram Rozgar Sewak for each GP |
| Block | Overall Programme management | 1 Programme Officer for each block |
| | Works | Technical assistants pooled to service GPs |
| | IT, MIS | Computer Assistants |
| | Finance | Accountant |
| Dsitrict | Works & durable assets | Work Manager with Technical assistants |
| | IT, MIS, | IT manager with Computer Assitants |
| | Finance | Account Manager with Accounts assistants |

4. Keeping all the above aspects in mind, Government has decided to create a separate Directorate with supporting staff for implementation of National Rural Employment Guarantee Act at the State level and also its Unit Offices along with supporting Staff at the Zilla, Taluk and Gram Panchayat levels respectively.

Hence the following order:

**GOVERNMENT OREDER NO. RDP 104 UkhaYo 2007, BANGALORE, DATED 02-04-2008**

In the circumstances explained in the preamble, sanction is accorded to creat a separate Directorate with supporting staff for implementation of National Rural Employment Guarantee Act at the State, Zilla, Taluk and Gram Panchayat Levels along with the support staff respectively as detailed in the Annexure-I, Annexure-II and Annexure-III to this order.

Guidelines for out sourcing services will be issued separately.

The expenditure on the additional staff at Zilla/ Taluk/ Gram Panchayat level will be met out of 4% of the administrative cost built into the programme.

This order issues with the concurrence of Planning Department vide No. PD 1 DPD 2008, dated 24-01-2008; Finance Department vide No. FD 42 Exp. 6/2008, dated 01-03-2008 and Department of Personnel and Administrative Reforms vide No. DPAR 08/ SRA / 2007, dated 18-02-2008.

By order and in the name of
the President of India
**Sd/-**
**(A.S. SRIKANTH)**
Secretary to Government (Panchayat Raj)
Rural Development and Panchayat Raj
Department

ಅಧಿಕೃತ ರಾಜ್ಯಪತ್ರ

## ANNEXURE – I TO THE GOVERNMENT ORDER NO. RDP 104 Ukha Yo 2007, BANGALORE, DATED 02-04-2008

### NREGS Directorate at State Level:

| Sl. No. | Designation | No. of Posts | Scals of Pay | Mode of appointment |
|---|---|---|---|---|
| 01 | Director & Ex-Officio Joint Secretary/ Additional Secretary to Government of Karnataka | 01 | In the IAS | On deputation of an officer not below the rank of a Selection Grade officer. |
| 02 | Joint Directors | 02 | 20025 – 28275 | On deputation of an officer holding an equivalent grade from Rural Development & Panchayat Raj, Public Works, Agriculture, Watershed, forest, & other development Departments |
| 03 | Assistant Directors | 04 | 11400-21600 | On deputation of an officer holding an equivalent grade from Rural Development & Panchayat Raj, Public Works, Agriculture, Watershed, forest, & other development Departments |
| 04 | Assistant Statistical Officer | 01 | 10800-20025 | On deputation from Department of Economics and Statistics |
| 05 | First Division Assitants | 06 | 7275-13750 | Ondeputation from Field Departments |
| 06 | Stenographers | 02 | 7275-13750 | Ondeputation from Field Departments |
| 07 | Drivers | 03 | 5800-10500 | Secretariat/ Deputation from field departments |
| 08 | Programme Manager (MIS) | 01 | 2000 to 25000 p.m. consolidated | Out sourcing |
| 09 | Programme Manager (Capacity Building & IEC) | 01 | 2000 to 25000 p.m. consolidated | Out sourcing |

**Sd/-**
**(A.S. SRIKANTH)**

## ANNEXURE – II TO THE GOVERNMENT ORDER NO. RDP 104 Ukha Yo 2007, BANGALORE,DATED 02-04-2008

### Staffing Pattern to strengthen NREGS – At District level

| Sl. No. | Designation | No. of Posts | Scals of Pay (IN Rs.) | Mode of appointment | Prescribed qualification |
|---|---|---|---|---|---|
| 01 | District Programme Executive | 29 | 20000 p.m consolidated | Out source | MBA/ BE (Civil) with computer knowledge |
| 02 | Data Entry Operator | 29 | 5000 p.m. consolidated | Out source | |

* Depending on the suitability, one of the officers in the Zilla panchayat, in the Grade and Scale of Pay equivalent to Deputy Secretary of Zilla Panchayat will function as Project Dirctor incharge of National Rural Employment Guarantee Scheme

**Sd/-**
**(A.S. SRIKANTH)**

## ANNEXURE – III TO THE GOVERNMENT ORDER NO. RDP 104 Ukha Yo 2007, BANGALORE,DATED 02-04-2008

## Staffing Pattern to strengthen the NREGS – At Taluk pancyayat and Gram Panchayat level

| Sl. No. | Designation | No. of Posts | Scals of Pay (IN Rs.) | Mode of appointment | Prescribed qualification |
|---|---|---|---|---|---|
| 01 | Additional Programme Officers | 176 | 11400 – 21600 | On deputation of an officer holding an equivalent grade from Rural Development & Panchayat Raj, Public works, Agriculute, Watershed, Forest Co-operation & Other development Department | |
| 02 | Computer Assistants | 176 | 500 per month consolidated | Out sourcing | Graduation with computer knowledge |
| 03 | Audit Officer | 176 | 11400-21600 | By upgrading the existing post of Accoutn Superintendents* to be filled by State Accounts/ Teasury/ Co-operative Audit Departments | |
| 04 | Account Assistant | 176 | 7275-13750 | On deputation from State Accounts / Treasury/ Co-Operative Audit Department | |

*After upgradation the existing posts of Accounts Superintendents stand abolished.

| Sl. No. | Designation | No. of Posts | Scals of Pay (IN Rs.) | Mode of appointment | Prescribed qualification |
|---|---|---|---|---|---|
| 01 | Technical Assistants | 3021 | a) 7000 per month consolidated<br>OR<br>b) 5000 per month consolidated | a) Out Sourcing<br>OR<br>b) Out Sourcing | a) Diploma in civil Engineering/ Agricultre/ Horticulute with Compute Knowledge<br>b) Graduation with computer knowledge |

**Sd/-**
**(A.S. SRIKANTH)**

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ ೬೧ ಉಖಾಯೋ ೦೭

ಕರ್ನಾಟಕ ಸರ್ಕಾರದ ಸಚೀವಾಲಯ
ಸಚಿವಾಲಯ–೨, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ ೦೯–೦೪–೨೦೦೮

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು,

ಮಾನ್ಯರೆ,

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬ್ಯಾಂಕ್‌ಗಳ ಮುಖಾಂತರ ನಿರ್ವಹಿಸುವ ಕುರಿತು.

**ಉಲ್ಲೇಖ:** ಜಂಟಿ ಕಾರ್ಯದರ್ಶಿ, ಭಾರತ ಸರ್ಕಾರ, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಲ್ಯಾಂಡ್ ರಿಸೋರ್ಸ್ ಇಲಾಖೆ, ಇವರ ಅಸಪ ಸಂ. Z 1018/1/2008 - Admn ದಿನಾಂಕ ೨೪ ಜನವರಿ ೨೦೦೮.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನದ ನಿರ್ವಹಣೆಯನ್ನು ಬ್ಯಾಂಕ್‌ಗಳ ಮುಖಾಂತರ ಮಾಡುವ ಕುರಿತು ಈಗಾಗಲೇ ಹಲವು ನಿರ್ದೇಶನಗಳನ್ನು ನೀಡಲಾಗಿದೆ. ಈ ಕುರಿತು ಕೇಂದ್ರ ಸರ್ಕಾರದಿಂದ ಬಂದಿರುವ ಉಲ್ಲೇಖದಲ್ಲಿ ಹಲವು ಸರ್ಕಾರಿ ಸಂಸ್ಥೆಗಳು ಮತ್ತು ಇತರೆ ಅಂಗ ಸಂಸ್ಥೆಗಳು, ತಮ್ಮ ಅಧೀನದಲ್ಲಿ ಬರುವ ವಿವಿಧ ಕಾರ್ಯಕ್ರಮಗಳ ಹಣಕಾಸಿನ ವ್ಯವಹಾರಗಳ:ನ್ನು ಸಾರ್ವಜನಿಕ ವಲಯ ಬ್ಯಾಂಕ್ ಗಳಿಂದ (Public sector banks) ಖಾಸಗಿ ವಲಯ ಬ್ಯಾಂಕ್‌ಗಳಿಗೆ (Private sector banks) ವರ್ಗಾಯಿಸಿದ್ದು, ಇದರಿಂದ ಸಾರ್ವಜನಿಕ ವಲಯ ಬ್ಯಾಂಕ್‌ಗಳನ್ನು ನಿರ್ಲಕ್ಷಿಸಿದಂತಾಗಿದೆ ಎಂದು ತಿಳಿಸಲಾಗಿದೆ. ಸಾರ್ವಜನಿಕ ವಲಯ ಬ್ಯಾಂಕ್‌ಗಳು ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಿಶೇಷ ಪ್ರಾಧಾನ್ಯತೆ ಮತ್ತು ಪಾತ್ರ ಹೊಂದಿರುವುದರಿಂದ ಮತ್ತು ಸರ್ಕಾರದ ಆರ್ಥಿಕ ನೀತಿ ಜಾರಿಯಲ್ಲಿ ಮಹತ್ವದ ಪಾತ್ರ ವಹಿಸುವುದರಿಂದ ಸಾರ್ವಜನಿಕ ವಲಯ ಬ್ಯಾಂಕ್‌ಗಳು ನಿರ್ಲಕ್ಷತೆಗೊಳಗಾಗುವುದನ್ನು ತಪ್ಪಿಸಲು ಕೇಂದ್ರ ಸರ್ಕಾರವು ಈ ಕೆಳಗಿನಂತೆ ತೀರ್ಮಾನಿಸಿರುತ್ತದೆ.

ಇಲಾಖೆ/ ಸಚಿವಾಲಯಗಳ ನಿಯಂತ್ರಣದಲ್ಲಿ ಬರುವ ಕಾರ್ಯಕ್ರಮಗಳ (ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆಗೊಳಿಸುವ ಅನುದಾನ ಒಳಗೊಂಡಂತೆ) ಅನುದಾನಗಳಲ್ಲಿ ಶೇ ೬೦% ರಷ್ಟನ್ನು ಸಾರ್ವಜನಿಕ ವಲಯ ಬ್ಯಾಂಕ್ ಗಳಲ್ಲಿ (Public sector banks) ಇರಿಸತಕ್ಕದ್ದು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನದ ನಿರ್ವಹಣೆಯನ್ನು ಬ್ಯಾಂಕ್‌ಗಳ ಮುಖಾಂತರ ಮಾಡುವ ಕುರಿತಂತೆ ಮೇಲ್ಕಂಡ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಸಿ. ಎಂ. ಶಿರೋಳ್)**
ನಿರ್ದೇಶಕರು
ಯೋಜನೆ ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳ ಹಂತಗಳಲ್ಲಿ ಆಡಳಿತಾತ್ಮಕ ಸುವ್ಯವಸ್ಥೆಗೊಳಿಸಲುಹೊರ ಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ ಸಂ.ಗ್ರಾಅಪ. 12: ಉಖಾಯೋ: 2006 ಬೆಂಗಳೂರು, ದಿನಾಂಕ: 9.3.2007.
2. ಸರ್ಕಾರದ ಆದೇಶ ಸಂ.ಗ್ರಾಅಪ. 12: ಉಖಾಯೋ. 2006 ಬೆಂಗಳೂರು, ದಿನಾಂಕ: 4.5.2007
3. ಸಕಾರದ ಆದೇಶ ಸಂ.ಗ್ರಾಅಪ. 104: ಉಖಾಯೋ. 2007 ದಿನಾಂಕ: 2.4.2007
4. ಕೇಂದ್ರ ಸರ್ಕಾರದ ಪತ್ರ ಸಂ. J-11011/18/2007-NREGA ದಿನಾಂಕ: 19.03.2009.

* * *

**ಪ್ರಸ್ತಾವನೆ**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಈಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ, ಸಾಧಿಸಲಾದ ಪ್ರಗತಿಯು ರಾಷ್ಟ್ರದ ಇತರೆ ರಾಜ್ಯಗಳಲ್ಲಿ ಸಾಧಿಸಿದ ಪ್ರಗತಿಗೆ ಹೋಲಿಸಿದಾಗ, ತೀರಾ ಕಡಿಮೆ ಇದ್ದು, ಆಡಳಿತ ಯಂತ್ರವನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಯೋಜನೆಯಲ್ಲಿ ಬರುವ ಎಲ್ಲಾ ಪ್ರತಿಯೊಂದು ಚಟುವಟಿಕೆಗಳ ಮೇಲ್ವಿಚಾರಣೆ ಪರಿವೀಕ್ಷಣೆಯನ್ನು ಅಧಿನಿಯಮದ ಪ್ರಕಾರ ಕ್ರಮಬದ್ಧವಾಗಿ ಸುವ್ಯವಸ್ಥೆಗೊಳಿಸುವುದು ಅನಿವಾರ್ಯವೆಂದು ಅಭಿಪ್ರಾಯ ಪಡಲಾಗಿದೆ. ಮೊಟ್ಟ ಮೊದಲು, ಉಲ್ಲೇಖ(1)ರಲ್ಲಿ, ಮೊದಲನೇ ಹಂತದ, ಐದು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ದಾವಣಗೆರೆ ಮತ್ತು ಚಿತ್ರದುರ್ಗ ಇವುಗಳ 1091 ಗ್ರಾಮ ಪಂಚಾಯತ್‌ಗಳಿಗೆ, ಕಾರ್ಯ ನಿರ್ವಾಹಕ ಸಹಾಯಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳು ಆರು ತಿಂಗಳವರೆಗೆ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕಾತಿ ಮಾಡಿಕೊಳ್ಳಲು ಆದೇಶವಾಗಿರುತ್ತದೆ. ಇದೇ ರೀತಿ, ದಿನಾಂಕ: 1–4–02007ರಿಂದ ಜಾರಿಗೆ ಬಂದಿರುವ ಎರಡನೇ ಹಂತದ ಜಿಲ್ಲೆಗಳಾದ ಬಳ್ಳಾರಿ, ಬೆಳಗಾಂ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕೊಡಗು ಇವುಗಳಿಗೂ ಸಹ ಉಲ್ಲೇಖ(2)ರಲ್ಲಿ, 1516 ಗ್ರಾಮ ಪಂಚಾಯತ್‌ಗಳಿಗೆ, ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಒಂದರಂತೆ 1516 ಕಾರ್ಯ ನಿರ್ವಾಹಕ ಸಹಾಯಕರ ಹುದ್ದೆಗಳನ್ನು ಉಲ್ಲೇಖ(1)ರಲ್ಲಿ ತಿಳಿಸಿರುವ ಷರತ್ತು ಮತ್ತು ನಿಯಮಗಳಂತೆ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಲಾಗಿತ್ತು.

ಉಲ್ಲೇಖ(3)ರಲ್ಲಿ, ಮೂರನೇ ಹಂತದ 18 ಜಿಲ್ಲೆಗಳ 3021 ಗ್ರಾಮ ಪಂಚಾಯತ್‌ಗಳಿಗೆ, ಪ್ರತಿ ಗ್ರಾಮ ಪಂಚಾಯತಿಗಳಿಗೆ ಒಂದರಂತೆ, ತಾಂತ್ರಿಕ ಸಹಾಯಕರ ಹುದ್ದೆಗಳನ್ನು ಸೃಜಿಸಿ ಹೊರ ಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆದೇಶಿಸಲಾಗಿತ್ತು. ಮೊದಲನೇ ಹಾಗೂ ಎರಡನೇ ಹಂತದ ಜಿಲ್ಲೆಗಳ ಗ್ರಾಮ ಪಂಚಾಯತಿಗಳಿಗೆ ನೇಮಕಾತಿಯಾದ ಕಾರ್ಯ ನಿರ್ವಾಹಕ ಸಹಾಯಕರ ಹುದ್ದೆಗಳನ್ನು ಹಾಗೂ ಮೂರನೇ ಹಂತದ ಜಿಲ್ಲೆಗಳ ಗ್ರಾಮಪಂಚಾಯತ್‌ಗಳಿಗೆ ನೇಮಕಾತಿಯಾದ ತಾಂತ್ರಿಕ ಸಹಾಯಕರ ಹುದ್ದೆಗಳ ನಾಮ ನಿರ್ದೇಶನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತ ಸಹಾಯಕರೆಂದು (Administrative Assistant) ಒಂದೇ ಇರುವಂತೆ ಬದಲಾಯಿಸಲು ತೀರ್ಮಾನಿಸಿದೆ.

ಜಿಲ್ಲೆಯಲ್ಲಿರುವ ಜಿಲ್ಲಾ ಪಂಚಾಯತ್‌ನ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯ ಅಭಿಯಂತರರು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ನಿಗಾವಹಿಸಿ, ಪರಿವೀಕ್ಷಣೆ ಮಾಡಲು ಸಾಧ್ಯವಾಗದ ಕಾರಣ ಹಾಗೂ ಜಿಲ್ಲಾ ಪಂಚಾಯಿತಿಯಲ್ಲಿನ ಹಾಲಿ ಇರುವ ಅನೇಕ ಯೋಜನೆಗಳ ಕಾಮಗಾರಿಗಳು, ವಿವಿಧ ಸ್ಥಳಗಳಿಗೆ ಹರಡಿರುವುದರಿಂದ ಹಾಗೂ ಜಿಲ್ಲಾ ಪಂಚಾಯತ್ ನಿಯಮಿತ ಕಾಮಗರಿಗಳಿಗೆ ಹೆಚ್ಚಾಗಿ ವಿಶೇಷ ಗಮನ ಕೊಡಬೇಕಾಗಿರುವುದರಿಂದ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯು ಕೂಡ, ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ಸಾಧ್ಯವಾಗದ ಕಾರಣ, ಸರ್ಕಾರವು ತಾಲ್ಲೂಕು ಮಟ್ಟದಲ್ಲಿ ಪ್ರತಿ ನಾಲ್ಕು ಗ್ರಾಮ ಪಂಚಾಯಿತಿಗಳಿಗೆ, ಉದ್ಯೋಗ ಖಾತರಿ ಯೋಜನೆಯ ಇಂಜಿನಿಯರಿಂಗ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು, ಒಬ್ಬತಾಂತ್ರಿಕ ಸಹಾಯಕರನ್ನು ಹೊರಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯಲು (ರಾಜ್ಯದಲ್ಲಿ ಒಟ್ಟು 1047 ತಾಂತ್ರಿಕ ಸಹಾಯಕರು) ತೀರ್ಮಾನಿಸಲಾಗಿದೆ. ಅದರಂತೆಯೇ ತಾಲ್ಲೂಕು ಮಟ್ಟದಲ್ಲಿ ಕೃಷಿ, ನೀರಾವರಿ, ಜಲಾನಯನ, ಅರಣ್ಯ, ತೋಟಗಾರಿಕೆ ಹಾಗೂ ಇತರ ಇಲಾಖೆಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಪರಿಣಾಮಕಾರಿಯಾಗಿ

ಪರಿವೀಕ್ಷಣೆ ಮಾಡಲು ಪ್ರತಿ ನಾಲ್ಕು ಗ್ರಾಮಪಂಚಾಯತಿಗಳಿಗೆ ಒಬ್ಬ ತಾಂತಿಕ ಸಹಾಯಕರ ಸೇವೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಪಡೆಯಲು (ರಾಜ್ಯದಲ್ಲಿ ಒಟ್ಟು 1047 ತಾಂತ್ರಿಕ ಸಹಾಯಕರು) ತೀರ್ಮಾನಿಸಲಾಗಿದೆ.

ಉಲ್ಲೇಖ(3)ರಲ್ಲಿ ರಾಜ್ಯದ ಎಲ್ಲಾ 176 ತಾಲ್ಲೂಕು ಪಂಚಾಯಿತಿಗಳಿಗೆ, ಪ್ರತಿ ತಾಲ್ಲೂಕು ಪಂಚಾಯಿತಿಗಳಿಗೆ ಒಂದರಂತೆ, ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿಯ ಹುದ್ದೆಯನ್ನು ಒಟ್ಟು 176 ಹುದ್ದೆಗಳನ್ನು ಅನುಷ್ಠಾನ ಇಲಾಖೆಗಳಿಂದ ನಿಯೋಜನೆಯ ಮೂಲಕ ತುಂಬಲು/ನೇಮಖಾತಿ ಮಾಡಲು ಆದೇಶಿಸಲಾಗಿತ್ತು. ಸದರಿ ಹುದ್ದೆಯ ಅಧಿಕಾರಿಯವರು, ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ, ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಕಾಮಗಾರಿಗಳನ್ನು ನೋಡಿಕೊಳ್ಳಲು ಸಮನ್ವಯ ಮಾಡಲು ನೆರವಾಗುತ್ತಾರೆ. ಈಗ ಸದರಿ 176 ಹೆಚ್ಚುವರಿ ಕಾರ್ಯಕ್ರಮದ ಅದಿಕಾರಿಗಳ ಹುದ್ದೆಗಳನ್ನು ಕ್ಷೇತ್ರಮಟ್ಟದ/ ಅನುಷ್ಠಾನ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆಯ ಕಾರಣ, ನಿಯೋಜನೆ ಮೇರೆಗೆ ತುಂಬಲು ಸಾಧ್ಯವಾಗದೇ ಇರುವ ಕಾರಣ ಸದರಿ ಹುದ್ದೆಗಳನ್ನು ನಿಯೋಜನೆ ಮೂಲಕ ತುಂಬುವ ಬದಲಾಗಿ ತಾತ್ಕಾಲಿಕವಾಗಿ ಗೌರವ ಗುತ್ತಿಗೆಯ ಆಧಾರದ ಮೇಲೆ ಸೇವೆ ಪಡೆಯಲು ನಿರ್ಧರಿಸಿದೆ.

ತಾಲ್ಲೂಕು ಮಟ್ಟದಲ್ಲಿ ಹೆಚ್ಚುವರಿ ಕಾರ್ಯವು ಅಧಿಕಾರಿಯವರು ಇರುವುದಲ್ಲದೆ, ಸಾಮಾಜಿಕ ತಪಾಸಣೆ ಮತ್ತು ಕುಂದುಕೊರತೆಗಳ ನಿವಾರಣಾ ಕೋಶ, ತಾಂತ್ರಿಕ ಕೋಶ, ಮಾಹಿತಿ ನಿವಾಹಣಾ ವ್ಯವಸ್ಥೆಯ ಕೋಶ, ತರಬೇತಿ ಮತ್ತು ಐಇಸಿ ಕೊರತೆಗಳನ್ನು ಸ್ಥಾಪಿಸಬೇಕಾಗಿದೆ. ಈ ಘಟಕಗಳಿಗೆ, ಸಿಬ್ಬಂದಿಯ ಬೆಂಬಲ ಅಗತ್ಯವಿದೆ. ಇದೇ ರೀತಿ, ಜಿಲ್ಲಾ ಮಟ್ಟದಲ್ಲಿ ಕೂಡ, ಮೇಲಿನ ಕೋಶಗಳನ್ನು ಸ್ಥಾಪಿಸಿ, ಅಗತ್ಯವಾದ ಸಿಬ್ಬಂದಿಯ ಬೆಂಬಲವನ್ನು ಕೊಡಲು ನಿರ್ಧರಿಸಿದೆ. ತಾಲ್ಲೂಕು ಮಟ್ಟದಲ್ಲಿ ಸಾಮಾಜಿಕ ತಪಾಸಣೆ ಮತ್ತು ಕುಂದುಕೊರತೆಗಳ ನಿವಾರಣೆ ಕೋಶಕ್ಕೆ ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗೆ ಒಂದರಂತೆ 176 ಸಂಯೋಜಕರು ಮತ್ತು 176 ಸಹಾಯಕರುಗಳ ಸೇವೆಯನ್ನು ಪಡೆಯಲು ತೀರ್ಮಾನಿಸಿದೆ. ತಾಂತ್ರಿಕ ಕೋಶ (ಕಾಮಗಾರಿಗಳು) ಇದರಡಿ, ಪ್ರತಿಯೊಂದು ತಾಲ್ಲೂಕು ಪಂಚಾಯಿತಿಗಳಿಗೆ ಒಂದರಂತೆ 176 ತಾಂತ್ರಿಕ ಸಂಯೋಜಕರು ಮತ್ತು 176 ತಾಂತ್ರಿಕ ಸಹಾಯಕರುಗಳ ಸೇವೆಯನ್ನು ಪಡೆಯಲು ತೀರ್ಮಾನಿಸಿದೆ. ತರಬೇತಿ ಮತ್ತು ಐಇಸಿ ಕೋಶದಡಿ, ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ 176 ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕರ (IEC Co-ordinator) ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ತೀರ್ಮಾನಿಸಿದೆ. ಹಾಗೇಯೇ, ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ತಾಲ್ಲೂಕು ಮಟ್ಟದಲ್ಲಿ ನಿರ್ವಹಿಸಲು MISರಲ್ಲಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ಒಂದರಂತೆ, 176 ಗಣಕ ಸಹಾಯಕರ ಹುದ್ದೆಗಳನ್ನು ಸೃಜಿಸಿದ್ದು ಈಗ ಸದರಿ ಹುದ್ದೆಗಳ ಪದನಾಮವನ್ನು ಇನ್ನು ಮುಂದೆ MIS ಸಂಯೋಜಕರೆಂದು ಹೆಸರಿಸಿ ಬದಲಾವಣೆ ಮಾಡಲು ನಿರ್ಧರಿಸಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಕೂಡ ತಾಲ್ಲೂಕು ಮಟ್ಟದ ಮಾದರಿಯಂತೆ ಸಾಮಾಜಿಕ ತಪಾಸಣೆ ಮತ್ತು ಕುಂದು ಕೊರತೆಗಳ ನಿವಾರಣಾ ಕೋಶದಡಿ ಪ್ರತಿ ಜಿಲ್ಲಾ ಪಂಚಾಯತಿಗೆ ಒಂದರಂತೆ 29 ಸಂಯೋಜಕರು ಹಾಗೂ 29 ಸಹಾಯಕರುಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ನಿರ್ಧರಿಸಲಾಗಿದೆ ಮತ್ತು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲಾ ಪಂಚಾಯಿತಿಗೆ ಒಂದರಂತೆ ಉಲ್ಲೇಖ(3) ರಲ್ಲಿ 29 ಜಿಲ್ಲಾ ಕಾರ್ಯನಿರ್ವಾಹಕ ಸಹಾಯಕರ ಹುದ್ದೆಗಳನ್ನು ಸೃಜಿಸಿದ್ದು, ಸದರಿ ಹುದ್ದೆಗಳ ಪದನಾಮವನ್ನು ಇನ್ನು ಮುಂದೆ MIS Co-ordinator ಎಂದು ಹೆಸರಿಸಿ ಬದಲಾವಣೆ ಮಾಡಲು ನಿರ್ಧರಿಸಿದೆ. ತರಬೇತಿ ಮತ್ತು IEC ಕೋಶದಡಿ ಪ್ರತಿ ಜಿಲ್ಲಾ ಪಮಚಾಯಿತಿಗೆ ಒಂದರಂತೆ 29 ಮಾಹಿತಿ, ಶಿಕ್ಷಣ ಮತ್ತು ಸಂವಹನ ಸಂಯೋಜಕರು ಹಾಗೂ ಇದೇ ಕೋಶದಡಿ ಪ್ರತಿ ಜಿಲ್ಲಾ ಪಂಚಾಯಿತಿಗಳಿಗೆ ಒಂದರಂತೆ 29 ಸಹಾಯಕರುಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ನಿರ್ಧರಿಸಿದೆ. ಉಸ್ತುವಾರಿ, ಮೌಲ್ಯಮಾಪನ ಮತ್ತು ಸಂಶೋಧನಾ ಪರಿಣಿತ ಘಟಕದಡಿ ಸಮರ್ಪಕವಾಗಿ ಎಲ್ಲಾ ಚಟುವಟಿಕೆಗಳ ನಿಗಾವಹಿಸಿ ಉಸ್ತುವಾರಿ ಮಾಡಲು ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲಾ ಪಂಚಯಿತಿಗೆ ಒಂದರಂತೆ 29 ಪರಿಣಿತ ಸಂಶೋಧಕರುಗಳ ಸೇವೆಯನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಪಡೆಯಲು ನಿರ್ಧರಿಸಿದೆ. ಆದುದರಿಂದ, ಈ ಆದೇಶ.

## ಸರ್ಕಾರದ ಆದೇಶ ಸಂ.ಗ್ರಾಅಪ. 104 ಉಖಾಯೋ: 2007 ಬೆಂಗಳೂರು, ದಿನಾಂಕ. 05.06.2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅದಿನಿಯಮ 2005ರಲ್ಲಿ ತಿಳಿಸಿರುವ ಎಲ್ಲಾ ಪ್ರಕ್ರಿಯೆಗಳನ್ನು ಯೋಜನೆಯ ಅನುಷ್ಠಾನದಲ್ಲಿ ಕ್ರಮಬದ್ಧವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಲು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಹಂತಗಳಲ್ಲಿ ಸಿಬ್ಬಂದಿ ಸೇವೆಗಳನ್ನು ಹೊರ ಗುತ್ತಿಗೆಯ ಆಧಾರದ ಮೇಲೆ ಪಡೆಯಲು ಒಟ್ಟು ಯೋಜನಾ ವೆಚ್ಚದ ಶೇಕಡಾ 6ರಷ್ಟಿನ ಮಿತಿಗೆ ಒಳಪಟ್ಟು ಆಯಾ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿನ ಬೇಡಿಕೆ ಹಾಗೂ ಪ್ರಗತಿಗೆ ಅನುಗುಣವಾಗಿ ಅನುಬಂದದಲ್ಲಿರುವಂತೆ ಸರ್ಕಾರವು ಮಂಜೂರಾತಿ ನೀಡಿದೆ. ಆದರೆ, ಬೆಂಗಳೂರು(ನಗರ),

ಬೆಂಗಳೂರು(ಗ್ರಾಮಾಂತರ). ರಾಮನಗರ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಮಾತ್ರ ಆಯಾ ಜಿಲ್ಲೆಗಳ ಬೇಡಿಕೆಗೆ ಅನುಗುಣವಾಗಿ ಅಗತ್ಯ ಸಿಬ್ಬಂದಿ ಸೇವೆ ಪಡೆಯುವ ಕುರಿತು ನಿರ್ದೇಶನಾಲಯಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಪೂರ್ವಾನುಮೋದನೆ ಪಡೆದು ಸಿಬ್ಬಂದಿ ಸೇವೆ ಪಡೆಯಲು ಕ್ರಮ ವಹಿಸುವುದು. ಈ ಆದೇಶವು ಕೂಡಲೇ ಜಾರಿಗೆ ಬರತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂ.ಆಇ/261/ವೆಚ್ಚ–6/09 ದಿನಾಂಕ. 29.5.2009ರಲ್ಲಿ ಸಹಮತಿಸಿದಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/–
**(ಡಾ॥ ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ:**

1. ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರುಗಳು/ಕಾರ್ಯ ನಿರ್ವಾಹಕ ಅಧಿಕಾರಿಗಳು

ಅನುಷ್ಠಾನ

| ANNEXURE | | | | | | | | |
|---|---|---|---|---|---|---|---|---|
| **Details of the sanctioned services of the professionals to be outsourced for the implementation of NREGA at various PRI level** | | | | | | | | |
| **No.** | **Name of the Professional** | **Maximum no.of persons allowed to be procured based on the performance** | **Maximum consolidated pay per month per professional(Amt in Rs)** | | | **Minimum requirements** | | **Remarks** |
| | | | **Remuneration** | **TA/DA** | **Total** | **Educational qualification** | **Experience in the related field** | |
| **I** | **Grama Panchayath (GP)** | | | | | | | |
| 1 | Administrative assistants and Technical Assistant)* | 1per GP | 3000.00 | 500.00 | 3500.00 | PUC–pass with minimum of 40% marks with computer knowledge | 2-3 Years | He/She will discharge all activities as prescribed in Annexure-A4(page-99) of operational guidelines and all other worked entrusted by the GP |
| 2. | One technical assistant for at least 4 GP (Engineer) | Maximum no. of technical professionals allowed to be procured in combination is left to the CEO/EO for the GP or group of GPs depending on the employment | 2000.00 | 1000.00 | 3000.00 | Diploma in civil or any other equivalent qualifications with computer knowledge | 2-3 Years | For the proposed remuneration of Rs.3000.00 he/she must get the minimum execution of work worth Rs.4.00lakhs per month and 0.5%incentive can be given for the over and above Rs. 4.00 lakhs execution for the month |
| 3. | One technical assistant for at least 4 GP (Agriculture/water shed/Forest etc….) | | 2000.00 | 1000.00 | 3000.00 | Graduation in Agriculture or Forestry or horticulture or any other equivalent qualification with computer knowledge | 2-3 Years | |
| **II** | **Programme Officer(PO) office(Block** | | | | | | | |
| 1. | Assistant Programmer Officer | 1 per Taluk | 15000.00 | 5000.00 | 20000.00 | Any Post Graduation with computer knowledge. Preference will be given to MAC/MSW/MA(Rural Development) | 2-3 Years | |
| 2. | Social Audit and Grievance Redressal Cell | | | | | | | |
| | a) Co-ordinator | 1 per Taluk | 10000.00 | 2000.00 | 12000.00 | Will be selected by ANSSIRD, | | |
| | b) Assistant | 1 per Taluk | 6000.00 | 2000.00 | 8000.00 | Any Post Graduation or any other equivalent qualification with computer knowledge. | 2-3 Years | |

| | | | | | | | | |
|---|---|---|---|---|---|---|---|---|
| 3. | Technical Cell (Works) | | | | | | | |
| | a)Technical Co-ordinator | 1 per Taluk | 10000.00 | 2000.00 | 12000.00 | Bachelor of Engineer in civil or any other equivalent qualifications with computer knowledge | | |
| 4. | Training & IEC Cell | | | | | | | |
| | a) IEX Co-ordinator | 1per Taluk | 10000.00 | 2000.00 | 12000.00 | Post Graduation in Mass communication or any post graduation with diploma in mass communication or related subjects and computer knowledge. In the absence of the above any post graduation with computer knowledge | 2-3 years | |
| 5. | MIS Co-ordinator (Data Entry operator)* | 1per Taluk | 10000.00 | 2000.00 | 12000.00 | MCA or Bachelor of Engineer in computer/Electronics or Graduation in computer science or any other equivalent qualification. In the absence of such candidates mentioned above graduation with PGDC or any other equivalent course by the recognized university | 2-3 years | |
| **III** | **District Programme co-ordinator (DPC)Office** | | | | | | | |
| 1. | Social Audit and Grievance Redressal Cell | | | | | | | |
| | a) Co-ordinator | 1 per district | 12000.00 | 3000.00 | 15000.00 | Will be selected by ANSSIRD, | | |
| | b) Assistant | 1 per district | 6000.00 | 2000.00 | 8000.00 | Any Graduation or any other equivalent qualification with computer knowledge | 2-3 years | |

| | | | | | | | | |
|---|---|---|---|---|---|---|---|---|
| 2. | Training & ICE Cell | | | | | | | |
| | a) Co-ordinator | 1 per district | 12000.00 | 3000.00 | 15000.00 | Post Graduation in Mass communication or any post graduation with diploma in mass communication or related subjects and computer knowledge. In the absence of the such candidates mention above any post graduation with computer knowledge | 2-3 years | |
| | b) Assistant | 1 per district | 6000.00 | 2000.00 | 8000.00 | Any Graduation or any other equivalent qualification with computer knowledge | 2-3 years | |
| 3. | Monitoring, Evaluation & Research Expert | 1per district | 12000.00 | 3000.00 | 15000.00 | Post Graduation in statistics or any other equivalent qualification or Any post graduation with diploma in statistics/research methodology related subjects and computer | 2-3 years | |
| 4. | MIS Co-ordinator (District Programme Executive)* | 1 per district | 12000.00 | 3000.00 | 15000.00 | Graduation in computer science or Diploma in Computer Science /Electronic or any other equivalent qualification | 2-3 years | |

**Note:** *The name of the professionals given in the bracket is the one approved in the earlier orders.

| | | | | | | | | |
|---|---|---|---|---|---|---|---|---|
| 3. | Technical Cell (Works) | | | | | | | |
| | a)Technical Co-ordinator | 1 per Taluk | 10000.00 | 2000.00 | 12000.00 | Bachelor of Engineer in civil or any other equivalent qualifications with computer knowledge | | |
| 4. | Training & IEC Cell | | | | | | | |
| | a) IEX Co-ordinator | 1per Taluk | 10000.00 | 2000.00 | 12000.00 | Post Graduation in Mass communication or any post graduation with diploma in mass communication or related subjects and computer knowledge. In the absence of the above any post graduation with computer knowledge | 2-3 years | |
| 5. | MIS Co-ordinator (Data Entry operator)* | 1per Taluk | 10000.00 | 2000.00 | 12000.00 | MCA or Bachelor in Engineering computer/Electronics or Graduation in computer science or any other equivalent qualification. In the absence of such candidates mentioned above graduation with PGDC or any other equivalent course by the recognized | 2-3 years | |

**Dr. P.C.JAFFER, .IAS.**
**Director, NREGA**
**Rural Development and Raj Dept**
**Bangalore**

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 104ಉಖಾಯೋ 07

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿ : 7–7–09

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ,**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
ಜಿಲ್ಲಾ ಪಂಚಾಯತ್
**ಚಿಕ್ಕಬಳ್ಳಾಪುರ.**

**ಮಾನ್ಯರೇ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಪಂಚಾಯತ್‌ರಾಜ್ ಸಂಸ್ಥೆಗಳ ಹಂತಗಳಲ್ಲಿ ಆಡಳಿತಾತ್ಮಕ ಸುವ್ಯವಸ್ಥೆಗೊಳಿಸಲು ಹೊರಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಸ ಸಂ.ಗ್ರಾಅಪ.104 ಉಖಾಯೋ.2007 ಬೆಂಗಳೂರು, ದಿನಾಂಕ 5.6.09
2. ತಮ್ಮ ಪತ್ರದ ಸಂ.ಜಿಪಚಿ/ಉಖಾಯೋ/9–10 ದಿನಾಂಕ: 30.6.2009.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ತಾವು ಜಿಲ್ಲಾ ಪಂಚಾಯತಿಗಳಿಗೆ ಅಗತ್ಯವಿರುವ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರದ ಅನುಮತಿ ಕೋರಿರುವ ಮನವಿಯನ್ನು ಪರಿಶೀಲಿಸಿದೆ.

ಈ ಸಂಬಂಧ ಉಲ್ಲೇಖ(1)ರ ಸರ್ಕಾರದ ಆದೇಶದಂತೆ, ತಾವು ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಸಂಸ್ಥೆಗಳಿಂದ ಪಡೆಯಬೇಕೇ ವಿನಹ ಗುತ್ತಿಗೆ ಆಧಾರದ ಮೇಲೆ ಪಡೆಯುವಂತಿಲ್ಲ ಎಂಬ ವಿಷಯವನ್ನು ಈ ಮೂಲಕ ಸ್ಪಷ್ಟವಾಗಿ ತಿಳಿಸಿದೆ. ಸಕಾರದ ಆದೇಶಕ್ಕೆ ಬದ್ಧರಾಗಲು ಸೂಚಿಸಿದೆ. ಇನ್ನು ಮುಂದೆ ಇದರ ಕುರಿತು, ಅನಾವಶ್ಯಕ ಪತ್ರ ವ್ಯವಹಾರ ಮಾಡದಿರಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು** ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಯಥಾ ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 122 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 12–01–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ಚಿಕ್ಕಮಗಳೂರು/ಉಡುಪಿ/ದಕ್ಷಿಣ ಕನ್ನಡ/ಗುಲ್ಬರ್ಗ/
ಬಳ್ಳಾರಿ/ಕೊಪ್ಪಳ/ಚಿತ್ರದುರ್ಗ/ಶಿವಮೊಗ್ಗ/ತುಮಕೂರು/
ಬೀದರ್/ಕೋಲಾರ ಮತ್ತು ರಾಯಚೂರು

**ಮಾನ್ಯರೆ,**

**ವಿಷಯ :** ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಸಮ ಸಂಖ್ಯೆ ಪತ್ರ ದಿನಾಂಕ: 16–06–2009.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಗಮನವನ್ನು ಸೆಳೆಯಲಾಗಿದೆ. ನಕ್ಸಲ್ ಬಾಧಿತ ಪ್ರದೇಶಗಳ ಗುರುತಿಸಲಾದ ಪಂಚಾಯತ್‌ಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ತೀವ್ರಗೊಳಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಲು ತಿಳಿಸಿರುವುದು ಸರಿಯಷ್ಟೆ. ಸದರಿ ಯೋಜನೆಯನ್ನು ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲವೆಂದು ಜನಪ್ರತಿನಿಧಿಗಳಿಂದ ವರದಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಸದರಿ ಯೋಜನೆಯಡಿ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ವಾಸಿಸುವ ಎಲ್ಲಾ ಗ್ರಾಮೀಣ ಕುಟುಂಬಗಳನ್ನು ನೋಂದಾವಣೆ ಮಾಡಿ ಅವರಿಗೆಲ್ಲ, ಉದ್ಯೋಗ ಚೀಟಿಗಳನ್ನು ನೀಡಿ, ಉದ್ಯೋಗವನ್ನು ಒದಗಿಸಲು ತ್ವರಿತ ಕ್ರಮ ಕೈಗೊಳ್ಳಲು ಸೂಚಿಸಿದೆ. ಇದರ ಜೊತೆಗೆ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಲಾದ ಆದ್ಯತಾ ಕಾಮಗಾರಿಗಳ ವ್ಯಾಪ್ತಿಯಲ್ಲಿ ಬರುವ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮತ್ತು ಎಲ್ಲಾ ನೋಂದಾಯಿತ ಕುಟುಂಬಗಳಿಗೆ ನೂರು ದಿನಗಳ ಉದ್ಯೋಗವನ್ನು ನೀಡಲು ಕಟ್ಟುನಿಟ್ಟಿನ ಕ್ರಮ ವಹಿಸಿ ಮತ್ತು ಈ ಕಾರ್ಯಕ್ರಮಕ್ಕಾಗಿ ಪ್ರಥಮ ಆದ್ಯತೆ ನೀಡಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**No. J-11060/4/2011-MGNREGA**
**Government of Karnataka**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi 110 114
21st January 2010

The Principal Secretary/Secretary (Rural Development)
Government of Karnataka

**Subject : Works taken up under Mahatma Gandhi NREGA**

* * *

Sir,

State Government undertake permissible works under Mahatma Gnadhi National Rural Employment Guarantee Act for execution. From the information received from State Government is it seen that not more than 50 per cent of works taken up are completed since the inception of the Mahatma Gandhi NREGA. Recently, Parliamentary Standing Committee on Rural Development has taken a **serious** view of this. Accordingly, the matter has been considered in the Ministry and in order to ensure timely completion works, the following instructions are issued for strict compliance.

a. While obtaining the technical and administration sanction for the works time frame for completion of the works should also be indicated,

b. Local Vigilance and Monitoring Committee should be constituted for each work. The Committee so constituted shall be responsible for constant monitoring of works at different stages and its completion as per time frame indicated,

c. Wherever it is not possible for complete the works within the given time frame the reasons should be recorded by the implementing agencies and communicated to the State Government which in turn will reflect the same the same in the monthly progress report.

d. Top most priority should be given to complete the pending works before taking up the new works.

e. While submitting the proposal for labour budget, the progress of works taken up and completed should also be indicated and wherever the works could not be completed in time, detailed justification along with the remedial measures proposed to complete the works also be indicated in the labour budget proposal.

2. Non compliance with the above instructions will be viewed seriously. You are accordingly requested to take necessary action and inform the progress made in completing the uncompleted works from time to time.

This issues with the approval of Scretary. (Rural Development).

Yours faithfully,

**(J.S. Audhkhasi)**
Under Secretary to
The Government of India
Tel : 2338 1709

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 65 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,, ಸಚಿವಾಲಯ–2
ಬೆಂಗಳೂರು, ದಿನಾಂಕ : 22–01–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೇ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಗ್ರಿ ಬಾಬ್ತಿನ ಅನುದಾನವನ್ನು ನೇರವಾಗಿ ಆಯಾ ಜಿಲ್ಲೆಯ ಅನುಷ್ಠಾನ ಇಲಾಖೆಗಳಿಗೆ ಬಿಡುಗಡೆ ಮಾಡದಿರುವ ಕುರಿತು.

**ಉಲ್ಲೇಖ:** ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ ಇವರ ಅ.ಸ.ಪ.ಸಂ. ಅಪಜಿ 76 ಎಫ್ ಎಪಿ 2009 ದಿನಾಂಕ: 16.11.09.

* * *

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆ ಇವರು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಗ್ರಾಮ ಪಂಚಾಯತ್‌ವಾರು ಸಲ್ಲಿಸಿದ ಕ್ರಿಯಾಯೋಜನೆಗಳಿಗೆ ಅನೇಕ ಕಡೆಗಳಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡುತ್ತಿಲ್ಲವೆಂದು ಕಾರಣ, NMR MB ಮತ್ತು ಅನುದಾನ ಲಭ್ಯವಿಲ್ಲದೇ ಇರುವುದರಿಂದ ಕೂಲಿಕಾರರಿಗೆ ಉದ್ಯೋಗ ಚೀಟಿಗಳನ್ನು ನೀಡಿರುವುದಿಲ್ಲವೆಂದು ಇದರಿಂದಾಗಿ ಕ್ರಿಯಾಯೋಜನೆಗಳಿಗೆ ಮಂಜೂರಾತಿ ನೀಡಲು ವಿಳಂಬವಾಗಿದೆಯೆಂದು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ. ಈಗಾಗಲೇ, ಈ ವಿಷಯದ ಕುರಿತು ತಮಗೆ ಅನೇಕ ಪತ್ರಗಳನ್ನು ಬರೆದಿದ್ದು, ಹಾಗೂ ಎಲ್ಲಾ ಜಿಲ್ಲೆಗಳ ಅನುಷ್ಠಾನಾಧಿಕಾರಿಗಳಿಗೆ ಮತ್ತು ತಾಲ್ಲೂಕು ಮಟ್ಟದ ಅಧಿಖಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಮತ್ತು ಕಾರ್ಯಾಗಾರವನ್ನು ನಡೆಸಿ, ತಕ್ಕ ಸೂಚನೆಗಳನ್ನು ನೀಡಲಾಗಿರುತ್ತದ. ಕೂಲಿಕಾರರ ಕೂಲಿಯ ಹಣ ಪಾವತಿ ವಿಳಂಬವಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಈ ವಿಷಯದಲ್ಲೂ ಕೂಡ NMR ಗಳಲ್ಲಿ ಅನುಸರಿಸುತ್ತಿರುವ ವಿಧಿವಿಧಾನಗಳನ್ನು ಸರಳಗೊಳಿಸಿ, ಕೂಲಿಕಾರರಿಗೆ ಕೂಲಿ ಹಣ ಪಾವತಿಯ ವಿಳಂಬಕ್ಕೆ ಆಸ್ಪದ ಕೊಡದಂತೆ, ಕ್ರಮ ವಹಿಸಲು ಈಗಾಗಲೇ ತಮಗೆ ತಿಳಸಲಾಗಿರುತ್ತದೆ.

ಎರಡನೇಯದಾಗಿ, ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಾಗ್ರಿ ಅನುದಾನವನ್ನು ಅನುಷ್ಠಾನ ಇಲಾಖೆಗಳಿಗೆ ನೇರವಾಗಿ ಬಿಡುಗಡೆ ಮಾಡಲು ಸರ್ಕಾರವನ್ನು ಕೋರಿರುತ್ತಾರೆ. ಇದರ ಸಂಬಂಧ ಈಗಾಗಲೇ ಸಾಮಾಗ್ರಿ ಅನುದಾನವನ್ನು ನೇರವಾಗಿ ಅನುಷ್ಠಾನ ಇಲಾಖೆಗಳಿಗೆ ಬಿಡುಗಡೆ ಮಾಡಬಾರದೆಂದು ತಮ್ಮೆಲ್ಲರಿಗೂ ತಿಳಿಸಲಾಗಿರುತ್ತದೆ. ಸಾಮಾಗ್ರಿ ಅನುದಾನವನ್ನು ಕಾಮಗಾರಿಗಳನ್ನು ನಿರ್ವಹಣೆ ಮಾಡುವ ಅನುಷ್ಠಾನ ಅಧಿಕಾರಿಗಳು (Executing Agencies) ಕಾಮಗಾರಿಯು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೈಗೊಂಡಿದ್ದರೆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಂದ ಅಥವಾ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತ್‌ಗಳಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದರೆ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಿಂದ ಪಡೆಯಲು ಸೂಚಿಸಿದೆ. ಸದರಿ ಸೂಚಿಸಿ ಸೂಚನೆಗಳನ್ನು ಈಗಾಗಲೇ ಪ್ರಸ್ತುತ ಸಾಲಿನಲ್ಲಿ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಕಾರ್ಯಗಾರದಲ್ಲಿ ಹಾಗೂ ತಾಲ್ಲೂಕು ಪಂಚಾಯತ್ ಮಟ್ಟದ ಅಧಿಕಾರಿಗಳ ಕಾರ್ಯಾಗಾರದಲ್ಲಿ ಮತ್ತು ಪತ್ರಗಳ ಮುಖೇನ ತಿಳಿಸಲಾಗಿರುತ್ತದೆ. ಸರ್ಕಾರದಿಂದ ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಮತ್ತು ಯಾವ ಗೊಂದಲಕ್ಕೆ ಆಸ್ಪದ ನೀಡದಂತೆ ಕ್ರಮ ವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ44ಉಖಾಯೋ06

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 14–02–2011

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಸಂಬಂಧ, ಕೇಂದ್ರ ಸರ್ಕಾರವು ರಚಿಸಿದ ಕಾರ್ಯಸಮೂಹಗಳು ಶಿಫಾರಸ್ಸುಗಳು ಮಾಡಿ ನೀಡಿರುವ ವರದಿಯನ್ನು ಕ್ರಮ ವಹಿಸಲು ಕುರಿತು.

ಉಲ್ಲೇಖ: ಸರ್ಕಾರದ ಪತ್ರದ ಸಂ.: ಗ್ರಾಅಪ:44:ಉಖಾಯೋ:06 ದಿ: 16–12–2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ವ್ಯವಹರಿಸಿರುವ ಪತ್ರದ ಕಡೆಗೆ ಗಮನ ಸೆಳೆಯುವುದು. ಈಗಾಗಲೇ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಮಾರ್ಗಸೂಚಿಗಳಲ್ಲಿ ಅನುಮತಿಸಲ್ಪಡುವ ಕಾಮಗಾರಿಗಳ ಜೊತೆಗೆ, ಹೆಚ್ಚುವರಿಯಾಗಿ ಕೆಲವು ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕೇಂದ್ರ ಸರ್ಕಾರವು ರಚಿಸಿರುವ ಕಾರ್ಯ ಸಮೂಹಗಳ ಸಮಿತಿಯು ಶಿಫಾರಸ್ಸು ಮಾಡಿ ವರದಿಯನ್ನು ನೀಡಿರುವುದನ್ನು ತಮಗೆ ತಿಳಿಸಲಾಗಿದ್ದು, ಅದರಂತೆಯೇ, ಕ್ರಮ ವಹಿಸಲು ಸೂಚಿಸಲಾಗಿರುತ್ತದೆ. ಪ್ರತಿಯೊಂದು ಚಟುವಟಿಕೆಗೆ ಕಾರ್ಯ ಸಮೂಹಗಳು, ನೀಡಿರುವ ಪೂರ್ಣ ವರದಿಯು ಕೇಂದ್ರ ಸರ್ಕಾರದ web-site www.nrega.nic.in ಇದರಲ್ಲಿ ಲಭ್ಯವಿರುತ್ತದೆ. ಅದರಂತೆಯೇ, ತಾವು ಕಾರ್ಯಸಮೂಹಗಳ ಸಮಿತಿಯು ಪ್ರತಿಯೊಂದು ಚಟುವಟಿಕೆಗೆ ನೀಡಿರುವ ಶಿಫಾರಸ್ಸು ವರದಿಯನ್ನು ಮತ್ತು ಅದಕ್ಕೆ ಅನುಗುಣವಾಗಿ ಕೇಂದ್ರ ಸರ್ಕಾರವು ತಿಳಿಸಿರುವ ನಿರ್ಧಾರದ ಅಂಶಗಳ ಅನುಸಾರ ತಪ್ಪದೇ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಈ ಮೂಲಕ ಕೋರಿದೆ. ಪ್ರತಿಯೊಂದು ಚಟುವಟಿಕೆಗೆ, ಪ್ರತಿ ಕಾರ್ಯಸಮೂಹವು ನೀಡಿರುವ ಶಿಫಾರಸ್ಸಿನ ವರದಿ ಮತ್ತು ಅದರ ಮೇಲೆ, ಕೇಂದ್ರ ಸರ್ಕಾರವು ಪರಿಶೀಲಿಸಿ, ತನ್ನ ನಿರ್ಧಾರವನ್ನು ತಿಳಿಸಿರುವ ವರದಿಯನ್ನು ಪೂರ್ಣವಾಗಿ ಕೇಂದ್ರ ಸರ್ಕಾರದ web-site ನಿಂದ ಅವರೋಹಣ ಮಾಡಿ ಅದರ ವರದಿಯ hard copy ಯನ್ನು ಮುಂದಿನ ಮಾರ್ಗದರ್ಶನಕ್ಕಾಗಿ ಕಡತದಲ್ಲಿಟ್ಟುಕೊಂಡು, ಅದರಂತೆಯೇ ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 109 ಉಖಾಯೋ : 2009

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 24-02-2010

**ಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

**ಮಾನ್ಯರೆ,**

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತಾಲ್ಲೂಕು ಪಂಚಾಯತಿಗಳಿಗೆ, ಹಾಲಿ ಇರುವ ಲೆಕ್ಕ ಅಧೀಕ್ಷಕರ ಹುದ್ದೆಗಳನ್ನು ಸಹಾಯಕ ಲೆಕ್ಕಾಧಿಕಾರಿಗಳ ಹುದ್ದೆಗಳಿಗೆ ಉನ್ನತೀಕರಿಸಿ ಸೃಜಿಸಿರುವ ಬಗ್ಗೆ ಹಾಗೂ ಸದರಿ ಹುದ್ದೆಗಳಿಗೆ ಕಾರ್ಯ ನಿರ್ವಹಿಸುವವರಿಗೆ ಕರ್ತವ್ಯ ಹಂಚಿಕೆ (Job Chart) ತಯಾರಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 104 ಉಖಾಯೋ 2007, ಬೆಂಗಳೂರು, ದಿನಾಂಕ: 02.04.2008.
2. ಸರ್ಕಾರದ ತಿದ್ದುಪಡಿಕೆಯ ಸಮ ಸಂಖ್ಯೆ ಪತ್ರದ ದಿನಾಂಕ: 26.04.2008
3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 18 ಎಎಫ್‌ಎನ್ (2) 97, ದಿನಾಂಕ: 03.09.1997
4. ಅಧಿಕೃತ ಜ್ಞಾಪನದ ಸಂಖ್ಯೆ: ಆರ್‌ಡಿಪಿ 12 ಎಎಫ್‌ಎನ್ (2) 99, ದಿನಾಂಕ: 24.7.1999
5. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 2 ಎಎಫ್‌ಎನ್ (2) 2000, ದಿನಾಂಕ: 09.05.2000.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ತಾಲ್ಲೂಕು ಪಂಚಾಯತಿಯಲ್ಲಿ ಹಾಲಿ ಇರುವ ಲೆಕ್ಕ ಅಧೀಕ್ಷಕರ ಹುದ್ದೆಯನ್ನು ಸಹಾಯಕ ಲೆಕ್ಕ ಅಧಿಕಾರಿಯ ಹುದ್ದೆಗೆ ಉನ್ನತೀಕರಿಸಿ ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯತಿಗಳ 176 ಲೆಕ್ಕ ಅಧೀಕ್ಷಕರುಗಳ ಹುದ್ದೆಗಳನ್ನು ಸಹಾಯಕ ಲೆಕ್ಕ ಅಧಿಕಾರಿಗಳ ಹುದ್ದೆಗೆ ಉನ್ನತೀರಿಸಿ ಆದೇಶವನ್ನು ಹೊರಡಿಸಲಾಗಿತ್ತು. ಕೆಲವು ತಾಲ್ಲೂಕು ಪಂಚಾಯಿತಿಗಳಲ್ಲಿ ಸಹಾಯಕ ಲೆಕ್ಕ ಅಧಿಕಾರಿ ಹುದ್ದೆಗಳು ಭರ್ತಿಯಾದ ಮೇಲೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಲೆಕ್ಕ ಅಧಿಕಾರಿಗಳು ಸರ್ಕಾರಕ್ಕೆ ದಿನಾಂಕ: 09.11.2009ರಂದು ಮನವಿ ಸಲ್ಲಿಸಿ ಹುದ್ದೆಗೆ ಸಂಬಂಧಿಸಿದ ಎಲ್ಲಾ ಹಣಕಾಸು ಮತ್ತು ಲೆಕ್ಕಪತ್ರಗಳ ಕುರಿತಾಗಿ Job Chartನ್ನು ತಯಾರಿಸಿ ತಿಳಿಸುವಂತೆ ಕೋರಿರುತ್ತಾರೆ.

ಈ ಸಂಬಂಧ ಈಗಾಗಲೇ ಲೆಕ್ಕಪತ್ರ ಅಧೀಕ್ಷಕರು ನಿರ್ವಹಿಸಬೇಕಾದ ಕರ್ತವ್ಯದ ಕುರಿತು ಕರ್ನಾಟಕ ತಾಲ್ಲೂಕು ಪಂಚಾಯಿತಿಗಳ (ಹಣಕಾಸು ಮತ್ತು ಲೆಕ್ಕಗಳು) ನಿಯಮಾವಳಿಗಳು 1996ರಲ್ಲಿ ವಿವರಿಸಲಾಗಿದೆ. ಈಗ ಲೆಕ್ಕ ಅಧೀಕ್ಷಕರ ಹುದ್ದೆಯಿಂದ ಬದಲಾವಣೆಗೊಂಡ ಸಹಾಯಕ ಲೆಕ್ಕಾಧಿಕಾರಿಗಳು ಹಾಗೂ ಲೆಕ್ಕ ಶಾಖೆಯ ಸಿಬ್ಬಂದಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ವಿವರಗಳನ್ನು ಉಲ್ಲೇಖ(3)ರಿಂದ (5)ರವರೆಗಿನ ಸುತ್ತೋಲೆ ಮತ್ತು ಅಧಿಕೃತ ಜ್ಞಾಪನ ಪತ್ರಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಅವುಗಳನ್ವಯ ತಾಲ್ಲೂಕು ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುವ ಸಹಾಯಕ ಲೆಕ್ಕಾಧಿಕಾರಿಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಈ ಮೂಲಕ ಸೂಚಿಸಿದೆ. ಸದರಿ ಉಲ್ಲೇಖ(3)(4) ಮತ್ತು (5)ರ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಮಾರ್ಗದರ್ಶನಕ್ಕಾಗಿ ಲಗತ್ತಿಸಿದೆ. ಇತರೆ ಯೋಜನೆಗಳಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಕಾರ್ಯಗಳನ್ನು ಸದರಿ ಆದೇಶಗಳಲ್ಲಿ ಕರ್ತವ್ಯಗಳನ್ನು ನಿರ್ವಹಿಸುವಂತೆ ಸೂಚಿಸಿರುವ ಎಲ್ಲಾ ಹೊಸ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಮತ್ತು ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ಈ ಮೂಲಕ ತಮಗೆ ತಿಳಿಯಪಡಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯನಿರ್ವಹಿಸುವ ಎಲ್ಲಾ ಸಹಾಯಕ ಲೆಕ್ಕಾಧಿಕಾರಿಗಳು, ತಾಲ್ಲೂಕು ಪಂಚಾಯತಿಯಲ್ಲಿರುವ ಎಲ್ಲಾ ಯೋಜನೆಗಳನ್ನು ಉದ್ಯೋಗ ಖಾತರಿ ಯೋಜನೆಯು ಸೇರಿದಂತೆ ನಿರ್ವಹಿಸಲು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೆರವಾಗುವಂತೆ ತಕ್ಕ ಸೂಚನೆಗಳನ್ನು ನೀಡಬೇಕಾಗಿ ಸೂಚಿಸಿದೆ.

ತಮ್ಮ ನಂಬುಗೆಯ,

ತಮ್ಮ ವಿಶ್ವಾಸಿ,
ಸಹಿ/-
**(ಡಾ. ಪಿ. ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**No. J-11060/2/2011-MGNREGA**
**Government of Karnataka**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi 110 114
24th February 2010

**Subject : Proactive disclosure under Mahatma Gandhi NREGA by Gramasabha**

* * *

Under the Mahatma Gandhi National Rural Employment Guarantee Act the Gram Panchayat is the single most important agency for executing works as the Act mandates earmarking a minimum of 50 per cent of the works in terms of costs to be executed by the gram Panchayat. As per section 16 of the Mahatma Gandhi NREG Act the Gram Panchayat shall be responsible for identification of the projects in the gram panchayat area to be taken up under a scheme as per the recommendations of the Gram Sabha and the Ward Sabhas and for executing and supervising such works.

2. Transparency, accountability and proactive disclosure of key documents by the implementing agencies are the hallmark of Mahatma Gandhi National Rural Employment Guarantee Act. The Act as well as Operational Guidelines prescribes documents which are required to be proactively disclosed. Given the critical role and functions of the Gram Panchayat in implementation of the Act and to ensure due compliance with the statutory requirements of transparency, accountability and proactive disclosure of key documents while implementing Mahatma Gandhi NREGS, the following information should invariably and proactively be disclosed in the Gram Sabha which should regularly be convened for the effective and efficient implementation of the schemes.

    a) Names of works both completed and on going with wages paid and material component.

    b) Names of persons, preferably with Job Card No. who have worked, days worked and wages paid to each of them.

    c) Quantity and price of materials purchased for each project along with name of agency which supplied the material.

3. The above instructions may scrupulously be followed for compliance and orders issued to all implementing agencies under intimation to Ministry of Rural Development.

4. This issues with the approval of Secretary (Rural Development).

**(J.S. Audhkhasi)**
Under Secretary to
The Government of India
Tel : 2338 1709

All States Principal Secretaries (Rural Development and PR)

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:/104/ಉಖಾಯೋ :/08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 31–5–2010

**ಇಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ
ಗುಲ್ಬರ್ಗ

**ಮಾನ್ಯರೆ,**

ವಿಷಯ: NREGs ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳ ಹಂತಗಳಲ್ಲಿ ಆಡಳಿತವನ್ನು ಸುವ್ಯವಸ್ಥೆಗೊಳಿಸಲು ಹೊರಗುತ್ತಿಗೆ ಆಧಾರದ ಮೇಲೆ ಪಡೆದ ಸಿಬ್ಬಂದಿಗಳು ನಿರ್ವಹಿಸಬೇಕಾದ ಕರ್ತವ್ಯಗಳು.

ಉಲ್ಲೇಖ:
1. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿ.ಪಂ.ಗುಲ್ಬರ್ಗ ಇವರ ಪತ್ರದ ಸಂಖ್ಯೆ: ಜಿಪಗು/ಅಭಿ/ಉಖಾಯೋ/40/2009–10 ದಿನಾಂಕ: 19/20–4–2010
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/104/ಉಖಾಯೋ/2007 ಬೆಂಗಳೂರು ದಿನಾಂಕ: 5–6–2009

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೆಖ(2)ರನ್ವಯ ಪಂಚಾಯತ್ ರಾಜ್ ಸಂಸ್ಥೆಗಳಿಗೆ, ವಿವಿಧ ಸಿಬ್ಬಂದಿ ಸೇವೆಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆದು ಅನುಷ್ಠಾನವನ್ನು ನಿರ್ವಹಿಸುವಂತೆ ಆದೇಶಿಸಲಾಗಿತ್ತು. ಈಗ ಉಲ್ಲೇಖ(1)ರಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿ.ಪಂ.ಗುಲ್ಬರ್ಗ ಇವರು, ಈ ಕೆಳಕಂಡ ಸಿಬ್ಬಂದಿಗಳಿಗೆ ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ನಿರ್ದಿಷ್ಟವಾದ Job chartನ್ನು ಮಾಡಿ, ತಿಳಿಸಿರುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸದರಿಯವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಿಬ್ಬಂದಿಗಳು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ವಿವರವನ್ನು ಅವರುಗಳ ಸೇವೆಯ ಎದುರು ಈ ಕೆಳಗಿನಂತೆ ನಮೂದಿಸಿದೆ.

## ಜಿಲ್ಲಾ ಮಟ್ಟದಲ್ಲಿ ಆದೇಶಿಸಿರುವ ಸಿಬ್ಬಂದಿ ಸೇವೆಗಳಿಗೆ

### I. MIS-Co ordinator

1. ಯೋಜನೆಯ ಶೇಕಡಾ 100 ರಷ್ಟಿನ MIS ನ ಸಂಪೂರ್ಣ ನಿರ್ವಹಣೆ ಮತ್ತು ಸಂಬಂಧಿಸಿದ ಪತ್ರ ವ್ಯವಹಾರ MIS ಗೆ ಸಂಬಂಧಿಸಿದ ತಾಂತ್ರಿಕ ಸಮಸ್ಯೆಗಳು ಮತ್ತು ಲೋಪದೋಷಗಳು ಉದ್ಭವಿಸಿದಲ್ಲಿ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಸಮನ್ವಯ ಸಾಧಿಸಿ, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಕ್ರಮ ಕೈಗೊಳ್ಳುವುದು.
2. ಪ್ರತಿದಿನ MISನಲ್ಲಿರುವ ಮಾಹಿತಿಯನ್ನು ಮಾನಿಟರಿಂಗ್ ಮಾಡುವುದು ಮತ್ತು MISನಲ್ಲಿ ಕೇಂದ್ರ ಸರ್ಕಾರದಿಂದ ಸೂಚಿಸಲಾದ alertsಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಅವುಗಳ ಬಗ್ಗೆ ಮುಂದಿನ ಅಗತ್ಯ ಕ್ರಮ ಜರುಗಿಸಿ ನಿವಾರಣೋಪಾಯಗಳನ್ನು ಕಂಡುಕೊಳ್ಳಲು ಜಿಲ್ಲಾ ಕಾರ್ಯಕ್ರಮಗಳ ಸಂಯೋಜಕರ ಗಮನಕ್ಕೆ ತರುವುದು.
3. ಯೋಜನೆಯ ಎಲ್ಲಾ ಮಾಹಿತಿಗಳನ್ನು ಆಗಿಂದಾಗ್ಗೆ ಇಂದೀಕರಿಸುವುದು ಮತ್ತು ಅವುಗಳ ಕಡೆ ನಿಗಾವಹಿಸಿ ಉಸ್ತುವಾರಿ ಮಾಡುವುದು.
4. ಉದ್ಯೋಗ ಚೀಟಿಗಳಿಗೆ ಸಂಬಂಧಿಸಿದ ಎಲ್ಲಾ ಕುಟುಂಬಗಳ ಮಾಹಿತಿಯನ್ನು ಇಂದೀಕರಿಸುವುದನ್ನು ಖಚಿತಪಡಿಸಿಕೊಳ್ಳುವುದು.

**II. Social Audit and Grievance Redressal Cell-Co-ordinators**

1. ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸಲು ಕಾರ್ಯಕ್ರಮದ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಅದರ ವಿವರಗಳನ್ನು MIS Website ನಲ್ಲಿ ದಾಖಲಿಸುವುದು.
2. ಜಿಲ್ಲಾ ಕಾರ್ಯಕ್ರಮಗಳ ಸಂಯೋಜಕರು ಮತ್ತು SIRD ಮೈಸೂರು ಇವರೊಂದಿಗೆ ಸಮಾಲೋಚಿಸಿ ಜಾಗೃತ ಮತ್ತು ಉಸ್ತುವಾರಿ ಸಮಿತಿಗಳನ್ನು ರಚಿಸಿ, ಮತ್ತು ಸದರಿ ಸಮಿತಿಯ ಸದಸ್ಯರುಗಳಿಗೆ ತರಬೇತಿಯನ್ನು ನೀಡಲು ಕ್ರಮವಹಿಸುವುದು.
3. ಸಾಮಾಜಿಕ ಲೆಕ್ಕ ಪರಿಶೋಧನಾ ನಿಯಮಗಳನುಸಾರ, ಸಾಮಾಜಿಕ ತಪಾಸಣೆಗಳನ್ನು ಸಕಾಲದಲ್ಲಿ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ನಡೆಸಲಾದ ಸಾಮಾಜಿಕ ಪರಿಶೋಧನೆಯಿಂದ ಕಂಡುಬಂದ ಲೋಪದೋಷಗಳು, ಆಕ್ಷೇಪಗಳು, ಇತ್ಯಾದಿ ವಿವರಗಳ ಬಗ್ಗೆ NREGs Website ದಾಖಲಿಸುವುದು. ಕಂಡುಬಂದ ಆಕ್ಷೇಪಣೆಗಳಿಗೆ ತಕ್ಷಣ ಅನುಪಾಲನಾ ವರದಿಯನ್ನು ನೀಡುವುದು.
4. ಜಿಲ್ಲೆಗೆ ಸಂಬಂದಿಸಿದ ಯೋಜನೆಯ ಕುಂದುಕೊರತೆಗಳನ್ನು ಜಿಲ್ಲಾ ಕಾರ್ಯಕ್ರಮ ಸಂಯೋಜಕರ(DPC) ಗಮನಕ್ಕೆ ತಂದು ಅವರುಗಳು ನೀಡುವ ಸೂಚನೆಗಳ ಮೇರೆಗೆ ಕ್ರಮವಹಿಸಿ ವಿಲೇ ಮಾಡುವುದು.

**III. Training and Information, Education & Communication Cell Co-ordinators**

1. ಜಿಲ್ಲಾ ಕಾರ್ಯಕ್ರಮ ಸಂಯೋಜಕರೊಂದಿಗೆ (DPC) ಸಮಾಲೋಚಿಸಿ, ಯೋಜನೆಯ ಅನುಷ್ಠಾನದ ಬಗ್ಗೆ ಗ್ರಾಮೀಣ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವುದು.
2. ಸಾಮಾಜಿಕ ಲೆಕ್ಕ ಪರಿಶೋಧನೆಯ ಸಂಯೋಜಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವ ಸಮಯದಲ್ಲಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರುಗಳಿಗೆ ತರಬೇತಿಯನ್ನು ನೀಡುವಲ್ಲಿ ನೆರವಾಗಲು ಕ್ರಮವಹಿಸುವುದು.

ಪ್ರತಿಯೊಂದು ಕಾಮಗಾರಿಯ ಸ್ಥಳದಲ್ಲಿ ಕಾಮಗಾರಿಗಳಿಗೆ ಸಂಬಂಧಿಸಿದ ವಿವರಗಳ ನಾಮಫಲಕವನ್ನು ಅಳವಡಿಸಿರುವುದನ್ನು ಮತ್ತು ಯೋಜನೆಯ ಸಾಮಾನ್ಯ ಮಾಹಿತಿಯನ್ನು negotiable and non-negotiable ಇವುಗಳ ಮಾಹಿತಿಯನ್ನು ಮತ್ತು ಯೋಜನೆಗೆ ಸಂಬಂಧಿಸಿದ ಪ್ರಗತಿಯ ಮಾಹಿತಿಯನ್ನು

1. ಗೋಡೆಬರಹದ ಮೂಲಕ ಪ್ರಮುಖ ಸ್ಥಳಗಳಲ್ಲಿ ಬರೆಯಿಸುವುದು, ಅಲ್ಲದೇ ಅವುಗಳನ್ನು ಇಂಧೀಕರಿಸುವುದನ್ನು ಖಚಿತಪಡಿಸಿಕೊಳ್ಳುವುದು.

ತಾಲ್ಲೂಕು ಪಂಚಾಯಿತಿಯ ಮಟ್ಟದ ಸಿಬ್ಬಂದಿಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು ಜಿಲ್ಲಾ ಮಟ್ಟದ ಸಿಬ್ಬಂದಿಗಳಿಗೆ ಆದೇಶಿಸಲ್ಪಟ್ಟು ಕರ್ತವ್ಯ ಮತ್ತು ಜವಬ್ದಾರಿಗಳು ಒಂದೇ ಆಗಿರುತ್ತದೆ. ಆದರೆ, ಸದರಿಯವರಿಗೆ ಆಯಾ ತಾಲ್ಲೂಕಿಗೆ ಸಂಬಂದಿಸಿದ ವಿಷಯಗಳು ಮಾತ್ರ ಅನ್ವಯಿಸುತ್ತವೆ.

ತಮ್ಮ ವಿಶ್ವಾಸಿ,<br>
ಸಹಿ/–<br>
**(ಎನ್.ಎಸ್. ಪ್ರಸನ್ನ ಕುಮಾರ್)**<br>
ನಿರ್ದೇಶಕರು,<br>
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ<br>
ಉದ್ಯೋಗ ಖಾತರಿ ಯೋಜನೆ ಹಾಗೂ<br>
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ<br>
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು ರಾಜ್ಯದ ಉಳಿದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಯಥಾಕ್ರಮಕ್ಕಾಗಿ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 70 ಉಖಾಯೋ : 09

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 14.7.2010

**ಗೆ:**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.

**ಮಾನ್ಯರೆ,**

ವಿಷಯ : ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ತಾಂತ್ರಿಕ ಸಹಾಯಕರುಗಳನ್ನು ತೊಡಗಿಸಿಕೊಳ್ಳುವ ಬಗ್ಗೆ ಹೊರಡಿಸಿರುವ ಆದೇಶವನ್ನು ಅನುಷ್ಠಾನಗೊಳಿಸದೇ ಇರುವುದರ ಕುರಿತು.

**ಉಲ್ಲೇಖ:**
1. ಕೇಂದ್ರ ಸರ್ಕಾರದ ಸಂಖ್ಯೆ:M-1:011:162:2008–P&C(AR) ದಿ: 3.5.2010
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/104/ಉಖಾಯೋ/2007, ಬೆಂಗಳೂರು, ದಿನಾಂಕ: 5–6–2009
3. ದಿನಾಂಕ: 18.6.2010ರಂದು ನಡೆದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಬಹುತೇಕ ಜಿಲ್ಲೆಗಳು ತಾಲ್ಲೂಕುಗಳು/ಗ್ರಾಮ ಪಂಚಾಯತಿಗಳು ತಾಂತ್ರಿಕ ಸಿಬ್ಬಂದಿಗಳನ್ನು ತೊಡಗಿಸದೇ ಇದ್ದು ಇದರಿಂದ ಅಳತೆ ತೆಗೆದುಕೊಳ್ಳಲು ಮತ್ತು ಕೂಲಿ ಪಾವತಿಸಲು ವಿಳಂಬವಾಗುತ್ತಿದೆ. ಅಲ್ಲದೆ ಕಾಮಗಾರಿಗಳ ಗುಣಮಟ್ಟದ ಮೇಲ್ವಿಚಾರಣೆ ಮತ್ತು ದಿನಂಪ್ರತಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ಕುಂಠಿತಗೊಂಡು ಕಳಪೆ ಕಾಮಗಾರಿಗಳು ನಿರ್ಮಾಣವಾಗುತ್ತಿವೆ. ಈ ವಿಷಯದಲ್ಲಿ ಇತ್ತೀಚಿಗೆ ಕೇಂದ್ರ ಸರ್ಕಾರವು ಯೋಜನೆಯ ಪರಿಣಾಮಕಾರಿ ಮತ್ತು ಸಮರ್ಪಕ ನಿರ್ವಹಣೆಗೆ ಪ್ರತಿ 6,000 ಕುಟುಂಬಗಳನ್ನು ಒಳಗೊಂಡ ಪ್ರದೇಶಕ್ಕೆ ಇಬ್ಬರು ತಾಂತ್ರಿಕ ಸಿಬ್ಬಂದಿಯನ್ನು ತೊಡಗಿಸಿಕೊಳ್ಳಲು ಉಲ್ಲೇಖ(1)ರ ಪತ್ರದಲ್ಲಿ ಅನುಮತಿ ನೀಡಿರುತ್ತದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರವು ಈಗಾಗಲೇ ಆದೇಶ ಹೊರಡಿಸಿ ಪ್ರತಿ 4 ಗ್ರಾಮ ಪಂಚಾಯತಿಗಳಿಗೆ ಇಬ್ಬರು ತಾಂತ್ರಿಕ ಸಹಾಯಕರನ್ನು (ಒಬ್ಬರು ಕಿರಿಯ ಇಂಜಿನಿಯರ್ ಮತ್ತೊಬ್ಬರು ತೋಟಗಾರಿಕೆ/ಸಾಮಾಜಿಕ ಅರಣ್ಯ/ರೇಷ್ಮೆ ಇಲಾಖೆಯ ಕಾರ್ಯಗಳಲ್ಲಿ ನೆರವಾಗಲು) ಅವಶ್ಯಕತೆಗೆ ಅನುಗುಣವಾಗಿ ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲು ಸೂಚಿಸಲಾಗಿರುತ್ತದೆ. ಇಂತಹ ಅವಕಾಶವನ್ನು ನೀಡಿದ್ದರೂ ಸಹ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಪ್ರಾರಂಭಿಸಿದ ಕಾಮಗಾರಿಗಳ ಸಂಖ್ಯೆಗೆ ಅನುಗುಣವಾಗಿ ತಾಂತ್ರಿಕ ಸಿಬ್ಬಂದಿ ನೆರವನ್ನು ಪಡೆಯದೇ ಹೆಚ್ಚಿನ ಸಂಖ್ಯೆಯಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಿ ಬಹುತೇಕ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಹಾಗೂ ಸಕಾಲದಲ್ಲಿ ಕೂಲಿ ಪಾವತಿಸದೇ ಅನೇಕ ಸಮಸ್ಯಗಳು ಉಂಟಾಗಿ ಅತೀ ಹೆಚ್ಚಿನ ದೂರುಗಳೂ ಬರಲಾರಂಭಿಸಿರುತ್ತವೆ. ಅಲ್ಲದೇ ಇದೇ ಕಾರಣದಿಂದ ಕಾಮಗಾರಿಗಳ ಗುಣಮಟ್ಟದಲ್ಲಿ ಕುಸಿತವಾಗಿರುವುದು ಸಹ ಪರಿಶೀಲನೆಯಿಂದ ಕಂಡುಬಂದಿರುತ್ತದೆ.

ಮೇಲ್ಕಂಡ ವಿಷಯವನ್ನು ದಿನಾಂಕ: 18.06.200ರಂದು ನಡೆದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಕಿರಿಯ ಇಂಜಿನಿಯರ್‌ಗಳಿಗೆ/ಇತರೇ ಇಲಾಖೆಯ ತಾಂತ್ರಿಕ ಸಹಾಯಕರಿಗೆ ರೂ.8,000/– (ರೂ.6,000/– ಮಾಸಿಕ ಸಂಭಾವನೆ ಮತ್ತು ರೂ.2,000/– ಪ್ರಯಾಣ ವೆಚ್ಚ) ಮಾಸಿಕ ಸಂಭಾವನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಗೆ ಅನುಗುಣವಾಗಿ ಮತ್ತು Job Card ಗಳ ಸಂಖ್ಯೆಗೆ ಅನುಗುಣವಾಗಿ ತಾಂತ್ರಿಕ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ಪಾರದರ್ಶಕತೆಯ ನಿಯಮವನ್ನು ಅನುಸರಿಸಿ ಪಡೆದುಕೊಳ್ಳಲು ಮತ್ತು ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ಶೇ.6ರ ಆಡಳಿತ ವೆಚ್ಚದಲ್ಲಿ ಭರಿಸಲು ಅನುಮತಿ ನೀಡಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

**ಕರ್ನಾಟಕ ಸರ್ಕಾರ**
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 **E-mail : nrega-ka@nic.in**

ಸಂ: ಗ್ರಾಅಪ 104 ಮಗಾಂಉಖಾಯೋ 2007 ದಿನಾಂಕ : 01–09–2010

**ಗೆ.**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ
ಬಿಜಾಪುರ

**ಮಾನ್ಯರೆ,**

ವಿಷಯ : ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯ ಸಮರ್ಪಕ ಅನುಷ್ಠಾನಕ್ಕಾಗಿ ಹೊರಗುತ್ತಿಗೆಯ ಆಧಾರದ ಮೇಲೆ ಪಡೆದುಕೊಂಡ ಸಿಬ್ಬಂದಿಗೆ ನೀಡುವ ವೇತನ, ಪ್ರವಾಸ ಭತ್ಯೆ, ದಿನ ಭತ್ಯೆ ವಿಷಯದಲ್ಲಿ ಮಾರ್ಗ ದರ್ಶನ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರದ ಸಂಖ್ಯೆ ಜಿಪ/ಉಖಾಯೋ/ಸಿಆರ್/26/08–9/2186 ದಿನಾಂಕ : 30–7–2010.

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬಿಜಾಪುರ ಇವರು, ಸರ್ಕಾರವು ದಿನಾಂಕ : 5–6–2009ರಂದು ಹೊರಡಿಸುವ ಆದೇಶದಲ್ಲಿ ಯೋಜನೆಯ ಅನುಷ್ಠಾನಕ್ಕೆ ಹೊರಗುತ್ತಿಗೆಯ ಆಧಾರದ ಮೇಲೆ, ವಿವಿಧ ಸಿಬ್ಬಂದಿಗಳ ಸೇವೆಗಳನ್ನು, ಪಡೆಯಲು ಸಿಬ್ಬಂಧಿಗಳ ಸೇವೆಗಳಿಗೆ ಸಂಭಾವನೆಯನ್ನು ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಸೇರಿದಂತೆ, ಪಾವತಿಸಲು ನಿಗದಿಪಡಿಸಿದ್ದು, ಸದರಿ ವಿಷಯದ ಕುರಿತು, ಕೆಲವು ಸಿಬ್ಬಂಧಿಗಳಿಗೆ, ಪ್ರವಾದ ಮಾಡುವ ಪ್ರಸಂಗಗಳು ಇಲ್ಲದೇ ಇರುವ ಸಂದರ್ಭಗಳಲ್ಲಿ, ಅಂತಹ ಸಿಬ್ಬಂದಿಗಳಿಗೆ ಸಂಭಾವನೆಯ ಜೊತೆಗೆ ಪ್ರಯಾಣ ಭತ್ಯೆ/ದಿನ ಭತ್ಯೆಯೂ ಸೇರಿದಂತೆ ಪಾವತಿಸಬಹುದೇ ಅಥವಾ ಪ್ರಯಾಣ ಭತ್ಯೆ/ದಿನ ಭತ್ಯೆಯನ್ನು ಹೊರತು ಪಡಿಸಿ, ಸಂಭಾವನೆಯನ್ನು ಮಾತ್ರ ಪಾವತಿಸಬಹುದೇ ಎಂಬುದಕ್ಕೆ ಸ್ಪಷ್ಟವಾದ ಸ್ಪಷ್ಟೀಕರಣ ನೀಡುವಂತೆ, ಸರ್ಕಾರವನ್ನು ಕೋರಿರುವುದು ಸರಿಯಷ್ಟೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸಂಭಾವನೆಯ ಜೊತೆಗೆ ನಿಗದಿ ಪಡಿಸಿರುವ ಪ್ರಯಾಣ ಭತ್ಯೆ/ದಿನ ಭತ್ಯೆಯನ್ನು ನಿಗದಿತ ಪ್ರಯಾಣ ಭತ್ಯೆ (Fixed Travelling Allowance)ಎಂದು ಪರಿಗಣಿಸಿ ಪಾವತಿಸಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಯಥಾ ಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ**
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 **E-mail : nrega-ka@nic.in**

ಸಂ: ಗ್ರಾಅಪ 108 ಉಖಾಯೋ 2008 ದಿನಾಂಕ : 27–10–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿಗಳು ತಮ್ಮ ಬಳಿ ಇರುವ ಅನುದಾನವನ್ನು ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡದೆ ಇರುವುದರ ಬಗ್ಗೆ.

* * *

ರಾಜ್ಯದ ವತಿಯಿಂದ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ನಿರ್ದೇಶಕರು ಮತ್ತು ಇನ್ನಿತರೇ ಅಧಿಕಾರಿಗಳು, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಪರಿಶೀಲನೆಗಾಗಿ ಜಿಲ್ಲೆಗಳಿಗೆ, ತಾಲ್ಲೂಕುಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಮಗಾರಿಗಳ ಅನುಷ್ಠಾನಕ್ಕೆ ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿಗಳೂ ತಮಗೆ ಬಿಡುಗಡೆ ಮಾಡಿರುವ ಅನುಧಾನವನ್ನು ಹಾಗೆಯೇ ಇಟ್ಟುಕೊಂಡು ಅನುಷ್ಠಾನಾಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯಿತಿಗಳಿಗೆ ಈ ತಹಲ್‌ವರೆಗೂ ಬಿಡುಗಡೆ ಮಾಡದೇ ಇರುವುದು ರಾಜ್ಯ ಮಟ್ಟದ ಅಧಿಕಾರಿಗಳ ಗಮನಕ್ಕೆ ಬಂದಿರುತ್ತದೆ. ತಾಲ್ಲೂಕು ಪಂಚಾಯಿತಿಗಳ ಬಳಿ ಲಭ್ಯವಿರುವ ಅನುದಾನದಲ್ಲಿ ಆಡಳಿತಾತ್ಮಕ ವೆಚ್ಚಕ್ಕೆ ಬೇಕಾದ Rs10/– ಲಕ್ಷಗಳನ್ನು ಮಾತ್ರ ಉಳಿಸಿಕೊಂಡು ಬಾಕಿ ಉಳಿದ ಅನುದಾನವನ್ನು ಕಾಮಗಾರಿಗಳ ಅನುಷ್ಠಾನದ ಬಾಬ್ತಿಗೆ ಮತ್ತು ಕೂಲಿ ಬಾಬ್ತಿಗೆ ಪಾವತಿ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಗೊಳಿಸಲು ಸೂಕ್ತವಾದ ಸೂಚನೆಗಳನ್ನು ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿಗಳಿಗೆ ನೀಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ಇದಲ್ಲದೇ, MIS ನಲ್ಲಿ ಇತ್ತೀಚಿನ ಪ್ರಗತಿಯನ್ನು ಪರಿಶೀಲಿಸಿದಾಗ ಜಿಲ್ಲೆಗಳಿಗೆ ಮತ್ತು ತಾಲ್ಲೂಕುಗಳಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ಸಕಾಲದಲ್ಲಿ ತುರ್ತು ಬೇಡಿಕೆಗೆ ಅನುಗುಣವಾಗಿ ಜಿಲ್ಲಾ ಪಂಚಾಯಿತಿಗಳು ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಅಥವಾ ತಾಲ್ಲೂಕು ಪಂಚಾಯಿತಿಗಳಿಗೆ ಬಿಡುಗಡೆ ಮಾಡಿರುವುದು ಕಂಡುಬಂದಿರುವುದಿಲ್ಲ.

ಸರ್ಕಾರವು ಅನುದಾನದ ವಿಚಾರದಲ್ಲಿ ರಾಜ್ಯ ಮಟ್ಟದಲ್ಲಿ ರಾಜ್ಯ ನಿಧಿಯಿಂದ ಸಂದರ್ಭಕ್ಕೆ ಅನುಸಾರವಾಗಿ ಜಿಲ್ಲಾ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಅನುದಾನವನ್ನು RTGS ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ಈ ಪದ್ಧತಿಯನ್ನು ಬಳಸಿ ಜಿಲ್ಲಾ ಪಂಚಾಯಿತಿಗಳು ಅನುದಾನವನ್ನು RTGS ಮೂಲಕ ಗ್ರಾಮ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಪಂಚಾಯಿತಿಗಳಿಗೇ ವರ್ಗಾವಣೆ ಮಾಡದೆ ಚೆಕ್ ಮೂಲಕ ಇಲ್ಲವೇ ಡಿಡಿ ಮೂಲಕ ಕಳುಹಿಸುತ್ತಿರುವುದನ್ನು ಗಮನಿಸಲಾಗಿದೆ. ಇಂತಹ ಕ್ರಮದಿಂದ ಜಿಲ್ಲಾ ಪಂಚಾಯಿತಿಯಿಂದ ಬಿಡುಗಡೆಯಾಗಿರುವ ಅನುದಾನವು ಗ್ರಾಮ ಪಂಚಾಯಿತಿಗಳಿಗೆ ತಾಲ್ಲೂಕು ಪಂಚಾಯಿತಿಗಳ ಮೂಲಕ ತಲುಪಲು ತೀರ ವಿಳಂಬವಾಗುತ್ತದೆ. ಈ

ವಿಳಂಬವನ್ನು ತಪ್ಪಿಸಲು ಸರ್ಕಾರವು ಇನ್ನು ಮುಂದೆ ಯೋಜನೆಯ ಅನುಷ್ಠಾನದ ಸಂಬಂಧ ಗ್ರಾಮ ಪಂಚಾಯಿತಿಗಳಿಗೆ ಅನುದಾನವನ್ನು ರಾಜ್ಯ ನಿಧಿಯಿಂದ RTGS ಮೂಲಕ ನೇರವಾಗಿ ಬಿಡುಗಡೆ ಮಾಡಲು ನಿರ್ಧರಿಸಿದೆ. ಆದ್ದರಿಂದ ಈವರೆಗೂ ಜಿಲ್ಲಾ ಪಂಚಾಯಿತಿಗಳಿಗೆ ರಾಜ್ಯದ ನಿಧಿಯಿಂದ ಬಿಡುಗಡೆಗೊಳಿಸಿದ ಅನುದಾನದಲ್ಲಿ ತಕ್ಷಣ ಆಡಳಿತಾತ್ಮಕ ವೆಚ್ಚಕ್ಕೆ Rs25/– ಲಕ್ಷ ಮಾತ್ರ ಉಳಿಸಿಕೊಂಡು ಬಾಕಿ ಉಳಿದಿರುವ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಕೂಡಲೆ ಬೇಡಿಕೆ/ಪ್ರಗತಿಯನ್ನು

ಆದರಿಸಿ ಬಿಡುಗಡೆಗೊಳಿಸತಕ್ಕದ್ದು. ರಾಜ್ಯ ಸರ್ಕಾರವು ರಾಜ್ಯ ನಿಧಿಯಿಂದ ಜಿಲ್ಲಾ ಪಂಚಾಯಿತಿಗಳಿಗೆ RTGS ಮೂಲಕ ಬಿಡುಗಡೆ ಮಾಡಿರುವ ಪದ್ಧತಿಯಂತೆ ತಾವು ಕೂಡ ಜಿಲ್ಲಾ ಪಂಚಾಯಿತಿಯಿಂದ ಪರಿಸ್ಥಿತಿಗೆ ಅನುಗುಣವಾಗಿ RTGS ಅಥವಾ NEFT ಮೂಲಕ ತಮ್ಮಲ್ಲಿ ಲಭ್ಯವಿರುವ ಅನುದಾನದಲ್ಲಿ Rs25/– ಲಕ್ಷಗಳನ್ನು ಯೋಜನೆಯ ಆಡಳಿತಾತ್ಮಕ ವೆಚ್ಚಕ್ಕೆ ಉಳಿಸಿಕೊಂಡು ಬಾಕಿ ಉಳಿದಿರುವ ಅನುದಾನವನ್ನು ನೇರವಾಗಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸುವುದು.

ಮೇಲೆ ಹೇಳಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದಲ್ಲದೆ ಪ್ರಗತಿಯನ್ನು ಪ್ರತಿ ದಿನ ಎಂಐಎಸ್‌ನಲ್ಲಿ ಅಳವಡಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:**

1. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕ ಪತ್ರ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು
2. ಜಂಟಿ ನಿರ್ದೇಶಕರು–1 ಜಂಟಿ ನಿರ್ದೇಶಕರು–2 ಜಂಟಿ ನಿರ್ದೇಶಕರು–3 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 98 ಉಖಾಯೋ 2008 ದಿನಾಂಕ : 22–11–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಚುರುಕುಗೊಳಿಸುವುದು ಮತ್ತು ಸುವ್ಯವಸ್ಥೆಗೊಳಿಸುವ ಕುರಿತು.

**ಉಲ್ಲೇಖ:** ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 31.10.2010 ರಂದು ನಡೆದ ಸಭೆಯ ತೀರ್ಮಾನಗಳು.

* * *

ಪ್ರಸ್ತುತ ಸಾಲಿನಲ್ಲಿ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿ ಮತ್ತು ಇನ್ನೂ ಕೆಲವು ಜಿಲ್ಲೆಗಳಲ್ಲಿ ಅನಾವೃಷ್ಟಿಯ ಪರಿಸ್ಥಿತಿಯು ನಿರ್ಮಾಣವಾಗಿರುತ್ತದೆ. ಈ ದಿಸೆಯಲ್ಲಿ ಗ್ರಾಮೀಣ ಜನರು ವಲಸೆ ಹೋಗದಂತೆ ತಡೆಗಟ್ಟಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಚುರುಕುಗೊಳಿಸಿ ಕೆಲಸ ಅರಸಿಕೊಂಡು ಬರುವವರಿಗೆ ಕೆಲಸವನ್ನು ಒದಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಅದರಲ್ಲೂ ವಿಶೇಷವಾಗಿ ನೆರೆಹಾವಳಿ ಪ್ರದೇಶಗಳಲ್ಲಿ ನೆರೆಹಾವಳಿಯನ್ನು ತಡೆಗಟ್ಟಲು/ಕೃಷಿ ಕಾರ್ಯಕ್ರಮಗಳ ಚಟುವಟಿಕೆಗಳಿಗೆ ಪೂರಕವಾದ ಭೂ ಅಭಿವೃದ್ಧಿ ಕಾಮಗಾರಿಗಳು ಮತ್ತು ಸಂಪರ್ಕ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ತೆಗೆದುಕೊಂಡು ಅನುಷ್ಠಾನಗೊಳಿಸಿ ಲಭ್ಯವಿರುವ ಅನುಧಾನವನ್ನು ಕಾರ್ಮಿಕ ಆಯವ್ಯಯದ ಅನ್ವಯ ಬಳಸಿಕೊಂಡು ಮುಂದಿನ ಕಂತಿನ ಅನುದಾನದ ಬಿಡುಗಡೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 166 ಮಗಾಂಉಖಾಯೋ 2010 ದಿನಾಂಕ : 22–11–2010

**ಸುತ್ತೋಲೆ**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುದಾನದ ಬಿಡುಗಡೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವ ಕುರಿತು.

**ಉಲ್ಲೇಖ:** ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 108 ಉಖಾಯೋ 2008 ದಿನಾಂಕ : 27.10.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ವ್ಯವಹರಿಸಿದ ಪತ್ರದ ಕಡೆಗೆ ಗಮನ ಸೆಳೆಯುವುದು. 2009–10ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಎಂಐಎಸ್‌ನಲ್ಲಿ ದಾಖಲಿಸಿದ ಪ್ರಗತಿಯ ಮಾಹಿತಿಯನ್ನು ಹಾಗೂ CA ರವರು ಲೆಕ್ಕಪರಿಶೋಧನೆ ಮಾಡಿ ಸಲ್ಲಿಸಿರುವ ವರದಿಗಳನ್ನು ಪರಿಶೀಲಿಸಿದಾಗ ಬಹಳಷ್ಟು ವ್ಯತ್ಯಾಸವಿರುವುದು ಕಂಡುಬಂದಿರುತ್ತದೆ. ಮತ್ತು ಗ್ರಾಮ ಪಂಚಾಯತಿಗಳ ಪ್ರಗತಿ ಕುರಿತು ಯಾವುದೇ ಪರಿಶೀಲನಾ ವ್ಯವಸ್ಥೆಯನ್ನು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ರೂಪಿಸಿದೇ ಇರುವುದು ಹಾಗೂ ಅನುಷ್ಠಾನಾಧಿಕಾರಿಗಳು ಗ್ರಾಮ ಪಂಚಾಯತಿಯಲ್ಲಿ ಭೌತಿಕವಾಗಿ ದಾಖಲಾತಿಗಳ ಮಾಹಿತಿಯನ್ನು ಜಾಗರೂಕತೆಯಿಂದ ಪರಿಶೀಲನೆ ಮಾಡದೇ, ಎಂಐಎಸ್‌ನಲ್ಲಿ ದಾಖಲಿಸಿರುವುದು ವ್ಯಕ್ತವಾಗುತ್ತದೆ.

ಈ ಸಂಬಂಧ ಯೋಜನೆಯ ಅನುಷ್ಠಾನವು ಕಾನೂನು ರೀತ್ಯಾ ಆಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಅನುದಾನದ ಬಿಡುಗಡೆಗೆ ಕ್ರಮವಹಿಸಲು ಸೂಚಿಸಿದೆ.

1. ಗ್ರಾಮ ಪಂಚಾಯತಿಯು ಅನುಮೋದಿತ ಕಾರ್ಮಿಕ ಆಯವ್ಯಯಕ್ಕೆ ಅನುಗುಣವಾಗಿ ಒಂದು ಆರ್ಥಿಕ ಸಾಲಿನಲ್ಲಿ Rs..25.00 ಲಕ್ಷ ವೆಚ್ಚ ಭರಿಸಿದಲ್ಲಿ, ಮುಂದಿನ ಅನುದಾನದ ಬಿಡುಗಡೆಗೆ ಆಯಾ ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮ ಅಧಿಕಾರಿಯವರು ಖಚಿತಪಡಿಸಿಕೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯವರ ಮೂಲಕ ಸಲ್ಲಿಸುವುದು.
2. ಗ್ರಾಮ ಪಂಚಾಯತಿಯು ಅನುಮೋದಿತ ಕಾರ್ಮಿಕ ಆಯವ್ಯಯಕ್ಕೆ ಅನುಗುಣವಾಗಿ ಒಂದು ಆರ್ಥಿಕ ಸಾಲಿನಲ್ಲಿ Rs.50.00 ಲಕ್ಷ ವೆಚ್ಚ ಭರಿಸಿದಲ್ಲಿ, ಮುಂದಿನ ಅನುದಾನದ ಬಿಡುಗಡೆಗೆ ಆಯಾ ಜಿಲ್ಲಾ ಪಂಚಾಯಿತಿಯ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯವರು/ಜಿಲ್ಲಾ ಉಪ ಕಾರ್ಯಕ್ರಮ ಸಮನ್ವಯಾಧಿಕಾರಿ ಕಾಮಗಾರಿ ಅನುಷ್ಠಾನದಲ್ಲಿ ಪರಿಪೂರ್ಣ ಪರಿಶೀಲನೆ ಮಾಡಿ ಅಧಿನಿಯಮದನ್ವಯ ಅನುಷ್ಠಾನಗೊಳಿಸಿರುವುದನ್ನು ಖಚಿತಪಡಿಸಿಕೊಂಡು ಸೂಕ್ತ ಶಿಫಾರಸ್ಸಿನೊಂದಿಗೆ ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

ಮೇಲಿನ ಸೂಚನೆಗಳಂತೆ ಒಂದು ವೇಳೆ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಮರ್ಪಕ ರೀತಿಯಲ್ಲಿ ಕಳುಹಿಸದೆ ಇದ್ದಲ್ಲಿ ಮುಂದಿನ ಕಂತಿನ ಅನುದಾನವನ್ನು ಬಿಡುಡೆ ಮಾಡಲಾಗುವುದಿಲ್ಲ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಗಾಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ.

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ,
2. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕ ಪತ್ರ), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು–1 ಜಂಟಿ ನಿರ್ದೇಶಕರು–2 ಜಂಟಿ ನಿರ್ದೇಶಕರು–3 ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ.

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 179 ಉಖಾಯೋ 2009 ದಿನಾಂಕ : 14–12–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

ವಿಷಯ: ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪ್ರಗತಿಯ ಸಂಬಂಧ ಎಂಐಎಸ್‌ನಲ್ಲಿ ದಾಖಲಿಸಿದ ಮಾಹಿತಿಗಳ ವಿಶ್ಲೇಷಣೆ ಮಾಡಿದ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು (ಎನ್‌ಆರ್‌ಇಜಿಎ) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಕೆ–11011/2/2008-NREGA MON)TS ದಿನಾಂಕ : 12.11.2010

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಅನುಷ್ಠಾನವಾಗುತ್ತಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪ್ರಗತಿಯ ಸಂಬಂಧ ಎಂಐಎಸ್‌ನಲ್ಲಿ ದಾಖಲಿಸಿದ ಮಾಹಿತಿಯನ್ನು ವಿಶ್ಲೇಷಣೆ ಮಾಡಿ ಅದರಲ್ಲಿ ಕೆಲವು ವಿಷಯಗಳ ಬಗ್ಗೆ ಕೂಡಲೇ ಪರಿಹರಿಸುವ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿರುತ್ತಾರೆ, ಕೇಂದ್ರ ಸರ್ಕಾರವು ಸೂಚಿಸಿರುವ ವಿಷಯಗಳ ಪತ್ರದ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿದೆ. ಇದರ ಸಂಬಂಧ ಕೇಂದ್ರ ಸರ್ಕಾರವು ತಿಳಿಸಿರುವ ವಿಷಯಗಳ ಮೇಲೆ ವಿಷಯವಾರು ಅನುಪಾಲನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲು ಅನುವಾಗುವಂತೆ ಕೂಡಲೇ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಗಾಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**AMITA SHARMA**
**Joint Secretary**
Tel: No.2338 5027
Fax: No.2338 4703

Ministry of Rural Development
Dept. of Rural Development
Government of India
Krishi Bhavan, New Delhi – 110 00

D.O.No.K-11011/2/2008- NREGA MON)/TS Dated : 12th November, 2010

Dear

In order to review the programme implementation by the States. Ministry of Rural Development has regularly analysed the data reported by States.

2. Some of the issue which were regularly communicated to States need to be addressed on priority basis are given below.

   I. States closing balance for FY 09-10 and opening balance for FY 10-11 are not matching.
   II. Some districts have not uploaded all the Job Card on MIS as reported upto FY 2009-10.
   III. All job cards have to be updated the information of Small & Marginal farmers, Bank & Post Office account information and BPL Status.
   IV. All districts are not reporting on MPRs Bank and Post office, Staffing, Training and Transparency & Accountability).
   V. All states are not submitting their state level information in State MPR.
   VI. Work completing rate is very low in current financial year.
   VII. No districts of State of Arunachal Pradesh are reporting physical and financial information on MGNREGA MIS.
   VIII. All state are requested to start the Labour Budget entry for FY 2011-12.
   ~~1. The issues highlisted above may be addressed on top priority,~~

Yours sincerely
Sd/-
**(Amita Sharma)**

To:

**Principal Secretaries/Secretaries**
Department of Rural Development,
All States/1/ITS

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ: ಗ್ರಾಅಪ 140 ಉಖಾಯೋ 2009 ದಿನಾಂಕ : 20–12–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಸಮೂಹ ಸೇವಾ ಸಂಸ್ಥೆಗಳು/ ಸರ್ಕಾರೇತರ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವುದರ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂ: J -11060/2/2009- MGNREGA ದಿ: 22.11.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಉದ್ಯೋಗಕ್ಕಾಗಿ ಕುಟುಂಬಗಳ ಬೇಡಿಕೆಯನ್ನು ಒದಗಿಸಿ ಖಚಿತ ಪಡಿಸಿಕೊಳ್ಳುವ ಕಾರ್ಯದ ಜವಾಬ್ದಾರಿಯನ್ನು ನಿಗದಿಯಾದ ಆರ್ಥಿಕ ಸಂಭಾವನೆಯ ಆಧಾರದ ಮೇಲೆ ಸಮೂಹ ಸೇವಾ ಸಂಸ್ಥೆಗಳೂ/ ಸರ್ಕಾರೇತರ ಸಂಸ್ಥೆಗಳಿಗೆ ವಹಿಸಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು ಇದರ ಪರಿಣಾಮ ಯೋಜನೆಯ ಮಾರ್ಗಸೂಚಿಯನ್ನು ಉಲ್ಲಂಘಿಸಿದಂತಾಗಿರುವುದು ಉಲ್ಲೇಖಿತ ಪತ್ರದಲ್ಲಿ ವರದಿ ಮಾಡಿರುತ್ತಾರೆ. ಸದರಿ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ಆದುದರಿಂದ ಕೇವಲ ಯೋಜನೆಯಡಿ ಕೂಲಿಗಾರರಿಗೆ ಉದ್ಯೋಗವನ್ನು ಒದಗಿಸುವ ಸಲುವಾಗಿ ಹಾಗೂ ಒಂದು ಆರ್ಥಿಕ ವರ್ಷದಲ್ಲಿ ನೂರು ದಿನಗಳನ್ನು ಪೂರೈಸಲು ಸಲುವಾಗಿ, ಸಮೂಹ ಸೇವಾ ಸಂಸ್ಥೆಗಳು/ಸರ್ಕಾರೇತರ ಸಂಸ್ಥೆಗಳನ್ನು ಬಳಸಿಕೊಂಡು ಮತ್ತು ಅವರುಗಳಿಗೆ ಈ ನಿಟ್ಟಿನಲ್ಲಿ ಸಂಭಾವನೆಯನ್ನು ನಿಮ್ಮ ಜಿಲ್ಲೆಯಲ್ಲಿ ನೀಡುತ್ತಿರುವ ಪದ್ಧತಿಯು ಬಳಕೆಯಲ್ಲಿದ್ದರೆ ಕೂಡಲೇ ಅವುಗಳನ್ನು ಸ್ಥಗಿತಗೊಳಿಸಲು ಕ್ರಮಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖ

ಅನಧಿಕೃತ ರಾಜ್ಯಸೂಚಿ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ:02:ಉಖಾಯೋ:2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ : 19–03–2011

ಗೆ,

ಎಲ್ಲಾ ಜಿಲ್ಲಾ ಪಂಚಾಯಿತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ : 2010–11ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಅನುಸರಿಸಬೇಕಾದ ಕ್ರಮಗಳು

* * *

2010–11ನೇ ಸಾಲಿನ ಆರ್ಥಿಕ ವರ್ಷದ ಅಂತ್ಯಕ್ಕಾಗಿ ಕೇವಲ 15 ದಿನಗಳು ಮಾತ್ರ ಬಾಕಿ ಉಳಿದಿರುತ್ತವೆ. ಕರ್ನಾಟಕ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಸಂಪೂರ್ಣವಾಗಿ MIS ಆಧಾರಿತಗೊಳಿಸಿರುವುದರಿಂದ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಗ್ರಾಮ ಪಂಚಾಯಿತಿಯ PDO ಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡತಕ್ಕದ್ದು.

- ಈಗಾಗಲೇ ಪೂರ್ಣಗೊಂಡಿರುವ ಹಾಗೂ ಹಾಜರಾತಿಯನ್ನು ಭರ್ತಿ ಮಾಡಿ ಪೂರ್ಣಗೊಳಿಸಿರುವ ಪಾವತಿ ಮಾಡದೇ ಇರುವ Muster Roll ಗಳನ್ನು ದಿನಾಂಕ: 25–03–2011ರೊಳಗೆ ತಪ್ಪದೇ ಪಾವತಿಸತಕ್ಕದ್ದು.
- ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಿರುವ ಎಲ್ಲಾ NMRಗಳನ್ನು ಕಡ್ಡಾಯವಾಗಿ 31–03–2011ರೊಳಗೆ ಪೂರ್ಣಗೊಳಿಸಿ ಏಪ್ರಿಲ್ 15ರೊಳಗೆ ಪಾವತಿಸತಕ್ಕದ್ದು.
- MISನಲ್ಲಿ 01–04–2011ರಿಂದ 2011–12ನೇ ಸಾಲಿನ NMRಗಳನ್ನು ತೆಗೆಯಲು ಈಗಾಗಲೇ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಮುಂದಿನ ಸಾಲಿನಲ್ಲಿ ಬಳಸಲು ಖಾಲಿ NMRಗಳನ್ನು MISನಿಂದ ತೆಗೆದುಕೊಂಡಿದ್ದರೆ ಅಂತಹ NMRಗಳನ್ನು ಬಳಸುವ ಸಾಧ್ಯತೆ ಕಡಿಮೆ ಇದ್ದರೆ ಅಂತಹ NMRಗಳನ್ನು delete ಮಾಡುವುದು. 01–04–2011ರಿಂದ ತೆಗೆಯಲ್ಪಟ್ಟ NMRಗಳ ವೆಚ್ಚವನ್ನು 2011–12ನೇ ಸಾಲಿನಲ್ಲಿ ಪರಿಗಣಿಸಲಾಗುತ್ತದೆ.
- ಹಣ ಲಭ್ಯವಿಲ್ಲದೇ ಯಾವುದೇ ಗ್ರಾಮ ಪಂಚಾಯಿತಿಗಳಲ್ಲಿ NMRಗಳನ್ನು ಪಾವತಿ ಮಾಡಿದೆಯೆಂದು ನಮೂದಿಸತಕ್ಕದ್ದಲ್ಲ. ಗ್ರಾಮ ಪಂಚಾಯಿತಿಯಲ್ಲಿ ವಾಸ್ತವವಾಗಿ ಹಣ ಲಭ್ಯವಿದ್ದರೆ ಮಾತ್ರ ಪಾವತಿಸತಕ್ಕದ್ದು. ಅಂತಹ ಪಾವತಿಯನ್ನು MISನಲ್ಲಿ ನಮೂದಿಸುವುದು.
- ಒಂದು ವೇಳೆ ಗ್ರಾಮ ಪಂಚಾಯಿತಿಯಲ್ಲಿ ಹಣ ಲಭ್ಯವಿದ್ದರೆ Post Dated Cheque ಗಳನ್ನು ನೀಡಿದರೆ ಅಥವಾ ಬ್ಯಾಂಕ್ ಖಾತೆಯಲ್ಲಿ ಹಣ ಇಲ್ಲದೇ Cheque ನೀಡಿದರೆ ಅಂತಹವರ ವಿರುದ್ಧ criminal ಮೊಕದ್ದಮೆ ಹೂಡಲಾಗುವುದು. ಆದುದರಿಂದ ಗ್ರಾಮ ಪಂಚಾಯಿತಿಯಲ್ಲಿ ಹಣ ಲಭ್ಯವಿಲ್ಲದೇ ಯಾವುದೇ NMRಗಳಾಗಲೀ ಅಥವಾ ಸಾಮಗ್ರಿಗಳ ಬಿಲ್ಲುಗಳಿಗಾಗಲೀ cheque ನೀಡತಕ್ಕದ್ದಲ್ಲ.
- MISನಲ್ಲಿ 2010–11ನೇ ಸಾಲಿನ ಬಾಬ್ತು NMRಗಳನ್ನು ತೆಗೆದು ಅಂತಹ NMRಗಳನ್ನು ಭರ್ತಿ ಮಾಡದೇ ಬಾಕಿ ಉಳಿಸಿದ್ದಲ್ಲಿ ಅಂತಹ ಎಲ್ಲಾ NMRಗಳನ್ನು 31–03–2011ರ ರಾತ್ರಿ 10 ಗಂಟೆಗೆ MISನಿಂದ ತೆಗೆದು ಹಾಕಲಾಗುವುದು.
- ಮೊದಲ ಆದ್ಯತೆ ಮೇಲೆ ಕೂಲಿ ಮೊತ್ತವನ್ನು ಪಾವತಿಸತಕ್ಕದ್ದು. ತದನಂತರ ಸಾಮಗ್ರಿಗಳ ಬಿಲ್ಲುಗಳನ್ನು ಪಾವತಿಸತಕ್ಕದ್ದು.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

## PROCEEDINGS OF THE GOVERNMENT OF KARNATAKA

Sub : Roles and responsibilities of Programme Officers and Panchayat Development Officers in issue of muster rolls and certification

Ref : Govt. Letter No. RDP: EGS: 122: 2008 dated 17-12-2009

* * *

**Preamble**

As per the provisions Operational Guidelines (para 6.51) of Mahatma Gandhi National Rural Employment Guarantee Act, "before starting a work the Grama Panchayat shall inform the Programme Officer, so that the Programme Officer may issue required muster rolls with unique identify number and be certified by the Programme Officer". Now Government of Karnataka has adopted e-muster rolls w.e.f. 01-01-2010, the e-muster rolls are being enabled to be generated at Grama Panchayat level through Grama Panchayat login Grama Panchayat login with unique ID and also with Job Card numbers. After generation of these muster rolls at GP from MIS, they are being physically carried to Taluk Panchayat Office on day to day basis for certification and making wage payment to the labours. This process is not only delaying wage payment to the labours but also making practically difficult for the Programme Officers to undertake verification of muster rolls at worksites. However, e-muster rolls are also made available to Programme Officer through PO login for verification. Morever, the Government of Karnataka has recruited 2500 Panchayat Development Officers (PDOs) of Deputy Tahsildar Grade who have computer skills to handle e-muster rolls. In addition to these, PDOs are also being supplied with laptops and data cards to handle online MIS more professionally. To simplify the procedure and to avoid delay in making wage payment the following order :

**Government Order : NO: RPD:02:EGS:2008 Bangalore Dated 25-02-2011**

The procedure of certification of e-muster rolls by the Programme Officer is dispensed with immediate effect. The PDOs are authorized to certify E-muster rolls for making payment after generating concerned wage list from the MIS. If PDO to certify e-muster rolls of the neighboring GP where PDO post is vacant. The Programme Officers are strictly instructed to verify works as per the provision 10.3.1 operational guidelines and to certify only those e-muster rolls where physical verification is undertaken.

By the order and in the name of
Governor of Karnataka

**(N.S. Prasanna Kumar)**
Director, MG NREGA and
E/o Joint Secretary, Rural Development
& Panchayat Raj Department

To,

1. Accountant General of Karnataka, Bangalore
2. Compiler, Karnataka State Gazette, Karnataka

Copies

1. PS to the Hon'ble Rural Development & Panchayat Raj Minister, Vidhana Soudha, Bangalore
2. PS to the Chief Secretary to Government of Karnataka, Vidhana Soudha, Bangalore
3. PS to the Additional Chief Secretary & Development Commissioner, GOK, Bangalore
4. PS to the Principal Secretary, RD & PR Department, MS Building, Bangalore
5. PS to Secretary RD & PR Department, MS Building, Bangalore

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ:67:ಉಖಾಯೋ:2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ: 25–03–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೂಲಿ ಮತ್ತು ಕೂಲಿಯೇತರ ಪ್ರಮಾಣವನ್ನು ಮಿತಿಮೀರಿ ಪಾವತಿಸುತ್ತಿರುವ ಬಗ್ಗೆ.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಅನುಮೋದಿತ ಕಾರ್ಮಿಕ ಆಯವ್ಯಯದ ಅನುಸಾರ ಅಕುಶಲ ಕೂಲಿಕಾರರಿಗೆ ಶೇಕಡ 60ರಷ್ಟು ಹಾಗೂ ಸಾಮಗ್ರಿಗಳಿಗಾಗಿ ಶೇಕಡ 40ರಷ್ಟು ಅನುದಾನವನ್ನು ಬಳಸಿಕೊಳ್ಳಲು ಅವಕಾಶ ಇರುತ್ತದೆ.

ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಈ ಪ್ರಮಾಣವನ್ನು ಉಲ್ಲಂಘಿಸಿ ಪಾವತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಮಹಾಲೇಖಪಾಲರ ಲೆಕ್ಕಪರಿಶೋಧನೆ ವೇಳೆಯಲ್ಲಿ ಇಂತಹ ಆಕ್ಷೇಪಣೆಗಳನ್ನು ತೀವ್ರವಾಗಿ ಪರಿಗಣಿಸಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿ/ಪಿ.ಡಿ.ಒ. ಇವರಿಂದ ವಸೂಲಿ ಮಾಡಲು ದಾಖಲಿಸಿರುತ್ತಾರೆ. ಆದುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇಕಡ 60 ಮತ್ತು 40ರ ಕೂಲಿ ಮತ್ತು ಕೂಲಿಯೇತರ ಪ್ರಮಾಣವನ್ನು ಪಾವತಿಸುವಲ್ಲಿ ಉಲ್ಲಂಘನೆಯಾಗಿದ್ದಲ್ಲಿ 31–03–2011ರ ಅಂತ್ಯದೊಳಗೆ ಸರಿಪಡಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ ಉಲ್ಲಂಘಿಸುವ ಗ್ರಾಮ ಪಂಚಾಯಿತಿಗಳ ವಿರುದ್ಧ ಕ್ರಮ ಜರುಗಿಸಿ ಭಾರತ ಸರ್ಕಾರದ ಅಧಿಸೂಚನೆಯನ್ವಯ ಅನುದಾನವನ್ನು ನಿಲ್ಲಿಸಲು ಕ್ರಮ ಜರುಗಿಸಲಾಗುವುದು. ಈ ಸೂಚನೆಗಳನ್ನು ತಕ್ಷಣವೇ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಿಕೊಟ್ಟು ಸ್ವೀಕೃತಿಯನ್ನು ಪಡೆದುಕೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂಖ್ಯೆ : ಗ್ರಾಅಪ:69:ಉಖಾಯೋ 2011 ದಿನಾಂಕ : 26–03–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಹೊರಡಿಸಿದ ಸುತ್ತೋಲೆ ಆದೇಶಗಳು ಮತ್ತು ಪ್ರಮುಖವಾದ ಪತ್ರಗಳನ್ನು ತಿಳಿಸುವ ಕುರಿತು.

ಉಲ್ಲೇಖ: 1. ಭಾರತ ಸರ್ಕಾರದ ಪತ್ರ ಸಂ: ಜೆ–11060/2/2011–ಎಂಜಿಎನ್‌ಆರ್‌ಇಜಿಎ ದಿ: 24–02–2011
2. ಭಾರತ ಸರ್ಕಾರದ ಪತ್ರ ಸಂ: ಜೆ–11060/4/2011–ಎಂಜಿಎನ್‌ಆರ್‌ಇಜಿಎ ದಿ: 21–01–2011
3. ಭಾರತ ಸರ್ಕಾರದ ಪತ್ರ ಸಂ: ಜೆ–11060/3/2011–ಎಂಜಿಎನ್‌ಆರ್‌ಇಜಿಎ ದಿ: 29–11–2010

* * *

ಭಾರತ ಸರ್ಕಾರವು ಉಲ್ಲೇಖಿತ ಪತ್ರಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಯನ್ನು ನಿಯಮಿತವಾಗಿ ನಡೆಸುವ ಕುರಿತು ಹಾಗೂ ಸದರಿ ಸಭೆಗಳಲ್ಲಿ ಯೋಜನಾ ಅನುಷ್ಠಾನ ಸಂಬಂಧ ಪೂರ್ಣ ಮಾಹಿತಿಯನ್ನು ಪ್ರಚುರ ಪಡಿಸುವುದು, ಇತ್ಯಾದಿ ಹಾಗೂ ಯೋಜನಾ ಅನುಷ್ಠಾನದಲ್ಲಿ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶಗಳ ಪತ್ರಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಆದೇಶಗಳಲ್ಲಿ ತಿಳಿಸಿರುವಂತೆ ಕಡ್ಡಾಯವಾಗಿ ಸೂಕ್ತ ಕ್ರಮ ವಹಿಸಲು ಈ ಮೂಲಕ ಸೂಚಿಸಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಸರಣೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ:67:ಉಖಾಯೋ:2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ-2
ಬೆಂಗಳೂರು, ದಿನಾಂಕ : 29-03-2011

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾರ್ಚ್ 2011ರ ಮಾಹೆಯಲ್ಲಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಸಂಬಂಧ ಹಣ ಪಾವತಿಸುವ ಕುರಿತು.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೋಂದಾಯಿತ ಕೂಲಿ ಕಾರ್ಮಿಕರು ಸಲ್ಲಿಸುವ ಬೇಡಿಕೆಗೆ ಅನುಗುಣವಾಗಿ ಉದ್ಯೋಗವನ್ನು ನೀಡಿ ಮಾರ್ಗಸೂಚಿಯನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಂಬಂಧ ಯೋಜನೆಯ ಪ್ರಗತಿಯ ವಿವರಗಳನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ದಾಖಲಿಸಿ ಅನುಷ್ಠಾನಗೊಳಿಸುತ್ತಿದ್ದು, ದಿನನಿತ್ಯದ ಪ್ರಗತಿಯ ವಿವರಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಸದರಿ MISನಲ್ಲಿ ದಾಖಲಿಸಿರುವ ಪ್ರಗತಿಯ ವಿವರಗಳನ್ನು ಪರಿಶೀಲಿಸಿದಾಗ ಮಾರ್ಚ್ 2011ರ ಮಾಹೆಯಲ್ಲಿ ಉದ್ಯೋಗಕ್ಕಾಗಿ ಅನುಮೋದಿತ ಮುಂಗಡ ಕಾರ್ಮಿಕ ಆಯವ್ಯಯದಲ್ಲಿ ತಿಳಿಸಿರುವುದಕ್ಕಿಂತ ಹೆಚ್ಚು ಬೇಡಿಕೆ ಸಲ್ಲಿಸುತ್ತಿರುವುದಾಗಿ ದಾಖಲಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಬೇಡಿಕೆಯನ್ನು ಪರಿಶೀಲಿಸಿ ದೃಢೀಕರಿಸಿರುವ ಉದ್ಯೋಗ ಚೀಟಿಗಳೊಂದಿಗೆ (validated job cards) ಸರಿ ಇರುವ ಕುರಿತು ಹಾಗೂ ಬೇಡಿಕೆಗೆ ಅನುಗುಣವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ ಹಣ ಪಾವತಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ ಕಾರಣ ಜರೂರು ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

* ದಿನಾಂಕ 01-03-2011ರ ನಂತರ MISನಲ್ಲಿ ಬೇಡಿಕೆ ದಾಖಲಿಸಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ಸಂಬಂಧದ ಎಲ್ಲಾ NMR, ಸಾಮಗ್ರಿ ಬಿಲ್ಲುಗಳು, ಕಾಮಗಾರಿ ಅನುಷ್ಠಾನಗೊಳಿಸಿದ ಸ್ಥಳ ಹಾಗೂ ಇತರೆ ದಾಖಲಾತಿಗಳನ್ನು ಕಡ್ಡಾಯವಾಗಿ ತಾಲ್ಲೂಕು/ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡದಿಂದ ಪರಿಶೀಲನೆ ನಡೆಸಿ ತದನಂತರವೇ ಹಣ ಪಾವತಿಗೆ ಕ್ರಮ ಕೈಗೊಳ್ಳುವುದು, ಮತ್ತು

* ಮೇಲೆ ತಿಳಿಸಿರುವಂತೆ ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಅನುದಾನದ ಅಗತ್ಯ ಕಂಡುಬಂದಲ್ಲಿ ಈ ಕುರಿತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ದೃಢೀಕರಣದೊಂದಿಗೆ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು.

ತಮ್ಮ ವಿಶ್ವಾಸಿ

**(ಪಿ. ರವಿಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**


ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in


ಸಂಖ್ಯೆ : ಗ್ರಾಅಪ:65:ಉಖಾಯೋ 2011 ದಿನಾಂಕ : 21–05–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಅನುಷ್ಠಾನದ ಕುರಿತು.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಮರ್ಪಕ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಧಿನಿಯಮದಲ್ಲಿರುವ ಎಲ್ಲಾ ಪ್ರಕ್ರಿಯೆಗಳನ್ನು ಬಹುತೇಕ ಅನುಷ್ಠಾನಗೊಳಿಸಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯವೇ. ಆದರೂ ಯೋಜನೆಯ ಅನುಷ್ಠಾನದಲ್ಲಿ ದುರುಪಯೋಗ, ಭ್ರಷ್ಟಾಚಾರದ ಪ್ರಕರಣಗಳು ಮತ್ತು ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಾಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳು ಅನುಷ್ಠಾನದಲ್ಲಿ ಮರುಕಳಿಸದಂತೆ ಮತ್ತು ಉದ್ಭವಿಸದಂತೆ ಯೋಜನೆಯನ್ನು ಸುವ್ಯವಸ್ಥೆಗೊಳಿಸಲು ಕಟ್ಟುನಿಟ್ಟಾದ ಸೂಚನೆಗಳನ್ನು ಸರ್ಕಾರದಿಂದ ಕಾಲಕಾಲಕ್ಕೆ ನೀಡಲಾಗುತ್ತಿದೆ. ಈ ನಡುವಣ, ರಾಜ್ಯದ ಕೆಲವು ಸಂಘಗಳ ಸಂಘಟನಾಕಾರರು ರಾಜ್ಯದಲ್ಲಿ ಯೋಜನೆಯನ್ನು ಅಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆಯೆಂದು ಸೋರುವಿಕೆ ಜಾಸ್ತಿಯಾಗಿದೆಯೆಂದು ಗ್ರಾಮೀಣ ಬಡ ಕುಟುಂಬಗಳಿಗೆ ಕೆಲಸವನ್ನು ಕೋರಿ ಬೇಡಿಕೆಯನ್ನು ಸಲ್ಲಿಸಿದರೂ ಉದ್ಯೋಗವನ್ನು ನೀಡುತ್ತಿಲ್ಲವೆಂದು ಇತ್ಯಾದಿ ಇವುಗಳ ಬಗ್ಗೆ ಮನವಿಗಳನ್ನು ಸಲ್ಲಿಸಿರುತ್ತಾರೆ.

ಈ ನಿಟ್ಟಿನಲ್ಲಿ ತಾವೆಲ್ಲರೂ ಯೋಜನೆಯ ಮಾರ್ಗಸೂಚಿಗಳನ್ನು ಮತ್ತು ಅಧಿನಿಯಮದಲ್ಲಿ ಅವಕಾಶ ಮಾಡಿರುವ ಪ್ರಕ್ರಿಯೆಗಳನ್ನು ಯಥವತ್ತಾಗಿ ಅನುಷ್ಠಾನಗೊಳಿಸಿ ಯಾವುದೇ ದೂರುಗಳಿಗೆ ಆಸ್ಪದ ಕೊಡದಂತೆ ಕ್ರಮವಹಿಸಲು ಕೋರಿದೆ.

ತಮ್ಮ ವಿಶ್ವಾಸಿ

**ನಿರ್ದೇಶಕರು**
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂಖ್ಯೆ : ಗ್ರಾಅಪ:140:ಉಖಾಯೋ:2011 ದಿನಾಂಕ : 26–05–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ : 2010–11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳಿಗೆ ಹಣ ಪಾವತಿ ಮಾಡಲು ಹಾಗೂ ಅನುದಾನ ಬಿಡುಗಡೆ ಮಾಡುವ ಕುರಿತು.

* * *

2010–11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳಿಗೆ ಹಣ ಪಾವತಿಸಲು ಅಂತಿಮ ಗಡುವನ್ನು ನೀಡಿದ್ದು ನಿಗದಿತ ಅವಧಿಯಲ್ಲಿ ಕೆಲವು ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳ ಹಣವನ್ನು ಸಂದಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳ ಹಣವನ್ನು ಪಾವತಿಸುವ ಪೂರ್ವದಲ್ಲಿ ಈ ಕೆಳಗೆ ಸೂಚಿಸಲಾದ ಷರತ್ತುಗಳಿಗೆ ಒಳಪಟ್ಟು ಪಂಚಾಯಿತಿವಾರು ವಿವರಗಳ ಪ್ರಸ್ತಾವನೆಯನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಸರ್ಕಾರಕ್ಕೆ ತುರ್ತಾಗಿ ಸಲ್ಲಿಸಲು ಕೋರಿದೆ.

1. ಅಧಿನಿಯಮದನ್ವಯ ಹಾಗೂ ಯೋಜನೆಯ ಮಾರ್ಗಸೂಚಿಗಳಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಶೇಕಡಾ 10ರಷ್ಟು ಕಾಮಗಾರಿಗಳನ್ನು ವೀಕ್ಷಣೆ ಮಾಡಿರುವುದರ ಬಗ್ಗೆ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಶೇಕಡಾ 100ರಷ್ಟು ತಮ್ಮ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ವೀಕ್ಷಣೆ ಮಾಡಿರುವುದರ ಬಗ್ಗೆ ದೃಢೀಕರಣ ಪತ್ರ.
2. ಅನುಷ್ಠಾನಗೊಳಿಸಿದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳು ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಪರಿಶೀಲನೆ ಮಾಡಿದ ಜಾಬ್ ಕಾರ್ಡ್ ವ್ಯಾಲಿಡೇಷನ್ ಮಿತಿಯಲ್ಲಿ ಇರುವುದರ ಬಗ್ಗೆ ದೃಢೀಕರಣ ಪತ್ರ.
3. ಅನುಷ್ಠಾನಗೊಳಿಸಿದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳು 2010–11ನೇ ಸಾಲಿನಲ್ಲಿ ಆಯಾ ಗ್ರಾಮ ಪಂಚಾಯಿತಿಗಳಿಗೆ ಅನುಮೋದಿಸಲಾದ ಕಾರ್ಮಿಕ ಮುಂಗಡ ಪತ್ರ ಅನುದಾನದ ಮಿತಿ ಮತ್ತು ನಿಗದಿಪಡಿಸಲಾದ ಮಾನವ ದಿನಗಳ ಮಿತಿಯೊಳಗೆ ಇರುವುದರ ಬಗ್ಗೆ ದೃಢೀಕರಿಸಬೇಕು.
4. 2010–11ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎಸ್–ಎಂಐಎಸ್‌ನಲ್ಲಿ ದಾಖಲಿಸಲಾದ ಅಪೂರ್ಣ/ಪೂರ್ಣಗೊಂಡಿರುವ ಕಾಮಗಾರಿಗಳ ಮಾಹಿತಿಯು ವಾಸ್ತವಿಕವಾಗಿ ಸದರಿ ಸಾಲಿನಲ್ಲಿ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಲಾದ ಮಾಹಿತಿಗೆ ಹೊಂದಾಣಿಕೆಯಾಗಿರುವುದರ ಬಗ್ಗೆ ದೃಢೀಕರಿಸಬೇಕು.
5. 2010–11ನೇ ಸಾಲಿನಲ್ಲಿ ನೋಂದಾಯಿತ ಕೂಲಿಕಾರ್ಮಿಕರು ಉದ್ಯೋಗಕ್ಕಾಗಿ ಸಲ್ಲಿಸಿದ ಬೇಡಿಕೆಗೆ ಅನುಗುಣವಾಗಿ ಉದ್ಯೋಗವನ್ನು ನೀಡಿ ಮಾರ್ಗಸೂಚಿಗಳನ್ವಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದರ ಕುರಿತು ದೃಢೀಕರಣ ನೀಡುವುದು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ 14ರಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ನೀಡಲಾಗಿರುತ್ತದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೇಲೆ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪರಿಪೂರ್ಣವಾದ ಪಂಚಾಯಿತಿವಾರು ಪ್ರಸ್ತಾವನೆಯನ್ನು ಮುಂದಿನ ಅಗತ್ಯ ಕ್ರಮ ಜರುಗಿಸಲು ಸರ್ಕಾರಕ್ಕೆ ಸಲ್ಲಿಸಲು ಮತ್ತೊಮ್ಮೆ ಕೋರಿದೆ.

ತಮ್ಮ ವಿಶ್ವಾಸಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಇಲಾಖೆ

# ನಮೂನೆ

**2010–2011ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ................................ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಬಿಲ್ಲುಗಳಿಗೆ ಹಣ ಪಾವತಿಸಲು ಅನುದಾನ ಬಿಡುಗಡೆ ಮಾಡುವ ವಿವರಗಳ ತಃಖ್ತೆ**

| ಕ್ರ. ಸಂ. | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ | ತಾಲ್ಲೂಕು ಮಟ್ಟದ ಅಧಿಕಾರಿಗಳಿಂದ ಪರಿವೀಕ್ಷಣೆ ಮಾಡಲಾದ ಕಾಮಗಾರಿಗಳ ಸಂಖ್ಯೆ | ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಪರಿವೀಕ್ಷಣೆ ಮಾಡಲಾದ ಕಾಮಗಾರಿಗಳ ಸಂಖ್ಯೆ | ಪಾವತಿಸಬೇಕಾದ ಅನುದಾನದ ಮೊತ್ತ | ಹಣದ ಪಾವತಿಗೆ ಜಿಲ್ಲಾ ಪಂಚಾಯಿತಿಯಿಂದ ಶಿಫಾರಸ್ಸು ಮಾಡಲಾದ ಮೊತ್ತ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ
ಜಿಲ್ಲೆಯ ಹೆಸರು ....................

ಅನಸೂ ರಾಗ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ತೊಡಗಿರುವ ತಾಂತ್ರಿಕ ಸಹಾಯಕರ ಮಾಸಿಕ ಸಂಭಾವನೆಯನ್ನು ಹೆಚ್ಚಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 104 ಉಖಾಯೋ 2007 ಬೆಂಗಳೂರು, ದಿ.05-06-2009

2. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 70 ಉಖಾಯೋ 2009 ದಿ.14-07-2010

3. ದಿನಾಂಕ 25-06-2011 ರಂದು ನಡೆದ ರಾಜ್ಯ ಮಟ್ಟದ ಜಾಗೃತ ಸಮಿತಿಯ ಸಭೆಯಲ್ಲಿ ಸಮಿಯ ಸದಸ್ಯರ ಸಲಹೆಯಂತೆ

* * *

### ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ನಿಗವಹಿಸಿ ಪರಿವೀಕ್ಷಣೆ ಮಾಡು ಸಲುವಾಗಿ ಹಾಗೂ ಯೋಜನೆಯ ಸಮರ್ಪಕ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪ್ರತಿ ನಾಲ್ಕು ಗ್ರಾಮಪಂಚಾಯಿತಿಗಳಿಗೆ ಇಂಜಿನಿಯರಿಂಗ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು ಒಬ್ಬ ತಾಂತ್ರಿಕ ಸಹಾಯಕರನ್ನು ಮತ್ತು ಅದೇ ಪ್ರತಿ ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ತಾಲ್ಲೂಕು ಮಟ್ಟದಲ್ಲಿ ಕೃಷಿ, ತೋಟಗಾರಿಕೆ ಅರಣ್ಯ, ರೇಷ್ಮೆ, ಜಲಾನಯನ ಮತ್ತು ನೀರಾವರಿ ಇಲಾಖೆಯ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು ಒಬ್ಬ ತಾಂತ್ರಿಕ ಸಹಾಯಕರನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯಲು ಉಲ್ಲೇಖ (1) ರ ಆದೇಶದಲ್ಲಿ ಆದೇಶಿಸಲಾಗಿತ್ತು. ಉಲ್ಲೇಖ (1) ರ ಆದೇಶದಂತೆ ತಾಂತ್ರಿಕ ಸಹಾಯಕರ ಮಾಸಿಕ ಸಂ¨sÁವನೆಯನ್ನು 3000/- ರೂಗಳಿಗೆ ನಿಗಧಿಪಡಿಸಲಾಗಿತ್ತು. ಮುಂದುವರೆದು ತಾಂತ್ರಿಕ ಸಹಾಯಕರಿಗೆ ನಿಗಧಿಪಡಿಸಿದ ಮಾಸಿಕ ಸಂಭಾವನೆಯು ಕಡಿಮೆಯಾಗಿದ್ದು, ಕ್ಷೇತ್ರ ಮಟ್ಟದಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ಪರಿವೀಕ್ಷಿಸುವ ಕಾರ್ಯಕ್ಕೆ ಮುಂದೆ ಬಾರದೆ ಇರುವುದರ ಕಾರಣದಿಂದ ಸಂಭಾವನೆಯನ್ನು ಹೆಚ್ಚಿಸುವುದು ಅವಶ್ಯಕವಾಗಿರುವುದರಿಂದ ಸಂಭಾವನೆಯನ್ನು 8000/- ರೂಗಳಿಗೆ ಹೆಚ್ಚಿಸಲಾಗಿತ್ತು ದಿನಾಂಕ 25-06-2011 ರಂದು ನಡೆದ ರಾಜ್ಯ ಮಟ್ಟದ ಜಾಗೃತ ಸಮಿತಿಯಲ್ಲಿ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ತೊಡಗಿರುವ ತಾಂತ್ರಿಕ ಸಹಾಯಕರ ಮಾಸಿಕ ಸಂಭಾವನೆಯನ್ನು ವಿದ್ಯಾರ್ಹತೆಗಳಿಗೆ ಅನುಗುಣವಾಗಿ ನಿಗಧಿಪಡಿಸಿ ಹೆಚ್ಚಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಬಿವೃದ್ಧಿ ಮತು ಪಂಚಾಯತಿ ರಾಜ್ ಇಲಾಖೆ ಇವರಿಗೆ ಸಮಿತಿಯ ಸದಸ್ಯರು ತಮ್ಮ ಸಲಹೆಯನ್ನು ನೀಡಿರುತ್ತಾರೆ. ಆದುದರಿಂದ ಉದ್ಯೋಗ ಖಾತರಿ ಯೋಜನೆಯ ಅನುಷಾನದಲ್ಲಿ ತೊಡಗಿರುವ ತಾಂತ್ರಿಕ ಸಹಾಯಕರಿಗೆ ಮಾಸಿಕ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 104 ಉಖಾಯೋ 2007 ಬೆಂಗಳೂರು ದಿನಾಂಕ 06-07-2011**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ತೊಡಗಿರುವ ತಾಂತ್ರಿಕ ಸಹಾಯಕರಿಗೆ ಅವರವರ ವಿದ್ಯಾರ್ಹತೆಗಳಿಗೆ ಅನುಗುಣವಾಗಿ ಮಾಸಿಕ ಸಂಭಾವನೆಯನ್ನು ಈ ಕೆಳಕಂಡಂತೆ ನಿಗಧಿಪಡಿಸಿ ತಕ್ಷಣದಿಂದಲೇ ಜಾರಿಗೆ ಬರಲು ಆದೇಶಿಸಲಾಗಿದೆ.

| ಕ್ರಮ ಸಂ. | ವಿದ್ಯಾರ್ಹತೆಗಳು | ನಿಗಧಿಪಡಿಸಿದ ಮಾಸಿಕ ಸಂಭಾವನೆ | ಷರಾ |
|---|---|---|---|
| 1 | ಡಿಪ್ಲೊಮ ಇನ್ ಸಿವಿಲ್ ಮತ್ತು ಗಣಕಯಂತ್ರದ ಜ್ಞಾನ ಕಡ್ಡಾಯ | ರೂ. 10,000/- | ಇಂಜಿನಿಯರಿಂಗ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು |
| 2 | ಬಿ.ಇ ಸಿವಿಲ್ ಮತ್ತು ಗಣಕಯಂತ್ರದ ಜ್ಞಾನ ಕಡ್ಡಾಯ | ರೂ. 12,000/- | ಇಂಜಿನಿಯರಿಂಗ್ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು |
| 3 | ಕೃಷಿ ಅಥವಾ ಅರಣ್ಯ ಅಥವಾ ತೋಟಗಾರಿಕೆ ವಿಷಯದಲ್ಲಿ ಪದವಿಯನ್ನು ಪಡೆದಿರಬೇಕು ಮತ್ತು ಗಣಕಯಂತ್ರದ ಜ್ಞಾನ ಕಡ್ಡಾಯ | ರೂ. 10,000/- | ಕೃಷಿ, ಅರಣ್ಯ ತೋಟಗಾರಿಕೆ, ನೀರಾವರಿ ಜಲಾನಯನ ಇತರೆ ಇಲಾಖೆಯ ಕಾಮಗಾರಿಗಳನ್ನು ಉಸ್ತುವಾರಿ ಮಾಡಲು |

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮಪಂಚಾಯಿತಿಗಳ ಸಂಖ್ಯೆಗೆ ಅನುಗುಣವಾಗಿ ಮತ್ತು ಉದ್ಯೋಗ ಚೀಟಿಗಳ ಸಂಖ್ಯೆಗೆ ಅನುಗುಣವಾಗಿ ತಾಂತ್ರಿಕ ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಜಿಲ್ಲಾ ಮಟ್ಟದಲ್ಲಿ ಪಾರದರ್ಶಕತೆಯ ನಿಯಮಗಳನ್ನು (KTPP rules)ಅನುಸರಿಸಿ ಪಡೆದುಕೊಳ್ಳಲು ಮತ್ತು ಅವಶ್ಯಕತೆಗೆ ಅನುಗುಣವಾಗಿ ಬಳಸಿಕೊಳ್ಳಲು ಅನುಮೋದನೆ ನೀಡಿದೆ. ಇದಕ್ಕೆ ತಗಲುವ ವೆಚ್ಚವನ್ನು ಯೋಜನೆಯ ಶೇಕಡಾ 6% ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪಿ. ಶಿವಶಂಕರ್)**
ನಿರ್ದೇಶಕರು,
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು /ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳ, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

5. ಸರ್ಕಾರದ ಎಲ್ಲಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಬೆಂಗಳೂರು
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ
7. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
8. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
9. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
11. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಂಜಿಎನ್‌ಆರ್‌ಇಜಿಎ) ಅರಣ್ಯ ಇಲಾಖೆ, ಅರಣ್ಯ ಭವನ ಮಲ್ಲೇಶ್ವರಂ ಬೆಂಗಳೂರು
13. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಕೆ.ಆರ್.ವೃತ್ತ, ಬೆಂಗಳೂರು
14. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
15. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
16. ಆತಂರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
17. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
18. ಹೆಚ್ಚಿನ ಪ್ರತಿಗಳು /ರಕ್ಷಾ ಕಡತ

ಅನಸೂ ರಾಗಸಂಪ

## PROCEEDINGS OF THE GOVERNMENT OF KARNATAKA

Sub : Study to be undertaken on the proposal of crediting the wages of the labourers to their accounts directly under MGNREGS - regarding

Ref.:
1. Discussion/meetings held before the Principal Secretary RD&PR Department and as per the note given by the Principal Secretary RD&PR
2. Letter No. ITSD/DEV dated 11-06-2011 from General Manager (IT) SBM Head Office, Bangalore.

* * *

**Preamble**

In order to streamline the present system of payment of wages to the labourers through the accounts by crediting by Gram Panchayats and to avoid the wages being misused by middlemen at the field level and also for payment of wages in time to the labourers under MGNREGS, it is considered necessary to credit the wages of the labourers to their accounts directly from the state fund created at the state level. For this purpose, a software has to be developed in a such way that the payment of wages to the labourers could be done in time and without any hurdles. Officers from State Bank of Mysore, National Informatics Centre and Directorate of MGNREGS shall jointly work and develop a software Nelamangala taluk in Bangalore (Rural) district has been chosen as a place where study and test could be taken up on pilot basis. For the purpose of study and test the proposed venture and also for developing the software, it has been decided to constitute a working group comprising of five officials. Hence the following order.

### Government order No. RDP 115 NRE 2008 Bangalore dated 16-06-2011

In view of the facts explained in the preamble, a working group comprising of the following officials from the Directorate of MGNREGS at state level, National Informatics Centre and State Bank of Mysore is constituted for the purpose of study and test to be conducted at Nelamanagala Taluk on pilot basis and to develop a software to facilitate the state Government to credit the wages of the labourers to their accounts directly under MGNREGS from the state level fund.

1. Shri B.S. Murali, Audit Officer, Directorate of MGNREGA, Bangalore.
2. Shri Chetan I Wali Programme Manager, Dicretorate of MGNREGA, Bangalore
3. Representative from National Informatics Centre, Bangalore who is conversant with MGNREGS.
4. Shri ML Manoj, Manager (Sysemes) Informatics Technology Services Department, SBM Head Office.
5. Shri Oswald Xalxo, Deputy Manager Informatics Technology Services Department, SBM Head Office.

The aforesaid working group shall immediately start the work and to take action on the following aspects for developing software being implemented at the field level and

submit the report on or before 30-06-2011 after study and conducting test at Nelamangala Taluk.

1. Implementing agencies like Panchayat Raj Institutions and Executing agencies in Nelamangala Taluk shall be imbibed about the software being developed and implementation to be brought into force accordingly.
2. State Bank of Mysore and National Informatics Centre officials shall work jointly for viable software and an interface shall be brought on between the software of State Bank of Mysore and National Informatics Centre software.
3. Mechanism shall be developed in the software as a security in such a way that any misuse situation does not happen and to enable the implementing officers to exercise strict vigilance about the supervision and monitoring.
4. If any changes are necessary to be brought in the system presently being used, approval shall be obtained from the Government and then such changes effected in the system shall be brought into force.

By order and in the name of
Governor of Karnataka

**(Shivashankar P.)**
Director
Mahatma Gandhi National Rural
Employment Guarantee Scheme
& E/o. Jt. Secretary to Government
Rural Development & Panchayat Raj Dept.

To

The above concerned working group officials

Copy for information is submitted to :

1. Personal Secretary to Principal Secretary RD&PR Department
2. Personal Secretary to Secretary (PR) RD&PR Department
3. General Manager (IT) State Bank of Mysore, Head Office O.B. NO. 9727, Mysore Bank Circle, Kempegowda Road, Bangalore 560 009.
4. Shri B.G. Patil, Asst. General Manager, State Bank of Mysore, G-Seva, Bangalore
5. Chief and State Informatics Officer, NIC, V.V tower, Bangalore-1
6. Personal Asst. to the Director MGNREGS RD&PR Department
7. Chief (Finance and Account) Directorate of MGNREGS, Bangalore
8. Joint Directors MGNREGS (I, II, III) Directorate of MGNREGS, Bangalore
9. CEO, Zilla Panchayat, Bangalore (Rural)
10. EO Taluk, Panchayat, Nelamangala.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಲಿಗಾಗಿ ಸಾಮಾಗ್ರಿಗಳನ್ನು ಸಂಗ್ರಹಣೆ ಮಾಡಿ ಉಪಯೋಗಿಸಿಕೊಳ್ಳಲು ಮತ್ತು ಸಾಮಾಗ್ರಿಗಳ ಬಾಬ್ತಿನ ಹಣವನ್ನು ಪಾವತಿ ಮಾಡಲು ಅನುಸರಿಸಬೇಕಾದ ವಿಧಿ ವಿಧಾನಗಳು

ಓದಲಾಗಿದೆ: 1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಜೆ-11060/3/2009 -ಎಂಜಿಎನ್‌ಆರ್‌ಇಜಿಎ ದಿನಾಂಕ 29-11-2010

2. ಸರ್ಕಾರದ ಪತ್ರದ ಸಂಖ್ಯೆ : ಗ್ರಾಅಪ 122 ಉಖಾಯೋ 2008 ದಿನಾಂಕ 17-12-2009

* * *

# ಪ್ರಸ್ತಾವನೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಪ್ರಾರಂಭದ ಅಂದಿನಿಂದ ಬೇಡಿಕೆಗೆ ಅನುಗುಣವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಗಳ ಸಂಬಂಧ ಪಂಚಾಯತ್ ರಾಜ್ ಸಂಸ್ಥೆಗಳ ಅನುಷ್ಠಾನಾಧಿಕಾರಿಗಳು (Implementing Agencies) ಹಾಗೂ ಕ್ಷೇತ್ರ ಮಟ್ಟದ ವಿವಿಧ ಇಲಾಖೆಗಳ ಕಾರ್ಯನಿರ್ವಹಣಾ ಸಂಸ್ಥೆಗಳು (Executing Agencies) ಸಂದರ್ಭಕ್ಕೆ ಅನುಸಾರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರೀತ್ಯ ಅನುಸರಿಸಿ ಸಾಮಾಗ್ರಿಗಳನ್ನು ಸಂಗ್ರಹಣೆ ಮಾಡಿ ಕಾಮಗಾರಿಗಳ ಅನುಷ್ಠಾನಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಉಲ್ಲೇಖ (2) ರಲ್ಲಿ ಸಾಮಾಗ್ರಿಗಳ ಬಿಲ್ಲುಗಳ ಪಾವತಿಗಾಗಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಅಥವಾ ಕಾರ್ಯನಿರ್ವಹಣಾ ಏಜೆನ್ಸಿಗಳು ಸಾಮಾಗ್ರಿಗಳ ಬಿಲ್ಲುಗಳನ್ನು ಮೇಲು ರುಜುವುಗಾಗಿ ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿ ನಂತರ ಸಾಮಾಗ್ರಿಗಳ ಬಿಲ್ಲುಗಳನ್ನು ಪಾವತಿ ಮಾಡುತ್ತಿರುವುದು ಈಗ ಚಾಲ್ತಿಯಲ್ಲಿರುವ ಪದ್ಧತಿಯಾಗಿರುತ್ತದೆ. ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಹಾಗೂ ಸಾಮಾಗ್ರಿಗಳ ಬಿಲ್ಲುಗಳಲ್ಲಿ ಆಗುವ ವಿಳಂಬವನ್ನು ತಪ್ಪಿಸುವ ಸಲುವಾಗಿ ಬಿಲ್ಲುಗಳನ್ನು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮೇಲು ರುಜುವಿಗಾಗಿ ಕಳುಹಿಸದೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು / ಕಾರ್ಯನಿರ್ವಹಣಾ ಏಜೆನ್ಸಿಗಳು ಸಾಮಾಗ್ರಿಗಳ ಬಾಬ್ತಿನ ಹಣವನ್ನು K.T.P.P Rules 2000 ನ್ನು ಕಟ್ಟುನಿಟ್ಟಾಗಿ ಪಾಲಿಸಿ ಪಾವತಿಗೆ ಕ್ರಮಕೈಗೊಳ್ಳುವಂತೆ ಆದೇಶಿಸಲು ತೀರ್ಮಾನಿಸಿದೆ. ಸಾಮಾಗ್ರಿಗಳನ್ನು ಕಾಮಾಗಿರಿಗಳ ಅನುಷ್ಠಾನಕ್ಕೆ ಪಡೆಯುವ ಸಂಬಂಧ ಕೇಂದ್ರ ಸರ್ಕಾರವು ಉಲ್ಲೇಖ (1) ರಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಮತ್ತು ನಿಬಂಧನೆಗಳನ್ನು ಅನುಷ್ಠಾನಕ್ಕೆ ಅನ್ವಯಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ತಿಳಿಸಿರುತ್ತದೆ. ಸದರಿ ಪ್ರತಿಯನ್ನು ಈ ಆದೇಶದೊಂದಿಗೆ ಅದರಂತೆಯೆ ಅನುಸರಿಸಿ ಕ್ರಮಕೈಗೊಳ್ಳಲು ಲಗತ್ತಿಸಿದೆ. ಮುಂದುವರೆದು ಸಾಮಾಗ್ರಿ ಬಿಲ್ಲುಗಳ ಬಾಬ್ತಿನ ಹಣವನ್ನು ಯಾವ ಅಧಿಕಾರಿಗಳು ಪಾವತಿ ಮಾಡಬೇಕು ಎಂಬುದರ ಬಗ್ಗೆ ಹೊರಡಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ :02 :ಉಖಾಯೋ2008 ಬೆಂಗಳೂರು ದಿನಾಂಕ : 08-07-2011**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಕೇಂದ್ರ ಪುರಸ್ಕೃತ ಯೋಜನೆಯಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನಕ್ಕೆ K.T.P.P Rules 2000 ನ್ನು ಕಟ್ಟುನಿಟ್ಟಾಗಿ ಅನುಸರಿಸಿ ಸಾಮಾಗ್ರಿಗಳನ್ನು ಖರೀದಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಸಕ್ಷಮ ಅಧಿಕಾರಿಗಳಿಂದ ಪಾವತಿಗೆ ಕ್ರಮಕೈಗೊಳ್ಳಲು ಆದೇಶಿಸಿದೆ. ಸಾಮಾಗ್ರಿ ಬಿಲ್ಲುಗಳನ್ನು ಯಾವ ಹಂತದಲ್ಲಿ ಯಾವ ಅಧಿಕಾರಿಗಳು ಪಾವತಿ ಮಾಡಬೇಕೆಂಬುದನ್ನು ಈ ಕೆಳಕಂಡಂತೆ ನಿರ್ದಿಷ್ಟಪಡಿಸಿದೆ.

| ಕ್ರಮ ಸಂ. | ಅನುಷ್ಠಾನಾ ಸಂಸ್ಥೆಯ ಹೆಸರು (Implementing Agencies) | ಕಾಮಗಾರಿಯನ್ನು ನಿರ್ವಹಿಸಿ ಬಿಲ್ಲುಗಳನ್ನು ಪಾವತಿಸುವ ಕಾರ್ಯನಿರ್ವಹಣಾ ಏಜೆನ್ಸಿಯ ಹೆಸರು (Executing Agencies) |
|---|---|---|
| 1 | ಜಿಲ್ಲಾ ಪಂಚಾಯಿತಿ | ಜಿಲ್ಲಾ ಪಂಚಾಯತ್ ಅಥವಾ ಕ್ಷೇತ್ರ ಮಟ್ಟದ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅನುಷ್ಠನಾಧಿಕಾರಿಗಳು |
| 2 | ತಾಲ್ಲೂಕು ಪಂಚಾಯಿತಿ | ತಾಲ್ಲೂಕು ಪಂಚಾಯತ್ ಅಥವಾ ಕ್ಷೇತ್ರ ಮಟ್ಟದ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅನುಷ್ಠನಾಧಿಕಾರಿಗಳು |
| 3 | ಗ್ರಾಮ ಪಂಚಾಯಿತಿ | ಗ್ರಾಮ ಪಂಚಾಯತ್ ಅಥವಾ ಕ್ಷೇತ್ರ ಮಟ್ಟದ ವಿವಿಧ ಇಲಾಖೆಗಳ ಅನುಷ್ಠನಾಧಿಕಾರಿಗಳು |

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಗ್ರಾಮ ಪಂಚಾಯಿತಿಯು ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಒಂದಕ್ಕಿಂತ ಹೆಚ್ಚಿನ ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯಿತಿಯು ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಒಂದಕ್ಕಿಂತ ಹೆಚ್ಚಿನ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳಿಗೆ ಜಿಲ್ಲಾ ಪಂಚಾಯಿತಿಯು ಅನುಷ್ಠಾನ ಸಂಸ್ಥೆಯಾಗಿರುತ್ತದೆ ಸಾಮಾಗ್ರಿಗಳನ್ನು ಕಾಮಗಾರಿಗಳಿಗೆ ಖರೀದಿಸುವ ಮುನ್ನ ಸಂಬಂಧಪಟ್ಟ ಕಾರ್ಯನಿರ್ವಹಣಾ ಏಜೆನ್ಸಿಗಳು ತಮಗೆ ಸಂಬಂಧಿಸಿದ ಅನುಷ್ಠಾನ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ ಸಮನ್ವಯ ಸಾಧಿಸಿ ಕ್ರಮಕೈಗೊಳ್ಳತಕ್ಕದ್ದು. ಕಾಮಗಾರಿಗಳು ಪೂರ್ಣಗೊಂಡ ನಂತರ ಸಂಬಂಧಪಟ್ಟ ಕಾರ್ಯನಿರ್ವಹಣಾ ಏಜೆನ್ಸಿಗಳು ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ಪೂರ್ಣ ಮಾಹಿತಿಯನ್ನು (ಸಾಮಾಗ್ರಿ ಬಿಲ್ಲುಗಳನ್ನು ಪಾವತಿಸಿದ ವಿವರ, ಕುಶಲ ಕಾರ್ಮಿಕರು ಮತ್ತು ಅರೆಕುಶಲ ಕಾರ್ಮಿಕರನ್ನು ಕಾಮಗಾರಿಗಳಲ್ಲಿ ತೊಡಗಿಸಿದ್ದು. ಅವರುಗಳಿಗೆ ಪಾವತಿಸಿದ ವಿವರ ಮತ್ತು ಕೂಲಿಕಾರ್ಮಿಕರಿಗೆ ಕೆಲಸ ನಿರ್ವಹಿಸುವುದಕ್ಕಾಗಿ ನೀಡುವ ಸಲಕರಣೆಗಳ ಬಾಬ್ತಿನ ಹಣವನ್ನು ಪಾವತಿಸಿದ ವಿವರ ಇತ್ಯಾದಿ) ಎಂಐಎಸ್‌ನಲ್ಲಿ ದಾಖಲಿಸತಕ್ಕದ್ದು, ಇದರೊಂದಿಗೆ ಕಾಮಗಾರಿಗಳ ಸಂಬಂಧ ಸಾಮಾಗ್ರಿಗಳನ್ನು ಖರೀದಿಸುವಲ್ಲಿ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿದ ಪತ್ರದ ಪ್ರತಿಯನ್ನು ಲಗತ್ತಿಸಿ ಅದರಂತೆ ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 238ರ ಪ್ರಕಾರ ಕ್ರಮ ಜರುಗಿಸಲು ಆದೇಶಿಸಿದೆ.

ಅನುಷ್ಠಾನ ಏಜೆನ್ಸಿಗಳು (Implementing Agencies) ಕಾಮಗಾರಿಗಳ ಅನುಷ್ಠಾನದ ಸಂಬಂಧ ಕಾರ್ಯನಿರ್ವಹಣಾ ಏಜೆನ್ಸಿಗಳಿಗೆ (Executing Agencies) ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು. ಅನುದಾನವನ್ನು ಪಡೆದ ಕಾರ್ಯನಿರ್ವಹಣಾ ಏಜೆನ್ಸಿಗಳು ಅನುಷ್ಠಾನ ಸಂಸ್ಥೆಗಳಿಂದ ಸಾಮಾಗ್ರಿಗಳ ಖರೀದಿಗೆ ಅನುಮೋದನೆ ಪಡೆದು ನಂತರ ಸಾಮಾಗ್ರಿ ಖರೀದಿಗೆ ಕ್ರಮ ಜರುಗಿಸುವುದು. ಕಾಮಗಾರಿಗಲ ಸಂಬಂಧ ಸಾಮಾಗ್ರಿಗಳಿಗೆ ವೆಚ್ಚ ಭರಿಸಿರುವುದಕ್ಕೆ ದಾಖಲಾತಿಗಳನ್ನು ನಿರ್ವಹಣೆ ಮಾಡತಕ್ಕದ್ದು. ಮಾಹಿತಿಯನ್ನು ಲೆಕ್ಕಪರಿಶೋಧನೆಗೆ (Audit) ಮತ್ತು ಅನುಷ್ಠಾನ ಏಜೆನ್ಸಿಗಳಿಗೆ ಕಡ್ಡಾಯವಾಗಿ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪಿ.ಶಿವಶಂಕರ)**

ನಿರ್ದೇಶಕರು,
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1 ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ ಧಾರವಾಡ
2 ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು

3 ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

4 ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

ಪ್ರತಿಯನ್ನು:

1 ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳ, ವಿಧಾನಸೌಧ, ಬೆಂಗಳೂರು

2 ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

3 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

4 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

5 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಪ್ತ ಕಾರ್ಯದರ್ಶಿಗಳಿಗೆ ಬಹುಮಹಡಿ ಕಟ್ಟಡ ಬೆಂಗಳೂರು

**No.J-11060/3/2009-MGNREGA**
**Government of India**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhawan, New Delhi-110114
29th November 2010

**Sub : Procurement of material/items under Mahatma Gandhi NREG Act**

* * *

1. The Objective of the Mahatma Gandhi National Rural Employment Gurarantee Act is to enhance livelihood security in rural areas by providing at least 100 days of guaranteed wage employment in a financial year to every household whose adult members volunteer to do unskilledmanual work. Schedule I of the Act indicates the kinds of works that may be taken up to achieve the given objective. As per Para 2 of base of the rural poor shall be an important objective of the scheme.

2. For executing permissible works the implementing agencies procure materials as per the mechanism formulated by the state Governments. In order to ensure that procurement of material under the schemes are procured in an efficient and prudent manner, the following principles may be kept in view :-

   a) Every authority delegated with the financial powers of procuring in goods in pubic interest shall have the responsibility and accountability to bring efficiency, economy, transparency in matters relating to public procurement and for fair and equitable treatment of suppliers and promotion competition in public procurement.

   b) The procedure to be followed in making public procurement must conform to the following yar sticks:

      1. The specifications in terms of quality, type etc. as also quantity of goods to be procured, should be clearly spelt out keeping in view the specific needs of the procuring organizations. The specification so worked out should meet the basic needs of the implementing agencies without including super fluous and non essential features which may result in unwanted expenditure. Care should also be taken to avoid purchasing quantities in excess of requirement to avoid inventory carrying costs.

      2. Offers should be invited following a fair, transparent and reasonable procedure:

      3. The implementing agency authority should be satisfied that the selected offer adequately meets the requirements in all respects:

      4 The implementing agency should satisfy itself that the price of the selected offer is reasonable and consistent with the quality required.

5 At each stage of procurement the concerned implementing agency must place on record, in precise terms, the considerations which weighed with it while taking the procurement decision.

3 The items/material proposed to be procured should strictly be for the permissible works under the Mahatma Gandhi NREG Act.

4 All procurement made should be posted in the MIS for the monitoring. Quantity pro cured, total amount spent, the scheme for which the material procured, date of delivery of material etc. should invariably be indicated.

5 While procuring material /items, principles indicated in the General Financial Rules may scrupu lously be followed and all related records kept meticulously for scrutiny by any authority including public.

6 State Governments are directed to note the above for strict compliance This has the approval of AS & FA (Rural Development)

**(J.S.Audhkhasi)**
Under Secretary to the Government of India
Tele : 011-23381709

1. States/UTs Principal Secretary (RD)
2. PS to MRD
3. PS to Secretary (RD)
4. NIC with the request to post it on MGNREGA website.

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :189 :ಉಖಾಯೋ:2011 ದಿನಾಂಕ : 14-07-2011

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

2. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಡಿ ರಾಜ್ಯದ ಗ್ರಾಮಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರಿಗೆ ಗಣಕ ಯಂತ್ರ ನಿರ್ವಾಹಕರ ಮಾಸಿಕ ಕೂಲಿ ವೇತನವನ್ನು ಪರಿಷ್ಕರಿಸುವ ಕುರಿತು

ಉಲ್ಲೇಖ: ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ ಕಾಇ/152/ ಎಲ್ ಡಬ್ಲ್ಯುಎ2008 ಬೆಂಗಳೂರು ದಿನಾಂಕ 21-02-2011

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮಪಂಚಾಯಿತಿಗಳಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಆಡಳಿತ ಸಹಾಯಕರಾಗಿ / ಗಣಕಯಂತ್ರ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಪರಿಸ್ಥಿತಿಯನ್ನು ಪರಿಗಣಿಸಿ ಸದರಿಯವರ ಮಾಸಿಕ ಕನಿಷ್ಠ ಕೂಲಿ ವೇತನವನ್ನು ಹೆಚ್ಚಿಸುವುದು ಅವಶ್ಯಕವಾಗಿದೆ ಎಂದು ಸರ್ಕಾರವು ಅಭಿಪ್ರಾಯ ಪಟ್ಟಿರುತ್ತದೆ. ಕಾರ್ಮಿಕ ಇಲಾಖೆಯು ಉಲ್ಲೇಖಿತ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯಿತಿ ಸಂಸ್ಥೆ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಈಗ ಕನಿಷ್ಠ ವೇತನವನ್ನು ನಿಗಧಿಪಡಿಸಿ ಆದೇಶಿಸಿರುತ್ತದೆ. ಸದರಿ ಅಧಿಸೂಚನೆಯ ಪ್ರಕಾರ ಗ್ರಾಮ ಪಂಚಾಯಿತಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರಾಗಿ / ಗಣಕಯಂತ್ರ ನಿರ್ವಾಹಕರಿಗೆ ಕನಿಷ್ಠ ಮಾಸಿಕ ಕೂಲಿ ವೇತನ ರೂ.4919.20/- ವನ್ನು ಪಾವತಿಸಬೇಕಾಗುತ್ತದೆ. ಆದುದರಿಂದ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ ಯೋಜನೆಯಡಿ ಗ್ರಾಮಪಂಚಾಯಿತಿಗಳಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರಿಗೆ ಕನಿಷ್ಠ ಮಾಸಿಕ ಕೂಲಿ ವೇತನ ರೂ.4919.20/- ನ್ನು ದಿನಾಂಕ 01-04-2011 ರಿಂದ ಅನ್ವಯವಾಗುವಂತೆ ಪಾವತಿಸಲು ಕ್ರಮತೆಗೆದುಕೊಳ್ಳುವಂತೆ ಈ ಮೂಲಕ ಆದೇಶಿಸಿದೆ.

ಪ್ರತಿ ವರ್ಷ ತುಟ್ಟಿಭತ್ಯೆಯನ್ನು ಗ್ರಾಹಕರ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಪ್ರತಿ ಅಂಶಕ್ಕೆ ದಿನ ಒಂದಕ್ಕೆ 4 ಪೈಸೆಯಂತೆ ತುಟ್ಟಿಭತ್ಯೆಯನ್ನು

ಲೆಕ್ಕಾಚಾರ ಮಾಡಿ ಸದರಿ ಸಿಬ್ಬಂದಿಗಳಿಗೆ ಪಾವತಿಸಬೇಕಾಗುತ್ತದೆ. ಈ ರೀತಿ ಪ್ರತಿ ವರ್ಷ ಹೆಚ್ಚುವರಿಯಾಗುವ ಅಥವಾ ಕಡಿಮೆಯಾಗುವ ತುಟ್ಟಿಭತ್ಯೆಯ ಗ್ರಾಹಕರ ಬೆಲೆ ಸೂಚ್ಯಾಂಕಗಳ ಸಂಖ್ಯೆಯ ಮೇಲೆ ಅವಲಂಬಿಸಿರುತ್ತದೆ. ತುಟ್ಟಿಭತ್ಯೆಯನ್ನು ಆಯಾ ವರ್ಷದಲ್ಲಿ ಹೆಚ್ಚಿಸುವ ಮೊದಲು ಜಿಲ್ಲಾ ಮಟ್ಟದ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಮುಂದಿನ ಕ್ರಮಕೈಗೊಂಡು ಪಾವತಿಸಲು ಸೂಚಿಸಿದೆ. ಸದರಿ ಸಿಬ್ಬಂದಿಗಳ ಸೇವೆಯನ್ನು ಕೆ.ಟಿ.ಪಿ.ಪಿ ನಿಯಮಗಳ ಅನುಸಾರ ಅನುಸರಿಸಿ ಗ್ರಾಮ ಪಂಚಾಯಿತಿಗಳಿಗೆ ಪಡೆದಿದ್ದಲ್ಲಿ ಮಾತ್ರ ಈ ಪರಿಷ್ಕೃತ ಕನಿಷ್ಠ ಮಾಸಿಕ ಕೂಲಿ ವೇತನವನ್ನು ಪಾವತಿಸಬಹುದಾಗಿರುತ್ತದೆ. ಸದರಿ ಸಿಬ್ಬಂದಿಗಳಿಗೆ ತಗಲುವ ಕನಿಷ್ಠ ಮಾಸಿಕ ಕೂಲಿವೇತನದ ವೆಚ್ಚ ಹಾಗೂ ಸಿಬ್ಬಂದಿಗಳಿಗಾಗಿ ಏಜೆನ್ಸಿಗಳು ಮುರಿದುಕೊಳ್ಳುವ ಸೇವಾ ತೆರಿಗೆ, ಇಎಸ್ಐ, ಪಿಫ್ ಇತ್ಯಾದಿಗಳ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇಕಡಾ 6 ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸತಕ್ಕದ್ದು.

ತಮ್ಮ ವಿಶ್ವಾಸಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ**
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂರವಾಣಿ/ಫ್ಯಾಕ್ಸ್ : 080-22372738 E-mail: nregs-ka@nic.in

ಸಂ: ಗ್ರಾಅಪ: 204 : ಉಖಾಯೋ: 2011 ದಿನಾಂಕ : 22–08–2011

## ಸುತ್ತೋಲೆ

ವಿಷಯ: ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ನಿರ್ವಹಿಸಬೇಕಾದ ದಾಖಲೆಗಳ ಹಾಗೂ ಕಾಮಗಾರಿ ಮುಕ್ತಾಯ ಪ್ರಮಾಣ ಕುರಿತು

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ/ಗೊಳಿಸಲಾಗುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಮರ್ಪಕವಾಗಿ ದಾಖಲಾತಿಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಈಗಾಗಲೇ ಹಲವಾರು ಸುತ್ತೋಲೆ / ಆದೇಶಗಳನ್ನು ಸರಕಾರದಿಂದ ಹೊರಡಿಸಲಾಗಿರುತ್ತದೆ. ಇದರೊಂದಿಗೆ ಈ ಕೆಳಗಿನಂತೆ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ.

1. ಪ್ರತಿ ಕಾಮಗಾರಿಗೆ ಒಂದು ಪ್ರತ್ಯೇಕ ಕಡತವನ್ನು ಕಡ್ಡಾಯವಾಗಿ ನಿರ್ವಹಿಸುವುದು.
2. ಸದರಿ ಕಡತದಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ ದಾಖಲಾತಿಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.
3. ಕಾಮಗಾರಿಯ ಛಾಯಾಚಿತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಿಗದಿತ ನಮೂನೆಯಲ್ಲಿ ನಿರ್ವಹಿಸುವುದು (ಲಗತ್ತಿಸಿದೆ)
4. ಎಂಐಎಸ್‌ನಲ್ಲಿ ಅವಲೋಕಿಸಿದಾಗ ಯೋಜನೆಯ ಪ್ರಾರಂಭದಿಂದ ಹಲವಾರು ಕಾಮಗಾರಿಗಳು ಅಪೂರ್ಣಗೊಂಡಿರುವುದಾಗಿ ವರದಿ ಕರಿಸಿದ್ದು ಅಥವಾ ಪೂರ್ಣಗೊಂಡ ಕಾಮಗಾರಿಯ ಮುಕ್ತಾಯ ಪ್ರಮಾಣ ಪತ್ರವಿಲ್ಲದೇ ಹಾಗೆಯೇ ಮುಂದುವರೆದ ಕಾಮಗಾರಿಯಾಗಿ ಇದುವರೆವಿಗೂ ತೋರಿಸಲಾಗುತ್ತಿದೆ. ಕೇಂದ್ರ ಸರ್ಕಾರವು ಭಾರೀ ಪ್ರಮಾಣದಲ್ಲಿ ಕಾಮಗಾರಿಗಳು ಈ ರೀತಿ ಮುಂದುವರೆದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. ಆದ್ದರಿಂದ, ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಂಬಂಧ ತಮ್ಮ ವೈಯಕ್ತಿಕ ಗಮನ ಹರಿಸಿ ಪೂರ್ಣಗೊಂಡ ಕಾಮಗಾರಿಗಳಿಗೆ ಅನುಷ್ಠಾನಾಧಿಕಾರಿಗಳಿಂದ ನಿಗದಿತ ಪ್ರಪತ್ರ ಪಿಡಬ್ಲ್ಯೂಜಿ 46ರಲ್ಲಿ (ಲಗತ್ತಿಸಿದೆ) ಮಾಹಿತಿಯೊಂದಿಗೆ ಕಡ್ಡಾಯವಾಗಿ ಎಂಐಎಸ್‌ನಲ್ಲಿ ದಾಖಲಿಸುವುದು.

**(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಂದ ಟಿಪ್ಪಣಿ ಅನುಮೋದಿಸಲ್ಪಟ್ಟಿದೆ)**

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು

3. ರೇಷ್ಮೆ ಅಭಿವೃದ್ಧಿ ಆಯುಕ್ತರು, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
5. ಆಯುಕ್ತರು, ಪಶುಸಂಗೋಪನಾ ಇಲಾಖೆ, ಬೆಂಗಳೂರು
6. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
7. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
8. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಪೂಡಿಯಂ ಬ್ಲಾಕ್, ಬೆಂಗಳೂರು
9. ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
10. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು
11. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

ಮಾಹಿತಿಗಾಗಿ :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಕೃಷಿ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಕಾರ್ಯದರ್ಶಿಗಳು (ಸಣ್ಣ ನೀರಾವರಿ), ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು
7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು.
8. ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ/ಬೆಳಗಾಂ/ಮೈಸೂರು/ಬೆಂಗಳೂರು ವಿಭಾಗ
9. ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ರಾಜ್ಯದ ಎಲ್ಲಾ ಜಿಲ್ಲೆಗಳು
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
11. ಮುಖ್ಯಸ್ಥರು (ಹ & ಲೆ), ಎಂಜಿಎನ್‌ಆರ್‌ಇಜಿಎ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
12. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯದ ಅಧಿಕಾರಿಗಳು/ಸಿಬ್ಬಂದಿಗಳು.

# ಕಡತದ ಒಳಗೆ ಲಗತ್ತಿಸಬೇಕಾದ ದಾಖಲೆಗಳು

| ಕ್ರ.ಸಂ. | ವಿವರ | ಪುಟಸಂಖ್ಯೆ |
|---|---|---|
| 1. | ನಮೂನೆ – 6 ಕೆಲಸಕ್ಕಾಗಿ ಅರ್ಜಿ | |
| 2. | ನಮೂನೆ – 8 ಕೆಲಸಕ್ಕಾಗಿ ಹಾಜರಾಗಲು ತಿಳಿಸುವ ನೋಟೀಸ್ | |
| 3. | ನಮೂನೆ – 9 ಕೆಲಸಕ್ಕಾಗಿ ಹಾಜರಾಗಲು ತಿಳಿಸುವ ಸಾರ್ವಜನಿಕ ನೋಟೀಸ್ | |
| 4. | ಕಾಮಗಾರಿಯ ಬೇಡಿಕೆ ಅರ್ಜಿ | |
| 5. | ಕಾಮಗಾರಿ ಅಂದಾಜು ಪಟ್ಟಿ | |
| 6. | ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿ ಪತ್ರ | |
| 7. | ಕಾಮಗಾರಿ ಪ್ರಾರಂಭದ ಆದೇಶ ಪತ್ರ (ಕಾರ್ಯಾದೇಶ) | |
| 8. | ಎನ್.ಎಂ.ಆರ್. ಹಾಜರಾತಿ ಪಟ್ಟಿ | |
| 9. | ಎಂ.ಬಿ. ಪುಸ್ತಕದ ನಕಲು ಪ್ರತಿ | |
| 10. | ಎಂ.ಐ.ಎಸ್. ಮುದ್ರಿತ ಎನ್.ಎಂ.ಆರ್. ಪ್ರತಿ | |
| 11. | ಸಾಮಗ್ರಿ ವೆಚ್ಚದ ವೋಚರ್‌ಗಳು | |
| 12. | ಕೂಲಿ ಪ್ರತಿಯನ್ನು ಸಂಬಂಧಿಸಿದ ಬ್ಯಾಂಕ್/ಅಂಚೆ ಕಛೇರಿಗೆ ಸಲ್ಲಿಸಿದ ವಿವರ | |
| 13. | ಸಾಮಗ್ರಿ ವೆಚ್ಚದ ಹಣ ಪಾವತಿಯ ವಿವರಗಳು | |
| 14. | ಕಾಮಗಾರಿಯ ಮೂರು ಫೋಟೋ ಪ್ರತಿಗಳು (ಹಂತವಾರು) | |
| 15. | ಕಾಮಗಾರಿಯ ಪೂರ್ಣಗೊಂಡ ಬಗ್ಗೆ ಅನುಷ್ಠಾನ ಇಲಾಖೆಯಿಂದ ದೃಢೀಕರಣ ಪತ್ರ | |
| 16. | ಕಾಮಗಾರಿಗಳ ಸ್ಥಳಗಳಲ್ಲಿ ಹಾಕಿದ ನಾಮಫಲಕದ ವಿವರ (ಅಳತೆ 3x2.5) | |

# FORM P.W.G. 46.

(See paragraph 294)

Detailed Completion Report

**Mahtma Gandhi Rashtriya Grameen Udyog Khatri Yojane**

Taluka panchayat……………………Gram panchayat…………..

Name of Work……………………….

…………………………………………

…………………………………………

Amount of Estimate……………………

Expenditure…………………………

Difference……………………………

Percentage of Excess (if any)…………

Date of Commencement ………………

Date of Completion ……………………

---

No……………… dated………………… 20--

Forwarded to the Accountant General in Karnataka, for verification

Divisional Officer,

……………………………………………. Division

No …………………… Dated ………………….. 20--

Transmitted to the ………………… Engineer …………… duly verified

Accountant General.

---

Names of Engineers and Subordinates by whom the work was supervised, giving the dates of their several incumbencies, i.e., the dates of taking and making over charge in connection therewith.

| Name | Period of Incumbency | |
|---|---|---|
| | From | To |
| • Technical Officer(Officer who did Check measurement)<br>• Technical officer (Officer who recorded MB)<br>• Adhyaksha<br>• Panchayat Development officer | | |

Name of Work ............... .....................................

Fund, Department and Service Heads...MGNREGS for year.........................

Main and Sub-beads of Clas-:fication ...... MGNREGS for year ...... ...........

Reference to last progress rep.ort submitted.....................

Authority ..........................................................

| Item | Sub Heads of estimate (if any) | As estimated | | | | | As executed | | | | | Difference | | | | | Reference to paras overleaf explaining differences |
|---|---|---|---|---|---|---|---|---|---|---|---|---|---|---|---|---|---|
| | | Qty | Rate | | Amount | | Qty | Rate | | Amount | | Qty | Rate | | Amount | | |
| | | | Rs. | nP. | Rs. | nP. | | Rs. | n.P | Rs. | n.P | | Rs. | nP. | Rs. | nP | |
| | | | | | | | | | | | | | | | | | |

Note: - Excesses to be entered in red ink; and savings in black ink.

Date ......................... 20--

Technical Officer

Panchayat Development Oficer

_________ ಜಿಲ್ಲಾ ಪಂಚಾಯತ

_________ ತಾಲ್ಲೂಕು ಪಂಚಾಯತ್ _________ ಗ್ರಾಮ ಪಂಚಾಯ್ತಿ

ಸಾಲಿನ ಕಾಮಗಾರಿಗಳ ವಿವಿಧ ಹಂತದ ಛಾಯಾ ಚಿತ್ರಗಳು

1) ಯೋಜನ ಹೆಸರು: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

2) ಗ್ರಾಮದ ಹೆಸರು : _______________

3) ಕಾಮಗಾರಿಯ ಹೆಸರು : _______________

4) ಕಾಮಗಾರಿ ಕೋಡ್ ನಂಬರ : _______________

5) ಅಂದಾಜು ಮೊತ್ತ ರೂ. : _______________

6) ವಾಸ್ತವ ವೆಚ್ಚ ರೂ. : _______________

7) ಕಾಮಗಾರಿ ಪ್ರಾರಂಭಿಸಿದ ದಿನಾಂಕ : _______________

8) ಉತ್ಪನ್ನವಾದ ಮಾನವ ದಿನಗಳು : _______________

9) ಕಾಮಗಾರಿ ಪೂರ್ತಿಯಾದ ದಿನಾಂಕ : _______________

ಅನುಷ್ಠಾನ ಅಧಿಕಾರಿ

ಕಾರ್ಯದರ್ಶಿ
ಗ್ರಾಮ ಪಂಚಾಯತ್

ಅಧ್ಯಕ್ಷರು
ಗ್ರಾಮ ಪಂಚಾಯತ್

ಮೊದಲನೇ ಹಂತ(ಕಾಮಗಾರಿ ಪ್ರಾರಂಭಿಸುವ ಮೊದಲು)

ಎರಡನೇ ಹಂತ (ಕಾಮಗಾರಿ ಪ್ರಗತಿಯಲ್ಲಿದ್ದಾಗ)

ಮೂರನೇ ಹಂತ (ಕಾಮಗಾರಿ ಪೂರ್ಣಗೊಂಡ ನಂತರ)

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :130 : ಉಖಾಯೋ2010 ದಿನಾಂಕ : 30-08-2011

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತೆ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳ ಹಂತಗಳಲ್ಲಿ ಹಂತಗಳಲ್ಲಿ ಆಡಳಿತವನ್ನು ಸುವ್ಯವಸ್ಥೆಗೊಳಿಸಲು ಹೊರ ಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯುವ ಕುರಿತು

ಉಲ್ಲೇಖ: ಸರ್ಕಾರ ಆದೇಶ ಸಂ ಗ್ರಾಅಪ 130: ಉಖಾಯೋ 2007 ಬೆಂಗಳೂರು ದಿನಾಂಕ 05.6.2009

* * *

ಯೋಜನೆಯ ಅನುಷ್ಠಾನವನ್ನು ನಿರ್ವಹಿಸಲು ಸಂಬಂಧ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ವಿವಿಧ ಹುದ್ದೆಗಳ ಸಿಬ್ಬಂದಿಗಳ ಸೇವೆಗಳನ್ನು ಹೊರಗುತ್ತಿಗೆಯ ಆಧಾರದ ಪಡೆಯಲು ಆದೇಶಿಸಿದೆ. ಇತ್ತೀಚೆಗೆ ಬಹುತೇಕ ಜಿಲ್ಲಾ ಪಂಚಾಯತ್‌ಗಳಲ್ಲಿ ಸಿಬ್ಬಂದಿಗಳನ್ನು ಸ್ಥಾನ ಪಲ್ಲಟ ಮಾಡುವುದರ ವಿಚಾರ / ಸಂಗತಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಒಂದು ಕ್ರಮದಿಂದ ಯೋಜನೆಯ ಅನುಷ್ಠಾನದ ನಿರಂತರ ಸಂಪರ್ಕದ ಮಾಹಿತಿಯು ನಿಲುಗಡೆ ಆಗುತ್ತದೆ ಹಾಗೂ ಯೋಜನೆಯ ಅನುಷ್ಠಾನಕ್ಕೆ ದಕ್ಕೆ ಉಂಟಾಗುತ್ತದೆ. ಇದಲ್ಲದೇ, ಹೊರಗುತ್ತಿಗೆಯ ಆಧಾರದ ಮೇಲೆ ಯೋಜನೆಯಡಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ MIS ಸಂಯೋಜಕರು ಸೇರಿದಂತೆ ಮಾಸಿಕ ಸಂಭಾವನೆಯನ್ನು ಏಜೆನ್ಸಿಗಳು ಸಕಾಲದಲ್ಲಿ ಪಾವತಿಸುತ್ತಿಲ್ಲವೆಂದು ದೂರುಗಳು ಸರ್ಕಾರಕ್ಕೆ ಬರುತ್ತಿದೆ. ಇದರ ತತ್ಫಲಿತ, ಯೋಜನೆಯ ಅನುಷ್ಠಾನದಲ್ಲಿ ದುಷ್ಪರಿಣಾಮ ಬೀರಿ, ಯೋಜನೆಯ ಪ್ರಗತಿಯಲ್ಲಿ ಕುಂಠಿತವಾಗಲು ಕಾರಣವಾಗುತ್ತದೆ. ಆದುದರಿಂದ ಏಜೆನ್ಸಿಗಳು ಜಿಲ್ಲಾ ಪಂಚಾಯತ್ ಇವರೊಡನೆ ಒಪ್ಪಂದ ಮಾಡಿಕೊಂಡಿರುವ ಪ್ರಕಾರ, ಸಂಭಾವನೆಯನ್ನು ಸಿಬ್ಬಂದಿಗಳಿಗೆ ಸಕಾಲದಲ್ಲಿ ಪಾವತಿಸುವ ಷರತ್ತುಗಳು ಮತ್ತು ನಿಯಮಗಳಿಗೆ ಬದ್ಧರಾಗಲು ಸೂಚಿಸುವುದು ಮತ್ತು ಯಾವುದೇ ಸಂಧರ್ಭದಲ್ಲಿ ಹೊರಗುತ್ತಿಗೆಯ ಸಿಬ್ಬಂದಿಗಳಿಗೆ, ಸಕಾಲದಲ್ಲಿ ಸಂಭಾವನೆಯನ್ನು ಏಜೆನ್ಸಿಗಳು ಪಾವತಿಸುವುದನ್ನು ನಿಗಾವಹಿಸಿ ಖಚಿತ ಪಡಿಸಿಕೊಳ್ಳುವ ಜವಾಬ್ದಾರಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳದಾಗಿರುತ್ತದೆ. ಇದರ ಜೊತೆಗೆ, ಹೊರ ಗುತ್ತಿಗೆಯ ಸಿಬ್ಬಂದಿಗಳಿಗೆ ಸರ್ಕಾರಿ ಸಿಬ್ಬಂದಿಗಳಲ್ಲ ಎಂಬುದರ ಅಂಶವನ್ನು ಮನದಟ್ಟುಮಾಡುವುದು. ಆದುದರಿಂದ ತಾವುಗಳು ಯೋಜನೆಯನ್ನು ಸಮರ್ಪಕವಾಗಿ, ಸುಲಲಿತವಾಗಿ ಮತ್ತು ಪಾರದರ್ಶಕತೆಯಿಂದ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕಾಪಾಡಿಕೊಂಡು ನಿರ್ವಹಿಸಲು ಮತ್ತು ಹೊರ ಗುತ್ತಿಗೆಯ ಸಿಬ್ಬಂದಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ಯೋಜನೆಗೆ ಸಮರ್ಪಕವಾಗಿ ಬಳಸಿಕೊಳ್ಳಲು ಈ ಮೂಲಕ ತಿಳಿಸಿದೆ. ಸಿಬ್ಬಂದಿಗಳಿಗೆ ಪ್ರತಿ ಮಾಹೆಯ 10 ನೇ ತಾರೀಖಿನೊಳಗೆ ಸಂಭಾವನೆಯನ್ನು ಪಾವತಿಸಿರುವುದನ್ನು ಖಚಿತ ಪಡಿಸಿಕೊಳ್ಳಲು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಎಂದು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ್)**
ನಿರ್ದೇಶಕರು,
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## Details of the NMR s where date of payment entered in MIS but not paid actually for the financial year 2010-11

| Sl No | District | Taluk | GP | Work Code | NMR Number | Date of payment entered in the MIS but not paid | Actual date to be entered | Amount to be paid payment |
|---|---|---|---|---|---|---|---|---|
| | | | | | | | | |

# ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :159 :ಉಖಾಯೋ2011 ದಿನಾಂಕ : 30-08-2011

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ತಾಂತ್ರಿಕ ಇಲಾಖೆಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು, ಅನುಷ್ಠಾನಾಧಿಕಾರಿಗಳಿಗೆ ನೇರವಾಗಿ ಅನುದಾನ ಬಿಡುಗಡೆಗೊಳಿಸಲು ಪ್ರಸ್ತಾವನೆಗಳನ್ನು ಕಳುಹಿಸುತ್ತಿರುವ ಬಗ್ಗೆ.

ಉಲ್ಲೇಖ: 1 ಸರ್ಕಾರದ ಆದೇಶದ ಪತ್ರದ ಸಂಖ್ಯೆ ಗ್ರಾಅಪ : 167 : ಉಖಾಯೋ 2010 ದಿನಾಂಕ : 19-02-2011 10.03.2011,21.05.2011,08.07.2011 ಮತ್ತು 21.07.2011

2. ಮಾನ್ಯ ಕಾರ್ಯದರ್ಶಿಗಳು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ಇವರ ಅರೆ ಸಕಾರಿ ಪತ್ರದ ಸಂಖ್ಯೆ: ಹೈಕಪ್ರಮಂ/ಗು/ಮಗಾರಾಗ್ರಾಉಖಾಯೋ/2011-12, ದಿನಾಂಕ 05.07.2011

* * *

ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳ ಅನುಷ್ಠಾನದ ಸಂಬಂಧ, ವಿವಿಧ ತಾಂತ್ರಿಕ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಗೆ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡಲು, ರಾಜ್ಯದ ಕೆಲವು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿ ಕೋರುತ್ತಿರುವುದು ಯೋಜನೆಯ ಮಾರ್ಗಸೂಚಿಗಳಿಗೆ ನಿಯಮಬಾಹಿರವಾಗಿರುತ್ತದೆ. ಈ ಸಂಬಂಧ ಸದರಿ ಯೋಜನೆಯಡಿ ಕೇವಲ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಮಾತ್ರ ಒಟ್ಟು 13 ಜಿಲ್ಲೆಗಳಲ್ಲಿ ಅಂದರೆ ಬಾಗಲಕೋಟೆ, ಬೆಳಗಾಂ, ಚಿತ್ರದುರ್ಗ, ಧಾರವಾಡ, ಹಾಸನ, ತುಮಕೂರು, ಉತ್ತರ ಕನ್ನಡ, ರಾಯಚೂರು, ಮಂಡ್ಯ, ಕೊಪ್ಪಳ,ಗುಲ್ಬರ್ಗ, ಗದಗ್ ಮತ್ತು ಹಾವೇರಿ ಇವುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಅನುದಾನವನ್ನು ನೇರವಾಗಿ ಸರ್ಕಾರದಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಲಿ ಅಥವಾ ತಾಲ್ಲೂಕು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಂಧರ್ಭಕ್ಕೆ ಅನುಸಾರ ಬಿಡುಗಡೆ ಮಾಡಲು ಉಲ್ಲೇಖಿತ ಪತ್ರಗಳ ಸರ್ಕಾರಿ ಆದೇಶಗಳಲ್ಲಿ ಕ್ರಮಕೈಗೊಂಡಿದೆ. ಸದರಿ ಇಲಾಖೆಗಳನ್ನು 13 ಜಿಲ್ಲೆಗಳಿಗೆ ಹೊರತು ಪಡಿಸಿ, ಬೇರೆ ಯಾವುದೇ ಜಿಲ್ಲೆಗಳ ಅನುಷ್ಠಾನ ಇಲಾಖೆಗಳನ್ನು ಕಾಮಗಾರಿಗಳ ಅನುಷ್ಠಾನ ಸಂಬಂಧ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿರುವುದಿಲ್ಲ. ಆದುದರಿಂದ ಎಂದಿನಂತೆ, ಯೋಜನೆಯ ಮಾರ್ಗ ಸೂಚಿಗಳನುಸಾರ, ಕಾಮಗಾರಿಗಳನ್ನು ಗ್ರಾಮ ಪಂಚಾಯತಿಯ ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು, ಆಯಾ ಗ್ರಾಮ ಪಂಚಾಯತ್‌ಗಳಿಂದ ಅನುದಾನವನ್ನು ಪಡೆದುಕೊಂಡು ಕಾಮಗಾರಿಗಳನ್ನು ನಿರ್ವಹಿಸಲು ಸೂಚಿಸಿದೆ. ಆದುದರಿಂದ, ಇನ್ನು ಮುಂದೆ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ 13 ಜಿಲ್ಲೆಗಳನ್ನು ಹೊರತುಪಡಿಸಿ, ಇತರೇ ಯಾವುದೇ ಜಿಲ್ಲೆಗಳ ತಾಂತ್ರಿಕ ಅನುಷ್ಠಾನ ಇಲಾಖೆಗಳ ಕಾಮಗಾರಿಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡುವಂತೆ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಬಾರದೆಂದು ಹಾಗೂ

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೂಡ ಅನುದಾನವನ್ನು ನೇರವಾಗಿ ಬಿಡುಗಡೆ ಮಾಡದಂತೆ ಕ್ರಮವಹಿಸಲು ಈ ಮೂಲಕ ಕೋರಲಾಗಿದೆ ಮತ್ತು ತಮ್ಮ ಹಂತದಲ್ಲಿಯೇ, ಯೋಜನೆಯ ಮಾರ್ಗಸೂಚಿಗಳನುಸಾರ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತಿಳಿಸಿದೆ.

ಅದೇ ರೀತಿ ಉಲ್ಲೇಖಿತ (2)ರ ಪತ್ರದಲ್ಲಿ ಮಾನ್ಯ ಕಾರ್ಯದರ್ಶಿಗಳು ಜಿಲ್ಲೆಗಳಿಗೆ ನೀಡಿದ ವಾರ್ಷಿಕ ಅನುದಾನ ಈಗಾಗಲೇ ಗ್ರಾಮ ಪಂಚಾಯಿತಿ ವಾರು ಅನುಮೋದಿಸಲಾಗಿದ್ದು, ಅದರಲ್ಲಿ ಜಲಾನಯನ ಅಂಶವನ್ನು ತುಂಡು ತುಂಡಾಗಿ ತೆಗೆದುಕೊಳ್ಳಲಾಗಿದೆ. ಎಂದು ತಿಳಿಸಿ ಜಲ ಹಾಗೂ ಮಣ್ಣು ಸಂರಕ್ಷಣೆಗೆ ಸಮಗ್ರ ಹಾಗೂ ಪರಿಮಾಮಕಾರಿ ಯೋಜನೆಯನ್ನು ಕೇವಲ ಮಳೆಯಾಶ್ರಿತ ಹಳ್ಳಿಗಳಲ್ಲಿ ಕೈಗೊಳ್ಳಲು ಕೋರಿರುತ್ತಾರೆ.

ಇದರ ಬಗ್ಗೆ ಸಹ, ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಾದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೆ ಕ್ರಮವಹಿಸಬೇಕಾಗಿರುತ್ತದೆ. ವಿಶೇಷ ಸಂದರ್ಭಗಳಲ್ಲಿ ಕ್ರಿಯಾ ಯೋಜನೆಯಲ್ಲಿ ಹೊಸ ಕಾಮಗಾರಿಗಳು ಸೇರಿಸಲು ಅವರಿಗೆ ಅಧಿಕಾರ ಇರುತ್ತದೆ. ಒಂದು ವೇಳೆ ಇದು ಸಾಧ್ಯವಾಗದೆ ಇದ್ದಲ್ಲಿ, ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯಾಚರಣೆ 2008 ರ ಕಂಡಿಕೆ 4.45 ರಲ್ಲಿ ತಿಳಿಸಿರುವಂತೆ ಮುಂದಿನ ಸಾಲಿನಲ್ಲಿ ಅಂದರೆ 2012-13 ಕ್ರಿಯಾಯೋಜನೆಯನ್ನು ಸಿದ್ದಪಡಿಸಲು ದಿನಾಂಕ 02-10-2011 ರಿಂದ ಗ್ರಾಮ ಸಭೆಗಳು ನಡೆಸಬೇಕಾಗಿದ್ದು ಇಂತಹ ಕಾಮಗಾರಿಗಳನ್ನು ಗ್ರಾಮ ಸಭೆ ಅನುಮೋದನೆ ಪಡೆದು ಕ್ರಿಯಾ ಯೋಜನೆಯಲ್ಲಿ ಸೇರಿಸಲು ಕ್ರಮವಹಿಸ ಬಹುದಾಗಿರುತ್ತದೆ.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :148 :ಉಖಾಯೋ2010 ದಿನಾಂಕ:2-09-2011

ಗೆ.

ಪೊಲೀಸ್ ಮಹಾ ನಿರ್ದೇಶಕರು ಹಾಗೂ
ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ
ನೃಪತುಂಗ ರಸ್ತೆ, ಬೆಂಗಳೂರು - 560 001

ಮಾನ್ಯರೇ,

ವಿಷಯ: ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಸಂಬಂಧ ನಡೆಯಲಾದ ಅವ್ಯವಹಾರ ಮತ್ತು ದುರುಪಯೋಗ ಪ್ರಕರಣಗಳಲ್ಲಿ ಅಧಿಕಾರಿಗಳು/ ಅಧಿಕಾರೇತರ ವರ್ಗದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುವ ಕುರಿತು.

* * *

ಕೇಂದ್ರ ಸರ್ಕಾರದ ಪ್ರಮುಖ ಯೋಜನೆಯಾದ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಒಂದು ಬೇಡಿಕೆ ಆಧಾರಿತ ಕಾರ್ಯಕ್ರಮವಾಗಿದ್ದು ಸದರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಂತಹಂತವಾಗಿ ಗ್ರಾಮೀಣ ಜನರ ಬೇಡಿಕೆಗೆ ಅನುಗುಣವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಉದ್ಯೋಗವನ್ನು ನೀಡಿ ಆಸ್ತಿಗಳನ್ನು ಸೃಜನೆ ಮಾಡಲಾಗುತ್ತಿದೆ. ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ಸಂದರ್ಭಗಳಲ್ಲಿ ತೀವ್ರತರವಾದ ದುರುಪಯೋಗ ಮತ್ತು ಅವ್ಯವಹಾರಗಳು ನಡೆದಿರುತ್ತವೆ. ಈ ದಿಸೆಯಲ್ಲಿ ಯೋಜನೆಯ ಅನುಷ್ಠಾನದ ಅವ್ಯವಹಾರಗಳಲ್ಲಿ ಭಾಗಿಗಳಾದ ಅಧಿಕಾರಿಗಳು /ಅಧಿಕಾರೇತರ ವರ್ಗದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗಿರುತ್ತದೆ. ಸದರಿ ವಿಷಯದ ಸಂಬಂಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆಗಳ ಜಿಲ್ಲಾವಾರು ವಿವರಗಳ ಪಟ್ಟಿಯನ್ನು ಇದರೊಂದಿಗೆ ತಮ್ಮ ಸಿದ್ದ ಗಮನಕ್ಕಾಗಿ ಹಾಗೂ ಮಾಹಿತಿಗಾಗಿ ಲಗತ್ತಿಸಿದೆ.

ಆದ ಪ್ರಯುಕ್ತ ತಮ್ಮ ನಿಯಂತ್ರಣದಲ್ಲಿ ಬರುವ ಎಲ್ಲಾ ಜಿಲ್ಲೆಗಳ ಅಧೀಕ್ಷಕ ಆರಕ್ಷಕ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಕ್ರಿಮಿನಲ್ ಮೊಕದ್ದಮೆಗಳ ಪ್ರಕರಣಗಳ ಪ್ರಗತಿಯನ್ನು ತಮ್ಮ ಮಾಸಿಕ ಕ್ರಿಮಿನಲ್‌ಮೊಕದ್ದಮೆಗಳ ಸಭೆಯಲ್ಲಿ ಪರಿಶೀಲಿಸಿ, ಸೂಕ್ತ ಕ್ರಮಕೈಗೊಳ್ಳಲು ಸೂಕ್ತವಾದ ನಿರ್ದೇಶನವನ್ನು ನೀಡುವಂತೆ ಈ ಮೂಲಕ ತಮ್ಮನ್ನು ಕೋರುತ್ತೇನೆ.

ತಮ್ಮ ವಿಶ್ವಾಸಿ

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಯಥಾ ಪ್ರತಿಯನ್ನು ಅಡಕದೊಂದಿಗೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

# ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :204:ಉಖಾಯೋ2011 ದಿನಾಂಕ:5-09-2011

## ಸುತ್ತೋಲೆ

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸಬೇಕಾದ ದಾಖಲೆಗಳ ಹಾಗೂ ಕಾಮಗಾರಿ ಮುಕ್ತಾಯ ಪ್ರಮಾಣ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆಯ ಪತ್ರದ ಸಂಖ್ಯೆ ಗ್ರಾಅಪ 204: ಉಖಾಯೋ2011 ದಿನಾಂಕ 22.8.2011

* * *

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ದಾಖಲಾತಿಗಳನ್ನು ಗ್ರಾಮ ಪಂಚಾಯತಿಗಳಲ್ಲಿ ಸಮರ್ಪಕವಾಗಿ ನಿರ್ವಹಿಸಲು ಹಾಗೂ ಪಾರದರ್ಶಕತೆಯನ್ನು ಕಾಪಾಡುವ ಸಲುವಾಗಿ ಉಲ್ಲೇಖಿತ ಸುತ್ತೋಲೆಯ ಪತ್ರದಲ್ಲಿ ವಿಶದವಾಗಿ ತಿಳಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿ ತಿಳಿಸಿರುವ ದಾಖಲಾತಿಗಳನ್ನು ನಿರ್ವಹಿಸುವುದರ ಜೊತೆಗೆ ಗ್ರಾಮ ಪಂಚಾಯತ್‌ನಲ್ಲಿ MIS ಯಿಂದ ಪಡೆದ ಕೂಲಿ ಪಟ್ಟಿಯನ್ನು (WAGE LIST)ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ನಿರ್ವಹಿಸುವುದು ಕಡ್ಡಾಯ ಮತ್ತು ಅದರಂತೆ ಕೂಲಿಕಾರರಿಗೆ ಕೂಲಿ ಹಣವನ್ನು ಪಾವತಿಸಲು ಕ್ರಮವಹಿಸುವುದು. ಯಾವುದೇ ಕಾರಣಕ್ಕೂ ಕೂಲಿ ಪಟ್ಟಿಯಿಲ್ಲದೆ ಕೂಲಿಕಾರರಿಗೆ ಕೂಲಿಯ ಹಣವನ್ನು ಪಾವತಿಸುವಂತಿಲ್ಲ.

**(ಪಿ.ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

## ಕರ್ನಾಟಕ ಸರ್ಕಾರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
ದೂ : 080-22372738 E-mail : nregs-ka@nic.in

ಗ್ರಾಅಪ :194 :ಉಖಾಯೋ : 2010 ದಿನಾಂಕ : 12-08-2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

.

ಮಾನ್ಯರೇ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009-10 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಬಂಧ ಬಾಕಿ ಇರುವ ಬಿಲ್ಲುಗಳ ಹಣವನ್ನು ಪಾವತಿಸಲು ವಿವರಗಳನ್ನು ಸಲ್ಲಿಸುವ ಕುರಿತು.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಿಯಡಿ 2009-10 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಬಂಧ ಬಾಕಿ ಇರುವ ಬಿಲ್ಲುಗಳ ಹಣವನ್ನು ಪಾವತಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಂದ ಜನ ಪ್ರತಿನಿಧಿಗಳಿಂದ, ಸರ್ಕಾರೇತರ ಸಂಸ್ಥೆಗಳಿಂದ ಹಾಗೂ ಸಂಘ ಸಂಸ್ಥೆಗಳಿಂದ ಬೇಡಿಕೆಗಳು ಬಂದಿದ್ದು, ತಾಂತ್ರಿಕ ಕಾರಣಗಳಿಂದ ಕಾಮಗಾರಿಗಳ ಅನುಷ್ಠಾನದ ಗುಣಮಟ್ಟದಲ್ಲಿ ಲೋಪದೋಷಗಳು ಇರುವುದರಿಂದ ಹಾಗೂ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘನೆ ಮಡಿರುವುದರ ಕಾರಣ ಪಾವತಿಯನ್ನು ವಿಲೇ ಇಡಲಾಗಿತ್ತು. ಸದರಿ ಸಾಲಿನ ಬಿಲ್ಲುಗಳನ್ನು ಪಾವತಿಸುವ /ತೀರುವಳಿ ಮಾಡುವ ಸಂಬಂಧ ದಿನಾಂಕ 05-08-2011ರಂದುಒಂದು ಸಭೆಯನ್ನು ನಡೆಸಿ ಈ ಕೆಳಕಂಡಂತೆ ಕ್ರಮವಹಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. ಅನುಷ್ಠಾನಗೊಳಿಸಿದ ಕಾಮಗಾರಿಗಳ ಪಾವತಿ ಸಂಬಂಧ 2009-10ನೇ ಸಾಲಿಗೆ ಬಾಕಿ ಇರುವ ಬಿಲ್ಲುಗಳನ್ನು ಮೂರು ಪ್ರವರ್ಗಗಳನ್ನಾಗಿ ವಿಂಗಡಿಸಲಾಗಿದೆ.
   - ಅ. ಕಾಮಗಾರಿಗಳು ಪೂರ್ಣಗೊಂಡಿದ್ದು, ವಿವರಗಳನ್ನು ಎಂಐಎಸ್‌ನಲ್ಲಿ ದಾಖಲಿಸಿದ್ದು. ಪಾವತಿಯಾಗಿರುವುದಿಲ್ಲ.
   - ಆ. ಕಾಮಗಾರಿಗಳು ಪೂರ್ಣಗೊಂಡಿದ್ದು, ವಿವರಗಳನ್ನು ಎಂಐಎಸ್‌ನಲ್ಲಿ ದಾಖಲಿಸದೆ ಪಾವತಿಯಾಗಿರುವುದಿಲ್ಲ.
   - ಇ. ಕಾಮಗಾರಿಗಳನ್ನು ನಿರ್ವಹಿಸದೆ, ಬಿಲ್ಲುಗಳನ್ನು ಸಿದ್ಧಪಡಿಸಿದ್ದು, ಪಾವತಿಗೆ ಬಾಕಿ ಇರುತ್ತದೆ. ಇಂತಹ ವರ್ಗದ ಬಿಲ್ಲುಗಳನ್ನು ಪರಿಗಣಿಸಲಾಗುವುದಿಲ್ಲ.

ಆದುದರಿಂದ ಮೊದಲ ಎರಡು ಪ್ರವರ್ಗಗಳನ್ನು ಪಾವತಿಗೆ ಪರಿಗಣಿಸಲು, ಕೆಲವು ಷರತ್ತುಗಳನ್ನು ಮತ್ತು ವಿಧಿ ವಿಧಾನಗಳನ್ನು ವಿದಿಸಲು ಸರ್ಕಾರವು ತೀರ್ಮಾನಿಸಿತು. ಆದುದರಿಂದ 2009-10 ನೇ ಸಾಲಿಗೆ ಸಂಬಂಧಿಸಿದಂತೆ ಬಾಕಿ ಇರುವ ಬಿಲ್ಲುಗಳನ್ನು ಪಾವತಿಸುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈ ಕೆಳಕಂಡ ನಿಯಮಗಳು ಮತ್ತು ನಿಬಂಧನೆಗಳನ್ನು ಪೂರೈಸುವ ಷರತ್ತಿಗೆ ಒಳಪಟ್ಟು ದಿನಾಂಕ 20-09-2011ರೊಳಗೆ ಸಲ್ಲಿಸಲು ಕೋರಿದೆ.

1. ಉದ್ಯೋಗ ಚೀಟಿಗಳ ವ್ಯಾಲಿಡೇಷನ್ ಪ್ರಕ್ರಿಯೆಯ ನಂತರ ಉದ್ಯೋಗ ಚೀಟಿಗಳ ಪರಿಶೀಲನೆಯ ಆಧಾರದ ಮೇಲೆ ಹಣ ಪಾವತಿಸಲಾಗುವುದು. ತಿರಸ್ಕೃತಗೊಂಡ ಉದ್ಯೋಗ ಚೀಟಿಗಳಿಗೆ ಸಂಬಂಧಿಸಿದಂತೆ ಎನ್ಎಂಆರ್‌ನಲ್ಲಿ ದಾಖಲಿಸಿದ್ದಲ್ಲಿ ಹಣ ಪಾವತಿಗೆ ಪರಿಗಣಿಸಲಾಗುವುದಿಲ್ಲ.
2. ಯಾವುದೇ ಉದ್ಯೋಗ ಚೀಟಿಯು ಈಗಾಗಲೇ 100 ದಿನಗಳನ್ನು ಪೂರೈಸಿದ್ದಲ್ಲಿ ಹಣ ಪಾವತಿಸಲಾಗುವುದಿಲ್ಲ.
3. ಯಾವುದೇ ಹಣ ಪಾವತಿಸುವ ಮುನ್ನ, ಸಂಬಂಧಿಸಿದ ಕಾಮಗಾರಿಯ ಕೂಲಿಯ ಅನುಪಾತವನ್ನು ಪರಿಗಣಿಸತಕ್ಕದ್ದು. ಯಾವುದೇ ಒಂದು ನಿರ್ದಿಷ್ಟ ಕಾಮಗಾರಿಯ ಸಾಮಾಗ್ರಿ ಅನುಪಾತ ಶೇಕಡಾ 50ಕ್ಕಿಂತ ಮೀರಿದ್ದಲ್ಲಿ ಸಾಮಗ್ರಿ ಘಟಕದ ವೆಚ್ಚವನ್ನು ಪಾವತಿಸತಕ್ಕದ್ದಲ್ಲ. ಆದರೆ ಅಂತಹ ಕಾಮಗಾರಿಯ ಕೂಲಿಯ ವೆಚ್ಚವನ್ನು ಪಾವತಿಸಬಹುದಾಗಿರುತ್ತದೆ. ನೆರೆಹಾವಳಿ ಸಂಬಂಧ ಪುನರ್ ವಸತಿಗಾಗಿ ಅನುಷ್ಠಾನಗೊಳಿಸಿದ ಕಾಮಗಾರಿಗಳನ್ನು ಈ ಷರತ್ತಿನಿಂದ ಹೊರತು ಪಡಿಸಲಾಗಿದೆ.

ಕಾಮಗಾರಿಗಳ ಸಂಬಂಧ, ಕಾಮಗಾರಿಗಳು ಪೂರೈಸಿದ್ದು ವಿವರಗಳನ್ನು ಎಂಐಎಸ್‌ನಲ್ಲಿ ದಾಖಲಿಸಿದ್ದು ಮತ್ತು ಎಂಐಎಸ್‌ನಲ್ಲಿ ದಾಖಲಿಸದೆ ಇರುವ ಮಾಹಿತಿಗಳನ್ನು ಗ್ರಾಮಪಂಚಾಯಿತಿವಾರು ನಮೂನೆ 1 ಮತ್ತು ನಮೂನೆ 2 ರಲ್ಲಿ ಸಲ್ಲಿಸುವುದು. ತಾಲ್ಲೂಕಿನ ಸಂಕ್ಷಿಪ್ತವಾದ ಘೋಷ್ವಾರೆ ಮಾಹಿತಿಯನ್ನು ನಮೂನೆ 3 ಮತ್ತು ನಮೂನೆ 4 ರಲ್ಲಿ ಸಲ್ಲಿಸುವುದು. ಇದೆ ರೀತಿ ಜಿಲ್ಲೆಯ ಸಂಕ್ಷಿಪ್ತವಾದ ಖೋಷ್ವಾರೆ ಮಾಹಿತಿಯನ್ನು ನಮೂನೆ 5 ಮತ್ತು ನಮೂನೆ 6 ರಲ್ಲಿ ಸಲ್ಲಿಸುವುದು.ಪ್ರಸ್ತಾವನೆಗಳನ್ನು ತಮ್ಮಿಂದ ಸ್ವೀಕರಿಸಿದ ನಂತರ ಸದರಿ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಎಲ್ಲಾ ಕಾಮಗಾರಿಗಳನ್ನು ಸರ್ಕಾರವು ನಿಯಮಿಸುವ ಮೂರನೇ ಕಕ್ಷಿದಾರರ ಪರಿವೀಕ್ಷಣೆಗೆ ಮತ್ತು ಅವರು ನೀಡುವ ದೃಢೀಕರಣ ಪತ್ರಕ್ಕೆ ಒಳಪಡಿಸಲಾಗುವುದು. ನಿಗಧಿಪಡಿಸಿದ ಅವಧಿಯಲ್ಲಿ ಪ್ರಸ್ತಾವನೆಯನ್ನು ಎಲ್ಲಾ ದಾಖಲಾತಿಗಳೊಂದಿಗೆ ನಿಗದಿಪಡಿಸಿದ ನಮೂನೆಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು. ಒಂದುವೇಳೆ ನಿಗಧಿಪಡಿಸಿದ ಅವಧಿಯಲ್ಲಿ ಪ್ರಸ್ತಾವನೆಯು ಬಾರದಿದ್ದಲ್ಲಿ ತಮ್ಮಿಂದ ಯಾವುದೇ ಪ್ರಸ್ತಾವನೆ ಬರುವುದು ಬಾಕಿ ಇಲ್ಲವೆಂದು ಭಾವಿಸಿ ಕೈ ಬಿಡಲಾಗುವುದು ಮತ್ತು ಮುಂದಿನ ಆಗುಹೋಗುಗಳಿಗೆ /ಅನಾಹುತಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ್)**

ನಿರ್ದೇಶಕರು

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ಮೂರನೇ ಪಕ್ಷದವರಿಂದ (Third Party Inspection) ಮಾಡಲು ಜಿಲ್ಲಾವಾರು ಅರ್ಹ ಸಂಸ್ಥೆಗಳನ್ನು ಎಂಪ್ಯಾನಲ್‌ಮೆಂಟ್ ಕುರಿತು.

**ಓದಲಾಗಿದೆ :**
1. ಸರ್ಕಾರದ ಅಧಿಸೂಚನೆಯ ಸಂಖ್ಯೆ ಗ್ರಾಅಪ 183ಉಖಾಯೋ 2011 ದಿನಾಂಕ :07-07-2011
2. ಸರ್ಕಾರದ ಆದೇಶ ಪತ್ರ ಸಂಖ್ಯೆ ಗ್ರಾಅಪ 183ಉಖಾಯೋ ಬೆಂಗಳೂರು ದಿನಾಂಕ :28-07-2011
3. ಪರಿಶೀಲನಾ ಸಮಿತಿಯ ಸಭೆ ನಡವಳಿ ದಿನಾಂಕ :19-08-2011

* * *

### ಪ್ರಸ್ತಾವನೆ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು 2006-07 ನೇ ಇಸವಿಯಿಂದ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ, ಬೃಹತ್ ಪ್ರಮಾಣದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯಡಿ ಪಾರದರ್ಶಕತೆಯನ್ನು ಕಾಪಾಡುವುದು ಮತ್ತು ಗುಣಮಟ್ಟವನ್ನು ಕಾಮಗಾರಿಗಳಲ್ಲಿ ಕಾಪಾಡುವುದು. ಇತ್ಯಾದಿ ಇವುಗಳು ಮುಖ್ಯ ಉದ್ದೇಶಗಳಾಗಿರುತ್ತದೆ. ಕ್ಷೇತ್ರಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ಗುಣಮಟ್ಟ ಮತ್ತು ಕಾಮಗಾರಿಗಳಲ್ಲಿ ಇರುವ ಅವ್ಯವಹಾರ ಮತ್ತು ಅಸಮರ್ಪಕವಾದ ಅನುಷ್ಠಾನದ ಕುರಿತು, ಸಾರ್ವಜನಿಕರಿಂದ, ಜನ ಪ್ರತಿನಿಧಿಗಳಿಂದ ಮತ್ತು ಯೋಜನೆಗೆ ಸಂಬಂಧಿಸಿದ ಎಲ್ಲಾ ಪಾಲುದಾರರಿಂದ ದೂರುಗಳು ಬಂದಿರುತ್ತವೆ. ಸದರಿ ವಿಷಯವನ್ನು ಕೂಡ, ರಾಜ್ಯಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಪ್ರಸ್ತಾಪವಾಗಿರುತ್ತದೆ. ಇವೆಲ್ಲವನ್ನು ಕೂಡ ಸರ್ಕಾರವು ಪರಿಗಣಿಸಿ, ಸದರಿ ವಿಷಯದ ಕುರಿತು, ದಿನಾಂಕ 27/28 ಜೂನ್ 2011 ರಂದು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇಲ್ಲಿ ನಡೆದ ಕಾರ್ಯಾಗಾರದಲ್ಲಿ ಸುಧೀರ್ಘವಾಗಿ ಚರ್ಚೆ ಮಾಡಿದ ಬಳಿಕ ಕಾಮಗಾರಿಗಳನ್ನು ಬಾಹ್ಯ ಸಂಸ್ಥೆಗಳಿಂದ ಮೂರನೇ ಪಕ್ಷದ ಪರಿವೀಕ್ಷಣೆಯನ್ನು (Third Party Inspection) ಮಾಡಿಸುವುದು ಅಗತ್ಯವಿದೆಯೆಂದು ಅಭಿಪ್ರಾಯಿಸಿ ತೀರ್ಮಾನಿಸಲಾಗಿರುತ್ತದೆ. ಈ ದಿಸೆಯಲ್ಲಿ ಉಲ್ಲೇಖ (1) ರಲ್ಲಿ ದಿನಾಂಕ 09-07-2011 ರಂದು ರಾಜ್ಯದ್ಯಾಂತ ಪ್ರಮುಖ ವಾರ್ತಾ ಪತ್ರಿಕೆಗಳಾದ ವಿಜಯ ಕರ್ನಾಟಕ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ EOI ನ್ನು ಅರ್ಹ ಸಂಸ್ಥೆಗಳಿಂದ ಕೆಲವು ಷರತ್ತುಗಳೊಂದಿಗೆ ಪ್ರಕಟಣೆ ನೀಡಿ 23-07-2011ರೊಳಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿತ್ತು. ತದನಂತರ, ಸದರಿ EOI ನ ಅರ್ಜಿಗಳನ್ನು ಪರಿಶೀಲಿಸಲು, ಒಂದು ಸಮಿತಿಯನ್ನು ಉಲ್ಲೇಖ (2) ರಲ್ಲಿ ರಚಿಸಿದ್ದು, ಸದರಿ ಸಮಿತಿಯು ದಿನಾಂಕ 19-08-2011 ರಂದು ಒಂದು ಸಭೆಯನ್ನು ನಡೆಸಿ, EOI ನ ಅರ್ಜಿಗಳನ್ನು ಪರಿಶೀಲಿಸಲು ಕೆಲವು ಮಾನದಂಡಗಳನ್ನು ನಿಗದಿಪಡಿಸಿ ಅದರಂತೆಯೇ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಸಂಸ್ಥೆಗಳ ಪಟ್ಟಿಯನ್ನು ಮತ್ತು ಜಿಲ್ಲಾವಾರು ಅರ್ಹ ಸಂಸ್ಥೆಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿರುತ್ತದೆ. ಸಮಿತಿಯ ವರದಿಯಂತೆ ಜಿಲ್ಲಾವಾರು ಅರ್ಹ ಸಂಸ್ಥೆಗಳ ಪಟ್ಟಿಯನ್ನು ಲಗತ್ತಿಸಿದೆ.

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ಮೂರನೇ ಪಕ್ಷದವರಿಂದ ಪರಿವೀಕ್ಷಣೆ ಮಾಡಿದಾಗ ಕಂಡು ಬರುವ ನ್ಯೂನ್ಯತೆ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 183 ಉಖಾಯೋ 2011 ದಿನಾಂಕ 08.09.2011

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯಾದ್ಯಂತ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಕಾಮಗಾರಿಗಳ ಅನುಷ್ಠಾನದಲ್ಲಿ ಆಗಿರುವ ಅವ್ಯವಹಾರ, ನ್ಯೂನ್ಯತೆ ಕಳಪೆ ಗುಣಮಟ್ಟ ಕುರಿತು ಹಲವಾರು ದೂರುಗಳು ಸರ್ಕಾರಕ್ಕೆ ಬರುತ್ತಲೇ ಇವೆ. ಆದ್ದರಿಂದ ಉಲ್ಲೇಖ ಪತ್ರದ ಪ್ರಕಾರ ಷರತ್ತು ಬದ್ಧವಾದ ಮೂರನೇ ಪಕ್ಷದವರ ಪರಿವೀಕ್ಷಣೆಗೆ ಎಂಪ್ಯಾನಲ್‌ಮೆಂಟ್ ಆದೇಶ ಹೊರಡಿಸಲಾಗಿದೆ. ಹಲವಾರು ಜಿಲ್ಲೆಗಳಲ್ಲಿ ಮೂರನೇ ಪಕ್ಷದವರಿಂದ ಕೆಲಸಗಳ ಪರಿವೀಕ್ಷಣೆ ಕೈಗೆತ್ತಿಕೊಳ್ಳಲಾಗಿದೆ. ಮೂರನೇ ಪಕ್ಷದವರ ವರದಿಯಲ್ಲಿ ಕಾಮಗಾರಿಯ ಬಗ್ಗೆ ಬಹಳಷ್ಟು ನ್ಯೂನ್ಯತೆಗಳು ಇರುವುದು ಮತ್ತು ಕಾಮಗಾರಿಗೆ ಸಂದಾಯ ಮಾಡಿದ ಮೊತ್ತಕ್ಕೂ ಮೂರನೇ ಪಕ್ಷದವರು ನಿರ್ಧರಿಸಿದ (ವ್ಯಾಲ್ಯೂ) ಮೊತ್ತಕ್ಕೂ ಬಹಳಷ್ಟು ವ್ಯತ್ಯಾಸವಿರುವುದು ಹಲವಾರು ಪ್ರಕರಣಗಳಲ್ಲಿ ಸರ್ಕಾರದ ಗಮನಕ್ಕೆ ಕಂಡುಬಂದಿದೆ. ಇದಲ್ಲದೇ ರಾಜ್ಯದ ಕೆಲವು ಓಂಬುಡ್ಸ್‌ಮನ್‌ರವರು ಸಹ ಇಂತಹ ಪ್ರಕರಣಗಳು ಇರುವುದು ಕಂಡುಬಂದಿದೆಯೆಂದು ವರದಿಸಿರುತ್ತಾರೆ. ಕೆಲವಡೆ ಕಾಮಗಾರಿ ಅನುಷ್ಠಾನಿಸದೆ ಹಣ ಸಂದಾಯ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕುರಿತಂತೆ ಹಲವಾರು ದೂರುಗಳು ಕೇಂದ್ರ ಸರ್ಕಾರಕ್ಕೂ ಸಲ್ಲಿಸಲ್ಪಟ್ಟಿವೆ. ಇದನ್ನು ಅತೀ ವಿಷಾದದಿಂದ ಗಮನಿಸಿದೆ. ಅವ್ಯವಹಾರವೆಸಗಿದ ಪ್ರಕರಣಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೂಕ್ತ ಶಿಸ್ತಿನ ಕ್ರಮ ಸಹ ಜರುಗಿಸಲು ಈಗಾಗಲೇ ಸೂಚಿಸಲಾಗಿದೆ. ಇನ್ನೂ ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರವಹಿಸಲು ಸೂಚಿಸಿದೆ. ಈ ಕುರಿತು ಅನುಷ್ಠಾನ ಇಲಾಖೆಗಳಿಗೂ ಸೂಕ್ತ ಸೂಚನೆ ಜಿಲ್ಲಾ ಮಟ್ಟದಲ್ಲಿ ನೀಡಲು ಸೂಚಿಸಿದೆ. ಮೂರನೇ ಪಕ್ಷದವರಿಂದ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧ(1)ರಲ್ಲಿ ಪ್ರತಿ ಮಾಹೆ 5ನೇ ತಾರೀಖಿನೊಳಗೆ ತಲುಪುವಂತೆ ಸಲ್ಲಿಸಲು ಸೂಚಿಸಿದೆ.

(ಸಹಿ/–)
**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಸರ್ಕಾರದ ಪ್ರಧಾನ, ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ, ಕಾರ್ಯದರ್ಶಿಗಳು, (ಸಣ್ಣ ನೀರಾವರಿ) ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ, ಕಾರ್ಯದರ್ಶಿಗಳು, (ಕೃಷಿ) ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
7. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅರಣ್ಯ ಇಲಾಖೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
8. ಆಯುಕ್ತರು, ಜಲಾನಯನ ಇಲಾಖೆ, ಕಾವೇರಿ ಭವನ, ಬೆಂಗಳೂರು
9. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
10. ಆಯುಕ್ತರು, ಪಶು ಸಂಗೋಪನಾ ಇಲಾಖೆ ಕಿರುಗೋಪುರ, ಬೆಂಗಳೂರು.
11. ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
12. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
13. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಕಿರುಗೋಪುರ, ಬೆಂಗಳೂರು
14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು (ಪಂ.ರಾ.) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ
15. ಶ್ರೀ ಶ್ರೀನಿವಾಸ, ಗಣಕಕೋಶ ಇವರಿಗೆ ವೆಬ್‌ಸೈಟ್‌ನಲ್ಲಿ ಅಳವಡಿಸಲು
16. ಹೆಚ್ಚುವರಿ ಪ್ರತಿ/ ರಕ್ಷಾಕವಚಕ್ಕೆ

## ಅನುಬಂಧ –1

## ಮೂರನೇ ಪಕ್ಷದವರಿಂದ ನಡೆದ ಕಾಮಗಾರಿಗಳ ಪರಿವೀಕ್ಷಣ ವರದಿಯ ವಿವರಗಳು

ಜಿಲ್ಲೆಯ ಹೆಸರು:

| | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿ ಹೆಸರು | ಮೂರನೇ ಪಕ್ಷದ ಪರಿವೀಕ್ಷಣ ಸಂಸ್ಥೆಯ ಹೆಸರು | ಪರಿವೀಕ್ಷಿಸಿದ ಕಾಮಗಾರಿಗಳ (ಸಂಖ್ಯೆಗಳು) | | | | | | ಎಂಐಸ್ ಪ್ರಕಾರ ಸಧಾಯ ಮಾಡಿದ ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ | ಮೂರನೇ ಪಕ್ಷದ ಪರಿವೀಕ್ಷಕರು ಶಿಫಾರಸ್ಸು ಮಾಡಿದ ಮೊತ್ತ (ರೂ ಲಕ್ಷಗಳಲ್ಲಿ) | ಕಾಮಗಾರಿ ಆಗಿದೆಯೆಂದು ಎಂಐಎಸ್‌ನಲ್ಲಿ ತೋರಿಸಿ, ಹಣ ಸಂದಾಯ ಮಾಡಿದ ಮತ್ತು ವಾಸ್ತವಿಕವಾಗಿ ಕೆಲಸ ಮಾಡದೇ ಇರುವ ಕಾಮಗಾರಿಗಳ (ಸಂಖ್ಯೆ) | ಷರಾ |
|---|---|---|---|---|---|---|---|---|---|---|---|---|---|
| | | | | ಇಂಜನಿಯರಿಂಗ್ ಇಲಾಖೆ | ಜಲಾನಯನ ಇಲಾಖೆ | ತೋಟಗಾರಿಕೆ ಇಲಾಖೆ | ಅರಣ್ಯ ಇಲಾಖೆ | ಇತರೆ | ಒಟ್ಟು ಪರಿವೀಕ್ಷಣೆ ಮಾಡಿದ ಕಾಮಗಾರಿಗಳ ಸಂಖ್ಯೆ | | | | |
| | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |
| | | | | | | | | | | | | | |

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ.ಗ್ರಾಅಪ 68 ಉಖಾಯೋ 2011 ದಿನಾಂಕ 19–01–2012

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

ಮಾನ್ಯರೆ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರುದ್ಯೋಗ ಭತ್ಯೆಯನ್ನು ಪಾವತಿಸಿರುವ ಮತ್ತು ಪಾವತಿಗೆ ಬಾಕಿ ಇರುವ ಮಾಹಿತಿಯನ್ನು ಒದಗಿಸುವ ಕುರಿತು

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ J-11011/06/2011-MGNREGA-I(FTS-17079), ದಿನಾಂಕ29–12–2011.

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನು ರಾಜ್ಯದಲ್ಲಿ ಅನುಷ್ಠಾನಗೊಳಿಸಿದ ಅಂದಿನಿಂದ, ಈತಹಲ್‌ವರೆಗೂ, ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಪಾವತಿಸಿದ ನಿರುದ್ಯೋಗ ಭತ್ಯೆ ಹಾಗೂ ಕೂಲಿ ಕಾರ್ಮಿಕರಿಗೆ ಪಾವತಿಗೆ ಬಾಕಿ ಇರುವ ನಿರುದ್ಯೋಗ ಭತ್ಯೆಯ ಮಾಹಿತಿಯನ್ನು ಒದಗಿಸುವಂತೆ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರವನ್ನು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತದೆ. ಆದುದರಿಂದ, ಸದರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಶೀಘ್ರವಾಗಿ ಒದಗಿಸಲು ಅನುಕೂಲವಾಗುವಂತೆ ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದ ನಮೂನೆಯಲ್ಲಿ ದಿನಾಂಕ 27.01.2012ರೊಳಗೆ ಸಲ್ಲಿಸಲು ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–
**ಜಂಟಿ ನಿರ್ದೇಶಕರು**
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ANNEXURE

| Mahatma Gandhi National Rural Employment Guarantee Scheme | |
|---|---|
| Name of the District: | |

| Year | Name if the Taluk | Name of the Gram Panchayat | Due for Payment of Unemployment Allowance | | | | Unemployment allowance paid | | | | Remarks |
|---|---|---|---|---|---|---|---|---|---|---|---|
| | | | No of Households | No of Laborers | No of Days | Amount to be paid | No of Households | No of laborers | No of Days | Amount paid | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 06–07 | | | | | | | | | | | |
| | | | | | | | | | | | |
| 07–08 | | | | | | | | | | | |
| | | | | | | | | | | | |
| 08–09 | | | | | | | | | | | |
| | | | | | | | | | | | |
| 09–10 | | | | | | | | | | | |
| | | | | | | | | | | | |
| 10–11 | | | | | | | | | | | |
| | | | | | | | | | | | |
| 11–12 | | | | | | | | | | | |
| | | | | | | | | | | | |

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಸಂ.ಗ್ರಾಅಪ 189 ಉಖಾಯೋ 2011 ದಿನಾಂಕ 24–01–2012

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

ಮಾನ್ಯರೆ,

ವಿಷಯ: ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ನೇಮಕಾತಿಯಾದ ಗಣಕಯಂತ್ರ ನಿರ್ವಾಹಕರ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯ ಕೊರತೆಯಿಂದ ಯೋಜನೆಯು ಸುಲಲಿತ ಅನುಷ್ಠಾನಕ್ಕೆ ಧಕ್ಕೆ ಉಂಟಾಗಿರುವ ಕುರಿತು.

ಉಲ್ಲೇಖ: ಕಾರ್ಯದರ್ಶಿಗಳು (ಪಂರಾ) ಗ್ರಾಅಪರಾ ಇಲಾಖೆಯವರು, ದಿನಾಂಕ 29.11.2011ರಂದು ಬೀದರ್ ಜಿಲ್ಲೆಗೆ ಭೇಟಿ ನೀಡಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರುಗಳ ಸಭೆಯನ್ನು ನಡೆಸುವ ಬಗ್ಗೆ

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ಒಬ್ಬರಂತೆ, ಗಣಕಯಂತ್ರ ನಿರ್ವಾಹಕರನ್ನು ಹೊರಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿದ್ದು ಅವರುಗಳೆಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರಿಯಷ್ಟೆ. ಆದರೆ ಉಲ್ಲೇಖದನ್ವಯ ಕಾರ್ಯದರ್ಶಿಗಳು (ಪಂರಾ) ಗ್ರಾಅಪರಾ ಇಲಾಖೆಯವರು ದಿನಾಂಕ 29–11–2011ರಂದು ಬೀದರ್ ಜಿಲ್ಲೆಗೆ ಭೇಟಿ ನೀಡಿ, ಅಲ್ಲಿ ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರುಗಳ ಸಭೆಯನ್ನು ನಡೆಸಿ, ಗ್ರಾಮ ಪಂಚಾಯಿತಿಗಳ ಕಾರ್ಯವೈಖರಿಯನ್ನು ಪರಿಶೀಲಿಸಿರುತ್ತಾರೆ. ಪರಿಶೀಲಿಸಿದಾಗ, ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸತ್ತಿರುವ ಗಣಕಯಂತ್ರ ನಿರ್ವಾಹಕರ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆಯಲ್ಲಿ ಕೊರತೆ ಉಂಟಾಗಿದ್ದು, ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಧಕ್ಕೆಯಾಗಿದ್ದು ಇದರ ತತ್ಫಲಿತ ಯೋಜನೆಯ ಪ್ರಗತಿಯಲ್ಲಿ ಹಿನ್ನಡೆಯಾಗಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ ಎಂದು ತಿಳಿಸಿ, ಕೂಡಲೇ, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರಿಗೆ, ಜಿಲ್ಲಾ ಮಟ್ಟದಲ್ಲಿ DIO NIC ಇವರ ತಂಡದವರಿಂದ ಅಥವಾ ಯಾವುದಾದರೂ, ಒಂದು ತಾಂತ್ರಿಕ ಖ್ಯಾತಿ ಸಂಸ್ಥೆಯಿಂದ ಒಂದು ಪರೀಕ್ಷೆಯನ್ನು ನಡೆಸಿ, ಸೂಕ್ತ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವಂತೆ ಸೂಚಿಸಿರುತ್ತಾರೆ. ಈ ರೀತಿಯ ಕ್ರಮವನ್ನು ಜಿಲ್ಲಾ ಮಟ್ಟದಲ್ಲಿ ತೆಗೆದುಕೊಳ್ಳದೇ ಹೋದಲ್ಲಿ Data Entry ಕಾರ್ಯವು ಸಮರ್ಪಕವಾಗಿ ನಡೆಯದೇ ಕಾರ್ಯಕ್ರಮಗಳ ಸುಲಲಿತ ಅನುಷ್ಠಾನಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ತಿಳಿಸಿರುತ್ತಾರೆ. ಆದುದರಿಂದ ತಾವು ಕೂಡಲೇ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳ ಗಣಕಯಂತ್ರ ನಿರ್ವಾಹಕರಿಗೆ 50 ಅಂಕಗಳು ಒಳಗೊಂಡಿರುವ ಪ್ರಶ್ನಾಪತ್ರಿಕೆಯನ್ನು ಜಿಲ್ಲಾ ಮಟ್ಟದಲ್ಲಿರುವ DIO NIC ಇವರಿಂದ ಅಥವಾ ತಾಂತ್ರಿಕವಾಗಿ ಖ್ಯಾತಿ ಪಡೆದ ಸಂಸ್ಥೆಯಿಂದ ತಯಾರಿಸಿ, ಪರೀಕ್ಷೆಯನ್ನು ನಡೆಸಲು ಕೋರಿದೆ. ಪರೀಕ್ಷೆಯನ್ನು ನಡೆಸಿದ ನಂತರ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಸರ್ಕಾರಕ್ಕೆ ಕೂಡಲೇ ಒದಗಿಸುವಂತೆ, ತಮ್ಮನ್ನು ಈ ಮೂಲಕ ಕೋರಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗಣಕಯಂತ್ರ ನಿರ್ವಾಹಕರಿಗೆ ಪರೀಕ್ಷೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ.

ಆದುದರಿಂದ, ಮೇಲೆ ನೀಡಲಾದ ಸೂಚನೆಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸಿ ಮಾಹಿತಿಯನ್ನು ಕೋರಿರುವ ನಮೂನೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿರುವಿರಿ ಎಂದು ಆಶಿಸುತ್ತೇನೆ.

ತಮ್ಮ ವಿಶ್ವಾಸಿ,
(ಸಹಿ/–)
**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ನಮೂನೆ

| ಜಿಲ್ಲೆಯ ಹೆಸರು | |
|---|---|

| ಕ್ರ.ಸಂ | ತಾಲ್ಲೂಕಿನ ಹೆಸರು | ಗ್ರಾಮ ಪಂಚಾಯಿತಿಯ ಹೆಸರು | ಗಣಕಯಂತ್ರ ನಿರ್ವಾಹಕರ ಹೆಸರು | ಎಂದಿನಿಂದ ನೇಮಕಾತಿಯಾಗಿರುತ್ತಾರೆ | ಯಾವ ಮಾದರಿಯಲ್ಲಿ ನೇಮಕಾತಿಯಾಗಿರುತ್ತಾರೆ. (ಹೊರಗುತ್ತಿಗೆ/ ಗುತ್ತಿಗೆ ಆಧಾರ ಮೇಲೆ) | ವಿದ್ಯಾರ್ಹತೆ | ಪರೀಕ್ಷೆಯನ್ನು ನಡೆಸಿದ ಸಂಸ್ಥೆಯ ಹೆಸರು | ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |
| | | | | | | | | | |

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 –22372738 E-mail : nrega-ka@nic.in

ಗ್ರಾಅಪ:189:ಉಖಾಯೋ2011 ದಿನಾಂಕ: 27–02–2012

# ಸುತ್ತೋಲೆ

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರಿಗೆ ಮಾಸಿಕ ಸಂಭಾವನೆಯನ್ನು ಸಕಾಲದಲ್ಲಿ ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ130ಉಖಾಯೋ2011, ದಿನಾಂಕ:30–08–2011.
2. ಸರ್ಕಾರದ ಪತ್ರದ ಸಂಖ್ಯೆ: ಗ್ರಾಅಪ189ಉಖಾಯೋ2011, ದಿನಾಂಕ:20–10–2011.
3. ಶ್ರೀ ಚಂದ್ರಶೇಖರ್ ಎಸ್. ಹಿರೇಮಠ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ(ರಿ), ಗುಲ್ಬರ್ಗ ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿದ ಮನವಿಯ ದಿನಾಂಕ ಶೂನ್ಯ ಮತ್ತು ಈ ಕಾರ್ಯಾಲಯದಲ್ಲಿ ಸ್ವೀಕರಿಸಿದ ದಿನಾಂಕ: 27–01–2012.

* * *

ಯೋಜನೆಯ ಸಮರ್ಪಕ ಮತ್ತು ತೀವ್ರಗತಿಯ ಅನುಷ್ಠಾನಕ್ಕಾಗಿ, ಗ್ರಾಮ ಪಂಚಾಯಿತಿಗಳಿಗೆ ಗಣಕಯಂತ್ರ ನಿರ್ವಾಹಕರನ್ನು ಪ್ರಾರಂಭದ ದಿಸೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲವು ಷರತ್ತುಗಳೊಂದಿಗೆ ತೆಗೆದುಕೊಂಡಿದ್ದು, ತರುವಾಯ ರಾಜ್ಯದ ಬಹು ಭಾಗಗಳಲ್ಲಿ ಹೊರಗುತ್ತಿಗೆಯ ಆಧಾರದ ಮೇಲೆ ಸಿಬ್ಬಂದಿಗಳ ಸೇವೆಯನ್ನು ಪಡೆದು ನಿರ್ವಹಿಸಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರ ನಿರ್ವಾಹಕರುಗಳಿಗೆ, ಸಕಾಲದಲ್ಲಿ ಮಾಸಿಕ ಸಂಭಾವನೆಯನ್ನು ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಮತ್ತು ಬಹುತೇಕ ಜಿಲ್ಲೆಗಳಲ್ಲಿ ಇದೇ ರೀತಿಯ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಈ ಕುರಿತು, ಈಗಾಗಲೇ, ಸರ್ಕಾರದಿಂದ ಉಲ್ಲೇಖ (1) ಮತ್ತು ಉಲ್ಲೇಖ (2)ರಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾಸಿಕ ಸಂಭಾವನೆಯನ್ನು ಸಕಾಲದಲ್ಲಿ ಪಾವತಿಸುವಂತೆ ಪದೇ ಪದೇ ಹೇಳಲಾಗಿರುತ್ತದೆ. ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ, ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿರುವ ಸಂಬಂಧಿಸಿದ ಅಧಿಕಾರಗಳು ಇದರ ಬಗ್ಗೆ ಲಕ್ಷ್ಯಕೊಡದೆ ಇರುವುದು ತುಂಬಾ ಖೇದಕರವಾದ ವಿಷಯವಾಗಿರುತ್ತದೆ. ಇಂತಹ ಒಂದು ನಿರ್ಲಕ್ಷ್ಯದ ಮನೋಭಾವನೆಯಿಂದ, ಯೋಜನೆಯ ಅನುಷ್ಠಾನಕ್ಕೆ ಧಕ್ಕೆ ಉಂಟಾಗಿ, ಪ್ರಗತಿಯು ಕುಂಠಿತವಾಗಿರುತ್ತದೆ. ಪ್ರಯುಕ್ತ ಸಿಬ್ಬಂದಿಗಳಿಗೆ ಮಾಸಿಕ ಸಂಭಾವನೆಯನ್ನು ಸಕಾಲದಲ್ಲಿ ಅವರುಗಳಿಗೆ ತಲುಪಲು, ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಗುತ್ತಿಗೆ/ಹೊರಗುತ್ತಿಗೆಯ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ಮಾಸಿಕ ಸಂಭಾವನೆಯನ್ನು ಪ್ರತಿ ತಿಂಗಳು 10ನೇ ತಾರೀಖಿನೊಳಗೆ ಪಾವತಿಸಲು ವ್ಯವಸ್ಥೆ ಮಾಡುವುದು ಮತ್ತು ಇದನ್ನು ಪ್ರತಿ ತಿಂಗಳು ನಿಗಧಿತ ಅವಧಿಯೊಳಗೆ ತಲುಪಿದೆಯೇ, ಇಲ್ಲವೇ ಎಂಬುದರ ಬಗ್ಗೆ ನಿಗಾವಹಿಸಿ ಮೇಲುಸ್ತುವಾರಿ ಮಾಡುವುದು. ಇಷ್ಟೆಲ್ಲಾ ಸೂಚನೆಗಳು ನೀಡದ್ದರೂ ದೂರುಗಳು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
2. ಹೊರಗುತ್ತಿಗೆಯ ಆಧಾರದ ಮೇಲೆ ಕಾರ್ಯನಿರ್ಹಿಸುತ್ತಿರುವ ಸಿಬ್ಬಂದಿಗಳ ಮಾಸಿಕ ಸಂಭಾವನೆಯ ಕುರಿತು, ಪಂಚಾಯತ್ ರಾಜ್ ಸಂಸ್ಥೆಗಳ ಮಟ್ಟದಲ್ಲಿ ಜರುಗಿಸುವ ಪ್ರಕ್ರಿಯೆಗಳು ವಿಳಂಬವಾದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸುವುದು. ಒಂದು ವೇಳೆ ಪಂಚಾಯತ್ ರಾಜ್ ಸಂಸ್ಥೆಗಳ ಹಂತದಲ್ಲಿ ಜರುಗಿಸಿದ

ಪ್ರಕ್ರಿಯೆಗಳಲ್ಲಿ ವಿಳಂಬವಿಲ್ಲದೇ, ಹೊರಗುತ್ತಿಗೆಯ ಸಂಸ್ಥೆಗಳ ಹಂತದಲ್ಲಿ ವಿಳಂಬವಾದಲ್ಲಿ ಅಂತಹ ಸಂಸ್ಥೆಗಳಿಗೆ, ಮೊದಲ ಬಾರಿಗೆ ಎಚ್ಚರವನ್ನು ನೀಡಿ, ನಂತರ ಇಂತಹ ತಪ್ಪುಗಳು ಪನರಾವರ್ತನೆಯಾದಲ್ಲಿ ಅಂತಹ ಹೊರಗುತ್ತಿಗೆಯ ಸಂಸ್ಥೆಗಳನ್ನು ಸಿಬ್ಬಂದಿಗಳ ಸೇವೆಯನ್ನು ಪಡೆಯುವುದರಿಂದ ರದ್ದು ಮಾಡುವುದು.

ಮೇಲೆ ನೀಡಿರುವ ಸೂಚನೆಗಳನ್ನು ತಪ್ಪದೇ ಕಟ್ಟುನಿಟ್ಟಾಗಿ ಪಾಲಿಸುವುದು.

ಸಹಿ/–
**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

ಗೆ,

- ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
- ಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ,ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಅನಸೂ ರಾಗ್ರಾಸಂಸ್ಥೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ:224: ಉಖಾಯೋ2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ: 19–03–2012

**ಸುತ್ತೋಲೆ**

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸ್ಥಳಗಳಲ್ಲಿ ಅಳವಡಿಸಿದ ನಾಮಫಲಕಗಳ ಕುರಿತು

* * *

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆದ್ಯತೆಯ ಮೇರೆಗೆ ಅನಷ್ಠಾನಗೊಳಿಸಲಾಗುತ್ತಿದ್ದು, ಕೆಲವು ಜಿಲ್ಲಾ ಪಂಚಾಯಿತಿಗಳು ಅನುಷ್ಠಾನಗೊಳಿಸಿದ ಕಾಮಗಾರಿಗಳ ಸ್ಥಳಗಳಲ್ಲಿ ನಾಮಫಲಕಗಳನ್ನು ಅಳವಡಿಸಿ ಅದಕ್ಕೆ ತಗಲುವ ವೆಚ್ಚಕ್ಕೆ ಅನುದಾನವನ್ನು ಪ್ರತ್ಯೇಕವಾಗಿ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರವನ್ನು ಕೋರಲಾಗುತ್ತಿದೆ. ಸದರಿ ವಿಷಯವನ್ನು ಪರಿಶೀಲಿಸಲಾಗಿದೆ. ನಾಮಫಲಕಗಳಿಗೆ ತಗಲುವ ವೆಚ್ಚದ ಮೊತ್ತವನ್ನು ಮೊದಲೇ ಕಾಮಗಾರಿಗಳ ಅಂದಾಜುಗಳಲ್ಲಿ ಸೇರಿಸಿ ಕ್ರಮ ಕೈಗೊಂಡಿರಬೇಕು ಮತ್ತು ಅಂತಹ ವೆಚ್ಚವನ್ನು ಸಾಮಗ್ರಿ ವೆಚ್ಚದಲ್ಲಿ ಭರಿಸಬೇಕು. ನಾಮಫಲಕಗಳಿಗೆ ತಗಲುವ ವೆಚ್ಚವು ಕಾಮಗಾರಿಯ ಅಂದಾಜಿನಲ್ಲಿ ಒಂದು ಭಾಗವಾಗಿರುತ್ತದೆ. ಮಾರ್ಗಸೂಚಿಗಳ ಪ್ರಕಾರ ಕಾಮಗಾರಿಗಳ ಸ್ಥಳಗಳಲ್ಲಿ ನಾಮಫಲಕಗಳನ್ನು ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಒಂದು ವೇಳೆ ಇದರ ಸಂಬಂಧ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಮೂಲಕ ಕೋರಿದರೆ, ಅಂತಹ ಕೋರಿಕೆಯ ಪ್ರಸ್ತಾವನೆಗಳನ್ನು ಸಕಾರವು ಪುರಸ್ಕರಿಸುವುದಿಲ್ಲ ಎಂಬ ವಿಷಯವನ್ನು ಈ ಮೂಲಕ ತಮಗೆ ತಿಳಿಯಪಡಿಸಿದೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಗೆ,

- ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
- ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
- ನಿರ್ದೇಶಕರು, ANSSIRD, ಲಲಿತ ಮಹಲ್ ರಸ್ತೆ ಮೈಸೂರು.
- http:/karnregs.kar.nic.in/ ವೆಬ್‌ಸೈಟ್ ವಿಭಾಗಕ್ಕೆ ಮತ್ತು ಸದರಿ ಸುತ್ತೋಲೆಯ ಮಾಹಿತಿಯನ್ನು ಸಂಬಂಧಿಸಿದ ವೆಬ್‌ಸೈಟ್ ವಿಭಾಗದಲ್ಲಿ ಅಳವಡಿಸುವುದು.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ:69: ಉಖಾಯೋ2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ: 20.03.2012

**ಸುತ್ತೋಲೆ**

ವಿಷಯ: ಪರಿಶಿಷ್ಟಜಾತಿ / ಪರಿಶಿಷ್ಟ ವರ್ಗದವರ ಕ್ಷೇಮಾಭಿವೃದ್ಧಿಗಾಗಿ ಸಂಸದ್ ಸಮಿತಿಯವರು ತನ್ನ 23ನೇ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಕುರಿತು

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ: H-11011/5/2011-MGNREGA, ದಿನಾಂಕ: 16–02–2012

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ಕ್ಷೇಮಾಭಿವೃದ್ಧಿಗಾಗಿ ಸಂಸದ್ ಸಮಿತಿಯವರು ತನ್ನ 23ನೇ ವರದಿಯಲ್ಲಿ, ಪರಿಶಿಷ್ಟ ಪಂಗಡದ ಜನಾಂಗದವರು ಒಂದು ವರ್ಷದಲ್ಲಿ, ಕೆಲವು ಕಾಲವಷ್ಟೇ ತಮ್ಮ ಜೀವನೋಪಾಯಕ್ಕಾಗಿ ಬೇರೆ ಜಾಗಗಳಿಗೆ ವಲಸೆ ಹೋಗುತ್ತಿದ್ದು, ಮಿಕ್ಕ ಅವಧಿಯಲ್ಲಿ ತಮ್ಮ ವಾಸಸ್ಥಳಗಳಲ್ಲಿ ಇರುತ್ತಿದ್ದು ಮತ್ತು ಅಂತಹ ಜನಗಳಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗವನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ. ಇದರ ಸಂಬಂಧ, ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿರುವ ಪರಿಶಿಷ್ಟ ಪಂಗಡದ ಜನಾಂಗದವರಿಗೆ ಈ ವರ್ಷದ ಕೆಲ ಕಾಲದ ಮಿತಿಯಲ್ಲಿ ಹೋಗುವ ವಲಸೆಯನ್ನು ತಪ್ಪಿಸಲು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀನ ಉದ್ಯೋಗ ಖಾತರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಉದ್ಯೋಗ ಅವಕಾಶಗಳನ್ನು ಕಲ್ಪಿಸುವಂತೆ, ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಸೂಚನೆಗಳನ್ನು ನೀಡಿರುತ್ತದೆ. ಅದರ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ.

ಈ ಸಂಬಂಧ ತಮ್ಮ ಜಿಲ್ಲೆಯ ಯೋಜನಾ ಅನುಷ್ಠಾನದ ವ್ಯಾಪ್ತಿಯಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿರುವ ಪರಿಶಿಷ್ಟ ಪಂಗಡದ ಜನಾಂಗದವರಿಗೆ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ಸದರಿ ಜನಾಂಗದವರು, ಗುಳೆ ಹೋಗದಂತೆ ಉದ್ಯೋಗವನ್ನು ಒದಗಿಸಲು ಆದ್ಯತೆ ನೀಡುವಂತೆ ಕ್ರಮವಹಿಸಲು ಈ ಮೂಲಕ ಸೂಚಿಸಿದೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**No. H-11011/5/2011-MGNREGA**
**Government of India**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi,
Dated: 16th February, 2012

To

All State/UT Principal Secretaries / Secretaries of Rural Development
In charge of MGNREGA

Subject: Follow-up action on recommendations contained in the Thirty-third Report of Committee on welfare of Scheduled Castes and Scheduled Tribes

Dear Madam/Sir,

As you are aware, Mahatma Gandhi National Rural Employment Guarantee Act (MGNREGA) provides for the enhancement of livelihood security of the households in rural areas of the country by providing up to one hundred days of guaranteed wage employment in every financial year to every household whose adult members volunteer to do unskilled manual work and also create assets for employment generation on sustainable basis.

The Parliamentary Committee on welfare of Scheduled Castes and Scheduled Castes and Scheduled Tribes in its 23rd Report to Parliament has re-iterated a recommendation of the Committee that Scheduled Tribes people who usually migrate for a limited period of time in a year from their villages should be provided jobs under Rural Development Guarantee Scheme. The livelihood opportunities of tribal people are critically dependent on their natural environment and habitat. Their development needs can be strengthened through effective implementation of MGNREGA.

It is therefore required to ensure that adequate numbers of MGNREGA works are kept open in Tribal dominated areas so that employment opportunities are available to the tribal population as and when demanded by them and can discourage their distress migration. you are therefore requested to advise all Districts and Programme Officers of MGNREGA in your State/UT to ensure that in all areas having tribal population, appropriate action as recommended by the Committee as indicated above is taken.

**(A.D. James)**
Under Secretary to the Government of India
Tel: 23382406

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ

2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.

ದೂ. 080 -22372738 E-mail : nrega-ka@nic.in

ಸಂ: ಗ್ರಾಅಪ:204: ಉಖಾಯೋ: 2009 ದಿನಾಂಕ: 22–03–2012

ರವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯಿತಿ
ರಾಜ್ಯದ ಎಲ್ಲಾ ಜಿಲ್ಲೆಗಳು

ಮಾನ್ಯರೆ,

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯ ಅಧಿಕಾರಿಗಳಿಗೆ ಒದಗಿಸಲಾಗಿರುವ ಪ್ರೀಪೇಯ್ಡ್ ಸಿಮ್ ಕಾರ್ಡ್ ಕುರಿತು

ಉಲ್ಲೇಖ: ಸರ್ಕಾರದ ಆದೇಶ ಸಂ. ಗ್ರಾಅಪ: 204:ಉಖಾಯೋ 2009 ಬೆಂಗಳೂರು ದಿನಾಂಕ 24–12–2011

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಯ ರಾಜ್ಯ ಮಟ್ಟದ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳಿಗೆ ಒದಗಿಸಲಾಗಿದ್ದ ಬಿ.ಎಸ್.ಎನ್.ಎಲ್.ನ ಪೋಸ್ಟ್ ಪೇಯ್ಡ್ ಸಿಯುಜಿಯನ್ನು ಪ್ರೀ ಪೇಯ್ಡ್ ಸಿಯುಜಿಯನ್ನಾಗಿ ಬದಲಾಯಿಸಿ ಆದೇಶಿಸಲಾಗಿರುತ್ತದೆ.

ಹಲವಾರು ಜಿಲ್ಲಾ ಪಂಚಾಯಿತಿಗಳಿಂದ ಹೆಚ್ಚಿನ ಸಿಮ್‌ಕಾರ್ಡ್‌ಗಳಿಗೆ ಬೇಡಿಕೆ ಬರುತ್ತಿದ್ದು, ಪ್ರೀ ಪೇಯ್ಡ್ ಸಿಮ್‌ಕಾರ್ಡ್ ಸೌಲಭ್ಯದಡಿ ಒಳಪಡುವ ಅಧಿಕಾರಿಗಳ ಪಟ್ಟಿಯನ್ನು ಉಲ್ಲೇಖಿತ ಸರ್ಕಾರದ ಆದೇಶದ ಅನುಬಂಧ–2ರಲ್ಲಿ ಈಗಾಗಲೇ ಒದಗಿಸಲಾಗಿರುತ್ತದೆ. ಸಿಮ್‌ಕಾರ್ಡ್‌ಗಾಗಿ ಬೇಡಿಕೆ ಸಲ್ಲಿಸುವ ಅಧಿಕಾರಿಯು ಈ ಅನುಬಂಧದಲ್ಲಿ ಗುರುತಿಸಿರುವ ಅಧಿಕಾರಿಗಳಿಗೆ ಸಂಬಂಧಪಡುತ್ತಿದ್ದಲ್ಲಿ, ಈ ಕಾರ್ಯಕ್ಕಾಗಿ ನೇಮಿಸಲಾಗಿರುವ ಜಿಲ್ಲಾ ನೋಡಲ್ ಅಧಿಕಾರಿಯು ಲಿಖಿತ ಪತ್ರದ ಮೂಲಕ ಸ್ಥಳೀಯ ಬಿ.ಎಸ್.ಎನ್.ಎಲ್ ಸಂಸ್ಥೆಯನ್ನು ಸಂಪರ್ಕಿಸಿ ಹೆಚ್ಚುವರಿ ಪ್ರೀಪೇಯ್ಡ್ ಸಿಮ್‌ಕಾರ್ಡ್‌ಗಾಗಿ ಬೇಡಿಕೆ ಸಲ್ಲಿಸಿ ಪಡೆದುಕೊಳ್ಳುವುದು. ಅನುಬಂಧ–2ರ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

**(ಪಿ. ಶಿವಶಂಕರ)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು
ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಪ್ರತಿಯನ್ನು:

ಪ್ರಧಾನ ವ್ಯವಸ್ಥಾಪಕರು, ಭಾರತ್ ಸಂಚಾರ್ ನಿಗಮ್ ಲಿ. ಸಿಜಿಎಂಟಿ ಕಛೇರಿ, ಕರ್ನಾಟಕ ಟೆಲಿಕಾಂ ಸರ್ಕಲ್, ನಂ. ಎಸ್.ವಿ. ರಸ್ತೆ, ಅಲಸೂರು, ಬೆಂಗಳೂರುರವರಿಗೆ ಕಳುಹಿಸುತ್ತಾ, ಸಂಬಂಧಪಟ್ಟ ಎಸ್‌ಎಸ್‌ಎಗಳಿಗೆ ಈ ಕುರಿತು ಮಾಹಿತಿಯನ್ನು ಒದಗಿಸಲು ಕೋರಿದೆ.

## ANNEXURE-II

### Illustration as how the pre paid plans are covered in the district and prepaid monthly (Top up)

| No. | List of officers of the District covered under CUG | Officers provided with post paid* sim card under | Monthly Amount to be recharge (Top up) under |
|---|---|---|---|
| | **District level officers of ZP-RDPR** | | |
| 1 | Deputy Secretary-1 | | |
| 2 | Project Director | | |
| 3 | Chief Accounts Officer | | |
| 4 | Chief Planning Officer | | |
| 5 | Assistant Secretary-1 | | |
| 6 | Assistant Project Director | | |
| 7 | Assistant Project Officer-1 | | |
| 8 | Assistant Project Officer-2 | | |
| 9 | Accounts Officer-1 | Plan-4499 | 700+60* |
| 10 | Accounts Officer-2 | | |
| 11 | PAEO-(CPO Section) | | |
| 12 | EE-PRED | | |
| 13 | AEE-Tech Asst (EE Officer) | | |
| 14 | ASO-EE Office | | |
| 15 | Others | | |
| 16 | Deputy Secretary -2 | | |
| 17 | Assistant Secretary-2 | | |
| 18 | Ombudsman | | |
| 19 | MIS Co-ordinator | Plan-199 | 300+60 * |
| | **Taluk level Officers** | | |
| 1 | Executive Officer | Plan-499 | 700 + 60* |
| 2 | Assistant Accounts Officer | | |
| 3 | Taluk planning officer | | |
| 4 | AEE-PRED | | |
| 5 | DM-AEE Office | | |
| | **Hobli /GP level Officers** | | |
| 1 | PDO | Plan-199 | 300+60* |
| 2 | GP Secretary | | |
| 3 | JE/AE | | |

Note:

1. All the post paid CUG sim cards will be converted to pre paid CUG
2. The Officers covered under Plan 499 in Post paid CUG are eligible for recharge (top up) of Rs. 700 +60 monthly
3. The Officers covered under Plan 199 in Post paid CUG are eligible for recharge (top up) of Rs. 300+60 monthly
4. Rs. 700/300 top up for taluk time
5. Rs. 60 top up, for the connection to be retained in prepaid closed user Group
6. Every pre paid CUG connection has to maintain minimum balance of Rs. 60 monthly so as to retain in closed user group.

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 -22372738 E-mail : nrega-ka@nic.in

ಗ್ರಾಅಪ:270: ಉಖಾಯೋ: 2011 ದಿನಾಂಕ: 22–03–2012

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: 2012–13ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಅನುಷ್ಠಾನಗೊಳಿಸಲು ಏಪ್ರಿಲ್ 2012ರ ಮಾಹೆಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ

ಉಲ್ಲೇಖ: ಸರ್ಕಾರದ ಪತ್ರದ ಸಂಖ್ಯೆ: ಗ್ರಾಅಪ:270:ಉಖಾಯೋ:2011, ದಿನಾಂಕ:28.11.2011

* * *

ತಮಗೆ ತಿಳಿದಂತೆ, ಕಾರ್ಮಿಕ ಮುಂಗಡ ಪತ್ರದ ಆಯವ್ಯಯವನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಿ, ಎಲ್ಲಾ ಪ್ರಕ್ರಿಯೆಗಳನ್ನು ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲು ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ಸೂಚಿಸಿರುತ್ತದೆ. ಸದರಿ ಪ್ರಕ್ರಿಯೆಯು ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಕಡ್ಡಾಯವಾಗಿರುತ್ತದೆ. ಈ ಅವಧಿಯಲ್ಲಿ, ಕಾಮಗಾರಿಗಳ ಗುಚ್ಛವನ್ನು ಬೇಡಿಕೆಗೆ ದ್ವಿಗುಣವಾಗಿ ತಯಾರಿಸಿ ಸಿದ್ಧಪಡಿಸಿಕೊಳ್ಳಬೇಕು ನಂತರ ಅನುಮೋದನೆಯಾದ ಎಲ್ಲಾ ಕಾಮಗರಿಗಳಿಗೆ ಬೇಕಾಗುವ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ವಿವಿಧ ಸಕ್ಷಮಾಧಿಕಾರಿಗಳಿಂದ ಪಡೆದು, 2012–13ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಅನುಮೋದಿಸುವ ಕಾರ್ಮಿಕ ಮುಂಗಡ ಪತ್ರದ ಆಯವ್ಯಯದ ಮೊತ್ತಕ್ಕೆ ಒಳಪಟ್ಟು ಕ್ರಿಯಾಯೋಜನೆಯನ್ನು ಕೂಡಲೇ ತಯಾರಿಸಿಕೊಂಡು ಸಕ್ಷಮ ಅಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿಗಳ ಅನುಷ್ಠಾನಕ್ಕೆ ಎಲ್ಲಾ ಅಗತ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಅನುಮೋದಿಸಿದ ಕ್ರಿಯಾಯೋಜನೆಯಲ್ಲಿ ಮೊಟ್ಟಮೊದಲು, ಮುಂದುವರೆದ ಕಾಮಗಾರಿಗಳಿಗೆ ಅಂದರೆ ಅಪೂರ್ಣಗೊಂಡ ಕಾಮಗಾರಿಗಳಿಗೆ ಪ್ರಥಮ ಆದ್ಯತೆ ನೀಡಿ, ನಂತರ ನೂತನ ಕಾಮಗಾರಿಗಳಿಗೆ ಆದ್ಯತೆಯನ್ನು ನೀಡುವುದು. ಯಾವುದೇ ಕಾರಣಕ್ಕೂ ಅನುಮೋದಿತ ಲೇಬರ್ ಬಡ್ಜೆಟ್ ಮೊತ್ತಕ್ಕಿಂತ ತಾವು ಅನುಮೋದಿಸುವ /ಅನುಮೋದಿಸಿರುವ ಕ್ರಿಯಾಯೋಜನೆಯ ಮೊತ್ತವು ಮೀರುವಂತಿಲ್ಲ.

2012–13ನೇ ಸಾಲಿನಲ್ಲಿ ಯೋಜನೆಯ ಅನುಷ್ಠಾನವನ್ನು ಯಾವುದೇ ಕಾರಣಕ್ಕೂ ವಿಳಂಬ ಮಾಡದೇ ಮುಂದುವರೆದ ಕಾಮಗಾರಿಗಳನ್ನು ಕೈಗೊಂಡು 01–04–2012ರಿಂದ ಯೋಜನೆಯ ಅನುಷ್ಠಾನವನ್ನು ಪ್ರಾರಂಭ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ. ಒಂದು ವೇಳೆ ಅಪೂರ್ಣಗೊಮಡ ಕಾಮಗಾರಿಗಳು ಇಲ್ಲದಿದ್ದಲ್ಲಿ ಕಳೆದ ಸಾಲಿನಲ್ಲಿ ಅನುಮೋದನೆಯಾಗಿ ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬರ ಪರಿಸ್ಥಿತತಿ ಇರುವುದರಿಂದ ಯಾವುದೇ ಕಾರಣಕ್ಕೂ ವಿಳಂಬ ಮಾಡದೇ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಏಪ್ರಿಲ್ 2012ರ ಮಾಹೆಯಿಂದ ಅನುಷ್ಠಾನಗೊಳಿಸಿ ಪ್ರಗತಿಯನ್ನು ಗಣನೀಯ ಪ್ರಮಾಣದಲ್ಲಿ ಸಾಧನೆ ಮಾಡಲು ಕ್ರಮವಹಿಸುವುದು. ಈ ಸಂಬಂಧ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳಿಗೆ ತಕ್ಕ ಸೂಚನೆಗಳನ್ನು ನೀಡಿ ಕಾಮಗಾರಿಗಳ ಅನುಷ್ಠಾನವನ್ನು ಏಪ್ರಿಲ್ 2012ರ ಮಾಹೆಯಿಂದಲೇ ಪ್ರಾರಂಭಿಸಿ ಸಾಧನೆ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಅದೇ ರೀತಿ ಎಂ.ಐ.ಎಸ್.ನಲ್ಲಿ ಅಳವಡಿಸಲಾದ ದತ್ತಾಂಶಗಳನ್ನು ಪರಿಶೀಲಿಸಿದಾಗ, 2011–12ನೇ ಸಾಲಿನಲ್ಲಿ ಅನುಷ್ಠಾನಕ್ಕೆ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಒಟ್ಟು ಸಂಖ್ಯೆಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ ಅತೀ ಕಡಿಮೆಯಾಗಿರುತ್ತದೆ. ಇದನ್ನು ಕೇಂದ್ರ ಸರಕಾರವು ಆಕ್ಷೇಪಿಸಿರುತ್ತದೆ. ಆದುದರಿಂದ ಇದನ್ನು ತಮ್ಮ ಮಟ್ಟದಲ್ಲಿಯೇ ವಿಶ್ಲೇಷಿಸಿ ಕಾಮಗಾರಿಗಳ ವಿವರಗಳನ್ನು ದಾಖಲಿಸಿ ಸದರಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಕ್ರಮವಹಿಸುವಂತೆ ತಿಳಿಸಿರುತ್ತದೆ. ಇಂತಹ ಪರಿಸ್ಥಿತಿಯು 2012–13ನೇ ಸಾಲಿನಲ್ಲಿ ಮರುಕಳಿಸದಂತೆ ಕ್ರಮವಹಿಸಲು ಸಹ ಸೂಚಿಸಿದೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಅನಸೂ ರಾಗ್ರಾಸಂಸ್ಥೆ

**ಕರ್ನಾಟಕ ಸರ್ಕಾರ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080 -22372738 E-mail : nrega-ka@nic.in

## ದಿನಾಂಕ: 05–03–2012ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶನಾಲಯದ ಅಧಿಕಾರಿಗಳ ಸಭೆಯ ನಡವಳಿಗಳು

ಸಭೆಯ ಪ್ರಾರಂಭದಲ್ಲಿ ನಿರ್ದೇಶಕರು (ಮಗಾರಾಗ್ರಾಉಖಾಯೋ)ರವರು ಮಾನ್ಯ ಪ್ರಧಾನ ಕಾರ್ಯದರ್ಶಿಗಳಿಗೆ ಸ್ವಾಗತಿಸಿ ಸಭೆ ನಡೆಸಿಕೊಳ್ಳಲು ಕೋರಿಕೊಂಡರು.

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಕಛೇರಿಯ ಆದೇಶ ದಿನಾಂಕ: 13–01–2012ರಂದೇ ಜಿಲ್ಲಾವಾರು ನೇಮಕ ಆಗಿರುವ ಪರಿವೀಕ್ಷಣ ಅಧಿಕಾರಿಗಳಿಂದ ಸಂಬಂಧಪಟ್ಟ ಜಿಲ್ಲೆಗಳಿಗೆ ಭೇಟಿ ನೀಡಿ ಗಮನಿಸಿದ ಅಂಶಗಳ ಬಗ್ಗೆ ಮಾಹಿತಿ ಪಡೆಯಲಾಯಿತು ಪರಿವೀಕ್ಷಣೆ ಸಮಯದಲ್ಲಿ ಕೆಳಕಂಡ ಅಂಶಗಳ ಬಗ್ಗೆ ವಿಶೇಷವಾಗಿ ಗಮನಹರಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಹಾಜರಿದ್ದ ಎಲ್ಲಾ ಅಧಿಕರಿಗಳಿಗೆ ಸೂಚಿಸಿದರು.

   i. ಸರ್ಕಾರದಿಂದ ಇತ್ತೀಚೆಗೆ ಹೊರಡಿಸಿದ ಆದೇಶಗಳು/ಸುತ್ತೋಲೆಗಳ ಬಗ್ಗೆ ಜಿಲ್ಲಾ ಪಂಚಾಯಿತಿ / ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಕ್ರಮವಹಿಸಿರುವ ಬಗ್ಗೆ ಪರಿಶೀಲಿಸಲು ತಿಳಿಸಿದರು. ವಿಶೇಷವಾಗಿ ದಿನಾಂಕ: 04–01–2012ರಂದು ಮೇಟಿಗಳ ಆಯ್ಕೆ ಬಗ್ಗೆ ಹೊರಡಿಸಿರುವ ಸುತ್ತೋಲೆ ಬಗ್ಗೆ ಕ್ರಮವಹಿಸಿರುವ ಬಗ್ಗೆ ಪರಿಶೀಲಿಸಲು ತಿಳಿಸಿದರು. ಮೇಟಿಗಳನ್ನು ಈಗಾಗಲೇ ಆಯ್ಕೆ ಮಾಡಿದ್ದಲ್ಲಿ ಸಂಬಂಧಪಟ್ಟ ಮಾಹಿತಿಯನ್ನು ಪಡೆದು ಅವಶ್ಯಕತೆ ಅನುಸಾರ ಅವರ ತರಬೇತಿ ಬಗ್ಗೆ ವರದಿ ಸಲ್ಲಿಸಲು ತಿಳಿಸಿದರು (ಕ್ರಮ ಎಲ್ಲಾ ಪರಿವೀಕ್ಷಣ ಅಧಿಕಾರಿಗಳು).

   ii. ಅದೇ ರೀತಿ ಪರಿಶೀಲನೆ ಸಮಯದಲ್ಲಿ ಸಂಬಂಧಪಟ್ಟ ಲೆಕ್ಕ ತಪಾಸಣೆ ವರದಿಗಳು ಮತ್ತು ಸಾಮಾಜಿಕ ಲೆಕ್ಕ ತಪಾಸಣೆ ವರದಿಗಳು ಮತ್ತು ಒಂಬುಡ್ಸ್‌ಮನ್‌ರವರ ಆದೇಶಗಳನ್ನು ಮತ್ತು ಅವುಗಳ ಬಗ್ಗೆ ಕ್ರಮವಹಿಸಿದ ಬಗ್ಗೆ ಸಹ ಪರಿಶೀಲನೆ ನಡೆಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು. ಪರಿಶೀಲನೆ ಸಮಯದಲ್ಲಿ ಕೂಲಿ ಪಾವತಿಸಿಸಿರುವ ಬಗ್ಗೆ ಸಂಬಂಧಪಟ್ಟ ಉದ್ಯೋಗ ಚೀಟಿಗಳು ಮತ್ತು ಬ್ಯಾಂಕ್ ಪಾಸ್‌ಬುಕ್‌ಗಳನ್ನು ಸಹ ಪರಿಶೀಲಿಸಲು ತಿಳಿಸಿದರು. ಅದೇ ರೀತಿ ಪರಿಶೀಲನೆ ಸಮಯದಲ್ಲಿ ಪರಿಶೀಲಿಸಬೇಕಾದ ದಾಖಲೆಗಳ ಚೆಕ್‌ಲಿಸ್ಟ್‌ನ್ನು ಸಿದ್ಧಪಡಿಸಲು ಜಂಟಿ ನಿರ್ದೇಶಕರು–1ರವರಿಗೆ ಸೂಚಿಸಲಾಯಿತು. (ಕ್ರಮ ಜಂಟಿ ನಿರ್ದೇಶಕರು–1 ಮತ್ತು ಎಲ್ಲಾ ಪರಿವೀಕ್ಷಣ ಅಧಿಕಾರಿಗಳು).

   iii. ಪರಿವೀಕ್ಷಣಾಧಿಕಾರಿಗಳು ಕ್ಷೇತ್ರ ಭೇಟಿ ಮುಗಿಸಿದ ನಂತರ ಅವರ ವರದಿಗಳನ್ನು ನಿಗದಿತ ನಮೂನೆಯಲ್ಲಿ ಪ್ರಾಥಮಿಕವಾಗಿ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸ್ವತಃ ಸಲ್ಲಿಸಲು ತಿಳಿಸಲಾಯಿತು (ಕ್ರಮ ಎಲ್ಲಾ ಪರಿವೀಕ್ಷಣೆ ಅಧಿಕಾರಿಗಳು).

2. 50%ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿರುವ ಜಿಲ್ಲೆಗಳ ಬಗ್ಗೆ ಹೆಚ್ಚು ಗಮನ ಹರಿಸಲು ಸಭೆಯಲ್ಲಿ ಸೂಚಿಸಲಾಯಿತು. ವಿಶೇಷವಾಗಿ ತುಮಕೂರು ಜಿಲ್ಲೆಯ ಅನುದಾನ ವೆಚ್ಚವಾಗಿದ್ದರೂ ಸಹ ಎಂ.ಐ.ಎಸ್.ನಲ್ಲಿ reflect ಆಗದೆ ಇರುವ ಬಗ್ಗೆ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ)ರವರು ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು (ಕ್ರಮ ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ).

3. ಹೊಸ ಅನುಸೂಚಿತ ದರಗಳು (ಎಸ್‌ಆರ್) ಹೊರಡಿಸಲು ಮುಖ್ಯ ಕಾರ್ಯ ಅಭಿಯಂತರರನ್ನು ಸಂಪರ್ಕಿಸಿ

ಶೀಘ್ರ ಕ್ರಮವಹಿಸಲು ಸಹಾಯಕ ನಿರ್ದೇಶಕರು–3ರವರಿಗೆ ತಿಳಿಸಲಾಯಿತು (ಕ್ರಮ ಮುಖ್ಯ ಇಂಜಿನಿಯರ್ ಮತ್ತು ಸಹಾಯಕ ನಿರ್ದೇಶಕರು–3).

4. ಅವಶ್ಯಕತೆಯ ಅನುಸಾರ ವಿವಿಧ ಅನುಷ್ಠಾನ ಅಧಿಕಾರಿಗಳಿಗೆ ಮಾರ್ಚ್ 2012ರ ನಂತರ ಕಾರ್ಯಾಗಾರಗಳನ್ನು ANSSIRD, Mysore ರವರ ಸಹಯೋಗದೊಂದಿಗೆ ಏರ್ಪಡಿಸಲು ತಿಳಿಸಲಾಯಿತು (ಕ್ರಮ ಜಂಟಿ ನಿರ್ದೇಶಕರು–2 ಮತ್ತು ನಿರ್ದೇಶಕರು, ANSSIRD, Mysore).

ಸಭೆಯ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ

ಗೆ,

ಸಂಬಂಧಪಟ್ಟ ಎಲ್ಲಾ ಪರಿವೀಕ್ಷಣ ಅಧಿಕಾರಿಗಳಿಗೆ

ಪ್ರತಿಯನ್ನು

1. ನಿರ್ದೇಶಕರು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ,ರವರಿಗೆ ಸೂಕ್ತ ಕ್ರಮಕ್ಕಾಗಿ.
2. ನಿರ್ದೇಶಕರು, ANSSIRD, Mysore, ರವರಿಗೆ ಸೂಕ್ತ ಕ್ರಮಕ್ಕಾಗಿ.
3. ಮುಖ್ಯ ಇಂಜಿನಿಯರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ) ರವರಿಗೆ ಸೂಕ್ತ ಕ್ರಮಕ್ಕಾಗಿ.

## ಪರಿವೀಕ್ಷಣ ಸಮಯದಲ್ಲಿ ಪರಿಶೀಲಿಸಬೇಕಾದ ಮುಖ್ಯ ದಾಖಲೆಗಳು (Check List)

### ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ

1. ಲೆಕ್ಕ ತಪಾಸಣಾ ವರದಿ, ಇದರ ಬಗ್ಗೆ ಕೆಳಕಂಡ ಅಂಶಗಳು ಗಮನಿಸುವುದು.
   i. ವಸೂಲಾತಿ ಮತ್ತು ಆಕ್ಷೇಪಣೆಗೆ ಶಿಫಾರಸ್ಸು ಮಾಡಿದ ಮೊತ್ತ ಮತ್ತು ಅದಕ್ಕೆ ಕಾರಣಕರ್ತರಾದ ಅಧಿಕಾರಿಗಳು/ನೌಕರರು.
   ii. ಸಂಬಂಧಪಟ್ಟವರ ವಿರುದ್ಧ ಜಿಲ್ಲಾ ಪಂಚಾಯಿತಿ ವತಿಯಿಂದ ವಹಿಸಿದ ಕ್ರಮದ ಬಗ್ಗೆ ಮಾಹಿತಿ.
   iii. ಆಡಿಟ್ ವರದಿಗಳಲ್ಲಿ ಗಮನಿಸಿದ ಇತರೆ ಅವ್ಯವಹಾರಗಳು ಮತ್ತು ಅವುಗಳ ಬಗ್ಗೆ ಕ್ರಮವಹಿಸಿದ ಬಗ್ಗೆ.
   iv. ಲೆಕ್ಕ ತಪಾಸಣಾ ವರದಿಗಳಿಗೆ ಸಲ್ಲಿಸಿದ ಪಾಲನ ವರದಿಗಳ ಬಗ್ಗೆ.
2. ಒಂಬುಡ್ಸ್‌ಮನ್‌ರವರ ಆದೇಶಗಳು ಮತ್ತು ಅದರ ಬಗ್ಗೆ ವಹಿಸಿದ ಕ್ರಮದ ಬಗ್ಗೆ.
3. ಸಾರ್ವಜನಿಕರ ಕುಂದುಕೊರತೆ ನಿವಾರಣೆಯ ವ್ಯವಸ್ಥೆ ದೂರು ವಹಿ ಮತ್ತು ದೂರು ಪೆಟ್ಟಿಗೆಗಳ ನಿರ್ವಹಣೆ
4. ಸರ್ಕಾರದಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಗಳ ಬಗ್ಗೆ ಕ್ರಮ.

### ತಾಲ್ಲೂಕು ಪಂಚಾಯಿತಿಯಲ್ಲಿ

1. ಲೆಕ್ಕ ತಪಾಸಣಾ ವರದಿ, ಇದರ ಬಗ್ಗೆ ಕೆಳಕಂಡ ಅಂಶಗಳು ಗಮನಿಸುವುದು.
   i. ವಸೂಲಾತಿ ಮತ್ತು ಆಕ್ಷೇಪಣೆಗೆ ಶಿಫಾರಸ್ಸು ಮಾಡಿದ ಮೊತ್ತ ಮತ್ತು ಅದಕ್ಕೆ ಕಾರಣಕರ್ತರಾದ ಅಧಿಕಾರಿಗಳು/ನೌಕರರು.
   ii. ಸಂಬಂಧಪಟ್ಟವರ ವಿರುದ್ಧ ಜಿಲ್ಲಾ ಪಂಚಾಯಿತಿ ವತಿಯಿಂದ ವಹಿಸಿದ ಕ್ರಮದ ಬಗ್ಗೆ ಮಾಹಿತಿ.
   iii. ಆಡಿಟ್ ವರದಿಗಳಲ್ಲಿ ಗಮನಿಸಿದ ಇತರೆ ಅವ್ಯವಹಾರಗಳು ಮತ್ತು ಅವುಗಳ ಬಗ್ಗೆ ಕ್ರಮವಹಿಸಿದ ಬಗ್ಗೆ.

iv. ಲೆಕ್ಕ ತಪಾಸಣಾ ವರದಿಗಳಿಗೆ ಸಲ್ಲಿಸಿದ ಪಾಲನ ವರದಿಗಳ ಬಗ್ಗೆ.

2. ಒಂಬುಡ್ಸ್‌ಮನ್‌ರವರ ಆದೇಶಗಳು ಮತ್ತು ಅದರ ಬಗ್ಗೆ ವಹಿಸಿದ ಕ್ರಮದ ಬಗ್ಗೆ.
3. ಸಾರ್ವಜನಿಕರ ಕುಂದುಕೊರತೆ ನಿವಾರಣೆಯ ವ್ಯವಸ್ಥೆ ದೂರು ವಹಿ ಮತ್ತು ದೂರು ಪೆಟ್ಟಿಗೆಗಳ ನಿರ್ವಹಣೆ
4. ಸರ್ಕಾರದಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಗಳ ಬಗ್ಗೆ ಕ್ರಮ.
5. ಸಾಮಾಜಿಕ ಲೆಕ್ಕ ತಪಾಸಣಾ ವರದಿಗಳ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆ

## ಗ್ರಾಮ ಪಂಚಾಯಿತಿಯಲ್ಲಿ

1. ಸರ್ಕಾರದ ಸುತ್ತೋಲೆ ಸಂ.ಸ ಗ್ರಾಅಪ.204.ಉಖಾಯೋ.2011, ದಿನಾಂಕ: 22.08.2011ರಲ್ಲಿ ಸೂಚಿಸಿದಂತೆ ದಾಖಲೆಗಳ ಪರಿಶೀಲನೆ ಮಾಡುವುದು.
2. ಲೆಕ್ಕ ತಪಾಸಣೆ ವರದಿಗಳಲ್ಲಿ ಗಮನಿಸಿದ ಅಂಶಗಳು ಮತ್ತು ಅವುಗಳ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ.
3. ಸಾಮಾಜಿಕ ಲೆಕ್ಕ ತಪಾಸಣೆ ವರದಿಗಳು ಮತ್ತು ಅದಕ್ಕೆ ಸಲ್ಲಿಸಿದ ಪಾಲನ ವರದಿಗಳ ಪರಿಶೀಲನೆ.
4. ಒಂಬುಡ್ಸ್‌ಮನ್‌ರವರ ಆದೇಶಗಳು ಮತ್ತು ಅವುಗಳ ಬಗ್ಗೆ ವಹಿಸಿದ ಕ್ರಮದ ಬಗ್ಗೆ ಪರಿಶೀಲನೆ.
5. ಸಾರ್ವಜನಿಕರ ಕುಂದುಕೊರತೆ ನಿವಾರಣೆ ಬಗ್ಗೆ ತೆಗೆದುಕೊಂಡ ಕ್ರಮಗಳು (ದೂರು ವಹಿ ಮತ್ತು ದೂರು ಪೆಟ್ಟಿಗೆ ನಿರ್ವಹಣೆ).
6. ಸರ್ಕಾರದಿಂದ ಇತ್ತೀಚೆಗೆ ಹೊರಡಿಸಿದ ಆದೇಶಗಳ / ಸುತ್ತೋಲೆಗಳ ನಿರ್ವಹಣೆ ಮತ್ತು ಅನುಷ್ಠಾನದ ಬಗ್ಗೆ ಪರಿಶೀಲನೆ.

* * *

ಅನಸೂ ರಾಗ್ರಪಂರಾ

## PROCEEDINGS OF GOVERNMENT OF KARNATAKA

Sub: Preparation of perspective model plan for Gram Panchayats on Pilot basis in Karnataka State by ASTRA, Bangalore under MGNREGA.

Read:

1. Proposal No. ASTRA/01/PP-MGNREGA/2012, dated 19.01.2012 from the Executive Director, ASTRA, Bangalore.
2. Para No. 4.5 of the operational guidelines 2008 issued for MGNREGA by Government of India.

### Preamble

It is mandatory to prepare perspective plan for 5 years by the districts as per the para no. 4.5 of the operational guidelines issued for MGNREGA by Government of India, by integrating the work priorities with a long term development strategy for creating durable assets and strengthening the livelihood resource base of the rural poor, which has been the important objective of the Scheme. Implementation of MGNREGS has been in operation in the State since 2006-07 and earlier perspective plan prepared for 5 years by the districts in the State for preparation of advance annual plans would be over by this time. Further for preparation of labour budget and annual action plans for the next phase it is considered necessary to get the perspective model plans prepared for the next phase at the State level on Pilot basis for some of the GPs selected from different regions with some of the reputed agencies & to provide the same to the districts to go ahead with the preparation of perspective plan for 5 years & also thus uniformity could be maintained. Going by experience, perspective plans prepared for the districts by various agencies was not encouraging and also not of much help in identifying the potential linkages between the works proposed and long term employment generation and sustained employment. In order to have a compact implementable and identical comprehensive perspective plan within the frame work of the guidelines, State Government has decided to get the perspective plan prepared for village level by reputed agencies in few GPs i.e., by selecting one to three GPs from each of five regions on Pilot basis, which would serve as a model plan for preparation of perspective plan for the districts. In this regard on enquiry with one of the Officer working in ASTRA, Bangalore it has been agreed to take up the task of preparation of perspective model plan for some of the GPs in different regions. Accordingly the concerned agency has come up with the proposal for preparation of model perspective plan for few GPs selecting one to three GPs from all the different regions together with the line estimate cost of Rs. 48,800/- per GP. After careful examination of the proposal submitted by the Executive Director, ASTRA, Bangalore. State Government has decided to entrust the task of the preparation of model perspective plan in the selected 10 GPs of Karnataka State to the Association for Social Transparency. Rights and Action (ASTRA) Bangalore at the cost of Rs. 48,800/- per GP as per their proposals. Hence the following order.

### Govt Order No. RDP.270.EGS.2011, Bangalore, dated, 05.03.2012.

In the circumstances explained in the preamble, sanction is hereby accorded to entrust the task of the preparation of model perspective plan for five years in the selected 10 Gram Panchayats of the different regions of the Karnataka on pilot basis at a cost of Rs. 4,88,000/-(Four Lakhs & Eighty Eight Thousand only) to "The Association for Social Transparency, Rights & Action" (ASTRA) Karnataka State at Rs. 48,800/-per GP on the Socio-economic parameters indicated in conformity with the Act & operation guidelines 2008 and subject to the following conditions.

## I. Parameters to be followed in the preparation of the model perspective plan :

1. To develop / design a methodology for preparation of Perspective Plan and formats to collect the information.
2. To assess the backwardness of the village with specific emphasis on poverty.
3. To assess the resources available in the village.
4. Village based with the village as the unit for planning.
5. Indicate the methods adopted to analyze the collected information and to arrive at factual position / reasons for backwardness.
6. To suggest the methods of tapping the available resources to eradicate the poverty & up-liftment of the village.
7. To prepare the Perspective Plan in such a way that it shall embody the optimum utilization of NREGA funds and natural resources.
8. To suggest ways and means for convergence of other Schemes being implemented by Zilla Panchayat / Taluk Panchayat / Gram Panchayats with MGNREGS with special focus on Watershed programmes.
9. To develop measurable indicators to identify the poverty and backwardness and projected figures and measure the success after the completion of the five year Perspective Plan.
10. Region wise specific assessments to be indicated to know the exact status of each region.
11. Assessment of the Labour demand.
12. Involvement of the local communities such as CBOs, NGOs, PRIs & Line Depts.
13. Assess the socio-economic status of the rural people with the advent of MGNREGS in the villages.
14. Estimate the number of employment days likely to be generated from these works.
15. Identify the works that could be taken up under MGNREGS in reference to the permissible work contemplated under the guidelines.
16. Propose new works other than the permissible works that could be taken up under 9th category with the approval of the Government of India.
17. Indicate the projection of number of person days likely to be generated from these works during this Perspective Plan for five years.

## II. GP level Perspective Planning

Duration : Five years.

Scope : Village-based

Approach : Need-based approach with special Gram Sabhas.

## III. GPs identified for preparation of Model Perspective Plan

### a) Malnad Area

1. Valnur Thyagathur Gram Panchayat, Somvarpet Taluk, Kodagu District.
2. Thithimathi Grama Panchayath, Virajpet Taluk, Kodagu District.

**b) Coastal Area**

1. Kombaru Gram Panchayat, Puttur Taluk, Dakshina Kannada District.
2. Gokarna Gram Panchayat, Kumta Taluk, Uttara Kannada District.

**c) Semi Dry**

1. V.Yaradakere Gram Panchayat, Kadur Taluk, Chikmagalur District.
2. Kunkova Gram Panchayat, Honnali taluk, Davanagere District.

**d) Dry**

1. Gumgaol Gram Panchayat, Navalgund Taluk, Dharwad District.
2. Kelur Gram Panchayat, Hunagunda Taluk, Bagalkot District.
3. Muthakapalli Grama Panchayat, Srinivaspura Taluk, Kolar District.

**e) Bangalore Rural**

1. Sulibele Gram Panchayat, Hoskote Taluk.

## IV. Mode of Payment

Payment of the sanctioned amount will be released in the following manner.

1. 25% of the sanctioned amount will be released to the ASTRA as 1st Instalment soon after the entrusting the task of the preparation of perspective plan & signing the MOU with the concerned Zilla Panchayat.
2. 25% of the sanctioned amount will be released to the ASTRA as 2nd Instalment soon after the completion of collection of information in the formats & analysis done.
3. 25% of the sanctioned amount will be released to the ASTRA as 3rd Instalment soon after the submission of draft report to the concerned Zilla Panchayats for his / her comments.
4. 25% of the sanctioned amount will be released to the ASTRA as 4th Instalment soon after the acceptance by the concerned Zilla Panchayat & State Government.

## V. Other Conditions

1. Soon after the receipt of the Government Order / Work Order is received, the ASTRA would undertake the task of preparing model perspective plan in the 10 selected Gram Panchayats.
2. The Department of RD & PR will provide necessary support to the ASTRA for preparation of perspective plan in the selected 10 GPs.
3. The ASTRA should submit one hard & soft copy of the MGNREGS perspective plan for the each of the 10 GPs invariably (both in Kannada & English) after the acceptance of the draft report by the Government with due recommendation by the concerned Chief Executive Officer, Zilla Panchayat & Executive Officer, Taluk Panchayat.
4. The task of the preparation of model perspective plan for 10 GPs shall be completed within 3 Months of the receipt of the order from the Government.
5. The same should be presented with PPT + Notes to the Government.

## VI. Responsibilities of the District Programme Coordinators in the preparation of the model perspective plan.

1. Base line survey to be indicated to the above agency before taking up perspective plan.
2. Methodology for the Preparation of Perspective Plan, formats and questionnaire looking into the geographical conditions of the area and also local needs to be indicated.
3. Logistics arrangements at Panchayat Raj Institutions level shall be made, to the visiting organization.
4. Information & figures the preparation of perspective Plan shall be made available to the organization.
5. A meeting with line departments and Panchayat Raj Institutions Officials who are involved in the programme shall be organized.
6. All the relevant information & records shall be made available to the organization.
7. A meeting with Panchayat Raj Institutions non-official or elected representatives shall be organized.
8. All the concerned Zilla Panchayat, Taluk Panchayat & Gram Panchayat shall co-operate with the visiting organization and extend support for the success of the Preparation of Perspective Plan.

Expenditure towards the cost of the Preparation of Model Perspective Plan for the respective Gram Panchayats payable to the agency may be met under 6% of the administrative cost of MGNREGS by the concerned District Programme Coordinators by following the mode of payment as mentioned above at Sl.No. IV after ensuring satisfaction of each stage of plan.

By order and in the name of the
Governor of Karnataka

**(Dr. Amita Prasad)**
Principal Secretary to Government
Rural Development & Panchayat Raj Dept.

To

1. The Accountant General (A & E) in Karnataka, Bangalore & Dharwad.
2. The ASTRA, #694, 8th main, VI 'A' Crs, Hampinagar, Vijayanagara 2nd Stage, Bangalore-40.
3. The Chief Executive Officer, Zilla Panchayat, Kodagu, Dakshina Kannada, Uttara Kannada, Chikmagalur, Davanagere, Dharwad, Kolar, Bagalkote & Bangalore Rural with a request extend necessary co-operation & assistance to the above said agency when they visit to your district in connection with the preparation of model perspective plan for the GPs.
4. P.S to the Principal Secretary to the Government, Rural Development & Panchayat Raj Dept, M.S.Building Bangalore.
5. P.S to the Principal Secretary to the Government, Planning Dept, M.S.Building Bangalore.
6. P.A to Director (MGNREGA), RD & PR Dept. M.S.Building, Bangalore.
7. Chief for Finance & Accounts, Directorate of MGNREGA, RD &PR Dept, M.S.Building, Bangalore.
8. Special Officer, RD & PR Dept for information & to upload the same in the NREGA website.

No.RDP.75.EGS2009

Karnataka Government Secretariat,
Sachivalaya-2, M.S.Building,
Bangalore, Dated 16.03.2012.

To

1. All the Chief Executive Officers of
   Zilla Panchayat in Karnataka State.
2. All the Executive Officers of
   Taluk Panchayat.

Sir,

Sub: Writ Petition (Civil) No.645 of 2007 (under article 32 of the Constitution of India) centre of environment and food security Vs union of India and others under MGNREGA.

Ref: D No. 4632/2007/PIL(WRIT) dated 13th Feb 2012 from Assistant Registrar Supreme Court of India, New Delhi.

* * *

Assistant Registrar Supreme Court of India, New Delhi, vide above ref has sent a copy of the Executive summary in relation to the above Writ Petition. Same is enclosed for your reference and further necessary action at your end.

On examination of the Executive summary, it is found that all the points referred therein related to the State of Orissa. As per this summary, lot of irregularities are observed in the implementation of MGNREGS in the State of Orissa.

To avoid such occurrence/deviations in our State, all the Chief Executive Officers are advised to take precautionary measures to avoid such type of irregularities. It is directed that all CEOs should take proper precaution to implement MGNREGS as per strict guidelines & financial propriety. All are directed for ensuring proper record maintenance and supervision of the Scheme as directed by State from time to time.

Yours Faithfully,

**(Dr. Amita Prasad)**
Principal Secretary to Government
Rural Development & Panchayat Raj Dept.

## EXECUTIVE SUMMARY ON IMPLEMENTATION OF NATIONAL RURAL EMPLOYMENT GUARANTEE ACT IN SIX DISTRICTS OF STATE OF ORISSA DURING YEAR 2006-07

1. Shri Parshuram Ray, Petitioner cum Director of Centre for Environment and Food Security (CEFS), New Delhi had approached the Hon'ble Supreme Court of India vide a Writ Petition No (Civil) 645 of 2007 against the Union of India and 24 State Governments, including State of Orissa for issuing appropriate directions to the respondents to ensure the proper implementation of National Rural Employment Guarantee Act and also the proper utilization of funds allocated under the said Act. The Petitioner Organization had specifically mentioned its survey report conducted in six districts i.e. Bolangir, Naupada, Kalahandi, Koraput, Nabrangpur and Rayagada of State of Orissa during year 2006-07.

2. A Comprehensive enquiry was conducted as per the direction of Hon'ble Supreme Court to look into the alleged large scale irregularities, misappropriation and diversion of Govt. funds, allocated to the State of Orissa under Mahatma Gandhi National Rural Employment Guarantee Act, 2005m during the financial year 2006-2007. The enquiry was carried out in 104 villages of 6 districts, namely Bolangir, Naupada, Kalahandi, Koraput, Nabrangpur and Rayagada. Six teams consisting of CBI officers with the assistance of State Police conducted the enquiry, conducted in all the six districts, During the course of enquiry, SP visited 4 districts to supervise the enquiry. Assistance of officials from Ministry of Rural Development and other officials associated with the implementation of the scheme were also taken during the enquiry. Technical officer of CBI also visited some of the projects during the enquiry to assist Enquiry Officers. Summary of the findings and gist of irregularities noticed during the enquiry is as follows:

2(i) Centre for Environment & Food security (CEFS) had alleged existence of large number of Ghost job card holders. This aspect was exhaustively examined as this was the core of allegations. Efforts were made to locate and identify each of the job card holders whose names figured in the Survey report of CEFS. During enquiry more than 3800 households including 713 job card holders (out of 881 reflected in the survey report of CEFS) in the six districts could be located after repeated visits and were examined. As there was a long time gap (the matter pertained to year 2006-07 and the enquiry was conducted in 2011) a number of job card holders who migrate for work could not be located. Some of them had also expired. However, 38 family members of such job card holders, who not found during enquiry, were also examined. As stated by them all the 38 job card holders had gone to other places for work. 21 job card holders reflected in survey report were found to have expired; however, their family members were examined who corroborated their employment in the projects. Thus, around 80% of job card holders, reflected in survey report could be located and examined. It can be safely concluded that the allegation of large scale existence of ghost job card holders is not established.

2(ii) During enquiry by and large people have confirmed the receipt of wages. However, in some instances there are entries in muster rolls which have been disputed by the beneficiaries. But due to lapse of time and illiteracy majority were not in a position to tell

the exact number of days for which they worked and got paid. In 10 villages, some people have complained of less payment but even in such cases, they were not in a position to tell the actual amounts. In 3 villages, few job card holders denied for having employed in the project and payment also, criminal case is already registered pertaining to these three villages with district police Kalahandi. Enquiry also revealed that in many villages persons had worked without having job cards which is an irregularity.

2(iii) During enquiry, several discrepancies were also noticed in the online entries in the web site of Ministry of Rural Development vis-a-vis entries on job cards and Muster Roll, of the beneficiaries.

2(iv) In two instances in district Bolangir and one instance in Distt. Nuapada, it was found that persons were engaged in the two projects at the same time, though, the misappropriated amount in such cases were not substantial.

2(v) During enquiry, all the works executed during the year 2006-07 were found existing, though in 08 instances, mentioned below repeat/extension of works were carried out in the subsequent years:-

a) Road from Chancher to Gudang of Chancher G.P. of Bhawanipatna Block, Distt. Kalahandi.
b) Road form Chancher to Digrapada of Chancher G.P. of Bhawanipatna Block, Distt. Kalahandi.
c) Road form Khing to Upper Belgaon of Talbelagaon G.P. of Bhawanipatna Block, Distt. Kalahandi.
d) Ghat Cutting from Mangrel to Debasandhaguda, Distt. Koraput.
e) Ghat Cutting from Raising to Rudhichuan, Distt. Koraput.
f) Mettaling Road from PWD Road to village Khillua, Distt. Koraput.
g) PWD Road to Hanjarpentha, Distt. Koraput.
h) Construction of Raod from Manchgam to Bangalaguda, Distt. Nabrangpur.

2(vi) Procedures for maintenance of different registers, muster rolls and authenticated entry on National Online Module were not followed as prescribed, in all the six districts. Enquiry revealed that State Govt. has taken action in sixty matters U/s 25 of MGNREG Act where fines were imposed on the concerned officials and in some of the cases, departmental enquiries were also initiated. In Bolangir district, one work was executed without having statutory sanction of the authority for which action is proposed against the concerned officers. In Nabrangpur district, some of the projects were executed from the NREGA fund, in continuation of earlier scheme i.e. Sampooran Gramin Rojgar Yojana (SGRY) and National Food for Work Programme (NFFWP) for which documentation was not done as per guidelines. Further, projects taken up under these two programmes/ scheme were allowed under NREGA for transitional period.

2(vii) As prescribed in the NREGA guidelines, village Monitoring Committee was set up in all the district. Members of the said committee who were examined corroborated the monitoring of the project executed in their respective villages.

2(viii) During enquiry, in some instances online entry on MIS software of Ministry of Rural Development did not match with the entries found on the muster roll. During enquiry entries found on the muster roll were relied upon as job card holders have also accepted their signature/thumb impression on it. However conclusive opinion could not be formed on the authenticity of either online entry or entry found in the muster roll, due to lapse of time.

2(ix) Diversion of fund revealed in one instance a pointed out by Comptroller and Auditor General in its report had highlighted that in Nuapada Distt. expenditure of Rs.2.54 lacs was made be the District Magistrate-cum Collector for landscaping at the residential premises of Collector-cum-DM. Enquiry conducted in this matter revealed that an amount of Rs. 2.54 lakh was spent on “landscaping and development of garden in the residence of Collector, Nuapada which was outside the scope of permissible works under the scheme.

2(x) In 10 projects, out of 34 examined during the enquiry, fake and forged bills of the material supply have emerged as the firms have disowned all such bills shown to have been issued by them. This fact has emerged in all the six districts. The remaining projects need to be further investigated on similar line

**Supdt. of Police**
CBI EOU-II
New Delhi

# ಐ.ಎಂ.ಎಸ್.

ಅನುವಾದ ಸಂಗ್ರಹ ಸಂಸ್ಥೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 41. ಉಖಾಯೋ 2006

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು ದಿನಾಂಕ 11–04–20007

# ಸುತ್ತೋಲೆ

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ" ದಡಿ ಗ್ರಾಮ ಪಂಚಾಯಿತಿ/ ಗ್ರಾಮ/ ಕುಟುಂಬ/ ವ್ಯಕ್ತಿಗಳಿಗೆ ಸಂಕೇತ ಸಂಖ್ಯೆ ನೀಡುವ ಬಗ್ಗೆ

* * *

1. ಸರ್ವ ಕುಟುಂಬ ಸಮೀಕ್ಷೆಯಡಿಯಲ್ಲಿ ನೀಡಲಾಗಿರುವ ಸಂಕೇತ ಸಂಖ್ಯೆಯ ಕ್ರಮವನ್ನು ಇಲ್ಲಿಯೂ ಸಹ ಅನುಸರಿಸಲಾಗಿದೆ.
2. ರಾಜ್ಯ/ ಜಿಲ್ಲಯ/ ತಾಲ್ಲೂಕಿನ/ ಗ್ರಾಮ ಪಂಚಾಯಿತಿಯ / ಗ್ರಾಮದ/ ಕುಟುಂಬದ/ ವೈಯಕ್ತಿಕ ಸಂಕೇತಗಳು ಈ ಕೆಳಗಿನಂತೆ ಇರುತ್ತವೆ.
   00–00–00–000–000–0000–0
3. ಇದರಲ್ಲಿನ ಮೊದಲ ಎರಡು ಅಂಕಿಗಳು ರಾಜ್ಯದ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ಎರಡು ಅಂಕಿಗಳು ಜಿಲ್ಲೆಯ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ಎರಡು ಅಂಕಿಗಳು ತಾಲ್ಲೂಕಿನ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ಮೂರು ಅಂಕಿಗಳು ಗ್ರಾಮ ಪಂಚಾಯಿತಿಯ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ಮೂರು ಅಂಕಿಗಳು ಗ್ರಾಮದ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ನಾಲ್ಕು ಅಂಕಿಗಳು ಕುಟುಂಬದ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   ನಂತರದ ಎರಡು ಅಂಕಿಗಳು ಆ ಕುಟುಂಬದ ಸದಸ್ಯರ ವೈಯಕ್ತಿಕ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.
   (–) ಚಿಹ್ನೆಯನ್ನು ಕೇವಲ ಸ್ಪಷ್ಠತೆಗಾಗಿ ನಮೂದಿಸಲಾಗಿದೆ)
4. ಅದುದರಿಂದ,
   ಗ್ರಾಮ ಪಂಚಾಯಿತಿ ಸಂಕೇತ ಸಂಖ್ಯೆ 9 ಅಂಕಿಗಳಲದ್ದಾಗಿರುತ್ತದೆ.
   ಗ್ರಾಮದ ಸಂಕೇತ ಸಂಖ್ಯೆ 13 ಅಂಕಿಗಳಲದ್ದಾಗಿರುತ್ತದೆ.
   ಕುಟುಂಬದ ಸಂಕೇತ ಸಂಖ್ಯೆ (ನೋಂದಣಿ ಸಂಖ್ಯೆ) 16 ಅಂಕಿಗಳದ್ದಾಗಿರುತ್ತದೆ.
   ವೈಯಕ್ತಿಕ ಸಂಖ್ಯೆ 18 ಅಂಕಿಗಳದ್ದಾಗಿರುತ್ತದೆ.

ತಮ್ಮ ವಿಶ್ವಾಸಿ,
**ಸಹಿ/–**
**(ಆರ್. ಶಾಂತರಾಜ್)**
ನಿರ್ದೇಶಕರು
ಸ್ವಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಗ್ರಾಅಪ :ಉಖಾಯೋ:2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು - 560 001 ದಿನಾಂಕ : 11-04-2007

## ಸುತ್ತೋಲೆ

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕದಡಿ ತೆಗೆದುಕೊಳ್ಳುವ ಕಾಮಗಾರಿಗಳಿಗೆ ಕಾಮಗಾರಿಗಳ ಸಂಕೇತ ಸಂಖ್ಯೆ ನೀಡುವ ಬಗ್ಗೆ.

* * *

1. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಅನುಷ್ಠಾನ ಏಜೆನ್ಸಿಗಳೆಂದರೆ
   1. ರಾಜ್ಯಸರ್ಕಾರ 2. ಜಿಲ್ಲಾ ಪಂಚಾಯತ್ 3. ತಾಲ್ಲೂಕು ಪಂಚಾಯತ್ ಮತ್ತು 4ಗ್ರಾಮ ಪಂಚಾಯತ್
2. ಎಲ್ಲಾ ಅನುಷ್ಠಾನ ಏಜೆನ್ಸಿಗಳಿಂದ ಬಂದ ಕಾಮಗಾರಿಗಳ ಪ್ರಸ್ತಾವನೆಗಳನ್ನು ಕ್ರೋಢಿಕರಿಸಿ, ಜಿಲ್ಲಾ ಪಂಚಾಯಿತಿ ಅಂತಿಮ ಅನುಮೋದನೆ ನೀಡಿದ ಮೇಲೆ (ವಿವರಣೆಗಾಗಿ ಕಾಮಗಾರಿಗಳ ಆಯ್ಕೆಯ ಬಗೆಗಿನ ಸುತ್ತೋಲೆ ನೋಡಿ) ಪ್ರತಿ ಕಾಮಗಾರಿಗೆ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ, ಈ ಕೆಳಗಿನಂತೆ ಸಂಕೇತ ಸಂಖ್ಯೆ ನೀಡಬೇಕು.
3. ಕಾಮಗಾರಿಯ ಸಂಕೇತ ಸಂಖ್ಯೆ ಐದು ಉಪಸಂಕೇತ ಸಂಖ್ಯೆಗಳನ್ನು ಒಳಗೊಂಡಿದೆ.
   00-00-00-000/000/00/00/00
   1 2 3 4 5

### ಮೊದಲನೆಯ ಭಾಗ

ಸರ್ವಕುಟುಂಬ ಸಮೀಕ್ಷೆಯ ಸಂಕೇತ ಸಂಖ್ಯೆಯ ಪ್ರಕಾರ ಇದು ಅನುಷ್ಠಾನ ಏಜೆನ್ಸಿಯ ಸಂಕೇತ ಸಂಖ್ಯೆಯಾಗಿದ್ದು, ಇದು ೯ ಅಂಕಿಗಳನ್ನು ಉಳ್ಳದ್ದಾಗಿರುತ್ತದೆ.

ಇದರಲ್ಲಿನ ಮೊದಲ ಎರಡು ಅಂಕಿಗಳು ರಾಜ್ಯ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.

ನಂತರದ ಎರಡು ಅಂಕಿಗಳು ಜಿಲ್ಲೆಯ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.

ನಂತರದ ಎರಡು ಅಂಕಿಗಳು ತಾಲ್ಲೂಕಿನ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.

ನಂತರದ ಎರಡು ಅಂಕಿಗಳು ಗ್ರಾಮಪಂಚಾಯಿತಿಯ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ.

### ಎರಡನೆಯ ಭಾಗ

ಒಂದು ಆರ್ಥಿಕ ವರ್ಷದಲ್ಲಿ ಇದು ಅನುಷ್ಠಾನ ಏಜೆನ್ಸಿವಾರು ಒಂದು ಕಾಮಗಾರಿಗೆ ನೀಡುವ ಉಪಸಂಕೇತ ಸಂಖ್ಯೆಯಾಗಿರುತ್ತದೆ. ಇದು ಮೂರು ಅಂಕಿಗಳದ್ದಾಗಿರುತ್ತದೆ.

### ಮೂರನೆಯ ಭಾಗ

ಕಾಮಗಾರಿಯ ವಿಧದ ಉಪ ಸಂಕೇತ ಸಂಖ್ಯೆಯಾಗಿರುತ್ತದೆ. ಯಾವ ವಿಧದ ಕಾಮಗಾರಿಗೆ ಯಾವ ಸಂಕೇತ ಸಂಖ್ಯೆ ಎಂಬುದನ್ನು ಈ ಕೆಳಗೆ ಕೊಟ್ಟಿದೆ.

1. ಜಲ ಸಂರಕ್ಷಣೆ ಮತ್ತು ನೀರಿನ ಕೊಯ್ಲು -01
2. ಬರಗಾಲ ತಡೆಗಟ್ಟುವಿಕೆ ಅರಣ್ಯೀಕರಣ ಮತ್ತು ಗಿಡನೆಡುವುದು ಸೇರಿದಂತೆ -02

3. ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳೂ ಸೇರಿದಂತೆ, ನೀರಾವರಿ ಕಾಲುವೆಗಳು -03
4. ಪ.ಜಾ /ಪ.ಪಂ/ ಭೂಸುಧಾರಣೆ / ಐಎವೈ, ಫಲಾನುಭವಿಗಳ ಮತ್ತು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಜಮೀನುಗಳಿಗೆ ನೀರಾವರಿ, ತೋಟಗಾರಿಕೆ ಮತ್ತು ಜಮೀನು ಅಭಿವೃದ್ಧಿ ಸೌಲಭ್ಯಗಳನ್ನು ಒದಗಿಸುವುದು.
5. ಸಾಂಪ್ರದಾಯಿಕ ನೀರು ಸಂಚಯಗಳ ಜೀರ್ಣೋದ್ಧಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದು -05
6. ಜಮೀನಿನ ಅಭಿವೃದ್ಧಿ -06
7. ನೀರು ನಿಂತ ಪ್ರದೇಶಗಳಲ್ಲಿ ಚರಂಡಿಯೂ ಸೇರಿದಂತೆ ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣೆ -07
8. ಎಲ್ಲಾ ರೀತಿಯ ಮಾನ ಪರಿಸ್ಥಿತಿಯಲ್ಲಿ ಉಪಯೋಗಿಸಬಹುದಾದ ಗ್ರಾಮೀಣ ಸಂಪರ್ಕಗಳ ನಿರ್ಮಾಣ -08
9. ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರ ಅಧಿಸೂಚಿಸುವ ಇತರೆ ಯಾವುದೇ ಕಾಮಗಾರಿ -09

## ನಾಲ್ಕನೆಯ ಭಾಗ

ಇದು ಆ ಕಾಮಗಾರಿಯನ್ನು ನಿರ್ವಹಿಸುವ ಕಾರ್ಯನಿರ್ವಹಣಾ ಏಜೆನ್ಸಿಯ ಉಪ ಸಂಕೇತ ಸಂಖ್ಯೆಯನ್ನು ಸೂಚಿಸುತ್ತದೆ. ಯಾವ ಕಾರ್ಯನಿರ್ವಹಣಾ ಏಜೆನ್ಸಿಗೆ ಯಾವ ಉಪ ಸಂಕೇತ ಸಂಖ್ಯೆ ನೀಡಲಾಗಿದೆ ಎಂಬುದನ್ನು ಈ ಕೆಳಗೆ ಕೊಟ್ಟಿದೆ.

| | | | | | |
|---|---|---|---|---|---|
| 1. | ರಾಜ್ಯ | - 01 | 9. | ತೋಟಗಾರಿಕೆ | - 09 |
| 2. | ಜಿಲ್ಲಾ ಪಂಚಾಯಿತಿ | - 02 | 10. | ಪಂಚಾಯತ್ ರಾಜ್ ಇಂಜಿನಿಯರಿಂಗ್ | - 10 |
| 3. | ತಾಲ್ಲೂಕು ಪಂಚಾಯಿತಿ | - 03 | 11. | ಲೋಕೋಪಯೋಗಿ | - 11 |
| 4. | ಗ್ರಾಮಪಂಚಾಯಿತಿ | - 04 | 12. | ಸಣ್ಣ ನೀರಾವರಿ | - 12 |
| 5. | ಜಲಾನಯನ | - 05 | 13. | ಭೂಸೇನಾ ನಿಗಮ | - 13 |
| 6. | ಅರಣ್ಯ ಸಾಮಾಜಿಕ | - 06 | 14. | ನಿರ್ಮಿತಿ ಕೇಂದ್ರ | - 14 |
| 7. | ಅರಣ್ಯ | - 07 | 15. | ಸ್ವಸಹಾಯ ಸಂಘ | - 15 |
| 8. | ಕೃಷಿ | - 08 | 16. | ಸಹಕಾರ ಸಂಘ | - 16 |

## ಐದನೆ ಭಾಗ

ಇದು ಆರ್ಥಿಕ ವರ್ಷದ ಉಪ ಸಂಕೇತ ಸಂಖ್ಯೆನ್ನು ಸೂಚಿಸುತ್ತದೆ.

ಉದಾಹರಣೆಗೆ 2006-07 ಕ್ಕೆ ಇದು "06" ಆಗಿರುತ್ತದೆ
2007-08 ಕ್ಕೆ ಇದು "07" ಆಗಿರುತ್ತದೆ
2010-11 ಕ್ಕೆ ಇದು "10" ಆಗಿರುತ್ತದೆ

4. ಈ ಕೆಳಗಿನ ಉದಾಹರಣೆಗಳು ಕಾಮಗಾರಿಗಳ ಸಂಕೇತ ಸಂಖ್ಯೆಗಳ ಬಗ್ಗೆ ಸ್ಪಷ್ಟತೆ ನೀಡುತ್ತದೆ.

(1) 15-23-03-012/008/01/05/07

ಸಂಕೇತ 15 ನ್ನು ಹೊಂದಿರುವ ರಾಜ್ಯದ, ಸಂಕೇತ 23ನ್ನು ಹೊಂದಿರುವ ಜಿಲ್ಲೆಯ, ಸಂಕೇತ 03 ರನ್ನು ಹೊಂದಿರುವ ತಾಲ್ಲೂಕಿನ, ಸಂಕೇತ-012 ಹೊಂದಿರುವ ಗ್ರಾಮಪಂಚಾಯಿತಿಯು 2007-08 ನೇ ಆರ್ಥಿಕ ವರ್ಷದಲ್ಲಿ (07) ಜಲಸಂರಕ್ಷಣೆ ಮತ್ತು ಮಳೆನೀರು ಕೊಯ್ಲು ವಿಧದಲ್ಲಿನ(01) ಕಾಮಗಾರಿಯನ್ನು ಆ ವರ್ಷದ ಗ್ರಾಮಪಂಚಾಯಿತಿಯ ಕ್ರಿಯಾ ಯೋಜನೆಯಲ್ಲಿ ಕ್ರಮ ಸಂಖ್ಯೆ 8 (008) ನ್ನಾಗಿ ಪಟ್ಟಿಮಾಡಿದ್ದು, ಇದರ ಕಾರ್ಯನಿರ್ವಹಣಾ ಏಜೆನ್ಸಿ ಜಲಾನಯನ ಇಲಾಖೆ (05) ಆಗಿರುತ್ತದೆ.

(2) 15-23-03-000/002/02/06/07

ಸಂಕೇತ 15 ನ್ನು ಹೊಂದಿರುವ ರಾಜ್ಯದ, ಸಂಕೇತ ಸಂಖ್ಯೆ 23ನ್ನು ಹೊಂದಿರುವ ಜಿಲ್ಲೆಯ, ಸಂಕೇತ 03 ರನ್ನು ಹೊಂದಿರುವ ತಾಲ್ಲೂಕು ಪಂಚಾಯಿತಿಯು 2007-08 ನೇ ಸಾಲಿನ (07) ತಾಲ್ಲೂಕು ಪಂಚಾಯಿತಿ ಕ್ರಿಯಾಯೋಜನೆಯ ಕ್ರಮ ಸಂಖ್ಯೆ 002 ರಲ್ಲಿನ ಬರಗಾಲ ತಡೆಗಟ್ಟುವಿಕೆ (02)ರ ಕಾಮಗಾರಿಯನ್ನು 06 ಸಂಕೇತ ಸಂಖ್ಯೆ ಹೊಂದಿದ ಸಾಮಾಜಿಕ ಅರಣ್ಯ ಇಲಾಖೆಗೆ ವಹಿಸಲಾಗಿರುತ್ತದೆ.

(3) 15-23-00-000/028/07/10/07

ಸಂಕೇತ 15 ನ್ನು ಹೊಂದಿರುವ ರಾಜ್ಯದ, ಸಂಕೇತ ಸಂಖ್ಯೆ 23ನ್ನು ಹೊಂದಿರುವ ಜಿಲ್ಲಾ ಪಂಚಾಯಿತಿಯು 2007-08 ನೇ ಸಾಲಿನ (07) ಜಿಲ್ಲಾ ಪಂಚಾಯಿತಿಯ ಕ್ರಿಯಾಯೋಜನೆಯ ಕ್ರಮ ಸಂಖ್ಯೆ 028 ರಲ್ಲಿನ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು

(07) ಸಂಕೇತ ಸಂಖ್ಯೆ (10) ಹೊಂದಿರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ವಹಿಸಲಾಗಿರುತ್ತದೆ.

ಸಹಿ/-

**(ಆರ್. ಶಾಂತರಾಜ್)**

ನಿರ್ದೇಶಕರು,
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ
ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನಸೂ ರಾಣ್ಯಪೂ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:೫೦: ಮಾನ್: ೨೦೦೮

ಕರ್ನಾಟಕ ಸರ್ಕಾರದ ಸಚಿವಾಲಯ
ಸಚಿವಾಲಯ-೨, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: ೧೧.೦೬.೨೦೦೮

**ಇಂದ,**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ಗೆ,**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಷ್ಕೃತ ಮಾಸಿಕ ಪ್ರಗತಿ ವರದಿಯ ನಮೂನೆಗಳನ್ನು ಕಳುಹಿಸುತ್ತಿರುವ ಕುರಿತು.

**ಉಲ್ಲೇಖ:** ೧. ನಿರ್ದೇಶಕರು (NREGA) ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಭಾರತ ಸರ್ಕಾರ ನವದೆಹಲಿ ಇವರ ಪತ್ರದ ಸಂಖ್ಯೆ DO NO ೨೮೦೧೨/ ೨/ ೦೫/ NREGA (VOL-II) ದಿನಾಂಕ ೨೧-೦೪-೨೦೦೮

೨. ಇ ಇಲಾಖೆಯ ಪತ್ರದ ಸಂಖ್ಯೆ ಗ್ರಾಅಪ ೫೦ ಮಾನ್ ೨೦೦೮ ದಿನಾಂಕ ೨೪-೦೪-೨೦೦೮

* * *

ಈ ಇಲಾಖೆಯ ಪತ್ರದ ೨೪-೦೪-೨೦೦೮ರಲ್ಲಿ ಕೇಂದ್ರ ಸರ್ಕಾರವು ಮಾಸಿಕ ಪ್ರಗತಿ ವರದಿಯ ಸಲ್ಲಿಕೆಗಾಗಿ, ಪರಿಷ್ಕೃತ ನಮೂನೆಗಳನ್ನು ತಮಗೆ ಕಳುಹಿಸಿದ್ದರೂ, ಮತ್ತು ಪತ್ರದಲ್ಲಿ ಕೇಂದ್ರ ಸರ್ಕಾರದವರು ನೀಡಿರುವ ಸೂಚನೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ಮಾಸಿಕ ಪ್ರಗತಿಯ ವರದಿಯನ್ನು ಭಾಗ-೩ರ ನಮೂನೆಯಲ್ಲಿ ಮಾಹಿತಿಯನ್ನು ಹೊರತುಪಡಿಸಿ, ಹಾಗೆಯೇ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತವೆ. ಭಾಗ-೩ರ ನಮೂನೆಯ ಮಾಹಿತಿಯ ಗೈರು ಹಾಜರಾತಿಯಲ್ಲಿ, ಸಂಚಿತ ವರದಿಯನ್ನು ತಯಾರಿಸಲು ವಿಳಂಬವಾಗುತ್ತಿದೆ. ಇಂತಹ ಒಂದು ಸಣ್ಣ ತಪ್ಪಿನಿಂದ, ಕೇಂದ್ರ ಸರ್ಕಾರಕ್ಕೆ ಮಾಸಿಕ ಪ್ರಗತಿಯ ವರದಿಯನ್ನು ಕಳುಹಿಸುವುದಕ್ಕೆ ಸಾಧ್ಯವಾಗುತ್ತಿಲ್ಲ ಮತ್ತು ಸರ್ಕಾರದಿಂದ, ಈ ಕುರಿತು, ಕಟುವಾದ ಪತ್ರಗಳು ಬರುತ್ತಿವೆ. ಅದುದರಿಂದ, ಇದನ್ನು ತಪ್ಪಿಸಲು ಇನ್ನು ಮುಂದೆ, ಸರಿಯಾದ ರೀತಿಯಲ್ಲಿ ಕೇಂದ್ರ ಸರ್ಕಾರದ ಸೂಚನೆಗಳನ್ನು ಓದಿ, ಪ್ರಗತಿ ವರದಿಯ ಮಾಹಿತಿಗಳನ್ನು ನಿಗಧಿತ ನಮೂನೆಗಳಲ್ಲಿ ಕಳುಹಿಸಲು ಸೂಚಿಸಲಾಗಿದೆ. ಹಿಂದಿನ ಮಾಸಿಕ ಪ್ರಗತಿಯ ನಮೂನೆಗಳಲ್ಲಿ ಮತ್ತು ಈಗ ಪರಿಷ್ಕರಿಸಿದ ಪ್ರಗತಿ ನಮೂನೆಗಳಲ್ಲಿ ಇರುವ ಬದಲಾವಣೆಗಳ ಬಗ್ಗೆ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.

| ಈ ಹಿಂದೆ ಕಳುಹಿಸುತ್ತಿರುವ ಮಾಸಿಕ ಪ್ರಗತಿಯ ನಮೂನೆಗಳು (Old formats) | ಈಗ ಕಳುಹಿಸುತ್ತಿರುವ ಮಾಸಿಕ ಪ್ರಗತಿಯ ನಮೂನೆಗಳು (New formats) |
|---|---|
| ೧. ಭಾಗ –I ಮತ್ತು ಭಾಗ –II ರ ನಮೂನೆಗಳು | ಭಾಗ – I ಆಗಿರುತ್ತದೆ. |
| ೨. ಭಾಗ III ರ ನಮೂನೆ | ಭಾಗ – II ಆಗಿರುತ್ತದೆ |
| ೩. ಭಾಗ IV ರ ನಮೂನೆ | ಭಾಗ – III ಆಗಿರುತ್ತದೆ.<br>ಸೇರ್ಪಡೆಯಾಗಿರುವ ಹೊಸ ನಮೂನೆಗಳು<br>ಭಾಗ – IV, ಭಾಗ – VA, ಭಾಗ VB, |
| ೪. ರಾಜ್ಯದ ನಮೂನೆ<br>(single frormat) | ರಾಜ್ಯದ ನಮೂನೆ<br>(single frormat) |

ಒಟ್ಟು ರಾಜ್ಯ ಸರ್ಕಾರಕ್ಕೆ ಏಳು ನಮೂನೆಗಳಲ್ಲಿ ಉದ್ಯೋಗ ಖಾತರಿ ಯೋಜನೆಯ ಪ್ರಗತಿ ವರದಿಯನ್ನು ಪ್ರತಿ ತಿಂಗಳು ಐದನೇ ತಾರೀಖಿನೊಳಗೆ ಸಲ್ಲಿಸಲು ಸೂಚಿಸಿದೆ. ಅದರಲ್ಲಿ ರಾಜ್ಯದ ನಮೂನೆಗಳನ್ನು (single frormat) ಹೊರತುಪಡಿಸಿ ಮಿಕ್ಕ ಎಲ್ಲಾ ಭಾಗಗಳ ಪರಿಷ್ಕೃತ ನಮೂನೆಗಳ ಮಾಹಿತಿಯನ್ನು On-line ನಲ್ಲಿ ನಿರಂತರವಾಗಿ ಪ್ರತಿ ತಿಂಗಳು ಸಲ್ಲಿಸಲು ಅಗತ್ಯಕ್ರಮ ಜರುಗಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಸಿ. ಎಂ. ಶಿರೋಳ್)**
ನಿರ್ದೇಶಕರು
ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನಸೂ ರಾಗ್ರ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 178 ಉಖಾಯೋ 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿ : 29–7–2009

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ಮಾಸಿಕ ಪ್ರಗತಿ ವರದಿಯ ನಮೂನೆಯಲ್ಲಿ ಭಾಗ-I ಮತ್ತು ಭಾಗ-IIIನ್ನು ಹೊರತು ಪಡಿಸಿ ಉಳಿದ ನಾಲ್ಕು ಭಾಗಗಳ ನಮೂನೆಯ ಮಾಹಿತಿಯನ್ನು ಇನ್ನು ಮುಂದೆ MIS ಮಾಹಿತಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಅ.ಸ.ಪ.ಸಂ.ಜೆ.–11011/8/2007– ಎನ್ ಆರ್ ಇಜಿಎ ದಿನಾಂಕ: 14.07.2009

* * *

ಯೋಜನೆಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ, ಕೇಂದ್ರ ಸರ್ಕಾರವು ಆಡಳಿತಾತ್ಮಕ ವೆಚ್ಚವನ್ನು ಶೇಕಡಾ 4ರಿಂದ ಶೇಕಡಾ 6ಕ್ಕೆ ಹೆಚ್ಚಿಸಿ, ಹೆಚ್ಚಿನ ಸಿಬ್ಬಂದಿಯನ್ನು ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಲು ತಿಳಿಸಿರುತ್ತದೆ. ಈ ಸಂಬಂಧ ಸಿಬ್ಬಂದಿಯನ್ನು ತೊಡಗಿಸಿಕೊಂಡಿರುವ ಬಗ್ಗೆ ಕೈಗೊಂಡ ಕ್ರಮ ಹಾಗೂ ಅದರ ಮಾಹಿತಿಯನ್ನು ಮಾಸಿಕ ಪ್ರಗತಿ ವರದಿಯಲ್ಲಿ ಇನ್ನು ಮುಂದೆ ಕೇಂದ್ರ ಸರ್ಕಾರಕ್ಕೆ ಒದಗಿಸುವಂತೆ ಕೋರಿರುತ್ತದೆ. ಪ್ರಸ್ತುತ ವರದೀಕರಣದ ಪರಿಸ್ಥಿತಿಯನ್ನು ಪರಿಶೀಲಿಸಲಾಗಿ, MIS ನಿಂದ MPR ನಲ್ಲಿರುವ ಭಾಗ–I ಮತ್ತು ಭಾಗ–IIIರ ನಮೂನೆಯ ಮಾಹಿತಿಯು ಲಭ್ಯವಿದ್ದು, ಉಳಿದ ನಮೂನೆಗಳ ಮಾಹಿತಿಯು MISನಲ್ಲಿ ಲಭ್ಯವಿರುವುದಿಲ್ಲ. ಸದರಿ ನಮೂನೆಗಳ ಮಾಹಿತಿಯು ಅವಶ್ಯಕವಾಗಿ ಬೇಕಾಗಿರುವುದರಿಂದ, ಇನ್ನು ಮುಂದೆ ತಾವುಗಳು, MIS ವರದಿಯ ಜೊತೆಗೆ MPR ನಲ್ಲಿರುವ ಉಳಿದ ನಮೂನೆಗಳ ಭಾಗಗಳಾದ-IV, V, VI, VII ರ ಮಾಹಿತಿಗಳನ್ನು ಮಾತ್ರ ತಪ್ಪದೇ, ಪ್ರತಿ ತಿಂಗಳು, 5ನೇ ತಾರೀಖಿನೊಳಗೆ onlineನಲ್ಲಿ ಸರ್ಕಾರಕ್ಕೆ ಕಳುಹಿಸಲು, ಕ್ರಮ ಜರುಗಿಸುವಂತೆ ಈ ಮೂಲಕ ತಮ್ಮೆಲ್ಲರಿಗೂ ಸೂಚಿಸಿದೆ.

ಮುಂದುವರೆದು, ಸಿಬ್ಬಂದಿ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪಡೆಯುವ ಬಗ್ಗೆ ಸರ್ಕಾರದ ಆದೇಶವನ್ನು ದಿನಾಂಕ: 5–6–2009ರಂದು ಹೊರಡಿಸಿದ್ದು, ಸದರಿ ವಿವಾರವಾಗಿ ಕೈಗೊಂಡಿರುವ ಕ್ರಮದ ಬಗ್ಗೆ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವುದಿಲ್ಲ. ಒಂದು ವೇಳೆ, ಕ್ರಮವನ್ನು ಜರುಗಿಸಿದ್ದರೆ, ಸದರಿ ವಿವರಗಳನ್ನು MPR ನಮೂನೆಯ ಭಾಗ-VI ರಲ್ಲಿ ನಮೂದು ಮಾಡುವುದು .ಸದರಿ ನಮೂನೆಯ ಮಾಹಿತಿಯನ್ನು ಇತರೆ MPR ನಮೂನೆಯ ಮಾಹಿತಿಗಳಲ್ಲಿ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಸರ್ಕಾರಕ್ಕೆ onlineನಲ್ಲಿ ಮೂಲಕ ಸಲ್ಲಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:36 ಉಖಾಯೋ : 10

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 29–03–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ದಿನಾಂಕ: 1–4–2010 ರಿಂದ MIS ನಲ್ಲಿ ಎಲ್ಲಾ ಉದ್ಯೋಗ ಚೀಟಿಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪುನರ್ ಪರಿಶೀಲಿಸಿ ಧೃಡೀಕರಿಸುವ ಕುರಿತು.

ಉಲ್ಲೇಖ: ಮೇಲಿನ ವಿಷಯದ ಕುರಿತು, ದಿನಾಂಕ: 23–3–2010 ರಂದು ಜಂಟಿ ನಿರ್ದೇಶಕರ E-mail ID (rameshds2000@gmail.com)ಮುಖಾಂತರ ತಿಳಿಸಿರುವ ಬಗ್ಗೆ.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಉದ್ಯೋಗ ಚೀಟಿಗಳು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಈ ಉದ್ಯೋಗ ಚೀಟಿ ಒಂದು ನ್ಯಾಯಬದ್ಧವಾದ ದಸ್ತಾವೇಜು ಮತ್ತು ಪತ್ರವಾಗಿರುತ್ತದೆ. ಇದರ ಮೂಲಕ, ಅಧಿನಿಯಮದಡಿ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿ ಕೆಲಸವನ್ನು ಪಡೆಯಬಹುದಾಗಿರುತ್ತದೆ. ಉದ್ಯೋಗ ಚೀಟಿಯ ಸಮಗ್ರತೆ ಮತ್ತು ನೈಜತೆಯು ಅತಿ ಮುಖ್ಯವಾದದ್ದು ಮತ್ತು ಕುಟುಂಬಗಳಿಗೆ ಉದ್ಯೋಗ ಚೀಟಿಗಳನ್ನು ವಿತರಿಸುವಾಗ, ಮಾರ್ಗಸೂಚಿಗಳಲ್ಲಿ ಸೂಚಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸುವಂತಾಗಿರಬೇಕು. ಮುಖ್ಯವಾಗಿ ಕೆಲವು ಜಿಲ್ಲೆಗಳ ಗ್ರಾಮ ಪಂಚಾಯತ್‌ಗಳಲ್ಲಿ ಉದ್ಯೋಗ ಚೀಟಿಗಳನ್ನು ಗ್ರಾಮದಲ್ಲಿರುವ ಕುಟುಂಬಗಳ ಸಂಖ್ಯೆಗಿಂತ ಅಧಿಕವಾಗಿ ವಿತರಣೆ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಮತ್ತು ಸರ್ಕಾರವು ಇದನ್ನು ತುಂಬಾ ಗಂಭೀರವಾಗಿ ಪರಿಗಣಿಸಿರುತ್ತದೆ. ಉದ್ಯೋಗ ಚೀಟಿಗಳ ನೈಜತೆ ಮತ್ತು ಸಮಗ್ರತೆಯನ್ನು ಕಾಪಾಡಲು ಈವರೆಗೆ ವಿತರಿಸಲಾದ ಎಲ್ಲಾ ಉದ್ಯೋಗ ಚೀಟಿಗಳನ್ನು ದಿನಾಂಕ: 1–4–2010 ರಿಂದ ಪುನರ್ ಪರಿಶೀಲಿಸಿ ದೃಢೀಕರಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ, ದಿನಾಂಕ: 1–4–2010 ರಿಂದ ಎಲ್ಲಾ ಉದ್ಯೋಗ ಚೀಟಿಗಳನ್ನು ಪುನರ್ ಪರಿಶೀಲಿಸಿ ದೃಡೀಕರಿಸುವಾಗ MIS ನಲ್ಲಿ ಕುಟುಂಬದ ಛಾಯಾ ಚಿತ್ರ ಮತ್ತು ಬ್ಯಾಂಕ್/ಅಂಚೆಕಛೇರಿ ಖಾತೆಯ ಸಂಖ್ಯೆ ಮತ್ತು ಇತರೆ ಪ್ರಮುಖ ವಿವರಗಳನ್ನು ದಾಖಲಿಸಲು ಕ್ರಮವಹಿಸುವುದು. MIS ನಲ್ಲಿ ಇಂತಹ ವಿವರಗಳನ್ನು ದಾಖಲಿಸಲು ಪ್ರತ್ಯೇಕವಾದ ಕ್ಷೇತ್ರಗಳನ್ನು (fields) ಸೃಜಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ತಾವು ಆಡಳಿತ ಯಂತ್ರವನ್ನು ದಿನಾಂಕ: 1–4–2010 ರಿಂದ ಸರಿಯಾದ/ಸಮರ್ಪಕವಾದ ನೈಜತೆಯಿಂದ ಇರುವ ಉದ್ಯೋಗ ಚೀಟಿಗಳನ್ನು ವಿತರಿಸುವಂತೆ, ಸಿದ್ಧಪಡಿಸಿಕೊಳ್ಳಲು ಖಚಿತಪಡಿಸಿಕೊಳ್ಳುವುದು. ವಿತರಿಸಲಾದ ಉದ್ಯೋಗ ಚೀಟಿಗಳು ಸರಿಯಾಗಿಲ್ಲ (ಕ್ರಮವಾಗಿಲ್ಲದಿದ್ದರೆ) ಎಂದು ತಮಗೆ ಖಚಿತವಾದರೆ, ಅಂತಹ ಚೀಟಿಗಳನ್ನು ಯೋಜನೆಯಿಂದ ಕೈಬಿಡಲು ಸೂಚಿಸಿದೆ. ಉದ್ಯೋಗ ಚೀಟಿಗಳನ್ನು ಪರಿಶೀಲಿಸಿ ದೃಢೀಕರಿಸುವಾಗ, ಈ ಕೆಳಗೆ ತೋರಿಸಿದ ವಿಧಿವಿಧಾನಗಳನ್ನು ಅನುಸರಿಸಲು ಕ್ರಮ ಕೈಗೊಳ್ಳತಕ್ಕದ್ದು.

1) ಈವರೆಗೂ MIS ನಲ್ಲಿ ದಾಖಲಿಸಿರುವ ಎಲ್ಲಾ ಉದ್ಯೋಗ ಚೀಟಿಗಳ ವಿವರಗಳನ್ನು ಪುನರ್ ಪರಿಶೀಲಿಸಿ ಸರಿಯಾಗಿದ್ದಲ್ಲಿ ದೃಢೀಕರಿಸತಕ್ಕದ್ದು. ಇಂತಹ ಉದ್ಯೋಗ ಚೀಟಿಗಳ ಸಂಬಂಧ ಕುಟುಂಬ ಸದಸ್ಯರ ಛಾಯಾಚಿತ್ರ ಹಾಗೂ ಬ್ಯಾಂಕ್/ಅಂಚೆ ಕಛೇರಿ ಖಾತೆಗಳ ಸಂಖ್ಯೆ ಮತ್ತು ಇತರೆ ಎಲ್ಲಾ ಪ್ರಮುಖ ವಿವರಗಳನ್ನು ಕಡ್ಡಾಯವಾಗಿ MIS ನಲ್ಲಿ ದಾಖಲಿಸತಕ್ಕದ್ದು.

2) ಒಂದು ವೇಳೆ ಸದರಿ ಉದ್ಯೋಗ ಚೀಟಿಗಳು ಸರಿಯಾಗಿಲ್ಲ ಎಂದು ಕಂಡು ಬಂದಲ್ಲಿ ಅಂತಹ ಉದ್ಯೋಗ ಚೀಟಿಗಳನ್ನು MIS ನಿಂದ ತೆಗೆದು ಹಾಕತಕ್ಕದ್ದು.

3) ಉದ್ಯೋಗ ಚೀಟಿಯನ್ನು ಪರಿಶೀಲಿಸಿ ದೃಢೀಕರಿಸದ ಹೊರತು, ಕೆಲಸದ ಬೇಡಿಕೆಯನ್ನು MIS ನಲ್ಲಿ ದಾಖಲಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಉದ್ಯೋಗ ಚೀಟಿದಾರರು ಮತ್ತು ಗ್ರಾಮ ಪಂಚಾಯತಿ ಅಧಿಕಾರಿಗಳು/ಸಿಬ್ಬಂದಿಗಳ ಪರಸ್ಪರ, ಕಡ್ಡಾಯವಾಗಿ ಮಾಹಿತಿಯನ್ನು ಇಂದೀಕರಿಸಿ ಉದ್ಯೋಗ ಚೀಟಿಗಳನ್ನು ಪರಿಶೀಲಿಸಿ ಧೃಡೀಕರಿಸುವುದು.

4) ಯಾವುದೇ ಬ್ಯಾಂಕ್ ಮತ್ತು ಅಂಚೆ ಕಛೇರಿ/ಶಾಖೆಯ ಹೆಸರು MIS ನಲ್ಲಿ ಲಭ್ಯವಿಲ್ಲದಿದ್ದಲ್ಲಿ ಸದರಿ ಮಾಹಿತಿಯನ್ನು ನಿರ್ದೇಶಕರಿಗೆ ಸಲ್ಲಿಸುವುದು.

5) ಈಗಾಗಲೇ ವಿತರಿಸಲಾದ ಉದ್ಯೋಗ ಚೀಟಿಗಳು ಕುಟುಂಬಗಳ ಬೇಡಿಕೆಗಳನ್ನು ಕೆಲಸ ಮತ್ತು ಪಾವತಿಯ ವಿವರಗಳನ್ನು ಇಂದೀಕರಿಸುವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುವುದು. MIS ನಿಂದ ಸೃಜಿಸಲಾದ ಮುದ್ರಿತ ಉದ್ಯೋಗ ಚೀಟಿಯನ್ನು ಈಗಾಗಲೇ ನೀಡಲಾಗಿರುವ ಭೌತಿಕ (Manual) ಉದ್ಯೋಗ ಚೀಟಿಗೆ ಲಗತ್ತಿಸುವುದು. MIS ನಿಂದ ಮುದ್ರಿತವಾದ ಉದ್ಯೋಗ ಚೀಟಿಯು ಭೌತಿಕವಾದ ಉದ್ಯೋಗ ಚೀಟಿಯ ಜೊತೆಯಲ್ಲಿರಬೇಕು. ಇದು ಇಲ್ಲದ ಹೊರತು, ಉದ್ಯೋಗ ಚೀಟಿಯು ಊರ್ಜಿತವಾಗುವುದಿಲ್ಲವೆಂದು ತಿಳಿಯತಕ್ಕದ್ದು.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ
ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅನಸೂ ರಾಗಸಂಪದ

**Immediate**
**By Speed Post Fa**

**No.28012/3/05-06-NREGA(Pt)**
**Government of India**
**Ministry of Rural Development**
**(Mahatma Gandhi NREGA Division)**

Krishi Bhavan, New Delhi -110114
Dated :11th March, 2010

To

The Principal Secretary (RD)
(In-charge-Mahatma Gandhi NREGA
All States and UTs.

Sir/Madam,

Please refer to a para No.14 of the letter No. 28012/3/05-06-NREGA dated 30.03.07 on permissible items if expenditure under the administrative head of Mahatma Gandhi NREGA and para 3(b) vil of the Guidelines on Bharat Nirman Rajiv Gandhi Sewa Kendra (BNRGSK) enclosed with letter No. J-11013/2/2009 of ICT infrastructure and operationalization of MIS of Mahatma Gandhi NREGA.

2. Upon due consideration of the need for ITC infrastructure in the rural areas for ensuring transparency and accountability in implementation of Mahatma Gandhi NREGA, the Ministry has decided to permit the use of administrative head of Mahatma Gandhi NREGA of 6% of the cost of the Scheme for provision of latest ICT facilities in the Gram Panchayats (BNRGSK) within the permissible norms of the State Government and subject to due procedures.

3. You are requested to undertake appropriate action to expedite operationalization of MIS in the rural areas accordingly.

With regards,

Yours sincerely,
Sd/-
**(Amita Sharma)**
Joint Secretary (MGNREGA)
Tel : 23385027

# Government of Karnataka

No.RDP 36 EGS 2010

Karnataka Government Secretariat
M.S.Building,
Bangalore, Dated:29.04.2010.

To:

Chief Executife Officer.
All Zilla Panchayats in Karnataka State.

Sir,

Sub: Job Card validation Process.
Ref: This office Even No. letter, Dated; 29.03.2010.

* * *

In the State of Karnataka 62.39 lakhs Job Cards have been issued till date under NREGA. An analysis shows that many of the Job Card issued are not used since the date of issue. Complaints have also been received stating that the Job Cards are issued even in the name of the students, deceased persons and Government Employees.Therefore all the CEO's are required to validate the existing job cards. The purpose of validation and process involved is given here under.

| Purpose | Process |
|---|---|
| 1. To ensure single card per household.<br>2. Cancellation of unused cards<br>3. Dispense un disbursed cards if any, in GP offices and also in MIS<br>4. Verification of cards in the name of deceased persons, students and Govt. Employees<br>5. Restore job cards to the custody of card holders<br>6. To issue card for eligible families if demanded. | • Physically verification of existing job cards whenever card holders come to GP office for the purpose of employment or any other work or through a special drive as may be decided by the DPC<br>• Take a single photo of the family members who are interested in employment and affix the photo on Job Cards and upload the same image to MIS<br>• During vertification of the cards Bank Account Numbers are to be verified, the process of validation will be incomplete if Bank Account Numbers are not recorded both on cards and MIS<br>• During the process of validation, the information such as AS,ST,SF,MF and Minority need to be mentioned both on Card and in MIS<br>• Tally no. of valid cards issued physically with MIS data of job cards in all aspects<br>• Follow the process meticulously while issuing new job cards. |

The process of validation must be completed on or before 30-05-2010. From 01-06-2010 only validated Job cards will be considered for the employment. Therefore the CEO's are required to make a calendar of events locally. If valid job card holders demand employment during the course of validation, employment should be provided to them to complete ongoing and incomplete works. Don't start fresh works, if GPs have more number of incomplete works. Feed back is awaited from the CEO's in this validation process.

Yours faithfully,
Sd/-
**(Director)**
Project Planning & Monitoring Unit &
Mahatma Gandhi National Rural Employment
Guarantee Scheme & E/O Joint Secretary to Government,
Rural Development & Panchayat Raj Department,
Bangalore.

ಅವಲಂಬ ಲಾಭಾದಿನ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ: 080 -22372738 **E-mail : Karnregs@gmail.com**

ಸಂ: ಗ್ರಾಅಪ 02 ಉಖಾಯೋ 2008 Date: 06/05/2010

ರವರಿಗೆ,

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿ.ಪಂ.ಗಳು

**ಪ್ರಮುಖ ಮತ್ತು ತುರ್ತು**

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಮಿಕರಿಗೆ ಉದ್ಯೋಗ ನೀಡುವುದು ಮತ್ತು ಹಣ ಪಾವತಿಸುವ ಕುರಿತು .

ಉಲ್ಲೇಖ: ದಿನಾಂಕ: 05/05/2010 ರಂದು ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ MIS ನೋಡಲ್ ಅಧಿಕಾರಿಗಳ ಸಭೆ

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉಲ್ಲೇಖದ ಸಭೆಯಲ್ಲಿ ಯೋಜನೆಯಡಿ ಕಾರ್ಮಿಕರಿಗೆ ಹಣ ಪಾವತಿಸುವ ಕುರಿತು ಚರ್ಚಿಸಲಾಗಿರುತ್ತದೆ. ಅಧಿನಿಯಮದಡಿ ಕಾರ್ಮಿಕರಿಗೆ ಉದ್ಯೋಗ ನೀಡಲು ಮತ್ತು ಉದ್ಯೋಗ ನೀಡಿದ ಹದಿನೈದು ದಿನಗಳೊಳಗಾಗಿ ತಪ್ಪದೇ ಕೂಲಿ ಹಣ ಪಾವತಿಸಬೇಕಾಗಿದ್ದು ಇದರಲ್ಲಿ ಯಾವುದೇ ವಿಳಂಬಕ್ಕೆ ಅವಕಾಶ ನೀಡದಂತೆ ಕ್ರಮವಹಿಸಬೇಕಾಗಿರುತ್ತದೆ. ಈ ಸಂಬಂಧ ಕೆಳಗಿನಂತೆ MISನಲ್ಲಿ ಬದಲಾವಣೆಗಳನ್ನು ಮಾಡಿದ್ದು ಜರೂರು ಕ್ರಮವಹಿಸಲು ಮತ್ತು ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಸೂಚಿಸಿದೆ.

**ಉದ್ಯೋಗ ನೀಡಿಕೆ**

- ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದ ವಿವರಗಳನ್ನು MISನಲ್ಲಿ ದಾಖಲಿಸಲು ಕಡ್ಡಾಯವಾಗಿ ಉದ್ಯೋಗ ಚೀಟಿಗೆ ಸಂಬಂಧಿಸಿದ ಭಾವಚಿತ್ರ, ಬ್ಯಾಂಕ್/ಅಂಚೆ ಕಛೇರಿ ಖಾತಾ ಸಂಖ್ಯೆ, ಜಾತಿ ಮತ್ತು ವರ್ಗಗಳ ವಿವರಗಳನ್ನು ದಾಖಲಿಸಿರತಕ್ಕದ್ದು:
- ಉದ್ಯೋಗ ಚೀಟಿಯ ಸಂಬಂಧ ಭಾವಚಿತ್ರ ಒಳಗೊಂಡಂತೆ ಇತರೆ ಎಲ್ಲಾ ಮಾಹಿತಿಗಳೂ MISನಲ್ಲಿ ದಾಖಲಾಗಿದ್ದರೆ ಮಾತ್ರ ಬೇಡಿಕೆ ದಾಖಲಿಸಲು ಮತ್ತು ಮುಂದಿನ ಕೆಲಸ ಹಂಚಿಕೆ ಇತ್ಯಾದಿ ವಿವರಗಳನ್ನು ದಾಖಲಿಸಲು ಅವಕಾಶಮಾಡಲಾಗಿದೆ.

NMR ಗಳನ್ನು MISನಿಂದ ಪಡೆಯುವುದು ಮತ್ತು ದಾಖಲಿಸುವ ವಿವರ:

- ಉದ್ಯೋಗದ ಬೇಡಿಕೆ ವಿವರಗಳನ್ನು MIS ನಲ್ಲಿ ದಾಖಲಿಸಿದ ನಂತರ ಸದರಿಯವರಿಗೆ ಕೆಲಸದ ಹಂಚಿಕೆ ಮಾಡಬೇಕು.
- ಕೆಲಸದ ಹಂಚಿಕೆ ನಂತರ ಸದರಿ ಕೆಲಸಕ್ಕೆ NMR ನೀಡಲು MIS ನಲ್ಲಿ ಅವಕಾಶ ಕಲ್ಪಿಸಿದೆ
- ವಾರದ ಅವಧಿಗೆ ಮಾತ್ರ MIS ನಿಂದ NMR ಗಳನ್ನು ಪಡೆಯಲು ಅವಕಾಶವಿದೆ.
- NMR ಗಳನ್ನು MIS ನಿಂದ ಚಾಲ್ತಿ ದಿನಾಂಕದಂದು ಅಥವಾ ಮುಂದಿನ ಅವಧಿಗೆ ಪಡೆಯಲು ಅವಕಾಶ ಕಲ್ಪಿಸಿದೆ ಮತ್ತು ಚಾಲ್ತಿ ದಿನಾಂಕದ ಹಿಂದಿನ ಅವಧಿಗೆ ಪಡೆಯಲು ಸಾಧ್ಯವಿರುವುದಿಲ್ಲ.
- ಕಡ್ಡಾಯವಾಗಿ MIS ನಿಂದ ಪಡೆದ NMR ಗಳನ್ನೇ ಕಾಮಗಾರಿ ಸ್ಥಳದಲ್ಲಿ ನಿರ್ವಹಿಸತಕ್ಕದ್ದು ಮತ್ತು ಕೆಲಸಗಾರರ ಸಹಿಯನ್ನು NMR ನಲ್ಲಿ ಪಡೆಯತಕ್ಕದ್ದು.
- ಭರ್ತಿ ಮಾಡಿದ NMR ವಿವರಗಳನ್ನು MIS ನಲ್ಲಿ ಭರ್ತಿಮಾಡಲು NMR ಪಡೆದ ದಿನಾಂಕದಿಂದ 15 ದಿನಗಳ ಕಾಲಾವಕಾಶ ಕಲ್ಪಿಸಿದ್ದು ಸದರಿ ಅವಧಿಯ ಒಳಗಾಗಿ ತಪ್ಪದೇ NMR ವಿವರಗಳನ್ನು ದಾಖಲಿಸಲು ಕ್ರಮವಹಿಸುವುದು (ಒಂದು ವೇಳೆ NMR ಮುಗಿದ 15 ದಿನಗಳೊಳಗಾಗಿ ಸದರಿ NMR ಮಾಹಿತಿಯನ್ನು MIS ನಲ್ಲಿ ಭರ್ತಿ ಮಾಡದಿದ್ದಲ್ಲಿ ತಾನೇ ತಾನಾಗಿ ಸದರಿ NMR ಗಳು MIS ನಲ್ಲಿ ರದ್ದಾಗುತ್ತದೆ ಹಾಗೂ ಮಾಹಿತಿ ಭರ್ತಿಮಾಡಲು ಸಾಧ್ಯವಾಗುವುದಿಲ್ಲ.)
- NMR ಮಾಹಿತಿಯನ್ನು MIS ನಲ್ಲಿ ಭರ್ತಿಮಾಡಿದ ನಂತರ ಕಡ್ಡಾಯವಾಗಿ ಸದರಿ NMR ಬಾಬ್ತು ನಿರ್ವಹಿಸಲಾದ ಕೆಲಸದ ಅಳತೆ ವಿವರಗಳನ್ನು ಮತ್ತು ಕಾಮಗಾರಿಯ ಚಿತ್ರವನ್ನು MIS ನಲ್ಲಿ upload ಮಾಡಬೇಕು;
- NMR ಹಣ ಪಾವತಿಸಲು ಕೂಲಿಪಟ್ಟಿಯನ್ನು (wage list/payment advice or order)MIS ನಿಂದ ಪಡೆಯಲು ಅವಕಾಶ ಕಲ್ಪಿಸಿದೆ. ಸದರಿ ಕೂಲಿಪಟ್ಟಿಯ ಆಧಾರದ ಮೇಲೆ ಮಾತ್ರ ಹಣ ಪಾವತಿಸಲು ಕ್ರಮವಹಿಸಬೇಕಾಗಿದೆ MIS ನಿಂದ ಪಡೆದ ಕೂಲಿಪಟ್ಟಿಯಿಲ್ಲದೇ ಹಣಪಾವತಿಸುವುದನ್ನು ನಿರ್ಬಂದಿಸಿದೆ;
- ದಿನದ ಕೂಲಿ ದರ ಅಧಿನಿಯಮದಡಿ ನಿಗದಿಪಡಿಸಿರುವ ಕನಿಷ್ಠ ಕೂಲಿ ದರಕ್ಕಿಂತ ಹೆಚ್ಚಿಗೆ ಇರುವಂತಿಲ್ಲ ಮತ್ತು ಹೆಚ್ಚು ಕೆಲಸ ನಿರ್ವಹಿಸಿರುತ್ತಾರೆಂಬ ಕಾರಣಕ್ಕೆ ಕೂಲಿಧರ ಹೆಚ್ಚಿಗೆ ನೀಡಲು ಅವಕಾಶವಿರುವುದಿಲ್ಲ.
- NMR ಸಂಬಂಧ ಹಣ ಪಾವತಿಸಿದ ನಂತರ MIS ನಿಂದ ಭರ್ತಿಮಾಡಿದ NMR ಪ್ರತಿಯನ್ನು ಮುದ್ರಿಸಿ ಕಡತದಲ್ಲಿರಿಸಲು ಕ್ರಮವಹಿಸುವುದು (ಈ ಪ್ರತಿಯಲ್ಲಿ MIS ನಲ್ಲಿ ದಾಖಲಿಸಿದಂತೆ ಪೂರ್ಣ ಹಾಜರಾತಿ ಹಾಗೂ ಅಳತೆ ದಾಖಲಾತಿ ವಿವರಗಳು ಲಭ್ಯವಿರುತ್ತವೆ.)

ತಮ್ಮ ವಿಶ್ವಾಸಿ,
ಸಹಿ/–
ನಿರ್ದೇಶಕರು
ರಾ.ಗ್ರಾ.ಉ.ಖಾ.ಯೋ.ನಿರ್ದೇಶನಾಲಯ
ಗ್ರಾ.ಅ. ಮತ್ತು ಪಂ.ರಾ.ಇಲಾಖೆ

ಅನುಷ್ಠಾನ

# ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ:/108/ಉಖಾಯೋ/08

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 07–06–2010

ಇಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:
ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: 2010–11ನೇ ಸಾಲಿನಲ್ಲಿ ಅನುಮೋದಿತ ಕಾರ್ಮಿಕ ಮುಂಗಡ ಪತ್ರ ಆಯವ್ಯಯಕ್ಕೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಗೆ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ಗ್ರಾಮ ಸಭೆಗಳಿಂದ MISನಲ್ಲಿ ದೃಡೀಕರಣದ ಅನುಮೋದನೆಯನ್ನು up-load ಮಾಡುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳ ಪತ್ರ ದ ಸಂಖ್ಯೆ ಜೆ–30011/1/2010– MGNREGA(pt) ದಿನಾಂಕ: 25–6–2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರದ ಸೂಚನೆಯಂತೆ, 2010–11ನೇ ಸಾಲಿಗೆ ಈಗಾಗಲೇ ಅನುಮೋದಿಸಿರುವ ಕಾರ್ಮಿಕ ಮುಂಗಡ ಪತ್ರದ ಆಯವ್ಯಯಕ್ಕೆ ಅನುಗುಣವಾಗಿ, ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯತ್‌ಗಳು, ಗ್ರಾಮ ಸಭೆಗಳಿಂದ ಯೋಜನೆಗಳು ಅನುಮೋದನೆಯಾಗಿರುವ ಸಭೆಯ ನಡಾವಳಿಗಳನ್ನು, ಅದೇ ರೀತಿ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಂದ ಅನುಮೋದನೆ ಯಾಗಿರುವ ಸಭೆಯ ನಡವಳಿಗಳನ್ನು MGNREGA Website ನಲ್ಲಿ ದಿನಾಂಕ: 10–7–2010 ರೊಳಗೆ up-load ಮಾಡಲು, ಕ್ರಮವಹಿಸುವಂತೆ ಸೂಚಿಸಿದೆ. ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No.G-31011/1/2010-NREGA(Pt).**
**Government of India**
**Ministry of Rural Development**
**(Department of Rural Development)**

Krishi Bhavan, New Delhi.
Dated : 25th June, 2010

To

Principal Secretaries/Secretaries
of all States (in-charge of NREGA)

Subject : Labour Budget 2010-11 Uploading the certificate of approval of the Labour Budget of 2010-11 under Mahatma Gandhi NREGA by the respective Gram Sabha.

* * *

Madam/Sir,

The States were instructed in the respective Empowered Committee meeting in which Labour Budgets of the States were scrutinized and discussed to upload on the NREGA website, the certificate of approval of respective Gram Sabha followed by panchayat Samiti and Zila Parished. This is mandatory as the PROs are the principal authorities in all matters of NREGA as envisaged under Section 13,14,15,16 & 17 of the Act.

2. This may be done on priorty basis. It is informed that further release of funds respect to your State would be subject to uploading this certificate in case of all your GPs.

Yours faithfully,
Sd/-
**(Amita Sharma)**
Joint Secretaray (NREGA)

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ: 080 -22372738 **E-mail : Karnregs@gmail.com**

ಸಂ: ಗ್ರಾಅಪ 36 ಮಗಾಂಉಖಾಯೋ 2010 ದಿನಾಂಕ : 12–08–2010

**ಗೆ.**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಮಾನ್ಯರೆ,**

**ವಿಷಯ:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿತರಿಸಲಾದ ಉದ್ಯೋಗ ಚೀಟಿಗಳ ಸಿಂಧುತ್ವ ಪರಿಶೀಲನೆ ಮಾಡಿ ದೃಢೀಕರಿಸುವ ಕುರಿತು.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿತರಿಸಲಾದ ಉದ್ಯೋಗ ಚೀಟಿಗಳ ಸಿಂಧುತ್ವ ಪರಿಶೀಲನೆಯ ಪ್ರಕ್ರಿಯೆಯನ್ನು ನಡೆಸಿ, ದೃಢೀಕರಿಸುವ ಕಾರ್ಯವನ್ನು 30–6–2010 ಒಳಗೆ ಮುಗಿಸಬೇಕೆಂದು ಸೂಚನೆಗಳನ್ನು ನೀಡಿದ್ದು, ಈವರೆಗೂ, ಕೆಲವು ಜಿಲ್ಲೆಗಳ ಪ್ರಗತಿ ತೃಪ್ತಿಕರವಾಗಿರುವುದಿಲ್ಲ. ಕೂಡಲೇ ಅಂತಹ ಜಿಲ್ಲೆಗಳು Validation ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸತಕ್ಕದ್ದು ಮೇಲಿನ ಪ್ರಕ್ರಿಯೆಯ ಕ್ರಮವನ್ನು ಸಮಾನಾಂತರವಾಗಿ ಕೈಗೊಳ್ಳುವುದರ ಜೊತೆಗೆ, ತಮ್ಮಿಂದ ಕೆಲವು ವಿವರಗಳನ್ನು ಪಡೆಯಲು ಸರ್ಕಾರವು ಇಚ್ಛಿಸುತ್ತದೆ. ಉದ್ಯೋಗ ಚೀಟಿಗಳ ಸಿಂಧುತ್ವದ ಪರಿಶೀಲನೆಯ ಪ್ರಕ್ರಿಯೆಯಲ್ಲಿ ದೋಷಪೂರಿತ ಉದ್ಯೋಗ ಚೀಟಿಗಳನ್ನು ರದ್ದು ಪಡಿಸುವಾಗ, ಯಾವ ಕಾರಣಗಳಿಂದ ರದ್ದು ಪಡಿಸಲಾಗಿದೆ ಎಂಬುದನ್ನು ನಿರ್ದಿಷ್ಟವಾಗಿ ನಮೂದಿಸುವುಸು ಅವಶ್ಯಕವಾಗಿರುತ್ತದೆ. ಸದರಿ ವಿವರಗಳನ್ನು ತಮ್ಮಿಂದ ಪಡೆಯಲು, ಒಂದು ನಮೂನೆಯನ್ನು ನಿಗದಿಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿದೆ. ನಮೂನೆಯಲ್ಲಿ ಉದ್ಯೋಗ ಚೀಟಿಗಳನ್ನು ರದ್ದು ಪಡಿಸಲು ಇರಬಹುದಾದ ಅನೇಕ ಕಾರಣಗಳ ಮಾಹಿತಿಯನ್ನು ನೀಡಲಾಗಿರುತ್ತದೆ ಮತ್ತು ನೀಡಲಾಗಿರುವ ಕಾರಣಗಳನ್ನು ಹೊರತು ಪಡಿಸಿ ಇತರೆ ಕಾರಣಗಳು ಇರುವುದಾದರೆ, ಅವುಗಳನ್ನು ಸಹ ನಮೂದಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## PROFORMA

**Information in connection with job card validation to be furnished by all the Zilla Panchayats in the State**

| Sl. No. | Particulars | |
|---|---|---|
| 1 | Total number of households as per 2001 census | |
| 2 | Of which, number of rural house hold as per 2001 census | |
| 3 | No. of job cards issued (up to 31-3-2010) | |
| 4 | No. of job cards cancelled (during the validation) on account of | |
| | | **No. of job cards** |
| i) | Duplicate | |
| ii) | Same family | |
| iii) | Deceased | |
| iv) | Left the village | |
| v) | Not taken up any work allocated by GP | |
| vi) | Not demaded work since registration | |
| vii) | Not living in village | |
| viii) | Bogus card issued | |
| ix) | Issued not disbursed | |
| x) | MIS problem | |
| xi) | Only is MIS, not issued physically | |
| xii | Other reasons | |

**Chief Executive Officer**
Zilla Panchayat
………………………..District

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ: 080 -22372738 **E-mail : Karnregs@gmail.com**

ಸಂ: ಗ್ರಾಅಪ 02 ಉಖಾಯೋ 2008 Date: 20–12–2010

ರವರಿಗೆ,

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿ.ಪಂ.ಗಳು

**ಪ್ರಮುಖ ಮತ್ತು ತುರ್ತು**

**ಮಾನ್ಯರೇ,**

**ವಿಷಯ:** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಕಡ್ಡಾಯವಾಗಿ ದಿನಾಂಕ: 01.01.2010 ರಿಂದ NREGA-MIS ನಿಂದ ಪಡೆದ NMR ಗಳನ್ನೇ ಬಳಕೆಮಾಡುವ ಕುರಿತು.

**ಉಲ್ಲೇಖ:** ಸೆಪ್ಟೆಂಬರ್ ಹಾಗೂ ಅಕ್ಟೋಬರ್, 2009 ರಲ್ಲಿ ನಡೆದ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳು ಮತ್ತು ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿಗಳ ಜಿಲ್ಲಾ ಮಟ್ಟದ ಕಾರ್ಯಾಗಾರ.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದ್ದು ಯೋಜನಾ ಅನುಷ್ಠಾನದಲ್ಲಿ NMR ಗಳನ್ನು ಬಳಸಬೇಕಾದಲ್ಲಿ MIS ನಿಂದ ಪಡೆದ NMR ಗಳನ್ನೇ ಬಳಕೆಮಾಡುವಂತೆ ಮತ್ತು ಯಂತ್ರ ಮುದ್ರಿತ [pre-printed] NMR ಗಳನ್ನು ದಿನಾಂಕ: 30.10.2009 ರಿಂದ ಸ್ಥಗಿತಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳುವಂತೆ ಉಲ್ಲೇಖದ ಕಾರ್ಯಾಗಾರಗಳಲ್ಲಿ ತಿಳಿಸಲಾಗಿತ್ತು. ಆದರೆ, ಬಹಳಷ್ಟು ಜಿಲ್ಲೆಗಳು ಇನ್ನೂ ಇತ್ತ ಗಮನ ಹರಿಸದೇ ಇರುವುದು ತುಂಬಾ ಶೋಚನೀಯ.

ಈ ಸಂಬಂಧ NREGA-MIS ನಿಂದ NMR ಗಳನ್ನು ಮಾತ್ರ ದಿನಾಂಕ: 01.01.2010 ರಿಂದ ಬಳಕೆಮಡುವಂತೆ ಕಟ್ಟುನಿಟ್ಟಿನ ಕ್ರಮವಹಿಸಬೇಕಾಗಿದೆ. ಆದ ಕಾರಣ, ಈ ಕೆಳಕಂಡಂತೆ ಜರೂರು ಕ್ರಮವಹಿಸಲು ಸೂಚಿಸಿದೆ.

- ದಿನಾಂಕ:31.12.2009 ರವರೆಗೆ NREGA-MIS ನಲ್ಲಿ DATA ENTRY ಮೂಲಕ ದಾಖಲಿಸಿ ವಿತರಿಸುವ ಹಾಗೂ ಬಳಕೆಮಾಡುವ ಯಂತ್ರ ಮುದ್ರಿತ [pre-printed] NMR ಗಳನ್ನು NREGA-MIS ನಲ್ಲಿ ಅಳವಡಿಸಲು ದಿನಾಂಕ: 15.01.2010ನ್ನು ಅಂತಿಮ ದಿನಾಂಕವೆಂದು ನಿಗದಿಮಾಡಿದೆ.
- ದಿನಾಂಕ: 15.01.2010ರ ನಂತರ ಯಾವುದೇ ಯಂತ್ರ ಮುದ್ರಿತ [pre-printed] NMR ಗಳನ್ನು NREGA-MIS ನಲ್ಲಿ ಅಳವಡಿಸಲು ಸಾಧ್ಯವಾಗುವುದಿಲ್ಲ.
- ದಿನಾಂಕ: 01.01.2010 ರಿಂದಲೇ NREGA-MIS ನಿಂದ ಪಡೆದ NMR ಗಳನ್ನು ಮಾತ್ರ ಬಳಕೆಮಾಡಲು ಕ್ರಮವಹಿಸತಕ್ಕದ್ದು.
- NREGA-MIS ನಿಂದ NMR ಪಡೆಯದೆ ಇತರೆ ಯಾವುದೇ ಮೂಲದಿಂದ NMR ಗಳನ್ನು ಪಡೆದು ಬಳಕೆಮಾಡಿದಲ್ಲಿ NMR ಗಳನ್ನು NREGA-MIS ನಲ್ಲಿ ದಾಖಲಿಸಲು ಇನ್ನು ಮುಂದೆ ಅವಕಾಶ ವಿರುವುದಿಲ್ಲ.

ತಮ್ಮ ವಿಶ್ವಾಸಿ,
ಸಹಿ/–
**ನಿರ್ದೇಶಕರು**
ರಾ.ಗ್ರಾ.ಉ.ಖಾ.ಯೋ.ನಿರ್ದೇಶನಾಲಯ, ಗ್ರಾ.ಅ. ಮತ್ತು ಪಂ.ರಾ.ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ:36:ಉಖಾಯೋ:2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ: 29–03–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

**ವಿಷಯ : ಉದ್ಯೋಗ ಚೀಟಿಗಳನ್ನು Validation ಮಾಡದೇ ಹಣ ಪಾವತಿಸಿರುವ ಬಗ್ಗೆ**

* * *

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ವಿಶೇಷವಾಗಿ ಬಿಜಾಪುರ, ಮಂಡ್ಯ, ಗದಗ, ಕೊಪ್ಪಳ, ರಾಮನಗರ, ಬೀದರ್ ಮುಂತಾದ ಜಿಲ್ಲೆಗಳಲ್ಲಿ ಈಗಾಗಲೇ ನೀಡಿರುವ ಉದ್ಯೋಗ ಚೀಟಿಗಳನ್ನು Validation ಮಾಡದೇ ಹಣ ಪಾವತಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರತಿಯೊಂದು ಉದ್ಯೋಗ ಚೀಟಿಯಲ್ಲಿ ಕುಟುಂಬದ ಎಲ್ಲಾ ಕೂಲಿಕಾರರ Photo, Bank ಖಾತೆ ಸಂಖ್ಯೆ, ಹಿಂದುಳಿದ/ಪ.ಜಾ/ಪ.ವರ್ಗಗಳಿಗೆ ಸೇರಿದ ಮಾಹಿತಿ, ವಯಸ್ಸು, ಇತ್ಯಾದಿ ವಿವರಗಳು ಕಡ್ಡಾಯವಾಗಿ ಲಭ್ಯವಿರಬೇಕಾಗಿರುತ್ತದೆ. ಆದರೆ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಉದ್ಯೋಗ ಚೀಟಿಗಳನ್ನು Validation ಮಾಡದೇ ಹಣ ಪಾವತಿ ಮಾಡಿ Validation ಮಾಡುವ ಸಮಯದಲ್ಲಿ ಅಂತಹ ಉದ್ಯೋಗ ಚೀಟಿಗಳನ್ನು ಕೈಬಿಟ್ಟಿರುವುದರಿಂದ ಗಂಭೀರವಾದ ಸಮಸ್ಯೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕೂಲಿಕಾರರು ಕೆಲಸಕ್ಕೆ ಬಂದಾಗ ತಕ್ಷಣವೇ ಅವರ ಭಾವಚಿತ್ರ ತೆಗೆದುಕೊಂಡು ಅವರಿಗೆ ಸಂಬಂಧಿಸಿದ ಮಾಹಿತಿಗಳನ್ನು ಉದ್ಯೋಗ ಚೀಟಿಯಲ್ಲಿ ಸಂಪೂರ್ಣವಾಗಿ ಭರ್ತಿ ಮಾಡಿದ ನಂತರ ಹಣ ಪಾವತಿಸಲು ಈ ಮೂಲಕ ಆದೇಶಿಸಿದೆ.

ಮೇಲ್ಕಂಡ ಸೂಚನೆಗಳನ್ನು ಉಲ್ಲಂಘನೆ ಮಾಡಿ ಹಣ ಪಾವತಿ ಮಾಡಿದ್ದರೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಪಿಡಿಒಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವುದಲ್ಲದೇ ಅಂತಹ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲಾಗುವುದು.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು  560 001.
ದೂ: 080 -22372738 **E-mail : Karnregs@gmail.com**

ಗ್ರಾಅಪ :193 :ಉಖಾಯೋ:2009 ದಿನಾಂಕ : 18-07-2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ

ವಿಷಯ: ಶೇಕಡಾ ೧೦೦ ರಷ್ಟು ಎಂಐಎಸ್‌ನ್ನು ಪ್ರಸ್ತುತ ಸಾಲಿನಲ್ಲಿ ನಿರ್ವಹಣೆ ಮಾಡುವುದರ ಬಗ್ಗೆ
ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಪತ್ರದ ಸಂಖ್ಯೆ ಜೆ/12013/28/2010 ಎಂಜಿಎನ್‌ಆರ್‌ಇಜಿಎ (ಭಾಗ -3) ದಿನಾಂಕ : 04-07-2011

* * *

ಕೇಂದ್ರ ಸರ್ಕಾರವು ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ 2011-2012 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಂಐಎಸ್ ನ್ನು ಶೇಕಡಾ 100 ರಷ್ಟು ನಿರ್ವಹಣೆ ಮಾಡಲು ಹೆಚ್ಚು ಒತ್ತನ್ನು ಕೊಡಲು ರಾಜ್ಯ ಸರ್ಕಾರಗಳಿಗೆ ತಿಳಿಸಿರುತ್ತದೆ. ಇನ್ನೂ ಮುಂದೆ ಎಂಐಎಸ್‌ನಿಂದ ಸೃಜನೆಯಾದ ವರದಿಗಳ ಆಧಾರಿತವೇ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿರುತ್ತದೆ. ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಹುತೇಕ ಎಂಐಎಸ್‌ನ್ನು ನಿರ್ವಹಣೆ ಮಾಡಲಾಗುತ್ತಿದೆ. ಎಂಬ ಅಂಶವು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಅದರೂ ಕೆಲವು ಜಿಲ್ಲೆಗಳಲ್ಲಿ ಭೌತಿಕವಾಗಿ ಯೋಜನೆಯಡಿ ನಿರ್ವಹಿಸಲಾದ ಮಾಹಿತಿಗಳನ್ನು ಎಂಐಎಸ್‌ನಲ್ಲಿ ದಾಖಲಿಸದೆ ಹಾಗೆಯೇ ಮುಂದುವರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರ ಪರಿಣಾಮ ರಾಜ್ಯಮಟ್ಟದಿಂದ ತಪಾಸಣೆಗೆ ಬಂದ ಅಧಿಕಾರಿಗಳಿಗೆ ಸಮರ್ಪಕವಾಗಿ ಪರಿವೀಕ್ಷಣೆ ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ತಾವುಗಳು ಎಂಐಎಸ್‌ನಲ್ಲಿ ಇನ್ನು ಮುಂದೆ ಯೋಜನೆಯ ಅನುಷ್ಠಾನದಲ್ಲಿ ಯಾವುದೇ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಅದರ ವಿವರಗಳನ್ನು ಕೂಡಲೇ ಆಗಿಂದಾಗಲೇ ದಾಖಲಿಸಲು ಕ್ರಮಜರುಗಿಸುವುದು. ಎಂಐಎಸ್‌ನಲ್ಲಿ ದಾಖಲಿಸಿದ ಮಾಹಿತಿಯ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಭೌತಿಕವಾಗಿ ಲಭ್ಯವಿರುವ ಮಾಹಿತಿಗೆ ಹೋಲುವಂತಾಗಿರಬೇಕು ಮತ್ತು ವ್ಯತ್ಯಾಸವಿರಬಾರದು. ಮಾಹಿತಿಗಳ ವಿವರಗಳನ್ನು ಆಗಿಂದಾಗಲೇ, ದಾಖಲಿಸುವುದರಿಂದ ಶೇಕಡಾ 100 ರಷ್ಟು ಎಂಐಎಸ್ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ ಪ್ರಸ್ತುತ ಸಾಲಿನಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

1 ರಾಜ್ಯ ಸರ್ಕಾರದ ಮುಂದಿನ ಕಂತಿನ ಅನುದಾನವನ್ನು ಪಡೆಯಬೇಕಾದರೆ, ಶೇಕಡಾ 100 ರಷ್ಟು ಎಂಐಎಸ್‌ನಲ್ಲಿ ಮಾಹಿತಿಯನ್ನು ಇಂಧೀಕರಿಸಬೇಕು. ಎಂಐಎಸ್ ಆಧಾರಿತ ಸೃಜನೆಯಾದ ವರದಿಯ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

2 2010-11 ಮತ್ತು 2011-12 ನೇ ಸಾಲಿನಲ್ಲಿ ಇರುವ ಆರಂಭಿಕ ಶಿಲ್ಕು ಮತ್ತು ಮುಕ್ತಾಯದ ಶಿಲ್ಕುಗಳಲ್ಲಿ ಇರುವ ವ್ಯತ್ಯಾಸವನು ಮರುಹೊಂದಾಣಿಕೆ ಮೂಲಕ ಸರಿಪಡಿಸಿ ಆರಂಭಿಕ ಶಿಲ್ಕು ಮತ್ತು ಮುಕ್ತಾಯ ಶಿಲ್ಕಿನ ಅಂಕಿ ಅಂಶಗಳು ಒಂದೇ ಆಗಿರುವಂತೆ ಕ್ರಮ ಜರುಗಿಸುವುದು.

3 ಮುಂದುವರೆದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಪ್ರಥಮ ಆದ್ಯತೆ ನೀಡಬೇಕು ಮತ್ತು ಅದರ ವಿವರಗಳನ್ನು ಕೂಡಲೇ ಎಂಐಎಸ್‌ನಲ್ಲಿ ದಾಖಲಿಸುವುದು.

4 ಕೇಂದ್ರ ಸರ್ಕಾರದ ಸೂಚನೆಯಂತೆ, ಬಾಕಿ ಇರುವ ಅನುದಾನದ ಬಿಲ್ಲುಗಳ ಮೊತ್ತವನ್ನು ತೀರುವಳಿ ಮಾಡಲು ಕ್ರಮಕೈಗೊಂಡು ಆರಂಭಿಕ ಶಿಲ್ಕನ್ನು ಅಂತಿಮಗೊಳಿಸಿ ಮುಂದಿನ ಕಂತಿನ ಅನುದಾನವನ್ನು ಪಡೆಯುವುದು.

5 ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಪ್ರಕ್ರಿಯೆಗಳ ಬಗ್ಗೆ ಉಸ್ತುವಾರಿ ಮಾಡುವುದು.

6 ಇನ್ನು ಮುಂದೆ ಅನುದಾನವನ್ನು ಎಂಐಎಸ್ ಇಂದ ಸೃಜನೆಯಾದ ವರದಿಗಳ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು. ಎಂಐಎಸ್ ಆಧಾರಿತ ವರದಿಯೇ ಅಂತಿಮವಾಗಿರುತ್ತದೆ.

7 ಹೊರಗುತ್ತಿಗೆಯ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ವರ್ಗದ ಸಿಬ್ಬಂದಿಗಳ ಸಂಬಳ /ಸಂಭಾವನೆಯನ್ನು ಸಕಾಲದಲ್ಲಿ ಪಾವತಿಗೆ ಸೂಕ್ತ ವ್ಯವಸ್ಥೆ ಮಾಡುವುದು.

ಮೇಲೆ ತಿಳಿಸಿರುವ ಅಂಶಗಳಲ್ಲದೆ ಎಂಐಎಸ್‌ನ್ನು ಪ್ರಸ್ತುತ ಸಾಲಿನಲ್ಲಿ ಸಂಪೂರ್ಣವಾಗಿ ನಿರ್ವಹಣೆ ಮಾಡಲು ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಪಟ್ಟಿಯಲ್ಲಿ ತಿಳಿಸಿರುವಂತೆ, ಯಥಾವತ್ತಾಗಿ ಎಲ್ಲಾ ಕ್ರಮಗಳ ಅಂಶಗಳನ್ನು ಅನುಷ್ಠಾನಗೊಳಿಸಿ ಎಂಐಎಸ್‌ನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಲು ಕ್ರಮಕೈಗೊಳ್ಳುವಂತೆ ಈ ಮೂಲಕ ಕೋರಿದೆ.

(ಪಿ.ಶಿವಶಂಕರ್)
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ACTION POINTS TO CHIEF EXECUTIVE OFFICERS OF ALL ZILLA PANCHAYATS IN THE STATE FOR IMMEDIATE COMPLIANCE AND UP- DATION IN

## MIS UNDER MGNREGS

1 Updating of the opening balance in MIS by ZP/TP/GP after clearing the arrears of previous pending bills of the works is a must to get the subsequent installment of funds.

2. Updating of the MPRs like :
   a) Bank and Post office report
   b) Transparency report
   c) Capacity building - personnel report
   d) Capacity building - training report

   And other information as envisaged in MPR shall be up - dated

3. Updating of the online submission of the proposal in MIS

### Audit report

a) Implementing agency wise expenditure statement
b) Block wise expenditure statment
c) GP wise expenditure statement
d) uncashed cheque statement
e) Bank reconciliation statement
f) Receipt and payment statement
g) Income and expenditure statement
h) Balance sheet
i) Observation of chartered accountant
j) Compliance report to the observation of the CA
   - ✧ Utilization certificate
   - ✧ Current year progress (Annexure-I report)
   - ✧ Pre-requisite statement
   - ✧ Online proposal for demand of funds.

4. Data entry of the shelf of projects in MIS (GP wise)
5. Details of the works proposed in labour budget for approval shall be entered in MIS and the works so proposed shall be from shelf be from shelf of projects.
6. After approval of the LB by GOL, approved details of the LB shall be up loaded in MIS.
7. Job card verification such as updating of the Account numbers, bank name, branch name, branch code of the labourers with photos shall be uploaded in MIS.
8. Work details of both completed and under progress shall be uploaded and updating periodically as and when the works are progressing
9. Details of the NMRs shall be up loaded in MIS

10. Priority shall be given to clear the anticipated expenditure and updated the opening balance finally so as to get their due installment of funds during current year.
11. Details of the social audit held in GPs observation/findings of the social audit and ATR thereon shall be uploaded
12. Details of the receipts of complaints, their disposals, endorsement given to the complainants etc shall be uploaded.
13. Details of the personnel recruited on out sourcing desingnation wise shall be up-loaded
14. Details of all releases made to the Panchayat Raj institutions and other imple menting agencies and expenditure incurred by them shall be uploaded and updated in MIS hence forth, for the current year and later onwards so as to gener ate MPRs from the MIS report.
15. The difference in the opening balance and closing balance for both in MIS and MPR need to be reconciled as early as possible and see that the opening balance and clong balance for the financial year 2010-11 shall match both in the MIS and MPR for the month of the march 2011.

ఆవిష్కరణ

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಬಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
Ph : 080-22372738, E-mail : nregs-ka@nic.in

ಗ್ರಾಅಪ :193 :ಉಖಾಯೋ2011 ದಿನಾಂಕ : 26-07-2011

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಎಂಐಎಸ್‌ನಲ್ಲಿ TIN (Tax Information Network) ಸಂಖ್ಯೆನ್ನು ನಮೂದು ಮಾಡುವ ಬಗ್ಗೆ

ಉಲ್ಲೇಖ:
1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ M-11011/12006-TS(MON)/partifile I (FTS-1742) ದಿನಾಂಕ 29-06-2011
2 ಸರ್ಕಾರಿ ಆದೇಶ ಸಂಖ್ಯೆ 1 ಗ್ರಾಅಪ 02ಉಖಾಯೋ 2008 ಬೆಂಗಳೂರು ದಿನಾಂಕ 08-07-2011
3. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಜೆ -11060/3/2009 - ಎಂಜಿಎನ್‌ಆರ್‌ಇಜಿವಿ ದಿನಾಂಕ 29-11-2011

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಕಾಮಗಾರಿಯ ಸಾಮಾಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಎಂಐಎಸ್‌ನಲ್ಲಿ ಟಿಐಎನ್ ಸಂಖ್ಯೆಯನ್ನು ನಮೂದು ಮಾಡುವ ಬಗ್ಗೆ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದು ಅವುಗಳ ವಿವರ ಈ ಕೆಳಕಂಡಂತಿದೆ.

1. ಒಂದೇ ವಹಿವಾಟಿನಲ್ಲಿ ಐದು ಸಾವಿರ ರೂಗಳ ವರೆಗೂ ಸಾಮಾಗ್ರಿಗಳನ್ನು ಖರೀದಿಸಿದ್ದರೆ, ಅಂತಹ ಬಾಬುಗಳಿಗೆ ಎಂಐಎಸ್‌ನಲ್ಲಿ ಟಿಐಎನ್ ಸಂಖ್ಯೆಯನ್ನು ನಮೂದು ಮಾಡುವುದು ಕಡ್ಡಾಯವಿರುವುದಿಲ್ಲ.
2. ಒಂದೇ ವಹಿವಾಟಿನಲ್ಲಿ ಐದು ಸಾವಿರ ರೂಗಳಿಗಿಂತ ಹೆಚ್ಚಿಗೆ ಸಾಮಾಗ್ರಿಗಳನ್ನು ಖರೀದಿಸಿದ್ದರೆ, ಅಂತಹ ಬಾಬುಗಳಿಗೆ ಎಂಐಎಸ್‌ನಲ್ಲಿ ಟಿಐಎನ್ ಸಂಖ್ಯೆಯನ್ನು ನಮೂದು ಮಾಡುವುದು ಅವಶ್ಯಕವಾಗಿರುತ್ತದೆ.

ಇದರ ಸಂಬಂಧ ಉಲ್ಲೇಖ (1)ರಲ್ಲಿ ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಪತ್ರದ ಪ್ರತಿಯನ್ನು ಇದರೊಂದಿಗೆ ಸಿದ್ದ ಗಮನಕ್ಕಾಗಿ ಲಗತ್ತಿಸಿದೆ. ಈಗಾಗಲೇ ಕಾಮಗಾರಿಗಳ ಅನುಷ್ಠಾನದಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸಿ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಅನುಷ್ಠಾನ ಏಜೆನ್ಸಿಗಳು ಸಂದರ್ಭಕ್ಕೆ ಅನುಸಾರ ಸಾಮಾಗ್ರಿಗಳನ್ನು ಪಡೆದು ನಿರ್ವಹಿಸುವ ವಿಧಿವಿಧಾನಗಳನ್ನು ಉಲ್ಲೇಖ (2)ರ ಆದೇಶದಲ್ಲಿ ತಿಳಿಸಲಾಗಿರುತ್ತದೆ. ಅದರೊಂದಿಗೆ ಕೇಂದ್ರ ಸರ್ಕಾರವು ಕೂಡ ಸಾಮಾಗ್ರಿಗಳನ್ನು ಪಡೆಯುವ ಬಗ್ಗೆ ಅನುಸರಿಸುವ ವಿಧಿವಿಧಾನಗಳು ಹಾಗೂ ಮಾನದಂಡಗಳ ಪತ್ರದ ಪ್ರತಿಯನ್ನು ಲಗತ್ತಿಸಿ ತಿಳಿಸಲಾಗಿರುತ್ತದೆ. ಆದುದರಿಂದ ಉಲ್ಲೇಖಿತ ಪತ್ರಗಳ ಆದೇಶದನ್ವಯ ಕ್ರಮಕೈಗೊಳ್ಳಲು ಸೂಚಿಸಿದೆ.

**(ಪಿ.ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇಮಹಡಿ 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು - 560 001
Ph : 080-22372738, E-mail : nregs-ka@nic.in

ಗ್ರಾಅಪ :140:ಉಖಾಯೋ2011 ದಿನಾಂಕ : 26-09-2011

ಗೆ.
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ
ಮಾನ್ಯರೇ,

ವಿಷಯ: 2010-11ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಬಂಧ MISನಲ್ಲಿ NMRಗಳ ಬಿಲ್ಲುಗಳನ್ನು ಪಾವತಿಸಿದ ಪಾವತಿಸುವ ದಿನಾಂಕದ ವಿವರಗಳನ್ನು ಪ್ರಚಲಿತ ವರ್ಷದಲ್ಲಿ ದಾಖಲಿಸುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಸಂಖ್ಯೆ K-11011/2/2008-NREGA(MON)/TS ದಿನಾಂಕ 22.09.2011.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿದಂತೆ 2010-11ನೇ ಸಾಲಿನಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಭೌತಿಕವಾಗಿ ಅನುಷ್ಠಾನಗೊಳಿಸಿದ್ದು, ವಾಸ್ತವಿಕವಾಗಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಸದರಿ ಸಾಲಿನಲ್ಲಿ ಪಾವತಿಯಾಗದಿದ್ದರೂ ಪಾವತಿ ಮಾಡಲಾಗಿದೆ ಎಂದು MIS ನಲ್ಲಿ ದಾಖಲಿಸಿದ್ದು ಈಗ ಅಂತಹ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಪ್ರಚಲಿತ ವರ್ಷದಲ್ಲಿ NMR ಗಳ ಬಿಲ್ಲುಗಳನ್ನು ಪಾವತಿಸಲು ಅನುಮತಿ ನೀಡುವಂತೆ ಪಾವತಿಸಿದ ದಿನಾಂಕದ ವಿವರಗಳನ್ನು MIS ನಲ್ಲಿ ದಾಖಲಿಸಲು ಅವಕಾಶ ನೀಡುವಂತೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕೋರಿಕೆಯ ಮೇರೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದು ಈಗ ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ 2010-2011 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಬಂಧ ಬಾಕಿ ಇರುವ NMR ಬಿಲ್ಲುಗಳ ಹಣವನ್ನು ಪ್ರಚಲಿತ ವರ್ಷದಲ್ಲಿ ಪಾವತಿಸಿದ / ಪಾವತಿಸುವ ದಿನಾಂಕದ ವಿವರಗಳನ್ನು MIS ನಲ್ಲಿ ದಾಖಲಿಸಲು ಕೆಲವು ಷರತ್ತುಗಳನ್ನು ವಿಧಿಸಿ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ತಿಳಿಸಿರುತ್ತದೆ. ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಮಾರ್ಗದರ್ಶನಕ್ಕಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಲಗತ್ತಿಸಿದೆ.

ಸದರಿ ವಿಷಯದ ಸಂಬಂಧ ವಿವರಗಳನ್ನು ಒದಗಿಸುವಂತೆ ಸರ್ಕಾರವು ತನ್ನ ಪತ್ರದ ಸಂಖ್ಯೆ 140:ಉಖಾಯೋ 2011 ದಿನಾಂಕ 24-08-2011ರಲ್ಲಿ ನೀಡಿರುವ ಅಂತಿಮ ಗಡುವು ಈಗಾಗಲೇ ಗತಿಸಿದ್ದು ಕೆಲವು ಜಿಲ್ಲೆಗಳು ಮಾತ್ರ. ವಿವರಗಳನ್ನು ನಿಗಧಿಪಡಿಸಿದ ಅವಧಿಯಲ್ಲಿ ಸಲ್ಲಿಸಿದ್ದು ಉಳಿದ ಜಿಲ್ಲೆಗಳು ಈವರೆಗೂ ಸಲ್ಲಿಸಿರುವುದಿಲ್ಲ. ಸಲ್ಲಿಸದೆ ಇರುವ ಜಿಲ್ಲೆಗಳು ಇನ್ನು ಮುಂದೆ ವಿವರಗಳನ್ನು ಸಲ್ಲಿಸಿದರೆ ಅಂತಹ ಜಿಲ್ಲೆಗಳ ಪ್ರಸ್ತಾವನೆಗಳನ್ನು ಸರ್ಕಾರವು ಪುರಸ್ಕರಿಸುವುದಿಲ್ಲ ಮತ್ತು ಅಂತಹ ಜಿಲ್ಲೆಗಳನ್ನು ಕೈಬಿಡಲಾಗಿದೆಯೆಂದು ಪರಿಗಣಿಸಿ ಮುಂದಿನ ಆಗುಹೋಗುಗಳಿಗೆ ಅಂತಹ ಜಿಲ್ಲೆಗಳ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ನಿಗದಿತ ಅವಧಿಯಲ್ಲಿ ಸಲ್ಲಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು MIS ನಲ್ಲಿ NMRಗಳ ಬಿಲ್ಲುಗಳ ಹಣವನ್ನು ಪಾವತಿಸಿದ / ಪಾವತಿಸುವ ದಿನಾಂಕದ ವಿವರಗಳನ್ನು ದಾಖಲಿಸುವಾಗ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮುಂದಿನ ಅಗತ್ಯ ಕ್ರಮ ಜರುಗಿಸುವಂತೆ ಸೂಚಿಸಿದೆ.

1. ಪ್ರಚಲಿತ ವರ್ಷದಲ್ಲಿ ಯಾವುದೇ ಬದಲಾವಣೆಗಳು / ಮಾರ್ಪಾಡುಗಳನ್ನು MIS ನಲ್ಲಿ ದಾಖಲಿಸಿರುವ ವಿವರಗಳನ್ನು ಗುರುತಿಸುವ ಜವಾಬ್ದಾರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳದೆ ಆಗಿರುತ್ತದೆ. ಮತ್ತು ಅಂತಹ ವಿವರಗಳಿಗೆ ಪ್ರತ್ಯೇಕತೆ ಇರಬೇಕು.

2. 2010-11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದ ಕಾಮಗಾರಿಗಳ ಸಂಬಂಧ ಹಣದ ಪಾವತಿಯ ದಿನಾಂಕವನ್ನು ಸದರಿ ಸಾಲಿನಲ್ಲಿ ಪಾವತಿಯಾಗದಿದ್ದರೂ ಪಾವತಿದಿಯಾಗಿದೆಯೆಂದು ತಪ್ಪಾಗಿ MIS ನಲ್ಲಿ ದಾಖಲಿಸಿರುವ ಸಿಬ್ಬಂದಿಗಳನ್ನು ಗುರುತಿಸಿ ಅಂತಹವರ ವಿರುದ್ಧ ಜವಾಬ್ದಾರಿಯನ್ನು ನಿಗದಿಪಡಿಸಿ ಸೂಕ್ತ ಕ್ರಮ ವಹಿಸತಕ್ಕದ್ದು.

3. 2010-11ನೇ ಸಾಲಿಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಬಾಕಿ ಇರುವ ಎಲ್ಲಾ ಬಿಲ್ಲುಗಳ ಹಣವನ್ನು ಪಾವತಿಸಿದ ನಂತರ ಸರ್ಕಾರಕ್ಕೆ ಒಂದು ಅನುಪಾಲನ ವರದಿಯನ್ನು ಸಲ್ಲಿಸತಕ್ಕದ್ದು.

4. ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಜಿಲ್ಲೆಗಳನ್ನು ಹೊರತುಪಡಿಸಿ ಮಿಕ್ಕ ಜಿಲ್ಲೆಗಳು, ಕೇಂದ್ರ ಸರ್ಕಾರವು MISನಲ್ಲಿ ಕಲ್ಪಿಸಿರುವ EDIT ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತಿಲ್ಲ. ಒಂದು ವೇಳೆ ಅನುಬಂಧದಲ್ಲಿ ತೋರಿಸದೇ ಇರುವ ಜಿಲ್ಲೆಗಳು ಸರ್ಕಾರದಿಂದ ನೀಡಿರುವ ಸೂಚನೆಗಳನ್ನು ಉಲ್ಲಂಘಿಸಿ, EDIT ಮಾಡಲು ಮುಂದುವರಿದಲ್ಲಿ ಅಂತಹ ಜಿಲ್ಲೆಗಳ ವಿರುದ್ಧ ನಿಯಮಾನುಸಾರ, ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪಿ.ಶಿವಶಂಕರ)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ
ಯೋಜನೆ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ఉచిత పంపిణీ

# ಕಾಮಗಾರಿಗಳ ಗುಚ್ಛ

**AMIITA SHARMA**
Joint Secretary
Tel No : 23385027
Fax No : 23384703

D.O.No PS/JS(NREGA)/2007 Dated 31st May, 2007

Dear Shri Sreenivasamurthy,

Sub : Ensuring an adequate and precise shelf of Projects under NREGA

* * *

The National Rural Employment Guarantee Act (NREGA) guarantees providing employment within fifteen days of demand and the instrument for providing employment is un skilled manual work selected from the list of permissible works in Schedule I of the Act. The National Guidelines indicate he way in which the annual shelf of projects may be prepared to meet the estimated labour demand that will be indicated in the Labour Budget.

Districts have attempted to prepare shelf of projects to keep a list of works ready to meet employment demand. Some districts have also prepared perspective plan for five years.

2. Feedback from the field and reviews indicate that in some districts there is a need for ensuring that an adequate number of works are available at the village evel. In most cases there is a need for greater precision in planning works. The following suggestions are made towards this end.

3. It has been noticed that by and large the number of persons demanding works does not include the number of BPL families. On that basis the following strategy can be adopted. Initially an annual shelf of projects should be prepared by taking into account the number of BPL families in the Gram Panchayat.Since there is a statutory commitment to provide 100 day's of employment to each household the initial and immediates self of projects should absorb twice the number of BPL families multiplied by 100 persondays so that adequate ceiling is available. There will be roughly atleast 3-4 works at a Gram Panchayat Level.

i) Administrative sanction and Technical Sanction of the Shelf of Projects should be given in advance. This shelf of Projects should be kept ready in advance before demand for employment.

Sanctioned, funds received and used, wages paid

4. Key Message to be included in all IEC initiatives are:

- The Act Guarantees 100 days of employment upon Demand

- ❖ Wage seekers have to apply for registration and job card
- ❖ Documentation of the demand for employment
- ❖ Dated receitp of the application for employment by the Gram Panchayat.
- ❖ Provision of unskilled manual work within 15 days of demand
- ❖ Else payment of unemployment allowance by the state Government
- ❖ Workers should be paid wages within 15 days of work completion of work
- ❖ Workers have the right to check their muster rolls.

5. All States are expected to initiate IEC activities as indicated above. The cost of these activities may be borne out of the 4% adminitrative expenses. DI'Cs should be instructed forthwith

6. Each DPC will submit a cerificate to the State Government with a copy to the Ministry on completing all Block level Conventions of Sarpanches and ward members by the last check of May and of convening all Grama Sabhas on NREGA by June end.

7. A detailed report on the action taken on the IEC initiatives as indicated here will be sent by the State Government along with sample IEC materials by June in the Checklist attached. The Checklist is indicative of key activities that all states are expected to undertake. IEC activities besides those indicated in the format should be mentioned specifically by the State. The DPC has to indicate the time plan for the activities and the output in terms of number of activities completed and outcomes in terms of the inpct of the activities undertaken. A soft copy of the IEC Checklist may be accessed on www.nrega.nic.in

8 The focus of monitoring of NREGA in the next two months will the outreach and quality of EX activities taken up at the district and its impact on the awareness ieveis of the local community specially wage earners.

9. This letter may, therefore be kindly acknowledged and action planned to be taken indicated to the Ministry at the earliest.

With regards,

Your's sincerely,

**(Amita Sharma)**

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 31 ಉಖಾಯೋ 07

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ–2, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 04–07–2007

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
3ನೇ ಹಂತ, 3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳುರು 560 001.

ಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್
ಬೀದರ್, ಗುಲ್ಬರ್ಗ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಬೆಳಗಾಂ, ಹಾಸನ,
ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ತುಮಕೂರು, ಕೋಲಾರ ಮತ್ತು ಉಡುಪಿ

ಮಾನ್ಯರೆ,

ವಿಷಯ: ಜೈವಿಕ ಇಂಧನದ ಸಸಿಗಳನ್ನು ಬೆಳೆಸುವ ಬಗ್ಗೆ.

ಉಲ್ಲೇಖ: ನಿರ್ದೇಶಕರು ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು ಇವರ ಪತ್ರದ ಸಂ. ಎಂಜಿಎ/ಡಿಎಲ್ಆರ್/12/2007–08 ದಿನಾಂಕ:25.04.2007

* * *

ಉಲ್ಲೇಖದಲ್ಲಿ, ಜೈವಿಕ ತೈಲವನ್ನು ಉತ್ಪಾದಿಸುವ ಸಲುವಾಗಿ, ಕೇಂದ್ರ ಸರ್ಕಾರವು ಜಟ್ರೋಪ ಸಸಿಗಳನ್ನು ಬೆಳೆಸಲು ರೂ. 2.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿ, ತರುವಾಯ, ಅದನ್ನು ನಡುತೋಪು ಮಾಡಲು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಥವಾ ಇತರ ಯೋಜನೆಗಳೊಂದಿಗೆ ಯಾವುದು ಸೂಕ್ತವೋ ಅದರಲ್ಲಿ ಸಮ್ಮಿಲನಗೊಳಿಸಿ, ಕೈಗೆತ್ತಿಕೊಳ್ಳುವಂತೆ, ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಗೆ ತಿಳಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ವರದಿ ಮಾಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದವರು ನೀಡಿರುವ ಮಾರ್ಗಸೂಚಿಯನ್ನು ಲಗತ್ತಿಸಿದೆ.

ಈಗ ಜೈವಿಕ ತೈಲವನ್ನು ಉತ್ಪಾದಿಸಲು, ಹೊಂಗೆಯ ಬೀಜಗಳನ್ನು ಪ್ರಥಮ ಆದ್ಯತೆಯಾಗಿ ಆಯ್ಕೆ ಮಾಡುವಂತೆ ಮತ್ತು ಒಂದು ವೇಳೆ ಆ ಜಾತಿಯ ಬೀಜಗಳು ಲಭ್ಯವಿಲ್ಲದಿದ್ದಲ್ಲಿ, ಜಟ್ರೋಪ ಬೀಜಗಳನ್ನು ಸಸಿಗಳನ್ನು ಬೆಳೆಸುವುದಕ್ಕೆ ಆಯ್ಕೆ ಮಾಡಿಕೊಳ್ಳಲು ದಿನಾಂಕ 02–07–2007ರಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೊದಲನೇ ಹಂತದ ಜಿಲ್ಲೆಗಳ ಅನುಷ್ಠಾನದ ಪರಿಶೀಲನಾ ಸಭೆಯಲ್ಲಿ ಬೀಜಗಳನ್ನು ಪಡೆಯಲು ಮತ್ತು ಸಸಿಗಳನ್ನು ಬೆಳೆಸಲು ಅಂದಾಜು ಅನುದಾನ ಎಷ್ಟು ಬೇಕಾಗಬಹುದು ಎಂಬುದರ ಬಗ್ಗೆ ಹಾಗೂ ಇತರೆ ಮಾಹಿತಿಗಳ ಬಗ್ಗೆ, ನಿಗದಿತ ನಮೂನೆಯಲ್ಲಿ ಜಮೀನಿನ ಸರ್ವೆ ನಂಬರುಗಳೊಂದಿಗೆ, ನೇರವಾಗಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರಿಗೆ ದಿನಾಂಕ **೧೫.೭.೨೦೦೭ರೊಳಗೆ ಸಲ್ಲಿಸಿ,** ಅದರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ. ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಸಂಬಂಧಿಸಿದ ಜಿಲ್ಲೆಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿದ ಬಳಿಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ಮೌಲ್ಯಮಾಪನ ಮಾಡುವುದು ಮತ್ತು ಸಸಿಗಳನ್ನು ಬೆಳೆಸುವುದು ಜಿಲ್ಲಾವಾರು ಹಂಚಿಕೆ ಮಾಡುವುದು, ತದ ನಂತರ NREGA/SGRY/WGDP ಯಡಿ ಲಭ್ಯವಿರುವ ಅನುದಾನವನ್ನು ನೆಡುತೋಪಿಗೆ ಮಾರ್ಗಸೂಚಿಯಂತೆ ಉಪಯೋಗಿಸುವ ಶಿಷ್ಟಾಚಾರವನ್ನು ಅನುಸರಿಸುವ ನಿಯಮವನ್ನು ಈ ಕಛೇರಿಯಿಂದ ನೀಡಲಾಗಿದೆ.

ಸಹಿ/–
**(ವಿ. ರಶ್ಮಿ ಮಹೇಶ್)**
ನಿರ್ದೇಶಕರು
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**BY REGD. POST**

**No. J -11011/ 5/06 - NREGA**
**Government of India**
**Ministry if Rural Development**
**NREGA Divison**

Krishi Bhavan, New Delhi,
Dated 21st November, 2007

To,

The Principal Secretary/ Secretary (RD)
Secretary (In-charge – NREGA)
Government of Karnataka
Bangalore.

Subject: Selection of Rural Connectivity works under NREGA.

* * *

Sir/ Madam,

Your attention is drawn to Schedule I, Section 1 of the NREGS Act that lists permissible works under NREGA. This list includes rural connectivity. During the review of the NREGA by the Central Employment Guarantee Council on 20.09.07 it was suggested that since PMGSY is the major programme in the Ministry of rural connectivity, it would be desirable that proper coordination is effected between the two programmes in the selection of roads to avoid duplication of work.

Accordingly, it has been decided that road that can be taken up under PMGSY are not to be taken up under NREGA, States may ensure this.

Yours faithfully,
Sd/-
**(AMITA SHARMA)**
Joint Secretary

Copy: i) PS to Minister (RD)
ii) Joint Secretary, PMO, South Block, New Delhi.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 47 ಉಖಾಯೋ / 2006

ಕರ್ನಾಟಕ ಸರ್ಕಾರದ ಸಚೀವಾಲಯ
ಸಚಿವಾಲಯ–2, ಬಹುಮಡಿಗಳ ಕಟ್ಟಡ
ಬೆಂಗಳೂರು ದಿನಾ೦ಕ 29–12–2007

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

ಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಮೊದಲನೇ, ಎರಡನೇ ಮತ್ತು
ಮೂರನೇ ಹಂತದ ಎಲ್ಲಾ ಜಿಲ್ಲೆಗಳಿಗೆ
(ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ)

ಮಾನ್ಯರೆ,

ವಿಷಯ: ಹದಿನೆಂಟು ವರ್ಷದೊಳಗೆ ಇರುವ ಮಕ್ಕಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೊಡಗಿಸಿಕೊಳ್ಳದೆ ಇರುವುದರ ಬಗ್ಗೆ ಮತ್ತು ಸದರಿ ಯೋಜನೆಯಡಿ, ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಕೆ.11011/1/2007/05–06 ಎನ್ಆರ್ಇಜಿಎ ದಿನಾಂಕ 27.11.2007.

2. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ಜೆ. 11011/5/6 ಎನ್ಆರ್ಇಜಿಎ ದಿನಾಂಕ 21.11.2007.

* * *

ಉಲ್ಲೇಖ (1)ರಲ್ಲಿ ಕೇಂದ್ರ ಸರ್ಕಾರವು, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನವಾಗುತ್ತಿರುವ ಕಾಮಗಾರಿಗಳ ಕೆಲಸಗಳಲ್ಲಿ 18 ವರ್ಷದೊಳಗೆ ಇರುವ ಮಕ್ಕಳನ್ನು ತೊಡಗಿಸಬಾರದೆಂದು ತಿಳಿಸಿರುತ್ತಾರೆ. ಹಾಗೆಯೇ, ಕುಟುಂಬದಾರರಿಗೆ ನೀಡುವ ಉದ್ಯೋಗ ಚೀಟಿಗಳಲ್ಲಿ ಅಂತಹ ಮಕ್ಕಳ ಹೆಸರುಗಳನ್ನು ಸೇರಿಸದಂತೆ, ಎಚ್ಚರವಹಿಸಬೇಕು ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಯೋಜನೆಯ ಕಾಮಗಾರಿಗಳಲ್ಲಿ ತೆಗೆದುಕೊಳ್ಳಬಾರದು ಎಂದು ಒತ್ತಿ ಹೇಳಿರುತ್ತಾರೆ. ಮುಖ್ಯವಾಗಿ ಈ ಸೂಚನೆಗಳನ್ನು ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಗಳಿಗೆ ತಿಳಿಸುವಂತೆ ಕೋರಲಾಗಿದೆ. ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಲಗತ್ತಿಸಿದೆ.

ಉಲ್ಲೇಖ (2)ರಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಪಟ್ಟಿ ಮಾಡಲಾದ ಆದ್ಯತಾ ಕಾಮಗಾರಿಗಳಲ್ಲಿ, ಗ್ರಾಮೀಣ ಸಂಪರ್ಕ ರಸ್ತೆಗಳು ಒಂದಾಗಿರುತ್ತದೆ. ರಸ್ತೆಗಳನ್ನು PMGSY ಮತ್ತು NREGA ಈ ಯೋಜನೆಗಳಲ್ಲಿ, ಪ್ರಸ್ತಾಪಿಸುವಾಗ/ ಆಯ್ಕೆ ಮಾಡುವಾಗ ಮೇಲು ವ್ಯಾಪನವಾಗುವಂತೆ (Duplication of work) ಖಚಿತಪಡಿಸಿಕೊಂಡು, ಸರಿಯಾದ ಸಮನ್ವಯದಿಂದ ಕ್ರಮ ಜರುಗಿಸುವುದು.

ಆದ ಕಾರಣ, PMGSY ನಲ್ಲಿ ತೆಗೆದುಕೊಳ್ಳಬಹುದಾದ ರಸ್ತೆ ಕಾಮಗಾರಿಗಳನ್ನು NREGA ಯೋಜನೆಯಡಿ ತೆಗೆದುಕೊಳ್ಳದಂತೆ, ಖಚಿತಪಡಿಸಿಕೊಳ್ಳುವುದು. ಸದರಿ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಬಿ.ಎನ್. ಕೃಷ್ಣಯ್ಯ)**
ನಿರ್ದೇಶಕರು
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ ಪದನಿಮಿತ್ತ
ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ 110 ಉಖಾಯೋ 07

ಕರ್ನಾಟಕ ಸರ್ಕಾರದ ಸಚಿವಾಲಯ,
ಸಚಿವಾಲಯ–2, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 22–12–2007

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ಗೆ,**

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್,
ಬಾಗಲಕೋಟೆ/ಬೆಂಗಳೂರು (ನಗರ)/ಬೆಂಗಳೂರು (ಗ್ರಾ)/ಬಿಜಾಪುರ/ದಕ್ಷಿಣ ಕನ್ನಡ
ಚಾಮರಾಜನಗರ/ಧಾರವಾಡ/ಗದಗ/ಹಾವೇರಿ/ಕೋಲಾರ/ಕೊಪ್ಪಳ/ಮಂಡ್ಯ
ಮೈಸೂರು/ತುಮಕೂರು/ಉಡುಪಿ/ಉತ್ತರ ಕನ್ನಡ/ಚಿಕ್ಕಬಳ್ಳಾಪುರ/ರಾಮನಗರ
ಬಳ್ಳಾರಿ/ಬೆಳಗಾಂ/ಚಿಕ್ಕಮಗಳೂರು/ಹಾಸನ/ಶಿವಮೊಗ್ಗ/ಕೊಡಗು.

ಮಾನ್ಯರೆ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಗಳಿಗೆ ಮುನ್ನೋಟ ಯೋಜನೆಯನ್ನು ತಯಾರಿಸಿಕೊಂಡು ಅನುಮೋದನೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: 1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ವಿ.24011/13/2004 ದಿನಾಂಕ 16.11.07.
2. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ ವಿ. 24011/13/2004–ಎನ್ಆರ್ಇಜಿಎ ದಿನಾಂಕ 7.11.07

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಎರಡನೇ ಹಂತದ ಜಿಲ್ಲೆಗಳಲ್ಲಿ ದಿನಾಂಕ 1.4.2007 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಮೂರನೇ ಹಂತದ ಜಿಲ್ಲೆಗಳಲ್ಲಿ ಮುಂಬರುವ ವರ್ಷ 1.4.2008 ರಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯೋಜನೆಯು ಜಾರಿಗೆ ಬರಲಿದೆ. ಕೇಂದ್ರ ಸರ್ಕಾರದ ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಪ್ರತಿ ಜಿಲ್ಲೆಗೆ ಮುನ್ನೋಟ ಯೋಜನೆಯನ್ನು ಐದು ವರ್ಷಗಳಿಗೆ ತಯಾರಿಸಿ, ಅದರ ಅನುಮೋದನೆಯನ್ನು ಪಡೆದು, ಅದರ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಅವಶ್ಯಕವಾಗಿದೆ. ಮಾರ್ಗಸೂಚಿಗಳಲ್ಲಿ ಮತ್ತು ಅಧಿನಿಯಮದಲ್ಲಿ ಸೂಚಿಸಿರುವಂತೆ, ಆದ್ಯತಾ ಕಾಮಗಾರಿಗಳನ್ನು ಗಮನದಲ್ಲಿಟ್ಟುಕೊಂಡು, ಆಯಾ ಜಿಲ್ಲೆಗಳಿಗೆ ತಯಾರಿಸಬೇಕಾಗಿದೆ. ಮಾರ್ಗಸೂಚಿಗಳಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಹೊರತುಪಡಿಸಿ ಅನ್ಯಥಾ ಕಾಮಗಾರಿಗಳನ್ನು ಮುನ್ನೋಟ ಅಭಿವೃದ್ಧಿಯೋಜನೆಯಲ್ಲಿ ಪ್ರಸ್ತಾಪಿಸಬಾರದು. ಜಿಲ್ಲೆಯಲ್ಲಿ ಈ ಮುನ್ನೋಟ ಅಭಿವೃದ್ಧಿ ಯೋಜನೆಯ ಕಾರ್ಯವನ್ನು ಕೈಗೊಂಡಾಗ, ಸ್ಥಳೀಯ ಪ್ರದೇಶಗಳಲ್ಲಿ ಅವಶ್ಯಕತೆ ಇರುವ ಕಾಮಗಾರಿಗಳಿಗೆ ಪ್ರಾಧ್ಯಾನತೆ ನೀಡುವುದು.

ಕೇಂದ್ರ ಸರ್ಕಾರವು ಈ ಐದು ವರ್ಷಗಳ ಮುನ್ನೋಟ ಅಭಿವೃದ್ಧಿ ಯೋಜನೆಯು ರೂಪಿಸುವ ಕಾರ್ಯಕ್ಕೆ ರೂ. 10.00 ಲಕ್ಷಗಳನ್ನು ಎರಡನೇ ಹಂತದ ಮತ್ತು ಮೂರನೇ ಹಂತದ ಜಿಲ್ಲೆಗಳಿಗೆ ಬಿಡುಗಡೆ ಮಾಡಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಈಗಾಗಲೇ ನಿಮ್ಮೆಲ್ಲರಿಗೂ ನೀಡಲಾಗಿರುತ್ತದೆ.

ಉಲ್ಲೇಖ (1) ರಲ್ಲಿ ಕೇಂದ್ರ ಸರ್ಕಾರವು ನೀಡಲಾದ ಐದು ವರ್ಷಗಳ ಮುನ್ನೋಟ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳ ಪ್ರತಿಯನ್ನು ಈಗಾಗಲೇ ತಮ್ಮೆಲ್ಲರಿಗೂ, ದಿನಾಂಕ 27/28.11.07 ರಂದು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ವಿತರಿಸಲಾಗಿರುತ್ತದೆ. ಆದಾಗ್ಯೂ ಮತ್ತೊಮ್ಮೆ ಪ್ರತಿಯನ್ನು ಲಗತ್ತಿಸಿದೆ.

ಉಲ್ಲೇಖ (2)ರಲ್ಲಿ ಇದಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರದಿಂದ ತಪಶೀಲ್ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಆದುದರಿಂದ, ಈ ಕೂಡಲೇ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಮುನ್ನೋಟ ಅಭಿವೃದ್ಧಿ ಯೋಜನೆಯನ್ನು ತಯಾರಿಸಿಕೊಳ್ಳಲು, ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಕೋರಿದೆ. ಮುನ್ನೋಟ ಅಭಿವೃದ್ಧಿ ಯೋಜನೆಯನ್ನು ರಾಜ್ಯ ಪರಿಷತ್ತಿನ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಬೇಕಾಗಿರುತ್ತದೆಯೆಂಬುದನ್ನು ಗಮನದಲ್ಲಿರಿಸಿಕೊಳ್ಳುವುದು.

ತಮ್ಮ ವಿಶ್ವಾಸಿ,
ಸಹಿ/–
**(ಬಿ.ಎನ್. ಕೃಷ್ಣಯ್ಯ)**
ನಿರ್ದೇಶಕರು
ಸ್ವ ಉದ್ಯೋಗ ಕಾರ್ಯಕ್ರಮಗಳು ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಗ್ರಹ

**No. K-11011/ 2007 – NREGA**
**Ministry if Rural Development**
**(Department of Rural Development)**

Krishi Bhavan, New Delhi,
Dated 27th November, 2007

To,

Principal Secretary/ Secretary
Rural Development Department
Government of Karnataka
Bangalore.

Subject : Non- employment of children below 18 years of age under NREGA – Instructions regarding.

* * *

As you are aware, NREGA provides for a legal guarantee of 100 days of wages employment in every financial year to every rural household whose adult members volunteer to do unskilled manual work. The term 'Adult' as defined in para 2(a) of the Act, means a person who has completed 18 years of age. As per this definition, a person below 18 years of age is not eligible to get employment uder NREG Act. Para 1 of Schedule II of the Act further provides that names of only the adult members of a household would figure in the job card issued to a household. Therefore, it is very clear form the provisions of NREGA that there is no scope for employment of children below 18 years of age at worksites under the act. Therefore all due care should be taken that the names of children below 18 years of age are not included in the household Job Card and minors are not engaged on NREGA work sites.

The State Government may bring these instructions to the notice of all Gram Panchayats who are responsible for registration and issue of job cards of the households for getting employment under NREGA.

Yours faithfully,
Sd/-
**(AMITA SHARMA)**
Joint Secretary

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ: 8: ಉಖಾಯೋ: 2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ 01–04–2008

# ಸುತ್ತೋಲೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ ಪ್ರಕರಣ 4 ಉಪ ಪ್ರಕರಣ 3ರಲ್ಲಿ ತಿಳಿಸಿರುವಂತೆ ಸದರಿ ಅಧಿನಿಯಮದ ಅನುಸೂಚಿ –1 ರಲ್ಲಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಕೈಗೊಳ್ಳಬಹುದಾದ ಕಾಮಗಾರಿಗಳನ್ನು 8 ಪ್ರವರ್ಗಗಳನ್ನಾಗಿ ವಿಂಗಡಿಸಿ ಅದ್ಯತಾ ಕ್ರಮದಲ್ಲಿ ತೆಗೆದುಕೊಳ್ಳಲು ನಿರ್ದಿಷ್ಟಪಡಿಸಲಾಗಿದೆ. ಈ ರೀತಿ ನಿರ್ಧಿಷ್ಟಪಡಿಸಿದ ಪ್ರತಿ ವರ್ಗ (ಅಚಿಣಜಾಱಥ)ದಲ್ಲಿ ಯಾವ ಯಾವ ವಿಧದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂಬ ಬಗ್ಗೆ ರಾಜ್ಯದ ಹಲವಾರು ಜಿಲ್ಲಾ ಮತ್ತು ತಾಲ್ಲೂಕುಗಳ ಅನುಷ್ಠಾನಾಧಿಕಾರಿಗಳು ಸರ್ಕಾರದಿಂದ ನಿರ್ದೇಶನ ನೀಡಲು ಸಲ್ಲಿಸಿರುವ ಕೋರಿಕೆಗಳನ್ನು ಸರ್ಕಾರವು ಪರಿಶೀಲಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರಲ್ಲಿ ನಿರ್ಧಿಷ್ಟಪಡಿಸಿರುವಂತೆಯೇ ವಿವಿಧ ಪ್ರವರ್ಗಗಳಲ್ಲಿ ತೆಗೆದುಕೊಳ್ಳಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು ಲಗತ್ತಿಸಿರುವ ಅನುಬಂಧದಲ್ಲಿ ಸೂಚಿಸಿದೆ. ಅದರಂತೆ ಯೋಜನೆಯ ಅನುಷ್ಠಾನದಲ್ಲಿ ಆಯಾ ಪ್ರವರ್ಗಗಳಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸುವಂತೆ ಸೂಚನೆ ನೀಡಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಸಿ. ಎಂ. ಶಿರೋಳ್)**
ನಿರ್ದೇಶಕರು
ಯೋಜನಾ ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕ
ಹಾಗೂ ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1) ರಾಜ್ಯ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರು/ ಕಾರ್ಯನಿರ್ವಾಹಕ ಅಧಿಕಾರಿಗಳು (ಸಂಬಧಿಸಿದ ಅನುಷ್ಠಾನಾಧಿಕಾರಿಗಳು/ ಅನುಷ್ಠಾನ ಘಟಕಗಳಿಗೆ ಮಾಹಿತಿ ನೀಡಲು ಕ್ರಮ ವಹಿಸುವುದು)

## ANNEXURE TO THE CIRCULAR
## No. RDP NRE 2008 Dt. 01-04-2008

## LIST OF WORKS

| I | WATER CONSERVATION AND WATER HARVESTING |
|---|---|
| 1 | Check Wall |
| 2 | Check Dam |
| 3 | Continuous Contour Trench |
| 4 | Diversion Drain |
| 5 | Earthen Bunding |
| 6 | Farm Rond |
| 7 | Formation of new Feeder Channel |
| 8 | Desilting or widening of existing feeder channel |
| 9 | Mini Percolation Tank |
| 10 | Pebble Bunding |
| 11 | Percolation Tank |
| 12 | Recharge of dried up well |
| 13 | Soil Conservation Gabian |
| 14 | Staggerred Trench |
| 15 | Stone Bund |
| 16 | Nala Bund |
| 17 | Vegetative Barrier |
| 18 | Water absorption trench |
| 19 | Water Harvesting Gabian |
| 20 | Gully treatment |
| 21 | Pre – survey estimation for water conservation works |
| 22 | Construction of village information wall |

| | |
|---|---|
| **II** | **DROUGHT PROOFING (INCLUDING AFFORESTATION AND TREE PLANTATION)** |
| 1 | Avenue Plantation |
| 2 | Avenue Plantation – 1st year maintenance |
| 3 | Avenue Plantation – 2nd year maintenance |
| 4 | Barren hill afforestation |
| 5 | Barren hill afforestation - 1st year maintenance |
| 6 | Barren hill Afforestation - 2nd year maintenance |
| 7 | Bio diesel plantation |
| 8 | Bio diesel plantation - 1st year maintenance |
| 9 | Bio diesel plantation - 2nd year maintenance |
| 10 | Block Plantation |
| 11 | Block Plantation - 1st year maintenance |
| 12 | Block Plantation - 2nd year maintenance |
| 13 | Foreshore Plantation |
| 14 | Foreshore Plantation - 1st year maintenance |
| 15 | Foreshore Plantation - 2nd year maintenance |
| 16 | Horticulture Plantation |
| 17 | Horticulture Plantation - 1st year maintenance |
| 18 | Horticulture Plantation - 2nd year maintenance |
| 20 | Nursery for Bio – diesel |
| **III** | **IRRIGATION CANNALS INCLUDING MICRO AND MINOR IRRIGATION WORKS** |
| 1 | Distributory |
| 2 | Field Channel |
| 3 | Main canal |
| 4 | Formation of new MI tank |

| | |
|---|---|
| **IV** | **PROVISION OF IRRIGATION FACILITIES TO SC/ST/IAY/ LR BENEFICIARIES** |
| 1 | Lift Irrigation |
| 2 | Open well |
| 3 | Restoration and deepending of existing wells |
| **V** | **RENOVATION OF TRADITIONAL WATER BODIES INCLUDING DESILTING OF TANKS** |
| 1 | Desilting of tanks excluding transportation of silt |
| 2 | Breach closing work for tanks |
| 3 | Improvement and strengthening of bunds of irrigation tanks |
| 4 | Repair to weir |
| 5 | Repairs to sluices of irrigation tanks |
| 6 | Desilting, deepening of MI Tanks and Silt disposal of bund or away from the bund |
| 7 | Desilting of Canals |
| **VI** | **LAND DEVELOPMENT** |
| 1 | Bolder removal |
| 2 | Desilting and silt application to SC/ ST assigned lands |
| 3 | Compost Fit |
| 4 | Land reclamation in flood affected areas |
| 5 | Development of land of weaker sections |
| 6 | Development of lands of weaker sections in low lying areas and undulated areas |
| **VII** | **FLOOD CONTROL AND PROTECTION WORKS INCLUDING DRAINAGE IN WATER LOGGED AREAS** |
| 1 | Diversion drain in meandering streams |
| 2 | Filling the water logged areas |
| 3 | Formation of flood bunds |
| 4 | Repair to flood bund |
| **VIII** | **RURAL CONNECTIVITY TO PROVIDE WEATHER ACCESS** |
| 1 | Culverts, Road Dams and minor bridges |
| 2 | WBM Road |

## ಕರ್ನಾಟಕ ಸರ್ಕಾರ ನಡಾವಳಿಗಳು

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ನಿರ್ವಹಿಸುವ ಸ್ಥಳದಲ್ಲಿ ಅಕುಶಲ ದೈಹಿಕ ಕೆಲಸಗಾರರಿಗೆ ಸಲಕರಣೆ/ಸಾಮಾಗ್ರಿಗಳನ್ನು ಒದಗಿಸುವ ಕುರಿತು.

ಓದಲಾಗಿದೆ: 1) ಇದೇ ಸಮ ಸಂಖ್ಯೆ ಪತ್ರ ದಿನಾಂಕ 23–03–2009

2) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನ ಸಂಬಂಧ ದಿನಾಂಕ 5–5–2009ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆ.

* * *

### ಪ್ರಸ್ತಾವನೆ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳ ಸ್ಥಳದಲ್ಲಿ ಅಕುಶಲ ದೈಹಿಕ ಕೆಲಸಗಾರರಿಗೆ ಯಾವುದೇ ಕಾರಣಕ್ಕೂ ಜಿಲ್ಲಾಪಂಚಾಯಿತಿ/ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೆಲಸಗಾರರಿಗೆ ಸಲಕರಣೆ / ಸಾಮಾಗ್ರಿಗಳನ್ನು ಖರೀದಿ ಮಾಡದಂತೆ ಕ್ರಮವಹಿಸಲು ಹಾಗೂ 10 ಕೂಲಿಕಾರರ ಸಮೂಹ ನಿರ್ವಹಿಸುವ ಕೆಲಸಗಳ ಸಂಬಂಧ ವಿವಿಧ ಸಲಕರಣೆ / ಸಾಮಾಗ್ರಿಗಳನ್ನು ಬಳಸಬಹುದಾದ ಕೆಲಸಗಾರರಿಗೆ ಅನುಗುಣವಾಗಿ ನಿಗದಿತ ಹಣ ಪಾವತಿಸಲು ಕ್ರಮಕೈಗೊಳ್ಳುವಂತೆ ಮೇಲೆ ಓದಲಾದ ಪತ್ರಗಳಲ್ಲಿ ತಿಳಿಸಲಾಗಿರುತ್ತದೆ.

ಆದರೆ, ಸದರಿ ಪತ್ರದಲ್ಲಿ ತಿಳಿಸಿರುವಂತೆ ಸಲಕರಣೆ / ಸಾಮಾಗ್ರಿಗಳ ಬಾಬ್ತು ಕೆಲಸಗಾರರಿಗೆ ಹಣ ಸಂದಾಯ ಮಾಡುವ ಪ್ರಕ್ರಿಯೆಯನ್ನು ಸರಳೀಕರಿಸುವಂತೆ ಮತ್ತು ಸದರಿ ಸಲಕರಣೆ/ ಸಾಮಾಗ್ರಿಗಳ ಬಾಬ್ತು ಯೋಜನೆಯಡಿ ಕೆಲಸ ನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00 ರೂ.ಗಳನ್ನು ದಿನಗೂಲಿ ಜೊತೆಗೆ ನೀಡುವುದು ಸೂಕ್ತವೆಂದು ಮೇಲೆ ಓದಲಾದ–2 ರ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದ ಕಾರಣ, ತಕ್ಷಣವೇ ಜಾರಿಗೆ ಬರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00ರೂ (ಮೂರು ರೂಪಾಯಿ ಮಾತ್ರ) ಮೊತ್ತಗಳನ್ನು ಸಲಕರಣಿ ಸಾಮಾಗ್ರಿಗಳ ಮೊತ್ತಕ್ಕಾಗಿ ದಿನಕೂಲಿ ಮೊತ್ತದ ಸದರಿಯವರ ಬ್ಯಾಂಕ್/ಅಂಚೆ ಕಛೇರಿಯ ಖಾತೆಗೆ ಪಾವತಿ ಮಾಡುವಂತೆ ಕ್ರಮವಹಿಸಬೇಕಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 39 ಉಖಾಯೋ 2008 ದಿನಾಂಕ: 6–5–2009.

ಪ್ರಸ್ತಾವನೆಯಲ್ಲಿ ಎಲ್ಲಾ ಅಂಶಗಳನ್ನು ಪರಿಗಣಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆಲಸ ನಿರ್ವಹಿಸುವ ಪ್ರತಿ ಕೆಲಸಗಾರರಿಗೂ ಪ್ರತಿ ದಿನಕ್ಕೆ 3.00ರೂ(ಮೂರು ರೂಪಾಯಿ ಮಾತ್ರ) ಗಳನ್ನು ಸಲಕರಣೆ / ಸಾಮಾಗ್ರಿಗಳ ಮೊತ್ತವಾಗಿ ದಿನಗೂಲಿ ಮೊತ್ತದ ಜೊತೆಗೆ ಸದರಿಯವರ ಬ್ಯಾಂಕ್ /ಅಂಚೆ ಕಛೇರಿ ಖಾತೆಗೆ ಪಾವತಿ ಮಾಡುವಂತೆ ಕ್ರಮವಹಿಸುವುದು ಮತ್ತು ಸದರಿ ಸಲಕರಣೆ/ ಸಾಮಾಗ್ರಿಗಳ ಬಾಬ್ತು ಕೆಲಸಗಾರರಿಗೆ ನೀಡಲಾಗಿರುವ ಹಣದ ವೆಚ್ಚವನ್ನು ಯೋಜನೆಯ ಸಾಮಾಗ್ರಿ ಬಾಬ್ತಿನ ವೆಚ್ಚದಲ್ಲಿ ಭರಿಸುವಂತೆ ಆದೇಶಿಸಿದೆ.

ಮೇಲೆ ತಿಳಿಸಲಾಗಿರುವ ಸಲಕರಣೆ/ ಸಾಮಾಗ್ರಿಗಳ ಬಾಬ್ತಿನ ಆಯಾ ಕಾಮಗಾರಿಗಳ ವೆಚ್ಚಕ್ಕಾಗಿ ನಿಗಧಿಪಡಿಸಿರುವ ಮೊತ್ತದಲ್ಲಿ ಖರ್ಚು ಭರಿಸತಕ್ಕದ್ದು ಮತ್ತು ಪ್ರಗತಿ ವರದಿಯಲ್ಲಿ ಆದೇ ರೀತಿ ಖರ್ಚು ತೋರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರುಗಳು/ಕಾರ್ಯ ನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಬೆಂಗಳೂರು
6. ಪ್ರಾದೇಶಿಕ ಆಯುಕ್ತರು ಬೆಂಗಳೂರು/ಮೈಸೂರು/ಗುಲ್ಬರ್ಗಾ/ಬೆಳಗಾಂ
7. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
8. ಆಯುಕ್ತರು, ಕಾರ್ಮಿಕ ಇಲಾಖೆ, ಕಾಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು
9. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
10. ಆಯುಕ್ತರು, ಪಶುಸಂಗೋಪನಾ ಇಲಾಖೆ, ಬೆಂಗಳೂರು
11. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
12. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು
13. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
14. ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
15. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು
16. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
17. ಆಂತರಿಕ ಆರ್ಥಿಕ ಸಲಹೆಗಾರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು

ಹೆಚ್ಚಿನ ಪ್ರತಿಗಳು/ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

ಸಂಖ್ಯೆ : ಬಿ 6/ಜೈ.ಇಂ/ಸಿಆರ್–1/2008–09

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ) ರವರ ಕಛೇರಿ, "ಅರಣ್ಯ ಭವನ",
ಬೆಂಗಳೂರು, ದಿನಾಂಕ : 15–06–2009

**ಇವರಿಗೆ**

ಆಪ್ತ ಕಾರ್ಯದರ್ಶಿ
ಜೈವಿಕ ಇಂಧನ ಕಾರ್ಯಪಡೆ ಅಧ್ಯಕ್ಷರ ಕಛೇರಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂ1ರು.

**ಮಾನ್ಯರೇ,**

ವಿಷಯ: ಜೈವಿಕ ಇಂಧನ ನೆಡುತೋಪು ಬೆಳೆಸುವ ಗ್ರಾಮಗಳ ವಿವರಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ದಿನಾಂಕ : 12–6–2009 ರಂದು ನಡೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ನೀಡಿದ ಸೂಚನೆ ಮೇರೆಗೆ.

* * *

ದಿನಾಂಕ: 12–6–2009 ರಂದು ನಡೆದ ಜೈವಿಕ ಇಂಧನ ಕಾರ್ಯಪಡೆಯ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಸೂಚಿಸಿದ ಪ್ರಕಾರ ಜೈವಿಕ ಇಂಧನ ನೆಡುತೋಪು ಬೆಳೆಸುವ ಗ್ರಾಮಗಳ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ. ಸದರಿ ವಿವರಗಳನ್ನು ಮಾನ್ಯ ಅಧ್ಯಕ್ಷರ ಮಾಹಿತಿಗೆ ತರಲು ಕೋರಿಕೆ.

ನಿಮ್ಮ ನಂಬುಗೆಯ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ)**
ಬೆಂಗಳೂರು.

ಅನಸೂಯಾ ರಾಜ್ಯಸಭೆ

## ಅರಣ್ಯ ಇಲಾಖೆ

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರಿಂದ ಬಿಡುಗಡೆ ಮಾಡಿದ ಅನುದಾನದಿಂದ ಪ್ರಾದೇಶಿಕ ವಿಭಾಗಗಳಲ್ಲಿ ಬೆಳೆಸಿದ ಹೊಂಗೆ ಸಸಿಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಜೈವಿಕ ಇಂಧನ ನೆಡುತೋಪು ಬೆಳೆಸಲು ಲಭ್ಯವಿರುವ ಪ್ರದೇಶಗಳ ವಿವರ.

| | ಜಿಲ್ಲೆ | ವಲಯದ ಹೆಸರು | ನೆಡುತೋಪು ಬೆಳೆಸುವ ಸ್ಥಳ | ಗ್ರಾಮ ಅರಣ್ಯ ಸಮಿತಿ ಹೆಸರು | ಗ್ರಾಮ ಪಂಚಾಯತಿ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|---|---|---|
| | **ಚಿತ್ರದುರ್ಗ** | ಚಿತ್ರದುರ್ಗ | **1.**ಜೋಗಿಮಟ್ಟಿ ಆರ್.ಎಫ್. | ಉಪ್ಪನಾಯಕನ ಹಳ್ಳಿ ಗ್ರಾಮ | ಸೊಂಡಕೊಳ್ಳ | 20 |
| | | ಹೊಸದುರ್ಗ | **2.**ಲಕ್ಕಿಹಳ್ಳಿ ಆರ್.ಎಫ್. | ಲಕ್ಕಿ ಹಳ್ಳಿ ಗ್ರಾಮ | ಲಕ್ಕಿ ಹಳ್ಳಿ ಗ್ರಾಮ | 20 |
| | | ಹೊಳಲ್ಕೆರೆ | **3.** ಚಳ್ಳಕೆರೆ ಆರ್.ಎಫ್. | ಸೋಮಗದ್ದು ಗ್ರಾಮ | ರಾಮಜೋಡಿಹಳ್ಳಿ | 20 |
| | | ಚಳ್ಳಕೆರೆ | **4.**ಕಡೂರು ಕಾವಲ್ ಆರ್. ಎಫ್. | ಕಡೂರು ಗ್ರಾಮ | ಪವಳ್ಳಿ | 20 |
| | | ಮೊಳಕಾಲ್ಮೂರು | **5.** ಓಬೇನಹಳ್ಳಿ ಆರ್. ಎಫ್. | ತುಮಕೂರ್ಲಹಳ್ಳಿ ಗ್ರಾಮ | ತುಮಕೂರ್ಲಹಳ್ಳಿ ಗ್ರಾಮ | 20 |
| | | ಹಿರಿಯೂರು | **6.** ಮಾರಿಕಣಿವೆ ಆರ್. ಎಫ್. | ಅಮ್ಮನಹಟ್ಟಿಗ್ರಾಮ | ಅಮ್ಮನಹಟ್ಟಿಗ್ರಾಮ | 20 |
| | | | **ಒಟ್ಟು** | | | **120** |
| | **ಚಿಕ್ಕ ಬಳ್ಳಾಪುರ** | ಶಿಡ್ಲಘಟ್ಟ | | | | |
| | | | **7.** ಅಚ್ಚಕದಿರೇನಹಳ್ಳಿ | ಅಚ್ಚಕದಿರೇನ ಹಳ್ಳಿ ಗಾಡು | ದೊಡ್ಡತೇಕಳ್ಳಿ | 40 |
| | | | **8.** ಮಾದೇಗಾರನ ಹಳ್ಳಿ | -- "— | ದೊಡ್ಡತೇಕಳ್ಳಿ | 20 |
| | | | **9.** ದೊಡ್ಡತೇಕಳ್ಳಿ | -- "— | ದೊಡ್ಡತೇಕಳ್ಳಿ | 20 |
| | | | **10.**ಆನೆಮಡಗು | -- "— | ದೊಡ್ಡತೇಕಳ್ಳಿ | 20 |
| | | | **11.**ಪಲಿಚರಲು | -- "— | ದೊಡ್ಡತೇಕಳ್ಳಿ | 20 |
| | | | **12.**ಅಣ್ಣೆಪ್ಪನ ಹಳ್ಳಿ | -- "— | ದೊಡ್ಡತೇಕಳ್ಳಿ | 20 |
| | | | **13.**ಮರಿಹಳ್ಳಿ | -- "— | ದೊಡ್ಡತೇಕಳ್ಳಿ | 20 |
| | | | **14.**ಚಿಕ್ಕತೇಕಹಳ್ಳಿ | -- "— | ದೊಡ್ಡತೇಕಳ್ಳಿ | 20 |
| | | | **ಒಟ್ಟು** | | | **180** |
| | **ಕೋಲಾರ** | ಕೋಲಾರ | **15.** ನಾಗಲಾಪುರಾ (ಅಂತರಗಂಗೆಎ.ಬ್ಲಾಕ್) | ತೇರ ಹಳ್ಳಿ | ತಂಬಿ ಶೆಟ್ಟಿಹಳ್ಳಿ | 50 |
| | | ಬಂಗಾರಪೇಟೆ | **16.** ಬೊಡಗುರ್ಕಿ (ಆರ್.ಎಸ್.ಎಫ್ 2ನೇ ಬ್ಲಾಕ್) | ಬೊಡ ಗುರ್ಕಿ | ಗಡಿಮಾದಮಂಗಲ | 30 |
| | | ಮುಳುಬಾಗಿಲು | **17.** ದೇವರಾಯ ಸಮುದೆ (ಎಸ್.ಎಫ್) | ಕಟ್ಟನ ಕುಂಟೆ | ದೇವರಾಯ ಸಮುದ್ರ | 25 |
| | | ಶ್ರೀನಿವಾಸಪುರ | **18.**ಕೊತ್ತವುಡ್ಯ(ಜಿನಗಲ್ಲುಗುಂಟೆ (ಎಸ್.ಎಫ್) | ಕೊತ್ತವುಡ್ಯ | ಭೈರಗಾನಪಲ್ಲಿ | 25 |
| | | ಮಾಲೂರು | **19.** ಪಾಳ್ಯ (ಕೆ.ಎಸ್.ಎಫ್.4ನೇ ಬ್ಲಾಕ್ | ಕೊತ್ತನೂರು ಹೊಂಡಹಳ್ಳಿ | ಚಿನ್ನಹಳ್ಳಿ | 25 |
| | | | **ಒಟ್ಟು** | | | **155** |

| ಕ್ರ ಸಂ. | ಜಿಲ್ಲೆ | ವಲಯದ ಹೆಸರು | ನೆಡುತೋಪು ಬೆಳೆಸುವ ಸ್ಥಳ | ಗ್ರಾಮ ಅರಣ್ಯ ಸಮಿತಿ ಹೆಸರು | ಗ್ರಾಮ ಪಂಚಾಯತಿ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|---|---|---|
| **4.** | **ಹಾವೇರಿ** | ಹೀರೆಕೆರೂರು | **20.** ಮೈಸೂರು | ಮಸೂರ್ ಗ್ರಾಮ | ಮಸೂರ್ ಗ್ರಾಮ | 40 |
| | | ಬ್ಯಾಡಗಿ | **21.** ಕಾದಮ್ಮನಹಳ್ಳಿ | ಗುಂದೇನಹಳ್ಳಿ ಗ್ರಾಮ | ಗುಂದೇನಹಳ್ಳಿ ಗ್ರಾಮ | 20 |
| | | ಹಾನಗಲ್ | **22.** ಸೋಮಸಾಗರ | ಸೋಮಸಾಗರ | ಸೋಮಸಾಗರ | 40 |
| | | ರಾಣಿಬೆನ್ನೂರು | **24.** ದಿಡಗೂರು | ದಿಡಗೂರು | ದಿಡಿಗೂರು | 20 |
| | | ದುಂಡಸಿ | **25.** ಜಿ.ಹೊಸಹಳ್ಳಿ | ಗುದ್ದದ ಹೊಸಹಳ್ಳಿ | ಗುದ್ದದ ಹೊಸಹಳ್ಳಿ | 20 |
| | | | **26.** ಹುಣಸಿಕಟ್ಟಿ | ಬಾಡಾ ಗ್ರಾಮ | ಬಾಡಾ ಗ್ರಾಮ | 15 |
| | | | **27.** ಚಿಲ್ಲೂರುಬಾಡ್ನಿ | ಚಿಲ್ಲೂರು ಬಾಡ್ನಿ | ಕಮಲಾನಗರ | 15 |
| | | | **28.** ತಡಸ್ | ತಡಸ್ ಗ್ರಾಮ | ಕಮಲಾನಗರ | 10 |
| | | | **ಒಟ್ಟು** | | | **200** |
| | | ರಾಣಿಬೆನ್ನೂರು | **24.** ದಿಡಗೂರು | ದಿಡಿಗೂರು | ದಿಡಿಗೂರು | 20 |
| | | ದುಂಡಸಿ | **25.** ಜಿ.ಹೊಸಹಳ್ಳಿ | ಗುದ್ದದ ಹೊಸಹಳ್ಳಿ | ಗುದ್ದದ ಹೊಸಹಳ್ಳಿ | 20 |
| | | | **26.** ಹುಣಸಿಕಟ್ಟಿ | ಬಾಡಾ ಗ್ರಾಮ | ಬಾಡಾ ಗ್ರಾಮ | 15 |
| | | | **27.** ಚಿಲ್ಲೂರುಬಾಡ್ನಿ | ಚಿಲ್ಲೂರು ಬಾಡ್ನಿ | ಕಮಲಾನಗರ | 15 |
| | | | **28.** ತಡಸ್ | ತಡಸ್ ಗ್ರಾಮ | ಕಮಲಾನಗರ | 10 |
| | | | **ಒಟ್ಟು** | | | **200** |
| **5.** | **ಮೈಸೂರು** | ಮೈಸೂರು | **29.** ಅನಗಳ್ಳಿ ಸರ್ವೆ ಸಂ 95.100 | ಗೋಪಾಲಪುರ | ಗೋಪಾಲಪುರ | 25 |
| | | ನಗರ ಹಸಿರೀಕರಣ | **30.** ಲಲಿತಾದ್ರಿಪುರ | ಲಲಿತಾದ್ರಿಪುರ | ಚಾಮುಂಡಿ ಬೆಟ್ಟ | 25 |
| | | ಟಿ.ನರಸೀಪುರ | **31.** ಬೋಳಗುಡ್ಡ | ಟಿ.ಬೆಟ್ಟಹಳ್ಳಿ | ಟಿ.ಬೆಟ್ಟಹಳ್ಳಿ | 50 |
| | | ನಂಜನಗೂಡು | **32.** ಚುಂಚನ ಹಳ್ಳಿ ಗುಡ್ಡ | ಕೂದನೂರು | ಕಳ್ಳಂಬಾಳು | 25 |
| | | ಸರಗೂರು | **33.** ಕಂದೂರು ಸರ್ವೆ ನಂ.27 | ಗುಜ್ಜಮ್ಮ ಗ್ರಾ.ಅ.ಪ.ಸರಗೂರು | ಕೋಣನೂರು | 25 |
| | | ಹೆಚ್.ಡಿ.ಕೋಟೆ | **34.** ಹೊಸಹಳ್ಳಿ ಸರ್ವೆ ನಂ.44 | ನಂಜನಾಯಕನ ಹಳ್ಳಿ | ಅಣ್ಣೂರು | 25 |
| | | | **ಒಟ್ಟು** | | | **175** |
| **6.** | **ದಾವಣಗೆರೆ** | ದಾವಣಗೆರೆ | **35.** ಆನೆಗೋಡು | ಆನೆಗೋಡು | ಆನೆಗೋಡು | 25 |
| | | | **36.** ಹುಳುಪಿನ ಕಟ್ಟೆ | ಆನೆಗೋಡು | ಹುಳುಪಿನ ಕಟ್ಟೆ | 25 |
| | | | **37.** ಕೊಂಡಜ್ಜಿ | ಕೊಂಡಜ್ಜಿ | ಕೊಂಡಜ್ಜಿ | 50 |
| | | | **38** .ಹೆಚ್.ರಾಮಪುರ | ಹೆಚ್.ರಾಮಪುರ | ಅರಸಾಪುರ | 25 |
| | | ಜಗಳೂರು | **39.** ರಂಗಯ್ಯನ ದುರ್ಗ | ವೆಂಕಟೇಸಪುರ, ಗುರುಸಿದ್ದಾಪುರ | ಪಲ್ಲಗಟ್ಟೆ | 50 |
| | | | **40.** ಚಿಕ್ಕಬನ್ನಿ ಹಳ್ಳಿ | ಹಿರೇಬನ್ನಿಹಟ್ಟಿ | ಹೊಸಕೆರೆ | 50 |
| | | | **41.** ಮೆಲೆ ಮಾಚಿಕೆರೆ | ಮಲೆಮಾಚಿಕೆರೆ | | 25 |
| | | ಹರಪ್ಪನ ಹಳ್ಳಿ | **42.** ಗುಂಡಗತ್ತಿ | ಜಜಿತ್ತಿನಕಟ್ಟೆ | ಗುಂಡಗತ್ತಿ | 25 |
| | | | **43.** ಯಡೆಹಳ್ಳಿ | ಬೆಂಡಿಗೆರೆ | ಯಡೆಹಳ್ಳಿ | 25 |
| | | | **44.** ಮೂಡಲಗೆರೆ | ಮೂಡಲಗೆರೆತಾಂಡ | ಮಾಡಲಗೆರೆ | 25 |

| . | ಜಿಲ್ಲೆ | ವಲಯದ ಹೆಸರು | ನೆಡುತೋಪು ಬೆಳೆಸುವ ಸ್ಥಳ | ಗ್ರಾಮ ಅರಣ್ಯ ಸಮಿತಿ ಹೆಸರು | ಗ್ರಾಮ ಪಂಚಾಯತಿ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|---|---|---|
| | | | **45.** ಮೈದೂರು | ಕಣಿವೆಹಳ್ಳಿ | ಮೈದೂರು | 25 |
| | | | **46.** ಚಿಗಟೇರಿ | ನಿಚ್ಚಾಪುರ | ಚಿಗಟೇರಿ | 25 |
| | | ಹೊನ್ನಾಳಿ | **47.** ಕತ್ತಿಗೆ | ಕತ್ತಿಗೆ | ಕತ್ತಿಗೆ | 25 |
| | | | **48.** ಮಾದೇನಹಳ್ಳಿ | ಮಾದೇನಹಳ್ಳಿ | ಕತ್ತಿಗೆ | 50 |
| | | | **49.** ಕುಂಕೋವ | ಕುಂಕೋವ | ಕುಂಕೋವ | 25 |
| | | | **50.** ಪಲವನ ಹಳ್ಳಿ | ಪಲವನ ಹಳ್ಳಿ | ಮಂಸ್ಸಿನಾಳ | 25 |
| | | | **ಒಟ್ಟು** | | | **500** |
| | **ಹಾಸನ** | ಚೆನ್ನಪಟ್ಟಣ | **51** ಗ್ಯಾರಹಳ್ಳಿ | ಗ್ಯಾರಹಳ್ಳಿ | ಗ್ಯಾರಹಳ್ಳಿ | 30 |
| | | ಬೇಲೂರು | **52.** ಕಲ್ಲಹಳ್ಳಿ | ಕಲ್ಲಹಳ್ಳಿ | ಹಳೇಬೀಡು | 25 |
| | | ಹೊಳೆನರ ಸೀಪುರ | **53.** ಶ್ರೀಮಠದ ಕಾವಲ್ | ಗುಳ್ಳದ ಪುರ | ಮಲ್ಲಪ್ಪನ ಹಳ್ಳಿ | 62 |
| | | ಅರಕಲಗೂಡು | **54** ಉಲಿವಾಲ | ಉಲಿವಾಲ | ವಡ್ಡರ ಹಳ್ಳಿ | 62 |
| | | ಅರಸೀಕೆರೆ | **55.** ಬೆಲವತ್ತ ಹಳ್ಳಿ ಎಸ್.ಎಫ್ | | | |
| | | ಅರಸೀಕೆರೆ | **56.** ಕಲ್ಯಾಡಿ ಕಾಪರ್ ಮೈನ್ (ಹಾರನಹಳ್ಳಿ ಹತ್ತಿರ | | ಅಬ್ಬಲಿಘಟ್ಟ | 150 |
| | | ಹಾಸನ | **57** ಎರೆಬೋರೆ ಕಾವಲ್ | ಹರಿಹರ ಪುರ | | 62 |
| | | | **ಒಟ್ಟು** | | | **416** |
| | | ಅರಸೀಕೆರೆ | **56** ಕಲ್ಯಾಡಿ ಕಾಪರ್ ಮೈನ್ (ಹಾರನಹಳ್ಳಿ ಹತ್ತಿರ) | | ಕಲ್ಯಾಡಿ | 25 |
| | | ಹಾಸನ | **57** ಎರೆಬೋರೆ ಕಾವಲ್ | ಹರಿಹರ ಪುರ | | 62 |
| | | | **ಒಟ್ಟು** | | | **416** |
| | **ತುಮಕೂರು** | ಕೊರಟಗೆರೆ | **58.** ತರ್ಟಿ.ಬರ್ಕ್ | ತರ್ಟಿ.ಬರ್ಕ್ | ಬುಕ್ಕಪಟ್ಟಣ | 23 |
| | | ಸಿ.ಎನ್.ಹಳ್ಳಿ | **59.** ಆರ್ಶಿಯಾಳ್ | ಆರ್ಶಿಯಾಳ್ | ರಾಮನಹಳ್ಳಿ | 45 |
| | | ಶಿರಾ | **60.** ಮುದಿಗೆರೆ ಎಸ್.ಎಫ್. | ಮುದಿಗೆರೆ | ಎಲಿಯೂರು | 23 |
| | | | **61.** ಕಾಲಿಂಗನ ಹಳ್ಳಿ | ಕಾಲಿಂಗನ ಹಳ್ಳಿ | ಮಂಚಲದೊರೆ | 22 |
| | | | **62.** (ರಂಗನಾಥಪುರ ಎಸ್.ಎಫ್) | ತುಪ್ಪದ ಕೋಣಿ, ಗೊಲ್ಲರಹಳ್ಳಿ | ಹುಯಿಲದೊರೆ | |
| | | ಮಧುಗಿರಿ | **63.** ಮೊಸರುಪಾಡಿ | ಸುದ್ದೆಗುಂಟೆ | ಸಿಂಗನಹಳ್ಳಿ | 23 |
| | | | **64.** ಪೋಲಿನ ಹಳ್ಳಿ | ಸುದ್ದೆಗುಂಟೆ | ಮುದ್ದೇನಹಳ್ಳಿ | 22 |
| | | ಪಾವಗಡ | **65.** ಯರಮ್ಮನ ಹಳ್ಳಿ | ಯರಮ್ಮನ ಹಳ್ಳಿ | ಹೊಸದುರ್ಗ | 23 |
| | | ತುಮಕೂರು | **66.** ದೇವರಾಯನ ದುರ್ಗ | ಬೆಳ್ಳಿಬಟ್ಟಲು | ಅರೆಗುಜ್ಜನ ಹಳ್ಳಿ | 22 |
| | | | **ಒಟ್ಟು** | | | **203** |

| | ಜಿಲ್ಲೆ | ವಲಯದ ಹೆಸರು | ನೆಡುತೋಪು ಬೆಳೆಸುವ ಸ್ಥಳ | ಗ್ರಾಮ ಅರಣ್ಯ ಸಮಿತಿ ಹೆಸರು | ಗ್ರಾಮ ಪಂಚಾಯತಿ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|---|---|---|
| | **ಬೆಂಗಳೂರು ಗ್ರಾಮಾಂತರ** | ನೆಲಮಂಗಲ | **67.** ಬೂದಿಯಾಳ್ | | | 20 |
| | | | **68.** ಟಿ–ಬೇಗೂರು | | ಟಿ–ಬೇಗೂರು | 20 |
| | | | **69.** ಹಸುರವಳ್ಳಿ | | ಹಸುರವಳ್ಳಿ | 20 |
| | | | **70.** ದೊಡ್ಡಬೆಲೆ | ಮಾವಿನಕೊಮ್ಮಹಳ್ಳಿ | ದೊಡ್ಡಬೆಲೆ | 20 |
| | | | **71.** ಕೊಡಿಗೆರೆ | ಮಾವಿನಕೊಮ್ಮಹಳ್ಳಿ | ಕೊಡಿಗೆರೆ | 20 |
| | | | **72.** ಕಲಘಟಕ | | ಕಲಘಟಕ | 20 |
| | | | **73.** ನರಸೀಪುರ | | ನರಸೀಪುರ | 20 |
| | | | **74.** ಅಗಲಕುಪ್ಪೆ | ಕೃಷ್ಣರಾಜಪುರ | ಅಗಲಕುಪ್ಪೆ | 20 |
| | | | **75.** ಹೊನ್ನೇನಹಳ್ಳಿ | ಕೃಷ್ಣರಾಜಪುರ | ಹೊನ್ನೇನಹಳ್ಳಿ | 20 |
| | | | **76.** ಶಿವಗಂಗೆ | ನಾರಾಯಣಪುರ | ಶಿವಗಂಗೆ | 20 |
| | | | **ಒಟ್ಟು** | | | **200** |
| | **ಬೆಂಗಳೂರು ಗ್ರಾಮಾಂತರ** | ದೇವನಹಳ್ಳಿ | **77.** ಕೋರಮಂಗಲ | ಗುಡುವನಹಳ್ಳಿ | ಕೋರಮಂಗಲ | 25 |
| | | | **78.** ಕೋರಮಂಗಲ | ಕುರುಬರ ಕುಂಟೆ | ಕೋರಮಂಗಲ | 50 |
| | | | **79.** ಕಾರೆಹಳ್ಳಿ | ಕೆಂಪತಿಮ್ಮನಹಳ್ಳಿ | ಕಾರೆಹಳ್ಳಿ | 25 |
| | | | **80.** ಗೊಡ್ಲುಮುದ್ದೇನ ಹಳ್ಳಿ | ಸಿ.ರಂಗನಾಥಪುರ | ಗೊಡ್ಲುಮುದ್ದೇನ ಹಳ್ಳಿ | 55 |
| | | | **81.** ಅಕ್ಕುಪೇಟೆ | ಸಾವಕ್ಕನ ಹಳ್ಳಿ | ಅಕ್ಕುಪೇಟೆ | 25 |
| | | | **82.** ಬೆಟ್ಟಕೋಟೆ ಎಸ್.ಎಫ್ | ಬೆಟ್ಟಕೋಟೆ | ಬೆಟ್ಟಕೋಟೆ | 25 |
| | | ಹೊಸಕೋಟೆ | **83.** ಸೂಲಿಬೆಲೆ | ಅತ್ತಿಬೆಲೆ | ಸೂಲಿಬೆಲೆ | 21 |
| | | | **84.** ನಗರೇವನಹಳ್ಳಿ | ಸಾದಪ್ಪನಹಳ್ಳಿ | ನಗರೇವನಹಳ್ಳಿ | 21 |
| | | | **85.**ಆನುಗೊಂಡನಹಳ್ಳಿ | ಹಳೆಯೂರು ನಾರಾಪುರ | ಆನುಗೊಂಡನಹಳ್ಳಿ | 20 |
| | | | **86.** ನಂದಗುಡಿ | ಹಳೆಯೂರು ನಾರಾಪುರ | ನಂದಗುಡಿ | 20 |
| | | | **87.** ಜಡಿಗೇನಹಳ್ಳಿ | ಮಂಡಹಳ್ಳಿ | ಜಡಿಗೇನಹಳ್ಳಿ | 20 |
| | | | **88.** ವಾಗಟ | ಮಾತನಹಳ್ಳಿ | ವಾಗಟ | 20 |
| | | | **89.** ಇಟ್ಟವಾಡು | ತತ್ತನೂರು | ಇಟ್ಟವಾಡು | 20 |
| | | | **90.** ಬೆಂದಿಗನಹಳ್ಳಿ | ತೆನಿಯೂರು | ಬೆಂದಿಗನಹಳ್ಳಿ | 20 |
| | | | **91.** ಅತ್ತಿಬೆಲೆ | ಅತ್ತಿಬೆಲೆ | ಅತ್ತಿಬೆಲೆ | 20 |
| | | | **92.** ಗೊಲ್ಲಹಳ್ಳಿ | ಬೂನಹಳ್ಳಿ | ಗೊಲ್ಲಹಳ್ಳಿ | 20 |
| | | ದೊಡ್ಡಬಳ್ಳಾಪುರ | **93.** ಹಡೋನಹಳ್ಳಿ | ಪಾಲ್‌ಪಾಲ್ ದಿನ್ನೆ | ಹಡೋನಹಳ್ಳಿ | 20 |
| | | | **94.** ಮೇಲಿನಜೊದನ ಹಳ್ಳಿ | ಮೇಲಿನ ಜೋದನ ಹಳ್ಳಿ | ಮೇಲಿನಜೊದನ ಹಳ್ಳಿ | 25 |
| | | | **95.** ಹೊಸಹಳ್ಳಿ | ಸೊನ್ನೇನಹಳ್ಳಿ | ಹೊಸಹಳ್ಳಿ | 50 |
| | | | **96.** ತಿಪ್ಪೂರ್ | ಬೈರಾಪುರ | ತಿಪ್ಪೂರ್ | 25 |
| | | | **97.**ಸಸಲು | ಕನಕೇನಹಳ್ಳಿ | ಸಸಲು | 50 |
| | | | **ಒಟ್ಟು** | | | **577** |

| | ಜಿಲ್ಲೆ | ವಲಯದ ಹೆಸರು | ನೆಡುತೋಪು ಬೆಳೆಸುವ ಸ್ಥಳ | ಗ್ರಾಮ ಅರಣ್ಯ ಸಮಿತಿ ಹೆಸರು | ಗ್ರಾಮ ಪಂಚಾಯತಿ ಹೆಸರು | ವಿಸ್ತೀರ್ಣ (ಹೆ.ಗಳಲ್ಲಿ) |
|---|---|---|---|---|---|---|
| | ಮಂಡ್ಯ | ಮದ್ದೂರು | **98**. ಕೆ.ಹೊನ್ನಲಗೆರೆ | ಚಿಂದಳ್ಳಿ | ಕೆ.ಹೊನ್ನಲಗೆರೆ | 35 |
| | | | **99**. ನಿಡಘಟ್ಟ | ತಿಪ್ಪೂರು | ನಿಡಘಟ್ಟ | 35 |
| | | | **100**. ಕೆಸ್ತೂರು | ಚಿಕ್ಕ ಅಂಕನಹಳ್ಳಿ | ಕೆಸ್ತೂರು | 35 |
| | | | ಒಟ್ಟು | | | 105 |
| | | | ಜುಮ್ಲಾ | | | 210 |
| | | | **85**. ನಂದಗುಡಿ | ಹಳೆಯೂರು ನಾರಾಪುರ | ನಂದಗುಡಿ | 20 |
| | | | **86**.ಆನುಗೊಂಡನಹಳ್ಳಿ | ಹಳೆಯೂರು ನಾರಾಪುರ | ಆನುಗೊಂಡನಹಳ್ಳಿ | 20 |
| | | | **87**. ಜಡಿಗೇನಹಳ್ಳಿ | ಮಂಡಹಳ್ಳಿ | ಜಡಿಗೇನಹಳ್ಳಿ | 20 |
| | | | **88**. ವಾಗಟ | ಮಾತನಹಳ್ಳಿ | ವಾಗಟ | 20 |
| | | | **89**. ಇಟ್ಟವಾಡು | ತತ್ತನೂರು | ಇಟ್ಟವಾಡು | 20 |
| | | | **90**. ಬೆಂದಿಗನಹಳ್ಳಿ | ತೆನಿಯೂರು | ಬೆಂದಿಗನಹಳ್ಳಿ | 20 |
| | | | **91**. ಅತ್ತಿಬೆಲೆ | ಅತ್ತಿಬೆಲೆ | ಅತ್ತಿಬೆಲೆ | 20 |
| | | | **92**. ಗೊಲ್ಲಹಳ್ಳಿ | ಬೂನಹಳ್ಳಿ | ಗೊಲ್ಲಹಳ್ಳಿ | 20 |
| | | ದೊಡ್ಡಬಳ್ಳಾಪುರ | **93**. ಹಡೋನಹಳ್ಳಿ | ಪಾಲಪಾಲ್ ದಿನ್ನೆ | ಹಡೋನಹಳ್ಳಿ | 20 |
| | | | **94**. ಮೇಲಿನಜೊದನ ಹಳ್ಳಿ | ಮೇಲಿನ ಜೋದನ ಹಳ್ಳಿ | ಮೇಲಿನಜೊದನ ಹಳ್ಳಿ | 25 |
| | | | **95**. ಹೊಸಹಳ್ಳಿ | ಸೊನ್ನೇನಹಳ್ಳಿ | ಹೊಸಹಳ್ಳಿ | 50 |
| | | | **96**. ತಿಪ್ಪೂರ್ | ಬೈರಾಪುರ | ತಿಪ್ಪೂರ್ | 25 |
| | | | **97**.ಸಸಲು | ಕನಕೇನಹಳ್ಳಿ | ಸಸಲು | 50 |
| | | | **ಒಟ್ಟು** | | | **577** |
| | ಮಂಡ್ಯ | ಮದ್ದೂರು | **98**. ಕೆ.ಹೊನ್ನಲಗೆರೆ | ಚಿಂದಳ್ಳಿ | ಕೆ.ಹೊನ್ನಲಗೆರೆ | 35 |
| | | | **99**. ನಿಡಘಟ್ಟ | ತಿಪ್ಪೂರು | ನಿಡಘಟ್ಟ | 35 |
| | | | **100**. ಕೆಸ್ತೂರು | ಚಿಕ್ಕ ಅಂಕನಹಳ್ಳಿ | ಕೆಸ್ತೂರು | 35 |
| | | | ಒಟ್ಟು | | | 105 |
| | | | ಜುಮ್ಲಾ | | | 210 |

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 59 ಉಖಾಯೋ 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 23–6–09

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸುವ ಬಗ್ಗೆ.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈಗ ಪಶುಸಂಗೋಪನಾ ಮತ್ತು ಮೀನುಗಾರಿಕೆ ಇಲಾಖೆ ಕಾರ್ಯಕ್ರಮಗಳನ್ನು ಕೂಡ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ, ಅನುಷ್ಠಾನಗೊಳಿಸುವ ಬಗ್ಗೆ ತೀರ್ಮಾನಿಸಲಾಗಿದೆ. ಈ ಕೆಳಕಂಡ ಸದರಿ ಇಲಾಖೆಗಳ ಕಾರ್ಯಕ್ರಮಗಳನ್ನು ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಉಪಯೋಗಿಸಿಕೊಂಡು ಅನುಷ್ಠಾನಗೊಳಿಸಬಹುದಾಗಿರುತ್ತದೆ.

1) ಪಶುಸಂಗೋಪನಾ ಇಲಾಖಾ ಕೇಂದ್ರಗಳಲ್ಲಿ ಮೇವು ಅಭಿವೃದ್ಧಿ
2) ರೈತರ ಜಮೀನುಗಳಲ್ಲಿ ಮೇವು ಅಭಿವೃದ್ಧಿ
3) ರೈತರ ಜಮೀನುಗಳಲ್ಲಿ ಮೀನು ಕೃಷಿ ಕೊಳ ನಿರ್ಮಾಣ
4) ಮೀನುಗಾರಿಕಾ ಇಲಾಖಾ ನರ್ಸರಿಗಳಲ್ಲಿ ಮೀನು ಕೃಷಿ ಕೊಳ ನಿರ್ಮಾಣ ಮತ್ತು ಮೀನುಮರಿ ಸಾಕಾಣಿಕೆ
5) ಮಾನವ ದಿನಗಳನ್ನು ಸೃಜಿಸುವಂತಹ ಇನ್ನಿತರೆ ಅರ್ಹವಿರುವ ಕಾಮಗಾರಿಗಳನ್ನು ಮಾರ್ಗಸೂಚಿಗಳ ಪ್ರಕಾರ ಪರಿಶೀಲಿಸಿ ಕೈಗೆತ್ತಿಕೊಳ್ಳುವುದು.

ತಾವು ಕೂಡಲೇ ಪ್ರಸ್ತುತ ಸಾಲಿಗೆ, ತಮ್ಮ ಅಧೀನದಲ್ಲಿ ಬರುವ ಜಿಲ್ಲಾ ಮಟ್ಟದ ಅನುಷ್ಠಾನ ಇಲಾಖೆಗಳಾದ ಪಶುಸಂಗೋಪನಾ ಮತ್ತು ಮೀನುಗಾರಿಕೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಅವರಿಂದ ಕ್ರಿಯಾಯೋಜನೆಯನ್ನು ತಯಾರಿಸಿ, ಸಂಬಂಧಪಟ್ಟವರಿಂದ ತಾಂತ್ರಿಕ ಅನುಮೋದನೆಯನ್ನು ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ, ಅನುಷ್ಠಾನಗೊಳಿಸಲು ಕ್ರಮ ಜರುಗಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಯಥಾ ಪ್ರತಿಯನ್ನು** ನಿರ್ದೇಶಕರು, ಪಶುಸಂಗೋಪನಾ ಇಲಾಖೆ ಮತ್ತು ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು ಇವರುಗಳ ಮಾಹಿತಿಗಾಗಿ ಕಳುಹಿಸುತ್ತಾ, ಕೂಡಲೇ ತಮ್ಮ ಅಧೀನದಲ್ಲಿ ಬರುವ ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಿಗೆ, ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಲು ತಕ್ಕ ಸೂಚನೆ ನೀಡಲು ಈ ಮೂಲಕ ಕೋರಿದೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 59 ಉಖಾಯೋ 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 30–6–09

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾವಯವ ಕೃಷಿ ಉತ್ತೇಜನ ಚಟುವಟಿಕೆಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದರ ಕುರಿತು ಪ್ರತಿ ತಾಲ್ಲೂಕಿನ 300 ಜನ ರೈತರಿಗೆ ಅರಿವು ಮತ್ತು ಮಾಹಿತಿ ನೀಡುವ ಕಾರ್ಯಗಾರವನ್ನು ಏರ್ಪಡಿಸಿರುವ ಬಗ್ಗೆ.

ಉಲ್ಲೇಖ: ದಿನಾಂಕ: 29.6.2009ರಂದು ನಡೆದ ರಾಜ್ಯ ಮಟ್ಟದ ಸಾವಯುವ ಕೃಷಿ ಮಿಷಿನ್ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಚರ್ಚಿಸಿದ ರೀತ್ಯಾ.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸಭೆಯಲ್ಲಿ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಸಾವಯವ ಕೃಷಿ ಸಂಬಂಧ 300 ಜನ ರೈತರು ಸಾವಯವ ಕೃಷಿ ಮಿಷನ್‌ನಡಿ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಂಡಿರುತ್ತಾರೆ. ಈ ಸಂಬಂಧ ಸದರಿ ಎಲ್ಲಾ 300 ಜನ ರೈತರಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾವಯವ ಕೃಷಿ ಚಟುವಟಿಕೆಗಳನ್ನು ಯಾವ ರೀತಿಯಲ್ಲಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸಬೇಕು ಮತ್ತು ಯೋಜನೆಯನ್ನು ಇನ್ನು ಪರಿಣಾಮಕಾರಿಯಾಗಿ ಯಾವ ರೀತಿ ಅನುಷ್ಠಾನಗೊಳಿಸಬಹುದು ಎಂಬುದರ ಮಾಹಿತಿ/ಅರಿವು ಮೂಡಿಸುವಂತೆ ಜುಲೈ 12 ರಿಂದ 17,2009ರೊಳಗಾಗಿ ಎಲ್ಲಾ ತಾಲ್ಲೂಕುಗಳಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿ ಸದರಿ 300 ಜನ ರೈತರಿಗೆ ಸೂಕ್ತ ಮಾರ್ಗದರ್ಶನ ಮತ್ತು ಅರಿವು ಮೂಡಿಸುವಂತೆ ತಿಳಿಸಿರುತ್ತಾರೆ.

ಆದುದರಿಂದ, ಈ ಸಂಬಂಧ 300 ಜನ ರೈತರಿಗೆ ಸಾವಯವ ಕೃಷಿ ಚಟುವಟಿಕೆಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವುದರ ಬಗ್ಗೆ ಮಾಹಿತಿ ಮತ್ತು ಅರಿವನ್ನು ಮೂಡಿಸುವ ಕಾರ್ಯಾಗಾರವನ್ನು ನಿಮ್ಮ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಜುಲೈ 12ರಿಂದ 17,2009ರೊಳಗಾಗಿ ಏರ್ಪಡಿಸಲು ಕ್ರಮ ಜರಿಗಿಸುವುದು. ಕಾರ್ಯಾಗಾರವನ್ನು ನಡೆಸುವ ಮುನ್ನ ಜಿಲ್ಲಾ ಮಟ್ಟ/ತಾಲ್ಲೂಕು ಮಟ್ಟದ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮತ್ತು ಸಮನ್ವಯ ಸಾಧಿಸಿ, ಕಾರ್ಯಗಾರವನ್ನು ನಡೆಸುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ. ಸಭೆ ಮತ್ತು ಕಾರ್ಯಾಗಾರಗಳನ್ನು ನಡೆಸುವ ಬಗ್ಗೆ ತಗಲುವ ವೆಚ್ಚವನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇಕಡಾ 6ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸುವುದು.

ಸಾವಯುವ ಕೃಷಿ ಮಿಷನ್ ಕಾರ್ಯಚಟುವಟಿಕೆಗಳನ್ನು ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವ ಬಗೆಗಿನ ಮಾಹಿತಿಯನ್ನು ಕರಪತ್ರದಲ್ಲಿ ಮತ್ತು ಇತರೆ ಪ್ರಚಾರ ಸಾಮಾಗ್ರಿಗಳ ರೂಪದಲ್ಲಿ ಒದಗಿಸಲು ಸೂಚಿಸಿದೆ. ಇದರ ಜೊತೆಗೆ ಜಿಲ್ಲೆ/ತಾಲ್ಲೂಕುಗಳಲ್ಲಿ ಇರುವ ಸರ್ಕಾರೇತರ ಸಂಸ್ಥೆಗಳು/ ಸ್ವಯಂ ಸೇವಾಸಂಸ್ಥೆಗಳನ್ನು ಕೂಡ ಈ ಕಾರ್ಯದಲ್ಲಿ ತೊಡಗಿಸಿ ಕೊಳ್ಳಬಹುದಾಗಿರುತ್ತದೆ.

ಕೈಗೊಂಡ ಕ್ರಮದ ಬಗ್ಗೆ ಒಂದು ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು** ಕೃಷಿ ಆಯುಕ್ತರು, ಕೃಷಿ ಇಲಾಕೆ, ಶೇಷಾದ್ರಿ ರಸ್ತೆ ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ

ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ

2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.

ದೂ. 080-22372738 E-mail : karnregs@gmail.com

ಸಂ: ಗ್ರಾಅಪ 44 ಉಖಾಯೋ 2006 Date : 30–06–2009

## ಸುತ್ತೋಲೆ

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕುಡಿಯುವ ನೀರಿನ ಭಾವಿಗಳ ಕಾಮಗಾರಿಯನ್ನು ಕೈಗೊಳ್ಳುವ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ.41 ರಾಗ್ರಾಉಖಾಯೋ. 2006. ದಿನಾಂಕ: 1.2.2007

2. ರಾಜ್ಯ ಉದ್ಯೋಗ ಖಾತರಿ ಪರಿಷತ್ ಸಭೆ ದಿನಾಂಕ: 07–01–2009.

***

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ 12ರಲ್ಲಿ ಯೋಜನೆಯಡಿ ಆದ್ಯತೆ ಮೇರೆಗೆ ತೆಗೆದುಕೊಳ್ಳಬೇಕಾದ 9 ವಿವಿಧ ಕಾಮಗಾರಿಗಳನ್ನು ತಿಳಿಸಲಾಗಿರುತ್ತದೆ. ಈ ಯೋಜನೆಯ ಗ್ರಾಮಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಸದರಿ ಕಾಮಗಾರಿಗಳ ಪಟ್ಟಿಯಲ್ಲಿನ ಪ್ರವರ್ಗ 5ರಲ್ಲಿ ಸಾಂಪ್ರದಾಯಿಕ ನೀರು ಸಂಚಯಗಳ ಜೀರ್ಣೋದ್ದಾರ ಸೇರಿದಂತೆ ಕೆರೆಗಳ ಹೂಳು ತೆಗೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಸೌಲಭ್ಯವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿಗಳ ನಿರ್ಮಾಣ ಕಾಮಗಾರಿಗಳಿಗೆ ವಿಸ್ತರಿಸುವಂತೆ ಹೆಚ್ಚಿನ ಬೇಡಿಕೆ ಇರುತ್ತದೆ. ಹಾಲಿ ಮಾರ್ಗ ಸೂಚಿಯಲ್ಲಿ ಈ ಕಾಮಗಾರಿ ಕೈಗೊಳ್ಳಲು ಅವಕಾಶವಿರುವುದರಿಂದ ಮೇಲೆ ತಿಳಿಸಲಾದ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಕೊಂಡು ಅನುಷ್ಠಾನಗೊಳಿಸಲು ಉಲ್ಲೇಖ–2 ರಂತೆ ರಾಜ್ಯ ಉದ್ಯೋಗ ಖಾತರಿ ಪರಿಷತ್ ಸಭೆಯು ಅನುಮೋಧನೆ ನೀಡಿರುತ್ತದೆ.

ಆದುದರಿಂದ ಉಲ್ಲೇಖ 1ರ ಸರ್ಕಾರದ ಅಧಿಸೂಚನೆಯಲ್ಲಿನ ಕ್ರಮ ಸಂಖ್ಯೆ:12ರ ಪ್ರವರ್ಗ(5) ರಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳ ನಿರ್ಮಾಣ ಕಾಮಗಾರಿಯನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು. ಸದರಿ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಮೋದನೆಯ ನಂತರ ಅನುಷ್ಠಾನಗೊಳಿಸಲು ಸೂಚಿಸಿದೆ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

ಸಹಿ/–

**(ನಿರ್ದೇಶಕರು)**

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ,**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 60 ಉಖಾಯೋ 2009 Date : 10-07-2009

ಇಂದ,

ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
ಕರ್ನಾಟಕ ಸರ್ಕಾರ

ಇವರಿಗೆ,

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ರಾಜ್ಯದ ಜಿಲ್ಲಾ ಪಂಚಾಯಿತಿಗಳು

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ವಿವಿಧ ಇಲಾಖಾ ಯೋಜನೆಗಳೊಂದಿಗೆ ಒಗ್ಗೂಡಿಸಿಕೊಂಡು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಈಗಾಗಲೇ ಬಹಳಷ್ಟು ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ವಿಶೇಷವಾಗಿ ಅರಣ್ಯ, ಜಲಾನಯನ, ಕೃಷಿ. ತೋಟಗಾರಿಕೆ, ನೀರಾವರಿ, ರೇಷ್ಮೆ, ಇತ್ಯಾದಿ ಇಲಾಖೆಗಳಿಗೆ ಹೆಚ್ಚು ಒತ್ತು ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ. ಈ ಸಂಬಂಧ ತಾಲ್ಲೂಕು ಮಟ್ಟ ಮತ್ತು ಕೆಳ ಹಂತದ ವಿವಿಧ ಇಲಾಖಾ ಅನುಷ್ಠಾನಾಧಿಕಾರಿಗಳಿಗೆ ಯೋಜನೆಯ ಅನುಷ್ಠಾನ ಮತ್ತು ಸದರಿಯವರ ಪಾತ್ರ ಕುರಿತು ಹೆಚ್ಚಿನ ಅರಿವು ಮೂಡಿಸುವ ಮೂಲಕ ಯೋಜನೆಯಲ್ಲಿ ಉತ್ತಮ ಪ್ರಗತಿ ಸಾಧಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಉಲ್ಲೇಖದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಕುರಿತು ತಾವುಗಳೂ ಕೂಡಲೇ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ:

- ತಮ್ಮ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿಯೂ ಎಲ್ಲಾ ಇಲಾಖಾ ಅನುಷ್ಠಾನಾದಿಕಾರಿಗಳಿಗೆ ಯೋಜನೆಯ ಅನುಷ್ಠಾನ ಮತ್ತು ವಿವಿಧ ಕಾರ್ಯಕ್ರಮಗಳನ್ನು ಯೋಜನೆಗಳೊಂದಿಗೆ ಹೇಗೆ ಒಗ್ಗೂಡಿಸಿ ಅನುಷ್ಠಾನಾಗೊಳಿಸಬೇಕು ಮತ್ತು ಯೋಜನೆಯ ವಿವಿಧ ಅಂಶಗಳ ಕುರಿತು ಅರಿವು ಮೂಡಿಸಲು ತುರ್ತಾಗಿ ಒಂದು ಕಾರ್ಯಾಗಾರವನ್ನು ನಡೆಸುವುದು;
- ಅರಣ್ಯೀಕರಣಕ್ಕಾಗಿ ಹೆಚ್ಚು ಬೇಡಿಕೆ ಇದ್ದು ಮುಂದಿನ ವರ್ಷದಲ್ಲಿ ಸದರಿ ಬೇಡಿಕೆಯನ್ನು ಪೂರೈಸಲು ಸಸಿಗಳ ಅಗತ್ಯವಿರುತ್ತದೆ. ಆದುದರಿಂದ, ನೀರಿನ ಪೂರೈಕೆಯಿರುವ ಪ್ರತಿ ಗ್ರಾ.ಪಂ.ಯ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಕನಿಷ್ಠ ಒಂದರಿಂದ ಎರಡು ಅಗತ್ಯಕ್ಕನುಗುಣವಾಗಿ ಸಸ್ಯಕ್ಷೇತ್ರ ಯೋಜನೆಯನ್ನು ಇದೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಸೂಕ್ತ ಕ್ರಮವಹಿಸುವುದು;
- 2009-10 ನೇ ಸಾಲಿನ ಕ್ರಿಯಾ ಯೋಜನೆಯನ್ನು ಈಗಾಗಲೇ ತಯಾರಿಸಿ ನಿಯಾಮಾನುಸಾರ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ, ವಿವಿಧ ಇಲಾಖಾ ಯೋಜನೆಗಳ
- ಯೋಜನೆಯನ್ನು ಈ ಯೋಜನೆಗಳೊಂದಿಗೆ ಒಗ್ಗೂಡಿಸಿಕೊಂಡು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯ ಅನುಮೋದನೆಯ ನಂತರ ಕ್ರಮವಹಿಸಿರುವುದರಿಂದ ವಿವಿಧ ಇಲಾಖಾ ಯೋಜನೆಗಳನ್ನು ಈ ಸಾಲಿನಲ್ಲೇ ಅನುಷ್ಠಾನಗೊಳಿಸಲು ಅನುವಾಗುವಂತೆ ಆಯಾ ಇಲಾಖೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸುವಂತೆ ಮತ್ತು ಸದರಿ ಅಧಿಕಾರಿಯವರು ಅಂತಹ ಕ್ರಿಯಾ ಯೋಜನೆಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಜುಲೈ 2009 ರ ಅಂತ್ಯದೊಳಗಾಗಿ ಸೂಕ್ತ ಅನುಮೋದನೆ ನೀಡಲು ಕ್ರಮವಹಿಸುವುದು;

- ರಾಜ್ಯ ಮಟ್ಟದಲ್ಲಿ ಟೋಲ್ ಫ್ರೀ ದೂರವಾಣಿ ಸಂಖ್ಯೆ ಸ್ಥಾಪಿಸಿದ್ದು ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ಯಾವುದೇ ದೂರುಗಳು ಇದ್ದಲ್ಲಿ ಸಾರ್ವಜನಿಕರು ನೇರವಾಗಿ ಸದರಿ ದೂರವಾಣಿಗೆ ಉಚಿತವಾಗಿ ಸಂಪರ್ಕಿಸಿ ದೂರು ದಾಖಲಿಸಬಹುದಾಗಿರುತ್ತದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಜನಸಾಮಾನ್ಯರಿಗೆ ಜಿಲ್ಲೆ/ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ನೀಡಲು ಕ್ರಮವಹಿಸುವುದು;

  ಮುಂದುವರೆದು, ಈ ರೀತಿ ಸ್ವೀಕರಿಸದ ದೂರುಗಳನ್ನು ತಕ್ಷಣವೇ NREGA-MIS websiteನಲ್ಲಿ ದಾಖಲಿಸಲಾಗುವುದು ಮತ್ತು ಅದೇ ಕ್ಷಣ ಸಂಬಂಧಿಸಿದ ಅಧಿಕಾರಿಯವರಿಗೆ ವರ್ಗಾಯಿಸಲಾಗುವುದು, ಆದ ಕಾರಣ ಪ್ರತಿ ನಿತ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ ಕಾರ್ಯ ನಿರ್ವಾಹಕ ಅದಿಕಾರಿಯವರು ತಪ್ಪದೇ NREGA-MIS websiteನಲ್ಲಿ ನೀಡಲಾಗಿರುವ complaints module ನೋಡಿ ದೂರು ತಮ್ಮ ವ್ಯಾಪ್ತಿಗೆ ಸಂಬಂಧಿಸಿದ್ದಲ್ಲಿ ಸದರಿ ದೂರು ಸ್ವೀಕರಿಸಿದ ಏಳು ದಿನಗಳೊಳಗಾಗಿ ಸೂಕ್ತ ಕ್ರಮ ಕೈಗೊಂಡು ವರದಿಯನ್ನು NREGA-MIS websiteನಲ್ಲಿಯೇ ದಾಖಲಿಸತಕ್ಕದ್ದು;

  **NREGA STATE CELL TOLL FREE NUMBER: 1800 425 8666**

- ಯೋಜನೆಯ ಅನುಷ್ಠಾನದಲ್ಲಿ ಈ ವರೆಗೆ ಜಿಲ್ಲೆಗಳಲ್ಲಿ ಯಾವುದಾದರೂ ಹಣ ದುರುಪಯೋಗದ ಪ್ರಕರಣಗಳು ಮತ್ತು ಅವ್ಯವಹಾರ ಇತ್ಯಾದಿ ಕಂಡುಬಂದಲ್ಲಿ ಅಂತಹ ಪ್ರಕರಣಗಳ ಕುರಿತು ದೃಢೀಕೃತ ವರದಿಯನ್ನು ತಪ್ಪದೇ ದಿನಾಂಕ: 15.7.2009 ರ ಒಳಗಾಗಿ ಸಲ್ಲಿಸುವಂತೆ ಕ್ರಮ ವಹಿಸುವುದು;
- ನಿರ್ದೇಶನಾಲಯದಿಂದ ಹೊರಡಿಸುವ ಎಲ್ಲಾ ಪ್ರಮುಖ ಆದೇಶ, ಸುತ್ತೋಲೆ ಮತ್ತು ಅಧಿಸೂಚನೆ ಇತ್ಯಾದಿ ಮಾಹಿತಿಯನ್ನು ನಿರ್ದೇಶನಾಲಯದ website:http://www.karnregs.kar.nic.in ರಲ್ಲಿ ಪಡೆಯಬಹುದಾಗಿದೆ ಎಂಬುದಾಗಿ ತಿಳಿಸಿ ಸದರಿ ಮಾಹಿತಿಯನ್ನು E-mail ಮೂಲಕ ನೀಡಬಹುದಾಗಿರುವ ಕಾರಣ ಎಲ್ಲಾ ತಾಲ್ಲೂಕಿನ ಮತ್ತು ಗ್ರಾಮ ಪಂಚಾಯಿತಿಗಳ E-mail ವಿಳಾಸವನ್ನು ಕಳುಹಿಸಿಕೊಡುವುದು.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾ.ಗ್ರಾ.ಉ.ಖಾ.ಯೋ ನಿರ್ದೇಶನಾಲಯ

ಅನಸೂ ರಾಗಿಕೆರೆ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 59 ಉಖಾಯೋ 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿ : 14–07–2009.

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲ ಸಂಪನ್ಮೂಲ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಜಲ ಸಂಪನ್ಮೂಲ ಇಲಾಖೆಯ ಸಭಾ ಸೂಚನಾ ಪತ್ರದ ಸಂ.ಜಸಂಇ 01 ಎಂಬಿಎ 2009 ದಿನಾಂಕ: 4.7.2009.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲ ಸಂಪನ್ಮೂಲ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು, ದಿನಾಂಕ: 6.7.2009 ರಂದು, ಮಾನ್ಯ ಜಲ ಸಂಪನ್ಮೂಲ ಸಚಿವರ ಕೊಠಡಿಯಲ್ಲಿ ಏರ್ಪಡಿಸಲಾದ ಸಭೆಗೆ ಕಾರ್ಯದರ್ಶಿಗಳು ಭಾಗವಹಿಸಿದ್ದು, ಸದರಿ ವಿಷಯದ ಕುರಿತು ಚರ್ಚಿಸಿರುತ್ತಾರೆ. ಕಾಡ ಮತ್ತು ನೀರಾವರಿ ಇಲಾಖೆಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಮಟ್ಟದಲ್ಲಿರುವ ಕಾಡ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳು ಶೀಘ್ರದಲ್ಲಿಯೇ, ಕ್ರಿಯಾಯೋಜನೆಯನ್ನು ತಯಾರಿಸಿ ಆಯಾ ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ನೀಡುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಕೂಡಲೇ ತಾವು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ, ಕ್ರಿಯಾಯೋಜನೆ ಬಂದಮೇಲೆ, ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಕಾರ್ಯಕ್ರಮಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಂತೆ, ಕ್ರಮ ಕೈಗೊಳ್ಳಲು ಸೂಚನೆಗಳನ್ನು ನೀಡುವುದು.

ಎರಡನೇಯದಾಗಿ, ಕಾಡ ಮತ್ತು ನೀರಾವರಿ ಇಲಾಖೆಗಳಿಂದ NMR ಗಳನ್ನು ಸ್ವೀಕರಿಸಿದ ನಂತರ 24 ಗಂಟೆಗಳೊಳಗೆ ಹಣದ ಪಾವತಿಗೆ ವ್ಯವಸ್ಥೆ ಮಾಡಲು ಸೂಚಿಸುವುದು. ಸಾಮಾಗ್ರಿಗಳ ಘಟಕದ ಪಾವತಿಗೆ ಸಂಬಂಧಿಸಿದಂತೆ, ಹಣವನ್ನು ಆಯಾ ಕಾಡ ಮತ್ತು ನೀರಾವರಿ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ನೀಡಲು ಕ್ರಮ ವಹಿಸುವುದು.

ಮುಂದುವರೆದು, ತುಂಗಭದ್ರ ಕಾಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಕೆರೆಗಳ ಕ್ರಿಯಾಯೋಜನೆಗಳು ಸಿದ್ಧವಿದ್ದು ಅವುಗಳು ಅನುಮೋದನೆಗಾಗಿ ಇರುವುದಾಗಿ ತಿಳಿಸಿರುತ್ತಾರೆ. ಕೂಡಲೇ ಸಂಬಂಧಿಸಿದ ಕ್ರಿಯಾಯೋಜನೆಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿ, ಕಾಮಗಾರಿಗಳನ್ನು ಅನುಷ್ಠಾನ ಅಧಿಕಾರಿಗಳಿಂದ ಅನುಷ್ಠಾನಗೊಳಿಸಲು, ಕ್ರಮವಹಿಸುವಂತೆ ಸೂಚಿಸುವುದು.

ಕೈಗೊಂಡ ಕ್ರಮದ ಕುರಿತು, ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 65 ಉಖಾಯೋ 08

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿ : 29–7–2009

ಇಂದ:

ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯ ಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಪತ್ರದ ಪ್ರತಿಯನ್ನು ಸಂ. ಅಪಜೀ/32 ಎಫ್ಎಸಿ ದಿನಾಂಕ: 14.07.2009.

* * *

ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ, ನಿರ್ವಹಣಾ ಸಮಿತಿಗೆ ಗ್ರಾಮ ಲೆಕ್ಕಿಗರು ಮತ್ತು ಅರಣ್ಯ ಸಮಿತಿಯ ಸಾಮಾನ್ಯ ಸಭೆಗೆ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಪದ ನಿಮಿತ್ತ ಸದಸ್ಯರಾಗಿದ್ದು, ಯೋಜನೆಯ ತಯಾರಿಕೆಯ ಪ್ರಕ್ರಿಯೆಯಲ್ಲಿ ಮತ್ತು ಅರಣ್ಯ ಸಮಿತಿಗಳಿಗೆ ಹಾಜರಾಗಲು ಇವರಿಬ್ಬರು, ಬಹು ಮುಖ್ಯವಾದ ಪಾತ್ರ ವಹಿಸಬೇಕಾಗಿರುತ್ತದೆ, ಪ್ರಸ್ತುತ ಸ್ಥಿತಿಯಲ್ಲಿ ಗ್ರಾಮ ಮಟ್ಟದಲ್ಲಿ ಗ್ರಾಮೀಣಾಭಿವೃದ್ಧಿ ಚಟುವಟಿಕೆಗಳ ಅನುಷ್ಠಾನದಲ್ಲಿ ಸಮನ್ವಯತೆಯ ಕೊರತೆಯು ಕಂಡು ಬಂದಿರುವುದರಿಂದ, ಗ್ರಾಮ ಅರಣ್ಯ ಸಮಿತಿಗಳ ಸಭೆಯಲ್ಲಿ ಹಾಗೂ ಯೋಜನೆಯ ತಯಾರಿಕೆಯಲ್ಲಿ ಭಾಗವಹಿಸುವಂತೆ ಸೂಚಿಸಲು ಸೂಚಿಸಿದೆ.

ಮುಂದುವರೆದು ಜಂಟಿ ಅರಣ್ಯ ಯೋಜನೆ ಮತ್ತು ನಿರ್ವಹಣೆ ಕಾರ್ಯಕ್ರಮದಡಿ ರಚಿಸಿರುವ ಗ್ರಾಮ ಅರಣ್ಯ ಸಮಿತಿಗಳ ವ್ಯಾಪ್ತಿಯಲ್ಲಿ ಸ್ಥಳೀಯರ ಬೇಡಿಕೆಗನುಗುಣವಾಗಿ ಅರಣ್ಯೇತರ ಚಟುವಟಿಕೆಗಳನ್ನು ಸಂಬಂಧಿಸಿರುವ ಇಲಾಖೆಗಳು ಅವರ ವ್ಯಾಪ್ತಿಯಲ್ಲಿ ಬರುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಅರಣ್ಯ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ವೃತ್ತ ಮಟ್ಟದ ಸಲಹಾ ಸಮಿತಿಯ ಸಭೆಗೆ ಮತ್ತು ಅರಣ್ಯ ವಿಭಾಗ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಅನುಷ್ಠಾನ ಸಮಿತಿಗಳ ಸಭೆಗೆ ಹಾಜರಾಗುವಂತೆ, ಜಿಲ್ಲಾ ಮಟ್ಟದ ಅನುಷ್ಠಾನ ಇಲಾಖೆಗಳ ಅಧಿಕಾರಿಗಳಿಗೆ ಭಾಗವಹಿಸುವಂತೆ ಸೂಚಿಸಿರುವುದು. ಅಗತ್ಯವಿದ್ದಲ್ಲಿ, ತಾವು ಕೂಡ ಭಾಗವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 05 ಉಖಾಯೋ 2008(P)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 03.08.2009

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ ಯಂತ್ರಗಳನ್ನು ಬಳಸಬೇಕಾದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಕೂಲಿ ಅರಸಿ ಬರುವ ಕಾರ್ಮಿಕ ಕುಟುಂಬಗಳಿಗೆ 100 ದಿನಗಳ ಖಾತ್ರಿ ಉದ್ಯೋಗವನ್ನು ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಮತ್ತು ಕೂಲಿ ಆಧಾರಿತ ಕಾಮಗಾರಿಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಆದರೆ ಕೆಲವು ಕಾಮಗಾರಿಗಳನ್ನು ಅನಿಷ್ಠಾನಗೊಳಿಸುವಾಗ ಕಾರ್ಮಿಕರು ನಿರ್ವಹಿಸಲು ಸಾಧ್ಯವಾಗದಂತಹ ಕೆಲವು ಪರಿಸ್ಥಿತಿಯು ಎದುರಾಗಬಹುದು ಮತ್ತು ಅಂತಹ ಪರಿಸ್ಥಿತಿಯಲ್ಲಿ ಯಂತ್ರಗಳನ್ನು ಬಳಸುವುದು ಅತ್ಯವಶ್ಯಕವಾಗಿರುತ್ತದೆ. ಇಂತಹ ಸಂಧರ್ಭಗಳಲ್ಲಿ ಯಂತ್ರಗಳನ್ನು ಯಾವ ರೀತಿ ಬಳಕೆ ಮಾಡಬೇಕು ಎಂಬುದರ ಬಗ್ಗೆ ದಿನಾಂಕ: 08.07.2009ರಂದು ನಡೆದ ಜಿಲ್ಲಾ ಪಂಚಾಯಿತಿಗಳ ಉಪ ಕಾರ್ಯದರ್ಶಿಗಳ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ. ಕಾಮಗಾರಿಯ ಅನುಷ್ಠಾನದಲ್ಲಿ ಒಂದು ವೇಳೆ ಯಂತ್ರಗಳನ್ನು ಬಳಕೆ ಮಾಡುವ ಪ್ರಸಂಗ ಒದಗಿ ಬಂದಾಗ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

- ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಯಂತ್ರಗಳ ಬಳಕೆಯ ಬಗ್ಗೆ ತೋರಿಸಬೇಕು.
- ಸಾಮಾಗ್ರಿ ಘಟಕದಡಿ ಇದರ ವೆಚ್ಚವನ್ನು ಭರಿಸಬೇಕು.
- ತಾಂತ್ರಿಕ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಸದರಿ ಕಾಮಗಾರಿಗಳನ್ನು ಕಾರ್ಮಿಕರಿಂದ ನಿರ್ವಹಿಸಲು ಸಾಧ್ಯವಾಗದು ಎಂಬುದರ ಬಗ್ಗೆ ದೃಡೀಕರಿಸಬೇಕು.
- ಕಾಮಗಾರಿಯಲ್ಲಿ ಯಂತ್ರಗಳನ್ನು ಬಳಸುವ ಬಗ್ಗೆ ಕಾರ್ಯಕ್ರಮ ಅಧಿಕಾರಿಯವರಿಂದ ಕಡ್ಡಾಯವಾಗಿ ಅನುಮತಿಯನ್ನು ಪಡೆಯಬೇಕು. ಲಿಖಿತ ಮೂಲಕ ಪಡೆದ ಆದೇಶವನ್ನು ಕಾಮಗಾರಿಯ ಸ್ಥಳದಲ್ಲಿ ಇಟ್ಟಿರಬೇಕು.
- ಯಂತ್ರಗಳನ್ನು ಬಳಸುವ ಬಗ್ಗೆ ನೀಡಿದ ಅನುಮತಿಯ ಆದೇಶದ ವಿವರಗಳನ್ನು ತಾಲ್ಲೂಕು ಪಂಚಾಯಿತಿಯು ಕಾರ್ಯಾಲಯದಲ್ಲಿ ನಿರ್ವಹಿಸುವ ವಹಿಯಲ್ಲಿ ನಮೂದು ಮಾಡಿರಬೇಕು.
- ಯಂತ್ರಗಳ ಬಳಕೆಯ ಬಗ್ಗೆ ಮುಂಚಿತವಾಗಿ ಪ್ರಚುರಪಡಿಸಿರಬೇಕು.

ಯಾವುದೇ ಸಂದರ್ಭದಲ್ಲಿ ಕಾರ್ಯಕ್ರಮ ಅಧಿಕಾರಿಯವರು ನೀಡಿದ ಅನುಮತಿ ಆದೇಶವಿಲ್ಲದೇ, ಕಾಮಗಾರಿಯ ಅನುಷ್ಠಾನದಲ್ಲಿ ಯಂತ್ರಗಳನ್ನು ಬಳಸಬಾರದೆಂದು ಈ ಮೂಲಕ ತಿಳಿಸಿದೆ.

**ತಮ್ಮ ವಿಶ್ವಾಸಿ,**
**ಸಹಿ/–**
**ನಿರ್ದೇಶಕರು**
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 67 ಉಖಾಯೋ : 2009

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 10–02–2010

## ಸುತ್ತೋಲೆ

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲ ಸಂಪನ್ಮೂಲ ಇಲಾಖೆಯ ಸಂಬಂಧ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಫಬ್ರವರಿ 4 ಮತ್ತು 5ನೇ 2010ರಂದು ನಡೆದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ರಾಜ್ಯಮಟ್ಟದ ಸಭೆ.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಒಗ್ಗೂಡಿಸಿಕೊಂಡು ಅನುಷ್ಠಾನಗೊಳಿಸುತ್ತಿರುವುದು ಸರಿಯಷ್ಟೆ. ಈ ಸಂಬಂಧ ದಿನಾಂಕ: 4 ಮತ್ತು 5ನೇ 2010ರಂದು ರಾಜ್ಯ ಮಟ್ಟದಲ್ಲಿ ನಡೆದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಿದಂತೆ ಜಲಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಈ ಯೋಜನೆಯಡಿ ಅನುಷ್ಠಾನಗೊಳಿಸುವಾಗ ನಿರ್ದಿಷ್ಠ ರೂಪರೇಷ ಮತ್ತು ನಿಯಮಗಳನ್ನು ರಚಿಸಿ ಅಂದರೆ ಯಾವರೀತಿಯ ಕಾಮಗಾರಿಗಳನ್ನು ಮತ್ತು ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನಗಳ ಕುರಿತು ವಿವರವಾಗಿ ತಿಳಿಸುವುದು ಸೂಕ್ತವೆಂದು ಅಭಿಪ್ರಾಯ ಪಡಲಾಗಿದೆ. ಆದುದರಿಂದ ಈ ಸಂಬಂಧ ಕಾಮಗಾರಿಗಳ ಅನುಷ್ಠಾನ ಕುರಿತು ಸೂಕ್ತ ನಿಯಮಗಳನ್ನು ರಚಿಸಲಾಗುತ್ತಿದ್ದು, ಸದರಿ ನಿಯಮಾವಳಿಗಳನ್ನು ಹೊರಡಿಸುವವರೆಗೆ ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಪಟ್ಟ ಯಾವುದೇ ರೀತಿಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಈ ಯೋಜನೆಯಡಿ ಕೈಗೆತ್ತಿಕೊಳ್ಳದಂತೆ ಕೂಡಲೇ ಕ್ರಮ ವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಗೆ,**

ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ.

**ಪ್ರತಿಯನ್ನು :**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಕೊ.ಸಂಖ್ಯೆ: 307, 3ನೇ ಮಹಡಿ ವಿಕಾಸ ಸೌಧ, ಇವರ ಮಾಹಿತಿಗಾಗಿ ಕಳುಹಿಸಿದೆ.

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 44 ಉಖಾಯೋ : 2006

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 24–02–2010

ಗೆ:

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್,
ದಕ್ಷಿಣ ಕನ್ನಡ/ಉಡುಪಿ

ಮಾನ್ಯರೆ,

ವಿಷಯ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಅಂಚೆ ಇಲಾಖೆ ವ್ಯಾಪ್ತಿಗೆ ಬರುವ ಗ್ರಾಮೀಣ ಪ್ರದೇಶಗಳಲ್ಲಿರುವ ಖಾಲಿ ನಿವೇಶನ/ಜಮೀನುಗಳಿಗೆ ರಾ.ಗ್ರಾ.ಉ.ಖಾ.ಯೋ. ಅಡಿ ಸರ್ಕಾರಿ ಆಸ್ತಿಗಳನ್ನು ಬೇಲಿ ಹಾಕುವ ಮೂಲಕ ಸಂರಕ್ಷಿಸುವ ಬಗ್ಗೆ

ಉಲ್ಲೇಖ: Post Master General, South Karnataka Region, Karnataka Circle, Bangalore, ಇವರ ಅರೆ ಸರ್ಕಾರದ ಪತ್ರದ ಸಂಖ್ಯೆ: SK/Bldg/1-23/Fence ದಿನಾಂಕ: 10.02.2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಅಂಚೆ ಇಲಾಖೆಯ ಪೋಸ್ಟ್ ಮಾಸ್ಟರ್ ಜನರಲ್, ಇವರು ಉಲ್ಲೇಖಿತ ಪತ್ರದಲ್ಲಿ ಪುತ್ತೂರು ಅಂಚೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ಪ್ರದೇಶದಲ್ಲಿರುವ ಖಾಲಿನಿವೇಶನ/ಜಮೀನುಗಳಿಗೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೇಲಿ ಹಾಕುವ ಮೂಲಕ ಸಂರಕ್ಷಿಸಲು ಪ್ರಸ್ತಾವನೆಯನ್ನು ಪರಿಗಣಿಸುವಂತೆ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿಯವರ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿದೆ. ಈ ಸಂಬಂಧ ದಿನಾಂಕ: 05.08.2009ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ವಿವಿಧ ಇಲಾಖೆಗಳ ಯೋಜನೆಗಳನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸುವ ಸಂಬಂಧ ನಡೆದ ಸಭೆಯಲ್ಲಿ ಸರ್ಕಾರಿ ಆಸ್ತಿಗಳನ್ನು bio-fencing ಮೂಲಕವಾಗಲಿ ಅಥವಾ ಮುಳ್ಳುತಂತಿಯ ಮೂಲಕವಾಗಲಿ ಸಂರಕ್ಷಿಸಲು ತೀರ್ಮಾನಿಸಲಾಗಿರುತ್ತದೆ. ಇದರ ಸಂಬಂಧ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಇರುವ ಅಂಚೆ ಇಲಾಖೆಯ ಅಧಿಕಾರಿಗಳಿಗೆ ಸೂಕ್ತವಾದ ಪ್ರಸ್ತಾವನೆಯನ್ನು ಗ್ರಾಮಸಭೆಯಲ್ಲಿ ಅನುಮೋದಿಸಲು ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಆದುದರಿಂದ ಅಂಚೆ ಇಲಾಖೆಯವರು ಮೇಲ್ಕಂಡ ಕಾಮಗಾರಿಗಳಿಗೆ ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಸೂಕ್ತವಾದ ನೆರವನ್ನು ನೀಡಿ ಸದರಿ ಕಾಮಗಾರಿಗಳನ್ನು ಮಾರ್ಗಸೂಚಿಗಳ ಅನುಸಾರ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತಕ್ಕೆ ಒಳಪಟ್ಟು ಅನುಷ್ಠಾನಗೊಳಿಸಲು ಅನುವಾಗುವಂತೆ ಕ್ರಮವಹಿಸಲು ಸೂಚಿಸಿದೆ.

ತಮ್ಮ ನಂಬುಗೆಯ,

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 02 ಉಖಾಯೋ : 10

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 25–02–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ನಿರ್ಮಾಣ ಮಾಡುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಸಂ.ಜೆ–11013/2/2009– ಎನ್‌ಆರ್‌ಇಜಿಪಿ (ಪಿಟಿ) ದಿನಾಂಕ: 30–12–2009.

* * *

ಕೇಂದ್ರ ಸರ್ಕರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರು ಉಲ್ಲೇಖಿತ ಪತ್ರದಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ಮಟ್ಟದಲ್ಲಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣದ ಕಾಮಗಾರಿಗಳನ್ನು ಸ್ಥಾಪಿಸುವಂತೆ, ಮಾರ್ಗಸೂಚಿಗಳನ್ನು ಲಗತ್ತಿಸಿ ರಾಜ್ಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಕೇಂದ್ರ ಸರ್ಕಾರದ ಪತ್ರದ ಪ್ರತಿ ಮತ್ತು ಮಾರ್ಗಸೂಚಿಗಳ ಪ್ರತಿಯನ್ನು ಈ ಪತ್ರದೊಂದಿಗೆ ಮುಂದಿನ ಮಾರ್ಗದರ್ಶನಕ್ಕಾಗಿ ಲಗತ್ತಿಸಿದೆ. ಸದರಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣದ ಕಾಮಗಾರಿಗಳನ್ನು 2010–11ನೇ ಸಾಲಿನಲ್ಲಿ ಕೈಗೊಳ್ಳುವುದರ ಬಗ್ಗೆ, ಪ್ರದೇಶಗಳನ್ನು/ಜಾಗಗಳನ್ನು ಗುರುತಿಸಿ, ಸದರಿ ನಿರ್ಮಾಣದ ಕಾಮಗಾರಿಗಳಿಗೆ ಬೇಕಾಗುವ ಮೌಲ್ಯದ ಅನುದಾನದ ಮೊತ್ತವನ್ನು 2010–11ನೇ ಸಾಲಿಗೆ ತಯಾರು ಮಾಡುವ ಕಾರ್ಮಿಕ ಮುಂಗಡ ಪತ್ರ ಆಯವ್ಯಯದಲ್ಲಿ ಸೇರಿಸಲು ಕ್ರಮವಹಿಸಿ, ಸದರಿ ವಿವರಗಳನ್ನು NREGS-MIS ನಲ್ಲಿ ತಪ್ಪದೇ ದಾಖಲಿಸಲು ಕ್ರಮವಹಿಸುವಂತೆ. ಸದರಿ ವಿಷಯದ ಕುರಿತು ಮುಂದಿನ ತಿಂಗಳು ಉಪ ಕಾರ್ಯದರ್ಶಿಗಳ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗುವುದು.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ATANU PURKAYASTHA**

Joint Secretary
Government of India
Ministry of Agriculture
(Department of Agriculture & Cooperation)
Krishi Bhawan, New Delhi- 110114
Tele. 011-23381503
Fax: 011-23387669

D.O.No. 11-47/2006-Hort Dated the 25th February, 2010

The erratic behaviour of South –West Monsoon is a major cause of concern from the point of view of agriculture production. Centrally Sponsored Micro Irrigation Scheme (MIS), which aims at water use efficiency in production, is an effective answer to the erratic behaviour of monsoon. Time has come to increase the spread of micro irrigation in the State by linking them with the water sources for maximum benefit of the farmers.

2. A number of Centrally Sponsored Schemes viz. NHM, RKVY, NREGA, etc.

Provide for creation of water sources and rain water harvesting structures. At the same time, there are many small and big irrigation projects being implemented by the State Government. It is proposed that all water sources for the purpose of irrigation may be liked with micro irrigation sources so that maximum land can be brought under cultivation with minimum use of water. You are accordingly requested to take up the matter with the other Departments under State Government responsible for creating water sources for the purpose of irrigation for linking them with Micro Irrigation Scheme.

3.Further, the main objective of Micro Irrigation is to enhance water use efficiency and one of the indicators of this objective is to check the rate of depletion of ground water level. It is, therefore, suggested that while taking up project evaluation study, you must include assessment of ground water level pre and post use of Micro Irrigation Scheme, as one o fthe parameters for evaluation.

Yours sincerely,

(Atanu Purkayastha)

Shri S.G.Hegde
Secretary (Horticulture)
Government of Karnataka
Room No 405, MS Building
Bangalore
**080-22353939/222385687(fax)**

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 65 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 26–02–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಸಾಮಾಗ್ರಿ ವೆಚ್ಚದಲ್ಲಿ ಸಸಿಗಳ ಬೆಳೆಸುವಿಕೆಗೆ ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅಭಿವೃದ್ಧಿ) ರವರ ಅ.ಸ.ಪ. ಸಂ.ಬಿ6/ ಎನ್‌ಆರ್‌ಇಜಿಎಸ್/ಸಿಆರ್ – 2009–10 ದಿನಾಂಕ: 01–02–2010.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಸಿಗಳನ್ನು ಬೆಳೆಸಿಕೊಳ್ಳಲು ಹಾಗೂ ಜೈವಿಕ ಇಂಧನ ಉತ್ಪಾದನೆ ಮಾಡುವ ನೆಡುತೋಪು ಬೆಳೆಸಲು ಸಾಮಾಗ್ರಿ ಬಾಬ್ತಿನಡಿ ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡುವ ಅನುದಾನ ಬಾಕಿ ಇದ್ದು, ಸಸಿಗಳನ್ನು ಬೆಳೆಸಿಕೊಳ್ಳುವ ಕಾಲಾವಧಿ ಮುಗಿಯುತ್ತಾ ಬಂದಿರುವುದರಿಂದ ಹಾಗೂ ನೆಡುತೋಪು ಬೆಳೆಸುವ ಕಾರ್ಯಕ್ರಮವನ್ನು ಸಕಾಲದಲ್ಲಿ ಕೈಗೊಳ್ಳ ಬೇಕಾಗಿರುವುದರಿಂದ ಸಾಮಾಗ್ರಿ ಘಟಕದಡಿ ಅನುದಾನವನ್ನು ಬಿಡುಗಡೆ ಮಾಡುವುದು ಅವಶ್ಯಕವೆಂದು ಉಲ್ಲೇಖಿತ ಪತ್ರದಲ್ಲಿ ಸರ್ಕಾರಕ್ಕೆ ವರದಿ ಮಾಡಿರುತ್ತಾರೆ. ಸಾಮಾಗ್ರಿ ಘಟಕದಡಿ ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಈಗಾಗಲೇ ತಕ್ಕ ಸೂಚನೆಗಳನ್ನು ತಮಗೆ ನೀಡಲಾಗಿರುತ್ತದೆ. ಸಾಮಾಗ್ರಿ ಬಾಬ್ತಿಗೆ ಸಂಬಂಧಿಸಿದ ಅನುದಾನವನ್ನು ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳಿಗೆ ಈಗಾಗಲೇ ಅನುಷ್ಠಾನಗೊಳಿಸಿದ ಕಾಮಗಾರಿಗಳ ಪೂರ್ಣ ಮಾಹಿತಿಯನ್ನು NREGS-MIS ನಲ್ಲಿ ದಾಖಲಿಸುವ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಲು ಕ್ರಮ ವಹಿಸುವಂತೆ ಸೂಚಿಸಿದೆ. ಯಾವುದೇ ಅನುಷ್ಠಾನ ಇಲಾಖೆಗಳಿಗೆ ಸಂಬಂಧಿಸಿದ ಸಾಮಾಗ್ರಿ ಅನುದಾನವನ್ನು ಹಿಂದಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ಮಾಹಿತಿಯನ್ನು NREGS-MIS ನಲ್ಲಿ ದಾಖಲಿಸಿದ ಹೊರತು ಬಿಡುಗಡೆ ಮಾಡಬಾರದೆಂದು ಸೂಚಿಸಿದೆ. ಪ್ರಸ್ತುತ ಆರ್ಥಿಕ ವರ್ಷವು ಮುಗಿಯುತ್ತಿರುವುದರಿಂದ ಕೂಡಲೇ ಸಾಮಾಗ್ರಿ ಅನುದಾನವನ್ನು ಅನುಷ್ಠಾನ ಇಲಾಖೆಗಳು ಸಲ್ಲಿಸಿರುವ ಕ್ಲೇಮ್ಸ್‌ನ್ನು ಮೇಲೆ ನೀಡಿದ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದು. ಇದರ ಸಂಬಂಧ ಅರಣ್ಯ ಇಲಾಖೆಯವರು ನೀಡಿದ ಸಾಮಾಗ್ರಿ ಘಟಕಕ್ಕೆ ಸಂಬಂಧಿಸಿದ ಬಾಕಿ ಇರುವ ಅನುದಾನದ ವಿಭಾಗೀಯವಾರು ಮಾಹಿತಿಯ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಫೋನ್ : 22353939
ಫ್ಯಾಕ್ಸ್: 08022385687
ಕರ್ನಾಟಕ ಸರ್ಕಾರದ ಸಚಿವಾಲಯ
ತೋಟಗಾರಿಕೆ ಇಲಾಖೆ
ಬಹುಮಹಡಿ ಕಟ್ಟಡ, 3ನೇ ಹಂತ, 4ನೇ ಮಹಡಿ
ಬೆಂಗಳೂರು – 560 001

**S.G.HEGDE**
Secretary to Government
Horticulture Department,

D.O.No. HCD 41 HPP 2010 Dated: 09.03.2010

Please find enclosed herwith the copy of the D.O. letter from Sir.Atanu Purkayastha, Joint Secretary, Government of India, which is self-explantory. Departments involved in creating irrigation facilities may have to make use of this opportunity of linking their project with micro irrigation scheme as micro irrigation provides appropriate solution to contain the problems related with water use, crop efficiency, producitivity, electricity, etc.

Hence, I request you to kindly explore the possibility of linking water sources created by your department with Micro Irrigation scheme promoted by the Department of Horticulture so that maximum land can be brought under cultivation with minimum use of water.

Yours sincerely
Sd/-
**(S.G. Hegde)**

**Sri P.Ravikumar**
Secretary to Government
Rural & Panchayat Raj Department
M.S.Building
Bangalore.

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 128 ಉಖಾಯೋ : 08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 18–03–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಜೈವಿಕ ಇಂಧನ ಕಾರ್ಯಕ್ರಮ ಅನುಷ್ಠಾನಕ್ಕೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸುವ ಕುರಿತು.

ಉಲ್ಲೇಖ: ಅಧ್ಯಕ್ಷರು, ಜೈವಿಕ ಇಂಧನ ಕಾರ್ಯಪಡೆ, ಕರ್ನಾಟಕ ಸರ್ಕಾರದ ಸಚಿವಾಲಯ, 5ನೇ ಹಂತ, ಬಹುಮಹಡಿ ಕಟ್ಟಡ ರವರ ಪತ್ರದ ಸಂ.ಜೈಇಕಾ/ಇತರೆ/2009 ದಿನಾಂಕ: 6–2–2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ, ಅಧ್ಯಕ್ಷರು, ಜೈವಿಕ ಇಂಧನ ಕಾರ್ಯಪಡೆ, ಬೆಂಗಳೂರು ಇವರ ಮುಂದಿನ ವರ್ಷದಿಂದ "ಹಸಿರು ಹೊನ್ನು" ಎಂಬ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿಕೊಂಡು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಗಳು ಆಶಿಸಿದ್ದು ಇದರ ಜೊತೆಗೆ ಮುಂಬರುವ ವರ್ಷದಿಂದ "ಬರಡು ಬಂಗಾರ" ಎಂಬ ಯೋಜನೆಯನ್ನು ಸಹ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿಕೊಂಡು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಗಳು ಇಚ್ಛಿಸಿರುವುದನ್ನು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಮೇಲ್ಕಂಡ ಎರಡೂ ಯೋಜನೆಗಳನ್ನು ಮುಂಬರುವ ವರ್ಷದಿಂದ, ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿಕೊಂಡು, ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಸದರಿ ಯೋಜನೆಗಳಲ್ಲಿ ಬಳಸುವ ಅನುದಾನವನ್ನು ಉಸ್ತುವಾರಿ ಮಾಡುವುದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿಯೊಂದನ್ನು ರಚಿಸಲು, ಸೂಕ್ತವಾದ ನಿರ್ದೇಶನವನ್ನು ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸದರಿಯವರ ಕೋರಿಕೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಈಗ ಹಾಲಿ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ಉಸ್ತುವಾರಿ ವ್ಯವಸ್ಥೆಯನ್ನೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳಂತೆ ಅನುದಾನವನ್ನು ಬಳಕೆ ಮಾಡಿಕೊಂಡು ಜೈವಿಕ ಇಂಧನ ಕಾರ್ಯಕ್ರಮದಡಿ "ಹಸಿರು ಹೊನ್ನು" ಮತ್ತು "ಬರಡು ಬಂಗಾರ" ಎಂಬ ಯೋಜನೆಗಳಡಿ ಸಸಿನೆಡುವ ಕಾರ್ಯಕ್ರಮಗಳ ಉಸ್ತುವಾರಿ ಮಾಡುವಂತೆ ಹಾಗೂ ಮೇಲ್ಕಂಡ ಯೋಜನೆಗಳ ಅನುಷ್ಠಾನದಲ್ಲಿ, ಅಗತ್ಯವಾದ ಸಹಕಾರ ಮತ್ತು ನೆರವನ್ನು ನೀಡುವಂತೆ, ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು** ಆದರಗಳೊಂದಿಗೆ, ಅಧ್ಯಕ್ಷರು, ಜೈವಿಕ ಇಂಧನ ಕಾರ್ಯಪಡೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, 5ನೇ ಹಂತ, ಕೊಠಡಿ ಸಂಖ್ಯೆ: 6, ಮೊದಲನೇ ಮಹಡಿ, ಬೆಂಗಳೂಎಉ ಇವರ ಮಾಹಿತಿಗಾಗಿ ಸಲ್ಲಿಸಿದೆ.

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 02 ಉಖಾಯೋ : 10

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 25–03–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ನಿರ್ಮಾಣ ಮಾಡುವ ಬಗ್ಗೆ.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರದ ಸಂ.ಜೆ–11013/2/2009– ಎನ್‌ಆರ್‌ಇಜಿಎ (ಪಿಟಿ) ದಿನಾಂಕ: 30–12–2009.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣದ ಕಾಮಗಾರಿಗಳನ್ನು ಸ್ಥಾಪಿಸುವಂತೆ, ಮಾರ್ಗಸೂಚಿಗಳನ್ನು ಲಗತ್ತಿಸಿ ತಿಳಿಸಿರುವುದು ಸರಿಯಷ್ಟೆ. ತಮ್ಮ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳು ಇಲ್ಲದಿದ್ದಲ್ಲಿ ಸದರಿ ಯೋಜನೆಯಡಿ ತೆಗೆದುಕೊಳ್ಳಲು ಅವಕಾಶವಿರುತ್ತದೆ. ಈ ಬಗ್ಗೆ ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಸೂಕ್ತ ನಿರ್ಣಯ ತೆಗೆದುಕೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 67 : ಉಖಾಯೋ : 09

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹು ಮಹಡಿ ಕಟ್ಟಡ, ಸಚಿವಾಲಯ – 2
ಬೆಂಗಳೂರು, ದಿನಾಂಕ : 27–03–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ :

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್,
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: ಕೇಂದ್ರ ಪುರಸ್ಕೃತ ಯೋಜನೆಯಾದ ಕಿರು ನೀರಾವರಿ ಯೋಜನೆಯನ್ನು ಇತರೆ ಇಲಾಖೆಗಳ ನೀರಿನ ಸಂಪನ್ಮೂಲ ಕಾರ್ಯಕ್ರಮಗಳಿಗೆ ಬಳಸುವ ಕುರಿತು.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹು ಮಹಡಿ ಕಟ್ಟಡ ಇವರ ಅರೆ ಸರ್ಕಾರಿ ಪತ್ರದ ಸಂ.ಊCD/4/HPP/2010 ದಿನಾಂಕ : 9–3–2010.

* * *

ಕೇಂದ್ರ ಪುರಸ್ಕೃತ ಯೋಜನೆಯಾದ ಕಿರು ನೀರಾವರಿ ಯೋಜನೆಯನ್ನು ತೋಟಗಾರಿಕೆ ಇಲಾಖೆಯಡಿ ಅನುಷ್ಠಾನಕ್ಕೆ ತರಲಾಗಿದ್ದು , ನೀರಾವರಿ ಸೌಲಭ್ಯಗಳ ಕಾಮಗಾರಿಗಳನ್ನು ಒಳಗೊಂಡಿರುವ ಇಲಾಖೆಗಳು ತೋಟಗಾರಿಕೆ ಇಲಾಖೆಯ ಕಿರು ನೀರಾವರಿ ಯೋಜನೆಯೊಂದಿಗೆ ಒಟ್ಟುಗೂಡಿಸಿ ಅನುಷ್ಠಾನಗೊಳಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಕಿರು ನೀರಾವರಿ ಯೋಜನೆಯು ಬೆಳೆಗಳ ಉತ್ಪಾದನೆಯ ಸಾಮರ್ಥ್ಯತೆ, ನೀರಿನ ಬಳಕೆ, ವಿದ್ಯುಚ್ಛಕ್ತಿ ಮತ್ತು ಮುಂತಾದ ಸಮಸ್ಯೆಗಳನ್ನು ನಿಯಂತ್ರಿಸಲು ಪರಿಹಾರವನ್ನು ನೀಡಿರುತ್ತದೆ.

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಇರುವ ಕಾಮಗಾರಿಗಳು ಬಹುತೇಕ ನೀರು ಮತ್ತು ಭೂ ಆಧಾರಿತ ಚಟುವಟಿಕೆಗಳು ಆಗಿರುವುದರಿಂದ ತೋಟಗಾರಿಕೆ ಇಲಾಖೆಯವರು ಪರಿಚಯಿಸಿರುವ ಕಿರು ನೀರಾವರಿ ಯೋಜನೆಯು ಉಪಯುಕ್ತವಾಗಿರುತ್ತದೆ. ಆದುದರಿಂದ, ಈ ಕಿರು ನೀರಾವರಿ ಯೋಜನೆಯನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಉಲ್ಲೇಖದಲ್ಲಿ ಸ್ವೀಕೃತವಾದ ಪತ್ರಗಳ ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:02 ಉಖಾಯೋ : 10

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 05–04–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ನಿರ್ಮಾಣ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಪತ್ರದ ಸಮಸಂಖ್ಯೆ ದಿನಾಂಕ: 25–3–2010.
2. ಕೇಂದ್ರ ಸರ್ಕಾರದ ಪತ್ರದ ಸಂ.28012/3/05–06–NREGA(Pt) ದಿನಾಂಕ 11–3–2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಉಲೇಖ(2)ರ ಪತ್ರದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ಕಟ್ಟಡಗಳಿಗೆ ICT ಸೌಲಭ್ಯಗಳನ್ನು ಯೋಜನೆಯ ಶೇಕಡಾ 6 ರಷ್ಟರನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಿಕೊಂಡು ಪಡೆಯುವಂತೆ ತಿಳಿಸಿರುತ್ತದೆ. ಸದರಿ ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಈಗಾಗಲೇ ಇದರ ಸಂಬಂಧ ಮಾರ್ಗಸೂಚಿಗಳನ್ನು ಲಗತ್ತಿಸಿ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯತ್‌ಗಳಿಗೆ ಸ್ವಂತ ಕಟ್ಟಡಗಳು ಇಲ್ಲದಿದ್ದಲ್ಲಿ ಸದರಿ ಯೋಜನೆಯಡಿ ಮಾರ್ಗಸೂಚಿಗಳಂತೆ ಪರಿಶೀಲಿಸಿ ತಮ್ಮ ಹಂತದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲು ತಿಳಿಸಲಾಗಿರುತ್ತದೆ. ಆದುದರಿಂದ, ICT ಸೌಲಭ್ಯಗಳನ್ನು ಗ್ರಾಮ ಪಂಚಾಯತಿ ಕಟ್ಟಡಗಳಿಗೆ ಅವಶ್ಯಕತೆ ಇರುವ ಬಗ್ಗೆ ಪರಿಶೀಲಿಸಿ ಶೇಕಡಾ 6 ರಷ್ಟರ ಯೋಜನೆಯ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಿ ತೆಗೆದುಕೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 98: ಉಖಾಯೋ :08

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 21–04–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ವಿಪತ್ತು ನಿರ್ವಹಣೆಯ ರಾಷ್ಟ್ರೀಯ ಕಾರ್ಯನೀತಿ ಕಾಗದ ಪತ್ರದ ಪ್ರತಿಯನ್ನು ಕಳುಹಿಸುವ ಕುರಿತು.
ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂ. PS/JS(S) MGNREGA-2009 ದಿನಾಂಕ:22.03.10

* * *

ಕೇಂದ್ರ ಸರ್ಕಾರದಿಂದ ಉಲ್ಲೇಖದಲ್ಲಿ ಸ್ವೀಕರಿಸಲಾದ, ವಿಪತ್ತು ನಿರ್ವಹಣೆಯ ರಾಷ್ಟ್ರೀಯ ಕಾರ್ಯನೀತಿಯ ಕಾಗದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಸಲ್ಲಿಸಿದೆ. ಇದನ್ನು ಕ್ಷೇತ್ರಮಟ್ಟದಲ್ಲಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮವನ್ನು ರೂಪಿಸಿ, ಅನುಷ್ಠಾನಗೊಳಿಸುವ ಸಮಯದಲ್ಲಿ ಪರಿಗಣಿಸಿ ಜಿಲ್ಲಾ ವಿಪತ್ತು ನಿರ್ವಹಣೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 179 ಉಖಾಯೋ : 09

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 04–05–2010

## ಸುತ್ತೋಲೆ

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು/ಅಪೂರ್ಣಗೊಂಡ ಕಾಮಗಾರಿಗಳನ್ನು 2010–11ನೇ ಸಾಲಿನಲ್ಲಿ ಪೂರ್ಣಗೊಳಿಸಲು ಪ್ರಥಮ ಆದ್ಯತೆ ನೀಡುವುದರ ಕುರಿತು.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 31–03–2010ರ ಅಂತ್ಯಕ್ಕೆ ಇರುವಂತೆ ಎಂಐಎಸ್‌ನಲ್ಲಿ ದಾಖಲಿಸಿದ ಪ್ರಗತಿಯ ವಿವರಗಳನ್ನು ಪರಿಶೀಲಿಸಿದಾಗ 30,000 ಕಾಮಗಾರಿಗಳು ಪೂರ್ಣಗೊಂಡಿದ್ದು, 5,10,000 ಕಾಮಗಾರಿಗಳು ಅಪೂರ್ಣಗೊಂಡಿರುವುದು ತಿಳಿದು ಬಂದಿರುತ್ತದೆ. ಈ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೆಲವು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಎಂಐಎಸ್‌ನಲ್ಲಿ ದಾಖಲಿಸಿದೇ ಇರುವುದು ಹಾಗೂ ಸದರಿ ಕಾಮಗಾರಿಗಳ ಸಂಬಂಧ ಅಂತಿಮ ಬಿಲ್ಲು ಪಾವತಿಸದೇ ಇರುವುದು ಹಾಗೂ ಸದರಿ ಕಾಮಗಾರಿಗಳ ಸಂಬಂಧ ಅಂತಿಮ ಬಿಲ್ಲು ಪಾವತಿಸದೇ ಅಪೂರ್ಣಗೊಂಡಿರುವುದು ಹಾಗೂ ಪೂರ್ಣಗೊಂಡ ಕಾಮಗಾರಿಗಳ ಕಡತದಲ್ಲಿ ಅನುಷ್ಠಾನಾಧಿಕಾರಿಗಳು ನೀಡಿರುವ Completion Certificate ಇಲ್ಲದಿರುವುದು ಕಂಡುಬರುತ್ತದೆ. ಸದರಿ ಅಂಕಿ ಅಂಶಗಳು ರಾಷ್ಟ್ರಮಟ್ಟದಲ್ಲಿ ಬಹಳಷ್ಟು ಚರ್ಚೆಗೆ ಗ್ರಾಸವಾಗಿರುತ್ತದೆ. ಅಲ್ಲದೇ, ಕಾಮಗಾರಿಗಳನ್ನು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಿಸುವುದರಿಂದ ಪ್ರಸ್ತುತ ಇರುವ ಸಿಬ್ಬಂದಿಯ ಮೂಲಕ ಪರಿಣಾಮಕಾರಿಯಾಗಿ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಕೈಗೊಳ್ಳಲು ಸಾಧ್ಯವಾಗದೇ ಕಾಮಗಾರಿಗಳ ಗುಣಮಟ್ಟ ಕಳಪೆಯಾಗುತ್ತದೆ. ಆದ ಕಾರಣ 2010–11ನೇ ಸಾಲಿನಲ್ಲಿ ಹಾಲಿ ಪ್ರಾರಂಭವಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವವರೆಗೂ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳದಂತೆ ಕ್ರಮ ವಹಿಸಲು ತಿಳಿಸಿದೆ. ಉದ್ಯೋಗ ಬೇಡಿ ಬಂದ ಕೆಲಸಗಾರರನ್ನು ಮುಂದುವರೆದ ಕಾಮಗಾರಿಗಳಲ್ಲಿ ತೊಡಗಿಸಿ ಈ ಕಾಮಗಾರಿಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಎಲ್ಲಾ ಅವಶ್ಯ ಕ್ರಮ ಜರುಗಿಸುವುದು.

ಮುಂದುವರೆದು, ವರ್ಷದ ಯಾವುದೇ ಅವಧಿಯಲ್ಲಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಗರಿಷ್ಠ 5 ರಿಂದ 6 ಕಾಮಗಾರಿಗಳು ಅಥವಾ ಪ್ರತಿ ಗ್ರಾಮದಲ್ಲಿ ಒಂದು ಅಥವಾ ಗರಿಷ್ಠ ಎರಡು ಕಾಮಗಾರಿಗಳು ಮಾತ್ರ ಅನುಷ್ಠಾನದಲ್ಲಿ ಇರುವಂತೆ ಹಾಗೂ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮವಹಿಸುವಂತೆ ಸೂಚಿಸಿದೆ (ವೈಯುಕ್ತಿಕ ಜಮೀನಿನಲ್ಲಿ ಕೈಗೆತ್ತಿಕೊಳ್ಳುವ ಕೃಷಿ, ತೋಟಗಾರಿಕೆ ಮತ್ತು ಭೂ ಅಭಿವೃದ್ಧಿ ಕಾಮಗಾರಿಗಳನ್ನು ಈ ಮಿತಿಯಿಂದ ಹೊರತುಪಡಿಸಲಾಗಿದೆ).

ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರದ ಕುರಿತು.

ಓದಲಾಗಿದೆ: 1) ಸರ್ಕಾರದ ಆದೇಶ ಸಂ.ಗ್ರಾಅಪ.05 : ಉಖಾಯೋ : 2008 ಬೆಂಗಳೂರು, ದಿನಾಂಕ : 02.01.2009

2) ಸರ್ಕಾರದ ಆದೇಶ ಸಂ.ಗ್ರಾಅಪ.05 : ಉಖಾಯೋ : 2009 ಬೆಂಗಳೂರು, ದಿನಾಂಕ : 02.01.2009

3) ದಿನಾಂಕ : 17.4.2010 ರಂದು ನಡೆದ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಚರ್ಚಿಸಿದ ಅನ್ವಯ.

* * *

### ಪ್ರಸ್ತಾವನೆ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳನ್ನು ತ್ವರಿತವಾಗಿ ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಉಲ್ಲೇಖ (1) ಮತ್ತು (2) ಆದೇಶಗಳಲ್ಲಿ ಕಾಮಗಾರಿಗಳಿಗೆ ತಾಂತ್ರಿಕ, ಆಡಳಿತಾತ್ಮಕ ಮಂಜೂರಾತಿ ನೀಡುವ ಅಧಿಕಾರ ಮತ್ತು ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸುವ ಹಾಗೂ ಚೆಕ್ ಮೆಶರ್‌ಮೆಂಟ್ ಮಾಡಿ ದೃಢೀಕರಿಸಿರುವ ಅಧಿಕಾರದ ಮಿತಿ ಇನ್ನು ಮುಂತಾದವುಗಳ ಬಗ್ಗೆ ಈಗಾಗಲೇ ಸರ್ಕಾರದ ಆದೇಶಗಳಲ್ಲಿ ತಿಳಿಸಲಾಗಿತ್ತು. ಆದರೆ ದಿನಾಂಕ : 17.04.2010 ರಂದು ನಡೆದ ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿಯ ಸಭೆಯಲ್ಲಿ ಯೋಜನಾ ಅನುಷ್ಠಾನದಲ್ಲಿ ಕ್ಷೇತ್ರ ಮಟ್ಟದಲ್ಲಿ ಹಲವಾರು ಲೋಪ, ದೋಷಗಳು ಹಾಗೂ ದುರುಪಯೋಗ ಪ್ರಕರಣಗಳು ಕಂಡುಬಂದಿರುವುದಾಗಿ ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ.

ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹೆಚ್ಚಿನ ಜವಾಬ್ದಾರಿಯನ್ನು ತಾಲ್ಲೂಕು/ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನೀಡುವುದು ಸೂಕ್ತವೆಂದು ಮತ್ತು ಸದರಿ ಲೋಪ, ದೋಷಗಳು ಯೋಜನಾ ಅನುಷ್ಠಾನದಲ್ಲಿ ಮರುಕಳಿಸದಂತೆ ಕ್ರಮ ವಹಿಸಬೇಕಾಗಿದ್ದು ಕೂಡಲೇ ಸದರಿ ಆದೇಶಗಳಲ್ಲಿ ಮೇಲೆ ಸೂಚಿಸಿರುವ ವಿಚಾರಗಳಿಗೆ ಸೂಕ್ತವಾದ ಮಾರ್ಪಾಡನ್ನು ತಂದು ಆದೇಶವನ್ನು ಹೊರಡಿಸುವಂತೆ ಸಮಿತಿಯು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ. ಈ ಸಂಬಂಧ ತಾಂತ್ರಿಕ ಅನುಮೋದನೆ, ಆಡಳಿತಾತ್ಮಕ ಅನುಮೋದನೆ ಹಾಗೂ ಅಳತೆ ಪುಸ್ತಕದಲ್ಲಿ ಅಳತೆಯ ದಾಖಲಾತಿ ಮತ್ತು ಚೆಕ್ ಮೆಶರ್‌ಮೆಂಟ್ ಅಧಿಕಾರದ ಮಿತಿ ಇವುಗಳ ಕುರಿತು ಹೊರಡಿಸಲಾಗಿರುವ ಉಲ್ಲೇಖದ ಆದೇಶಗಳನ್ನು ಕೂಡಲೇ ಸೂಕ್ತ ಮಾರ್ಪಾಡಿನೊಂದಿಗೆ ಜಾರಿಗೊಳಿಸಬೇಕಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.05 :ಉಖಾಯೋ : 2008 ಬೆಂಗಳೂರು, ದಿನಾಂಕ . 06.05.2010**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳ ಸಂಪರ್ಕ ಅನುಷ್ಠಾನಕ್ಕಾಗಿ ಉಲ್ಲೇಖ (1) ಮತ್ತು (2) ರ ಆದೇಶಗಳನ್ನು ಮಾರ್ಪಡಿಸಿ, ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸಲು ಮತ್ತು ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಲು ಹಾಗೂ ಚೆಕ್ ಮೆಶರ್‌ಮೆಂಟ್ ಮಾಡಿ ದೃಢೀಕರಿಸಲು ಆದೇಶಿಸಿದೆ.

| ತಾಂತ್ರಿಕ ಅನುಮೋದನೆ ಮತ್ತು ಕಾಮಗಾರಿಗಳ ಅಳತೆ ದಾಖಲಾತಿ ಮತ್ತು ಚೆಕ್ ಮೆಶರ್ ಮೆಂಟ್: | | | | | | |
|---|---|---|---|---|---|---|
| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ತಾಂತ್ರಿಕ ಅನುಮೋದನೆಯನ್ನು ನೀಡುವ ವಿವಿಧ ಸಕ್ಷಮ ಪ್ರಾಧಿಕಾರಗಳ ಪದನಾಮದ ಹೆಸರು | ಕಾಮಗಾರಿಗಳ ಅಂದಾಜುಗಳಿಗೆ ಅನುಮೋದನೆ ನೀಡುವ ಮೊತ್ತದ ಮಿತಿ (ರೂ.ಲಕ್ಷಗಳಲ್ಲಿ) | ಅಳತೆ ಪುಸ್ತಕದಲ್ಲಿ ಅಳತೆ ದಾಖಲಾತಿ | ಪ್ರಗತಿಯಲ್ಲಿರುವ ಕಾಮಗಾರಿಗಳ ಚೆಕ್ ಮೆಶರ್‌ಮೆಂಟ್ ಮಾಡುವವರು | ಮುಕ್ತಾಯದ ಕಾಮಗಾರಿಗಳ ಬಿಲ್ಲುಗಳನ್ನು ಅಂತಿಮಗೊಳಿಸಲು ಅಂತಿಮ ಚೆಕ್ ಮೆಶರ್‌ಮೆಂಟ್ ಮಾಡುವವರು |
| 1 | ಅರಣ್ಯ | ಅ. ವಲಯ ಅರಣ್ಯ ಸಂರಕ್ಷಣಾಧಿಕಾರಿ(      ) | 1.00 | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ( | ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ( | |
| | | ಆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(      ) | 1.00 ರಿಂದ 10.00 | | | |
| | | ಇ. ಉಪ ಅರಣ್ಯ ಸಂರಕ್ಷಣಾಧಿಕಾರಿ(      ) | 10.00 ಲಕ್ಷಕ್ಕೂ ಮೇಲ್ಪಟ್ಟು | | | |
| 2. | ಜಲಾನಯನ | ಅ. ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ | 10.00 | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ | ತಾಂತ್ರಿಕ ಸಹಾಯಕ/ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ | |
| | | ಆ. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ | 10.00 ಲಕ್ಷಕ್ಕೂ ಮೇಲ್ಪಟ್ಟು | | | |
| 3. | ತೋಟಗಾರಿಕೆ | ಅ. ಸಹಾಯಕ ತೋಟಗಾರಿಕಾ ಅಧಿಕಾರಿ | 1.00 | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ಸಹಾಯಕ ತೋಟಗಾರಿಕಾ ಅಧಿಕಾರಿ | ತಾಂತ್ರಿಕ ಸಹಾಯಕ/ ಸಹಾಯಕ ತೋಟಗಾರಿಕಾ ಅಧಿಕಾರಿ | |
| | | ಆ. ಹಿರಿಯ ಸಹಾಯಕ ನಿರ್ದೇಶಕರು/ ಸಹಾಯಕ ನಿರ್ದೇಶಕರು | 1.00 ರಿಂದ 10.00 | | | |
| | | ಇ. ಉಪ ನಿರ್ದೇಶಕರು | 10.00 ಲಕ್ಷಕ್ಕೂ ಮೇಲ್ಪಟ್ಟು | | | |
| 4. | ಪಂಚಾಯತ್ ರಾಜ್ ಇಂಜಿನಿಯರಿಂಗ್ / ಬೃಹತ್ ನೀರಾವರಿ/ ಸಣ್ಣ ನೀರಾವರಿ | ಅ. ಸಹಾಯಕ ಸಭಿಯಂತರರು/ಕಿರಿಯ ಅಭಿಯಂತರರು | 1.00 | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು | ತಾಂತ್ರಿಕ ಸಹಾಯಕ/ ಸಹಾಯಕ ಅಭಿಯಂತರರು/ಕಿರಿಯ ಅಭಿಯಂತರರು | |
| | | ಆ. ಸಹಾಯಕ ಕಾರ್ಯಪಾಲಕ ಅಭಿಯಂತರು | 1.00 ರಿಂದ 10.00 | | | |
| | | ಇ. ಕಾರ್ಯಪಾಲಕ ಅಭಿಯಂತರರು | 10.00 ಲಕ್ಷಕ್ಕೂ ಮೇಲ್ಪಟ್ಟು | | | ಕಾಮಗಾರಿಗಳ ಅಂದಾಜು |

**ಆಡಳಿತಾತ್ಮಕ ಮಂಜೂರಾತಿ**

ತಾಂತ್ರಿಕ ಅನುಮೋದನೆಯಾದ ನಂತರ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯ ವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006 ರ ರೀತ್ಯಾ ಅಂದಾಜು ವೆಚ್ಚ ರೂ. 10.00 ಲಕ್ಷಗಳ ಒಳಗಿದ್ದಲ್ಲಿ ಗ್ರಾಮ ಪಂಚಾಯತಿಯು, ರೂ 10.00 ಲಕ್ಷಗಳನ್ನು ಮೀರಿದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯು ಹಾಗೂ ರೂ. 30.00 ಲಕ್ಷಗಳನ್ನು ಮೀರಿದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಡಳಿತಾತ್ಮಕ ಮಂಜೂರಾತಿಯನ್ನು ನೀಡತಕ್ಕದ್ದು.

ರಾಜ್ಯ ಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ :

1) ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ ಧಾರವಾಡ
2) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
3) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರು/ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
4) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರು/ ಕಾರ್ಯ ನಿರ್ವಾಹಕ ಅಧಿಕಾರಿಗಳು.

**ಪ್ರತಿಯನ್ನು**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಬೆಂಗಳೂರು.
6) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ ಮೈಸೂರು/ಗುಲ್ಬರ್ಗಾ/ ಬೆಳಗಾಂ.
7) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
8) ರೇಷ್ಮೆ ಅಭಿವೃದ್ಧಿ ಆಯುಕ್ತರು, ಬಹುಮಹಡಿ ಕಟ್ಟಡ, ಬೆಂಗಳೂರು
9) ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
10) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
11) ಆಯುಕ್ತರು, ಪಶುಸಂಗೋಪನಾ ಇಲಾಖೆ, ಬೆಂಗಳೂರು.
12) ಆಯುಕ್ತರು ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
13) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
14) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
15) ಮುಖ್ಯ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
16) ಮುಖ್ಯ ಅಭಿಯಂತರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು.
17) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು.
18) ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕ ಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು.
19) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು.
20) ಹೆಚ್ಚಿನ ಪ್ರತಿಗಳು/ರಕ್ಷಾ ಕಡತ

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ02(ಆಶಾ) ಉಖಾಯೋ 2010

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 11.05.2010

ಇವರಿಗೆ:

ರಾಜ್ಯದ ಎಲ್ಲ ಜಿಲ್ಲಾಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ರಾಜೀವ್ ಗಾಂಧೀ ಭಾರತ್ ನಿರ್ಮಾಣ್ ಸೇವಾ ಕೇಂದ್ರಗಳ ನಿರ್ಮಾಣ ಮತ್ತು ಅವುಳ ಉಪಯುಕ್ತತೆಯ ವಿಷಯದಲ್ಲಿ ಭಾರತ್ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಯನ್ನು www.nrega.nic.in ಈ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುತ್ತದೆ.. ಕೈಪಿಡಿಯ ಪ್ರತಿಯೊಂದನ್ನು Download ಮಾಡಿ ಸಣ್ಣ ಪುಸ್ತಕದ ರೂಪದಲ್ಲಿ ಮುದ್ರಿಸಿ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಮತ್ತು ನೋಡಲ್ ಅಧಿಕಾರಿಗಳಿಗೆ ಒದಗಿಸಲು ಈ ಮೂಲಕ ತಿಳಿಸಲಾಗಿದೆ. ರಾಜೀವ್ ಗಾಂಧಿ ಭಾರತ್ ನಿರ್ಮಾಣ್ ಸೇವಾ ಕೇಂದ್ರಗಳ ನಿರ್ಮಾಣವನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಗ್ರಾಮ ಪಂಚಾಯತು ಮಟ್ಟದಲ್ಲಿ ಕೈಗೆತ್ತಿಕೊಳ್ಳಬಹುದಾಗಿದೆ.

ಈ ಕೇಂದ್ರಗಳ ಮುಖ್ಯ ಉದ್ದೇಶ ಬ್ಲಾಕ್ ಹಂತದಲ್ಲಿ ಮತ್ತು ಗ್ರಾಮ ಪಂಚಾಯತಿ ಹಂತದಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಹೊಂದಲು ಮತ್ತು ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಲು ಅನುಕೂಲವಾಗುವಂತೆ ಮೂಲಭೂತ ಸೌಕರ್ಯವನ್ನು ವಿಸ್ತರಿಸುವುದು. ಇಂತಹ ಕೇಂದ್ರಗಳನ್ನು ತರಬೇತಿಗೆ, ಸಭೆಗಳಿಗೆ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಅನುಕೂಲವಾಗುವಂತೆ ಬಳಸಬಹುದಾಗಿದೆ. ಬಹುಮುಖ್ಯವಾಗಿ ಇದರ ಅನುಕೂಲ ಕೂಲಿ ಕಾರ್ಮಿಕರಿಗೆ ಅವಶ್ಯಕವಾದ ಬೇಡಿಕೆ ತಯಾರಿಸಲು ಉದ್ಯೋಗ ಚೀಟಿಯ ಪ್ರಿಂಟ್ ಇತರ MIS ಮಾಹಿತಿಯನ್ನು ಪಡೆಯಲು ಅನುಕೂಲವಾಗುತ್ತದೆ.

ಆದುದರಿಂದ ಇಂತಹ ಕೇಂದ್ರಗಳಿಗೆ ಬೇಡಿಕೆ ಇರುವ ಗ್ರಾಮ ಪಂಚಾಯತಿಯಲ್ಲಿ ಹಾಗೂ ತಾಲ್ಲೂಕು ಪಂಚಾಯಿತಿಯಲ್ಲಿ ಮೊದಲ ಹಂತದಲ್ಲಿ ಕೈಗೆತ್ತಿಕೊಳ್ಳಲು ಈ ಮೂಲಕ ತಿಳಿಸಿದೆ. ಇಂತಹ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತಿಯತಿಗಳಲ್ಲಿ ನಿರ್ಮಿಸುವುದಾದರೆ ರೂ. 10.00 ಲಕ್ಷ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿರ್ಮಿಸುವುದಾದರೆ ರೂ. 25.00 ಲಕ್ಷ ಅನುದಾನವನ್ನು ಓಖಇಉಂ ಅನುದಾನದಿಂದ ಬಳಸಬಹುದಾಗಿರುತ್ತದೆ. ಸಾಮಾಗ್ರಿಗಳ ಭಾಗ ಹೆಚ್ಚಾದಲ್ಲಿ ಹೆಚ್ಚಾದ ಮೊತ್ತವನ್ನು ಆಡಳಿತ ವೆಚ್ಚದಲ್ಲಿ (ICT-ಭಾಗ) ಉಳಿತಾಯದಿಂದ ಸಹ ಭರಿಸಬಹುದಾಗಿದೆ. ಈಗಾಗಲೇ ಭಾರತ ಸರ್ಕಾರವು ನೀಡಿರುವ ಟೈಪ್ ಡಿಸೈನ್‌ನಲ್ಲಿ ಸ್ಥಳೀಯ ನಿವೇಶನದ ಲಭ್ಯತೆಯ ಆಧಾರದ ಮೇಲೆ ಯಾವುದಾದರೂ ಬದಲಾವಣೆ ಅವಶ್ಯವೆನಿಸಿದರೆ ತಕ್ಷಣವೇ ಅಂತಹ ಪ್ರಸ್ತಾವನೆಗಳನ್ನು ಸರ್ಕಾರದ ಗಮನಕ್ಕೆ ತಂದು ಅನುಷ್ಠಾನಗೊಳಿಸಲು ಈ ಮೂಲಕ ತಿಳಿಸಲಾಗಿದೆ. ನಿಮ್ಮ ಜಿಲ್ಲೆಯಲ್ಲಿ ಇಂತಹ ಸೇವಾ ಕೇಂದ್ರಗಳನ್ನು ಕೈಗೆತ್ತಿಕೊಳ್ಳಲು ಇಚ್ಛಿಸುವ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕುಗಳನ್ನು ಗುರುತಿಸಿ ತಕ್ಷಣವೇ ಮಾಹಿತಿಯನ್ನು ಈ ಕಚೇರಿಗೆ ಒದಗಿಸಲು ಹಾಗೂ ಅಂತಹ ಗ್ರಾಮ ಪಂಚಾಯತಿಗಳಲ್ಲಿ ನಿರ್ಮಾಣದ ಕಾಮಗಾರಿಗಳನ್ನು ಆದ್ಯತೆಯ ಮೇಲೆ ಪ್ರಾರಂಭಿಸಲು ತಿಳಿಸಲಾಗಿದೆ.

ತಮ್ಮ ನಂಬುಗೆಯ
ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ:/199/ಉಖಾಯೋ :/09

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 1–6–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲ ಜಿಲ್ಲಾಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಜೈವಿಕ ಇಂಧನ ಕಾರ್ಯಕ್ರಮವನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಜೈವಿಕ ಇಂಧನ ಕಾರ್ಯಪಡೆ ಅಧ್ಯಕ್ಷರ ಆಪ್ತ ಕಾರ್ಯದರ್ಶಿಗಳ ಅನಧಿಕೃತ ಟಿಪ್ಪಣಿ ಪತ್ರ ಸಂಖ್ಯೆ: ಬಿಟಿಎಫ್/ಬುಕ್/2010–11 ದಿನಾಂಕ: 11–5–2010

* * *

2010–11ನೇ ಸಾಲಿನಲ್ಲಿ 25,000 ಹೆಕ್ಟರ್ ಪ್ರದೇಶದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜೈವಿಕ ಇಂಧನ ನೆಡುತೋಪನ್ನು ಬೆಳೆಸಲು ಅರಣ್ಯ ಇಲಾಖೆಯವರು ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ. 25,000 ಹೆಕ್ಟರ್ ಪ್ರದೇಶದಲ್ಲಿ ನೆಡುತೋಪನ್ನು ಬೆಳೆಸಲು ಸಸಿಗಳು ಬೇಕಾಗುತ್ತದೆ. ಸದರಿ ಸಸಿಗಳನ್ನು ಬೆಳೆಸಲು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಲಭ್ಯವಿರುವ ಅನುದಾನದಿಂದ ಜೈವಿಕ ಇಂದನ ಕಾರ್ಯಕ್ರಮದಡಿ ಇರುವ "ಬರಡು ಬಂಗಾರ ಮತ್ತು ಹಸಿರು ಹೊನ್ನು" ಎಂಬ ಯೋಜನೆಗಳಲ್ಲಿ ಕೈಗೊಳ್ಳಲು ಅವಕಾಶ ಮಾಡಲಾಗಿರುತ್ತದೆ. ಅರಣ್ಯ ಇಲಾಖೆಯವರು ಸದರಿ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿಗೆ ಹಮ್ಮಿಕೊಂಡಿರುವ ಗುರಿಯಂತೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೂಡಲೇ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅರಣ್ಯ ಇಲಾಖೆಯ ಅಧಿಕಾರಿಗಳ ಸಭೆಯನ್ನು ಕರೆದು, ಚರ್ಚಿಸಿ ಸಮನ್ವಯ ಸಾಧಿಸಿ ಮುಂದಿನ ಕ್ರಮ ಕೈಗೊಳ್ಳಲು ತಿಳಿಸಿದೆ.

ಈಗ ಮುಂಗಾರು ಪ್ರಾರಂಭವಾಗಿರುವುದರಿಂದ ನೆಡುತೋಪು ಬೆಳೆಸುವುದು ಅವಶ್ಯಕವಾಗಿರುತ್ತದೆ. ನೆಡುತೋಪಿನ ಕಾರ್ಯಕ್ರಮವನ್ನು ಮಳೆಗಾಲದಲ್ಲಿ ಕೈಗೊಳ್ಳುವ ಹಿನ್ನಲೆಯಲ್ಲಿ **"ಬರಡು ಬಂಗಾರ ಮತ್ತು ಹಸಿರು ಹೊನ್ನು "** ಯೋಜನೆಗಳನ್ನು ಅನುಷ್ಠಾನಗೊಳಿಸುವ ಪೂರ್ಣ ಮಾಹಿತಿಯನ್ನು ಮುದ್ರಿಸಿ ಕೈಪಿಡಿಯ ಮೂಲಕ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ತಿಳಿಸುವುದು. ಸೂಕ್ತವಾಗಿರುತ್ತದೆ. ಆದುದರಿಂದ, ತಮ್ಮ ಜಿಲ್ಲೆಯಲ್ಲಿ ಇರುವ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿ ಹಾಗೂ ಯೋಜನೆಯಲ್ಲಿ ತೊಡಗಿದ್ದ ಅನುಷ್ಠಾನಾಧಿಕಾರಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಅದಕ್ಕೆ ಅನುಗುಣವಾಗಿ ಕೈಪಿಡಿಗಳನ್ನು ಮುದ್ರಿಸಿ ವಿತರಣೆ ಮಾಡಲು ಕ್ರಮ ಜರುಗಿಸುವುದು. ಇದಕ್ಕೆ ತಗಲುವ ವೆಚ್ಚವನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇ.6ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಲು ತಿಳಿಸಿದೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ಬಳಸಿ ಜೈವಿಕ ಇಂಧನ ಕಾರ್ಯಕ್ರಮದ ನೆಡುತೋಪನ್ನು ಮತ್ತು ಸಸಿಗಳನ್ನು ಬೆಳೆಸಿ ಅನುಷ್ಠಾನಗೊಳಿಸಿರುವ ಕಾರ್ಯವನ್ನು ಈಗಾಗಲೇ ಚಾಲ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಉಸ್ತುವಾರಿ ಸಮಿತಿಯೇ ಈ ಕಾರ್ಯವನ್ನು ಕೂಡ ನಿಯಮಿತವಾಗಿ ಉಸ್ತುವಾರಿ ಮಾಡಿ ನಿರ್ವಹಿಸುವಂತೆ ತಿಳಿಸಿದೆ. 2009–10ನೇಸಾಲಿನಲ್ಲಿ ಈ ಯೋಜನೆಯಡಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಹಾಗೂ ಈ ಯೋಜನೆಯಡಿ ಬಾಕಿ ಉಳಿದಿರುವ ಬಿಲ್ಲುಗಳನ್ನು ತಕ್ಷಣವೇ ಪಾವತಿಸಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 05 ಮಗಾಂಉಖಾಯೋ 2009 ದಿನಾಂಕ : 22–7–2010

**ತಿದ್ದುಪಡಿ**

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಿದ/ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಅಳತೆಯನ್ನು ಅಳತೆ ಪುಸ್ತಕದಲ್ಲಿ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ದಾಖಲಿಸುವ ಬದಲು ವನಪಾಲಕರಿಗೆ ದಾಖಲಿಸಲು ಅಧಿಕಾರವನ್ನು ನೀಡುತ್ತಿರುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 05 ಉಖಾಯೋ 2008 ಬೆಂಗಳೂರು ದಿನಾಂಕ : 6–5–2010

2) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ ಅರಣ್ಯ ಇಲಾಖೆ, ಅರಣ್ಯ ಭವನ, ಬೆಂಗಳೂರು ಇವರ ಪ್ರಸ್ತಾವನೆಯ ಸಂಖ್ಯೆ ಬಿ6/ ಎನ್ ಆರ್ ಇಜಿಎಸ್/ಸಿಆರ್ – 6/2010–11 ದಿನಾಂಕ: 29–6–2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರಲ್ಲಿ, ಅರಣ್ಯ ಇಲಾಖೆಯವರು ಮಂಡಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಉಲ್ಲೇಖ(1)ರಲ್ಲಿ ಹೊರಡಿಸಿರುವ ದಿನಾಂಕ : 6–5–2010ರ ಆದೇಶದಲ್ಲಿ ಕಾಮಗಾರಿಗಳ ಅಳತೆಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಸಂಬಂಧ, ಕೋಷ್ಠಕದಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ, ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು ಎನ್ನುವ ಬದಲು ವನಪಾಲಕರೆಂದು ಓದಿಕೊಳ್ಳತಕ್ಕದ್ದು ಮತ್ತು ಈ ಅದೇಶವು ತಕ್ಷಣದಿಂದಲೇ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯ ಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ **ಬೆಂಗಳೂರು**.

ಗೆ:

1. ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ.
2. ಸಂಕಲಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳೂ/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರುಗಳೂ/ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

. 1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಬೆಂಗಳೂರು
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ ಮೈಸೂರು/ಗುಲ್ಬರ್ಗಾ/ ಬೆಳಗಾಂ.
7. ರಾಜ್ಯದ ಎಲ್ಲಾ ಅಧಿಕಾರಿಗಳು.
8. ರೇಷ್ಮೆ ಅಭಿವೃದ್ಧಿ ಆಯುಕ್ತರು, ಬಹುಮಹಡಿ ಕಟ್ಟಡ ಬೆಂಗಳೂರು.
9. ಆಯುಕ್ತರು, ಕಾರ್ಮಿಕ ಇಲಾಖೆ ಕಛೇರಿ ಭವನ ಬನ್ನೇರುಘಟ್ಟ ರಸ್ತೆ, ಬೆಂಗಳೂರು.
10. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
11. ಆಯುಕ್ತರು, ಪಶುಸಂಗೋಪನಾ ಇಲಾಖೆ, ಬೆಂಗಳೂರು.
12. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
13. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು.
14. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ ಮಲ್ಲೇಶ್ವರಂ, ಬೆಂಗಳೂರು
15. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
16. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಬೆಂಗಳೂರು
17. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರು
18. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
19. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
20. ಹೆಚ್ಚಿನ ಪ್ರತಿಗಳು/ ರಕ್ಷಾ ಕಡತ.

ಅನುಸರಣೆ

## ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 02 ಮಗಾಂಉಖಾಯೋ 2010      ದಿನಾಂಕ : 23–08–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ನಿರ್ಮಾಣ ಮಾಡುವ ಬಗ್ಗೆ

ಉಲ್ಲೇಖ: ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 02(ಆಶಾ) ಉಖಾಯೋ 2010 ದಿನಾಂಕ:11–5–2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ವ್ಯವಹರಿಸಿದ ಪತ್ರದ ಕಡೆ ಗಮನ ಸೆಳೆಯಲು ಕೋರಿದೆ. ಸದರಿ ಪತ್ರದಲ್ಲಿ, ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ನಿರ್ಮಿಸುವುದಾದರೆ ರೂ. 10.00 ಲಕ್ಷ ಮತ್ತು ತಾಲ್ಲೂಕು ಮಟ್ಟದಲ್ಲಿ ನಿರ್ಮಿಸುವುದಾದರೆ ರೂ. 25.00 ಲಕ್ಷ ಅನುದಾನವನ್ನು MGNREGS ಅನುದಾನದಿಂದ ಬಳಸಬಹುದಾಗಿರುತ್ತದೆಂದು ಹಾಗೂ ಸಾಮಾಗ್ರಿ ಭಾಗ ಹೆಚ್ಚಾದಲ್ಲಿ, ಹೆಚ್ಚಾದ ಮೊತ್ತವನ್ನು ಆಡಳಿತ ವೆಚ್ಚದ ಉಳಿತಾಯ ಮೊತ್ತದಲ್ಲಿ ಭರಿಸಬಹುದೆಂದು ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಸೇವಾ ಕೇಂದ್ರ ಕಟ್ಟಡಗಳ ನಿರ್ಮಾಣದ ಕೂಲಿ ಮತ್ತು ಸಾಮಾಗ್ರಿಗಳ ವೆಚ್ಚವನ್ನು ಒಟ್ಟಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ವೆಚ್ಚದ ಕೂಲಿ ಮತ್ತು ಸಾಮಾಗ್ರಿ ಬಾಬ್ತಿನ 60:40ರ ಅನುಪಾತವನ್ನೇ ಪಾಲನೆ ಮಾಡಿ ನಿರ್ಮಿಸಿರುವುದು ಕಡ್ಡಾಯವಾಗಿರುತ್ತದೆ. ಆದರೆ ನಿರ್ಮಾಣವಾದ ಸೇವಾ ಕೇಂದ್ರಗಳಲ್ಲಿ, ICT ಸೌಲಭ್ಯಗಳನ್ನು ಒದಗಿಸುವ ಸಂಬಂಧ ಆಗುವ ವೆಚ್ಚವನ್ನು ಯೋಜನೆಯ ಶೇಕಡಾ 6 ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸಬಹುದಾಗಿರುತ್ತದೆ. ಅದರಂತೆಯೇ, ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 65 ಮಗಾಂಉಖಾಯೋ 2008 ದಿನಾಂಕ : 30–08–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣೀಕರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಕಾಲದಲ್ಲಿ ಅನುದಾನ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಅರಣ್ಯ ಇಲಾಖೆ, ಅರಣ್ಯ ಭವನ ಇವರ ಪತ್ರದ ಸಂಖ್ಯೆ ಬಿ6/NREGA/ಸಿಆರ್ 6/2010–11 ದಿನಾಂಕ : 23–07–2010

* * *

ಅರಣ್ಯ ಕಾಮಗಾರಿಗಳು, ಋತುಮಾನಾಧಾರಿತ ಕಾಮಗಾರಿಗಳಾಗಿ, ಅವುಗಳನ್ನು ಸಕಾಲದಲ್ಲಿ, ಅನುಷ್ಠಾನಗೊಳಿಸಲು ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದ್ದು, ಅನುದಾನವನ್ನು ಕಾಮಗಾರಿಗಳಿಗೆ ಸಕಾಲದಲ್ಲಿ ಬಿಡುಗಡೆಗೊಳಿಸಲು, ಉಲ್ಲೇಖದಲ್ಲಿ ಅರಣ್ಯ ಇಲಾಖೆಯವರು, ಕಾರ್ಯಸೂಚಿಯ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ಸದರಿ ಕಾರ್ಯಸೂಚಿಯ ವೇಳಾ ಪಟ್ಟಿಯನ್ನು ಕಾಮಗಾರಿಗಳ ಅನುಷ್ಠಾನದಲ್ಲಿ ಯಥಾವತ್ತಾಗಿ ಅಳವಡಿಸಿಕೊಂಡು ಅನುಸರಿಸಲು, ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸುವಂತೆ ಕೋರಿಕೊಂಡಿರುತ್ತಾರೆ.

ಆದ ಪ್ರಯುಕ್ತ, ಈ ಸಂಬಂಧ ಯೋಜನೆಯಡಿ ಅರಣ್ಯ ಇಲಾಖಾ ಕಾಮಗಾರಿಗಳನ್ನು ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡಿದ್ದಲ್ಲಿ, ಸದರಿ ಕಾಮಗಾರಿಗಳನ್ನು ನಿಗದಿತ ಕಾಲದಲ್ಲಿ ಅನುಷ್ಠಾನಗೊಳಿಸುವುದು ಪ್ರಮುಖವಾಗಿರುತ್ತದೆ. ಆದ ಕಾರಣ ಈ ಕುರಿತು ಅರಣ್ಯ ಇಲಾಖೆ ನೀಡಿರುವ ವೇಳಾಪಟ್ಟಿಯ ಪ್ರತಿಯನ್ನು ಇದರೊಂದಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ. ಅದರಂತೆಯೇ, ಕ್ರಮವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ) ಅರಣ್ಯ ಭವನ ಅರಣ್ಯ ಇಲಾಖೆ, ಮಲ್ಲೇಶ್ವರಂ. ಬೆಂಗಳೂರು ಇವರ ಉಲ್ಲೇಖದ ಪತ್ರದನುಸಾರ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮೇಲಿನಂತೆ ಕ್ರಮ ವಹಿಸಲು ಸೂಚಿಸಿರುವ ವಿಷಯವನ್ನು ಮಾಹಿತಿಗಾಗಿ ಕಳುಹಿಸಿದೆ.

# CALENDAR OF FORESTRY OPERATIONS

## Calendar of field operations :

## A. SEED BEDS

| Sl. No | Description of works | Quantity or dimension analyzed or prescribed | Calendar of Operation | Remarks |
|---|---|---|---|---|
| 1 | 2 | 3 | 4 | 5 |
| 1 | Collection of Red earth, sand and farm yard manure and stocking the same in the nursery site before check measurement | Red earth 0.50 M3/bed<br>Sand 0.50 M3<br>F.Y.M 0.25 M3 | **May and Sept. end** | |
| 2 | Digging the soil into a depth of 30 and removing the spent soil in equivalent to part, breaking the clods pulverizing the soil and forming the surface of the bed after evenly mixing the prescribed ingredients like the red earth, sand and manure and finishing the four sides with bunds with clay by manual labour. | 12.19m x 1.21m<br>40.ft. x 4 ft.<br>(sunken beds) | **By 15 Oct.**<br>**15$^{th}$ June** | |
| 3 | Sowing Eucalyptus hybrid seeds admixed with sand evenly broadcast on the surface and covering the same with a thin layer of straw | Half Kg.per standard bed or more if the seeds have lower viability | **By 1$^{st}$ November** | |
| 4 | Weeding the nursery beds | Thrice | **In maximum of 90 days** | |
| 5 | Watering the seed beds by manual labour using the rose cans | Twice a day depending upon the weather | **From the date of sowing till a majority of the seedlings are utilized or till the beds are abandoned** | |

## B. (1) RAISING POLYTHENE BAG SEEDLINGS 7 MAINTAINING TILL END OF MARCH

| | | | | |
|---|---|---|---|---|
| 1 | Procurement of polythene bags from Karnataka State Forest Industries Corporation as per orders issued from superiors | 0.127m x 0.203m (equivalent to 5" X 8") 200 Guage | **By May** | |
| 2 | Collection of Red earth, sand and farm yard manure and stocking the same in the nursery site before check measurement. | Red earth – As per SSR<br>Sand – per 1000<br>Manure – bags 5"x8" | **May end and Sept. end** | |
| 3 | Clearing the ingredients and micing the same into and even mixture and filling the same into polythene bags or earthen pots etc., and arranging them in systematic parallel lines in groups of 500 each | | **June. 15th**<br>**Oct. 15th**<br>**Dec. 31st** | Sowing whenever seeds are available regular nursery works Eucalyptus /Casuarina |
| 4 | a) Sowing of Miscllaneous seeds which are relatively slower growing like A. auriculiformis, Tamarind, Hippe, Neral, Bage, Raintree, See hunse, Seethapal, Seemethangadi | Pretreatment whenever necessary should be done for sowing | **Whenever seeds are available** | In case of two or three seeds sowm resulting in two or three seedlings in a polythene bag they should be singled out in the early stages. |
| | b) Other miscellaneous species like subabul, Goldmohur, Mango, Halasu | Pretreatment whenever necessary should be done for sowing | **To be completed 15th September** | In case of two or three seeds sown resulting in 2 or 3 seedlings in a polythene bag they should be singled out in the early stages |
| | c) Neem and Glyricidia | -do- | **May or June** | Neem seedlings (sown in May-June) are to be used during the next year. |

| | | | | |
|---|---|---|---|---|
| 5 | Pricking out Eucalyptus seedlings from seeds beds into polythene bags | -do- | **To be completed within 3st Jan** | |
| 6 | Weeding in polythene bags | To be constantly kept clear of weeds as and when weeds appear | | |
| 7 | Shfting and grading of polythene bags (for items 4(a) and 4(b) | One shifting to be attended normally two nonths after planting or sowing. There after shifting to be done once in a month | **Depending on growth if individual species.** | |

## B.(2) MAINTENANCE OF POLYTHENE BAGS FROM 1st APRIL TILL THEY ARE UTILISED

| | | | | |
|---|---|---|---|---|
| | | | | |
| | | | | |
| | | | | |

### C. ADVANCE TRENCHING, PLANTING AND MAINTENANCE

**(Trench size 4x0. 40x0. 40m 8m apart in between tenches 60cms cubs pits to be dug surrounded trenches and agave trenches)**

| | | | | |
|---|---|---|---|---|
| 1 | Inspection of areas for raising plantations selection by Range Forest Officer for the next rains plantinf. | | **By May of previous year** | Or as per provisions in the scheme |
| 2 | Preparing of treatment map by the Range Forest Officer and submission to the Divisionak Forest Officer in duplicate | | **-do-** | - |
| 3 | Inspection by Dy. Conservator of Forests or Asst. Conservator of Forests of the proposed treatment and the site | 1. Mechanised treanching or pitting.<br>2. Typing of soils to be indicated on a map.<br>3. Treatment for soil working indicated.<br>4. Planning for nursery seedlings and seeds. | **By May of previous year.** | - |
| 4 | On approval by Dy.Conservator of Forests for the choice of site and the treatment proposed in writing under copies submitted to Conservator of Forests, Bellary. | The Deputy Conservator of Forests when and where found necessary shall make changes in the treatment proposed, on technical and economic considerations. | **-do-** | One copy of approved treatment map duly signed with date to be returned to R.F.O. |
| 5 | Survey of area. | - | June of Previous | - |
| 6 | Trenching of size 60x40 cms along the boundary and planting of above and sowing of P.J.seeds. | - | | |

| | | | | |
|---|---|---|---|---|
| 7 | Calling for tenders for trenching work and indenting for polythene bags. | A clause towards food component to be given should be incorporated in tender notice. | April first week. | To be procured from rate constract agency the KSFIC. Bangalore |
| 8 | Acceptance of tenders | - | By June end | - |
| 9 | Issue of work order | - | By 4th week of June | - |
| 10 | Execution and completion of trenching work by Contractor or in lieu of it, departmentally | Size 4M x 0.4M x 0.4M on contour with an uncut wedge of ½ mtr. In between the adjacent trenches. | By August to January next year (During August & Sept. trenching to be done in g\hard & stony areas). | |
| 11 | Calling for tenders for half refilling of trenches. | A clause towards food component to be given should be incorporated in tender notice. | By 15th February | - |
| 12 | Finalising the above tenders. | By 5ht March | - | - |
| 13 | Finalising the above tenders. | - | By 5th March | - |
| 14 | Issue Of work orders | - | By 21st March | - |
| 15 | Execution of refilling trenches | After churning and mixing the heaped earth half refilling to be done. | 1st April to 15th May. | - |

| | | | | |
|---|---|---|---|---|
| 16 | Sowing of seeds. | Dibbling species wise 25 to 30 cms apart in line 4 kg per feet. | **1st week of June and it should be continued up to August if the germination is poor in the I or II installment of Sowing.** | No pretreatment should be done when sowing is done in insufficient moist soils. |
| 17 | Transportation of P.B.seedlings from nursery to site and planting in trenches on the refilled cushion of earth. | To be completed in the shortest possible time preferably with in 24 hours of the receipt of rainfall. | **During June and July on receipt of rains. Watering to be done when rains are insufficient at the time of planting or backing shower inadequate after planting.** | Planting and organizing the planting work with maximum Labour is a must to achieve maximum percentage of success. |
| 18 | Fertiliser, manure and insecticides application. | At the time of planting or 15 to 20 days after planting. | **July-August** | - |
| 19 | Replacement of casualities | About 20 days after the main planting | **July-August** | - |
| 20 | Weeding | July-August | **-** | - |
| 21 | Watering during and after planting one at the time or planting if the rains are in adequate backing showers, at an interval of about seven days. | 3 watering may be given, July-August. | **-** | - |
| 22 | Weeding cum-soil working | - | **Sept.-Oct** | - |

| | | | | |
|---|---|---|---|---|
| 23 | | 1 mtr on either side of trenches (Grass cutting to be dine in case where scrapping cannot be done in view of rocky nature of the soil) | **Oct-Nov.** | - |
| 24 | | - | **December** | - |
| 25 | | - | **By Decemeber** | - |
| 26 | | - | - | - |

D:\2010/B6/Calender of Forestry Operations. Doc.

# List of Grampanchayaths

| SL | District | Taluk | GP | Smart card issued |
|---|---|---|---|---|
| 1 | Chitradurga | Hiriyur | Adivala | 1140 |
| 2 | Chitradurga | Hiriyur | Babbura | 1055 |
| 3 | Chitradurga | Hiriyur | Hosayalandu | 1042 |
| 4 | Chamarajanagar | Yellandur | Ambale | 1071 |
| 5 | Chamarajanagar | Yellandur | Gowadahalli | 2154 |
| 6 | Chamarajanagar | Yellandur | Gumballi | 1618 |
| 7 | Chamarajanagar | Yellandur | Kesthoour | 1350 |
| 8 | Bellary | Bellary Rural | Kallukamba | 1411 |
| 9 | Bellary | Bellary Rural | Kurugodu | 2644 |
| 10 | Bellary | Bellary Rural | Sindigeri | 1900 |
| 11 | Bellary | Bellary Rural | Siddammanahalli | 2460 |
| 12 | Bellary | Bellary Rural | Badanahatti | 1255 |
| 13 | Bellary | Bellary Rural | Kolagallu | 2507 |
| 14 | Bellary | Bellary Rural | Kolur | 1447 |
| 15 | Bellary | Bellary Rural | Dammur | 1049 |
| 16 | Bellary | Bellary Rural | Sanganakallu | 2017 |
| 17 | Bellary | Bellary Rural | Sirivara | 1435 |
| 18 | Bellary | Bellary Rural | Kappagal | 1644 |
| 19 | Bellary | Bellary Rural | Amarapura | 1768 |
| 20 | Dharwad | Kundgol | Harlapura | 1050 |
| 21 | Dharwad | Kundgol | Kamadolli | 1012 |
| 22 | Dharwad | Kundgol | Shirurs | 1124 |

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 199 ಮಗಾಂಉಖಾಯೋ 2009 ದಿನಾಂಕ : 30–08–2010

ಗೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ
ಶಿವಮೊಗ್ಗ

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯಡಿ ಹಸಿರುಹೊನ್ನು ಕಾರ್ಯಕ್ರಮವನ್ನು ಎಪಿಎಲ್ ಫಲಾನುಭವಿಗಳ ಜಮೀನು/ ಜಮೀನು ಬದುಗಳಲ್ಲಿ ಸಸಿಗಳನ್ನು ನೆಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: (1) ತಮ್ಮ ಪತ್ರದ ಸಂಖ್ಯೆ ಜಿಪಶಿ/ರಾಗ್ರಾಉಖಾಯೋ ಹಸಿರುಹೊನ್ನು/2010–11 ದಿನಾಂಕ: 7–7–2010

(2) ಸರಕಾರದ ಪತ್ರ ಸಂಖ್ಯೆ ಗ್ರಾಅಪ 08 ಮಗಾಂಉಖಾಯೋ 2008 ದಿನಾಂಕ: 6/12–8–2010.

(3) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು (NREGS) ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ J–11017/26/2008. MGNREGA(UN) ದಿನಾಂಕ: 12–08–2010

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಸರ್ಕಾರದಿಂದ ಉಲ್ಲೇಖ (2)ರಲ್ಲಿ ಗಿಡಗಳನ್ನು ನೆಡುವ ಅರಣ್ಯೀಕರಣದ ಕಾಮಗಾರಿಗಳನ್ನು ಸಾರ್ವಜನಿಕರ ಸ್ಥಳಗಳಲ್ಲದೇ, ಎಲ್ಲಾ ವರ್ಗದ ರೈತರ ಜಮೀನಿನಲ್ಲಿ ಹಾಗೂ ಜಮೀನಿನ ಬದುಗಳಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡು ನಿರ್ವಹಿಸಬಹುದಾಗಿದೆ. ಎಂದು ತಿಳಿಸಿರುವುದು ಸರಿಯಷ್ಟೇ. ಈಗ ಉಲ್ಲೇಖ (3)ರಲ್ಲಿ ಕೇಂದ್ರ ಸರ್ಕಾರವು MGNREGA ಮತ್ತು IWMP ಯೋಜನೆಯನ್ನು ಒಗ್ಗೂಡಿಸಿಕೊಂಡು ಯಾವ ರೀತಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು ಎಂಬುದರ ಬಗ್ಗೆ ಮಾರ್ಗಸೂಚಿಯನ್ನು ನೀಡಿದ್ದು, ಅದರನ್ವಯ ಪುಟ ಸಂಖ್ಯೆ (3)ರಲ್ಲಿನ ಬರಾಗಾಲ ತಡೆಗಟ್ಟುವಿಕೆ ಚಟುವಟಿಕೆಯಡಿ ಕ್ರಮ ಸಂಖ್ಯೆ(b) ನಲ್ಲಿ, SC/ST/BPL/SF/MF/LR/IAY ಫಲಾನುಭವಿಗಳನ್ನು ಒಳಗೊಂಡಂತೆ, ಯಾವುದೇ ರೈತರ ವೈಯಕ್ತಿಕ ಜಮೀನಿನಲ್ಲಿ ಗಿಡ ನೆಡುವಿಕೆ ಚಟುವಟಿಕೆಗಳನ್ನು(Boundary Plantation or Agro Forestry) ಕೈಗೊಂಡಲ್ಲಿ ಸದರಿ ಚಟುವಟಿಕೆಗಳನ್ನು IWMP ನಡಿ ಕೈಗೊಳ್ಳುವಂತೆ ತಿಳಿಸಿದೆ. ಕೆಂದ್ರ ಸರ್ಕಾರವು ಇದರ ಸಂಬಂಧ ನೀಡಿರುವ ಮಾರ್ಗ ಸೂಚಿಗಳ ಪ್ರತಿಯನ್ನು ಮುಂದಿನ ಮಾರ್ಗದರ್ಶನಕ್ಕಾಗಿ ಹಾಗೂ ಅದರಂತೆಯೇ,

ಕ್ರಮವಹಿಸಲು ಇದರೊಂದಿಗೆ ಲಗತ್ತಿಸಿದೆ. ಈ ಸಂಬಂಧ ಸರ್ಕಾರದಿಂದ ಉಲ್ಲೇಖ (2)ರಲ್ಲಿ ಹೊರಡಿಸಿರುವ ಆದೇಶವನ್ನು ಕೇಂದ್ರ ಸರ್ಕಾರವು ಹೊರಡಿಸಿರುವ ಉಲ್ಲೇಖ (3)ರ ಮಾರ್ಗ ಸೂಚಿಗಳನ್ವಯ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಈ ಮೂಳಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಯಥಾ ಪ್ರತಿಯನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಮತ್ತು ಇದರಂತೆಯೇ, ಅನುಸರಿಸಿ, ಕ್ರಮವಹಿಸಲು ಸೂಚಿಸಿದೆ.

ಅನಸೂ ರಾಗ್ರಸಂಪ್ಪ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 122 ಮಗಾಂಉಖಾಯೋ 2008 ದಿನಾಂಕ : 13–09–2010

**ಸುತ್ತೋಲೆ**

ವಿಷಯ: ಬೇಡಿಕೆಯನುಸಾರ, ಕಾಮಗಾರಿಗಳ ಯೋಜನೆಯನ್ನು ಗ್ರಾಮ ಸಭಾ ಮತ್ತು ವಾರ್ಡ್ ಸಭಾ ಶಿಫಾರಸ್ಸುಗಳ ಮೇಲೆ ತಯಾರಿಸಿದ, ಗ್ರಾಮ ಪಂಚಾಯತ್‌ಗಳಿಂದ ಅನುಮೋದಿಸಿಕೊಂಡು, ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶಕರು (MGNREGS) ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ ಏ–11033/48/10–MGNREGS ದಿನಾಂಕ:16–08–2010

* * *

ಕೇಂದ್ರ ಸರ್ಕಾರ ಹೊರಡಿಸಿರುವ ಕಾರ್ಯಾಚರಣೆಯ ಮಾರ್ಗಸೂಚಿಗಳನ್ವಯ ಮತ್ತು ಅಧಿನಿಯಮದನ್ವಯ, ಸೂಚಿಸಿರುವ ಅರ್ಹತಾ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದು, ಅನುಷ್ಠಾನಾಧಿಕಾರಿಗಳ ಕರ್ತವ್ಯಗಳಾಗಿದ್ದು. ಕೆಲವೊಂದು ಸಂದರ್ಭಗಳಲ್ಲಿ ಅನುಷ್ಠಾನಾಧಿಕಾರಿಗಳು, ಮಾರ್ಗಸೂಚಿಗಳಲ್ಲಿ ಸೂಚಿಸದೆ ಇರುವ ಮತ್ತು ಗ್ರಾಮಪಂಚಾಯತ್‌ಗಳಿಂದ ಕ್ರಿಯಾ ಯೋಜನೆಗಳಲ್ಲಿ ಸೇರಿಕೊಂಡು, ಅನುಮೋದಿಸಿಕೊಳ್ಳದೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಪ್ರಸಂಗಗಳು, ಸರ್ಕಾರದ ಗಮನಕ್ಕೆ ಬರುತ್ತಿವೆ. ಅನುಷ್ಠಾನಗೊಳಿಸುವ ಇಂತಹ ಕಾಮಗಾರಿಗಳು, ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುತ್ತದೆ. ಮತ್ತು ಉಲ್ಲಂಘನೆಯಾಗುತ್ತದೆ. ಇಂತಹ ಪ್ರಸಂಗಗಳನ್ನು ಕೇಂದ್ರ ಸರ್ಕಾರವು ಗಂಭೀರವಾಗಿ ಪರಿಗಣಿಸುವುದು. ಮತ್ತು ಇಲ್ಲ ಸಲ್ಲದ ಆಕ್ಷೇಪಣೆಗಳಿಗೆ ಗುರಿಯಾಗುವ ಪರಿಸ್ಥಿತಿ ಒದಗಿ ಬರುತ್ತದೆ.

ಆದ್ದರಿಂದ ಈ ಸಂಬಂಧ, ಉಲ್ಲೇಖಿತ ಪತ್ರದಲ್ಲಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಅನುಷ್ಠಾನಾಧಿಕಾರಿಗಳ ಪಾತ್ರ ಮತ್ತು ಕರ್ತವ್ಯಗಳ ನಿರ್ವಹಣೆ ಹಾಗೂ ಗ್ರಾಮ ಪಂಚಾಯತಿಗಳು ತಯಾರಿಸಲಾದ ಅಭಿವೃದ್ಧಿ ಯೋಜನೆಗಳಲ್ಲಿನ ಅನುಮೋದಿತ ಕಾಮಗಾರಿಗಳ ಗುಚ್ಛಗಳನ್ನು ಮಾತ್ರ ಕೂಲಿಕಾರರ ಬೇಡಿಕೆಗೆ ಅನುಸಾರ ಅನುಷ್ಠಾನಗೊಳಿಸಲು ಮತ್ತು ಈ ವಿಷಯಗಳನ್ನು ಉಲ್ಲಂಘಿಸಿ ಯಾವುದೇ ಕೇಂದ್ರಿಕೃತ ಸೂಚನೆಗಳನ್ನು/ನಿರ್ದೇಶನಗಳನ್ನು ನೀಡದಂತೆ ತಿಳಿಸಿದೆ. ಸದರಿ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಅದರಂತೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್.ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

**Satyendra Kunar Singh**
Ditector (Mahatma Gandhi NREGA)
Tel fax: 23388431.

Ministry of Rural Development
Deptt. Of Rural Daevelopment
Government of India
Krishi Bhavan, New Delhi – 110 00

D.O.No. K-11033/48/10-MGNREGA Date : 16th August, 2010

Dear Sir/ Madam

Of late some instances have come to the notice of this Ministry where general circulars have been issued by some State Government to its District Programme Coordinators or other officers instructing them to undertake a particular work all over the State.

2. You are requested to please ensure that no such centralized instructions are issued which involve violations of provisions of Mahatma Gandhi NREGA Act regarding the role and responsibility of the implementing agencies, especially that responsibility of Gram Panchayats that every GP shall, after, considering the recommendations of the Gram Sabha and the Ward Sabha, prepare a development plan and maintain a shelf of possible works to be taken up under the Scheme as and when demand for work arises.

Yours sincerely
Sd/-
**(Satyendra Kumar Singh)**

**No.M-12016/1/2010-MGNREGA**
**Government of India**
**Ministry of Rural Development**
**(Mahatna Gandhi NREGA Division)**

Krishi Bhavan, New Delhi- 110114
Dated : 13the September, 2010

To,

The Principal Secretary/Secretary (RD)
(In-charge, Mahatma Gandhi NREGA)
All States and UTs

Sir/Madam,

Ministry of Rural Development has issued convergence guidelines for Mahatma Gandhi NREGS with the Schemes and programmes of Ministry of Environment & Forests, Ministry of Water Resources, of Agriculture and Department of Land Resourecs.

2. Section 13(1) of Mahatma Gandhi NREGA provides that the Panchayats at District, Intermediated and Village levels shall be the principal authorities for planning and implementation of the Scheme made under this Act. Section 16(1) provides that the Gram Panchayat shall be responsible for identification of the projects in the Gram Panchayat area will be taken up under the Scheme as per the recommendation of Gram Sabha and the Ward Sabha and for executing and supervising such works.

3. The Convergence Guideline conceptualise as coming together of existing schemes and resources rather that the creating of a new Scheme with additional resources. The Convergence Guidelines are based on the promise that the fund of Mahatma Gandhi NREGA should not be utilized as a substitute of Departmental Plan funds of different departments and agencies. Funds from other progrannes for the works permissible under Mahatma Gandhi NREGS can be dovetailed with Mahatma Gandhi NREGA funds, but not vice a versa. These aspects need to be taken care of in the perspective plan.

4. In the light of above factual position, it is pointed out that funds under MGNREGA can not be earmarked for any other State/Centre Scheme even if it is for the works permissible under Mahatma Gandhi NREGA e.g. funds under MGNREGA can not be earmarked for National Rural Drinking Water Parogramme of Govt. of India. All works

undertaken under convergence guidelines have to be necessarily taken up under MGNREGA complyning with the relevant provisions of the Act as indicated in above para.

1. The Ministry is Convergence Guidelines may be adhered to in all respects.

Yours faithfully
Sd/-
**(S.K.Singh)**
Director (MGNREGA),
Tel : 23388431

**ಕರ್ನಾಟಕ ಸರ್ಕಾರ**

ಸಂಖ್ಯೆ:ಗ್ರಾಅಪ: 65 ಉಖಾಯೋ : 08

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 15–09–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2009–10ನೇ ಸಾಲಿನಲ್ಲಿ ಬೆಳೆಸಿರುವ ಸಸಿಗಳನ್ನು 2010–11ನೇ ಸಾಲಿನಲ್ಲಿ ನಾಟಿ ಮಾಡುವ ಬಗ್ಗೆ.

ಉಲ್ಲೇಖ: ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎನ್‌ಆರ್‌ಇಜಿಎಸ್), ಅರಣ್ಯ ಇಲಾಖೆ, ಅರಣ್ಯ ಭವನ, ಬೆಂಗಳೂರು ಇವರ ಪತ್ರದ ಸಂ.ಬಿ6/ ಎನ್‌ಆರ್‌ಇಜಿಎಸ್/ಸಿಆರ್–6/2010–11 ದಿನಾಂಕ: 27–8–2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಅರಣ್ಯ ಇಲಾಖೆಯವರು, 2009–10ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯದಾದ್ಯಂತ ಒಟ್ಟು ಸುಮಾರು 6 ಕೋಟಿ ಸಸಿಗಳನ್ನು ಬೆಳೆಸಿಕೊಂಡಿದ್ದು, ಅವುಗಳನ್ನು 2010–11ನೇ ಸಾಲಿನಲ್ಲಿ ಕಡ್ಡಾಯವಾಗಿ ನಾಟಿ ಮಾಡಲು ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತಾರೆ. ಎಂದು ಸರ್ಕಾರಕ್ಕೆ ವರದಿ ಮಾಡಿದ್ದು, ತತ್ಸಂಬಂಧ, ಈಗಾಗಲೇ ಸಸಿಗಳನ್ನು ಪ್ರಸ್ತುತ ಸಾಲಿನಲ್ಲಿ ನಾಟಿ ಮಾಡಲು, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಕ್ರಿಯಾ ಯೋಜನೆಗಳನ್ನು ಮಂಜೂರಾತಿಗಾಗಿ ಕಳುಹಿಸಿದ್ದು, ಅವುಗಳಲ್ಲಿ ಬಹುತೇಕ ಗ್ರಾಮ ಪಂಚಾಯತಿಗಳು, ಕ್ರಿಯಾಯೋಜನೆಗೆ ಮಂಜೂರಾತಿಯನ್ನು ಈವರೆಗೂ ನೀಡಿರುವುದಿಲ್ಲವೆಂದು, ಇದರ ತತ್ಫಲಿತ, ಸಸಿಗಳನ್ನುನಾಟಿ ಮಾಡಲು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧ್ಯವಾಗದೇ ಹಾಳಾಗುವ ಸಂಭವವಿರುತ್ತದೆ ಎಂದು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಈ ಸಂಬಂಧ ಜರೂರು ಪರಿಶೀಲಿಸಿ ಅನುಮೋದಿತ ಕ್ರಿಯಾಯೋಜನೆಗಳನ್ವಯ ಆದ್ಯತೆ ಮೇರೆಗೆ ಸದರಿ ಕಾಮಗಾರಿಯನ್ನು ಯೋಜನಾ ಮಾರ್ಗಸೂಚಿಗಳನ್ವಯ ಬೇಡಿಕೆಗೆ ಅನುಗುಣವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು** ಮುಖ್ಯ ಅರಣ್ಯ ಅಧಿಕಾರಿ (ಎನ್‌ಆರ್‌ಇಜಿಎಸ್), ಅರಣ್ಯ ಇಲಾಖೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇವರ ಪತ್ರದ ದಿನಾಂಕ : 27–08–2010 ಅನುಸಾರ, ಕ್ರಮವಹಿಸಿ, ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

**ಸಂ: ಗ್ರಾಅಪ 108 ಮಗಾಂಉಖಾಯೋ 2009** **ದಿನಾಂಕ : 23–09–2010**

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಮಿಕ ಮುಂಗಡ ಪತ್ರದ ಆಯವ್ಯಯ ಹಾಗೂ ಕಾಮಗಾರಿಗಳ ಗುಚ್ಛಕ್ಕೆ ಅನುಮೋದನೆ ನೀಡುವ ಕುರಿತು.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಯೋಜನೆಯ ಕಾರ್ಮಿಕ ಮುಂಗಡ ಪತ್ರದ ಆಯವ್ಯಯ ಹಾಗೂ ಕಾಮಗಾರಿ ಗುಚ್ಛಕ್ಕೆ ಗ್ರಾಮ ಪಂಚಾಯತಿಯು ಅನುಮೋದನೆಗೆ ಕುರಿತಂತೆ ವಿವರವಾಗಿ ಕೇಂದ್ರ ಸರ್ಕಾರವು ಹೊರಡಿಸಿರುವ ಯೋಜನಾ ಅನುಷ್ಠಾನದ ಮಾರ್ಗಸೂಚಿಗಳ ಕೈಪಿಡಿಯ ಕಂಡಿಕೆ 4.4ರಲ್ಲಿ ತಿಳಿಸಿರುತ್ತದೆ. ಸದರಿ ಕಂಡಿಕೆಯಲ್ಲಿ ತಿಳಿಸಿರುವಂತೆ, ಗ್ರಾಮ ಸಭೆಗಳಿಂದ ಶಿಫಾರಸ್ಸು ಮಾಡಿದ ಕಾಮಗಾರಿಗಳ ಗುಚ್ಛಕ್ಕೆ ಗ್ರಾಮ ಪಂಚಾಯತಿಯು ಅನುಮೋದನೆ ನೀಡಿ ತಾಲ್ಲೂಕು ಪಂಚಾಯತಿಗೆ ಸಲ್ಲಿಸಬೇಕಾಗಿರುತ್ತದೆ. ತದ ನಂತರ ತಾಲ್ಲೂಕು ಪಂಚಾಯತಿ ಅನುಮೋದನೆ ನೀಡಿ ಜಿಲ್ಲಾ ಪಂಚಾಯತಿಯ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ. ಈ ಪ್ರಕ್ರಿಯೆಗಳನ್ನು ಅನುಸರಿಸಲು ನಿರ್ದಿಷ್ಟ ಕಾಲಾವಧಿಯನ್ನು ಕೇಂದ್ರ ಸರ್ಕಾರವು ನಿಗದಿ ಪಡಿಸಿರುತ್ತದೆ. ಸದರಿ ನಿಗದಿತ ಕಾಲಾವಧಿಯಲ್ಲಿ ತಾಲ್ಲೂಕು ಪಂಚಾಯತಿ ಆಗಲಿ ಅಥವಾ ಜಿಲ್ಲಾ ಪಂಚಾಯತಿ ಆಗಲಿ ಅನುಮೋದನೆ ನೀಡಲು ವಿಫಲರಾದಲ್ಲಿ ಸಂಬಂಧ ಪಟ್ಟ ಕಾರ್ಯಕ್ರಮ ಅಧಿಕಾರಿ (EO) ಅಥವಾ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ (CEO) ಅವರು ಸದರಿ ಕಾರ್ಮಿಕ ಮುಂಗಡ ಪತ್ರದ ಆಯವ್ಯಯ ಹಾಗೂ ಕಾಮಗಾರಿಗಳ ಗುಚ್ಛವನ್ನು "Deemed to be approved" ಎಂದು ತಿಳಿದು ಯೋಜನಾ ಅನುಷ್ಠಾನಕ್ಕೆ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಆದ ಕಾರಣ ಜಿಲ್ಲೆಗಳಲ್ಲಿ ಯೋಜನೆಯಡಿ ನೋಂದಾಯಿತ ಕೂಲಿ ಕಾರ್ಮಿಕರು ಉದ್ಯೋಗ ಕೇಳಿ ಅರ್ಜಿ ಸಲ್ಲಿಸಿದ ಅನುಷ್ಠಾನಕ್ಕೆ ಯಾವುದೇ ಅನುಮೋದಿತ ಕಾಮಗಾರಿಗಳು ಲಭ್ಯವಿಲ್ಲವೆಂದು ಕಾರಣ ನೀಡಿ ಉದ್ಯೋಗ ನೀಡದೆ ಇರಲು ಬರುವುದಿಲ್ಲ. ಒಂದು ವೇಳೆ ಇನ್ನು ಯಾವುದಾದರೂ ಜಿಲ್ಲೆಗಳಲ್ಲಿ ತಾಲ್ಲೂಕು ಪಂಚಾಯತಿ/ ಜಿಲ್ಲಾ ಪಂಚಾಯತಿಯ ಅನುಮೋದನೆಗಾಗಿ ಬಾಕಿ ಇದ್ದಲ್ಲಿ ಕೂಡಲೇ ಮೇಲೆ ತಿಳಿಸಿರುವ ಮಾರ್ಗ ಸೂಚಿಗಳಂತೆ ಜರೂರು ಕ್ರಮವಹಿಸಿ ಅನುಮೋದನೆ ನೀಡಿ ಅನುಷ್ಠಾನಕ್ಕೆ ಯಾವುದೇ ತೊಂದರೆ ಮತ್ತು ಅಡಚಣೆಗಳು ಬರದಂತೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 08 ಮಗಾಂಉಖಾಯೋ 2008 ದಿನಾಂಕ : 05–10–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೈತರ ಜಮೀನಿನಲ್ಲಿ ಭೂಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕುರಿತು, ಸ್ಪಷ್ಟೀಕರಣ ನೀಡುವ ಬಗ್ಗೆ..

ಉಲ್ಲೇಖ: 1. ಕೇಂದ್ರ ಸರ್ಕಾರದ ಆದೇಶ ಸಂಖ್ಯೆ 11060/3/2009–MGNREGA ದಿನಾಂಕ:1–9–2009.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 08 ಉಖಾಯೋ 2008 ದಿನಾಂಕ : 10–2–2010.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ರೈತರ ಜಮೀನಿನಲ್ಲಿ ಭೂ ಅಬಿವೃದ್ಧಿ ಕಾಮಗಾರಿಗಳನ್ನು ವೈಯುಕ್ತಿಕವಾಗಿ ತೆಗೆದುಕೊಳ್ಳಲು ಯಾವ ವರ್ಗದ ಜನರಿಗೆ, ಈ ಸೌಲಭ್ಯವನ್ನು ವಿಸ್ತರಿಸಬೇಕೆಂದು, ಹಲವಾರು ಜಿಲ್ಲಾ ಪಂಚಾಯತ್‌ಗಳು ಈ ಸಂಬಂಧ ಸ್ಪಷ್ಟೀಕರಣ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಈ ಸಂಬಂಧ, ಈಗಾಗಲೇ ಕೇಂದ್ರ ಸರ್ಕಾರವು ಉಲ್ಲೇಖ (1)ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಅದರಂತೆ ಕ್ರಮವಹಿಸಿ ಅನುಷ್ಠಾನಗೊಳಿಸಲು ತಿಳಿಸಲಾಗಿರುತ್ತದೆ.

ಮಾರ್ಗಸೂಚಿಗಳ ಪ್ರಕಾರ, ಪರಿಶಿಷ್ಠ ಜಾತಿ/ ಪರಿಶಿಷ್ಠ ವರ್ಗದ ರೈತರಿಗೆ ಮತ್ತು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ರೈತರ ಜಮೀನಿನಲ್ಲಿ ವೈಯುಕ್ತಿಕ ಭೂ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗದ ಕೃಷಿಯನ್ನು ಆದ್ಯತೆ ಮೇರೆಗೆ ಪರಿಗಣಿಸಿದ ನಂತರ, ಸಣ್ಣ ರೈತರು ಮತ್ತು ಅತಿ ಸಣ್ಣ ರೈತರಿಗೆ, ಈ ಸೌಲಭ್ಯವನ್ನು ಒದಗಿಸಿ ತಿಳಿಸಿರುತ್ತದೆ. ಅದರಂತೆ ಕ್ರಮ ಜರುಗಿಸಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 65 ಮಗಾಂಉಖಾಯೋ 2008 ದಿನಾಂಕ : 21–10–2010

## ಸುತ್ತೋಲೆ

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳೆಸಿರುವ ಸಸಿಗಳ ಬಳಕೆ ಬಗ್ಗೆ.

ಉಲ್ಲೇಖ: ಉಪ ಅರಣ್ಯ ಸಂರಕ್ಷಣಾಧಿಕಾರಿ, ನಗರ ಸಾಮಾಜಿಕ ಅರಣ್ಯ ವಿಭಾಗ ಬೆಂಗಳೂರು ಇವರ ಪತ್ರದ ಸಂಖ್ಯೆ ಎ1ಬಿಯುಡಿ/ಎಚಿಜಿಎನ್ಆರ್ಇಜಿಎಸಿಆರ್. 65/07–08 ದಿನಾಂಕ 27–08–2010.

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಸಸಿಗಳನ್ನು ಬೆಳೆಸುತ್ತಿರುವುದು ಸರಿಯಷ್ಟೆ. ಸದರಿ ಸಸಿಗಳು ಸಮರ್ಪಕವಾಗಿ ಕೂಲಿಕಾರರ ಲಭ್ಯತೆಯ ಆಧಾರದ ಮೇಲೆ ರೂಪಿಸಿರುವ ಕಾರ್ಯಕ್ರಮಗಳ ಮೂಲಕ ನೆಡಲು ಸಾಧ್ಯವಾಗದ ಕಾರಣ, ಬೆಳೆದಂತಹ ಸಸಿಗಳನ್ನು ಬೆಳೆಸಿರುವ ಮೊತ್ತದ ಬೆಲೆಗೆ ಮಾರಾಟ ಮಾಡಲು, ಉದ್ದೇಶಿಸಿ, ಸದರಿ ಕ್ರಮವನ್ನು ಅನುಮೋದಿಸುವಂತೆ ಉಲ್ಲೇಖದಲ್ಲಿ ಕೋರಿರುತ್ತಾರೆ.

ಮುಂದುವರೆದು, ಸಸಿಗಳನ್ನು ಬೆಳೆಯುವ ಚಟುವಟಿಕೆಗಳಲ್ಲಿ ಪೂರ್ಣವಾದ ಕುಶಲ ಮತ್ತು ಅರೆ ಕುಶಲ (skilled and semi skilled) ಚಟುವಟಿಕೆಗಳು ಹೆಚ್ಚಾಗಿದ್ದು, ಪೂರ್ಣವಾಗಿ ಶೇಕಡಾ 100ರಷ್ಟು ಸಾಮಾಗ್ರಿ ವೆಚ್ಚಕ್ಕೆ ಬಳಕೆ ಮಾಡಿ ಸಸಿಗಳನ್ನು ಬೆಳೆಸಿದಂತಾಗುವುದು. ಇಂತಹ ಚಟುವಟಿಕೆಗಳಲ್ಲಿ ಕೂಲಿ ವೆಚ್ಚವಿರುವುದಿಲ್ಲ. ತದನಂತರ, ಬೆಳೆದ ಸಸಿಗಳನ್ನು ಮುಂದಿನ ಸಾಲಿನಲ್ಲಿ ನೆಡಲು ಕೂಲಿ ವೆಚ್ಚವನ್ನು ಭರಿಸಲಾಗುವುದು. ಸಸಿಗಳನ್ನು ನೆಡುವ ಕಾರ್ಯಕ್ರಮವು ಕೂಲಿಕಾರರ ಲಭ್ಯತೆಯ ಮೇಲೆ ಪೂರ್ಣವಾಗಿ ಅವಲಂಭಿಸಿರುತ್ತದೆ. ಬೆಳೆದ ಸಸಿಗಳನ್ನು ನೆಡಲು ಕೂಲಿಕಾರರ ಬೇಡಿಕೆಗಳು ಇಲ್ಲದೇ ಇರುವಾಗ ಬೆಳೆದ ಮೊತ್ತಕ್ಕೆ ಉದ್ಯೋಗ ಖಾತರಿ ಯೋಜನೆಯಡಿ ಮಾರಾಟ ಮಾಡಿದ್ದಲ್ಲಿ, ಯೋಜನೆಯ ಉದ್ದೇಶಗಳು ಈಡೇರುವಂತಿಲ್ಲ. ಅಲ್ಲದೇ ಲೆಕ್ಕ ಪರಿಶೋಧನಾ ವೇಳೆಯಲ್ಲಿ ಹೆಚ್ಚಿನ ಆಕ್ಷೇಪಣೆಗಳು ಉಂಟಾಗುತ್ತಿವೆ. ಬೆಳೆದ ಸಸಿಗಳನ್ನು ಮುಂದಿನ ಸಾಲಿನಲ್ಲಿ ನೆಡಲು, ಆಯಾ ಗ್ರಾಮ ಪಂಚಾಯತ್‌ಗಳಲ್ಲಿ ತಯಾರಿಸಲಾದ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಸೇರಿಸಿ, ಬೇಡಿಕೆಗೆ ಅನುಗುಣವಾಗಿ ಅನುಷ್ಠಾನಗೊಳಿಸುವುದು ಉಚಿತವಾಗಿರುತ್ತದೆ. ಒಂದು ವೇಳೆ ಬೆಳೆದ ಸಸಿಗಳನ್ನು ಕಡ್ಡಾಯವಾಗಿ ಮುಂದಿನ ಸಾಲಿನಲ್ಲಿ ನೆಡಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಆ ಸಮಯದಲ್ಲಿ ಕೂಲಿಕಾರರ ಲಭ್ಯತೆ ಇಲ್ಲದೆ ಇದ್ದಾಗ, ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಲು, ಸಾಧ್ಯವಾಗದೆ ಇದ್ದಾಗ ಪರ್ಯಾಯವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಯಾವುದೇ ಅಡಚಣೆ ಇಲ್ಲದಂತೆ ಒಂದು Contingent Planನ್ನು ಜೊತೆಯಲ್ಲಿ ತಯಾರಿಸಿಕೊಂಡು, ಅನುಷ್ಠಾನಗೊಳಿಸಲು ಕ್ರಮವಹಿಸುವುದು.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ**

1) ರಾಜ್ಯದ ಎಲ್ಲಾ ಜಿಲ್ಲ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ,
2) ಯಥಾ ಪ್ರತಿಯನ್ನು ಅಭಿನಂದನೆಗಳೊಂದಿಗೆ ಈ ಕೆಳಕಂಡ ಅಧಿಕಾರಿಗಳ ಮಾಹಿತಿಗಾಗಿ ಸಲ್ಲಿಸಿದೆ.
   ಅ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು.
   ಆ) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ, ಅರಣ್ಯಭವನ ಮಲ್ಲೇಶ್ವರಂ, ಬೆಂಗಳೂರು.
   ಇ) ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು

## **ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 59 ಉಖಾಯೋ 2009 ದಿನಾಂಕ : 21–10–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಇತರೆ ಇಲಾಖೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವ ಸಂಬಂಧ, ಕೇಂದ್ರ ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳು

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶಕರು (MGNREGA) ಇವರ ಪತ್ರದ ಸಂಖ್ಯೆ ಎಂ –12016/1/2010 MGNREGA ದಿನಾಂಕ:13.09.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಇತರೆ ಇಲಾಖೆಗಳ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವ ಸಂಬಂಧ, ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ತಮಗೆಲ್ಲಾ ಅವುಗಳನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿರುತ್ತದೆ, ಈ ಸಂಬಂಧ ಕೇಂದ್ರ ಸರ್ಕಾರವು ಉಲ್ಲೇಖದಲ್ಲಿ ವಿಶೇಷವಾದ ಸೂಚನೆಗಳನ್ನು ನೀಡಿದ್ದು, ಅವುಗಳನ್ನು ಪಾಲಿಸುವಂತೆ ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ ಮತ್ತು ಪತ್ರದಲ್ಲಿ ನೀಡಿರುವ ಸೂಚನೆಗಳಂತೆ ಕ್ರಮವಹಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 02 ಉಖಾಯೋ 2010 ದಿನಾಂಕ : 23.10.2010

ಗೆ.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ
ಚಿಕ್ಕಮಗಳೂರು

ಮಾನ್ಯರೆ,

ವಿಷಯ: ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ನಿರ್ಮಾಣ ಮಾಡುವ ಬಗ್ಗೆ

ಉಲ್ಲೇಖ: 1. ತಮ್ಮ ಪತ್ರದ ಸಂ: ಜಿಪಂ: 61 ಉಖಾಯೋ 02 2009–10 ದಿ: 30.09.2010
2. ಸರ್ಕಾರದ ಪತ್ರದ ಸಂ : ಗ್ರಾಅಪ 02 (ಆಶಾ): ಉಖಾಯೋ 2010 ದಿ:11.05.2010
3. ಸರ್ಕಾರದ ಪತ್ರದ ಸಂಖ್ಯೆ : ಮಗಾಂರಾಗ್ರಾಉಖಾಯೋ 2010 ದಿ: 23.08.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಮರ್ಕಲಗ ಗ್ರಾಮ ಪಂಚಾಯಿತಿಯಲ್ಲಿ ಭಾರತ್ ನಿಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ರೂ. 25.00 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು, ಪ್ರಸ್ತಾವನೆ ಕಳುಹಿಸಿದ್ದು. ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುವುದು ಸರಿಯಷ್ಟೆ.ಇದರ ಸಂಬಂಧ ಕೇಂದ್ರ ಸರ್ಕಾರ ಹೊರಡಿಸುವ ಮಾರ್ಗಸೂಚಿಯ ಪ್ರಕಾರ ಗ್ರಾಮ ಪಂಚಾಯಿತಿಯಲ್ಲಿ ಸದರಿ ಕೇಂದ್ರದ ನಿರ್ಮಾಣಕ್ಕೆ ರೂ. 10.00 ಲಕ್ಷಗಳನ್ನು ಮಾತ್ರ ನಿಗದಿಪಡಿಸಿದ್ದು. ಅದರ ಮೇಲ್ಪಟ್ಟು ತೆಗೆದುಕೊಳ್ಳುವಂತಿಲ್ಲವೆಂದು ತಿಳಿಸಿರುತ್ತದೆ. ಆದ್ದರಿಂದ, ಈಗಾಗಲೇ ಉಲ್ಲೇಖ (2) ಮತ್ತು (3) ರಲ್ಲಿ ಇದರ ಸಂಬಂಧ ತಿಳಿಸಿರುವ ಮಾರ್ಗಸೂಚಿಗಳ ಪ್ರಕಾರ ಕ್ರಮವಹಿಸಲು ಸೂಚಿಸಿದೆ,

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು ರಾಜ್ಯದ ಉಳಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಮಾರ್ಗದರ್ಶನಕ್ಕಾಗಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 110 ಉಖಾಯೋ 2009      ದಿನಾಂಕ : 18–11–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೆರೆ ಕಾಲುವೆಗಳ ನಿರ್ವಹಣೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಬಗ್ಗೆ

ಉಲ್ಲೇಖ: ದಿ.18.11.2010 ರಂದು ನಡೆದ ಭರವಸೆಗಳ ಸಮಿತಿಯಲ್ಲಿ ಚರ್ಚಿಸಿ ನಿರ್ದೇಶಿಸಿರುವಂತೆ

* * *

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನ ಮಾಡುತ್ತಿರುವ ಬಹುತೇಕ ಕಾಮಗಾರಿಗಳು ಪರಿಸರ ಪ್ರೇಮಿಯಾಗಿದ್ದು, ಮತ್ತು ಅಂತರ್ ಜಲವನ್ನು ಹೆಚ್ಚಿಸುವುದಾಗಿರುತ್ತದೆ. ದಿ : 18.11.2010 ರಂದು ನಡೆದ ರಾಜ್ಯ ವಿಧಾನ ಸಭೆ ಭರವಸೆಗಳ ಸಮಿತಿಯಲ್ಲಿ ನೀರಿನ ಬಳಕೆ ಹಾಗೂ ಅಂತರ ಜಲ ವಿಷಯದಲ್ಲಿ ಚರ್ಚಿಸುತ್ತಾ ರಾಜ್ಯದಲ್ಲಿ ಅಧಿಕ ಮಳೆಯಿಂದಾಗಿ ಗ್ರಾಮದಲ್ಲಿರುವ ಕೆರೆಗಳು ತುಂಬಿ ಹೆಚ್ಚಾಗಿ ನೀರು ಹರಿದು ಬೇರೆ ಬೇರೆ ಕೆರೆಗಳಿಗೆ ಹೋಗುತ್ತಿರುತ್ತದೆ. ಆದರೆ ಹೀಗೆ ಹರಿದು ಹೋಗುವ ನೀರಿನ ಕಾಲುವೆಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು ಕಂಡುಬಂದಿದ್ದು, ಸದರಿ ನೀರಿನ ಕಾಲುವೆಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದಲ್ಲಿ ನೀರಿನ ಸದ್ಬಳಕೆ ಸಾಧ್ಯವಾಗುತ್ತದೆ. ಎಂಬುದಾಗಿ ಅಭಿಪ್ರಾಯ ಪಡುತ್ತಾ ಅಂತಹ ಕಾಮಗಾರಿಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆದ್ಯತೆಯ ಮೇರೆಗೆ ಕೈಗೊಂಡಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಎಂಬುದಾಗಿ ತಿಳಿಸಿರುತ್ತಾರೆ. ಆದುದರಿಂದ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಮಿಕ ಆಯವ್ಯಯದನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ, ಇಂತಹ ಕಾಮಗಾರಿಗಳು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇದ್ದರೆ ಗುರುತಿಸಿ ಯೋಜನೆಯ ಮಾರ್ಗಸೂಚಿಗಳನ್ವಯ ಗ್ರಾಮ ಸಭೆಯಲ್ಲಿ ಮಂಡಿಸಿ ಕಾಮಗಾರಿ ಗುಚ್ಛದಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸಲು ಸೂಕ್ತ ಕ್ರಮವಹಿಸುವಂತೆ ಹಾಗೂ ಒಂದು ವೇಳೆ ಒಂದಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಕಾಮಗಾರಿಯನ್ನು ಗುರುತಿಸಿಕೊಂಡು ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಗ್ರಾಅಪ: 167 ಉಖಾಯೋ : 2010

ಕರ್ನಾಟಕ ಸರ್ಕಾರ ಸಚಿವಾಲಯ,
ಸಚಿವಾಲಯ–2 ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 29–11–2010

## ತಿದ್ದುಪಡಿ/ಹೆಚ್ಚುವರಿ ಸೇರ್ಪಡೆ

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾನಂತರ ಹುದ್ದೆಗಳ ಅನುಷ್ಠಾನಾಧಿಕಾರಿಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಅಧಿಕಾರ, ಅಳತೆ ಪುಸ್ತಕದಲ್ಲಿ ಅಳತೆ ದಾಖಲಾತಿ ಮತ್ತು ಚೆಕ್ ಮೇಶರ್ ಮೆಂಟ್ ಮಾಡಿ ದೃಢೀಕರಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ :05: ಉಖಾಯೋ:2008 ಬೆಂಗಳೂರು ದಿನಾಂಕ : 06.05.2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಸಂಬಂಧ ಅನುಷ್ಠಾನ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಹುದ್ದೆಗಳ ಪದನಾಮದ ಅಧಿಕಾರಿಗಳಿಗೆ ತಾಂತ್ರಿಕ ಅನುಮೋಧನೆ. ಆಡಳಿತಾತ್ಮಕ ಅನುಮೋದನೆ, ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಅಳತೆಗಳು ಮತ್ತು ಚೆಕ್ ಮೇಶರ್‌ಮೆಂಟ್ ಮಾಡುವ ಅಧಿಕಾರವನ್ನು ಉಲ್ಲೇಖಿತ ಆದೇಶದನ್ವಯ ಆದೇಶಿಸಿ ನೀಡಿರುವುದು ಸರಿಯಷ್ಟೇ.

ಈ ಸಂಬಂಧ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಅನುಷ್ಠಾನ ಇಲಾಖೆಗಳು ಕೆಲವೊಂದು ಸಮಾನಂತರ ಹುದ್ದೆಗಳ ವರ್ಗದ ಅಧಿಕಾರಿಗಳಿಗೆ ಉಲ್ಲೇಖಿದ ಆದೇಶದನ್ವಯ ಪ್ರದತ್ತವಾದ ಅಧಿಕಾರವನ್ನು ನೀಡದೆ ಇರುವುದರಿಂದ ಕಾಮಗಾರಿಗಳನ್ನು ಸುಲಲಿತವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಂಶವನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಈಗ ಸಕ್ಷಮ ಪ್ರಾಧಿಕಾರಕ್ಕೆ ಸರಿಸಮಾನವಾಗಿರುವ ಅಂತಹ ಇಲಾಖೆಗಳಲ್ಲಿನ ಯಾವುದೇ ಅಧಿಕಾರಿಗಳಿಗೆ ಅದೇ ಮೊತ್ತದ ಯೋಜನಾ ಅಂದಾಜುಗಳಿಗೆ ತಾಂತ್ರಿಕ ಅನುಮೋದನೆ, ಅಳತೆ ಪುಸ್ತಕದಲ್ಲಿ ಅಳತೆ ದಾಖಲಾತಿ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಚೆಕ್ ಮೇಶರ್‌ಮೆಂಟ್ ಮಾಡುವ ಅಧಿಕಾರವನ್ನು ನೀಡಲು ತೀರ್ಮಾನಿಸಿದೆ. ಇದಲ್ಲದೇ ಸದರಿ ಆದೇಶದಲ್ಲಿ ವಲಯ ಅರಣ್ಯ ಸಂರಕ್ಷಣಾಧಿಕಾರಿ (RFO)ರವರನ್ನು ತಾಲ್ಲೂಕು ಮಟ್ಟದ ಅಧಿಕಾರಿಯನ್ನಾಗಿ ಪರಿಗಣಿಸದೆ, ಹೋಬಳಿ ಮಟ್ಟದ ಅಧಿಕಾರಿಯೆಂದು ಪರಿಗಣಿಸಿದ್ದು, ಅದನ್ನು ಈಗ ಬದಲಿಸಿ ಸೂಕ್ತ ಅಧಿಕಾರಗಳೊಂದಿಗೆ ನೀಡಲು ತೀರ್ಮಾನಿಸಿದೆ. ಮೇಲ್ಕಂಡ ಬದಲಾವಣೆಗಳು ಆದ ನಂತರ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅನುಷ್ಠಾನ ಇಲಾಖೆಗಳ ಅಧಿಕಾರಿ ವರ್ಗದವರಿಗೆ ಈ ಕೆಳಕಂಡ ಅಧಿಕಾರವನ್ನು ನೀಡಲಾಗಿದೆ. ಮತ್ತು ಉಳಿದಂತೆ ಷರತ್ತುಗಳು ಅನ್ವಯವಾಗುತ್ತದೆ.

| ಇಲಾಖೆಯ ಹೆಸರು | ತಾಂತ್ರಿಕ ಅನುಮೋದನೆ ನೀಡುವ ವಿವಿಧ ಅಧಿಕಾರಿಗಳ ಪದನಾಮದ ಹೆಸರು | ಕಾಮಗಾರಿಗಳ ಅಂದಾಜುಗಳಿಗೆ ತಾಂತ್ರಿಕ ಅನುಮೋದನೆ ನೀಡುವ ಮೊತ್ತದ ಮಿತಿ(ರೂ ಲಕ್ಷಗಳಲ್ಲಿ) | ಅಳತೆ ಪುಸ್ತಕದಲ್ಲಿ ಅಳತೆ ದಾಖಲಾತಿ | ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಚೆಕ್ ಮೇಶರ್‌ಮೆಂಟ್ ಮಾಡುವ ಅಧಿಕಾರಿಯ ಪದನಾಮದ ಹೆಸರು |
|---|---|---|---|---|
| ಜಲಾನಯನ ಅಭಿವೃದ್ಧಿ | 1) ಸಹಾಯಕ ಕೃಷಿ ಅಧಿಕಾರಿ | 1.00 ವರೆಗೆ | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ಸಹಾಯಕ ಕೃಷಿ ಅಧಿಕಾರಿ | ತಾಂತ್ರಿಕ ಸಹಾಯಕ/ ಸಹಾಯಕ ಕೃಷಿ ಅಧಿಕಾರಿ/ ತಾಲ್ಲೂಕು ಜಲಾನಯನಅಭಿವೃದ್ಧಿ |
| | 2) ಸಹಾಯಕ ತೋಟಗಾರಿಕಾ ಅಧಿಕಾರಿ | 1.00 ವರೆಗೆ | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ಸಹಾಯಕ ತೋಟಗಾರಿಕೆ ಅಧಿಕಾರಿ | ತಾಂತ್ರಿಕ ಸಹಾಯಕ/ ಸಹಾಯಕ ತೋಟಗಾರಿಕೆ ಅಧಿಕಾರಿ ತಾಲ್ಲೂಕು ಜಲಾನಯನ ಅಭಿವೃದ್ಧಿ |
| ಅರಣ್ಯ | 1) ವಲಯ ಅರಣ್ಯ ಸಂರಕ್ಷಣಾಧಿಕಾರಿ (RFO) | 5.00 ವರೆಗೆ | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ | ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ |
| | 2) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ACF) | 5ರಿಂದ 10ರವರೆಗೆ | ಉದ್ಯೋಗ ಮಿತ್ರ/ ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ | ತಾಂತ್ರಿಕ ಸಹಾಯಕ/ ವಲಯ ಅರಣ್ಯ ಸಂರಕ್ಷಣಾಧಿಕಾರಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.

3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಕೃಷಿ) ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿ(ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು
3. ಪ್ರಾದೇಶಿಕ ಆಯುಕ್ತರು ಬೆಂಗಳೂರು ಮೈಸೂರು, ಗುಲ್ಬರ್ಗಾ, ಬೆಳಗಾಂ
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
5. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
6. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
7. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು.
8. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಂಜಿಎನ್‌ಆರ್‌ಇಜಿಎ) ಅರಣ್ಯ ಇಲಾಖೆ, ಅರಣ್ಯ ಭವನ ಮಲ್ಲೇಶ್ವರಂ, ಬೆಂಗಳೂರು
9. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಕೆ.ಆರ್.ವೃತ್ತ, ಬೆಂಗಳೂರು
10. ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರ್ ಇಲಾಖೆ ಬೆಂಗಳೂರು.
11. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.

ಅನಧಿಕೃತ ಪ್ರತಿ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 08 ಉಖಾಯೋ : 2010

ಕರ್ನಾಟಕ ಸರ್ಕಾರ ಸಚಿವಾಲಯ,
ಸಚಿವಾಲಯ–2 ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 01–12–2010

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: 2010–11ನೇ ಸಾಲಿನ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಮಾರ್ಗಸೂಚಿಯನ್ನು ಸರಳೀಕರಣಗೊಳಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ತೋಟಗಾರಿಕೆ ಇಲಾಖೆ, ಇವರ ಪತ್ರ ಸಂಖ್ಯೆ : ತೋಇ/ಯೋ/ಸತೋಅ–5/1/2010–11/1971, ದಿನಾಂಕ : 10.11.2010

* * *

ಉಲ್ಲೇಖದ ಪತ್ರದಲ್ಲಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಇವರು 2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವನ್ನು 18 ಲಕ್ಷ ಎಕ್ಟೇರ್‌ರವರಿಗೆ ಮುಂದಿನ 3 ವರ್ಷಗಳಲ್ಲಿ ಹೆಚ್ಚಿಸಲು ಉದ್ದೇಶಿಸಿದೆ, ಎಂದು ತಿಳಿಸಿ, ತೋಟಗಾರಿಕೆ ಬೆಳೆಗಳನ್ನು ಅಳವಡಿಸಿಕೊಳ್ಳಲು ಪ್ರತಿ ಗ್ರಾಮದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೂಲಕ ತೋಟಗಾರಿಕೆ ಇಲಾಖೆಯ ತಾಂತ್ರಿಕ ಮೇಲ್ವಿಚಾರಣೆಗೊಳಪಡಿಸಿ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗಿದೆ ಎಂದು ತಿಳಿಸಲಾಗಿರುತ್ತದೆ. ಆದುದರಿಂದ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಾರಿಯಲ್ಲಿರುವ ಮಾರ್ಗಸೂಚಿಯನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಸಣ್ಣ ರೈತರು ಹಾಗೂ ಅತೀ ಸಣ್ಣ ರೈತರ ಜಮೀನುಗಳಲ್ಲಿ ತೋಟದ ಹಣ್ಣಿನ ಬೆಳೆಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ. 2009–10ನೇ ಸಾಲಿನಲ್ಲಿ ಕೈಗೊಂಡು ಅಪೂರ್ಣಗೊಂಡಿರುವ ಮುಂದುವರೆದ ಕಾಮಗಾರಿಗಳಿಗೆ ಸಂಬಂಧಪಟ್ಟ ಬಾಕಿ ಕೂಲಿ ಹಾಗೂ ಸಾಮಾಗ್ರಿ ಮೊತ್ತವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಪಾವತಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಲಾಗಿದೆ. ಹಾಗೂ 2010–11ನೇ ಸಾಲಿನಲ್ಲಿ ಸಹ ತೋಟಗಾರಿಕೆ ಬೆಳೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಲಾಗಿದೆ. 2011–12ನೇ ಸಾಲಿನಲ್ಲಿ ಕಾರ್ಮಿಕ ಮುಂಗಡ ಆಯವ್ಯಯ ಪತ್ರವನ್ನು ತಯಾರಿಸಲು ಈಗಾಗಲೇ ಸೂಚನೆ ನೀಡಲಾಗಿದ್ದು ಸದರಿ ಕಾರ್ಮಿಕ ಮುಂಗಡ ಆಯವ್ಯಯ ಪತ್ರದಲ್ಲಿ ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸೂಕ್ತ ಸೂಚನೆ ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ತಮ್ಮ ನಂಬುಗೆಯ,
ಸಹಿ/–
**(ಪಿ. ರವಿಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 167 ಉಖಾಯೋ 2010 ದಿನಾಂಕ : 02–12–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾಮಗಾರಿಗಳಿಗೆ ಸಾಮಾಗ್ರಿಗಳ ಸಂಗ್ರಹಣೆ

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಜೆ–11060/3/2009 ಎಂಜಿಎನ್‌ಆರ್‌ಇಜಿಎ ದಿನಾಂಕ 29.11.2010

* * *

ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಮತಿಸಲ್ಪಡುವ ಕಾಮಗಾರಿಗಳಿಗಾಗಿ ಸಾಮಾಗ್ರಿಗಳನ್ನು ಪಡೆಯುವ ಸಲುವಾಗಿ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ಮತ್ತು ಮಾನದಂಡಗಳನ್ನು ತಮ್ಮ ಪತ್ರದಲ್ಲಿ ತಿಳಿಸಿದ್ದು ಅದರಂತೆಯೇ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಲು ಸೂಚಿಸಿರುತ್ತಾರೆ. ಇದರ ಸಂಬಂಧ ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನುಷ್ಠಾನ ಕೈಪಿಡಿ

**No. K-11060/3/2009-MGNREGA**
**Government of India**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi 110114
29th November 2010

**Subject** : **Procurement of material/items under Mahatma Gandhi NREGA Act.**

* * *

The objective of the Mahatma Gandhi National Rural Employment Guarantee Act is to enhance livelihood security in rural areas by providing at least 100 days of guaranteed wage employment in a financial year to every household whose adult members volunteer to do unskilled manual work. Schedule I of the Act indicates the kinds of works that may be taken up to achieve the given objective. As per Para 2 of the Schedule I creation of durable assets and strengthening the livelihood resource base of the rural poor shall be an important objective of the scheme.

2. For executing permissible works the implementing agencies procure materials as per the mechanism formulated by the State Governments. In order to ensure that procurement of material under the schemes are procured in an efficient and prudent manner, the following principles may be kept in view:-

a) Every authority delegated with the financial powers of procuring goods in public interest shall have the responsibility and accountability to bring efficiency, economy, transparency in matters relating to public procurement and for fair and equitable treatment of suppliers and promotion of competition in public procurement.

b) The procedure to be followed in making public procurement must conform to the following yardsticks :

i) The specifications in terms of quality, type etc. as also quantity of goods to be procured, should be clear spelt out keeping in view the specific needs of the procuring organizations. The specifications so worked out should meet the basic needs of the implementing agencies without including superfluous and non essential features which may result in unwarranted expenditure. Care should also be taken to avoid purchasing quantities in excess of requirement to avoid inventory carrying costs.

ii) Offers should be Invited following a fair, transparent and reasonable procedure;

iii) The implementing agency authority should be satisfied that the selected

offer adequately meets the requirements in all respects;

iv) The implementing agency should satisfy itself that the price of the selected offer is reasonable and consistent with the quality required;

v) At each stage of procurement the concerned implementing agency must place on record, in precise terms, the considerations which weighed with it while taking the procurement decision.

3. The items/material proposed to be procured should strictly be for the permissible works under the Mahatma Gandhi NREG Act.

4. All procurement made should be posted in the MIS for the monitoring Quantity procured, total amount spent, the scheme for which the material procured, date of delivery of material etc. should invariably be indicated.

5. While procuring material/items, principles indicated in the General Financial Rules may scrupulously be followed and all related records kept meticulously for scrutiny by any authority including public.

6. State Governments are directed to note the above for strict compliance.

This has the approval of AS & FA (Rural Development)

Sd/-

**(K.S AUDHKHASI)**

Under Secretary to the Government of India

Tele : 011-23381709

1. States/UTs Principal Secretary (RD)
2. PS to MRD
3. PS to Secretary(RD)
4. NIC with the request to post it on MGNREGA website.

## ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಒಂದು ಕಣವನ್ನು (Theresh yard) ನಿರ್ಮಿಸುವುದು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಯನ್ನು ನಿರ್ಮಿಸುವ ಬಗ್ಗೆ.

* * *

### ಪ್ರಸ್ತಾವನೆ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಯೋಜನೆಯಡಿ ನೋಂದಾಯಿತ ಕೆಲಸಗಾರರ ಕುಟುಂಬಗಳ ಬೇಡಿಕೆಗೆ ಅನುಗುಣವಾಗಿ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಖಾತರಿ ಉದ್ಯೋಗವನ್ನು ಒದಗಿಸಿ ಅವರ ಜೀವನಕ್ಕೆ ಭದ್ರತೆ ನೀಡುವುದು ಮತ್ತು ಧೀರ್ಘಕಾಲ ಬಾಳಿಕೆ ಬರುವ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲವನ್ನು ಬಲಪಡಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿ ಆದ್ಯತೆಯ ಮೇಲೆ ಒಂಬತ್ತು ವಿವಿಧ ಪ್ರವರ್ಗದ ಕಾಮಗಾರಿಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿರುತ್ತದೆ. ಸದರಿ ಯೋಜನೆಯಡಿ ಗ್ರಾಮ ಪಂಚಾಯತಿಯ ರೈತರಿಗೆ ಅನುಕೂಲವಾಗುವಂತೆ ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಒಂದು ಕಣವನ್ನು ನಿರ್ಮಿಸಲು ಹೆಚ್ಚಿನ ಬೇಡಿಕೆಯಿದ್ದು, ಪ್ರತಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸರ್ಕಾರದ ಜಾಗವನ್ನು ಬಳಸಿಕೊಂಡು 150–200 ಅಡಿ ವ್ಯಾಸವುಳ್ಳ ಒಂದು ಕಣವನ್ನು ನಿರ್ಮಿಸಲು ತೀರ್ಮಾನಿಸಲಾಗಿರುತ್ತದೆ. ಸರ್ಕಾರಿ ಅನುದಾನಿತ ಶಾಲೆಗಳಿಗೆ ರಕ್ಷಣೆ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಸದರಿ ಕಾಮಗಾರಿಗಳನ್ನು ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಮೇಲೆ ಸೂಚಿಸಲಾದ ಕಣವನ್ನು ನಿರ್ಮಿಸಿರುವ ಕಾಮಗಾರಿಯನ್ನು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಯನ್ನು ನಿರ್ಮಿಸುವ ಕಾಮಗಾರಿಯನ್ನು ಯೋಜನೆಯಡಿ ತಿಳಿಸಲಾದ ಆದ್ಯತಾ ಕಾಮಗಾರಿಗಳ 5ನೇ ಪ್ರವರ್ಗದಡಿ ತೆಗೆದುಕೊಳ್ಳಲು ಪರಿಗಣಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 110 ಉಖಾಯೋ 2009 ಬೆಂಗಳೂರು ದಿನಾಂಕ: 03–12–2010

ಪ್ರಸ್ತಾವನೆಯಲ್ಲಿ ಎಲ್ಲಾ ಅಂಶಗಳನ್ನು ಪರಿಗಣಿಸಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಈಗಾಗಲೇ ನಿಗದಿ ಪಡಿಸಲಾದ ಕಾಮಗಾರಿಗಳ ಜೊತೆಗೆ ಈ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದೆ. ಸದರಿ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಅನುಮೋದನೆ ಪಡೆದು ಅನುಷ್ಠಾನ ಗೊಳಿಸಲು ಆದೇಶಿಸಿದೆ. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ ಅನುಷ್ಠಾನಗೊಳಿಸಲಾಗಿದೆ.

1) ರೈತರಿಗೆ ಅನುಕೂಲವಾಗಲು ಪ್ರತಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ಬಳಸಿಕೊಂಡು ಸುಮಾರು 150–200 ಅಡಿ ವ್ಯಾಸವುಳ್ಳ ಅಥವಾ ಆ ಗ್ರಾಮದ ಕೃಷಿ ಚಟುವಟಿಕೆಗಳಿಗೆ ಅಗತ್ಯವೆನಿಸಬಹುದಾದ ಅಳತೆಯಲ್ಲಿ ಒಂದು ಕಣವನ್ನು ನಿರ್ಮಿಸಿ ಅನುಷ್ಠಾನಗೊಳಿಸುವುದು. ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ಯೋಜನೆಯಡಿ

2) ನಿಗದಿಪಡಿಸಲಾದ ಕೂಲಿ ಮತ್ತು ಸಾಮಾಗ್ರಿಗಳ ಅನುಪಾತವನ್ನು 60:40ರಂತ ಕಡ್ಡಾಯವಾಗಿ ಪಾಲನೆಮಾಡುವುದು.

2) ಗ್ರಾಮ ಪಂಚಾಯತಿಗಳಲ್ಲಿ ಇರುವ ಸರ್ಕಾರಿ ಅನುದಾನಿತ ಶಾಲೆಗಳಿಗೆ ರಕ್ಷಣಾ ಗೋಡೆಗಳನ್ನು ನಿರ್ಮಿಸುವುದು ಮತ್ತು ಕಾಮಗಾರಿಯನ್ನು ನಿರ್ವಹಿಸುವಾಗ ಕೂಲಿ ಮತ್ತು ಸಾಮಾಗ್ರಿಗಳ ಅನುಪಾತವನ್ನು 60:40ರಂತ ಕಡ್ಡಾಯವಾಗಿ ಪಾಲನೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಗಾಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1) ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
4) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5) ಸರ್ಕಾರದ ಎಲ್ಲಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಬೆಂಗಳೂರು
6) ಪ್ರಾದೇಶಿಕ ಆಯುಕ್ತರು, ಬೆಂಗಳೂರು ಮೈಸೂರು, ಗುಲ್ಬರ್ಗಾ, ಬೆಳಗಾಂ
7) ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
8) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
9) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
10) ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು.
11) ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12) ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಂಜಿಎನ್‌ಆರ್‌ಇಜಿಎ) ಅರಣ್ಯ ಇಲಾಖೆ, ಅರಣ್ಯ ಭವನ ಮಲ್ಲೇಶ್ವರಂ, ಬೆಂಗಳೂರು.
13) ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಕೆ.ಆರ್.ವೃತ್ತ, ಬೆಂಗಳೂರು
14) ಮುಖ್ಯ ಅಭಿಯಂತರರು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
15) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರು.
16) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
17) ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
18) ಹೆಚ್ಚಿನ ಪ್ರತಿಗಳು/ರಕ್ಷಾ ಕಡತ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 08 ಮಗಾಂಉಖಾಯೋ 2008 ದಿನಾಂಕ : 12–12–2010

ಗೆ.

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತಿ ಶಿವಮೊಗ್ಗ.

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜಯಡಿ ಸಸಿಗಳನ್ನು ನೆಡುವ ಕಾರ್ಯಕ್ರಮದಡಿ ಬೇಡಿಕೆ ಸಲ್ಲಿಸುವ ಎಲ್ಲಾ ವರ್ಗದ ಜಮೀನು/ಜಮೀನು ಬದುಗಳಲ್ಲಿ ಸಸಿಗಳನ್ನು ನೆಡಲು ಅನುಮತಿ ನೀಡುವ ಕುರಿತು.

ಉಲ್ಲೇಖ: ತಮ್ಮ ಪತ್ರದ ಸಂಖ್ಯೆ ಜಿಪಶಿ/ರಾಗ್ರಾಉಖಾಯೋ/ಅರಣ್ಯೀಕರಣ 2010–11 ದಿನಾಂಕ:2–7–2010.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ತಾವು ಸಲ್ಲಿಸಿರುವ ಪ್ರಸ್ತಾವನೆಯನ್ನು ಯೋಜನೆಯ ಮಾರ್ಗ ಸೂಚಿಗಳನ್ವಯ ಪರಿಶೀಲಿಸಿದೆ. ಗುಂಡಿಗಳನ್ನು ತೆಗೆದು ಅದರಲ್ಲಿ ಸಸಿಗಳನ್ನು ನೆಡುವ ಕಾಮಗಾರಿಗಳನ್ನು ಅಧಿನಿಯಮದಲ್ಲಿನ ಅನುಸೂಚಿ–1 ರಲ್ಲಿ ತಿಳಿಸಿರುವಂತೆ, ಪ್ರವರ್ಗ (2)ರ ಚಟುವಟಿಕೆ **"ಬರಗಾಲ ತಡೆಗಟ್ಟುವಿಕೆ"** (ಅರಣ್ಯೀಕರಣ ಮತ್ತು ಗಿಡ ನೆಡುವುದು ಒಳಗೊಂಡಂತೆ) ಯಡಿ ಪರಿಗಣಿಸಬಹುದಾಗಿರುತ್ತದೆ.

ಆದ್ದರಿಂದ, ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ ಗಿಡಗಳನ್ನು ನೆಡುವ ಅರಣ್ಯೀಕರಣದ ಕಾಮಗಾರಿಗಳನ್ನು ಸಾರ್ವಜನಿಕ ಸ್ಥಳಗಳಲ್ಲದೇ, ಎಲ್ಲಾ ವರ್ಗದ ರೈತರ ಜಮೀನಿನಲ್ಲಿ ಹಾಗೂ ಜಮೀನಿನ ಬದುಗಳಲ್ಲಿ ಕೈಗೊಂಡು ನಿರ್ವಹಿಸಬಹುದಾಗಿದೆ ಎಂಬುದಾಗಿ ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಯಥಾ ಪ್ರತಿಯನ್ನು ರಾಜ್ಯದ ಉಳಿದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮಾಹಿತಿಗಾಗಿ ಕಳುಹಿಸುತ್ತಾ ಸಸಿಗಳನ್ನು/ ಗಿಡನೆಡುವ ಅರಣ್ಯೀಕರಣ ಕಾಮಗಾರಿಗಳನ್ನು ತಮ್ಮ ಜಿಲ್ಲೆಯಲ್ಲಿ ಕೂಡ ಅದರಂತೆಯೇ, ಕ್ರಮವಹಿಸಲು ಸೂಚಿಸಿದೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ: ಗ್ರಾಅಪ 59 ಉಖಾಯೋ 2009 ದಿನಾಂಕ : 14–12–2010

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಸಮಗ್ರ ಜಲಾನಯನ ಕಾರ್ಯಕ್ರಮ ನಿರ್ವಹಣೆಯ ಚಟುವಟಿಕೆಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವ ಸಂಬಂಧ ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಕಳುಹಿಸುತ್ತಿರುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು (ಎನ್ ಆರ್‌ಇಜಿಎ) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಕೆ–11015/40/2009 (MGNREGA)ದಿನಾಂಕ 27.11.2010

* * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಸಮಗ್ರ ಜಲಾನಯನ ಕಾರ್ಯಕ್ರಮ ನಿರ್ವಹಣೆಯ ಚಟುವಟಿಕೆಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸುವ ಸಂಬಂಧ ಕೇಂದ್ರ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರಕ್ಕೆ ತಿಳಿಸಿರುತ್ತದೆ. ಇದರ ಸಂಬಂಧ ಕೇಂದ್ರ ಸರ್ಕಾರದ ಪತ್ರದ ಪ್ರತಿ ಮತ್ತು ಅದರೊಂದಿಗೆ ಸ್ವೀಕರಿಸಲಾದ ಒಗ್ಗೂಡಿಕೆಯ ಮಾರ್ಗಸೂಚಿಗಳ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ. ಒಗ್ಗೂಡಿಕೆಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಾಗ ಕೇಂದ್ರ ಸರ್ಕಾರ ತಿಳಿಸಿರುವ ಮಾರ್ಗಸೂಚಿಗಳನ್ನು ತಪ್ಪದೇ ಅಳವಡಿಸಿಕೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಗಾಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅನನ್ಯ ರಾಜ್ಯಸ್ಥೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 44 ಉಖಾಯೋ : 06

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 16–12–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೇಂದ್ರ ಸರ್ಕಾರದ ಉದ್ಯೋಗ ಖಾತರಿ ಪರಿಷತ್ ರಚಿಸಿದ ಕಾರ್ಯಸಮೂಹಗಳು ಕೆಲವೊಂದು ಕಾಮಗಾರಿಗಳನ್ನು ಕೈಗೊಳ್ಳುವುದರ ಬಗ್ಗೆ ಶಿಫಾರಸ್ಸು ಮಾಡಿರುವ ವರದಿಗಳು

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ J-11011/2/2010-MGNREGA (1) ದಿನಾಂಕ : 29.11.2010.

* * *

ಈ ಹಿಂದೆ ಜರುಗಿದ ರಾಜ್ಯ ಉದ್ಯೋಗ ಖಾತರಿ ಪರಿಷತ್ ಸಭೆಯಲ್ಲಿ ಚರ್ಚಿಸಿ, ಕೈಗೊಂಡಿರುವ ನಿರ್ಧಾರಗಳನ್ವಯ, ಯೋಜನೆಯ ಮಾರ್ಗಸೂಚಿಯಲ್ಲಿ ಸೂಚಿಸಲ್ಪಡದ ಕೆಲವೂಂದು ಕಾಮಗಾರಿಗಳಾದ ಶೌಚಾಲಯ ಗುಂಡಿಗಳ ನಿಮಾಣ, ಅಂಗನವಾಡಿ ಕಟ್ಟಡ, ವಸತಿ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಯೋಜನೆಯ 9ನೇ ಪ್ರವರ್ಗದಡಿ ಪರಿಗಣಿಸಿ, ಅನುಮೋದನೆ ನೀಡುವಂತೆ ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಇದೇ ರೀತಿ ವಿವಿಧ ರಾಜ್ಯಗಳಿಂದ ಅವರವರ ಪ್ರದೇಶಗಳ ಅಗತ್ಯತೆಗೆ ಅನುಗುಣವಾಗಿ, ಯೋಜನೆಯಲ್ಲಿ ಅನುಮತಿಸಲ್ಪಡದ ಕೆಲವೂಂದು ಕಾಮಗಾರಿಗಳು ಯೋಜನೆಯ 9ನೇ ಪ್ರವರ್ಗದಡಿ ಸೇರ್ಪಡೆ ಮಾಡುವ ಸಲುವಾಗಿ, ಬಂದಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಪರಿಗಣಿಸುವ ಸಲುವಾಗಿ ಕೇಂದ್ರ ಸರ್ಕಾರದ ಕೇಂದ್ರ ಉದ್ಯೋಗ ಖಾತರಿ ಪರಿಷತ್ ವಿವಿಧ ವಿಷಯಗಳನ್ನು ಪರಿಶೀಲಿಸಿ ವರದಿಯನ್ನು ನೀಡಲು, ಕಾರ್ಯಸಮೂಹಗಳನ್ನು ರಚಿಸಿದ್ದು, ಸದರಿ ಕಾರ್ಯಸಮೂಹಗಳು ಈಗ ಕೆಲವು ಕಾಮಗಾರಿಗಳನ್ನು ಹೆಚ್ಚುವರಿಯಾಗಿ ಯೋಜನೆಯಡಿ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿ ತನ್ನ ವರದಿಯನ್ನು ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪರಿಗಣನೆಗಾಗಿ ಸಲ್ಲಿಸಿರುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಕಾರ್ಯಸಮೂಹಗಳು ನೀಡಿರುವ ವರದಿಗಳನ್ನು ಪರಿಶೀಲಿಸಿ, ಕಾಮಗಾರಿಗಳನ್ನು ಯೋಜನೆಯಡಿ ಹೆಚ್ಚುವರಿಯಾಗಿ ತೆಗೆದುಕೊಳ್ಳುವುದರ ಬಗ್ಗೆ. ತನ್ನ ಅಭಿಪ್ರಾಯವನ್ನು ನೀಡಿರುತ್ತದೆ. ಇದರ ಸಂಬಂಧ ಕೇಂದ್ರ ಸರ್ಕಾರದ ಉಲ್ಲೇಖದಲ್ಲಿ ಕಾರ್ಯಸಮೂಹಗಳು, ಶಿಫಾರಸ್ಸು ಮಾಡಿ

ನೀಡಿರುವ ವರದಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಸದರಿ ವರದಿಗಳ ಮೇಲೆ ನೀಡಿರುವ ತಮ್ಮ ಸ್ಪಷ್ಟ ನಿರ್ಧಾರಗಳ ಪ್ರತಿಯನ್ನು ಇದರೊಂದಿಗೆ ತಮ್ಮ ಮಾರ್ಗದರ್ಶನಕ್ಕಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಲಗತ್ತಿಸಿದೆ. ಸದರಿ ವರದಿಯಲ್ಲಿ ಪ್ರಸ್ತಾಪಿತ ಚಟುವಟಿಕೆಗಳನ್ನು ಯೋಜನೆಯಡಿ ತೆಗೆದುಕೊಳ್ಳುವ ಬಗೆಗಿನ ವಿವರಗಳು. ಕೇಂದ್ರ ಸರ್ಕಾರದ ವೆಬ್‌ಸೈಟ್ ಇದರಲ್ಲಿ ಲಭ್ಯವಿರುತ್ತದೆ. ಸದರಿ ವಿವರಗಳನ್ನು ಅವರೋಹಣ ಮಾಡಿಕೊಂಡು, ಸದರಿ ವರದಿಯಲ್ಲಿ ತಿಳಿಸಲಾಗಿರುವ ಪ್ರತಿ ಚಟುವಟಿಕೆಗಳ ಸಂಬಂಧ ಶಿಫಾರಸ್ಸಿನ ಅನುಗುಣವಾಗಿ ಕೇಂದ್ರ ಸರ್ಕಾರ ನೀಡಿರುವ /ತಿಳಿಸಿರುವ ಅಂಶಗಳ ಅನುಸಾರ ತಪ್ಪದೇ ಅನುಷ್ಠಾನಗೊಳಿಸಲು ಎಲ್ಲಾ ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No.J-11011/2/2010-MGNREGA(1)**
**Government of India**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi 110114
29th November 2010

To

The Principal Secretary/ Secretary(Rural Development)
Department of Rural Development
Government of Karnataka

Subject : Implementation of recommendations of Working Groups

* * *

Sir,

Ministry of Rural Development set up the following Working Groups subsequent to decision of the Central Employment Guarantee Council to strengthen the implementation of the Mahatma Gandhi National Rural Employment Guarantee Act.

i. Working Group on Planning and Execution
ii. Working Group on Wage
iii. Working Group on Transparency and Accountability
iv. Working Group on capacity Building
v. Working Group on specific needs of specific category of workers
vi. Working Group on Works to be taken up on individual land

2. The reports submitted by Working Group were considered in the Ministry and the recommendation of the different Work Groups were thematically categorized as indicated below.

a) Individual land and list of permissible work
b) Management issues
c) Number of days of employment
d) Planning
e) Equity and social security
f) Transparency and accountability
g) Training issues
h) Unit of employment
i) Worksite facilities

3. The reports of the Working Group and the Ministry's views thereon have also been posted on the Mahatma Gandhi National Rural Employment Guarantee Act **www.nrega.nic.in** Recommendation of the work group under the thematic category "Individual land and list of permissible works" and the Ministry's views which were examined and approved enclosed.

4. All convergence projects, at the conceptual stage, will be approved by the Empowered Committee for Labour Budgets and only after such approval be taken up. The Labour Budget will reflect such works to ensure that convergence does not violate or compromise the Mahatma Gandhi NREGA Act.

5. You are requested to take necessary action as per the view of the Ministry and intimate the action taken to the Ministry. In case any clarifications is requested for giving effect to the approved recommendations of the working groups, the same must be addressed to the Ministry to ensure that the recommendations are implemented as per Ministry's views and are in conformity with the statutory requirement outlined in the Mahatma Gandhi NREGA Act. An early action in the matter would be appreciated.

This has the approval of Secretary(RD)

Yours faithfully,
Sd/-
**(J.S.AUDHKHASI)**
Under Secretary to the Government of India
Tel : 2338 1709

Copy to:

1. PS to SRD
2. PS to JS(S)
   NIC with the request to post on MGNREGA website

| S.No. | Recommendation | Ministry's views |
|---|---|---|
| 1. | Work Group on "Specific needs of special category of workers" has raised the issue of gender bias in the labour market and recommended preference to women friendly works, tools, more works like non timber forest products progressing as permissible works as well as 50% reservation for women mates. The Working Group has mentioned that these steps would encourage more women to participate in MGNREGA works and help reduce gender bias in labour market. | Ministry has agreed with the recommendation that the development of women friendly tools should be encouraged. However, processing activities cannot be defined as unskilled works. As far as reservation for women as mates is concerned, State Government are advised to consider the suggestion. |
| 2. | Working Group on "Specific needs of special category of workers" has brought out the need for suitable shelf of works so as encourage the participation of more persons with disabilities (Pwds)and aged persons in MGNREGS works. | State are advised to identify works from within the list of permissible works under Mahatma Gandhi NREGA Act. which are PwD friendly. |
| 3. | Working Group on "Specific needs of special category of workers" emphasized the need for social developmental infrastructure and suggested expanding the scope of works to drinking water, sanitation, housing anganwadis, community residential school etc. | This can only be done through convergence. The material cost would be borne by other schemes and the unskilled labour cost would borne under MGNREGS. |
| 4. | Working Group on "Workers to be taken up on individual land" has raised the issue of comprehensive menu of works and suggested expanding permissible works and linking with other allied activities(e.g. productivity of livestock, fisheries and homesteads) so as to have wider choice of land development activities. | Mahatma Gandhi NREGA Act. offers unskilled work. The activities specified are not included in the definition of unskilled work. Where unskilled labour is needed that may be brought under NREGA through convergence. |
| 5. | Working Group on "Works to be taken up on individual land" has proposed need based personnel and administrative costs approach rather than uniform systems. Working Group has mentioned that involvement of trained personnel in planning would help the farming community to identify the activities which may enhance or reduce the cost of work. | Ministry has agreed with the suggestion. State Government are advised to address the issue within the 6%administrative cost. |

| S.No. | Recommendation | Ministry's views |
|---|---|---|
| 6. | Working Group on "Works to be taken up on individual land" has emphasized the need for informed planning. For this purpose, they have suggested that a facilitator should be assigned to each group of 15-20 farmers. In order to ensure better access to resources and linkages, the SHG group leader's capacities need to be upgraded in the activities such as land and animal husbandry including integrated farming systems, non pesticide management practices etc. | Ministry has agreed with the suggestion. State Government may undertake the activity through convergence with National Rural Livelihood Mission (NRLM). |
| 7. | Working Group on "Works to be taken up on individual land" has raised the issue of social & moisture conservation work on SC/ST land. The group has suggested that in case of SC/ST farmers owning small holding (<half an acre) allowing each of them to have a farm pond may not be viable in which case a group approach can be adopted sharing the land loss and benefit by the group. Further, these small holdings have to be consolidated on a cluster approach or community farming mode. | Cooperative farming is already a belated policy of the Government . This however may be taken up by the State on a voluntary basis. |
| 8. | Working Group on "Specific need of special category of workers" has proposed that to have more options for women, women friendly works viz. collection of non timber forest produce and processing may be taken up under Mahatma Gandhi NREGA. To encourage participation of more persons with disabilities and aged persons in MGNREGA works, Working Group has suggested inclusion of works like nurseries, vermin compost production and vegetable garden as permissible activity under Mahatma Gandhi NREGA. | The recommended activities are a commercial activities which cannot be permitted under Mahatma Gandhi NREGA However, it may be undertaken through SGSY. |
| 9. | Working Group on "Specific needs of special category of workers" has suggested creation of suitable shelf of works and opportunities for the semi skilled persons with disabilities having soft and traditional skills and crafts like carpentry, masonry etc. | Mahatma Gandhi NREGA is for unskilled manual labour. Recommended activities can be taken through convergence. |

| S.No. | Recommendation | Ministry's views |
|---|---|---|
| 10. | Working Group on Planning and Execution has suggested identification of specific works based on agro ecological conditions. Also strengthening institutional capacities of GP and special set of guidelines for costal, waterlogged, desert and hill areas have also been suggested. | Ministry agreed with the suggestion. State Government are advised to take necessary action. |
| 11. | Working Group on "Works to be taken up on individual land" has raised the issue of works for soil fertility enhancement and suggested inclusion of works like soil fertility enhancement and soil and organic manure application and vegetation growth. Activities to enhance productivity of livestock, fisheries, homesteads etc. may also be taken up. | This can be done through convergence |
| 12. | Working Group on "Works to be taken up on individual land" has suggested to make wage employment an economic activities and recommended livestock development In terms of genetic improvement, feed availability, quality and storage, improving grazing lands, provision of water for livestock, upgrading cow shed, development of fingerings, platforms for drying crops etc. | This is outside the purview of the unskilled work. However, this may be done through convergence where unskilled labour is needed. |
| 13 | Working Group on "Works to be taken up on individual land" has suggested laying pipes from the improved tanks or water bodies to the land of beneficiaries by pumping arrangements invests in providing assured protective water supply to at least once per acre to all SC,ST and SF farmers | Mahatma Gandhi NREGA does not permit material intensive works. However, material intensive activities should be undertaken through convergence. |
| 14. | Working Group on "Works to be taken up on individual land" has raised the issue of enhancing productivity through taking up soil water conservations works. They have suggested that investment per acre or beneficiary must be activity based. It has also been suggested that a cap of Rs. 50,000/- for individual beneficiaries and no cap on for water resource development and management. | State Government are advised to consider the suggestion of putting a cap of Rs. 50,000 for individual beneficiaries. Investment beyond this ceiling may be considered through convergence of Mahatma Gandhi NREGA with other schemes/programmes. |

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ217ಉಖಾಯೋ2009 ದಿನಾಂಕ: 20–01–2011

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಜೈವಿಕ ಇಂಧನ ಕಾರ್ಯಕ್ರಮಗಳ ಕುರಿತು ಕಾರ್ಯಪಡೆ ನೀಡಿರುವ ಶಿಫಾರಸ್ಸಿನ ವರದಿಯನ್ನು ಅನುಷ್ಠಾನ ಮಾಡುವ ಬಗ್ಗೆ

ಉಲ್ಲೇಖ: ದಿನಾಂಕ 22–12–2010ರಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಕಾರ್ಯಕಾರಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿಯ ಸಭೆಯ ನಡವಳಿಗಳು

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣ್ಯ ಇಲಾಖೆಯ ಜೈವಿಕ ಇಂಧನ ಕಾರ್ಯಕ್ರಮದ ಹಸಿರು ಹೊನ್ನು ಯೋಜನೆ ಮತ್ತು ಬರಡು ಬಂಗಾರ ಯೋಜನೆಗಳಡಿ, ಅನುದಾನನ್ನು ಉಪಯೋಗಿಸಿಕೊಂಡು, ಗಿಡ ನಡುವಿಕೆಯ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಉಲ್ಲೇಖದನ್ವಯ ನಡೆದ ಸಭೆಯಲ್ಲಿ ಕಾರ್ಯಕಾರಿ ಸಮಿತಿಯಲ್ಲಿ ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಶಿಫಾರಸ್ಸಿನ ವರದಿಯನ್ನು ಕೂಡಲೇ ಅನುಷ್ಠಾನ ಮಾಡುವಂತೆ ಸಮಿತಿಯು ತಿಳಿಸಿರುತ್ತದೆ. ರಾಜ್ಯದ ನಿಧಿಯಿಂದ ಈಗ ಬಹುತೇಕ ಜಿಲ್ಲೆಗಳಿಗೆ ಬೇಡಿಕೆಯನುಸಾರ ಮತ್ತು ಪ್ರಗತಿಯನ್ನು ಆಧರಿಸಿ ಅನುದಾನವನ್ನು ಯೋಜನೆಯ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನವನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಅರಣ್ಯ ಇಲಾಖೆಯ ಜೈವಿಕ ಇಂಧನ ಕಾರ್ಯಕ್ರಮದಡಿ ಗಿಡ ನೆಡುವಿಕೆಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ವಹಿಸುವಂತೆ ಕೋರಿದೆ.

ಮುಂದುವರೆದು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅರಣ್ಯ ಇಲಾಖೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಯೆಂದು ಗುರುತಿಸಿ ಯೋಜನೆಯ ಅನುಷ್ಠಾನವನ್ನು ಯಾವ ತೊಂದರೆ ಇಲ್ಲದಂತೆ ಸುಲಲಿತವಾಗಿ ನಿರ್ವಹಿಸಲು ಆದೇಶವನ್ನು ಹೊರಡಿಸಲು ಉದ್ದೇಶಿಸಲಾಗಿದೆ. ಆದುದರಿಂದ ಅರಣ್ಯ ಇಲಾಖೆಯ ಕಾಮಗಾರಿಗಳು ಋತುಮಾನಾಧಾರಿತವಾಗಿರುವುದರಿಂದ, ಕೂಡಲೇ ಗ್ರಾಮ ಪಂಚಾಯಿತಿಗಳ ಗ್ರಾಮ ಸಭೆಗಳಲ್ಲಿ ಮಂಡಿಸಿ, ಗ್ರಾಮ ಪಂಚಯಿತಿಗಳಿಂದ ಅನುಮೋದಿಸಿಕೊಂಡು ಕಾಮಗಾರಿಗಳ ಗುಚ್ಚವನ್ನು ತಯಾರಿಸಿ ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ140ಉಖಾಯೋ2009 ದಿನಾಂಕ: 21–01–2011

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಸಾರ್ವಜನಿಕರ ಉಪಯೋಗಕ್ಕಾಗಿ ಸಂಪನ್ಮೂಲ ಕೇಂದ್ರಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ಥಾಪನೆ ಮಾಡುವ ಬಗ್ಗೆ

ಉಲ್ಲೇಖ: ಅಧ್ಯಕ್ಷರು, ಕರ್ನಾಟಕ ಜ್ಞಾನ ಆಯೋಗ, ವಿಕಾಸಸೌಧ, ಬೆಂಗಳೂರು ಇವರ ಪತ್ರದ ಸಂಖ್ಯೆ: ಕೆಜೆಎ/ಆಡಳಿತ/1.3/2010/339 ದಿನಾಂಕ 16.12.2010

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಂಬಂಧಿಸಿದಂತೆ ಸಾರ್ವಜನಿಕರ ಮಾಹಿತಿಗಾಗಿ ಹಾಲಿ ಇಲಾಖೆಯಲ್ಲಿ ಅನುಷ್ಠಾನವಾಗುತ್ತಿರುವ ಯೋಜನೆಗಳ ಮಾಹಿತಿಗಳನ್ನು ಇಂಧೀಕರಿಸುವ ಸಲುವಾಗಿ ಹಾಗೂ ಜನರ ಜ್ಞಾನ ಭಂಡಾರವನ್ನು ಹೆಚ್ಚಿಸುವ ಸಲುವಾಗಿ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲು ಕರ್ನಾಟಕ ಜ್ಞಾನ ಆಯೋಗದವರು ಈ ಕುರಿತು ಅನೇಕ ಶಿಫಾರಸ್ಸುಗಳ ವರದಿಯನ್ನು ಸಲ್ಲಿಸಿ ಸರ್ಕಾರಕ್ಕೆ ತಿಳಿಸಿರುತ್ತಾರೆ. ಶಿಫಾರಸ್ಸಿನ ವರದಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಕೂಡ ಸೇರಿರುತ್ತದೆ. ಈ ಸಂಬಂಧ ಆಯೋಗದವರು ಕೂಡಲೇ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಇಲಾಖೆಯಲ್ಲಿ ಅನುಷ್ಠಾನವಾಗಿರುತ್ತಿರುವ ಯೋಜನೆಗಳ ಮಾಹಿತಿಯನ್ನು ಲಭ್ಯವಾಗುವಂತೆ ಕ್ರಮ ವಹಿಸಲು ತಿಳಿಸಿರುತ್ತಾರೆ.

ಈಗಾಗಲೇ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಭಾರತ್ ನಿರ್ಮಾಣ್ ರಾಜೀವ್‌ಗಾಂಧಿ ಸೇವಾ ಕೇಂದ್ರಗಳನ್ನು ನಿರ್ಮಿಸಲು ಹಾಗೂ ಪ್ರತಿ ತಾಲ್ಲೂಕು ಪಂಚಾಯಿತಿಯಲ್ಲಿ ಭಾರತ್ ನಿರ್ಮಾಣ್ ರಾಜೀವ್‌ಗಾಂಧಿ ಸೇವಾ ಕೇಂದ್ರಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಿ ಸೂಕ್ತ ಕ್ರಮ ವಹಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ. ಅದೇ ರೀತಿ ಗ್ರಾಮ ಸ್ವರಾಜ್ ಯೋಜನೆಯಡಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಸಂಪನ್ಮೂಲ ಕೇಂದ್ರಗಳನ್ನು ಕೂಡ ಸ್ಥಾಪಿಸಲಾಗಿರುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಭಾರತ್ ನಿರ್ಮಾಣ್ ರಾಜೀವ್‌ಗಾಂಧಿ ಸೇವಾ ಕೇಂದ್ರಗಳನ್ನು ತಮ್ಮ ಜಿಲ್ಲೆಯಲ್ಲಿ ತೆರೆದು ಸದರಿ ಕೇಂದ್ರಗಳಲ್ಲಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿ ಕೇಂದ್ರಗಳ ಉಪಯುಕ್ತತೆಯನ್ನು ಸಾರ್ವಜನಿಕರು ಪಡೆಯುವಂತೆ ಕ್ರಮ ವಹಿಸಲು ಸೂಚಿಸಿದೆ ಮತ್ತು ಈ ಸಂಬಂಧ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ08ಉಖಾಯೋ2010 ದಿನಾಂಕ : 27–01–2011

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: 2010–11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವೈಯಕ್ತಿಕ ಭೂ ಅಭಿವೃದ್ಧಿ ಕಾಮಗಾರಿಗಳಡಿ ತೋಟಗಾರಿಕೆ ಬೆಳೆಗಳಾದ ಬಾಳೆಯನ್ನು ಬೆಳೆಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ : ಗ್ರಾಅಪ08/ಉಖಾಯೋ/2010
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಗ್ರಾಅಪ ಇಲಾಖೆ ಇವರು ಸರ್ಕಾರದ ಕಾರ್ಯದರ್ಶಿ (ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ ಇವರೊಡನೆ ಚರ್ಚಿಸಿದನ್ವಯ

* * *

ಉಲ್ಲೇಖ (1)ರಲ್ಲಿ ಮಾನ್ಯ ಮುಖ್ಯಮಂತ್ರಿಗಳು 2010–11ನೇ ಸಾಲಿನ ಆಯವ್ಯದ ಭಾಷಣದಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮಗಳ ಕುರಿತಂತೆ ಪ್ರಕಟಿಸಿರುವ ಮೇರೆಗೆ ತೋಟಗಾರಿಕೆ ಬೆಳೆಗಳನ್ನು ಮಾರ್ಗಸೂಚಿಗಳನ್ವಯ ರೈತರ ಜಮೀನುಗಳಲ್ಲಿ ತೋಟದ ಹಣ್ಣಿನ ಬೆಳೆಗಳನ್ನು 2010–11ನೇ ಸಾಲಿನಲ್ಲಿ ಆದ್ಯತೆ ಮೇರೆಗೆ ಪರಿಗಣಿಸಿ ಹಾಗೂ 2011–12ನೇ ಸಾಲಿನಲ್ಲಿ ಕಾರ್ಮಿಕ ಮುಂಗಡ ಆಯವ್ಯಯ ಪತ್ರದ ತಯಾರಿಕೆಯಲ್ಲಿ ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಅನುಷ್ಠಾನಗೊಳಿಸಲು ತಮ್ಮ ವ್ಯಾಪ್ತಿಗೆ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಸೂಕ್ತವಾದ ಸೂಚನೆಗಳನ್ನು ನಿಡುವಂತೆ ತಿಳಿಸಲಾಗಿತ್ತು.

ಮುಂದುವರೆದು, ಈಗ ಕೆಲವು ಜಿಲ್ಲೆಗಳಲ್ಲಿ ಬಾಳೆ ಬೆಳೆಗಳನ್ನು ಅನುಷ್ಠಾನಗೊಳಿಸಲು ಹೆಚ್ಚಿನ ಬೇಡಿಕೆ ಇರುವುದರಿಂದ ಹಾಗೂ ಸದರಿ ವಿಷಯದ ಕುರಿತು, ಸರ್ಕಾರದ ಕಾರ್ಯದರ್ಶಿ (ತೋಟಗಾರಿಕೆ) ಇವರೊಡನೆ ಚರ್ಚಿಸಿದ ಹಿನ್ನೆಲೆಯಲ್ಲಿ ಕೂಡಲೇ ಪ್ರಸ್ತುತ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ವೈಯಕ್ತಿಕ ಭೂ ಅಭಿವೃದ್ಧಿ ಕಾಮಗಾರಿಗಳಡಿ ತೋಟಗಾರಿಕೆ ಬೆಳೆಗಳನ್ನು ಬೆಳೆಸಿ ಅನುಷ್ಠಾನಗೊಳಿಸಲು ತಕ್ಕ ಸೂಚನೆಗಳನ್ನು ತಮ್ಮ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿಗಳಿಗೆ ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿನ ಆದ್ಯತೆ ನೀಡಿ ಅನುಷ್ಠನಗೊಳಿಸಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು : ಅಭಿನಂದನೆಗಳೊಂದಿಗೆ

1. ಸರ್ಕಾರದ ಕಾರ್ಯದರ್ಶಿಗಳು, (ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
2. ನಿರ್ದೇಶಕರು, ತೋಟಗಾರಿಕಾ ಇಲಾಖೆರವರ ಸೂಕ್ತ ಕ್ರಮಕ್ಕಾಗಿ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಪ್ರಾಯೋಗಿಕವಾಗಿ ಇತರೆ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವ ಕುರಿತು.

ಉಲ್ಲೇಖ: 1. ದಿನಾಂಕ 12–10–2010ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

2. ದಿನಾಂಕ 07–01–2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ.

* * *

### ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲುಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳನ್ನು ಕೂಡ ಕಾರ್ಯಗತಗೊಳಿಸಲಾಗುತ್ತಿದ್ದು, ಸದರಿ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖಾ ಅನುಷ್ಠಾನಾಧಿಕಾರಿಗಳೇ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಆದರೆ, ಪಂಚಾಯತ್ ರಾಜ್ ಸಂಸ್ಥೆಯನ್ನು ಹೊರತುಪಡಿಸಿ ಯಾವುದೇ ಇಲಾಖೆಯನ್ನು ಸ್ವತಂತ್ರವಾಗಿ ಯೋಜನೆಯಡಿ ಅನುಷ್ಠಾನ ಸಂಸ್ಥೆ ಎಂದು ಪರಿಗಣಿಸಿರುವುದಿಲ್ಲ. ಆದ ಕಾರಣ ಯೋಜನೆಯಡಿ ಉದ್ಯೋಗಕ್ಕಾಗಿ ಸಲ್ಲಿಸುವ ಬೇಡಿಕೆ ಆಧಾರದ ಮೇಲೆ ಅನುಮೋದಿತ ಕಾಮಗಾರಿ ಗುಚ್ಚದಂತೆ ಮಾರ್ಗಸೂಚಿಗಳನ್ವಯ ಆದ್ಯತಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತ್‌ಗಳು ಸೂಕ್ತ ಕಾಮಗಾರಿ ಆದೇಶ ಮತ್ತು NMR ಗಳನ್ನು ಅನುಷ್ಠಾನಗೊಳಿಸುವ ಇಲಾಖಾ ಅಧಿಕಾರಿಗಳಿಗೆ ನೀಡುತ್ತಿದ್ದು ಸದರಿ ಕಾಮಗಾರಿಗೆ ಸಂಬಂಧಿಸಿದ ಹಣ ಪಾವತಿಯನ್ನು ಕೂಡ ಗ್ರಾಮ ಪಂಚಾಯತ್‌ಗಳ ಮೂಲಕವೇ ಮಾಡಲಾಗುತ್ತಿರುತ್ತದೆ. ಇದರಿಂದಾಗಿ ಯೋಜನೆ ಅನುಷ್ಠಾನದಲ್ಲಿ ಕಾಲ ವಿಳಂಬವಾಗುತ್ತಿದ್ದು ಅನುಷ್ಠಾನ ಇಲಾಖೆಗಳು ಅನೇಕ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ ಹಾಗೂ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಋತುಮಾನಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸ ಬೇಕಾಗಿರುವುದರಿಂದ ಸದರಿ ಇಲಾಖೆಗಳನ್ನು ಕೂಡ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಯೋಜನೆಯ ಮಾರ್ಗಸೂಚಿಯನ್ವಯ ಸೂಕ್ತ ಅವಕಾಶ ಕಲ್ಪಿಸಿದಲ್ಲಿ ಯೋಜನೆಯನ್ನು ಇನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ ಎಂಬುದಾಗಿ ವಿವಿಧ ಇಲಾಖಾ ಮುಖ್ಯಸ್ಥರುಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಸಂಬಂಧ ಪಂಚಾಯತ್‌ರಾಜ್ ಸಂಸ್ಥೆಗಳನ್ನೊಳಗೊಂಡಂತೆ ಇತರೆ ಇಲಾಖೆಗಳನ್ನು ಯೋಜನೆಯ ಅನುಷ್ಠಾನದಲ್ಲಿ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಪ್ರಾಯೋಗಿಕವಾಗಿ ಏಳು ಜಿಲ್ಲೆಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಕಾಮಗರಿಗಳನ್ನು ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸಿಕೊಡಲು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂ. ಗ್ರಾಅಪ167: ಉಖಾಯೋ:2010 ಬೆಂಗಳೂರು, ದಿನಾಂಕ 19–02–2011

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ ಪಂಚಾಯತ್‌ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಈ ಕೆಳಕಂಡ ಜಿಲ್ಲೆಗಳಲ್ಲಿ ಸದರಿ ಜಿಲ್ಲೆಗಳ ಮುಂದೆ ತಿಳಿಸಿರುವಂತೆ ವಿವಿಧ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿಗಧಿಪಡಿಸಿದ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗಸೂಚಿಗಳನ್ವಯ ಹಾಗೂ ಆದೇಶದಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

| ಕ್ರಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನಾಧಿಕಾರಿ |
|---|---|---|---|
| 1 | ಬಾಗಲಕೋಟೆ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಬಾಗಲಕೋಟೆ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಬಾಗಲಕೋಟೆ |
| 2 | ಬೆಳಗಾಂ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಬೆಳಗಾಂ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಬೆಳಗಾಂ |
| 3 | ಚಿತ್ರದುರ್ಗ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಚಿತ್ರದುರ್ಗ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಚಿತ್ರದುರ್ಗ |
| 4 | ಧಾರವಾಡ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಧಾರವಾಡ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಧಾರವಾಡ |
| 5 | ಹಾಸನ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಹಾಸನ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಹಾಸನ |
| 6 | ತುಮಕೂರು | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ತುಮಕೂರು<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ತುಮಕೂರು |
| 7 | ಉತ್ತರ ಕನ್ನಡ | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಉತ್ತರ ಕನ್ನಡ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉತ್ತರ ಕನ್ನಡ |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಛದಲ್ಲಿ ಸೇರಿಸತಕ್ಕದ್ದು.
2. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳ ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಅಂತಹ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯಿತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ ಕ್ರಿಯಾ ಯೋಜನೆಗೆ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.

4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಸದರಿ ಇಲಾಖೆಗಳ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ NMR ಗಳನ್ನು MIS ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು MIS ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ login ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ login ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ವಿತರಿಸಿರುವ NMR ಗಳನ್ನು ಪಡೆಯಬಹುದಾಗಿದೆ.
6. MIS ನಿಂದ ಪಡೆದ NMR ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು MIS ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ MIS ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ದೃಢೀಕರಿಸುವುದರ ಜೊತೆಗೆ MIS ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
9. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ NMR ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಗೆ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು MIS ನಲ್ಲಿ ದಾಖಲಿಸತಕ್ಕದ್ದು. (ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೇರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಬಹುದಾಗಿರುತ್ತದೆ)
10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ login ಮೂಲಕವೇ MIS ನಲ್ಲಿ ಭರ್ತಿ ಮಾಡತಕ್ಕದ್ದು.
11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ದೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.
12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.
13. ಕೇಂದ್ರ/ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ / ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ08ಉಖಾಯೋ2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2,
ಬೆಂಗಳೂರು, ದಿನಾಂಕ : 21–02–2011

## ಸುತ್ತೋಲೆ

ವಿಷಯ: 2010–11ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಭೂ ಅಭಿವೃದ್ಧಿ (ಪ್ರದೇಶ ವಿಸ್ತರಣೆ) ಕಾರ್ಯಕ್ರಮಕ್ಕೆ ತೋಟಗಾರಿಕೆ ಇಲಾಖೆಯ ನರ್ಸರಿಗಳಲ್ಲಿ ಉತ್ಪಾದಿಸುವ ವಿವಿಧ ಸಸಿ/ಕಸಿ ಗಿಡಗಳನ್ನು ಉಪಯೋಗಿಸಿಕೊಳ್ಳುವ ಬಗ್ಗೆ.

* * *

2010–11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯ ನರ್ಸರಿಗಳಲ್ಲಿ ಉತ್ಪಾದಿಸಲಾದ/ಬೆಳೆದ ವಿವಿಧ ಸಸಿ/ಕಸಿ ಗಿಡಗಳನ್ನು ಆ ಪ್ರದೇಶದಲ್ಲಿರುವ ರೈತರು/ಫಲಾನುಭವಿಗಳು ಉಪಯೋಗಿಸದೆ, ಬೇರೆ ಮೂಲಗಳಿಂದ ಖರೀದಿಸುತ್ತಿರುವುದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ ಮತ್ತು ಇದರ ಪರಿಣಾಮ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಭಿವೃದ್ಧಿಪಡಿಸಿದ ಗಿಡಗಳು, ಉಳಿಕೆಯಾಗಿ ಸರ್ಕಾರಕ್ಕೆ ನಷ್ಟ ಉಂಟಾಗುತ್ತದೆ. ಇದನ್ನು ತಡೆಗಟ್ಟಲು, ಮೊಟ್ಟಮೊದಲು, ಬೇರೆ ಮೂಲಗಳಿಂದ ರೈತರು ಖರೀದಿಸುವುದನ್ನು ನಿಬಂಧಿಸುವುದು ಅವಶ್ಯಕವಾಗಿದೆ. ಆದುದರಿಂದ, ಸರ್ಕಾರದ ತೋಟಗಾರಿಕೆ ಇಲಾಖೆಯ ನರ್ಸರಿಗಳಲ್ಲಿ ಉತ್ಪಾದಿಸಲಾದ ಗಿಡಗಳನ್ನು ರೈತರು ಖರೀದಿಸುವುದನ್ನು ಹೆಚ್ಚಾಗಿ ಪ್ರೋತ್ಸಾಹಿಸುವುದು, ಅನುಷ್ಠಾನಾಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಈ ಸಂಬಂಧ, ತಾವು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಕ್ಕ ಸೂಚನೆಗಳನ್ನು ನೀಡಿ, ತೋಟಗಾರಿಕೆ ಇಲಾಖೆಯ ಜಿಲ್ಲಾ/ತಾಲ್ಲೂಕು ಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಸಮನ್ವಯ ಸಾಧಿಸಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯ ನರ್ಸರಿಗಳಲ್ಲಿ ಬೆಳೆದ ಮಾವು, ಸಪೋಟ, ತೆಂಗು, ಅಡಿಕೆ ಗಿಡಗಳನ್ನು ಫಲಾನುಭವಿಗಳಿಗೆ ವಿತರಿಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು, ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಈ ಮೂಲಕ ಕೋರಿದೆ ಮತ್ತು ಈ ಕಾರ್ಯಕ್ರಮವನ್ನು ಮೊಟ್ಟ ಮೊದಲು ಸರ್ಕಾರದಿಂದ ನಿರ್ವಹಣೆ ಮಾಡುತ್ತಿರುವ ತೋಟಗಳಲ್ಲಿ ಗಿಡಗಳು (Nurseries) ಲಭ್ಯವಿಲ್ಲದ ಬಗ್ಗೆ ಸಂಬಂಧಿಸಿದ ಅನುಷ್ಠಾನ ಅಧಿಕಾರಿಗಳಿಂದ ದೃಢೀಕರಣ ಪಡೆದು ನಂತರ ಖಾಸಗಿ ತೋಟಗಳಲ್ಲಿ ಫಲಾನುಭವಿಗಳು ಅಗತ್ಯವಿರುವ ಗಿಡಗಳನ್ನು ಇಲಾಖಾ ಅನುಮೋದಿತ ದರಪಟ್ಟಿಯಂತೆ ಖರೀದಿ ಮಾಡುವ ಷರತ್ತಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಸೂಚಿಸಿದೆ.

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

ರಾಜ್ಯದ ಎಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವ ಕುರಿತು.

ಉಲ್ಲೇಖ:
1. ದಿನಾಂಕ 12-10-2010ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
2. ದಿನಾಂಕ 07-01-2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ.
3. ಸರ್ಕಾರದ ಆದೇಶ ಸಂ. ಗ್ರಾಅಪ:167: ಉಖಾಯೋ:2010 ಬೆಂಗಳೂರು, ದಿನಾಂಕ 19-02-2011

* * *

### ಪ್ರಸ್ತಾವನೆ

ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಚಟುವಟಿಕೆಗಳನ್ನು ಆಯಾ ಇಲಾಖೆಯ ಅನುಷ್ಠಾನಾಧಿಕಾರಿಗಳು ತಾವೇ ಸ್ವತಂತ್ರವಾಗಿ ಋತುಮಾನಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸಲು ಸದರಿ ಇಲಾಖೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಜೊತೆಗೆ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಪ್ರಾಯೋಗಿಕವಾಗಿ ಪ್ರಾಥಮಿಕ ಹಂತದಲ್ಲಿ ರಾಜ್ಯದ ಏಳು ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖ (3)ರಲ್ಲಿ ಆದೇಶಿಸಿದ್ದು, ಈಗ ರಾಯಚೂರು ಜಿಲ್ಲೆಯಲ್ಲಿ ಸದರಿ ಇಲಾಖೆಗಳ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಆಯಾ ಇಲಾಖೆಯ ಅನುಷ್ಠಾನಾಧಿಕಾರಿಗಳು ಸ್ವತಂತ್ರವಾಗಿ ನಿರ್ವಹಿಸಲು ಮತ್ತು ಯೋಜನೆಯ ಅನುಷ್ಠಾನದಲ್ಲಿ ಅನುಸರಿಸುವ ಪ್ರಕ್ರಿಯೆಗಳಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಆದೇಶಿಸುವಂತೆ ಕೋರಿರುತ್ತಾರೆ. ಆದುದರಿಂದ ಸರ್ಕಾರವು ಈ ಸಂಬಂಧ ಪಂಚಾಯತ್‌ರಾಜ್ ಸಂಸ್ಥೆಗಳ ಜೊತೆಗೆ ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳೆಂದು ಪ್ರಾಯೋಗಿಕವಾಗಿ ಪರಿಗಣಿಸಲು ತೀರ್ಮಾನಿಸಿದೆ. ಆದುದರಿಂದ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂ. ಗ್ರಾಅಪ:167: ಉಖಾಯೋ:2010 ಬೆಂಗಳೂರು, ದಿನಾಂಕ 10-03-2011

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ ಪಂಚಾಯತ್‌ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ರಾಯಚೂರು ಜಿಲ್ಲೆಯಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿಗದಿಪಡಿಸಿದ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗಸೂಚಿಗಳನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನಾಧಿಕಾರಿ |
|---|---|---|---|
| 1 | ರಾಯಚೂರು | 1. ಅರಣ್ಯ ಇಲಾಖೆ<br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ರಾಯಚೂರು |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಛದಲ್ಲಿ ಸೇರಿಸತಕ್ಕದ್ದು.
2. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳ ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಅಂತಹ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯಿತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ ಕ್ರಿಯಾ ಯೋಜನೆಗೆ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಸದರಿ ಇಲಾಖೆಗಳ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ NMR ಗಳನ್ನು MIS ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು MIS ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ login ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ login ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ವಿತರಿಸಿರುವ NMR ಗಳನ್ನು ಪಡೆಯಬಹುದಾಗಿದೆ.
6. MIS ನಿಂದ ಪಡೆದ NMR ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು MIS ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ MIS ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ದೃಢೀಕರಿಸುವುದರ ಜೊತೆಗೆ MIS ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
9. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ NMR ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಗೆ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು MIS ನಲ್ಲಿ ದಾಖಲಿಸತಕ್ಕದ್ದು. (ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೇರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಬಹುದಾಗಿರುತ್ತದೆ)
10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ login ಮೂಲಕವೇ MIS ನಲ್ಲಿ ಭರ್ತಿ ಮಾಡತಕ್ಕದ್ದು.
11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ದೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.

12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.
13. ಕೇಂದ್ರ/ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ / ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು / ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು
4. ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

**ಪ್ರತಿಯನ್ನು**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂಚಾಯತ್‌ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಗುಲ್ಬರ್ಗಾ / ಬೆಳಗಾಂ.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಹೆಚ್ಚಿನ ಪ್ರತಿಗಳು / ರಕ್ಷಾ ಕಡತ.

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ:69:ಉಖಾಯೋ:2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 05–04–2011

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ದೇಶದ ರಾಷ್ಟ್ರೀಯ ಹೆದ್ದಾರಿ ರಸ್ತೆಗಳ ಬದಿಗಳಲ್ಲಿ ಗಿಡಗಳನ್ನು ನೆಡುವ ಬಗ್ಗೆ.

ಉಲ್ಲೇಖ: ನಿರ್ದೇಶಕರು (ಎಂಜಿಎನ್‌ಆರ್‌ಇಜಿಎಸ್) ಇವರ ಪತ್ರದ ಸಂಖ್ಯೆ : ಹೆಚ್–11014/6/2010/ ಎಂಜಿಎನ್‌ಆರ್‌ಇಜಿಎ ದಿನಾಂಕ 07–02–2011.

* * *

ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ಹಸಿರಿನ ಪದರನ್ನು ಹೆಚ್ಚಿಸಲು, ಸುಡು ಬಿಸಿಲನ್ನು ತಡೆಯುವ ಸಲುವಾಗಿ, ನೆರಳನ್ನು ಕಲ್ಪಿಸಲು, ಪರಿಸರದಲ್ಲಿ ವಾಯುಮಾಲಿನ್ಯತೆಯನ್ನು ಕಾಪಾಡುವ ಸಲುವಾಗಿ, ಅರಣ್ಯೀಕರಣದ ಕಾಮಗಾರಿಗಳಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚು ಒತ್ತು ಕೊಡಲು ತಿಳಿಸಿರುತ್ತಾರೆ. ಅರಣ್ಯೀಕರಣದ ಕಾಮಗಾರಿಗಳಲ್ಲಿ ಮುಖ್ಯವಾಗಿ ಗಿಡಗಳನ್ನು ನೆಡುವ ಕಾಮಗಾರಿಗಳು, ಯೋಜನೆಯ ಎರಡನೇ ಆದ್ಯತೆಯ ಚಟುವಟಿಕೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿಕೊಂಡು, ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು. ಕೇಂದ್ರ ಸರ್ಕಾರದ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ. ಸದರಿ ಪ್ರಸ್ತಾಪಿತ ಕಾಮಗಾರಿಯನ್ನು ಮತ್ತು ಅರಣ್ಯ ಇಲಾಖೆಯ ಇತರೆ ಕಾಮಗಾರಿಗಳನ್ನು Convergence ಮೂಲಕ, ಯೋಜನೆಯ ಮಾರ್ಗಸೂಚಿಗಳನ್ನು ಅನುಸರಿಸಿ ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**No. H-11014/6/2010-MGNREGA**
**Government of Karnataka**
**Ministry of Rural Development**
**Department of Rural Development**
**(Mahatma Gandhi NREGA Division)**

7th February 2011

To,

Principal Secretary / Secretary (RD)
All State / UTs

Subject: Launching an afforestation drive along National Highways in the country to increase the green cover

* * *

Sir/Madam,

Suggestions have been received by the Government to take action for plantation of trees on a large scale on the sides of National Highways through out the country. The issue has also been raised by members of Parliament during debates in the Lok Sabha. As India has vast tracts of land along the National Highways through out the country this land can be utilized for planting tees of varying utility including minor economic uses, minor forest produces as well as for providing shelter against the scorching heat during the summer season. Afforestation and reafforestation can also be used to improve the quality of human life by soaking up pollution and dust from the air, re-building natural habitats and ecosystem, mitigate global warming and more particularly to get rain.

Afforestation and tree plantation is a permissible activity under Mahatma Gandhi NREGA. Operational Guidelines for MGNREGA provide for convergence of other rural development programmes with MGNREGA with in the parameters of the Act. Guidelines for convergence of rural development programmes of Ministry of Environment & Forests (MoE&F) with MGNREGA have already been issued. These guidlines provide for convergence of MGNREGA activities with similar works under National Afforestation Programmes (NAP) MoE&F. Reforestation and tree plantation such as Avenue plantation, Shelter belt plantation and road, rail, canal and boundary plantation etc. are permissible activities under NAP. Therefore, the State Governments may consider the suggestion regarding launching an afforestation drive along the National Highways in the country. However, this should mandatorily be within the norms and processes of Mahatma Gandhi NREGA.

Yours Faithfully,

**(Indu Sharma)**
Director (MGNREGA)

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ:08:ಉಖಾಯೋ:2008 ದಿನಾಂಕ: 25–04–2011

# ಸುತ್ತೋಲೆ

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೈತರು ತಮ್ಮ ವೈಯಕ್ತಿಕ ಜಮೀನಿನಲ್ಲಿ ಭೂ ಅಭಿವೃದ್ಧಿ ಕಾಮಗಾರಿಗಳ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವ ಕುರಿತು.

ಉಲ್ಲೇಖ: ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ : ಜೆ–11060/1/2011 / ಎಂಜಿಎನ್‌ಆರ್‌ಇಜಿಎ ದಿನಾಂಕ 23–03–2011.

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಉಲ್ಲೇಖಿತ ಪತ್ರದಲ್ಲಿ ರೈತರು ತಮ್ಮ ಜಮೀನಿನಲ್ಲಿ ವೈಯಕ್ತಿಕವಾಗಿ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತಮ್ಮ ಜಮೀನುಗಳು ಉದ್ಯೋಗಕ್ಕಾಗಿ ನೋಂದಾಯಿಸಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಸ್ಥಳದಲ್ಲಿ ಇರಬೇಕು ಎಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ಈ ಸಂಬಂಧ ಉಲ್ಲೇಖದಲ್ಲಿ ಸ್ವೀಕರಿಸಲಾದ ಕೇಂದ್ರ ಸರ್ಕಾರ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ರಾಜ್ಯದ ಎಲ್ಲಾ ಅನುಷ್ಠಾನಾಧಿಕಾರಿಗಳು ರೈತರ ಜಮೀನಿನಲ್ಲಿ ವೈಯಕ್ತಿಕವಾಗಿ ಭೂ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಸದರಿ ಉಲ್ಲೇಖಿತ ಪತ್ರದಲ್ಲಿ ನೀಡಿರುವ ಸೂಚನೆಯಂತೆ ಕ್ರಮವಹಿಸಲು ಸೂಚಿಸಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಅನುಸಂಧಾನ

**No. J-11060/4/2011-MGNREGA**
**Government of Karnataka**
**Ministry of Rural Development**
**Department of Rural Development**
**(Mahatma Gandhi NREGA Division)**

Krishi Bhavan, New Delhi 110 114
23rd March 2011

Subject : Works on individual land under Mahatma Gandhi NREGA

* * *

Sir,

Ministry has received a reference for guidance where the individual beneficiaries having their own land in Grama Panchayats other than where they are registered may avail the benefits of facilities provided in Para 1(iv) of Schedule I of the Mahatma Gandhi NREG Act.

2. In this context, attention if drawn to Para 1 of Schedule II of the Mahatma Gandhi National Rural Employment Guarantee Act, the adult members of every household who - (i) reside in any rural areas; and (ii) are willing to do unskilled manual work may submit their names, age and the address of the household to the Grama Panchayat at the village level (Grama Panchayat) in the jurisdiction of which they reside for registration of their household of issuance of a job card.

3. It is clear that the right to work is linked with the place of residence and not with the place where the individual beneficiary has land of his own. Attention is also drawn to the amendment in Schedule I wherein the following conditions were stipulated vide proviso added to Para 1, sub paragraph (iv)

   a. The individual land owner shall be a job card holder and also work in the project

   b. For each such project the labour material ratio of 60:40 shall be maintained at the Grama Panchayat level.

   c. Projects shall be approved by the Gram Sabha and the Grama Panchayat and shall be part of the annual shelf of rojects.

   d. No contractors or machinery shall be used for the execution of work and

   e. No machinery shall be purchased.

4. As such, the benefits of facilities provided in Para 1 (iv) of Schedule I of the Mahatma Gandhi NREG Act may not be availed of by individual beneficiaries having their own lands in other Grama Panchayats.
5. This may please be noted for information and guidance.
6. This has the approval of Hon. Minister (Rural Development)

Yours faithfully,

**(J.S. Audhkhasi)**
Under Secretary to The Government of India
Tel : 2338 1709

**Principal Secretary (RD & PR)**
All States / UTs

Copy to
1. PS to SRD
2. PS to JS(S)
3. NIC for posting on the Mahatma Gandhi NREGA website.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ:51:ಉಖಾಯೋ 2011 ದಿನಾಂಕ : 10–05–2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಭಾರತ್ ನಿರ್ಮಾಣ್ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ನಿರ್ಮಿಸುವ ಕುರಿತು

ಉಲ್ಲೇಖ: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶಕರು (ಎಂಜಿಎನ್ಆರ್ಇಜಿಎ) ಇವರ ಪತ್ರ ಸಂ: ಜೆ–11013/2/2009 / ಎಂಜಿಎನ್ಆರ್ಇಜಿಎ (ಬಿಕೆಎಸ್) ದಿನಾಂಕ 08–02–2011

* * *

ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಭಾರತ್ ನಿರ್ಮಾಣ ರಾಜೀವ್ ಸೇವಾ ಕೇಂದ್ರಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಿರುವುದು ಸರಿಯಷ್ಟೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಪ್ರಗತಿಯನ್ನು ಪರಿಶೀಲಿಸಿ ಪ್ರಗತಿಯ ವಿವರಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸಂಬಂಧಿಸಿದ ರಾಜ್ಯ ಸರ್ಕಾರಗಳು ಎಂಜಿಎನ್ಆರ್ಇಜಿಎಸ್ ಎಂಐಎಸ್‌ನಲ್ಲಿ ದಾಖಲಿಸಲಿಲ್ಲವೆಂದು ವರದಿ ಮಾಡಿರುತ್ತಾರೆ. ಸದರಿ ಕೇಂದ್ರಗಳನ್ನು 2011–12ನೇ ಸಾಲಿನ ಕಾರ್ಮಿಕ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಂಡು ಅನುಷ್ಠಾನಗೊಳಿಸಬೇಕೆಂದು ತಿಳಿಸಿರುತ್ತಾರೆ. ಸದರಿ ಕೇಂದ್ರಗಳ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸಲು ಕೇಂದ್ರ ಸರ್ಕಾರವು ಒಂದು ನಮೂನೆಯನ್ನು ರೂಪಿಸಿ ಅದರಲ್ಲಿ ವಿವರಗಳನ್ನು ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಲಗತ್ತಿಸಿ ಕಳುಹಿಸಿಕೊಟ್ಟಿರುತ್ತಾರೆ. ಸದರಿ ನಮೂನೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ನಿಗದಿಪಡಿಸಿದ ನಮೂನೆಯಲ್ಲಿ ತ್ವರಿತವಾಗಿ ಕಳುಹಿಸಬೇಕಾಗಿರುವುದರಿಂದ ಕೂಡಲೇ ಪ್ರಗತಿಯ ಪೂರ್ಣ ವಿವರಗಳನ್ನು ಎಂಐಎಸ್‌ನಲ್ಲಿ ತಪ್ಪದೇ ಭರ್ತಿ ಮಾಡಲು ಕ್ರಮ ವಹಿಸುವಂತೆ ಸೂಚಿಸಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

Annexure-II

Position of Bharat Nirman Rajiv Gandhi Seva Kendra

| | | | Gram Panchayt Level Seva Kendra | | | | Block Panchayt Level Seva Kendra | | | | |
|---|---|---|---|---|---|---|---|---|---|---|---|
| Sl. No. | Name of the Districts | No of Sanctioned works | No. of GPs | Works approved but not stated | Works started | Completed | No. of blocks | Works approved but not stated | Works started | Completed | Remarks |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| Total | | | | | | | | | | | |

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಮಂಡ್ಯ ಜಿಲ್ಲೆಯಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವ ಕುರಿತು.

ಉಲ್ಲೇಖ:
1. ದಿನಾಂಕ 12–10–2010ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
2. ದಿನಾಂಕ 07–01–2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ.
3. ಸರ್ಕಾರದ ಆದೇಶ ಸಂ. ಗ್ರಾಅಪ:167: ಉಖಾಯೋ:2010 ಬೆಂಗಳೂರು, ದಿನಾಂಕ 19–02–2011 ಮತ್ತು ದಿನಾಂಕ : 10–03–2011

* * *

### ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖಾ ಅನುಷ್ಠಾನಾಧಿಕಾರಿಗಳೇ ಕ್ರಮ ವಹಿಸುತ್ತಾರೆ. ಆದರೆ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ ಯಾವುದೇ ಅನುಷ್ಠಾನ ಇಲಾಖೆಯನ್ನು ಸ್ವತಂತ್ರವಾಗಿ ಯೋಜನೆಯಡಿ ಅನುಷ್ಠಾನ ಸಂಸ್ಥೆಯೆಂದು ಪರಿಗಣಿಸುವುದಿಲ್ಲ. ಆದ ಕಾರಣ ಯೋಜನೆಯಡಿ ಉದ್ಯೋಗಕ್ಕಾಗಿ ಸಲ್ಲಿಸುವ ಬೇಡಿಕೆಯ ಆಧಾರದ ಮೇಲೆ ಅನುಮೋದಿತ ಕಾಮಗಾರಿ ಗುಚ್ಚದಂತೆ ಮಾರ್ಗಸೂಚಿಗಳನ್ವಯ  ಆದ್ಯತಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾದೂ ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯಿತಿಗಳು ಸೂಕ್ತ ಕಾಮಗಾರಿ ಆದೇಶ ಮತ್ತು ಎನ್‌ಎಂಆರ್‌ಗಳನ್ನು ಅನುಷ್ಠಾನಗೊಳಿಸುವ ಇಲಾಖಾ ಅಧಿಕಾರಿಗಳಿಗೆ ನೀಡುತ್ತಿದ್ದು ಸದರಿ ಕಾಮಗಾರಿಗೆ ಸಂಬಂಧಿಸಿದ ಹಣ ಪಾವತಿಯನ್ನು ಕೂಡ ಗ್ರಾಮ ಪಂಚಾಯಿತಿಗಳ ಮೂಲಕವೇ ಮಾಡಲಾಗುತ್ತಿದೆ. ಇದರಿಂದಾಗಿ ಯೋಜನೆಯ ಅನುಷ್ಠಾನದಲ್ಲಿ ಕಾಲ ವಿಳಂಬವಾಗುತ್ತಿದ್ದು, ಅನುಷ್ಠಾನ ಇಲಾಖೆಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಲ್ಲದೆ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಋತುಮಾನಕ್ಕೆ ಅನುಗುಣವಾಗಿ ಅನುಷ್ಠಾನಗೊಳಿಸ ಬೇಕಾಗಿರುವುದರಿಂದ ಸದರಿ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸುವುದು ಸೂಕ್ತವೆಂದು ಹಾಗೂ ಇಲಾಖಾ ಮುಖ್ಯಸ್ಥರುಗಳು ಅಭಿಪ್ರಾಯಪಟ್ಟಿರುತ್ತಾರೆ. ಈ ನಿಟ್ಟಿನಲ್ಲಿ ಈಗಾಗಲೇ ಉಲ್ಲೇಖ (3)ರಲ್ಲಿ ಪ್ರಾಯೋಗಿಕವಾಗಿ ಎಂಟು ಜಿಲ್ಲೆಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಜೊತೆಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಸರ್ಕಾರವು ಆದೇಶವನ್ನು ಹೊರಡಿಸಿರುತ್ತದೆ. ಇದೇ ಆಧಾರದ ಮೇಲೆ ಮಂಡ್ಯ ಜಿಲ್ಲೆಯಲ್ಲೂ ಕೂಡ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವುದು ಅಗತ್ಯತೆ ಇರುವುದರಿಂದ ಸದರಿ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಕೆಳಕಂಡ ಆದೇಶ.

### ಸರ್ಕಾರದ ಆದೇಶ ಸಂ. ಗ್ರಾಅಪ:167: ಉಖಾಯೋ:2010 ಬೆಂಗಳೂರು, ದಿನಾಂಕ 21–05–2011

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ ಪಂಚಾಯತ್‌ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಮಂಡ್ಯ ಜಿಲ್ಲೆಯಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿಗದಿಪಡಿಸಿದ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗಸೂಚಿಗಳನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

| ಕ್ರ.ಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನಾಧಿಕಾರಿ |
|---|---|---|---|
| 1 | ಮಂಡ್ಯ | 1. ಅರಣ್ಯ ಇಲಾಖೆ<br><br>2. ತೋಟಗಾರಿಕೆ ಇಲಾಖೆ | 1. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಮಂಡ್ಯ<br>2. ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಮಂಡ್ಯ |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಚದಲ್ಲಿ ಸೇರಿಸತಕ್ಕದ್ದು.
2. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳ ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಅಂತಹ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯಿತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ ಕ್ರಿಯಾ ಯೋಜನೆಗೆ ತಾಲ್ಲೂಕು ಪಂಚಾಯಿತಿ/ ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ಪಂಚಾಯತ್ ಕಾರ್ಯದರ್ಶಿ ಇವರು ಸದರಿ ಇಲಾಖೆಗಳ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ NMR ಗಳನ್ನು MIS ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು MIS ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ login ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ login ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ವಿತರಿಸಿರುವ NMR ಗಳನ್ನು ಪಡೆಯಬಹುದಾಗಿದೆ.
6. MIS ನಿಂದ ಪಡೆದ NMR ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು MIS ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ MIS ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ದೃಢೀಕರಿಸುವುದರ ಜೊತೆಗೆ MIS ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
9. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ NMR ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಗೆ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ/ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು MIS

ನಲ್ಲಿ ದಾಖಲಿಸತಕ್ಕದ್ದು. (ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೇರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಬಹುದಾಗಿರುತ್ತದೆ)

10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ login ಮೂಲಕವೇ MIS ನಲ್ಲಿ ಭರ್ತಿ ಮಾಡತಕ್ಕದ್ದು.
11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ದೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.
12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.
13. ಕೇಂದ್ರ/ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ / ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಡ್ಯ
4. ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.

**ಪ್ರತಿಯನ್ನು :**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

ಅನರ್ಹ ರಾಜ್ಯಶೀಲ

5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂಚಾಯತ್‌ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಗುಲ್ಬರ್ಗಾ / ಬೆಳಗಾಂ.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಹೆಚ್ಚಿನ ಪ್ರತಿಗಳು / ರಕ್ಷಾ ಕಡತ.

ಅನನ್ಯ ರಾಜ್ಯ ಸಂಸ್ಥೆ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ:08:ಉಖಾಯೋ2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ–2
ಬೆಂಗಳೂರು, ದಿನಾಂಕ : 22–06–2011

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವೈಯಕ್ತಿಕ ಫಲಾನುಭವಿಗಳ ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಕೈಗೊಳ್ಳುವ ಕುರಿತು

ಉಲ್ಲೇಖ: ತೋಟಗಾರಿಕೆ ನಿರ್ದೇಶಕರ ಪತ್ರದ ಸಂಖ್ಯೆ : ತೋಇ/ಯೋ/ಸತೋಅ–61– Part A/2010-11/ 2979 ದಿ: 23/28–1–2011

* * *

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೈತರ ವೈಯಕ್ತಿಕ ಜಮೀನಿನಲ್ಲಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ, ತೋಟಗಾರಿಕೆ ಬೆಳೆಯಾದ ಬಾಳೆ ಬೆಳೆಯನ್ನು ಬೆಳೆಸುವ ಬಗ್ಗೆ, ಸರ್ಕಾರದ ಪತ್ರದ ದಿನಾಂಕ 27–01–2011ರಲ್ಲಿ ಸೂಚನೆ ನೀಡಲಾಗಿತ್ತು. ಈಗ ಇದರ ಜೊತೆಗೆ, ತೋಟಗಾರಿಕೆ ಇತರೆ ಬೆಳೆಗಳಾದ ಅಡಿಕೆ, ರಬ್ಬರ್ ಇತ್ಯಾದಿ ಇವುಗಳಿಗೆ ಹೆಚ್ಚಿನ ಬೇಡಿಕೆ ಇರುವುದಾಗಿ, ಕೆಲವು ಜಿಲ್ಲಾ ಪಂಚಾಯತ್‌ಗಳು ಸರ್ಕಾರಕ್ಕೆ ವರದಿ ಮಾಡಿ, ಈ ಕುರಿತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸದರಿ ಬೆಳೆಗಳನ್ನು ಬೆಳೆಸುವ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಈ ಸಂಬಂಧ, ತೋಟಗಾರಿಕೆಯ ಇತರೆ ಬೆಳೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಳ್ಳುವ ಬಗ್ಗೆ, ತೋಟಗಾರಿಕೆ ಇಲಾಖೆಯ ನಿರ್ದೇಶಕರು ಸದರಿ ಯೋಜನೆಯಡಿ ಜಿಲ್ಲೆಯ ಫಲಾನುಭವಿಗಳ ಬೇಡಿಕೆಗೆ ಅನುಗುಣವಾಗಿ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳನ್ನು ವೈಯಕ್ತಿಕ ಫಲಾನುಭವಿಗಳ ಜಮೀನಿನಲ್ಲಿ ಕೈಗೆತ್ತಿಕೊಳ್ಳಲು ಪ್ರೋತ್ಸಾಹಿಸಬಹುದಾಗಿದೆ ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಇದಲ್ಲದೆ, ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಇದರ ಸಂಬಂಧ ಹೊರಡಿಸುವ ಮಾರ್ಗಸೂಚಿಗಳ ಪ್ರಕಾರ, ಮಾರ್ಗಸೂಚಿಗಳ ಪುಟಸಂಖ್ಯೆ (3)ರಲ್ಲಿ, ತೋಟಗಾರಿಕೆಯ ಎಲ್ಲಾ ಚಟುವಟಿಕೆಗಳನ್ನು ರೈತರ ವೈಯಕ್ತಿಕ ಜಮೀನಿನಲ್ಲಿ ಅನುಷ್ಠಾನಗೊಳಿಸಲು ಅವಕಾಶವಿರುತ್ತದೆ ಎಂದು ತಿಳಿಸಿರುತ್ತದೆ. ಆದುದರಿಂದ, ಈ ನಿಟ್ಟಿನಲ್ಲಿ ತಾವು ತೋಟಗಾರಿಕೆಯ ಎಲ್ಲಾ ಚಟುವಟಿಕೆಗಳನ್ನು ಆಯಾ ಪ್ರದೇಶಗಳಿಗೆ ಅನುಗುಣವಾಗಿ ಬೆಳೆಸಬಹುದಾದ ಬೆಳೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನುಸಾರ ಹಾಗೂ ತೋಟಗಾರಿಕೆಯ ನಿರ್ದೇಶಕರು ನೀಡಿರುವ ಅಭಿಪ್ರಾಯದಂತೆ ಪರಿಶೀಲಿಸಿ, ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರ ಜಮೀನಿನಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಗ್ರಾಅಪ :199 :ಉಖಾಯೋ : 2009 ದಿನಾಂಕ : 25-06-2011

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು
ಕಾರ್ಯನಿರ್ವಹಿಸುತ್ತಿರುವ ಉಪಅರಣ್ಯ ಸಂರಕ್ಷಣಾಧಿಕಾರಿಗಳು (ಸಾಮಾಜಿಕ ಅರಣ್ಯ)

ಮಾನ್ಯರೇ

ವಿಷಯ: 2011-12 ನೇ ಸಾಲಿನಲ್ಲಿ ಎಂಜಿಎನ್ಆರ್ಇಜಿಸ್ ಯೋಜನೆಯಡಿ ಹಸಿರು ಹೊನ್ನು ಕಾರ್ಯಕ್ರಮದಡಿ ಜೈವಿಕ ಇಂಧನ ಸಸಿ ನೆಡುವ ಕಾರ್ಯಕ್ರಮ ಅನುಷ್ಠಾನಗೊಳಿಸುವ ಕುರಿತು

ಉಲ್ಲೇಖ: ತಾಂತ್ರಿಕ ಅಧಿಕಾರಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಇವರ ಪತ್ರದ ಸಂಖ್ಯೆ ಕೆಎಸ್‌ಬಿಡಿಬಿ /ಹಸಿರು ಹೊನ್ನು /ಸಿಆರ್ 16/2010-11/94 ದಿನಾಂಕ : 04-06-2011

* * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ಅರಣ್ಯ ಇಲಾಖೆಯ ಜೈವಿಕ ಇಂಧನ ಕಾರ್ಯಕ್ರಮಗಳಾದ ಹಸಿರು ಹೊನ್ನು ಹಾಗೂ ಬರಡು ಬಂಗಾರ ಯೋಜನೆಗಳಡಿ ವಿವಿಧ ಸಸ್ಯ ಕ್ಷೇತ್ರಗಳಲ್ಲಿ ಬೆಳೆಸಲಾದ ಸಸಿಗಳನ್ನು ನೇ ಸಾಲಿನಲ್ಲಿ ಬೆಳೆಸಿ ಗಿಡನಡೆಲು ಕ್ರಮವಹಿಸಬೇಕಾಗಿರುತ್ತದೆ. ಈ ಕಾರ್ಯಕ್ರಮವನ್ನು ಎಂದಿನಂತೆ ಎಂಜಿಎನ್ಆರ್ಇಜಿಎಸ್ ಯೋಜನೆಯಡಿ ಅನುಷ್ಠಾನ ಮಾಡುತ್ತಿರುವುದು ತಮಗೆ ತಿಳಿದ ವಿಷಯವಾಗಿರುತ್ತದೆ. ಈ ಕಾರ್ಯಕ್ರಮವನ್ನು ಪ್ರಯೋಜವನ್ನು ಸಣ್ಣರೈತರು, ಅತಿಸಣ್ಣರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರು ಪಡೆಯಲು, ಅವರುಗಳ ಜಮೀನಿನಲ್ಲಿ ಗಿಡ ನೆಡಲು ಕ್ರಮವಹಿಸುವುದು ಮತ್ತು ಕೃಷಿಗೆ ಯೋಗ್ಯವಾದ ರೈತರ ಜಮೀನಿನಲ್ಲಿ ಮಿಕ್ಕ ಜಾತಿಗಳ ಜೈವಿಕ ಇಂಧನ ಸಸಿಗಳನ್ನು ಬಳಸದೇ ಕೇವಲ ಬೇಲಿಗುಂಟ ಜೈವಿಕ ಇಂಧನ ಸಸಿಯನ್ನು ಮಾತ್ರ ಜಮೀನಿನ ಬದುಗಳಲ್ಲಿ ನೆಡಲು ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ. ಇದರ ಜೊತೆಗೆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಸಸ್ಯ ಕ್ಷೇತ್ರಗಳಲ್ಲಿ ಬೆಳೆಸಲಾದ ಸಸಿಗಳ ಸಂಖ್ಯೆಯ ವಿವರಗಳ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಸ್ವಯಂ ಸೇವಾ ಸಂಸ್ಥೆಗಳ ಪಟ್ಟಿಯಂತೆ ಆಯಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಿಗೆ ನೀಡಲು ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲು ಕೋರಿದೆ. ಸ್ವಯಂ ಸೇವಾ ಸಂಸ್ಥೆಗಳನ್ನು ಅನುಷ್ಠನದಲ್ಲಿ ತೊಡಗಿಸಿಕೊಳ್ಳುವ ಬದಲು ಅನುಷ್ಠಾನದ ಎಲ್ಲಾ ಹಂತಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ತಿಳಿಸಲು ಕ್ರಮವಹಿಸುವುದು. ಸದರಿ ಜೈವಿಕ ಇಂಧನ ಕಾರ್ಯಕ್ರಮದಡಿ ಬರುವ ಹಸಿರು ಹೊನ್ನು ಮತ್ತು ಬರಡು ಬಂಗಾರ ಯೋಜನೆಗಳನ್ನು ಯಶಸ್ವಿಗೊಳಿಸಲು ತಾವು ಜಿಲ್ಲಾ ಮಟ್ಟದ ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳೊಂದಿಗೆ ಹಾಗೂ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಅರಣ್ಯ ಇಲಾಖೆಯ ಅನುಷ್ಠಾನಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪ್ರಗತಿಯ ಮುನ್ನಡೆಗೆ ಕ್ರಮತೆಗೆದುಕೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕರ್ನಾಟಕ ಸರ್ಕಾರ
**ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ,**
ಬಹುಮಹಡಿ ಕಟ್ಟಡ, 5ನೇ ಹಂತ, ಬೆಂಗಳೂರು - 560 001

## Details of District wise approved Lead NGOs in the State as on 02-06-2011

| Sl No | District | Lead NGO of the District |
|---|---|---|
| 1. | Bengaluru Urban | **SADHANA<br>K.GAYATHRI,<br># 24, 2nd Cross, 4th Main, Kamakshipalya,<br>Bangalore - 560079<br>Cell : 99453 90756<br>Ph : 23286231<br>e-mail : sadhana _trust2003@yahoo.com |
| 2. | Bengaluru Rural | |
| 3. | Bijapur | INSTITUTE FOR RURAL DEVELOPMENT (IRD)<br>Sri. Babu Sajjan, Director,<br>Plot # 3, Basava Nilaya, Near Ring Road,<br>Sadashivanagar, Ibrahimpur,<br>Bijapur - 586109<br>Cell : 94481 54844/ 9448507305<br>e-mail : irdbijapur@yahoo.co.in<br>sajjanbabu@yahoo.com |
| 4. | Bagalkot | *** REACH-RURAL ENVIRONMENTAL AWARENESS & COMMUNITY HELP,<br>Sri G.N. Simha, Director<br>S.S.Tatrani Building,<br>Near Laxmi Temple,<br>Amingad - 587112<br>Hungund Tq. Bagalkote District.<br>Cell : 094496 87275<br>Tel : 08351-280668 |
| 5. | Bidar | BAPU RURAL DEVELOPMENT SOCIETY<br>Sri Kashinath Patil, President<br>Sangameswara Nilaya,<br>Raghavendra Colony,<br>Bidar - 585401<br>Tel : 08482-226906<br>Cell : 9341723204<br>e-mail_kashinathpatil2000@yahoo.com |

| Sl No | District | Lead NGO of the District |
|---|---|---|
| 6. | Belgaum | Birds, Krishi Vignan Kendra,<br>Sri R.M. Patil, Chairman, Birds Campus,<br>Tukkanakatte - 591 224<br>Gokak Tq.<br>Tel : 08332-284978, Cell : 92419 96613<br>Fax : 08332-284978/228705<br>e-mail : seedsparisara@gmail.com |
| 7. | Bellary | **SANDURU PARISARA SHIKSHANA<br>MATTU ABHIVRUDDI SAMSTHE,<br>Sri G.Vishvamurthy, Secretary,<br>Bommagatta- 583 128<br>Sandur Tq, Bellary Dist<br>Cell : 81057 95514/ 94805 10552<br>e-mail : seedsparisara@gmail.com |
| 8. | Chitradurga | SOCIETY FOR PUBLIC EDUCATION<br>ENVIRONMENT CULTURAL & HEALTH<br>Sri H.Sheshanna, Secretary,<br>''Ganesh Krupa'' Bank Colony, Nrupatunga Extn. Near<br>RTO Office, Chitradurga - 577501<br>Cell : 97401 14246<br>e-mail : speechsujala@gmail.com |
| 9. | Chamarajanagar | MYRADA<br>Sri Bellegowda, Programme, Officer, Kollegal<br>Project,Mahadeswara Coplex, Bandahalli Road,<br>Hanur - 571 439<br>Kollegal Tq. Chamarajnagar Dist.<br>Cell : 94487 68344<br>e-mail : myradahuthur@yahoo.co.in<br>:myradahuthur@gmail.com<br>Contact person: Mr Rajeswari-99864 55274 |
| 10. | Chikkamaglur | ***MAHATMA GANDHI RURAL DEVELOPMENT<br>& YOUTH WELFARE CENTRE, TUMKUR.<br>Sri. T.V. Umesh Kumar,<br>Secretary Gowri Nilaya,2nd Floor, 8th Cross,<br>Ashoka Nagar, Tumkur - 572 103<br>Ph : 0816 - 2275910 Fax : 0816-2275910<br>Cell : 98866 57382<br>e-mail : gandhirural@yahoo.co.in |

| Sl No | District | Lead NGO of the District |
|---|---|---|
| 11. | Chikkaballapur | INTEGRATED WELFARE FOUNDATION (IWF)<br>Ms. T.J.Sowmya, Trustee, #315, 1st floor,<br>H MS Complex, Fort, T.B. Cross,<br>Siddalaghatta-562 105<br>Chikkaballapur District<br>Tel : 08158 - 256911<br>Cell : 99002 90491<br>e-mail : iwf.sdl@gmail.com<br>sowmya.tdh@gmail.com |
| 12. | Dvanagere | Spoorthy, Sri. K.T.Roopa Naik<br>Near Bescom Office, Honnahalli - 577217<br>Davanagere Dist.<br>Tel : 08188 - 291550<br>Cell : 94489 76910<br>e-mail : spoorthykbr@gmail.com<br>spoorthy.hnl@gmail.com |
| 13. | Dharwad | ** BIRDS - BIJAPURA INTIGRETED RURAL DEVELOPMENT SOCIETY (BIRDS)<br>Project Office<br>Sri M.A. Agasimundin, Director & Secretary<br>Kalagadagi Road, Opp. Vidyagiri Police Station,<br>Rajathagiri, Dharwad - 580008<br>Ph : 0836-2443881<br>Cell : 94481 17058<br>e-mail : birdshungund1990@reffmail.com |
| 14. | Dakshina Kannada | Nagarika Seva Trust.<br>Sri K.Somanath Naik, President,<br>Guruvayunakere - 574 217<br>Belathangadi Tq. Dhakshina Kannada Dist.<br>Cell : 94482 87050<br>Tel fax : 08256- 232019<br>e-mail : nstgkere.sancharnet.in |
| 15. | Ms. Mamatha | Cell : 94494 84432<br>e-mail : swardha.kumar3@mail.com |

| Sl No | District | Lead NGO of the District |
|---|---|---|
| 16. | Gulbarga | Baif Institute for Rural Development Karnataka<br>#12C, NGOs Colony, Jewargi Road,<br>Gulbarga - 585 102<br>Sri A.M.Nitturkar, Dy. Programme Coordinator,<br>Cell : 99725 58685<br>Ph : 08472 - 270870<br>e-mail : anitturkar@yahoo.com<br>anitturkar@gmail.com |
| 17 | Hassan. | |
| 18. | Haveri | **Parivarthana, the Rural Develoment Society<br>Near Govt. Hospital, Shiralakoppa - 577 428<br>Sri D.Shankarappa, Secretary,<br>Cell : 98804 44749<br>Tel : 08187 - 233330<br>e-mail : d_shankarappa@yahoo.com |
| 19. | Kodagu | ** Coorg Organization for Rural Development (Cord)<br>Sri Ray David, Director,<br>#4-312.4th Block, Kushalanagara - 570234<br>Somavarpete Tq. Kodagu Dist.<br>Ph : 08276 - 5709<br>Cell : 94484 76091<br>e-mail : vsroydavid@gmail.com |
| 20. | Koppal | **Samuha, Sri M.Narayanaswamy, Director,<br>Kanakagiri - 584 119,Koppal Dist.<br>Cell : 94483 85412<br>e-mail : ns@samuha.org |
| 21. | Kolar | **Grameena Mahila Okkuta<br>Ms. Jayalakshmi<br>P.O : Yalagondanahalli - 563127<br>Honnashettihalli, Tq. Mulabagilu, Kolar Dist.<br>Cell : 94480 84568<br>e-mail : grameenamahila@yahoo.co.in<br>msjayalakshmi@yahoo.com |
| 22. | Mysore | Deeds, Sri Srikant, Director, H.D.Kote Road,<br>Hunsur - 571 105<br>Cell : 94481 35256<br>Tel : 0822 - 252127<br>e-mail : deedhun@rediffmail.com |

| Sl No | District | Lead NGO of the District |
|---|---|---|
| 23. | Mandya | Vikasana,<br>Sri Mahesh Chandra Guru, Director<br># 1813,1st Cross, Bandigowda Badavane,<br>Mandya - 571 401<br>Cell : 97313 56464<br>Tel : 08232-221717/329893<br>e-mail:vikasanaird@rediffmail.com<br>vikasanaird@gmail.com<br>Sri Kempiah - 9731356464/ 94484 64171 |
| 24. | Ramanagara | Samruddi<br>Sri. B.Shivarajegowda, Secretary, I.B.Road,<br>Nisarga Layout, Near JMFC Court,<br>Kanakapura - 562 117<br>Ramanagaram Dist.<br>Cell : 94487 33838<br>e-mail : shivarajasamruddi@gmail.com |
| 25. | Raichur | **Sajjalashri Samagra Krushi Adhyayana &<br>Grameena Abhivruddi Samsthe<br>Sri. S.H. Ravikumar, Director,<br>Shiva Sadana, Opp. Mother water Tank,<br>Gurugunta Road, Lingasagur - 584 122<br>Raichur Dist.<br>Ph : 08537- 257583<br>Cell : 96203 49360, 98459 19016<br>e-mail : ravikumar.ch@gmail.com<br>sachisun_ravi@rediffmail.com |
| 26. | Shimoga | Rural Community & Science Centre Trust.<br>Sri. K.Venkatesh, Gen. Secretary<br>Shedthikere, Vardhamola -577417, Sagar Tq.<br>Cell :98442 77772<br>Tel : 08183-265772<br>e-mail : rgsvijnan@gmail.com |
| 27. | Tumkur | Tumkur Science Centre,<br>Sri C.Viswanath, Chairman,<br>Balabhavan Campus,<br>M.G.Road, Tumkur - 572 102<br>Tel : 0816-2273750,<br>Cell : 94486 57599<br>e-mail : dharanidmandala.56@gmail.com<br>Sri C.Yathiraj, Cell : 94813 00607 |

| Sl No | District | Lead NGO of the District |
|---|---|---|
| 28. | Udupi | Nagarika Seva Trust<br>Sri K.Somanath Naik, President,<br>Sri P.K. Parameshwar Rao. Cell : 9448287051<br>Guruvayunakere - 574217<br>Belathangadi Tq. Dhakshina Kannada Dist<br>Cell :94482 87050<br>Telfax :08256-232019<br>e-mail : nstgkere.sancharnet.in |
| 29. | Uttara Kannada-1<br>(Coastal Taluks) | Sneha Kunja<br>Sri Sridhar Bhatt,<br>Sri Ravindra Shetty<br>Kasarkod, Honnavar Tq. - 581 342<br>Uttara Kannada Dist<br>Cell : 94814 60809<br>e-mail : snehakunj@gmail.com |
| 30. | Uttara Kannada-1<br>(other than coastal<br>Taluks) | **Kadamba Marketing Souharda Sahakari<br>Niyamita<br>Sri. Vishveshvara Bhatt.<br># 7, APMC Yard, Sirsi - 581 402<br>Uttara Kannada Dist<br>Cell : 92421 85319<br>e-mail : kadambamarket@gmail.com<br>Sri. Narendra Hondagashi<br>Ph :08389 -248134,<br>Cell : 93438 52185 |
| 31. | Yadgir | Baif Institute for Rural Dvevelopment Karnataka<br>Sri A.M.Nitturkar, Dy. Programme Coordinator,<br>#12C, NGOs Colony, Jewargi Road,<br>Gulbarga - 585 102<br>Cell : 99725 58685<br>Ph: 08472 - 270870<br>e-mail :anitturkar@yahoo.com<br>anitturkar@gmail.com |

** New NGOs

Techincal Officer
Karnataka State Biofuel
Development Board, Bengaluru

ವಿಷಯ: ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಪ್ರಸ್ತಾಪಿಸಿರುವ ಶೌಚಾಲಯ ನಿರ್ಮಾಣದ ಕಾಮಗಾರಿಯನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡುವ ಕುರಿತು

ಓದಲಾಗಿದೆ:
1. ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರ ಪತ್ರದ ಸಂಖ್ಯೆ ಗ್ರಾಅಪ/ಕನೀಸಂ/ಸಂ.ಸ್ವಆಂ/62/10–11 ದಿನಾಂಕ : 18–02–2011.
2. ನಿರ್ದೇಶಕರು, ಎಂಜಿಎನ್‌ಆರ್‌ಇಜಿಎಸ್ ಇವರ ಅನಧಿಕೃತ ಟಿಪ್ಪಣಿ ಪತ್ರದ ಸಂ:ಗ್ರಾಅಪ 44 ಉಖಾಯೋ 2006 ದಿನಾಂಕ : 04.05.2011
3. ನಿರ್ದೇಶಕರು, ಎಂಜಿಎನ್‌ಆರ್‌ಇಜಿಎಸ್ ಇವರ ಪತ್ರದ ಸಂ:ಗ್ರಾಅಪ 153 ಉಖಾಯೋ 2011 ದಿನಾಂಕ : 15–06–2011
4. ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರು ದಿನಾಂಕ 24–06–2011ರಂದು ಕಡತದಲ್ಲಿ ಅಂದಾಜು ಪತ್ರಿಕೆ ಹಾಗೂ ನಕ್ಷೆಯೊಂದಿಗೆ ಅಭಿಪ್ರಾಯ ನೀಡಿ ಸಲ್ಲಿಸಿರುತ್ತಾರೆ.

* * *

## ಪ್ರಸ್ತಾವನೆ

ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಮಲ ವಿಸರ್ಜನೆ, ಸಂಪೂರ್ಣವಾಗಿ ನಿಲ್ಲಿಸಲು ಶೌಚಾಲಯ ನಿರ್ಮಾಣಕ್ಕಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ 30 ಮಾನವ ದಿನಗಳ ಕೂಲಿ ವೆಚ್ಚವನ್ನು ಸಂಯೋಜನೆಯ (convergence) ಮೂಲಕ ಭರಿಸಲು ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಸಂಪೂರ್ಣ ಸ್ವಚ್ಛತಾ ಆಂದೋಲನ ಇವರು ಉಲ್ಲೇಖ (1)ರಲ್ಲಿ ಅಂದಾಜು ಪತ್ರಿಕೆಯೊಂದಿಗೆ ಸಲ್ಲಿಸಿದ್ದು, ಕೆಲವು ಕಾರಣಗಳಿಂದ ಸದರಿ ಕಾಮಗಾರಿಯ ನಿರ್ಮಾಣಕ್ಕೆ ಹೊರಡಿಸಿರುವ ಆದೇಶವನ್ನು ಉಲ್ಲೇಖ (2)ರಲ್ಲಿ ಹಿಂಪಡೆಯಲು ಸೂಚಿಸಲಾಗಿದ್ದು, ತದನಂತರ ಸೂಕ್ತವಾದ ಪ್ರಸ್ತಾವನೆಯನ್ನು ಅಂದಾಜು ಪತ್ರಿಕೆ ಹಾಗೂ ನಕ್ಷೆಯೊಂದಿಗೆ ಸಲ್ಲಿಸುವಂತೆ ನಿರ್ದೇಶಕರು, ರಾಜ್ಯ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆ, ಬೆಂಗಳೂರು ಇವರನ್ನು ಉಲ್ಲೇಖ (3)ರಲ್ಲಿ ಕೋರಲಾಗಿದ್ದು, ಅದರಂತೆಯೇ ಉಲ್ಲೇಖ (4)ರಲ್ಲಿ ಕಡತದೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಶೌಚಾಲಯ ನಿರ್ಮಾಣ ಮಾಡಲು ಸಡಿಲು ಮಣ್ಣಿನಲ್ಲಿ 19 ಮಾನವ ದಿನಗಳಿಗೆ ಮತ್ತು ಗಟ್ಟಿ ಮಣ್ಣಿನಲ್ಲಿ 21 ಮಾನವ ದಿನಗಳಿಗೆ ಕೂಲಿ ವೆಚ್ಚವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಗ್ಗೂಡಿಕೆಯ ಮೂಲಕ ಅನುಷ್ಠಾನಗೊಳಿಸಬಹುದೆಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಆದ್ದರಿಂದ ಸದರಿ ಅಂದಾಜು ಪತ್ರಿಕೆಯನ್ನು ಅಂಗೀಕರಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಅನುಷ್ಠಾನವಾಗುತ್ತಿರುವ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಹಾಗೂ ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸಿರುವ / ಪ್ರಸ್ತಾಪಿಸುವ ಶೌಚಾಲಯ ಕಾಮಗಾರಿಯ ನಿರ್ಮಾಣವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಗೊಳಿಸಬಹುದೆಂದು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಉಖಾಯೋ 2006 ಬೆಂಗಳೂರು ದಿನಾಂಕ 25–06–2011

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಅನುಷ್ಠಾನವಾಗುತ್ತಿರುವ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಹಾಗೂ ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸಿರುವ / ಪ್ರಸ್ತಾಪಿಸುವ ವೈಯಕ್ತಿಕ ಶೌಚಾಲಯದ ಕಾಮಗಾರಿಯ ನಿರ್ಮಾಣವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸಿ, ಈ ಆದೇಶದೊಂದಿಗೆ ಲಗತ್ತಿಸಿರುವ ಅಂದಾಜು ಪತ್ರಿಕೆ ಹಾಗೂ ನಕ್ಷೆಯಂತೆ, ಅಂದಾಜು ಪತ್ರಿಕೆಯಲ್ಲಿ ಸೂಚಿಸಿರುವ ಸಡಿಲು ಮಣ್ಣಿನಲ್ಲಿ 19 ಅಕುಶಲ ಮಾನವ ದಿನಗಳ ಕೂಲಿ ವೆಚ್ಚವನ್ನು ಮತ್ತು ಗಟ್ಟಿ ಮಣ್ಣಿನಲ್ಲಿ 21 ಅಕುಶಲ ಮಾನವ ದಿನಗಳ ವೆಚ್ಚವನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುದಾನದಲ್ಲಿ ಭರಿಸುವ, ಸಾಮಗ್ರಿ ವೆಚ್ಚವನ್ನು ಆಯಾ ಇತರೆ ಯೋಜನೆಗಳಲ್ಲಿ ಭರಿಸುವ ಮತ್ತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಇತರೆ ಎಲ್ಲಾ ಯೋಜನೆಗಳಲ್ಲಿ ಪ್ರಸ್ತಾಪಿಸುವ ಶೌಚಾಲಯದ ನಿರ್ಮಾಣದ ಕಾಮಗಾರಿಯ ಮೊತ್ತವು ಅಂದಾಜು ಪಟ್ಟಿಯ ಮೊತ್ತಕ್ಕೆ ಮೀರದಂತೆ ಕ್ರಮವಹಿಸತಕ್ಕದ್ದು.
2. ಒಂದು ವೇಳೆ ಕಾಮಗಾರಿಗೆ ಆದ ಖರ್ಚು ಅಂದಾಜು ಪತ್ರಿಕೆಗಿಂತ ಕಡಿಮೆಯಾದಲ್ಲಿ ಅದಕ್ಕೆ ಸೀಮಿತಗೊಳಿಸತಕ್ಕದ್ದು.
3. ಕಾಮಗಾರಿಯನ್ನು ಕೇವಲ ನೋಂದಾಯಿತ ಕಾರ್ಮಿಕರಿಂದ ನಿರ್ವಹಿಸತಕ್ಕದ್ದು.
4. ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ಅನುಷ್ಠಾನದಲ್ಲಿ ಬಳಸಲು ನಿಷೇಧಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
4. ರಾಜ್ಯದ ಎಲ್ಲಾ ಜಿಲ್ಲೆಗಳ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

ಪ್ರತಿಯನ್ನು:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಅಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಎಲ್ಲಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಬೆಂಗಳೂರು
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂ
7. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
8. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು
9. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ರಸ್ತೆ, ಬೆಂಗಳೂರು
11. ರೇಷ್ಮೆ ಅಭಿವೃದ್ಧಿ ಆಯುಕ್ತರು, ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಂಜಿಎನ್‌ಆರ್‌ಇಜಿಎ) ಅರಣ್ಯ ಇಲಾಖೆ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
13. ಮುಖ್ಯ ಅಭಿಯಂತರರು (ಸಣ್ಣ ನೀರಾವರಿ) ಕೆ.ಆರ್. ವೃತ್ತ, ಬೆಂಗಳೂರು
14. ಮುಖ್ಯ ಅಭಿಯಂತರರು ಪಂಚಾಯತ್‌ರಾಜ್ ಇಂಜಿನಿಯರ್ ಇಲಾಖೆ, ಬೆಂಗಳೂರು
15. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
16. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
17. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
18. ಹೆಚ್ಚಿನ ಪ್ರತಿಗಳು / ರಕ್ಷಾ ಕಡತ

# DETAILED ESTIMATE

Name of Work : Sample Detailed Estimate for Construction of Toilet & Soak pit

Head of A/c : Under MGNREGA for the year 2010-11 based on Dharwad Circle PWD SR 2010-2011

| Sl. No. | Item of Work | Measurement | | | | Quantity | Unity | Rate | Amount |
|---|---|---|---|---|---|---|---|---|---|
| | | No. | L | B | D | | | | |
| 1 | 2 | 3 | 4 | 5 | 6 | 7 | 8 | 9 | 10 |

1. KSRB 2-2.1 : Earthwork excavation for foundation of buildings, culverts, water supply, sanitary lines and electrical conduits either in pits or in trenches 1.5 m and above in width, in ordinary soil not exceeding 1.5 m in depth including dressing the bottom and sides of pits and trenches, stacking the excavated soil clear from edges of excavation with lead upto 50 m. after breaking of colds complete as per specifications, specification. No. KBS 2.1 (a) / 2.3.5 (P.No. 5, I No. 2.3 PWDSR 10-11)

**<u>In case of ordinary soil</u>**

| | | | | | | | | |
|---|---|---|---|---|---|---|---|---|
| Toilet C/L | 4 | 1.35 | 0.45 | 0.60 | 1.46 | Cmtr | | |
| Soak Pit 1.30 m dia and 1.50 depth | | | | | | | | |
| | 0.785 | 1.20 | 1.20 | 1.50 | 1.70 | Cmtr | | |
| | | | | | 3.16 | Cmtr | 118.00 | 373.00 |

**<u>In case of Hard soil</u>** (P.No. 5, I No. 2.4 PWDSR 10-11)

| | | | | | | | | |
|---|---|---|---|---|---|---|---|---|
| Toilet C/L | 4 | 1.35 | 0.45 | 0.60 | 1.46 | Cmtr | | |
| Soak Pit 1.30 m dia and 1.50 depth | | | | | | | | |
| | 0.785 | 1.20 | 1.20 | 1.50 | 1.70 | Cmtr | | |
| | | | | | 3.16 | Cmtr | 178.00 | 563.00 |

2. KSRB 5-1.1 : Providing and constructing granite / trap / basalt rubble stone masonry in foundation with CM 1:8 mortar (uncoursed) bond stones at two m. apart in each course including cost of materials, labour, curing complete as per specifications.
(P.No. 22, I No. 5.2 PWDSR 10-11)

| | | | | | | | | |
|---|---|---|---|---|---|---|---|---|
| | 4 | 1.35 | 0.45 | 0.60 | 1.46 | Cmtr | 1980.00 | 2890.00 |

3. KSRB 5-1.1 : Providing and laying granite / trap / basalt cement concrete with including cost of materials, labour, curing etc complete as per specifications.

(P.No. 12, I No. 4.7 PWDSR 10-11) CC 1:3:6 20 mm

| | | | | | | | | |
|---|---|---|---|---|---|---|---|---|
| | 1 | 1.45 | 1.45 | 0.075 | 0.16 | cum | 3897.00 | 624.00 |

4. KSRB 5-3 : Providing and constructing non-load bearing wall cement concrete cavities blocks (hollow blocks) of proportion 1:5:3 blocks of size 40 x 10 x 20 cms (l x b x h) strength not less than 35 kg. per sqm with cement mortar 1:4 conforming to I.S. 2185 of 1967 having not less than 40 mm shell thickness 50% of total volume of block having two large cavities with 20 mm. Wall thickness in between including cost of materials, labour charges, scaffolding, curing complete as per specifications.

(P.No. 23, I No. 5.26 PWDSR 10-11)

| | | | | | | | | |
|---|---|---|---|---|---|---|---|---|
| | 4 | 1.00 | - | 1.80 | 7.20 | Smtr | | |
| Decuctions | | | | | | | | |
| Door | 1 | 0.60 | - | 1.80 | 1.08 | Smtr | | |
| Ventilator | 1 | 0.30 | - | 0.20 | 0.06 | Smtr | | |
| | | | | | 1.14 | Smtr | | |
| | | Net Qty. 7.20-1.14 | | | 6.06 | Smtr | 367.00 | 2224.00 |

5. KSRB 11-3 : Providing and fixing white vitreous china clay, water Indian type (squatting pan) of size 580 mm with footrests, 100 mm S or P trap, (approved make) cutting and making good the wall and floor wherever required, including cost of materials, labour complete as per specifications. (P.No. 67, I No. 12.3 PWDSR 10-11)

| | | | | | | | | |
|---|---|---|---|---|---|---|---|---|
| | 1 | - | - | - | 1.00 | pan | 903.00 | 903.00 |

6. Soak Pit dry wall for soakage lining dia 0.35 wide (W.S)

| | | | | | | | |
|---|---|---|---|---|---|---|---|
| 3.14 x 1.50 | - | 0.30 | 1.50 | 2.11 | cum | 700.00 | 1477.00 |

7. KSRB 12-11 : Providing and laying in position to required level or slope 100 mm internal diameter salt glazed stoneware pipes grade A and jointing with stiff mixture of cement mortar in proportion of 1:1 testing of pipes and joints. Including cost of materials, labour charges complete as per specifications. (P.No. 60, I No. 11.1 PWDSR 10-11)

| | | | | | | | | |
|---|---|---|---|---|---|---|---|---|
| | 1 | 2.40 | - | - | 2.40 | M | 197.00 | 473.00 |

8. Burnt Stone Slabs 10 cms thick (P.No. XV, I No. 412 PWDSR 10-11)

| | | | | | | | | |
|---|---|---|---|---|---|---|---|---|
| | 1 | 1.50 | 1.50 | - | 2.25 | Smtr | 290.00 | 653.00 |

9. KSRB 8.3-1 : Providing and laying to required line and slope roofing with corrugated asbestos cement sheet 6 mm. Thick fixed with galvanized iron J or L hooks, bolts and nuts 8 mm. Dye C.I plain and bitumen washers over the existing purlins, rafters and trusses including cost of materials, labour complete as per specifications No. KBS 8.5

(P.No. 41, I No. 8.3 PWDSR 10-11)

| | | | | | | | |
|---|---|---|---|---|---|---|---|
| 1 | 1.50 | 1.50 | - | 2.25 | Smtr | 294.00 | 662.00 |

10. SOLID PANEL PVC DOOR SHUTTER Providing & fixing 30 mm thick factory made rigid foam Panelled door Shutters made from M.S. tube of 19 gauge thickness, size 19 x 19 mm for styles and 15 x 15 mm for top & bottom rails, covered with heat moulded PVC channel of 5 mm thick sheet & 30 x 50 mm wide to form styles & 5 mm thick & 75 mm wide PVC sheets for top rail, lock rail & bottom rail on either side & 5 mm thick 20 mm wide PVC sheet as gap insert for top rail & bottom rail. Panelling of 5 mm thick PVC sheet fitted in the M.S. Frame. Sealed to the styles & rails with 5 x 30 mm PVC sheet beading on either side & joined together with solvent cement adhesive etc. Complete as per manufactures specification & direction of Engineer-in-charge fixed to frames with 3 nos. of 75 mm Aluminium hings. (P.No. 52, It. No. 9.83 PWDSR 10-11)

| | | | | | | | |
|---|---|---|---|---|---|---|---|
| 1 | 0.60 | 1.50 | - | 0.9 | Smtr | 1550.00 | 1395.00 |

11. SOLID PVC DOOR FRAME Providing & fixing factory made PVC Door frame of size 50 x 47 mm with a wall thickness of 5 mm, made out of extruded 5 mm rigid PVC foam sheet metered cut at corners & jointed 2 nos. of 150 mm long brackets of 15 x 15 mm M.S. square tube, the entire door frame to be reinforced with 19 x 19 mm M.S. sqaure tube of 19 gauge. The doorframe to be fixed to the wall using M.S. Screws of 65/80 mm size complete as per manufacturers specifications & Direction of Engineer-incharge.

(P.No. 52, It. No. 9.84 PWDSR 10-11)

| | | | | | |
|---|---|---|---|---|---|
| Qty Vide I. No. 10 | - | 0.90 | Smtr | 205.00 | 185.00 |

**In case of ordinary soil**

Total Amount Rs. 11859.00

**In case of hard soil**

Total Amount Rs. 12049.00

Sd/-

**(R.P. Kulkarni)**

Additional Director (Tech.) & Chief Engineer
Karnataka Rural Water Supply & Sanitation Agency
2nd Floor, 'E' Block, KHB Complex
Cauvery Bhavan, K.G. Road, Bangalore - 09

# Sample Estimate for construction of rural toilet with soak pit for approximate assessment of requirement of unskilled labour for payment under MGNREGS (as per )

| Sl. | Item | Unit | Quanity | SR/MR Rate | Amount | material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|---|---|---|
| | | | | | | | Skilled/Semi | | Unskilled | | | | | | |
| | | | | | | | | | Ordinary Soil | | | Hard Soil | | | |
| | | | | | | | Description | Approximate Amount | Nos | Rate | Amount | Nos | Rate | Amount | |
| 1 | KSRB 2-2.1: Earthwork excavation for foundation of buildings, culvers, water supply, sanitary lines and electrical conduits either in pits or trenches 1.5 m and above in width, in ordinary soil not exceeding 1.5 m in depth including dressing the bottom and sides of pits and trenches, stacking the excavated soil clear from edges of excavation with lead upto 50 m. after breaking of colds complete as per specifications, specification. No. KBS 2.1 (a)/2.3.5, (P.No. 5, I No. 2.3 PWDSR 10-11) | | | | | | | | | | | | | | Fractional values of mandays are rounde to next integra digits |
| | In Case of ordinary soil | cum | 3.16 | 118 | 372.88 | 0 | | 0 | 3 | 125 | 375 | 5 | 125 | 625 | |
| | In Case of Hard soil | cum | 3.16 | 178 | 562.48 | | | | | | | | | | |
| 2 | KSRB 5-1.1: Providing and constructing granite / trap / basalt rubble stone masonry in foundation with CM 1:8 mortar (uncoursed), bond stones at two m. Apart in each course including cost of materials, labour, curing complete as per specifications. (P.No. 22, I No. 5.2 PWDSR 10-11) | | | | | | | | | | | | | | |
| | | cum | 1.46 | | 2890.8 | 2265.8 | 1 masons | 250 | 3 | 125 | 375 | 3 | 125 | 375 | |
| 3 | KSRB 5-1.1: Providing and laying granite / trap / basalt cement concrete with including cost of materials, labour, curing etc complete as per specifications. (P.No. 12, I.No. 4.7 PWDSR 10-11) CC 1:3:6 20 mm | | | | | | | | | | | | | | |
| | | cum | 0.16 | | 623.52 | 248.52 | 1/2 masons | 125 | 2 | 125 | 250 | 2 | 125 | 250 | |

| Sl. | Item | Unit | Quantity | SR/MR Rate | Amount | material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|---|---|---|
| | | | | | | | Skilled/Semi | | Unskilled | | | | | | |
| | | | | | | | | | Ordinary Soil | | | Hard Soil | | | |
| | | | | | | | Description | Approximate | Nos | Rate | Amount | Nos | Rate | Amount | |
| 4 | KSRB 5-13: Providing and constructing non-load bearing wall cement concrete cavitites blocks (hollow blocks) of proportion 1:5:3 blcoks of size 40 x 10 x 20 cms (l x b x h) strength not less than 35 kg. Per sqm with cement mortar 1:4 conforming to I.S. 2185 of 1967 having not less than 35 kg. Per sqm with cement mortar 1:4 conforming to I.S. 2185 of 1967 having not less than 40 mm shell thickness 50% of total volume of block having two large cavitites with 20 mm. Wall thickness in between including cost of materials, labour charges, scaffolding, curing complete as per specifications (P.N. 23, I.No. 5.26 PWDSR 10-11) | | | | | | | | | | | | | | |
| | | sqmtr | 6.06 | 367 | 2,224.02 | 1224 | 2 masons | 500 | 4 | 125 | 500 | 4 | 125 | 500 | |
| 5 | KSRB 11-3: Providing and fixing white vitreous china clay, water Indian type (squatting pan) of size 580 mm with footrests, 100 mm S or P trap, (approved make) cutting and making good the wall and floor wherever required, including cost of materials, labour complete as per specifications. (P.No. 67, I.No. 12.3 PWDSR 10-11) | | | | | | | | | | | | | | |
| | | each no | 1 | 903 | 903 | 903 | plumber | | 0 | 125 | 0 | 0 | 125 | 0 | |
| 6 | Soak Pit dry wall for soakage lining dia 0.35 wide (LS) | | | | | | | | | | | | | | |
| | | sqmtr | 2.11 | 700 | 1477 | 727 | | | 6 | 125 | 750 | 6 | 125 | 750 | |

| Sl. | Item | Unit | Quanity | SR/MR Rate | Amount | material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|---|---|---|
| | | | | | | | Skilled/Semi | | Unskilled | | | | | | |
| | | | | | | | | | Ordinary Soil | | | Hard Soil | | | |
| | | | | | | | Description | Approximate | Nos | Rate | Amount | Nos | Rate | Amount | |
| 7 | KSRB 12-11 : Providing and laying in position to required level or slope 100 mm internal diameter salt glazed stoneware pipes grade A and joining with stiff mixture of cement mortar in proportion of 1:1, testing of pipes and joints. Including cost of materials, labour charges complete as per specifications. (P.No. 60, I.No. 11.1 PWDSR 10-11) | | | | | | | | | | | | | | |
| | | rmt | 2.4 | 197 | 472.80 | 222.8 | plumber | 250 | 0 | 125 | 0 | 0 | 125 | 0 | |
| 8 | Burnt Stone Slabs 10 Cms tick ({.No. XV, I No. 412 PWDSR 10-11)j | | | | | | | | | | | | | | |
| | | sqmtr | 2.25 | 290 | 652.5 | 652.5 | plumber | | 0 | 125 | 0 | 0 | 125 | 0 | |
| 9 | KSRB 8.3-1: Providing and laying to required line and slope roofing with corrugated asbestos cement sheet 6 mm. Thick fixed with galvanized iron J or L hooks, bolts and nuts 8 mm. Dia C.I. Plain and bitumen washers over the existing purlins, rafters and trusses including cost of materials, labour, complete as per specifications, Specification No. KBS 8.5 (P.No. 41, I.No. 8.3 PWDSR 10-11) | | | | | | | | | | | | | | |
| | | sqmtr | 2.25 | 294 | 661.5 | 536.5 | | | 1 | 125 | 125 | 1 | 125 | 750 | |

| Sl. | Item | Unit | Quantity | SR/MR Rate | Amount | Material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|---|---|---|
| | | | | | | | Skilled/Semi | | Unskilled | | | | | | |
| | | | | | | | | | Ordinary Soil | | | Hard Soil | | | |
| | | | | | | | Description | Approximate | Nos | Rate | Amount | Nos | Rate | Amount | |
| 10 | SOLID PANEL PVC DOOR SHUTTER : Providing & fixing 30 mm thick factory made rigid foam Panelled door Shutters made from M.S. Tube of 19 gauge thickness, size 19 x 19 mm for styles and 15 x 15 mm for top & bottom rails, covered with heat moulded PVC channel of 5 mm thick sheet & 30 x 50 mm wide to form styles & 5 mm thick & 75 mm wide PVC sheets for top rail, lock rail & bottom rail on either side & 5 mm thick 20 mm wide PVC sheet as gap insert for top rail & bottom rail Panelling of 5 mm thick PVC sheet fitted in the M.S. Frame, Sealed to the styles & rails with 5 x 30 mm PVC sheet beading on either side & joined together with solvent cement adhesive etc., Complete as per manufactures specification & direction of Engineer-in-charge fixed to frames with 3 nos of 75 mm Aluminium hings. (P.No. 52, I.No. 9.83 PWDSR 10-11) | | | | | | | | | | | | | | |
| | | sqmtr | 0.9 | 197 | 1,395.00 | 1395 | plumber | 250 | 0 | 125 | 0 | 0 | 125 | 0 | |

| Sl. | Item | Unit | Quantity | SR /MR Rate | Amount | Material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|---|---|---|
| | | | | | | | Skilled/Semi | | Unskilled | | | | | | |
| | | | | | | | | | Ordinary Soil | | | Hard Soil | | | |
| | | | | | | | Description | Approximate | Nos | Rate | Amount | Nos | Rate | Amount | |
| 11 | SOLID PVC DOOR FRAME Providing & fixing factory made PVC Doorframe of size 50 x 47 mm with a wall thickness of 5 mm, made out of extruded 5 mm rigid PVC foam sheet metered out at corners & jointed 2 nos. Of 150 mm long brackets of 15 x 15 mm M.S. Square tube, the entire door frame to be reinforced with 19 x 19 mm M.S. square tube of 19 gauge. The dorrframe to be fixed to the wall using M.S. Screws of 65 / 80 mm size complete as per manufacturers specifications & Direction of Engineer - incharge. (P.No. 52, I.No. 9.84 PWDSR 10-11) | | | | | | | | | | | | | | |
| | | sqmtr | 0.9 | 205 | 184.5 | 184.5 | plumber | | 0 | 125 | 0 | 0 | 125 | 0 | |
| | | | | | | | | | | | | | | | |
| | In case of ordinary soil | | | | | | | | | | | | | | |
| | Total Amount Rs. 11859.00 | | | | total | 8359.6 | | 1125 | 19 | | 2375 | 21 | | 2625 | |
| | | | | | | | | | | | | | | | |
| | In case of Hard soil<br>Total Amount Rs. 12049.00 | | | | | | | | man days | | | man days | | | |

| Sl. | Item Unit Quanity SR/MR Rate | Amount | material Approximate Amount | labour Component | | | | | | | | Remarks |
|---|---|---|---|---|---|---|---|---|---|---|---|---|
| | | | | Skilled/Semi | | Unskilled | | | | | | |
| | | | | | | Ordinary Soil | | | Hard Soil | | | |
| | | | | Description | Approximate | Nos | Rate | Amount | Nos | Rate | Amount | |
| | Hence if toilet as per above drawing and specifications in ordinary soil 19 (ninteen) unskilled can be paid under MGNREGS Material skilled and semi skilled workers payment to be paid under convergence with other schemes. These calculations are for guidelines only actual calculations may be taken up case wise. | | | | | | | | | | | |
| | | | | | | | | | | | | |
| | Hence if toilet as per above drawing and specifications in Hard soil 21 (twentyone) unskilled can be paid under MGNREGS Material skilled and semi skilled workers payment to be paid under convergence with other schemes. These calculations are for guidelines only actual calculations may be taken up case wise. | | | | | | | | | | | |
| | | | | | | | | | | | | |

**(R.P. KULKARNI)**
Additional Director (Tech.) & Chief Engineer
Karnataka Rural Water Supply & Sanitation Agency
2nd Floor, 'E' Block, KHB Complex,
Cauvery Bhavan, K.G. Road, Bangalore-09

# ESTIMATE FOR RURAL SANITATION




Note : All dimensions in meters


(R. P. KULKARNI)
Additional Director (Tech.) & Chief Engineer
Karnataka Rural Water Supply & Sanitation Agency
2nd Floor, 'E' Block, KHB Complex,
Cauvery Bhavan, K. G. Road, Bangalore-9.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಗ್ರಾಅಪ :60 :ಉಖಾಯೋ:200 ದಿನಾಂಕ:4-07-2011

**ಸುತ್ತೋಲೆ**

ವಿಷಯ: ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಕಾಮಗಾರಿಗಳ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಅಧೀನ ಕಾರ್ಯದರ್ಶಿ ಕೃಷಿ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಪತ್ರದ ಸಂಖ್ಯೆ: ಕೃತೋಇ/62/ ಕೃಇ ಕ/2009 ದಿನಾಂಕ : 06-04-2011

* * *

ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು ಇವರು, ಕೃಷಿ ಇಲಾಖೆಗೆ ಬರೆದ ಪತ್ರದ ದಿನಾಂಕ 10-12-2010ರಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಸಂಶೋಧನಾ ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಫಾರಂಗಳಲ್ಲಿ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವುದರಿಂದ ಸದರಿ ವಿಜ್ಞಾನ ಕೇಂದ್ರಗಳ ಫಾರಂಗಳಲ್ಲಿ ಅನುಷ್ಠಾನಗೊಳಿಸಬಹುದಾದ ಕಾಮಗಾರಿಯ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕ್ರಿಯಾ ಯೋಜನೆಗಳಲ್ಲಿ ಸೇರಿಸಿ ಅನುಷ್ಠಾನಗೊಳಿಸುವಂತೆ ಸುತ್ತೋಲೆಯನ್ನು ಹೊರಡಿಸಲು, ಕೋರುವ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಉಲ್ಲೇಖಿತ ಪತ್ರದಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಕೃಷಿ ಇಲಾಖೆ ಇವರು ಕೋರಿರುತ್ತಾರೆ. ಕೃಷಿ ವಿಶ್ವವಿದ್ಯಾನಿಲಯದ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಕೃಷಿ ವಿಶ್ವವಿದ್ಯಾನಿಲಯವು ಸಂಶೋಧನಾ ಮತ್ತು ಕಾರ್ಯಕ್ರಮಗಳು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಕೈಗೊಳ್ಳುವ ಕಾರ್ಯಕ್ರಮಗಳು ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಅನುಮತಿಸಲ್ಪಡುವ ಕಾಮಗಾರಿಗಳಿಗೆ ಹೋಲುವ ಕಾಮಗಾರಿಗಳನ್ನು ಸಂಪೂರ್ಣವಾಗಿ ತಮ್ಮ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವಂತಹ ಪ್ರದೇಶಗಳಲ್ಲಿ ಎಂಜಿಎನ್‌ಆರ್‌ಇಜಿ ಅಧಿನಿಯಮ, ನಿಯಮ ಮತ್ತು ಕೇಂದ್ರ ಸರ್ಕಾರವು ಹೊರಡಿಸಿರುವ ಕಾರ್ಯಚರಣೆಯ ಮಾರ್ಗಸೂಚಿಗಳ ಚೌಕಟ್ಟಿಗೆ ಒಳಪಟ್ಟು ಅನುಷ್ಠಾನಗೊಳಿಸಲು, ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ. ಇದರ ಸಂಬಂಧ ಕೃಷಿ ವಿಶ್ವವಿದ್ಯಾನಿಲಯದವರು ತಮ್ಮ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿ ಸೂಕ್ತ ಅನುದಾನವನ್ನು ಒದಗಿಸಿಕೊಂಡು ಅನುಷ್ಠಾನಗೊಳಿಸುವ ಕುರಿತು ಡಾ|| ಕೆ. ನಾರಾಯಣಗೌಡ ಕುಲಪತಿಗಳು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಬೆಂಗಳೂರು-560065 ಇವರನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಿದೆ. ಇದರ ಸಂಬಂಧ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಇವರಿಂದ ಕೃಷಿ ಇಲಾಖೆಗೆ ಬರೆದ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ.

ತಮ್ಮ ವಿಶ್ವಾಸಿ

**(ಪಿ. ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ.
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವ ಕುರಿತು.

ಓದಲಾಗಿದೆ:
1. ದಿನಾಂಕ 12.10.2010 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
2. ದಿನಾಂಕ 07.01.2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ.
3. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 19-02-2011
4. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 10-03-2011
5. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ 2010 ಬೆಂಗಳೂರು ದಿನಾಂಕ : 21-05-2011

* * *

### ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉಲ್ಲೇಖಿತ ಪತ್ರಗಳ ಆದೇಶದನ್ವಯ ರಾಜ್ಯದ ಒಟ್ಟು ಒಂಭತ್ತು ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಚಿತ್ರದುರ್ಗ, ಧಾರವಾಡ, ಹಾಸನ, ತುಮಕೂರು, ಉತ್ತರ ಕನ್ನಡ, ರಾಯಚೂರು ಮತ್ತು ಮಂಡ್ಯ ಇವುಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ, ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಪರಿಣಾಮಕಾರಿಯಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶವನ್ನು ಹೊರಡಿಸಲಾಗಿತ್ತು. ಈಗ ಗುಲ್ಬರ್ಗ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕೂಡ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವುದು. ಅಗತ್ಯತೆ ಇರುವುದರಿಂದ ಸದರಿ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 21-07-2011**

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ ಪಂಚಾಯತ್ ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿಗದಿಪಡಿಸಿದ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗಸೂಚಿಗಳ ಅನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

| ಕ್ರಮ ಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನಾಧಿಕಾರಿ |
|---|---|---|---|
| 1 | ಗುಲ್ಬರ್ಗಾ | 1 ಅರಣ್ಯ ಇಲಾಖೆ<br>2 ತೋಟಗಾರಿಕೆ ಇಲಾಖೆ | 1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಗುಲ್ಬರ್ಗಾ<br>2 ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಗುಲ್ಬರ್ಗಾ |
| 2 | ಕೊಪ್ಪಳ | 1 ಅರಣ್ಯ ಇಲಾಖೆ<br>2 ತೋಟಗಾರಿಕೆ ಇಲಾಖೆ | 1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೊಪ್ಪಳ<br>2 ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳ ಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಛದಲ್ಲಿ ಸೇರಿಸತಕ್ಕದ್ದು.
2. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳು ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಅಂತಹ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯತಿ /ಜಿಲ್ಲಾ ಪಂಚಾಯತಿಯವರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ ಕ್ರಿಯಾ ಯೋಜನೆಗೆ ತಾಲ್ಲೂಕು ಪಂಚಾಯತಿ/ ಜಿಲ್ಲಾ ಪಂಚಾಯತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ /ಪಂಚಾಯತ್ ಕಾರ್ಯದರ್ಶಿ ಇವರುಸದರಿ ಇಲಾಖೆಗಳ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ NMR ಗಳನ್ನು MIS ಮೂಲಕ ಸಂಬಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು MIS ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ Login ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ Login ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳನು ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ /ಪಂಚಾಯತ್ ಕಾರ್ಯದರ್ಶಿ ಇವರು ವಿತರಿಸಿರುವ NMR ಗಳನ್ನು ಪಡೆಯಬಹುದಾಗಿದೆ.
6. MIS ನಿಂದ ಪಡೆದ NMR ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು MIS ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಗಾರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಾಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಾಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ MISನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧ ಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಧೃಢೀಕರಿಸುವುದರ ಜೋಗೆ MIS ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
9. ಗ್ರಾಮ ಮಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ /ಪಂಚಾಯತ್ ಕಾರ್ಯದರ್ಶಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ NMRವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ /ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು MIS ನಲ್ಲಿ ದಾಖಲಿಸತಕ್ಕದ್ದು (ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೇರವಾಗಿ ಅನುದಾನ ಬಿಡುಗಡೆ ಮಾಡುಲು ಕ್ರಮ ವಹಿಸಬಹುದಾಗಿರುತ್ತದೆ)

10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ Login ಮೂಲಕವೇ MISನಲ್ಲಿ ಭರ್ತಿ ಮಾಡತಕ್ಕದ್ದು.
11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ಧೃಢೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.
12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.
13. ಕೇಂದ್ರ /ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ / ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪಿ.ಪಿ.ಶಿವಶಂಕರ್)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು /ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗುಲ್ಬರ್ಗಾ ಮತ್ತು ಕೊಪ್ಪಳ
4. ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
8 ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಗುಲ್ಬರ್ಗಾ/ ಬೆಳಗಾಂ.
9 ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
10 ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
12 ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
13 ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14 ಹೆಚ್ಚಿನ ಪ್ರತಿಗಳು / ರಕ್ಷಾ ಕಡತ

ಅನಸೂ ರಾಗ್ರಸಂಸ್ಥೆ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೊ ೀಜನೆಯ ಅನುಷ್ಠಾನದಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವ ಕುರಿತು.

ಓದಲಾಗಿದೆ:
1. ದಿನಾಂಕ 12.10.2010 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.
2. ದಿನಾಂಕ 07.01.2011ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದ ರೀತ್ಯಾ.
3. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 19-02-2011 (7ಜಿಲ್ಲೆಗಳು)
4. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 10-03-2011 (1 ಜಿಲ್ಲೆ)
5. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 21-05-2011 (1ಜಿಲ್ಲೆ)
6. ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 8-07-2011 (2ಜಿಲ್ಲೆ)

* * *

### ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉಲ್ಲೇಖಿತ ಪತ್ರಗಳ ಆದೇಶದನ್ವಯ ರಾಜ್ಯದ ಒಟ್ಟು ಹನ್ನೊಂದು ಜಿಲ್ಲೆಗಳಾದ ಬಾಗಲಕೊಟೆ, ಬೆಳಗಾಂ, ಚಿತ್ರದುರ್ಗ, ಧಾರವಾಡ, ಹಾಸನ, ತುಮಕೂರು, ಉತ್ತರ ಕನ್ನಡ, ರಾಯಚೂರು, ಮಂಡ್ಯ ಕೊಪ್ಪಳ ಮತ್ತು ಗುಲ್ಬರ್ಗಾ ಇವುಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಕೆಗಳನ್ನು ಪ್ರಾಯೋಗಿಕವಾಗಿ, ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಪರಿಣಾಮಕಾರಿಯಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆದೇಶವನ್ನು ಹೊರಡಿಸಲಾಗಿತ್ತು. ಈಗ ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸಲು, ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸುವಂತೆ ಬೇಡಿಕೆಗಳು ಬಂದಿರುವುದರಿಂದ ಹಾಗೂ ಈಗಾಗಲೇ ಹನ್ನೊಂದು ಜಿಲ್ಲೆಗಳಿಗೆ ಹೊರಡಿಸಿರುವ ಆದೇಶದ ಆಧಾರದ ಮೇಲೆ ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲೂ ಕೂಡ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳ ಮಹಾತ್ಮ ಗಾಂಧಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುಷ್ಠಾನಗೊಳಿಸುವುದು ಅಗತ್ಯತೆ ಇರುವುದರಿಂದ ಸದರಿ ಇಲಾಖೆಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ :167 :ಉಖಾಯೋ2010 ಬೆಂಗಳೂರು ದಿನಾಂಕ : 21-07-2011**

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಶಗಳನ್ನು ಪರಿಗಣಿಸಿ ಪಂಚಾಯತ್ ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಹಾವೇರಿ ಮತ್ತು ಗದಗ ಜಿಲ್ಲೆಗಳಲ್ಲಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಗಳೆಂದು ಪರಿಗಣಿಸಿ ಸಂಬಂಧಪಟ್ಟ ಇಲಾಖೆಗಳಿಗೆ ನಿಗದಿಪಡಿಸಿದ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು

| ಕ್ರಮ ಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನಾಧಿಕಾರಿ |
|---|---|---|---|
| 1 | ಹಾವೇರಿ | 1 ಅರಣ್ಯ ಇಲಾಖೆ<br><br>2 ತೋಟಗಾರಿಕೆ ಇಲಾಖೆ | 1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾವೇರಿ<br>2 ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಗದಗ |
| 2 | ಗದಗ | 1 ಅರಣ್ಯ ಇಲಾಖೆ<br><br>2 ತೋಟಗಾರಿಕೆ ಇಲಾಖೆ | 1 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾವೇರಿ<br><br>2 ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಗದಗ |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳ ಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಚದಲ್ಲಿ ಸೇರಿಸತಕ್ಕದ್ದು.
2. ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಕಾಮಗಾರಿಗಳು ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಅಂತಹ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮಸಭೆಯ ಮೂಲಕ ಗ್ರಾಮ ಪಂಚಾಯತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು.ಇದೇ ರೀತಿ ತಾಲ್ಲೂಕು ಪಂಚಾಯತಿ /ಜಿಲ್ಲಾ ಪಂಚಾಯತಿಯವರು ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದರೆ ಕ್ರಿಯಾ ಯೋಜನೆಗೆ ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ /ಅಧಿಕಾರಿ ಪಂಚಾಯತ್ ಕಾರ್ಯದರ್ಶಿ ಇವರು ಸದರಿ ಇಲಾಖೆಗಳ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ NMR ಗಳನ್ನು MISಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು MIS ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ Login ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ Login ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ /ಪಂಚಾಯತ್ ಕಾರ್ಯದರ್ಶಿ ಇವರು ವಿತರಿಸಿರುವ NMR ಗಳನ್ನು ಪಡೆಯಬಹುದಾಗಿದೆ.
6. MIS ನಿಂದ ಪಡೆದ NMR ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು MIS ನಲ್ಲಿ ಭರ್ತಿಮಾಡಲು ನಂತರ ಕೂಲಿ ಪಾವತಿಗಾಗಿ wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಾಗ್ರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಾಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನು ಕಡ್ಡಾಯವಾಗಿ MISನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿ ಯಾಗಿರುತ್ತದೆ.
8. ಸದರಿ ಕಾಮಗಾರಿಗಳಿಗೆ ಸಂಬಂಧ ಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಧೃಢೀಕರಿಸುವುದರ ಜೊತೆಗೆ

MISನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.

9. ಗ್ರಾಮ ಪಂಚಾಯಿತಿಯ ಪಂಚಾಯತಿ ಅಭಿವೃದ್ಧಿ/ಅಧಿಕಾರಿ ಪಂಚಾಯತ್ ಕಾರ್ಯದರ್ಶಿ ಇವರು ಕಾಮಗಾರಿಯನ್ನು ಹಂಚಿಕೆ ಮಾಡಿ ಸದರಿ ಕಾಮಗಾರಿಗೆ NMR ವಿತರಣೆ ಮಾಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಸದರಿ ಕಾಮಗಾರಿಯ ಅನುಷ್ಠಾನಕ್ಕಾಗಿ ಬೇಕಾಗಿರುವ ಅನುದಾನವನ್ನು ಅನುಷ್ಠಾನ ಸಂಸ್ಥೆಗಳಿಗೆ ಜಿಲ್ಲಾ ಕಾರ್ಯಕ್ರಮ ಅಧಿಕಾರಿ /ಕಾರ್ಯಕ್ರಮ ಅಧಿಕಾರಿಗಳು ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮಾಹಿತಿಯನ್ನು MISನಲ್ಲಿ ದಾಖಲಿಸತಕ್ಕದ್ದು ತುರ್ತು ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೇರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಬಹುದಾಗಿರುತ್ತದೆ.

10. ಅನುಷ್ಠಾನ ಸಂಸ್ಥೆಗಳು ಬಿಡುಗಡೆ ಮಾಡುವ ಪೂರ್ಣ ಅನುದಾನದ ಸ್ವೀಕೃತಿ ಹಾಗೂ ಸದರಿ ಅನುದಾನದಲ್ಲಿ ಭರಿಸಲಾಗುವ ವೆಚ್ಚ ಇತ್ಯಾದಿ ಮಾಹಿತಿಯನ್ನು ತಮ್ಮ Login ಮೂಲಕವೇ MIS ನಲ್ಲಿ ಭರ್ತಿ ಮಾಡತಕ್ಕದ್ದು.

11. ಕಾಮಗಾರಿ ಪೂರ್ಣಗೊಳಿಸಿದ ಸಂಬಂಧ ಸೂಕ್ತ ದೃಡೀಕರಣ ಹಾಗೂ ಕಾಮಗಾರಿ ಅನುಷ್ಠಾನದಲ್ಲಿ ನಿರ್ವಹಿಸಬೇಕಾದಪೂರ್ಣ ದಾಖಲಾತಿಗಳನ್ನು ಕಡ್ಡಾಯವಾಗಿ ಪ್ರತ್ಯೇಕ ಕಡತದಲ್ಲಿ ನಿರ್ವಹಿಸತಕ್ಕದ್ದು ಮತ್ತು ಯೋಜನಾ ಸಂಬಂಧ ಪರಿಶೀಲನೆಗಾಗಿ ಬರುವ ಅಧಿಕಾರಿಗಳಿಗೆ ತಪ್ಪದೇ ಸದರಿ ದಾಖಲಾತಿಗಳನ್ನು ಹಾಜರು ಪಡಿಸತಕ್ಕದ್ದು.

12. ಯೋಜನೆಯ ಅನುಷ್ಠಾನ ಸಂಬಂಧ ಆರ್ಥಿಕ ವರ್ಷ ಅಂತಿಮಗೊಂಡ ಕೂಡಲೇ Chartered Accountant ರವರಿಂದ ಆಡಿಟ್ ಮಾಡಿಸಿ ವರದಿಯನ್ನು ಸಂಬಂಧಪಟ್ಟ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಲ್ಲಿಸತಕ್ಕದ್ದು.

13. ಕೇಂದ್ರ /ರಾಜ್ಯ ಸರ್ಕಾರವು ಯೋಜನಾ ಅನುಷ್ಠಾನ ಸಂಬಂಧ ಕಾಲಕಾಲಕ್ಕೆ ಹೊರಡಿಸಲಾಗುವ ನಿರ್ದೇಶನ /ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ಪಿ.ಶಿವಶಂಕರ್)**

ನಿರ್ದೇಶಕರು

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು /ಧಾರವಾಡ
2. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಹಾವೇರಿ ಮತ್ತು ಗದಗ
4. ಹಾವೇರಿ ಮತ್ತು ಗದಗ ಜಿಲ್ಲೆಗಳ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು

**ಪ್ರತಿಯನ್ನು**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ,ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು ,ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಟಕ ಸರ್ಕಾರ ರವರ ಆಪ್ತ ಕಾರ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು

6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಎತೋಟಗಾರಿಕೆಏ ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಃಕಾರ್ಯದರ್ಶಿಗಳು ಎಪಂಚಾಯತ್ ರಾಜ್ಏ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು ಃಮೈಸೂರು ಃಗುಲ್ಬರ್ಗಾ ಃಬೆಳಗಾಂ
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯಭವನ, ಮಲ್ಲೇಶ್ವರಂ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು, ಎಹಣಕಾಸು ಮತ್ತು ಲೆಕ್ಕಪತ್ರಏ ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಹೆಚ್ಚಿನ ಪ್ರತಿಗಳು ಃ ರಕ್ಷಾ ಕಡತ

ಅನಸೂ ರಾಗ್ರಸಂಸ್ಥೆ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂ : ಗ್ರಾಅಪ :181:ಉಖಾಯೋ:2009 ದಿನಾಂಕ : 25-07-2011

**ಸುತ್ತೋಲೆ**

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ರಾಜ್ಯದ ಹದಿಮೂರು ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳನ್ನಾಗಿ ಗುರುತಿಸಿರುವ ಅನುಷ್ಠಾನಾಧಿಕಾರಿಗಳು ಯೋಜನೆಯ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪಾತ್ರ, ಕರ್ತವ್ಯಗಳು ಮತ್ತು ಜವಾಬ್ದಾರಿಗಳು

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ /167/ಉಖಾಯೋ /2010 ಬೆಂಗಳೂರು ದಿನಾಂಕ 19.02.2011
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ /167/ಉಖಾಯೋ /2010 ಬೆಂಗಳೂರು ದಿನಾಂಕ 10.03.2011
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ /167/ಉಖಾಯೋ /2010 ಬೆಂಗಳೂರು ದಿನಾಂಕ 21.05.2011
4. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ /167/ಉಖಾಯೋ /2010 ಬೆಂಗಳೂರು ದಿನಾಂಕ 08.07.2011
5. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ /167/ಉಖಾಯೋ /2010 ಬೆಂಗಳೂರು ದಿನಾಂಕ 21.07.2011

* * *

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ತೊಡಗಿರುವ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ಪ್ರಾಯೋಗಿಕವಾಗಿ ರಾಜ್ಯದ ಹದಿಮೂರು ಜಿಲ್ಲೆಗಳಲ್ಲಿ ಅಂದರೆ ಬಾಗಲಕೋಟೆ, ಬೆಳಗಾಂ, ಚಿತ್ರದುರ್ಗ, ಧಾರವಾಡ, ಹಾಸನ, ತುಮಕೂರು, ಉತ್ತರ ಕನ್ನಡ, ರಾಯಚೂರು, ಮಂಡ್ಯ, ಕೊಪ್ಪಳ, ಗುಲ್ಬರ್ಗ, ಹಾವೇರಿ ಮತ್ತು ಗದಗ ಇವುಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ಆದೇಶವನ್ನು ಉಲ್ಲೇಖಿತ ಪತ್ರಗಳ ವಿವಿಧ ದಿನಾಂಕಗಳಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಆದೇಶದ ಉದ್ದೇಶ ಕಾಮಗಾರಿಗಳಿಗೆ ಸಂಬಂಧಿಸಿದ ಹಣವನ್ನು ಗ್ರಾಮ ಪಂಚಾಯಿತಿಗಳ ಮೂಲಕ ಪಾವತಿಸುತ್ತಿರುವ ಕಾಲವಿಳಂಬವನ್ನು ತಪ್ಪಿಸುವ ಸಲುವಾಗಿ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಎದುರಿಸುತ್ತಿರುವ ಇತರೆ ಅಡಚಣೆಗಳನ್ನು ತಪ್ಪಿಸುವ ಸಲುವಾಗಿ ಸರ್ಕಾರವು ಈ ನಿರ್ಧಾರವನ್ನು ತೆಗೆದುಕೊಂಡಿರುತ್ತದೆ. ಸದರಿ ಹದಿಮೂರು ಜಿಲ್ಲೆಗಳ ಅನುಷ್ಠಾನ ಸಂಸ್ಥೆಗಳಾದ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಂದ ಯೋಜನೆಯ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಪಾತ್ರ. ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿಸುವಂತೆ ಸರ್ಕಾರವನ್ನು ಕೋರುತ್ತೀರುತ್ತಾರೆ. ಸದರಿ ಜಿಲ್ಲೆಗಳಲ್ಲಿನ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳ ಅನುಷ್ಠಾನಾಧಿಕಾರಿಗಳಿಗೆ ಯೋಜನೆಯನ್ನು ಸುಲಲಿತವಾಗಿ ನಿರ್ವಹಿಸಲು ಈ ಕೆಳಕಂಡ ವಿಷಯಗಳ ಮೇಲೆ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ವಹಿಸಲಾಗಿರುತ್ತದೆ.

**ಯೋಜನೆಯ ಅನುಷ್ಠಾನದ ತೊಡಗಿರುವ ಅನುಷ್ಠಾನ ಇಲಾಖೆಗಳು / ಅನುಷ್ಠಾನ ಏಜನ್ಸಿನಗಳು ನಿರ್ವಹಿಸಬೇಕಾದ ಕರ್ತವ್ಯಗಳು**

1. ಯೋಜನೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳು ಸಂಬಂಧಪಟ್ಟ ಗ್ರಾಮಪಂಚಾಯಿತಿಯ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದಿರಬೇಕು.
2. ಕಾಮಗಾರಿಯ ಅನುಷ್ಠಾನದ ವ್ಯಾಪ್ತಿ, ಒಂದು ಗ್ರಾಮಪಂಚಾಯಿತಿಗಿಂತ ಹೆಚ್ಚು ಗ್ರಾಮ ಪಂಚಾಯಿಗಳಲ್ಲಿ ಇದ್ದರೆ ಅದನ್ನು ತಾಲ್ಲೂಕು ಮಟ್ಟದ ಕ್ರಿಯಾ ಯೋಜನೆಯೆಂದು ಪರಿಗಣಿಸುವುದು. ಇದೇ ರೀತಿ ಒಂದು ತಾಲ್ಲೂಕಿಗಿಂತ ಹೆಚ್ಚು ತಾಲ್ಲೂಕುಗಳು ಇದ್ದಲ್ಲಿ ಅದನ್ನು ಜಿಲ್ಲಾ ಮಟ್ಟದ ಕ್ರಿಯಾ ಯೋಜನೆಯೆಂದು ಪರಿಗಣಿಸುವುದು.
3. ಎಲ್ಲಾ ಅನುಮೋದಿತ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯುವುದು.

4. ಅನುದಾನವನ್ನು ಜಿಲ್ಲಾ ಮಟ್ಟದ ಕಾರ್ಯಕ್ರಮದವಾದಲ್ಲಿ ಜಿಲ್ಲಾ ಪಂಚಾಯಿತಿಯಿಂದ, ತಾಲ್ಲೂಕು ಮಟ್ಟದ ಕಾರ್ಯಕ್ರಮವಾದರೆ ತಾಲ್ಲೂಕು ಪಂಚಾಯಿತಿಯಿಂದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಕಾರ್ಯಕ್ರಮವಾದರೆ ಗ್ರಾಮ ಪಂಚಾಯಿತಿಯಿಂದ ಪಡೆಯಬೇಕು.
5. ಸಕ್ಷಮಾ ಪ್ರಾಧಿಕಾರದಿಂದ ಕಾಮಗಾರಿ ಆದೇಶವನ್ನು ಮತ್ತು ಎಂಐಎಸ್‌ನಿಂದ ಸೃಜೀಸಲಾದ ಎನ್ ಎಂ ಆರ್‌ನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಂದ ಪಡೆಯುವುದು.
6. ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಕಾಮಗಾರಿಯ ಸ್ಥಳದಲ್ಲಿ ಕೆಲಸ ನಿರ್ವಹಿಸುವ ಕೂಲಿಕಾರರಿಗೆ ಸೌಕರ್ಯಗಳನ್ನು ಕಲ್ಪಿಸುವುದು.
7. ಕೂಲಿಕಾರರ ಹಾಜರಾತಿಯ ವಿವರವನ್ನು ಎಂಐಎಸ್‌ನಲ್ಲಿ ತಪ್ಪದೇ ದಾಖಲಿಸುವುದು.
8. ಕೂಲಿಕಾರರ ಕೂಲಿ ವೇತನವನ್ನು ವಾರಕ್ಕೊಮ್ಮೆ ಅಥವಾ ಗರಿಷ್ಠ 15 ದಿನಗಳಿಗೆ ಮೀರದಂತೆ ಕಡ್ಡಾಯವಾಗಿ ಪಾವತಿಸಲು ಕ್ರಮಜರುಗಿಸುವುದು.
9. ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕವನ್ನು ನಿರ್ವಹಣೆ ಮಾಡುವುದು ಮತ್ತು ಅಳತೆ ಪುಸ್ತಕದಲ್ಲಿ ಕಾಮಗಾರಿಯ ಅಳತೆಗಳನ್ನು ಮತ್ತು ಕೆಲಸ ಪ್ರಮಾಣವನ್ನು ದಾಖಲಿಸುವುದು.
10. ಕಾಮಗಾರಿಯ ನಿರ್ವಹಣೆಯಲ್ಲಿ ಮೂರು ಹಂತಗಳ ಛಾಯ ಚಿತ್ರಗಳನ್ನು ನಿರ್ವಹಿಸುವುದು.
11. ಕಾಮಗಾರಿ ಸ್ಥಳದಲ್ಲಿ ನಾಮಫಲಕವನ್ನು ನೆಡುವುದು ಮತ್ತು ನಾಮಫಲಕದಲ್ಲಿ ಕಾಮಗಾರಿಗೆ ಸಂಬಂಧಿಸಿದ ವಿವರಗಳನ್ನು ಬರೆಯುವುದು.
12. ಯೋಜನೆಗೆ ಸಂಬಂಧಿಸಿದಂತೆ ಹಣಕಾಸಿನ ವಹಿವಾಟನ್ನು ಪ್ರತ್ಯೇಕವಾಗಿ ನಿರ್ವಹಣೆ ಮಾಡುವುದು.
13. ಪ್ರತಿಯೊಂದು ಕಾಮಗಾರಿಗೆ ಪ್ರತ್ಯೇಕವಾದ ಕಡತ ನಿರ್ವಹಣೆ
14. ಕಾಮಗಾರಿಯ ನಿರ್ವಹಣೆಯಲ್ಲಿ ಗುತ್ತಿಗೆದಾರರನ್ನು ಮತ್ತು ಯಂತ್ರಗಳನ್ನು ಬಳಸಬಾರದು.
15. ಕೂಲಿ ಕಾರ್ಮಿಕರಿಗೆ ಕೂಲಿ ಹಣವನ್ನು ನಗದಾಗಿ ವಿತರಣೆ ಮಾಡಬಾರದು.
16. ಕಾಮಗಾರಿಯನ್ನು ನೊಂದಾಯಿತ ಕೂಲಿ ಕಾರ್ಮಿಕರಿಂದ ನಿರ್ವಹಿಸತಕ್ಕದ್ದು.
17. ಎಲ್ಲಾ ದಾಖಲೆಗಳನ್ನು ಯೋಜನೆಯ ಉಸ್ತುವಾರಿ ಅಧಿಕಾರಿಗಳಿಗೆ ತಪಾಸಣೆಗೆ ಬಂದಾಗ ಒದಗಿಸುವುದು.
18. ಕಾಮಗಾರಿಗಳ ಅನುಷ್ಠಾನದ ಬಳಿಕ ಸಿ.ಎ ಇವರಿಂದ ಲೆಕ್ಕ ಪರಿಶೋಧನೆ ಮಾಡಿಸುವುದು.
19. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಾಮಾಗ್ರಿಗಳನ್ನು ಖರೀದಿಸುವಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ ಮತ್ತು ನಿಯಮಗಳನ್ನು ಮತ್ತು ಕಾಲಕಾಲಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಮಾರ್ಗಸೂಚಿಗಳನ್ನು ಅನುಸರಿಸುವುದು.
19. ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಯಾವ ರೀತಿ ಅನುದಾನವನ್ನುಪಡೆದು ನಿರ್ವಹಣೆ ಮಾಡಬೇಕು ಎಂಬುದರ ಕುರಿತು ನಿಧಿ ಬಿಡುಗಡೆಯ ವಿಧಾನದ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿದೆ.

II. **ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ ೧೪ರ ಪ್ರಕಾರ ಯೋಜನೆಯ ಇನುಷ್ಠಾನದಲ್ಲಿ ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಬೇಕಾದ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಯವರ ಕರ್ತವ್ಯಗಳು**

1. ಜಿಲ್ಲೆಯಲ್ಲಿ ಅನುಷ್ಠಾನವಾಗುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಪೂರ್ಣ ಜವಾಬ್ದಾರಿಯಾಗಿರುತ್ತಾರೆ.
2. ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ಮತ್ತು ಇತರೆ ಅನುಷ್ಠಾನ ಇಲಾಖೆಗಳ ಯೋಜನೆಗಳನ್ನು ಕ್ರೋಡಿಕರಿಸಿ ತಯಾರಿಸಿದ ಜಿಲ್ಲಾ ಯೋಜನೆಯನ್ನು ಜಿಲ್ಲಾ ಪಂಚಾಯಿತಿಯ ಅನುಮೋದನೆಗೆ ಸಲ್ಲಿಸುವುದು.
3. ಪ್ರತಿ ವರ್ಷ ಡಿಸೆಂಬರ್ ಮಾಸದ ಅಂತ್ಯದಲ್ಲಿ ಮುಂದಿನ ಆರ್ಥಿಕ ವರ್ಷದ ಜಿಲ್ಲೆಯ ಕಾರ್ಮಿಕ ಮುಂಗಡ ಪತ್ರದ ಆಯವ್ಯಯವನ್ನು ತಯಾರಿಸಿ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದು.
4. ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳನ್ನು ಮತ್ತು ಪ್ರಕ್ರಿಯೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸೂಕ್ತವಾದ ನೆರವನ್ನು ನೀಡುವುದು.

5. ಕಾಮಗಾರಿಗಳ ಗುಚ್ಛಕ್ಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಸಕಾಲದಲ್ಲಿ ನೀಡುವುದನ್ನು ಖಚಿತಪಡಿಸಿಕೊಳ್ಳುವುದು.

6. ಕಾಮಗಾರಿಗಳ ಅನುಷ್ಠಾನಕ್ಕಾಗಿ ಮತ್ತು ಕೂಲಿಕಾರರಿಗೆ ಕೂಲಿಯನ್ನು ಸಕಾಲದಲ್ಲಿ ಪಾವತಿಸಲು ಅನುವಾಗುವಂತೆ ಅನುದಾನವನ್ನು ಬಿಡುಗಡೆ ಮಾಡುವುದು.

7. ಯೋಜನೆಯ ಅನುಷ್ಠಾನವನ್ನು ಸಂಪೂರ್ಣವಾಗಿ ಪರಿಶೀಲನೆ, ಪರಿವೀಕ್ಷಣೆ ಮತ್ತು ಉಸ್ತುವಾರಿ ಮಾಡತಕ್ಕದ್ದು. ಇದಲ್ಲದೇ ಎಂಐಎಸ್‌ನಲ್ಲಿ ದಾಖಲಿಸಿದ ಯೋಜನೆಯ ಸಂಪೂರ್ಣ ಅನುಷ್ಠಾನದ ಎಲ್ಲಾ ಪ್ರಕ್ರಿಯೆಗಳ ಮಾಹಿತಿಯನ್ನು ಪ್ರತಿದಿನ ಪರಿಶೀಲನೆ ಮತ್ತು ಉಸ್ತುವಾರಿ ಮಾಡುವುದು.

8. ಪ್ರಗತಿಯಲ್ಲಿರುವ ಕಾಮಗಾರಿಗಳ ತಪಾಸಣೆಯನ್ನು ನಿಯಮಿತವಾಗಿ ನಡೆಸುವುದು. ಅರ್ಜಿದಾರರಿಂದ ಸ್ವೀಕರಿಸಿದ ದೂರುಗಳನ್ನು ಮತ್ತು ಕುಂದುಕೊರತೆಗಳನ್ನು ನಿವಾರಣೆ ಮಾಡಲು ಕ್ರಮಜರುಗಿಸುವುದು.

9. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಿಯಮಿತವಾಗಿ ನಡೆಸುವುದು

10. ಎಂಐಎಸ್‌ನ್ನು ಶೇಕಡಾ 100 ರಷ್ಟು ನಿರ್ವಹಣೆ ಮಾಡುವುದು.

11. ಕಾರ್ಯಕ್ರಮ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಿರ್ವಹಿಸುವ ಪ್ರಕ್ರಿಯೆಗಳಲ್ಲಿ ಹಾಗೂ ಅನುಷ್ಠಾನ ಏಜೆನ್ಸಿಗಳು ನಿರ್ವಹಿಸುವ ಪ್ರಕ್ರಿಯೆಗಳಲ್ಲಿ ಸಹಕಾರವನ್ನು ಮತ್ತು ಸಮನ್ವಯತೆನ್ನು ನೀಡಿ ಉದ್ಯೋಗಕ್ಕಾಗಿ ಬೇಡಿಕೆ ಸಲ್ಲಿಸಿದ ಎಲ್ಲಾ ಅರ್ಜಿದಾರರಿಗೆ ಉದ್ಯೋಗವನ್ನು ಒದಗಿಸಲು ಖಚಿತಪಡಿಸಿಕೊಳ್ಳುವುದು.

**III. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಪ್ರಕರಣ ೧೫ರ ಪ್ರಕಾರ ಯೋಜನೆಯ ಅನುಷ್ಠಾನದಲ್ಲಿ ತಾಲ್ಲೂಕು ಮಟ್ಟದಲ್ಲಿ ನಿರ್ವಹಿಸಬೇಕಾದ ಕಾರ್ಯಕ್ರಮ ಅಧಿಕಾರಿಯವರ ಕರ್ತವ್ಯಗಳು**

1. ತಾಲ್ಲೂಕಿನಲ್ಲಿ ಅನುಷ್ಠಾನವಾಗುತ್ತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಪೂರ್ಣ ಜವಾಬ್ದಾರಿಯಾಗಿರುತ್ತಾರೆ.

2. ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ಮತ್ತು ತಾಲ್ಲೂಕು ಪಂಚಾಯಿತಿಯಿಂದ ಸ್ವೀಕರಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕ್ರೋಡೀಕರಿಸಿ ತಯಾರಿಸಿದ ತಾಲ್ಲೂಕು ಯೋಜನೆಯನ್ನು ತಾಲ್ಲೂಕು ಪಂಚಾಯಿತಿಗೆ ಸಲ್ಲಿಸುವುದು.

3. ತಾಲ್ಲೂಕು ಮಟ್ಟದಲ್ಲಿ ಉದ್ಯೋಗಕ್ಕಾಗಿ ಬೇಡಿಕೆಗಳು ಬಂದಿರುವ ಮಾಹಿತಿಯನ್ನು ಉದ್ಯೋಗಾವಕಾಶಗಳನ್ನು ಸೃಜಿಸಿದ ಮಾಹಿತಿಗೆ ಹೊಂದಾಣಿಕೆ ಮಾಡುವುದು.

4. ಯೋಜನೆಯ ಅನುಷ್ಠಾನವನ್ನು ಸಂಪೂರ್ಣವಾಗಿ ಉಸ್ತುವಾರಿ ಮತ್ತು ಪರಿವೀಕ್ಷಣೆ ಮಾಡುವುದು.

5. ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಗ್ರಾಮಪಂಚಾಯಿತಿಗಳ ಗ್ರಾಮಸಭೆಗಳಿಂದ ನಡೆಸುವುದನ್ನು ಖಚಿತ ಪಡಿಸಿಕೊಳ್ಳುವುದು ಮತ್ತು ಹಿಂಬಾಲಿಕೆ ಕ್ರಮವನ್ನುವಹಿಸುವುದು.

6. ಕೂಲಿಕಾರರ ಕೂಲಿ ವೇತನವನ್ನು ಸಕಾಲದಲ್ಲಿ ಮತ್ತು ನ್ಯಾಯಯುತವಾಗಿ ಪಾವತಿಸುವುದನ್ನು ಖಚಿತ ಪಡಿಸಿಕೊಳ್ಳುವುದು.

7. ಉದ್ಯೋಗವನ್ನು ನಿಗದಿಪಡಿಸಿದ ಅವಧಿಯಲ್ಲಿ ನೀಡದಿದ್ದಲ್ಲಿ ಅರ್ಹ ಕುಟುಂಬಗಳಿಗೆ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಿ ಪಾವತಿಸುವುದು.

8. ಪ್ರಗತಿಯಲ್ಲಿರುವ ಕಾಮಗಾರಿಗಳ ತಪಾಸಣೆಯನ್ನು ನಿಯಮಿತವಾಗಿ ನಡೆಸುವುದು. ಅರ್ಜಿದಾರರಿಂದ ಸ್ವೀಕರಿಸಿದ ದೂರುಗಳನ್ನು ಮತ್ತು ಕುಂದು ಕೊರತೆಗಲನ್ನು ವಿಚಾರಣೆ ನಡೆಸಿ ಒಂದು ವಾರದೊಳಗೆ ವಿಲೇವಾರಿ ಮಾಡಲು ಕ್ರಮಜರುಗಿಸುವುದು.

9. ಎಂಐಎಸ್‌ನ್ನು ಶೇಕಡಾ ೧೦೦ ರಷ್ಟು ನಿರ್ವಹಣೆ ಮಾಡುವುದು.

10. ತಾಲ್ಲೂಕಿನಲ್ಲಿ ಗ್ರಾಮ ಪಂಚಾಯಿತಿಗಳು ಕೈಗೊಂಡಿರುವ ಕಾಮಗಾರಿಗಳು ಮತ್ತು ಇತರೆ ಅನುಷ್ಠಾನ ಏಜೆನ್ಸಿಗಳು ಕೈಗೊಂಡಿರುವ ಕಾಮಗಾರಿಗಳ ಅನುಷ್ಠಾನವನ್ನು ಉಸ್ತುವಾರಿ ಮಾಡುವುದು.

ಮೇಲೆ ಹೇಳಿರುವ ಎಲ್ಲಾ ಅಂಶಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಗಳು ಮತ್ತು ಇತರೆ ಅನುಷ್ಠಾನ ಇಲಾಖೆಗಳಾದ ತೋಟಗಾರಿಕೆ ಮತ್ತು ಅರಣ್ಯ ಅನುಷ್ಠಾನಾಧಿಕಾರಿಗಳು ತಮಗೆ ವಹಿಸಲಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡತಕ್ಕದ್ದು.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ
   ಜಿಲ್ಲಾ ಪಂಚಾಯಿತಿ
   ಬಾಗಲಕೋಟೆ / ಬೆಳಗಾಂ/ ಚಿತ್ರದುರ್ಗ/ ಧಾರವಾಡ/ ಹಾಸನ/ ತುಮಕೂರು/ ಉತ್ತರ ಕನ್ನಡ/ ರಾಯಚೂರು
   ಮಂಡ್ಯ/ ಕೊಪ್ಪಳ/ ಗುಲ್ಬರ್ಗಾ/ ಹಾವೇರಿ/ ಗದಗ
2. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ
   ಜಿಲ್ಲಾ ಪಂಚಾಯಿತಿ,
   ಬಾಗಲಕೋಟೆ / ಬೆಳಗಾಂ/ ಚಿತ್ರದುರ್ಗ/ ಧಾರವಾಡ/ ಹಾಸನ/ ತುಮಕೂರು/ ಉತ್ತರ ಕನ್ನಡ/ ರಾಯಚೂರು
   ಮಂಡ್ಯ/ ಕೊಪ್ಪಳ/ ಗುಲ್ಬರ್ಗಾ/ ಹಾವೇರಿ/ ಗದಗ
3. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ
   ಜಿಲ್ಲಾ ಪಂಚಾಯಿತಿ,
   ಬಾಗಲಕೋಟೆ / ಬೆಳಗಾಂ/ ಚಿತ್ರದುರ್ಗ/ ಧಾರವಾಡ/ ಹಾಸನ/ ತುಮಕೂರು/ ಉತ್ತರ ಕನ್ನಡ/ ರಾಯಚೂರು
   ಮಂಡ್ಯ/ ಕೊಪ್ಪಳ/ ಗುಲ್ಬರ್ಗಾ/ ಹಾವೇರಿ/ ಗದಗ
4. ರಾಜ್ಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು
   ತಾಲ್ಲೂಕು ಪಂಚಾಯಿತಿ,
   ಬಾಗಲಕೋಟೆ / ಬೆಳಗಾಂ/ ಚಿತ್ರದುರ್ಗ/ ಧಾರವಾಡ/ಹಾಸನ/ ತುಮಕೂರು/ ಉತ್ತರ ಕನ್ನಡ/ ರಾಯಚೂರು
   ಮಂಡ್ಯ/ ಕೊಪ್ಪಳ/ ಗುಲ್ಬರ್ಗಾ/ ಹಾವೇರಿ/ ಗದಗ

**ಪ್ರತಿಯನ್ನು: ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ.**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಎಂಜಿಎನ್ಆರ್ಇಜಿಎಸ್) ಅರಣ್ಯ ಇಲಾಖೆ, ಅರಣ್ಯಭವನ ಮಲ್ಲೇಶ್ವರಂ, ಬೆಂಗಳೂರು
4. ನಿರ್ದೇಶಕರು,ತೋಟಗಾರಿಕೆ ಇಲಾಖೆ ಲಾಲ್‌ಬಾಗ್ ರಸ್ತೆ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು

## Fund flow pattern for ZP Level plan




## Fund flow pattern for TP Level plan



**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಗ್ರಾಅಪ :181:ಉಖಾಯೋ:2009 ದಿನಾಂಕ : 12-09-2011

ಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವಾರ್ಷಿಕ ಕ್ರಿಯಾ ಯೋಜನೆಯ ವಿವರಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಇಲಾಖೆಗಳ ಅನುಷ್ಠಾನ ಏಜೆನ್ಸಿಗಳ ಲಾಗಿನ್‌ನಲ್ಲಿ ಆರೋಹಣ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆಯ ಪತ್ರದ ಸಂಖ್ಯೆ ಗ್ರಾಅಪ /181/ಉಖಾಯೋ /2009 ದಿನಾಂಕ 25.07.2011

* * *

ತಮಗೆ ತಿಳಿದಂತೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ತಮ್ಮ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರಾಜ್ಯದ ಹದಿಮೂರು ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾಂ, ಚಿತ್ರದುರ್ಗ, ಧಾರವಾಡ, ಹಾಸನ, ತುಮಕೂರು, ಉತ್ತರ ಕನ್ನಡ, ರಾಯಚೂರು, ಮಂಡ್ಯ ಕೊಪ್ಪಳ, ಗುಲ್ಬರ್ಗ, ಹಾವೇರಿ ಮತ್ತು ಗದಗ ಇವುಗಳನ್ನು ಅನುಷ್ಠಾನ ಸಂಸ್ಥೆಗಳನ್ನಾಗಿ ಪರಿಗಣಿಸಿ ಸರ್ಕಾರವು ಆದೇಶವನ್ನು ವಿವಿಧ ದಿನಾಂಕಗಳಲ್ಲಿ ಹೊರಡಿಸಿ ತಿಳಿಸಲಾಗಿರುತ್ತದೆ. ಇದರ ಸಂಬಂಧ ಗುರುತಿಸಲಾದ ಅನುಷ್ಠಾನ ಏಜೆನ್ಸಿಗಳು ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಉಲ್ಲೇಖಿತ ಪತ್ರದಲ್ಲಿ ವಿಶಾದವಾಗಿ ತಿಳಿಸಲಾರುತ್ತದೆ. ಸದರಿ ವಿಷಯದ ಸಂಬಂಧ ದಿನಾಂಕ 09.09.2011 ರಂದು ಅರಣ್ಯ ಇಲಾಖೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (CCF(MGNREGA) ಅರಣ್ಯ ಇಲಾಖೆಯ ಕಾಮಗಾರಿಗಳು ಋತುಮಾನಾಧಾರಿತ ಕಾಮಗಾರಿಗಳಾಗಿರುವುದರಿಂದ ಹಾಗೂ ಯಾವುದೇ ಅನುದಾನದ ಕೊರತೆ ಇಲ್ಲದೆ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಿ ಪಾವತಿಸಬೇಕಾಗಿರುವುದರಿಂದ ಗ್ರಾಮ ಪಂಚಾಯತ್‌ವಾರು ತಯಾರಿಸಿದ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯಕ್ರಮವೆಂದು ಅಥವಾ ಜಿಲ್ಲಾ ಪಂಚಾಯತಿಯ ಕಾರ್ಯಕ್ರಮವೆಂದು ಪರಿವರ್ತಿಸಿ ಸದರಿ ವಾರ್ಷಿಕ ಕ್ರಿಯಾ ಯೋಜನೆಯ ವಿವರಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಸಂಸ್ಥೆಯ ಲಾಗಿನ್‌ನಲ್ಲಿ ಆರೋಹಣ (UPLOAD) ಮಾಡಲು ಅನುಮತಿ ನೀಡುವ ವಿಷಯವನ್ನು ಹಾಗೂ ಯೋಜನೆಯ ಶೇಕಡ 6ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ ಸ್ವಲ್ಪ ಭಾಗವನ್ನು ಉಪಯೋಗಿಸಿಕೊಳ್ಳಲು ಅನುಷ್ಠಾನ ಸಂಸ್ಥೆಗಳಿಗೆ ನೀಡುವಂತೆ ನಿರ್ದೇಶಕರು (MGNREGA) ಇವರೊಂದಿಗೆ ಸುಧೀರ್ಘವಾಗಿ ಚರ್ಚೆ ಮಾಡಿರುತ್ತಾರೆ. ಸದರಿ ವಿಷಯದ ಸಂಬಂಧ ಅನುಮತಿ ನೀಡುವ ವಿಚಾರವನ್ನು ಕೂಲಂಕುಶವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಕ್ರಮವಹಿಸಲು ತಮಗೆ ಈ ಮೂಲಕ ಸೂಚಿಸಿದೆ.

1. ಜಿಲ್ಲಾ ಮಟ್ಟದಲ್ಲಿರುವ ಅರಣ್ಯ ಇಲಾಖೆಯ ಉಪ -ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ) ಜಿಲ್ಲಾ ಪಂಚಾಯತ್ ಇವರ ಕೋರಿಕೆಯ ಮೇರೆಗೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತ್ ವಾರ್ಷಿಕ

ಕ್ರಿಯಾ ಯೋಜನೆಗಳನ್ನು ಸಂದರ್ಭಕ್ಕೆ ಅನುಸಾರವಾಗಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮಕ್ಕೆ ಅಥವಾ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಕ್ಕೆ ಪರಿವರ್ತಿಸಿ ಸದರಿ ವಾರ್ಷಿಕ ಕ್ರಿಯಾ ಯೋಜನೆಯ ವಿವರಗಳನ್ನು ಜಿಲ್ಲಾ ಮಟ್ಟದಲ್ಲಿ ಸಂಬಂಧಿಸಿದ ಅನುಷ್ಠಾನ ಸಂಸ್ಥೆಯ ಲಾಗಿನ್‌ನಲ್ಲಿ ದಾಖಲಿಸಲು ಅನುಮತಿ ನೀಡಿದೆ.

2. ಯೋಜನೆಯ ಶೇಕಡ 6ರಷ್ಟಿನ ಆಡಳಿತಾತ್ಮಕ ವೆಚ್ಚದಲ್ಲಿ, ಶೇಕಡ 2 ರ ಮಿತಿಗೊಳಪಟ್ಟು, ಗುರುತಿಲಾದ ಅನುಷ್ಠಾನ ಸಂಸ್ಥೆಗಳು ಲೇಖನ ಮತ್ತು ಸಾಮಾಗ್ರಿಗಳು ಇತ್ಯಾದಿ ಇವುಗಳಿಗಾಗಿ : ರಾಜ್ಯಮಟ್ಟದಲ್ಲಿ ಸಾಮಾಜಿಕ ಲೆಕ್ಕಪರಿಶೋಧನೆಯ ನಿರ್ದೇಶನಾಲಯ ಸ್ಥಾಪಿಸುವವರೆಗೂ ಹಾಗೂ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯ ಕೋಶಗಳನ್ನು ಸ್ಥಾಪಿಸುವವರೆಗೂ ಪ್ರಾರಂಭಿಕವಾಗಿ ಮುಂದಿನ ಆದೇಶ ಹೊರಡಿಸುವರೆಗೂ ಬಳಸಿಕೊಳ್ಳಲು ಅನುಮತಿ ನೀಡಿದೆ.

3. ಯೋಜನೆಯ ಆಡಳಿತಾತ್ಮಕ ವೆಚ್ಚವನ್ನು ಯಾವ ಯಾವ ಬಾಬ್ತುಗಳಿಗೆ ಬಳಸಿಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ ಮತ್ತು ಅದರಂತೆ ಕ್ರಮವಹಿಸುವುದು.

4. ಅನುಷ್ಠಾನ ಸಂಸ್ಥೆಗಳು ಅನುದಾನ ನಿರ್ವಹಣೆಯ ಬಗ್ಗೆ ಹಾಗೂ ಅವರುಗಳು ಯೋಜನೆಯ ಅನುಷ್ಠಾನದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಉಲ್ಲೇಖದಲ್ಲಿ ಸರ್ಕಾರವು ಹೊರಡಿಸಿರುವ ಸುತ್ತೋಲೆಯ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ

**(ಪಿ.ಶಿವಶಂಕರ)**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

1 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡಿ, ಬೆಂಗಳೂರು.

2 ಸರ್ಕಾರದ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡಿ, ಬೆಂಗಳೂರು.

3 ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (MGNREGA) ಅರಣ್ಯ ಇಲಾಖೆ, ಅರಣ್ಯಭವ ನ ಮಲ್ಲೇಶ್ವರಂ, ಬೆಂಗಳೂರು.

4 ನಿರ್ದೇಶಕರು, ತೋಟಗಾರಿಕೆ ಇಲಾಖೆ ಲಾಲ್‌ಬಾಗ್ ರಸ್ತೆ, ಬೆಂಗಳೂರು.

5 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ. ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿಗಳ ಕಟ್ಟಡಿ, ಬೆಂಗಳೂರು.

## ಕರ್ನಾಟಕ ಸರ್ಕಾರ ನಡವಳಿಗಳು

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಲಾನಯನ ಇಲಾಖೆಯನ್ನು ಪ್ರಾಯೋಗಿಕವಾಗಿ ರಾಜ್ಯದ ಗುಲ್ಬರ್ಗಾ, ಯಾದಗಿರಿ ಬೀದರ್, ದಾವಣಗೆರೆ, ಕೊಪ್ಪಳ, ಗದಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸುವ ಕುರಿತು.

ಓದಲಾಗಿದೆ ಆಯುಕ್ತರು, ಜಲಾನಯನ ಅಭಿವೃದ್ಧಿ ಇವರ ಪತ್ರದ ಸಂಖ್ಯೆ : ಜ ಅಇ / ಕಾನಿ - ಸುಜಲ III/ಅ.ಸಂ/2011-12 ದಿನಾಂಕ 25-05-2011

* * *

## ಪ್ರಸ್ತಾವನೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಾದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಚಟುವಟಿಕೆಗಳನ್ನು ಕೂಡ ಕಾರ್ಯಗತಗೊಳಿಸಲಾಗುತ್ತಿದ್ದು, ಸದರಿ ಚಟುವಟಿಕೆಗಳ ಅನುಷ್ಠಾನವನ್ನು ಸಂಬಂಧಪಟ್ಟ ಇಲಾಖಾ ಅನುಷ್ಠಾನ ಅಧಿಕಾರಿಗಳೇ ನಿರ್ವಹಿಸಲು ಕ್ರಮಕೈಗೊಳ್ಳಲಾಗಿದೆ. ಇಲಾಖೆಯ ಚಟುವಟಿಕೆಗಳನ್ನು ಯೋಜನೆಯಡಿ ಇಲಾಖೆಯು ಸ್ವತಂತ್ರವಾಗಿ ನಿರ್ವಹಿಸಲು ಈಗಾಗಲೇ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಗಳನ್ನು ರಾಜ್ಯದ 13 ಜಿಲ್ಲೆಗಳಲ್ಲಿ ಅನುಷ್ಠಾನ ಸಂಸ್ಥೆಗಳೆಂದು ಗುರುತಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಆಯುಕ್ತರು ಜಲಾನಯನ ಇಲಾಖೆಯವರು ಉಲ್ಲೇಖಿತ ಪತ್ರದಲ್ಲಿ ಇಲಾಖೆಯ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದ ಹಣದ ಪಾವತಿಯನ್ನು ಗ್ರಾಮ ಪಂಚಾಯಿತಿಗಳ ಮೂಲಕವೇ ಮಾಡಲಾಗುತ್ತಿದ್ದು, ಯೋಜನೆಯ ಅನುಷ್ಠಾನದಲ್ಲಿ ತೊಂದರೆಯಾಗುತ್ತಿದೆಯೆಂದು ಸರ್ಕಾರಕ್ಕೆ ವರದಿ ಮಾಡಿ ಜಲಾನಯನ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯೆಂದು ಪರಿಗಣಿಸಿ ಮಾರ್ಗಸೂಚಿಗಳನ್ವಯ ಸೂಕ್ತ ಅವಕಾಶವನ್ನು ಕಲ್ಪಿಸಿದಲ್ಲಿ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದರ ಸಂಬಂಧ ಸೂಕ್ತವಾದ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರವನ್ನು ವಿನಂತಿಸಿರುತ್ತಾರೆ. ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಜಲಾನಯನ ಇಲಾಖೆಯ ಕಾಮಗಾರಿಗಳ ಚಟುವಟಿಕೆಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವತಂತ್ರವಾಗಿ ನಿರ್ವಹಿಸಿ ಅನುಷ್ಠಾನಗೊಳಿಸುವುದು ಅಗತ್ಯತೆ ಇರುವುದರಿಂದ ಸದರಿ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸಿ ಆದೇಶವನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ

### ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 167ಉಖಾಯೋ 2010 ಬೆಂಗಳೂರು ದಿನಾಂಕ :14.09.2011

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಹಾಗೂ ಇರುವ ಅಂಶಗಳನ್ನು ಪರಿಗಣಿಸಿ ಪಂಚಾಯತ್ ರಾಜ್ ಸಂಸ್ಥೆಗಳು ಸೇರಿದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ರಾಜ್ಯದ ಗುಲ್ಬರ್ಗಾ, ಯಾದಗಿರಿ, ಬೀದರ್, ದಾವಣಗೆರೆ, ಕೊಪ್ಪಳ, ಗದಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಲಾನಯನ ಇಲಾಖೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನ ಸಂಸ್ಥೆಯೆಂದು ಪರಿಗಣಿಸಿ ಸದರಿ ಇಲಾಖೆಗೆ ನಿಗದಿಪಡಿಸಿದ ಎಲ್ಲಾ ಕಾಮಗಾರಿಗಳ ಅನುಷ್ಠಾನ ಕಾರ್ಯವನ್ನು ಮಾರ್ಗ ಸೂಚಿಗಳನ್ವಯ ಹಾಗೂ ಈ ಕೆಳಕಂಡ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

| ಕ್ರಮ ಸಂ. | ಜಿಲ್ಲೆಯ ಹೆಸರು | ಅನುಷ್ಠಾನ ಸಂಸ್ಥೆ | ಅನುಷ್ಠಾನ ಅಧಿಕಾರಿ ಜಿಲ್ಲೆಯ ಹೆಸರು |
|---|---|---|---|
| 1 | ಗುಲ್ಬರ್ಗಾ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಗುಲ್ಬರ್ಗಾ |
| 2 | ಯಾದಗಿರಿ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಯಾದಗಿರಿ |
| 3 | ಬೀದರ್ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಬೀದರ್ |
| 4 | ದಾವಣಗೆರೆ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ದಾವಣಗೆರೆ |
| 5 | ಕೊಪ್ಪಳ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಕೊಪ್ಪಳ |
| 6 | ಗದಗ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಗದಗ |
| 7 | ಚಾಮರಾಜನಗರ | ಜಲಾನಯನ ಇಲಾಖೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಿಲ್ಲಾ ಪಂಚಾಯಿತಿ ಚಾಮರಾಜನಗರ |

1. ಅನುಷ್ಠಾನ ಸಂಸ್ಥೆಗಳು ಯೋಜನೆಯಡಿ ತಮ್ಮ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳನ್ನು ಯೋಜನೆಯ ಮಾರ್ಗಸೂಚಿಗಳನ್ವಯ ಸಂಬಂಧಪಟ್ಟ ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿ ಗ್ರಾಮ ಸಭೆಗಳ ಶಿಫಾರಸ್ಸಿನೊಂದಿಗೆ ನಿಯಮಾನುಸಾರ ಸೂಕ್ತ ಅನುಮೋದನೆ ಪಡೆದು ಕಾಮಗಾರಿ ಗುಚ್ಚದಲ್ಲಿ ಸೇರಿಸತಕ್ಕದ್ದು.
2. ಜಲಾನಯನ ಇಲಾಖೆಯ ಕಾಮಗಾರಿಗಳನ್ನು ಗ್ರಾಮ ಪಂಚಾಯತಿಯವರು ಕೈಗೆತ್ತಿಕೊಂಡಿದ್ದರೆ ಗ್ರಾಮ ಸಭೆಯ ಮೂಲಕ ಗ್ರಾಮ ಪಂಚಾಯಿತಿಯಿಂದ ಕ್ರಿಯಾ ಯೋಜನೆಯನ್ನು ಅನುಮೋದಿಸತಕ್ಕದ್ದು. ಇದೇ ರೀತಿ ತಾಲ್ಲೂಕು ಪಂಚಾಯಿತಿ ಮೂಲಕ ಗ್ರಾಮ ಪಂಚಾಯಿತಿಯಿಂದ / ಜಿಲ್ಲಾ ಪಂಚಾಯಿತಿಯವರು ಅನುಮೋದನೆ ನೀಡತಕ್ಕದ್ದು.
3. ಸದರಿ ಅನುಮೋದಿತ ಕಾಮಗಾರಿಗಳ ಸಂಬಂಧ ಯೋಜನೆಯಡಿ ನೀಡಲಾಗಿರುವ ಅಧಿಕಾರಗಳನ್ವಯ ಕಾಮಗಾರಿ ಅಂದಾಜು ಪಟ್ಟಿಗಳನ್ನು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದಿರತಕ್ಕದ್ದು.
4. ಯೋಜನೆಯಡಿ ಸಲ್ಲಿಸಲಾಗುವ ಉದ್ಯೋಗ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ / ಪಂಚಾಯತ್ ಕಾರ್ಯದರ್ಶಿ ಇವರು ಸದರಿ ಇಲಾಖೆಯ ಅನುಮೋದಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾಮಗಾರಿಗಳನ್ನು ಹಂಚಿಕೆ ಮಾಡಿ ಅದಕ್ಕೆ ಅಗತ್ಯವಾಗಿ ಬೇಕಾಗಿರುವ ಎನ್‌ಎಂಆರ್‌ಗಳನ್ನು ಎಂಐಎಸ್ ಮೂಲಕ ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ವಿತರಿಸುವುದು.
5. ಅನುಷ್ಠಾನ ಸಂಸ್ಥೆಗಳಿಗೆ ಯೋಜನೆ ಅನುಷ್ಠಾನದಲ್ಲಿರುವ ಎಲ್ಲ ಪ್ರಕ್ರಿಯೆಗಳನ್ನು ಎಂಐಎಸ್‌ನಲ್ಲಿ ಅಳವಡಿಸಲು ಒಂದು ಪ್ರತ್ಯೇಕ ಲಾಗಿನ್ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಲಾಗಿನ್ ಬಳಕೆ ಮಾಡಿಕೊಂಡು ಅನುಷ್ಠಾನ ಸಂಸ್ಥೆಗಳು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಂಚಾಯತ್ ಕಾರ್ಯದರ್ಶಿ ಇವರು ವಿತರಿಸಿರುವ ಎನ್‌ಎಂ ಆರ್‌ಗಳನ್ನು ಪಡೆಯಬಹುದಾಗಿದೆ.
6. ಎಂಐಎಸ್‌ನಿಂದ ಪಡೆದ ಎನ್‌ಎಂಆರ್‌ಗಳನ್ನು ಕಾಮಗಾರಿ ನಿರ್ವಹಣೆಯಲ್ಲಿ ಬಳಸಿದ ನಂತರ ಸದರಿ ಮಾಹಿತಿಯನ್ನು ಎಂಐಎಸ್‌ನಲ್ಲಿ ಭರ್ತಿ ಮಾಡಲು ನಂತರ ಕೂಲಿ ಪಾವತಿಗಾಗಿ Wage list ಮುದ್ರಿಸಲು ಹಾಗೂ ಕೂಲಿ ಪಾವತಿ ಮಾಡುವ ಸಂಪೂರ್ಣ ಜವಾಬ್ದಾರಿ ಅನುಷ್ಠಾನ ಸಂಸ್ಥೆಯದಾಗಿರುತ್ತದೆ.
7. ಸದರಿ ಕಾಮಗಾರಿಗೆ ಅನುಮೋದಿತ ಅಂದಾಜು ಪಟ್ಟಿಯಂತೆ ಅಗತ್ಯವಾಗಿ ಬೇಕಾಗಿರುವ ಸಾಮಾಗ್ರಿಯನ್ನು ಕೇಂದ್ರ ಸರ್ಕಾರದ

ಮಾರ್ಗಸೂಚಿಗಳನ್ವಯ ಖರೀದಿ ಮಾಡಿ ಕಾಮಗಾರಿಯಲ್ಲಿ ಬಳಸಲು ಮತ್ತು ಪೂರ್ಣ ಸಾಮಾಗ್ರಿ ವಿವರಗಳನ್ನು ಹಾಗೂ ಪಾವತಿ ವಿವರಗಳನ್ನು ಕಡ್ಡಾಯವಾಗಿ ಎಂಐಎಸ್‌ನಲ್ಲಿ ದಾಖಲಿಸುವುದು ಅನುಷ್ಠಾನ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ.

8. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಹಣ ಪಾವತಿಗೆ ಮುನ್ನ ನಿಯಮಾನುಸಾರ ಅನುಮೋದಿತ ಅಂದಾಜು ಪಟ್ಟಿಯನ್ವಯ ಹಾಗೂ ಕಾಮಗಾರಿ ನಿರ್ವಹಣೆ ಅನುಸಾರ ಅಳತೆ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಧೃಢೀಕರಿಸುವುದರ ಜೊತೆಗೆ ಎಂಐಎಸ್‌ನಲ್ಲಿ ಸದರಿ ಮಾಹಿತಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿರುತ್ತದೆ.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ವಿಕಾಸಸೌಧ, ಬೆಂಗಳೂರು
6. ಪ್ರಾದೇಶಿಕ ಆಯುಕ್ತರು, ಬೆಳಗಾಂ
7. ಜಿಲ್ಲಾಧಿಕಾರಿ ಧಾರವಾಡ,
8. ಮುಖ್ಯ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು
9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರು
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
11. ಮುಖ್ಯಸ್ಥರು (ಹಣಕಾಸು ಮತ್ತು ಲೆಕ್ಕಪತ್ರ), ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು
12. ಸದರಿ ಪ್ರತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಭಾಗದ ವೆಬ್‌ಸೈಟ್‌ಗೆ ಅಳವಡಿಸುವಂತೆ ಮುಂದಿನ ಕ್ರಮಕ್ಕಾಗಿ
13. ಹೆಚ್ಚಿನ ಪ್ರತಿಗಳು/ ರಕ್ಷಾ ಕಡತ

# ಸಾಮಾಜಿಕ ಲೆಕ್ಕ ಪರಿಶೋಧನೆ

ಅನಸಾ ರಂಗ್ರಸಂಸ್ಥೆ

## ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ:೫೩: ಉಖಾಯೋ: ೨೦೦೮

ಕರ್ನಾಟಕ ಸರ್ಕಾರದ ಸಚಿವಾಲಯ
ಸಚಿವಾಲಯ-೨, ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: ೧೨.೬.೨೦೦೮

ಇಂದ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

ಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ಬೀದರ್/ಚಿತ್ರದುರ್ಗ/ಶಿವಮೊಗ್ಗ/ಚಿಕ್ಕಮಗಳೂರು

ಮಾನ್ಯರೆ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಪರಿಶೋಧನೆಯನ್ನು ಸ್ತ್ರೀಶಕ್ತಿ ಒಕ್ಕೂಟಗಳಿಗೆ ವಹಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅರೆ ಸರ್ಕಾರಿ ಪತ್ರದ ಸಂಖ್ಯೆ ಮ ಮ ಇ ೧೧೬ ಮಮಾ ೨೦೦೮ ದಿನಾಂಕ ೦೯-೦೪-೨೦೦೮.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ, ಅಧಿನಿಯಮದಲ್ಲಿ ಬರುವ ಎಲ್ಲಾ ಪ್ರಕ್ರಿಯೆಗಳನ್ನು ಕಾರ್ಯಗತಗೊಳಿಸಬೇಕಾಗಿದೆ. ಈ ರೀತಿ, ಕಾರ್ಯಗತಗೊಂಡ ಎಲ್ಲಾ ಪ್ರಕ್ರಿಯೆಗಳಿಗೆ ಸಾಮಾಜಿಕ ಪರಿಶೋಧನೆಯನ್ನು ನಡೆಸುವುದು ಕಡ್ಡಾಯ. ಜನಗಳ ಮುಂದೆ, ಎಲ್ಲಾ ದಾಖಲಾತಿಗಳನ್ನು ಬಹಿರಂಗಪಡಿಸಿ, ಪಾರದರ್ಶಕತೆ ಮೂಡಿಸುವುದು ಮುಖ್ಯವಾದ ಕರ್ತವ್ಯ. ಅಧಿನಿಯಮದಲ್ಲಿ ಸಾಮಾಜಿಕ ಪರಿಶೋಧನೆ ನಡೆಸುವ ಕಾರ್ಯಕ್ಕೆ ಸ್ವಯಂಸೇವಾ ಸಂಸ್ಥೆಗಳನ್ನು ಮತ್ತು ಸರ್ಕಾರೇತರ ಸಂಸ್ಥೆಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿ ಕೊಟ್ಟಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು ಮಹಿಳಾ ಮತ್ತು ಅಭಿವೃದ್ಧಿ ಇಲಾಖೆಯವರು ರಾಜ್ಯದಲ್ಲಿ ೧,೪೦,೦೦೦ ಸ್ತ್ರೀಶಕ್ತಿ ಗುಂಪುಗಳಿದ್ದು, ಅಂತಹ ಗುಂಪುಗಳನ್ನು ಗೊಂಚಲುಗಳನ್ನಾಗಿ ಮಾಡಿ ತಾಲ್ಲೂಕು ಮಟ್ಟದಲ್ಲಿ ಒಕ್ಕೂಟಗಳನ್ನಾಗಿ ರಚಿಸಲಾಗಿದೆಯೆಂದು ತಿಳಿಸಿ, ಒಕ್ಕೂಟಗಳಿಂದ ತಾಲ್ಲೂಕಿನಲ್ಲಿರುವ ಗುಂಪುಗಳ ಉಸ್ತುವಾರಿ ಮಾಡುವುದು ಮತ್ತು ಮಾರ್ಗದರ್ಶನ ನೀಡುವುದು ಹಾಗೂ ತಮ್ಮ ಜೀವನ ಮಟ್ಟದ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮತ್ತು ಆರ್ಥಿಕ ಸಬಲತೆಯನ್ನು ಪಡೆಯಲು, ಮಾರ್ಗದರ್ಶನ ನೀಡಲಾಗುತ್ತಿದೆ ಎಂದು ವರದಿ ಮಾಡಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಎಲ್ಲಾ ಹಂತಗಳಲ್ಲಿ

ಸಾಮಾಜಿಕ ಪರಿಶೋಧನೆಯನ್ನು ಮಾಡಲು ಸ್ತ್ರೀಶಕ್ತಿ ಒಕ್ಕೂಟಗಳನ್ನು ತೊಡಗಿಸಿಕೊಳ್ಳುವಂತೆ ತಿಳಿಸಿರುತ್ತದೆ. ಈಗ ಪ್ರಾರಂಭದಲ್ಲಿ ಪ್ರಾಯೋಗಿಕವಾಗಿ ಸಾಮಾಜಿಕ ಪರಿಶೋಧನೆಯನ್ನು ಈ ಕೆಳಕಂಡ ೪ ಜಿಲ್ಲೆಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿರುವ ಸ್ತ್ರೀಶಕ್ತಿ ಒಕ್ಕೂಟಗಳನ್ನು ಗುರುತಿಸಿ, ಅವುಗಳ ವಿವರಗಳನ್ನು ಸರ್ಕಾರಕ್ಕೆ ಒಂದು ವಾರದೊಳಗೆ ಸಲ್ಲಿಸಲು ಈ ಮೂಲಕ

ಸೂಚಿಸಿದೆ. ವಿವರಗಳು ಬಂದ ನಂತರ, ಅಂತಹ ಒಕ್ಕೂಟಗಳ ಸದಸ್ಯರುಗಳಿಗೆ ANSSIRD ಮೈಸೂರು ಇವರ ಮುಖೇನ ತರಬೇತಿ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಲಾಗುವುದು, ಜರೂರಾಗಿ ಕೋರಲಾದ ಮಾಹಿತಿಯನ್ನು, ನಿಗಧಿತ ವೇಳೆಯಲ್ಲಿ ಸಲ್ಲಿಸಲು ಸೂಚಿಸಿದೆ.

| **ಕ್ರ. ಸಂ.** | **ಜಿಲ್ಲೆಯ ಹೆಸರು** | **ಪ್ರಾಯೋಗಿಕವಾಗಿ ಆಯ್ಕೆ ಮಾಡಲಾದ ತಾಲ್ಲೂಕಿನ ಹೆಸರು** |
|---|---|---|
| ೧ | ಬೀದರ್ | ಭಾಲ್ಕಿ |
| ೨ | ಚಿತ್ರದುರ್ಗ | ಹಿರಿಯೂರು |
| ೩ | ಶಿವಮೊಗ್ಗ | ತೀರ್ಥಹಳ್ಳಿ |
| ೪ | ಚಿಕ್ಕಮಗಳೂರು | ಕಡೂರು |

ತಮ್ಮ ವಿಶ್ವಾಸಿ,
ಸಹಿ/–
**(ಸಿ. ಎಂ. ಶಿರೋಳ್)**
ನಿರ್ದೇಶಕರು
ಯೋಜನೆ, ಸಮನ್ವಯ ಮತ್ತು ಮೇಲ್ವಿಚಾರಣಾ ಘಟಕ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಅಪರ ಸಹಾಯಕರಿಗೆ.

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

ಸಂಖ್ಯೆ : ಗ್ರಾಅಪ : 195 : ಉಖಾಯೋ : 2010 ದಿನಾಂಕ : 19-09-2011

ಇವರಿಗೆ.

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

ಮಾನ್ಯರೇ,

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ/ ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಯೋಜಕರುಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ: 1) ಈ ನಿರ್ದೇಶನಾಲಯದ ಪತ್ರ ಸಂ ಗ್ರಾಅಪ /195/ ಉಖಾಯೋ 2010 ದಿನಾಂಕ 27.05.2011
2) ಈ ನಿರ್ದೇಶನಾಲಯದ ಪತ್ರ ಸಂ ಗ್ರಾಅಪ 19/ ಉಖಾಯೋ / 2011 ದಿನಾಂಕ 16.06.2011

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರಗಳಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ / ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಯೋಜಕರುಗಳ ಕೆಲಸ ಕಾರ್ಯಗಳ ಮೇಲುಸ್ತುವಾರಿ ಮಾಡಲು, ಸಂಯೋಜಕರುಗಳ ದಿನಚರಿಗಳನ್ನು ಅನುಬಂಧಗಳನ್ನು ಪರಾಮರ್ಶೆ ಮಾಡಲು, ಮಾಸಿಕ ಗೌರವ ಸಂಭಾವನೆ ಹಾಗೂ ಭತ್ಯೆಗಳನ್ನು ನಿಯಮಾನುಸಾರ ಪಾವತಿಸಲು ತಾತ್ಕಾಲಿಕ ವ್ಯವಸ್ಥೆಯಾಗಿ ಆಗಸ್ಟ್ 2011ರ ವರೆಗೆ ನಿರ್ವಹಿಸಲು ತಮಗೆ ನಿರ್ದೇಶನ ನೀಡಲಾಗಿತ್ತು.

ಸಾಮಾಜಿಕ ಪರಿಶೋಧನಾ ಕಾರ್ಯಕ್ರಮದ ಪರ್ಯಾಯ ಸಾಂಸ್ಥಿಕ ವ್ಯವಸ್ಥೆ ರೂಪುರೇಷೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಪರ್ಯಾಯ ವ್ಯವಸ್ಥೆಯು ಪರಿಪೂರ್ಣಗೊಳ್ಳುವವರೆಗೆ ಅಂದರೆ ಮುಂದಿನ ಆದೇಶದವರೆಗೆ ಉಲ್ಲೇಖ ಪತ್ರದಲ್ಲಿನ ಆದೇಶಗಳು ಮುಂದುವರಿಯುವ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಹಾಗೂ ತಾಲ್ಲೂಕು ಸಾಮಾಜಿಕ ಪರಿಶೋಧನಾ ಸಂಯೋಜಕರುಗಳ ಸೇವೆಯನ್ನು ಮುಂದುವರಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

**ನಿರ್ದೇಶಕರು**
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ:19–ಉಖಾಯೋ–2011

ಮ.ಗಾಂ.ರಾ.ಗ್ರಾ.ಉ.ಖಾ.ಯೋ. ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ
ಬೆಂಗಳೂರು–560 001, ದಿನಾಂಕ:16–06–2011

ಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯಿತಿ,
ದ.ಕನ್ನಡ/ಮೈಸೂರು/ಮಂಡ್ಯ/ತುಮಕೂರು/ಉ.ಕನ್ನಡ/ಹಾವೇರಿ
ಹಾಸನ/ಬೆಂಗಳೂರು(ಗ್ರಾಂ)/ಬೆಂಗಳೂರುನಗರ/ಬೆಳಗಾಂ/ಉಡುಪಿ
ದಾವಣಗೆರೆ/ಧಾರವಾಡ/ಬಳ್ಳಾರಿ/ಚಿತ್ರದುರ್ಗ/ಚಿಕ್ಕಮಗಳೂರು/ಬೀದರ್
ಯಾದಗಿರಿ/ಕೊಪ್ಪಳ/ಕೊಡಗು/ಶಿವಮೊಗ್ಗ/ಬಾಗಲಕೋಟೆ/ರಾಯಚೂರು
ವಿಜಾಪುರ/ರಾಮನಗರ ಜಿಲ್ಲೆಗಳು.

ಮಾನ್ಯರೇ,

ವಿಷಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲಾ ಮತ್ತು ತಾಲ್ಲೂಕು ಸಾಮಾಜಿಕ ಪರಿಶೋಧನೆ ಸಂಯೋಜಕರುಗಳ ಗೌರವ ಸಂಭಾವನೆಯನ್ನು ಪಾವತಿಸುವ ಬಗ್ಗೆ.

ಉಲ್ಲೇಖ : 1. ಮಹಾನಿರ್ದೇಶಕರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇವರ ಪತ್ರ ಸಂ:ರಾ.ಗ್ರಾ.ಉ.ಖಾ.ಯೋ.22/2009–10 ದಿ. 23.4.2011.
2. ಈ ನಿರ್ದೇಶನಾಲಯದ ಪತ್ರ ಸಂ: ಗ್ರಾಅಪ/195/ಉಖಾಯೋ/2010 ದಿ. 27–05–2011.

* * *

ಉಲ್ಲೇಖ (2)ರ ಕಛೇರಿಯ ಪತ್ರದತ್ತ ತಮ್ಮ ಗಮನವನ್ನು ಆಹ್ವಾನಿಸಿದೆ. ಪತ್ರದಲ್ಲಿ ತಾತ್ಕಾಲಿಕ ವ್ಯವಸ್ಥೆಯಾಗಿ ಆಗಸ್ಟ್ 2011ರ ಮಾಹೆಯವರೆಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಂಯೋಜಕರುಗಳ ಕೆಲಸ ಕಾರ್ಯಗಳ ಮೇಲು ಉಸ್ತುವಾರಿಯನ್ನು ಮಾಡಲು, ಸಂಯೋಜಕರ ದಿನಚರಿಗಳನ್ನು/ಅನುಬಂಧಗಳನ್ನು ಪರಾಮರ್ಶೆ ಮಾಡಲು, ಮಾಸಿಕ ಗೌರವ ಸಂಭಾವನೆ ಹಾಗೂ ಭತ್ಯೆಗಳನ್ನು ನಿಯಮಾನುಸಾರ ಪಾವತಿಸಲು ಸೂಚನೆಯನ್ನು ನೀಡಲಾಗಿದೆ. ಪತ್ರದ ಮುಂದುವರಿಕೆಯಾಗಿ ಈಗಾಗಲೇ ಈ ಕಛೇರಿಗೆ ಕಳುಹಿಸಿಕೊಟ್ಟಿರುವ ಸಂಯೋಜಕರ ದಿನಚರಿ/ಅನುಬಂಧಗಳನ್ನು ತಮಗೆ ಈ ಮೂಲಕ ಹಿಂದಿರುಗಿಸಿದೆ. ಹಾಗೂ ಬಾಕಿ ಇರುವ/ತಡೆಹಿಡಿದಿರುವ ಗೌರವ ಸಂಭಾವನೆಯನ್ನು ಪಾವತಿಸುವ ಬಗ್ಗೆ ಪರಿಶೀಲಿಸಿ ಮುಂದಿನ ಅವಶ್ಯ ಕ್ರಮಕ್ಕಾಗಿ ಉಲ್ಲೇಖ (1)ರ ಪತ್ರದ ಪ್ರತಿಯನ್ನು ಸಹ ಲಗತ್ತು ಮಾಡಿದೆ.

ತಮ್ಮ ವಿಶ್ವಾಸಿ,

**ಜಂಟಿ ನಿರ್ದೇಶಕರು–3**
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಲಗತ್ತುಗಳು : ಪಟ್ಟಿಯಂತೆ

## ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ54ಉಖಾಯೋ2011

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, 3ನೇ ಹಂತ
ಬೆಂಗಳೂರು, ದಿನಾಂಕ : 14–03–2011

## ಸುತ್ತೋಲೆ

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಅಡಿ ಸಾಮಾಜಿಕ ಲೆಕ್ಕ ಪರಿಶೋಧನೆ ಪರಿಣಾಮಕಾರಿಯಾಗಿ ವ್ಯವಸ್ಥಿಸುವ ಬಗ್ಗೆ ಅಧೀನ ಕಛೇರಿಗಳ ಪರಿವೀಕ್ಷಣೆ ಕೈಗೊಳ್ಳುವ ಬಗ್ಗೆ

ಉಲ್ಲೇಖ : 1. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ:49:ಉಖಾಯೋ:2007 ದಿ:26–6–2007

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2005ರ ಅಧಿನಿಯಮದಲ್ಲಿ ಬರುವ ಎಲ್ಲಾ ಪ್ರಕ್ರಿಯೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಈ ರೀತಿ ಕಾರ್ಯಗತಗೊಂಡ ಎಲ್ಲಾ ಪ್ರಕ್ರಿಯೆಗಳಿಗೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವುದು ಕಡ್ಡಾಯವಾಗಿದೆ. ಜನಗಳ ಮುಂದೆ ಎಲ್ಲಾ ದಾಖಲಾತಿಗಳನ್ನು ಬಹಿರಂಗಪಡಿಸಿ ಪಾರದರ್ಶಕತೆ ಮೂಡಿಸುವುದು ಮುಖ್ಯವಾದ ಉದ್ದೇಶವಾಗಿದೆ. ಅಧಿನಿಯಮದಲ್ಲಿ ಯೋಜನೆ ಅಡಿ ಕಾರ್ಯಗತಗೊಂಡ ಎಲ್ಲಾ ಕಾಮಗಾರಿಗಳ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಿಯತವಾಗಿ ನಡೆಸುವ ಜವಾಬ್ದಾರಿಯನ್ನು ಗ್ರಾಮಸಭೆ ಕೈಗೊಳ್ಳಬೇಕಿದೆ, ಇದರ ಪ್ರಮುಖ ಜವಾಬ್ದಾರಿಯು ಗ್ರಾಮ ಪಂಚಾಯಿತಿ ಮೇಲೆ ಇರುತ್ತದೆ. (ಅಧಿನಿಯಮದ ಪ್ರಕರಣ 17) ಈ ರೀತಿ ಪ್ರತಿ ಗ್ರಾಮ ಪಂಚಾಯಿತಿಯ ಕಾರ್ಯವ್ಯಾಪ್ತಿಯಲ್ಲಿ ಕೈಗೊಂಡ ಎಲ್ಲಾ ಕಾಮಗಾರಿಗಳ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮಸಭೆಗಳು ಕೈಗೊಳ್ಳುವುದನ್ನು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಎತ್ತಿದ ಎಲ್ಲಾ ಆಕ್ಷೇಪಣೆಗಳಿಗೆ ಸಕಾಲಿಕ ಕ್ರಮವಾಗುವಂತೆ ಖಾತರಿ ಪಡಿಸಿಕೊಳ್ಳುವುದು ಕಾರ್ಯಕ್ರಮ ಅಧಿಕಾರಿಯಾದ ತಾಲ್ಲೂಕು ಪಂಚಾಯತ್‌ನ ಕಾರ್ಯನಿವಾಹಕ ಅಧಿಕಾರಿಯ ಕರ್ತವ್ಯವಾಗಿರುತ್ತದೆ. [ಪ್ರಕರಣ 15(5)(ಡಿ)] ತಾಲ್ಲೂಕು ಪಂಚಾಯತ್‌ನ ಕಾರ್ಯನಿವಾಹಕ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯ ವಿಮರ್ಶೆ, ಉಸ್ತುವಾರಿ ಮತ್ತು ಮೇಲ್ವಿಚಾರಣೆ ನಡೆಸುವುದು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗಳಾದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನಿಗಧಿಪಡಿಸಿದ ಕರ್ತವ್ಯವಾಗಿರುತ್ತದೆ. [ಪ್ರಕರಣ 14(3)(ಇ)] ಇದರಂತೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ನಡೆಸುವ ಪೂರ್ಣ ಹೊಣೆಗಾರಿಕೆಯು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿದ್ದಾಗಿರುತ್ತದೆ. ಉಲ್ಲೇಖದಲ್ಲಿನ ಸರ್ಕಾರದ ಸುತ್ತೋಲೆಯಲ್ಲಿ ವಿವಿಧ ಮಟ್ಟದ ಅಧಿಕಾರಿಗಳು ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮತ್ತು ತಪಾಸಣೆ ಮಾಡುವ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಸೂಚನೆಗಳನ್ನು ನೀಡಲಾಗಿದೆ.

2. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯು ಪರಿಣಾಮಕಾರಿಯಾಗಿ ವ್ಯವಸ್ಥಿಸಿರುವ ಬಗ್ಗೆ ಹಾಗೂ ಉಲ್ಲೇಖ–1ರಲ್ಲಿನ ಸರ್ಕಾರದ ಸುತ್ತೋಲೆ ಸೂಚನೆಗಳು ಪಾಲನೆಯಾಗುತ್ತಿರುವ ಬಗ್ಗೆ ರಾಜ್ಯಮಟ್ಟದಿಂದ ಪರಿಶೀಲಿಸಲು ಕಂಡಿಕೆ (3), (4) ಮತ್ತು (5)ರಲ್ಲಿನ ಅಧೀನ ಕಛೇರಿಗಳ ಪರಿವೀಕ್ಷಣೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯದಿಂದ ತಕ್ಷಣದಿಂದ ಜಾರಿಗೆ ಬರುವಂತೆ ಕೈಗೊಳ್ಳುವುದು. ಈ ಬಗ್ಗೆ ನಿರ್ದೇಶಕರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯವರು ಸೂಕ್ತ ಕ್ರಮಗಳನ್ನು ಇಡುವುದು ಹಾಗೂ ಜಿಲ್ಲಾ ಮಟ್ಟದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಸಂಬಂಧ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಯ ಪರಿವೀಕ್ಷಣೆಯನ್ನು ಕಡ್ಡಾಯವಾಗಿ ಪ್ರತಿ 2 ತಿಂಗಳಿಗೊಮ್ಮೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ ಅಧಿಕಾರಿಗಳು ತಕ್ಷಣದಿಂದ ಜಾರಿಗೆ ಬರುವಂತೆ ಕೈಗೊಳ್ಳುವುದು ಹಾಗೂ ಈ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸೂಕ್ತ ಕ್ರಮಗಳನ್ನು ಇಡುವುದು.

3. ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಯಲ್ಲಿನ ಪರಿವೀಕ್ಷಣೆ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಯ ತಾಲ್ಲೂಕಿನಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಸಂಬಂಧದ ಪರಿವೀಕ್ಷಣೆಯ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು.

ಅ) ಪ್ರತಿ ಕಂದಾಯ ಗ್ರಾಮಗಳಲ್ಲಿ ನಿಯಮಾನುಸಾರ VMCಗಳ ರಚನೆಯಾಗಿರುವ ಬಗ್ಗೆ ಹಾಗೂ ಸಮಿತಿ ಸದಸ್ಯರಿಗೆ ತರಬೇತಿ ಆಗಿರುವ ಬಗ್ಗೆ.

ಆ) ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ನಿಯಮಾನುಸಾರ ಸಾಮಾಜಿಕ ಲೆಕ್ಕಪರಿಶೋಧನಾ ಸಮಿತಿ ರಚನೆಯಾಗಿರುವ ಬಗ್ಗೆ ಹಾಗೂ ಸಮಿತಿ ಸದಸ್ಯರಿಗೆ ತರಬೇತಿ ಆಗಿರುವ ಬಗ್ಗೆ

ಇ) ಪ್ರತಿ ಗ್ರಾಮ ಪಂಚಾಯಿತಿಗಳ ಸಾಮಾಜಿಕ ಲೆಕ್ಕಪರಿಶೋಧನೆ ದಿನಾಂಕ ನಿಗಧಿಪಡಿಸಿರುವ ಬಗ್ಗೆ, ಸದರಿ ನಿಗಧಿಪಡಿಸಿದ ದಿನಾಂಕದಂದು, ಸಾಮಾಜಿಕ ಲೆಕ್ಕಪರಿಶೋಧನೆ ನಡೆದಿರುವ ಬಗ್ಗೆ ಹಾಗೂ MISನಲ್ಲಿ ಅಳವಡಿಸಿರುವ ಬಗ್ಗೆ.

ಈ) ಒಂದು ವೇಳೆ ಯಾವುದೇ ಕಾರಣಕ್ಕೆ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಮುಂದೂಡಿದ್ದರೆ, ಮುಂದೂಡಿದ ದಿನಾಂಕದಂದು ಸಾಮಾಜಿಕ ಲೆಕ್ಕಪರಿಶೋಧನೆ ನಡೆದಿರುವ ಬಗ್ಗೆ ಹಾಗೂ MISನಲ್ಲಿ ಅಳವಡಿಸಿರುವ ಬಗ್ಗೆ.

ಉ) ಸಾಮಾಜಿಕ ಲೆಕ್ಕಪರಿಶೋಧನೆ ವರದಿ ಹಾಗೂ ಸಭಾ ನಡವಳಿಕೆಗಳನ್ನು ಕಡ್ಡಾಯವಾಗಿ ಸಲ್ಲಿಸಿರುವ ಬಗ್ಗೆ ಹಾಗೂ MISನಲ್ಲಿ ಅಳವಡಿಸಿರುವ ಬಗ್ಗೆ.

ಊ) ಸಾಮಾಜಿಕ ಲೆಕ್ಕಪರಿಶೋಧನೆ ವರದಿಗಳನ್ನು ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಪರಿಶೀಲಿಸಿ ಕಂಡು ಬಂದ ಲೋಪದೋಷಗಳ ಕುರಿತು ಸಕಾಲದಲ್ಲಿ ಅನುಸರಣಾ ಕ್ರಮವಿಟ್ಟಿರುವ ಬಗ್ಗೆ.

ಋ) ಸಾಮಾಜಿಕ ಲೆಕ್ಕಪರಿಶೋಧನೆ ವರದಿಗಳ ಪರಿಶೀಲನೆಯಿಂದ ಗಂಭೀರ ಸ್ವರೂಪದ ನ್ಯೂನತೆಗಳು ಕಂಡು ಬಂದ ಯಾವುದಾದರೂ ಪಂಚಾಯಿತಿಯನ್ನು ವಿಶೇಷ ಲೆಕ್ಕಪರಿಶೋಧನೆಗೆ ಒಳಪಡಿಸುವ ಅಗತ್ಯತೆ ಇರುವ ಬಗ್ಗೆ

ಎ) ಜಿಲ್ಲಾ/ತಾಲ್ಲೂಕು ಸಾಮಾಜಿಕ ಲೆಕ್ಕಪರಿಶೋಧನಾ ಸಂಯೋಜಕರ ಕೆಲಸ ಕಾರ್ಯಗಳ ಬಗ್ಗೆ ವಿಮರ್ಶೆ.

ಏ) ಉಲ್ಲೇಖ–1ರ ಸರ್ಕಾರದ ಸುತ್ತೋಲೆ ಸೂಚನೆಗಳು ತಾಲ್ಲೂಕಿನಲ್ಲಿ ಪಾಲನೆಯಾಗುತ್ತಿರುವ ಬಗ್ಗೆ.

ಐ) ಪರಿಶೀಲನೆಯಲ್ಲಿ ಅವಶ್ಯವೆಂದು ಕಂಡು ಬಂದ ಇತರೆ ವಿಷಯಗಳು. ಪರಿವೀಕ್ಷಣೆ ಕೈಗೊಳ್ಳುವ ಅಧಿಕಾರಿಯು ಸಂಬಂಧಿಸಿದವರೊಡನೆ ಚರ್ಚಿಸಿ, ಪರಿವೀಕ್ಷಣಾ ವರದಿಯ

ಆ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶನಾಲಯದ ಅಧಿಕಾರಿಯು ಉಲ್ಲೇಖ–1ರ ಸರ್ಕಾರದ ಸುತ್ತೋಲೆ ಸೂಚನೆಯಂತೆ ರಾಜ್ಯಮಟ್ಟದ ಅಧಿಕಾರಿ ಕೈಗೊಳ್ಳಬೇಕಾದ ಗ್ರಾಮ ಪಂಚಾಯಿತಿಯ ಶೇಕಡಾ 2ರಷ್ಟು ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡುವುದು. ಗ್ರಾಮಪಂಚಾಯಿತಿಯಲ್ಲಿ ನಿರ್ವಹಿಸಿರುವ ಪರಿವೀಕ್ಷಣಾ ವಹಿಯಲ್ಲಿ ಅದರ ವಿವರವನ್ನು ದಾಖಲಿಸುವುದು. ಒಟ್ಟು ಕಾಮಗಾರಿಗಳ 50 ಮೀರದಿದ್ದರೆ ಕನಿಷ್ಟ ಒಂದು ಕಾಮಗಾರಿಯನ್ನು, 50 ಮೀರಿದರೆ ಕನಿಷ್ಟ ಎರಡು ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡುವುದು ಹಾಗೂ ಚೆಕ್‌ಲಿಸ್ಟ್‌ನಂತೆ ಮುಖ್ಯ ಕಾರ್ಯನಿರ್ವಹಕಾಧಿಕಾರಿಗೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸತಕ್ಕದ್ದು.

6. ಪರಿವೀಕ್ಷಣೆ ಸಂಬಂಧದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗಳು ಅಂಶವಾರು ಮಾಹಿತಿಯನ್ನು ಸಿದ್ಧಪಡಿಸಿ ಎಲ್ಲಾ ಮಾಹಿತಿಗಳನ್ನು ಪರಿವೀಕ್ಷಣಾದಾರರಿಗೆ ಒದಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ಮಾಹಿತಿಗಳಿಗೆ ಪೂರಕವಾದ ಕಡತ, ಅಂಕಿ ಅಂಶ ಹಾಗೂ ದಾಖಲೆಗಳನ್ನು

ಅಭಿವೃದ್ಧಿ

ಸಿದ್ಧವಾಗಿಟ್ಟುಕೊಂಡು ಪರಿವೀಕ್ಷಣೆಗೆ ಸಂಪೂರ್ಣವಾಗಿ ಸಹಕರಿಸುವುದು. ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲಿನ ಸೂಚನೆಗಳನ್ನು ಪಾಲಿಸಲು ಸಂಬಂಧಪಟ್ಟ ಅಧಿಕಾರಿಗಳು ಅವಶ್ಯಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.

ತಮ್ಮ ನಂಬುಗೆಯ

**(ಎನ್.ಎಸ್. ಪ್ರಸನ್ನಕುಮಾರ್)**
ನಿರ್ದೇಶಕರು
ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
2. ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ. (ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸುತ್ತೋಲೆಯ ಪ್ರತಿಯನ್ನು ತಮ್ಮ ಆಡಳಿತ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ)
3. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ

ಅನಸೂ ರಂಗಸ್ವಾಮಿ

**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ. 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001.
ದೂ. 080-22372738 E-mail : karnregs@gmail.com

**ಸಂ: ಗ್ರಾಅಪ 63 ಉಖಾಯೋ** 2006 Date : 10-07-2009

**ಗೆ.**

ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ರಾಜ್ಯದ ಎಲ್ಲ ಜಿಲ್ಲೆಗಳು.

**ಮಾನ್ಯರೇ,**

ವಿಷಯ : ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜಾರಿಗೊಳಿಸುವಾಗ ಕೆಲವು ಕೆಲವು ಅಂಶಗಳನ್ನು ಪಾಲಿಸುವ ಕುರಿತು.

ಉಲ್ಲೇಖ: ಜಂಟಿ ಕಾರ್ಯದರ್ಶಿಗಳು,ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ, ಇವರ ಪತ್ರ ಸಂಖ್ಯೆ ಡಿ.ಓ.ನಂ. ಕೆ– 11011/2/2008– ಎನ್‌ಆರ್‌ಇಜಿಎ (ಮಾನ್)/ಟಿ ಎಸ್ ದಿನಾಂಕ 27 ಜೂನ್ 2009.

* * *

ಮಾನ್ಯ ಘನತೆವೆತ್ತ ರಾಷ್ಟ್ರಪತಿರವರು ತಮ್ಮ ಭಾಷಣದಲ್ಲಿ, ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜಾರಿಗೊಳಿಸುವುದು 100 ದಿನಗಳ ಕಾರ್ಯಸೂಚಿಯಲ್ಲಿ ಅಳವಡಿಸಿರುವುದಾಗಿ ತಿಳಿಸಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಅಲ್ಲದೇ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರಕರಣ 27(1)ರಂತೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಕೂಡಲೇ ನಡೆಸುವಂತೆ ಸೂಚಿಸಿರುತ್ತದೆ. ಈ ಕುರಿತು ನಮೂನೆಯನ್ನು ಸಿದ್ದಪಡಿಸಲಾಗಿದ್ದು. ಈ ನಮೂನೆಯು ಕೇಂದ್ರ ಸರ್ಕಾರದ ಎನ್‌ಆರ್‌ಇಜಿಎ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಗ್ರಾಮ ಸಭೆಯಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳುವಾಗ ಮಾಹಿತಿ ಪರಿಶೀಲನೆ ಹಾಗೂ ಸತ್ಯಾಸತ್ಯತೆ ತಿಳಿಯಲು ಸ್ಥಳೀಯರಿಗೆ ಅವಕಾಶವಾಗುವಂತೆ ಎಂಐಎಸ್ ಪ್ರಗತಿಯ ವಿವರಗಳನ್ನು ಸದರಿ ಸಭೆಗಳಲ್ಲಿ ಓದುವಂತೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–
**ನಿರ್ದೇಶಕರು**
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ : ಗ್ರಾಅಪ 63 ಉಖಾಯೋ 2009.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 04.08.2009.

**ಗೆ,**

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

**ಮಾನ್ಯರೆ,**

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಜಿಲ್ಲಾ, ಮತ್ತು ತಾಲ್ಲೂಕು ಮಟ್ಟದ ಸಂಯೋಜಕರುಗಳ ಸೇವೆ ಪಡೆಯುವ ಕುರಿತು.

ಉಲ್ಲೇಖ: ಈ ಕಾರ್ಯಾಲಯದ ಪತ್ರ, ದಿನಾಂಕ: 13.05.2009.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮದಲ್ಲಿನ ಪ್ರಕರಣ 17ರಲ್ಲಿ ತಿಳಿಸಿರುವಂತೆ ಯೋಜನೆಯ ಅನುಷ್ಠಾನ ಸಂಬಂಧ ಸಾಮಾಜಿಕ ಲೆಕ್ಕ ತಪಾಸಣೆಯನ್ನು ಕಡ್ಡಾಯವಾಗಿ ನಡೆಸಬೇಕಾಗಿರುತ್ತದೆ. ಈ ಸಂಬಂಧ ಸದರಿ ಚಟುವಟಿಕೆಯನ್ನು ಪಾರದರ್ಶಕತೆಯಿಂದ ಪರಿಣಾಮಕಾರಿಯಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೈಗೊಂಡು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಸದರಿ ಚಟುವಟಿಕೆಯನ್ನು ನಿರ್ವಹಿಸುವ ಜೊತೆಗೆ ಯೋಜನೆಯ ಅನುಷ್ಠಾನ ಸಂಬಂಧ ಉದ್ಭವಿಸುವ ಕುಂದುಕೊರತೆಗಳ ನಿವಾರಣಾ ಕ್ರಮವನ್ನು ಕೂಡ ಕೈಗೊಳ್ಳಬೇಕಾಗಿರುತ್ತದೆ. ಆದಕಾರಣ ಈ ಕಾರ್ಯಗಳನ್ನು ಗ್ರಾಮ ಪಮಚಾಯತಿ ಮಟ್ಟದಲ್ಲಿ ನಿಯಮಿತವಾಗಿ ಕೈಗೊಂಡು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುವುದನ್ನು ಮನಗಂಡು ಕೇಂದ್ರ ಸರ್ಕಾರವು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳ ಸಂಯೋಜಕರುಗಳ ಸೇವೆಯನ್ನು ಪಡೆಯಲು ಅವಕಾಶ ಕಲ್ಪಿಸಿರುತ್ತದೆ. ಆದಕಾರಣ ಪ್ರತಿಯೊಂದು ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಒಬ್ಬರಂತೆ ಸಾಮಾಜಿಕ ಲೆಕ್ಕ ಪರಿಶೋಧನಾ ಸಂಯೋಜಕರ ಸೇವೆಯನ್ನು ಪಡೆಯಲು ತೀರ್ಮಾನಿಸಲಾಗಿರುತ್ತದೆ.

ಈ ಸಂಬಂಧ ಉಲ್ಲೇಖಿತ ದಿ: 31.05.2009ರ ಪತ್ರದಲ್ಲಿ ಈ ಸಂಬಂಧ ಸೂಕ್ತ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿ ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಅದರನ್ವಯ ಜಿಲ್ಲೆಗಳಿಂದ ಆಯ್ಕೆ ಮಾಡಿ ಕಳುಹಿಸಿರುವ ಅಭ್ಯರ್ಥಿಗಳಿಗೆ ಅರ್ಹತಾ ಪರೀಕ್ಷೆ ನಡೆಸಿ ಅರ್ಹ ಅಭ್ಯರ್ಥಿಗಳಿಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ತರಬೇತಿಯನ್ನು ನಡೆಸಿ ಆಯಾ ಸಂಬಂಧಪಟ್ಟ ಜಿಲ್ಲೆಗಳಲ್ಲಿ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಸದರಿ ಸಂಯೋಜಕರ ಕರ್ತವ್ಯಗಳ ಕುರಿತು ಮತ್ತು ಸದರಿಯವರಿಗೆ ನೀಡಬೇಕಾದ ಸಂಭಾವನೆ ಹಾಗೂ ಸದರಿಯವರ ಸೇವೆ ಪಡೆಯಲು ಅವರೊಂದಿಗೆ ಮಾಡಿಕೊಳ್ಳಬೇಕಾದ ಕರಾರು ಇತ್ಯಾದಿ ವಿವರಗಳನ್ನು ಇದರೊಂದಿಗೆ ಲಗತ್ತಿಸಿದ್ದು ಅದರಂತೆ ಕೂಡಲೇ ಕ್ರಮ ವಹಿಸಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
ಸಹಿ/–
**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

# ANNEXURE - 1

## CONTRACT FOR CONSULTING SERVIES
## (DISTRICT LEVEL SOCIAL AUDIT CO-ORDINATORS)

THIS CONTRACT ("Contract") is entered into this [insert starting date of assignment], by and between the Chief Executive Officer, District [insert the District name] ("the Client") having its principal place of business at the Zilla Panchayath, District [insert the District address], and [insert Consultant's name] ("the Consultant") located at [insert Consultant's address].

WHEREAS, the Client wish to have the Consultant performing the services hereinafter referred to, and

WHEREAS, the Consultant is willing to perform these services,

NOW THEREFORE THE PARTIES hereby agree as follows:

1. **Services**

(i) The Consultant shall perform the services specified in Attachment A, "Tasks, responsibilities and services," which is made an integral part of this Contract, "Services"

(ii) The Consultant shall submit to the Client the reports in the form and within the time periods specified in Attachment B, "Consultant's Reporting Obligations".

2. **Term**

The Consultant shall perform the Services during the period commencing [insert start date] and continuing through [insert completion date] or any other period as may be subsequently agreed by the parties in writing.

3. **Payment**

**A. Ceiling**

For Services rendered pursuant to Attachment A, the Client shall pay the Consultant an amount not to exceed Rs. 15000.00(This includes Rs. 10000.00 as basic and Rs. 5000.00 towards telephone/mobile charges and TA/DA for the journeys performed to carry out the assigned duties within the district). This amount has been established based on the understanding that it includes all of the Consultant's costs as well as any tax obligation that may be imposed on the Consultant.

**B. Remuneration**

The Client shall pay the Consultant for services rendered at the rate per month spent (or per day spent, subject to a maximum of 30 days per month) in accordance with the rates agreed and specified in sub clause (A) of clause (3) above.

**C. Reimbursable**

The Client shall pay the Consultant for reimbursable expenses, which shall consist of and limited to:

(i) normal and customary expenditures for official travel outside the district, the fixed boarding and loading charges, and printing/ copying charges; Official travel will be reimbursed at the cost of A/C three tier/first class travel by rail and Bus fare and fixed boarding and loading charges @ Rs. 400.00 per day (only in the case of no free accommodation and food is provided by the Govt) will be paid this need to be authorized by the Client's Coordinator;

(ii) such other expenses as approved in advance by the Client's Coordinator

(iii) Payment Conditions:

Payment shall be made in Indian Rupees, no later than 60 days following submission by the Consultant of invoices in duplicate to the Coordinator designated in Clause 4.

**2. Contract Administration**

**A. Coordinator**

The Client designates the NREGA Nodal Officer in the Zilla Panchayath as Client's Coordinator; The Coordinator shall be responsible for the coordination of activities under the Contract, for receiving and approving invoices for payment, for acceptance and approval of the reports and other deliverables by the Client.

**B. Timesheets**

During the course of his/her work under the Contract, the Consultant may be required to complete timesheets or any other document used to identify the time spent, as well as expenses incurred as instructed by the Coordinator.

**C. Reports**

The Report listed in Attachment B, "Consultant's Reporting Obligations" shall be submitted in the course of the assignment..

**3. Performance Standards**

The Consultant undertakes to perform the Services with the highest standards of professional and ethical competence and integrity.

**Termination of the contract**

The contract shall be terminated at any time before the contact period by any one of the parties giving one month advance notice to one another recording the reasons for doing so.

**For the Client  The  Consultant**

| | |
|---|---|
| Singed by: | Signature: |
| Name and designation | Name: |
| Date: | Date: |
| Place: | Place |

**List of Attachments to the Contract**

Attachment A:  Description of Services

Attachment B:  Consultant's reporting Obligations

Attachment C:  Services and facilities to be provided by the client.

**Appendix A: Tasks, responsibilities and services:**

- The workplace will be the assigned ZP office. The assigned ZP office is …….
- Undergo training which will be organized by ANSSIRD or NREGA PR Department in this regard.
- Build the Capacities of the GPs in implementing the scheme transparently;
- Train, assist and guide the GPs personnel, representatives, SHG members and the labour group;

Specific steps that the professionals will have to take up are mentioned below in the assigned district, which are only indicative, and the professionals are expected to take up all other necessary steps to achieve the objectives as laid down in the NREG Act-2005 and also to ensure the following by coordinating with the taluk level SA coordinators and the concerned:

- Facilitate the GPs to conduct gram sabha for carrying out the process of social audit once in every six months without fail;
- Facilitate the process of continuous auditing by the VMCs and get the reports;
- Documentation of the process of social auditing and uploading the reports of social audits on the MIS;
- Cause independent verification on the complaints lodged either directly to DPC/ PO or through toll free number or on the website;
- Plan for certain awareness among the community and specially in SHGs, Youth club and CBCs in consultation with DPC/NO/PO and executing the plan;
- Plan for conduct training programs to the SHG members, elected representatives and labout group etc…in consultation with DPC/NO/PO and executing the plan;
- Coordinating the training programs conducted at the district, taluk and GP level by the ANSSIRD, Mysore and the NREGS Directorate;

**Appendix B: Reporting Requirements**

Monthly: (This should be submitted immediately after the completion of the month, before 5th of subsequent month)

- No. of visits made to TP/GP;
- No. of training conducted;
- No. of complaints attended;
- No. of social audit conducted;

**ಕರ್ನಾಟಕ ಸರ್ಕಾರ**
ನಿರ್ದೇಶಕರ ಕಛೇರಿ
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ನಿರ್ದೇಶನಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ.
2ನೇ ಮಹಡಿ 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು – 560 001
ದೂ. 080–22372738 E- mail : karnregs@gmail.com

ಸಂ. ಗ್ರಾಅಪ 63 ಉಖಾಯೋ 2009 Date : 04-08-2009

ರವರಿಗೆ,
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್.
ರಾಜ್ಯದ ಎಲ್ಲ ಜಿಲ್ಲೆಗಳು.

ಮಾನ್ಯರೆ,

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸುವ ಹಾಗೂ ಉಸ್ತುವಾರಿ ಕುರಿತು.

ಉಲ್ಲೇಖ:
1. ಈ ಕಛೇರಿಯ ಪತ್ರ ಸಂಖ್ಯೆ ನಂ. ಗ್ರಾಅಪ.63 ಉಖಾಯೋ 06 ದಿನಾಂಕ : 29–06–09
2. ಈ ಕಛೇರಿಯ ಪತ್ರ ಸಂಖ್ಯೆ ನಂ. ಗ್ರಾಅಪ.63 ಉಖಾಯೋ 06 ದಿನಾಂಕ : 10–07–09
3. ಈ ಕಛೇರಿಯ ಪತ್ರ ಸಂಖ್ಯೆ ನಂ. ಗ್ರಾಅಪ.63 ಉಖಾಯೋ 06 ದಿನಾಂಕ : 04–07–09
4. ಈ ಕಛೇರಿಯ ಇ–ಮೇಲ್ ನಂ. ಗ್ರಾಅಪ.63 ಉಖಾಯೋ 06 ದಿನಾಂಕ : 21–07–09
5. ಕೇಂದ್ರ ಸರ್ಕಾರದ ಪತ್ರ ನಂ. ಡಿ.ಓ ನಂ,ಜೆ, – 16012/1/09 – ಎನ್ಆರ್ಇಜಿಎ ದಿನಾಂಕ 21–07–02009

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ತಪಾಸಣೆಯನ್ನು ನಿಗದಿತ ದಿನಾಂಕಗಳಂದು ನಡೆಸಲು ಕ್ರಮ ಕೈಗೊಳ್ಳುವಂತೆ ಹಾಗೂ ಸಾಮಾಜಿಕ ಲೆಕ್ಕ ತಪಾಸಣೆ ಕೈಗೊಳ್ಳುವ ದಿನಾಂಕಗಳನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ತಮಗೆಲ್ಲ ಈಗಾಗಲೇ ಉಲ್ಲೇಖಿತ ಪತ್ರ ಹಾಗೂ ಇ–ಮೇಲ್ ಮುಖಾಂತರ ತಿಳಿಸಲಾಗಿರುತ್ತದೆ,

ಉಲ್ಲೇಖ 5ರ ಪತ್ರದಲ್ಲಿ ಸೂಚಿಸಿರುವಂತೆ (ಪ್ರತಿ ಲಗತ್ತಿಸಿದೆ.) ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯಕ್ರಮವನ್ನು ಜುಲೈ ಮಾಹೆಯಲ್ಲಿ ಪ್ರಾರಂಭಿಸಿ ಆಗಸ್ಟ್ ಮಾಹೆಯಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ..ದಿನಾಂಕ 10–07–2009 ರ ಒಳಗಾಗಿ ಎಲ್ಲ ಜಿಲ್ಲೆಗಳೂ ಕಡ್ಡಾಯವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆ ವೇಳಾಪಟ್ಟಿಯನ್ನು (ಕ್ಯಾಲೆಂಡರ್‌ನ್ನು) ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಅದರಂತೆ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಬೇಕಾಗಿರುತ್ತದೆ. ಈ ಕುರಿತು ಕೈಗೊಂಡ ಕ್ರಮದ ವರದಿಯನ್ನು ರಾಜ್ಯ ಸರ್ಕಾರವು ದಿನಾಂಕ 01–09–2009 ರಂದು ನಿಗದಿತ ನಮೂನೆಯಲ್ಲಿ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿದೆ.

ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವ ಕುರಿತು ಹಾಗೂ ವೇಳಾಪಟ್ಟಿಯನ್ನು (ಕ್ಯಾಲೆಂಡರ್‌ನ್ನು) ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಕುರಿತು ಪುನಃ ಪತ್ರ ವ್ಯವಹಾರಕ್ಕೆ ಅವಕಾಶ ನೀಡದಂತೆ ಕ್ರಮಕೈಗೊಳ್ಳಲು ಉಲ್ಲೇಖ 4 ರ ಇ–ಮೇಲ್‌ನಲ್ಲಿ ಸೂಚಿಸಲಾಗಿದ್ದರೂ ಸಹ ಚಿತ್ರದುರ್ಗ, ದಾವಣಗೆರೆ, ಗದಗ, ಕೋಲಾರ, ಮಂಡ್ಯ, ಮೈಸೂರು, ರಾಯಚೂರು, ತುಮಕೂರು, ರಾಮನಗರ, ಜಿಲ್ಲೆಗಳು ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸುವ ಕುರಿತು ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವುದಿಲ್ಲ. ಅಲ್ಲದೇ ಪ್ರಕಟಿಸುವ ಕೆಲವು ಜಿಲ್ಲೆಗಳಿಂದ ಅಪೂರ್ಣ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ ಕೈಗೊಳ್ಳಬೇಕಾಗಿರುವ ಸಾಮಾಜಿಕ ಲೆಕ್ಕ ಪರಿಶೋಧನೆಯ ಸಂಪೂರ್ಣ ಮಾಹಿತಿಯ ವೇಳಾಪಟ್ಟಿಯನ್ನು (ಕ್ಯಾಲೆಂಡರ್‌ನ್ನು) ಈ ಪತ್ರ ತಲುಪಿದ ಮರುದಿನದೊಳಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಕೇಂದ್ರ ಸರ್ಕಾರದ ನಿರ್ದೇಶನದಂತೆ ಹಾಗೂ ಕಾನೂನಿನಲ್ಲಿ ಅವಕಾಶ ಮಾಡಿದ ರೀತ್ಯಾ ಸಾಮಾಜಿಕ ಲೆಕ್ಕ ಪರಿಶೋಧನೆ ಅನುಷ್ಠಾನವನ್ನು ಪರಿಶೀಲಿಸಿ ವರದಿ ಮಾಡಲು ಕೇಂದ್ರ ಸರ್ಕಾರವು : ರಾಷ್ಟ್ರ ಮಟ್ಟದ ಪರಿವೀಕ್ಷಕರಿಗೆ" ತಿಳಿಸಿರುತ್ತದೆ. ಸಾಮಾಜಿಕ ಲೆಕ್ಕ ಪರಿಶೋಧನೆ ವೇಳಾಪಟ್ಟಿಯನ್ನು (ಕ್ಯಾಲೆಂಡರ್‌ನ್ನು) ಆಧರಿಸಿ ರಾಜ್ಯ ಸರ್ಕಾರದ ಅಧಿಕಾರಿಗಳು, ರಾಷ್ಟ್ರಮಟ್ಟದ ಪರಿವೀಕ್ಷಕರು, ಇತರೆ ವ್ಯಕ್ತಿಗಳು/ಸಂಸ್ಥೆಗಳು ಸಾಮಾಜಿಕ ಲೆಕ್ಕ ಪರಿಶೋಧನೆಯ ಗುಣಮಟ್ಟ ಪರಿಶೀಲಿಸಲು ಆಗಮಿಸಿರುವುದರಿಂದ ಪ್ರಥಮ ಆದ್ಯತೆ ಮೇರೆಗೆ ಈ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದೆ.

ಸಾರ್ವಜನಿಕರಿಂದ ಸ್ವೀಕೃತವಾದ ಮತ್ತು ಕೇಂದ್ರ ಸರ್ಕಾರದಿಂದ ಸ್ವೀಕೃತವಾದ ದೂರುಗಳನ್ನು ಸಾಮಾಜಿಕ ಲೆಕ್ಕ ಪರಿಶೋಧನೆ ಕಾರ್ಯಕ್ರಮದಲ್ಲಿ ಇತ್ಯರ್ಥಗೊಳಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

**ನಿರ್ದೇಶಕರು**
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನಸೂ ರಾಗ್ರಾಪಂ

## ಕರ್ನಾಟಕ ಸರ್ಕಾರ ನಡಾವಳಿಗಳು

ವಿಷಯ: ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತಾಲ್ಲೂಕು ಸಂಯೋಜಕರುಗಳಿಗೆ ತರಬೇತುದಾರರ ತರಬೇತಿಯನ್ನು ನಡೆಸುವ ಕುರಿತು.

ಒದಲಾಗಿದೆ: 1) ಈ ಕಛೇರಿಯಿಂದ ಸಮಸಂಖ್ಯೆಯ ಪತ್ರ ದಿನಾಂಕ 13–05–2009.

2) ಕೇಂದ್ರ ಸರ್ಕಾರದ ಪತ್ರ ಸಂ. ನಂ.ಜೆ–16012/1/09 ಎನ್‌ಆರ್‌ಇಜಿಎ ದಿನಾಂಕ:19–06–2009.

3) ಕೇಂದ್ರ ಸರ್ಕಾರದ ಪತ್ರ ಸಂ.ಡಿ.ಓ.ನಂ.ಜೆ–16012/1/09– ಎನ್‌ಆರ್‌ಇಜಿಎ ದಿನಾಂಕ:21–07–2009.

* * *

### ಪ್ರಸ್ತಾವನೆ

ಮಾನ್ಯ ಘನತೆವೆತ್ತ ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಸಾಮಾಜಜಿಕ ಲೆಕ್ಕ ಪರಿಶೋಧನೆಯನ್ನು ಜಾರಿಗೊಳಿಸುವುದು 100 ದಿನಗಳ ಕಾರ್ಯಸೂಚಿಯಲ್ಲಿ ಅಳವಡಿಸಿರುವುದಾಗಿ ತಿಳಿಸಿರುತ್ತಾರೆ. (ಮೇಲೆ ಓದಲಾದ ಕ್ರಮ ಸಂಖ್ಯೆ 3 ರ ಪತ್ರ) ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರಕರಣ 27(1) ರಂತೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜುಲೈ ಮಾಹೆಯಲ್ಲಿ ಪ್ರಾರಂಭಿಸಿ ಆಗಸ್ಟ್ ಮಾಹೆಯಲ್ಲಿ ಪೂರ್ಣಗೊಳಿಸುವಂತೆ ಸೂಚಿಸಿರುತ್ತಾರೆ. (ಮೇಲೆ ಓದಲಾದ ಕ್ರಮ ಸಂಖ್ಯೆ 2 ರ ಪತ್ರ) ಅದರಂತೆ ದಿನಾಂಕ 10–07–2009 ರ ಒಳಗಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಯ ವೇಳಾಪಟ್ಟಿಯನ್ನು (ಕ್ಯಾಲೆಂಡರ್) ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಅವರೋಹಣ ಮಾಡಲು ಈಗಾಗಲೇ ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ 1 ರ ಪತ್ರದಲ್ಲಿ ದಿನಾಂಕ 05–05–2009 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಿದಂತೆ ಜಿಲ್ಲಾ ಮಟ್ಟದಲ್ಲಿ ಒಬ್ಬರು ಜಿಲ್ಲಾ ಸಂಯೋಜಕರನ್ನು ಈಗಾಗಲೇ ಆಯ್ಕೆ ಮಾಡಿ ಸದರಿಯವರಿಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೂಲಕ ತರಬೇತಿ ನೀಡಲಾಗಿದೆ. ಈಗ ಹಾಲಿ ಜಿಲ್ಲಾ ಪಂಚಾಯಿತಿಗಳಿಂದ ಆಯ್ಕೆ ಮಾಡಲಾಗಿರುವ ತಾಲ್ಲೂಕು ಸಂಯೋಜಕರುಗಳಿಗೆ ತರಬೇತಿ ನಡೆಸಲು ಉದ್ದೇಶಿಸಿದೆ ಈ ಸಂಬಂಧ ದಿನಾಂಕ 07–08–2009 ರಿಂದ 11–08–2009 ರ ವರೆಗೆ ಆಫ್ ಕ್ಯಾಂಪಸ್ ತರಬೇತಿಯನ್ನು ವಿವಿಧ ಸ್ಥಳಗಳಲ್ಲಿ ಆಯೋಜಿಸಲಾಗಿದ್ದು, ತರಬೇತಿ ನೀಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸ್ಥರದ ಅಧಿಕಾರಿಗಳನ್ನು ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಹಾಗೂ ತರಬೇತಿ ನಿರ್ದೇಶಕರುಗಳನ್ನಾಗಿ ಗುರುತಿಸಿ ತೀರ್ಮಾನಿಸಲಾಗಿರುತ್ತದೆ. ಸದರಿಯವರು ತಪ್ಪದೇ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿ ಸೂಕ್ತ ತರಬೇತಿ ನೀಡಲು ಆದೇಶಿಸಬೇಕಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 63 ಉಖಾಯೊ 2006 ಬೆಂಗಳೂರು. ದಿನಾಂಕ: 06.08.2009

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ತಾಲ್ಲೂಕು ಸಂಯೋಜಕರುಗಳಿಗೆ ತರಬೇತುದಾರರ ತರಬೇತಿಯನ್ನು ಲಗತ್ತಿಸಿರುವ ಅನುಬಂಧಗಳಲ್ಲಿ ನಮೂದಿಸಿದಂತೆ ವಿವಿಧ ಕೇಂದ್ರಗಳಲ್ಲಿ ನಡೆಸಲು ಮತ್ತು ಈ ಕೆಳಕಂಡ ಕ್ರಮ ಕೈಗೊಳ್ಳಲು ಆದೇಶಿಸಿದೆ.

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಸ್ಥರದ ಅಧಿಕಾರಿಗಳನ್ನು ತಜ್ಞ ಸಂಪನ್ಮೂಲ ವ್ಯಕಿಗಳನ್ನಾಗಿ ಗುರುತಿಸಲಾಗಿದ್ದು, (ಅನುಬಂಧ–ಅ ನ್ನು ಲಗತ್ತಿಸಿದೆ) ಸದರಿ ತಜ್ಞ ಸಂಪನ್ಮೂಲ ವ್ಯಕಿಗಳು ವ್ಯವಸ್ಥಿತವಾಗಿ ತರಬೇತಿಯನ್ನು ನಡೆಸಲು ತರಬೇತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸಲು ಸೂಚಿಸಿದೆ.
2. ಈಗಾಗಲೇ ಆಯ್ಕೆ ಮಾಡಿ ಕಳುಹಿಸಲಾಗಿರುವ ತಾಲ್ಲೂಕು ಸಂಯೋಜಕರನ್ನು ಮತ್ತೊಮ್ಮೆ ಇವರುಗಳಿಗೆ ಕಂಪ್ಯೂಟರ್ ಜ್ಞಾನ ಇರುವ ಬಗ್ಗೆ ಖುದ್ದಾಗಿ ದೃಢಪಡಿಸಿಕೊಂಡು ತರಬೇತಿಗೆ ನಿಯೋಜಿಸಲು ಕ್ರಮ ಕೈಗೊಳ್ಳುವುದು.

1. ತಾಲ್ಲೂಕು ಸಂಯೋಜಕರಾಗಿ ಗುರುತಿಸಲ್ಪಟ್ಟವರಿಗೆ ಕಂಪ್ಯೂಟರ್ ಜ್ಞಾನ ಇರುವ ಬಗ್ಗೆ ಕಿರು ಪರೀಕ್ಷೆ ನಡೆಸಲು ಅನುವಾಗುವಂತೆ ಆಯಾ ತರಬೇತಿ ಕೇಂದ್ರಗಳಲ್ಲಿ ಕಂಪ್ಯೂಟರ್ ವ್ಯವಸ್ಥೆ ಮಾಡುವುದು.
2. ತರಬೇತಿ ನಡೆಯುವ 5 ಕೇಂದ್ರಗಳಿಗೆ ಸಂಬಂಧಿಸಿದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿಗಳು ತರಬೇತಿಯು ಸುಸೂತ್ರವಾಗಿ ನಡೆಯಲು ಸಹಕಾರ ನೀಡುವುದು.
3. ತರಬೇತುದಾರರ ತರಬೇತಿ ಕಾರ್ಯಕ್ರಮಕ್ಕೆ ಪ್ರತಿ ಕೇಂದ್ರಕ್ಕೆ ರೂ.1,85,000–00 (ಒಂದು ಲಕ್ಷದ ಎಂಬತ್ತೈದು ಸಾವಿರ ರೂಗಳು ಮಾತ್ರ) ಗಳು ವೆಚ್ಚ ವಾಗುವುದಾಗಿ ಅಂದಾಜಿಸಲಾಗಿದ್ದು, (ಅನುಬಂಧ–ಬ ಲಗತ್ತಿಸಿದೆ) ಸದರಿ ವೆಚ್ಚವನ್ನು ಶೇಕಡಾ 6ರ ಆಡಳಿತಾತ್ಮಕ ವೆಚ್ಚದಲ್ಲಿ ಭರಿಸುವುದು.

**(ಡಾ. ಪಿ.ಸಿ. ಜಾಫರ್)**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,
ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**
1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರುಗಳು/ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
3. ಸಂಬಂಧಪಟ್ಟ ತಜ್ಞ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ತರಬೇತಿ ನಿರ್ದೇಶಕರುಗಳಿಗೆ.

**ಪ್ರತಿಯನ್ನು:**
1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು
6. ಸರ್ಕಾರದ ಕಾರ್ಯದರ್ಶಿ (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.
7. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು.
8. ಪ್ರಾದೇಶಿಕ ಆಯುಕ್ತರು ಬೆಂಗಳೂರು/ಮೈಸೂರು/ಗುಲ್ಬರ್ಗಾ/ಬೆಳಗಾಂ
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
10. ನಿರ್ದೇಶಕರು, ರಾ.ಗ್ರಾ.ಉ.ಖಾ.ಯೋ.ನಿರ್ದೇಶನಾಲಯ ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ, ಬೆಂಗಳೂರು.
11. ಮುಖ್ಯಸ್ಥರು, (ಆರ್ಥಿಕ ಮತ್ತು ಲೆಕ್ಕಪತ್ರ), ರಾ.ಗ್ರಾ.ಉ.ಖಾ.ಯೋ. ನಿರ್ದೇಶನಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
12. ಹೆಚ್ಚಿನ ಪ್ರತಿಗಳು/ರಕ್ಷಾ ಕಡತ.

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಲೆಕ್ಕ ಪರಿಶೋಧನೆ ಸಂಬಂಧ ತಾಲ್ಲೂಕು ಮಟ್ಟದ ಸಂಯೋಜಕರಿಗೆ ಆಫ್ ಕ್ಯಾಂಪಸ್ ತರಬೇತುದಾರರ ತರಬೇತಿ ನಡೆಯುವ ತರಬೇತಿ ಕೇಂದ್ರಗಳ, ಆಯಾಯ ಕೇಂದ್ರಗಳಿಗೆ ಒಳಪಡುವ ಜಿಲ್ಲೆ, ತರಬೇತಿ ನಿರ್ದೇಶಕರು, ಅನಸಾರಾಗ್ರಾ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಹಾಗೂ ತಜ್ಞ ಸಂಪನ್ಮೂಲ ವ್ಯಕ್ತಿಗಳ ವಿವರ.**

| **ಜಿಲ್ಲೆ** | **ತಾಲ್ಲೂಕುಗಳ ಸಂಖ್ಯೆ** | **ತರಬೇತಿ ನಡೆಯುವ ಸ್ಥಳ** | **ತರಬೇತಿ ನಿರ್ದೇಶಕರು/ತಜ್ಞ ಸಂಪನ್ಮೂಲ ವ್ಯಕ್ತಿಗಳು/ ಸಂಪನ್ಮೂಲ ವ್ಯಕ್ತಿಗಳು** |
|---|---|---|---|
| ಮೈಸೂರು | 07 | ಜಿಲ್ಲಾ ತರಬೇತಿ ಸಂಸ್ಥೆ, ಗೋಪಾಲಗೌಡ ಮೆಮೋರಿಯಲ್ ಆಸ್ಪತ್ರೆ ಹತ್ತಿರ, ಟಿ.ನರಸೀಪುರ ರಸ್ತೆ, ಮೈಸೂರು | **1. ಶ್ರೀ ನಾಗಹನುಮಯ್ಯ**<br>ಸಹಾಯಕ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.<br>**ತರಬೇತಿ ನಿರ್ದೇಶಕರು.** |
| ಮಂಡ್ಯ | 07 | | **2. ಶ್ರೀ ಕೆ.ಸುಂದರ್ ನಾಯಕ್**<br>ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,ಜಿ.ಪಂ. ಚಾಮರಾಜನಗರ **ತಜ್ಞ ಸಂಪನ್ಮೂಲ ವ್ಯಕ್ತಿ** |
| ಚಾಮರಾಜನಗರ | 04 | | **3. ಶ್ರೀ ಜಯರಾಂ**<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ಕೊಡಗು | 03 | | **4.ಶ್ರೀ ಗೋಪಾಲ್,**<br>ಯೋಜನಾ ನಿರ್ದೇಶಕರು, ಜಿ.ಪಂ., ಮೈಸೂರು.<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ಹಾಸನ | 08 | | **5.ಶ್ರೀ ಬಾಲಕೃಷ್ಣ,**<br>ಉಪಕಾರ್ಯದರ್ಶಿ, ಜಿಲಾಪಂಚಾಯಿತಿ, ಹಾಸನ<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| | | | **6 ಶ್ರೀ.ನಾಗರಾಜ್ ಕಾರಂತ**<br>ಅನಸಾರಾಗ್ರಾಸಂಸ್ಥೆಯ ಸಂಪನ್ಮೂಲ ವ್ಯಕ್ತಿ |
| **ಒಟ್ಟು** | **29** | | |

| **ಜಿಲ್ಲೆ** | **ತಾಲ್ಲೂಕುಗಳ ಸಂಖ್ಯೆ** | **ತರಬೇತಿ ನಡೆಯುವ ಸ್ಥಳ** | **ತರಬೇತಿ ನಿರ್ದೇಶಕರು/ತಜ್ಞ ಸಂಪನ್ಮೂಲ ವ್ಯಕ್ತಿಗಳು/ ಸಂಪನ್ಮೂಲ ವ್ಯಕ್ತಿಗಳು** |
|---|---|---|---|
| ದಕ್ಷಿಣ ಕನ್ನಡ | 05 | ಜಿಲ್ಲಾ ಕೃಷಿ ತರಬೇತಿ ಕೇಂದ್ರ ಬೆಳ್ತಂಗಡಿ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ | 1. **ಶ್ರೀ ಸಿಎಸ್.** ರಾಜಶೇಖರೇಗೌಡ, ಬೋಧಕರು, ಅನಸಾರಾಗ್ರಾಸಂಸ್ಥೆ **ತರಬೇತಿ ನಿರ್ದೇಶಕರು** |
| ಉಡುಪಿ | 03 | | **2. ಶ್ರೀ ಎ.ಬಿ.ಹೇಮಚಂದ್ರ** ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಶಿವಮೊಗ್ಗ **ತಜ್ಞ ಸಂಪನ್ಮೂಲ ವ್ಯಕ್ತಿ** |
| ಚಿಕ್ಕಮಗಳೂರು | 07 | | **3.ಶ್ರೀ.ಜಿ.ಸಿ..\ಪ್ರಕಾಶ್** ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿ.ಪಂ., ಬಾಗಲ ಕೋಟೆ **ತಜ್ಞ ಸಂಪನ್ಮೂಲ ವ್ಯಕ್ತಿ** **4. ಡಿ. ಪ್ರಾಣೇಶ್ವರರಾವ್** |
| ಶಿವಮೊಗ್ಗ | 07 | | **ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ** ಉಡುಪಿ **ತಜ್ಞ ಸಂಪನ್ಮೂಲ ವ್ಯಕ್ತಿ** |
| ಉತ್ತರ ಕನ್ನಡ | 11 | | **5. ಶ್ರೀ ಶಾಂತಕುಮಾರ್ ತರಬೇತಿ** ಅನಸಾರಾಗ್ರಾ ಸಂಸ್ಥೆ ಸಂಪನ್ಮೂಲ ವ್ಯಕ್ತಿ |
| **ಒಟ್ಟು** | 33 | | **6. ನಂದೀಶ್** ಅನಸಾರಾಗ್ರಾ ಸಂಸ್ಥೆ ಸಂಪನ್ಮೂಲ ವ್ಯಕ್ತಿ |

| ಜಿಲ್ಲೆ | ತಾಲ್ಲೂಕುಗಳ ಸಂಖ್ಯೆ | ತರಬೇತಿ ನಡೆಯುವ ಸ್ಥಳ | ತರಬೇತಿ ನಿರ್ದೇಶಕರು/ತಜ್ಞ ಸಂಪನ್ಮೂಲ ವ್ಯಕ್ತಿಗಳು/ ಸಂಪನ್ಮೂಲ ವ್ಯಕ್ತಿಗಳು |
|---|---|---|---|
| ಚಿತ್ರದುರ್ಗ | 06 | ರುಡ್ ಸೆಟ್ ಸಂಸ್ಥೆ ಬನಶಂಕರಿ ಬಡಾವಣೆ ಎನ್.ಹೆಚ್.4 ಹೌಸಿಂಗ್ ಬೋರ್ಡ್ ಕಾಲೋನಿ ಹಿಂಭಾಗ ಕೆಳಕೋಟೆ, ಚಿತ್ರದುರ್ಗ | **1. ಶ್ರೀ.ಕೆ.ಕೃಷ್ಣಸ್ವಾಮಿ**<br>ಬೋಧಕರು, ಅನಸಾರಾಗ್ರಾ ಸಂಸ್ಥೆ<br>**ತರಬೇತಿ ನಿರ್ದೇಶಕರು.** |
| ದಾವಣಗೆರೆ | 06 | | **2. ಶ್ರೀ ರಣದೀಪ್, ಉಪ ವಿಭಾಗಾಧಿಕಾರಿ, ಗದಗ, ತಜ್ಞ ಸಂಪನ್ಮೂಲ** |
| ಹಾವೇರಿ | 07 | | **3.ಶ್ರೀಮತಿ ಶಿಖಾ**<br>ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿ.ಪಂ., ಧಾರವಾಡ<br>**ತಜ್ಞ ಸಂಪನ್ಮೂಲ** |
| ಗದಗ್ | 05 | | **4. ಶ್ರೀ.ಷಿ.ವಿಜಯಕುಮಾರ್**<br>ಅನಸಾರಾಗ್ರಾಸಂಸ್ಥೆಯ ಸಂಪನ್ಮೂಲವ್ಯಕ್ತಿ |
| ಬೆಳಗಾವಿ | 10 | | |
| ಧಾರವಾಡ | 05 | | |
| **ಒಟ್ಟು** | 39 | | |
| ಗುಲ್ಬರ್ಗ | 10 | | **1. ಶ್ರೀ ದೇವರಾಜ್ ಯಾದವ್**<br>ಉಪನಿರ್ದೇಶಕರು,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು<br>**ತರಬೇತಿ ನಿರ್ದೇಶಕರು.** |
| | | | **2. ಶ್ರೀ ಸಂಬಾಜಿ ಟಿಲೆ**<br>ಉಪ ಕಾರ್ಯದರ್ಶಿ, ಜಿ.ಪಂ. ಬಿಜಾಪುರ ಜಿಲ್ಲೆ/**ತಜ್ಞ ಸಂಪನ್ಮೂಲ ವ್ಯಕ್ತಿ** |
| ಬಳ್ಳಾರಿ | 07 | | **3. ಶ್ರಿ ಸಂಪತ್ ಪಾಟೀಲ್**<br>ಕಾರ್ಯ ನಿರ್ವಾಹಕ ಅಧಿಕಾರಿ<br>ತಾ.ಪಂ., ಅಪಜಲ್‌ಪುರ<br>**ತಜ್ಞ ಸಂಪನ್ಮೂಲ ವ್ಯಕ್ತಿ** |

| ಜಿಲ್ಲೆ | ತಾಲ್ಲೂಕುಗಳ ಸಂಖ್ಯೆ | ತರಬೇತಿ ನಡೆಯುವ ಸ್ಥಳ | ತರಬೇತಿ ನಿರ್ದೇಶಕರು/ತಜ್ಞ ಸಂಪನ್ಮೂಲ ವ್ಯಕ್ತಿಗಳು/ ಸಂಪನ್ಮೂಲ ವ್ಯಕ್ತಿಗಳು |
|---|---|---|---|
| ಕೊಪ್ಪಳ | 04 | | **4. ಸಮ್ಮದ್ ಪಟೇಲ್**<br>ಕಾರ್ಯ ನಿರ್ವಾಹಕ ಅಧಿಕಾರಿ, ತಾ.ಪಂ.ಗುಲ್ಬರ್ಗ.<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ರಾಯಚೂರು | 05 | | **5. ಶ್ರೀಮತಿ ಸಂಪಾಗೌಡ**<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ಬೀದರ್ | 05 | | **6. ಶ್ರೀಮತಿ ವಸಂತ ಕುಲಕರ್ಣಿ**<br>ಉಪನ್ಯಾಸಕರು.<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ಬಿಜಾಪುರ | 05 | | **7. ಶ್ರೀ ದೇವಿದಾಸ ಚೌಹ್ವಾನ್**<br>**ತಜ್ಞ ಸಂಪನ್ಮೂಲ ವ್ಯಕ್ತಿ** |
| ಬಾಗಲಕೋಟೆ | 06 | | **8. ಶ್ರೀ ಮಲ್ಲಿಕಾರ್ಜುನ**<br>ಅನಸಾರಾಗ್ರಾಸಂಸ್ಥೆ ಸಂಪನ್ಮೂಲ ವ್ಯಕ್ತಿ |
| **ಒಟ್ಟು** | **42** | | |

**ಸಹಿ/–**
**ನಿರ್ದೇಶಕರು**
**ಅ.ನ.ಸಾ.ರಾ.ಗ್ರಾ.ಸಂಸ್ಥೆ, ಮೈಸೂರು**

ಅನಸಾ ರಾಗ್ರಾ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ: 223 ಉಖಾಯೋ : 2009

ಕರ್ನಾಟಕ ಸರ್ಕಾರ ಸಚಿವಾಲಯ,
ಸಚಿವಾಲಯ–2 ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 15–12–2010

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು.

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು

ಮಾನ್ಯರೆ,

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ ಸಾಮಾಜಿಕ ಲೆಕ್ಕ ಪರಿಶೋಧನೆ ಪರಿಣಾಮಕಾರಿಯಾಗಿ ವ್ಯವಸ್ಥಿಸುವ ಬಗ್ಗೆ.

* * *

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 2005ರ ಅಧಿನಿಯಮದಲ್ಲಿ ಬರುವ ಎಲ್ಲಾ ಪ್ರಕ್ರಿಯೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ. ಈ ರೀತಿ ಕಾರ್ಯಗತಗೊಂಡ ಎಲ್ಲಾ ಪ್ರಕ್ರಿಯೆಗಳಿಗೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವುದು ಕಡ್ಡಾಯವಾಗಿದೆ. ಇನ್ನು ಮುಂದೆ ಎಲ್ಲಾ ದಾಖಲಾತಿಗಳನ್ನು ಬಹಿರಂಗಪಡಿಸಿ ಪಾರದರ್ಶಕತೆ ಮೂಡಿಸುವುದು ಮುಖ್ಯವಾದ ಉದ್ದೇಶವಾಗಿದೆ. ಅಧಿನಿಯಮದಲ್ಲಿ ಯೋಜನೆಯ ಅಡಿ ಜವಾಬ್ದಾರಿಯನ್ನು ಗ್ರಾಮ ಸಭೆ ಕೈಗೊಳ್ಳಬೇಕಿದೆ, ಇದರ ಪ್ರಮುಖ ಜವಾಬ್ದಾರಿಯು ಗ್ರಾಮ ಪಂಚಾಯತಿ ಮೇಲೆ ಇರುತ್ತದೆ.(ಅಧಿನಿಯಮದ ಪ್ರಕರಣ 17) ಈ ರೀತಿ ಪ್ರತಿ ಗ್ರಾಮ ಪಂಚಾಯತಿಯ ಕಾರ್ಯವ್ಯಾಪ್ತಿಯಲ್ಲಿ ಕೈಗೊಂಡ ಎಲ್ಲಾ ಕಾಮಗಾರಿಗಳ ಸಾಮಾಜಿಕ ಪರಿಶೋಧನೆಯನ್ನು ಗ್ರಾಮಸಭೆಗಳು ಕೈಗೊಳ್ಳುವುದನ್ನು ಮತ್ತು ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಎತ್ತಿದ ಎಲ್ಲಾ ಆಕ್ಷೇಪಣೆಗಳಿಗೆ ಸಕಾಲಿಕ ಕ್ರಮವಾಗುವಂತೆ ಖಾತರಿ ಪಡಿಸಿಕೊಳ್ಳುವುದು ಕಾರ್ಯಕ್ರಮ ಅಧಿಕಾರಿಯಾದ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯವಾಗಿರುತ್ತದೆ. [ಪ್ರಕರಣ 15(5)ಡಿ] ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಜಕ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯ ವಿಮರ್ಶೆ, ಉಸ್ತುವಾರಿ ಮತ್ತು ಮೇಲ್ವಿಚಾರಣೆ ನಡೆಸುವುದು ಜಿಲ್ಲಾ ಕಾರ್ಯಕ್ರಮದ ಸಮನ್ವಯಾಧಿಕಾರಿಗಳಾದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನಿಗದಿಪಡಿಸಿದ ಕರ್ತವ್ಯವಾಗಿರುತ್ತದೆ. [ಪ್ರಕರಣ 14(3) (ಇ)] ಇದರಂತೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ತಮ್ಮ ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ನಡೆಸುವ ಪೂರ್ಣ ಹೊಣೆಗಾರಿಕೆಯು ತಮ್ಮ ಮೇಲೆ ಇದ್ದು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯು ಪರಿಣಾಮಕಾರಿಯಾಗಿ ನಡೆಸಲು ಸಫಲತೆಯನ್ನು ಪಡೆಯಲು ತಮ್ಮ ಸಹಕಾರವನ್ನು ಸರ್ಕಾರವು ನಿರೀಕ್ಷಿಸುತ್ತದೆ.

ಪ್ರತಿ ಆರು ತಿಂಗಳಿಗೊಮ್ಮೆ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮಸಭೆ ಮುಖಾಂತರ ನಡೆಸಬೇಕಾಗಿದ್ದು ಆ ಪ್ರಕಾರ 2010–11ನೇ ಸಾಲಿಗಾಗಿ ಮೊದಲನೇ ಸುತ್ತಿನ ಸಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸುವಲ್ಲಿ ಅಡಚಣೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಉದಾಹರಣೆಗಾಗಿ ಈ ಕೆಳಕಂಡ ಅಂಶಗಳನ್ನು ಪಟ್ಟಿಮಾಡಿದೆ.

1) ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸಾಮಾಜಿಕ ಲೆಕ್ಕ ಪರಿಶೋಧನೆಯ ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ನಿಗದಿಪಡಿಸಿದ ವೇಳಾಪಟ್ಟಿಯಂತೆ ನಿಗದಿಗೊಂಡ ಗ್ರಾಮಸಭೆಗಳು ಆ

ದಿನಗಳಲ್ಲಿ ನಡೆಯದೇ ಹಲವು ಕಾರಣಗಳನ್ನು ನೀಡಿ ಮುಂದೂಡಲಾಗಿದೆ. ಮುಂದೂಡಲಾದ ಸಭೆಗಳು ಇದುವರೆವಿಗೂ ಜರುಗಿರುವುದಿಲ್ಲ.

2) ಕೆಲವು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಇದುವರೆವಿಗೂ ಸಾಮಾಜಿಕ ಲೆಕ್ಕ ಪರಿಶೋಧನೆ ಜರುಗಿಸಲು ಆದೇಶಿಸಿ ಸಾಮಾಜಿಕ ಲೆಕ್ಕ ಪರಿಶೋಧನೆಯ ವೇಳಾಪಟ್ಟಿಯನ್ನು ನಿಗದಿಪಡಿಸಿ ಸುತ್ತೋಲೆ ಮೂಲಕ ಸೂಚನೆಯನ್ನು ಹೊರಡಿಸಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ನಡೆಸಲು ಚಾಲನೆ ನೀಡಿರುವುದಿಲ್ಲ.

3) ಕೆಲವು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮಗಳ ಜಾಗೃತ ಮತ್ತು ಉಸ್ತುವಾರಿ ಸಮಿತಿ (VMC) ರಚನೆ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಾಮಜಿಕ ಲೆಕ್ಕ ಪರಿಶೋಧನಾ ಸಮಿತಿಯ ರಚನೆ ಬಾಕಿ ಇರುತ್ತದೆ. ಈ ಕಾರ್ಯದಲ್ಲಿ ಪ್ರತಿ ತಾಲ್ಲೂಕಿನಲ್ಲಿ 100%ರಷ್ಟು ಪ್ರಗತಿ ಸಾಧಿಸಿ, ಪ್ರತಿ ಗ್ರಾಮದಲ್ಲಿ ಜಾಗೃತ ಮತ್ತು ಉಸ್ತುವಾರಿ ಸಮಿತಿ (VMC) ಹಾಗೂ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನಾ ಸಮಿತಿಗಳು ರಚನೆಯಾಗಬೇಕು.

4) ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಕರೆಯಲಾದ ಸಭೆಗಳಿಗೆ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರದೆ ಗೈರುಹಾಜರಾಗಿರುವುದು, ಇದರಿಂದಾಗಿ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಮತ್ತು ಎತ್ತಿದ ಆಕ್ಷೇಪಣೆಗಳಿಗೆ ಪ್ರತ್ಯುತ್ತರ ಪಡೆಯಲು ಸಾಧ್ಯವಾಗುತ್ತಿಲ್ಲ. ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಸಾಮಾಜಿಕ ಲೆಕ್ಕ ಪರಿಶೋಧನೆಗಳಿಗಾಗಿ, ಸಭೆಗಳಿಗೆ ತಪ್ಪದೇ ಹಾಜರಾಗುವಂತೆ ನಿಗಾ ವಹಿಸಿ ಖಾತ್ರಿ ಪಡಿಸಿಕೊಳ್ಳಬೇಕಿದೆ.

ಈ ಮೇಲೆ ಕಾಣಿಸಿದ ಅಂಶಗಳ ಬಗ್ಗೆ ಪರಿಣಾಮಕಾರಿಯಾದ ಹಾಗೂ ತುರ್ತು ಕ್ರಮಗಳು ಅಗತ್ಯವಿದ್ದು ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಅವರ ಕರ್ತವ್ಯವನ್ನು ಮನದಟ್ಟು ಮಾಡಲು ಹಾಗೂ ಅವರುಗಳಿಗೆ 2010–11ನೇ ಸಾಲಿಗಾಗಿ ಮೊದಲ ಸುತ್ತಿನ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜನವರಿ 2011 ಮಾಹೆಯ ಅಂತ್ಯದೊಳಗೆ ತಪ್ಪದೇ ಕಡ್ಡಾಯವಾಗಿ ಜರುಗುವಂತೆ ವ್ಯವಸ್ಥೆಮಾಡುವ ಹೊಣೆಗಾರಿಕೆಯನ್ನು ನಿಗದಿಪಡಿಸಲು ತಮ್ಮ ಹಂತದಲ್ಲಿ ಸೂಕ್ತ ಕ್ರಮ ಜರುಗಿಸುವುದು. ಆಯಾ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಶೇಕಡಾ 100ರಷ್ಟು ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮ ಸಭೆ ಮುಖಾಂತರ ನಡೆಸಲು ಗುರಿ ನಿಗದಿಪಡಿಸಿ ಮಾಡಿದ ಸಾಧನೆಯನ್ನು ಸಹ ಅವರ ಕಾರ್ಯ ನಿರ್ವಾಹಣಾ ವರದಿ ಮಾಡುವುದಕ್ಕೆ ಪರಿಗಣಿಸಲಾಗುವುದೆಂದು ಅವರಿಗೆ ತಿಳಿಯಪಡಿಸುವುದು.

ಅಧಿಸೂಚನೆ ಸಂಖ್ಯೆ S.O.3000(E) ದಿನಾಂಕ : 31/12/2008ರಲ್ಲಿ ಅಧಿನಿಯಮದ ಅನುಸೂಚಿ 1ರ ಖಂಡಿಕೆ 3.13 ಮತ್ತು 16ಕ್ಕೆ ತಿದ್ದುಪಡಿಮಾಡಲಾಗಿದೆ. ಖಂಡಿಕೆ 3(m)ರಲ್ಲಿ ಜಾಗೃತ ಮತ್ತು ಉಸ್ತುವಾರಿ ಸಮಿತಿ (VMC)ಗಳ ಬಗ್ಗೆ ಹಾಗೂ ಖಂಡಿಕೆ 13ರಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಬಗ್ಗೆ ಪಾಲಿಸಬೇಕಾದ ಅಂಶಗಳನ್ನು ತಿಳಿಯಪಡಿಸಿದೆ. ಸದರಿ ಅಧಿಸೂಚನೆಯ ಪ್ರತಿಯನ್ನು ತಮ್ಮ ಸಿದ್ಧ ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿ. ಅವುಗಳು ಕಡ್ಡಾಯವಾಗಿ ಪಾಲನೆಯಾಗುವಂತೆ ವ್ಯವಸ್ಥೆ ಮಾಡಲು ಕೋರಿದೆ.

ತಮ್ಮ ಜಿಲ್ಲೆಯ ಸಾಮಾಜಿಕ ಲೆಕ್ಕಪರಿಶೋಧನೆಯ ಚಟುವಟಿಕೆಗಳನ್ನು ವಿಡಿಯೋ ಮುದ್ರಣ ಮಾಡಿಸಲು ಕ್ರಮವಹಿಸುವುದು. ಇಂತಹ ಕ್ರಮವು ಧಾರವಾಡ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವುದು ಕಂಡು ಬರುತ್ತದೆ.

ಕೆಲವು ಜಿಲ್ಲಾ ಮತ್ತು ತಾಲ್ಲೂಕು ಸಾಮಾಜಿಕ ಲೆಕ್ಕ ಪರಿಶೋಧನೆ ಸಮನ್ವಯಾಧಿಕಾರಿಗಳು ಅವರ ಕರ್ತವ್ಯ ನಿರ್ವಹಣೆಯಲ್ಲಿ ಹಲವು ಸಮಸ್ಯೆಗಳಿವೆ ಎಂಬುದನ್ನು ತಿಳಿಸಿದ್ದು, ಉದಾ : ಕಛೇರಿಯಲ್ಲಿ ಸ್ಥಳಾವಕಾಶ, ಲೇಖನ ಸಾಮಾಗ್ರಿಗಳ ಪೂರೈಕೆ, ಹಲವು ಸಂದರ್ಭಗಳಲ್ಲಿ ಪ್ರಾಣ ಬೆದರಿಕೆ, ಅವರುಗಳು ಸಾಮಾಜಿಕ ಲೆಕ್ಕ ಪರಿಶೋಧನೆ ಕಾರ್ಯಕ್ಕೆ ಸಂಬಂಧ ಸ್ಥಳ ಪರಿಶೀಲನೆಗೆ ಹೋದಾಗ ಸ್ಥಳೀಯರು ನೀವುಗಳು ಯಾರೆಂದು ಪ್ರಶ್ನಿಸಿ ಅವರ ಕೆಲಸಕಾರ್ಯಗಳಿಗೆ ಅಡ್ಡಿ ಉಂಟುಂಮಾಡುತ್ತಿರುವುದು ಇತ್ಯಾದಿ ಇವುಗಳನ್ನು ಸೂಕ್ತ ರೀತಿಯಲ್ಲಿ ನಿವಾರಿಸಲು ಅವಶ್ಯ ಕ್ರಮ ಜರುಗಿಸುವುದು.

ಕೆಲವು ಕಡೆ ಜಿಲ್ಲಾ ಮತ್ತು ತಾಲ್ಲೂಕು ಸಾಮಾಜಿಕ ಲೆಕ್ಕ ಪರಿಶೋಧನೆ ಸಮನ್ವಯಾಧಿಕಾರಿಗಳು ಅವರು ಮಾಹೆಯಾನ ಸಲ್ಲಿಸುವ ದಿನಚರಿ ಹಾಗೂ ಅನುಬಂಧಗಳು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಂದ ಮೇಲು ಸಹಿಗೊಂಡು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು, ಇಲ್ಲಿಗೆ ಸಲ್ಲಿಕೆಯಾಗುವಲ್ಲಿ

ವಿಳಂಭವಾಗುತ್ತಿರುವುದರಿಂದ ಅವರುಗಳಿಗೆ ಮಾಹೆಯಾನ ಸಂಭಾವನೆ ಪಾವತಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಜಿಲ್ಲಾ ಹಾಗೂ ತಾಲ್ಲೂಕು ಸಾಮಾಜಿಕ ಲೆಕ್ಕ ಪರಿಶೋಧನೆ ಸಮನ್ವಯಾಧಿಕಾರಿಗಳು ಸಲ್ಲಿಸಿದ ದಿನಚರಿ/ ಅನುಬಂಧಗಳನ್ನು ಗರಿಷ್ಟ 15 ದಿನಗಳ ಕಾಲಮಿತಿಯಲ್ಲಿ ಮೇಲು ಸಹಿ ಮಾಡಿ ಕಳುಹಿಸಿಕೊಡಲು ಅಥವಾ ಅವರ ಕೆಲಸ ಕಾರ್ಯಗಳ ಸಮರ್ಪಕತೆಯ ಬಗ್ಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಅವುಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರುಗೆ ತಿಳಿಯಪಡಿಸಲು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ
ಸಹಿ/–
**(ಪಿ. ರವಿಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು: ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು.

ಅನಸೂ ರಾಗ್ರಸಂಸ್ಥೆ

# ಒಂಬುಡ್ಸ್‌ಮನ್

ಅನಸೂ ರಂಗಸ್ವಾಮಿ

**No. J-11011/21/2008-NREGA**
**Government of India**
**Department of Rural Development**
**Ministry of Rural Development**

Krishi Bhavan, New Delhi
Dated: 7th September, 2009

## ORDER

Sub: Order under Section 27(1) of National Rural Employment Guarantee Act for establishment of the office of Ombudsman for redressal of grievances in a time bound manner.

* * *

Whereas large number of grievances are arising in regard to the implementation of National Rural Employment Guarantee Act and the Scheme made thereunder.

And whereas transparency and accountability are the cardinal principles underlying the implementation of the Act;

And whereas there exists a need for an independent authority to expeditiously redress the grievances in regard to the implementation of NREGA and Scheme made thereunder;

And whereas the existing administrative machinery for the disposal of grievances needs to be strengthened to secure the ends of justice.

And whereas effective grievance redressal is the key to the empowerment of the people and the enjoyment of their rights;

Now, therefore, in exercise of the powers conferred under section 27 of National Rural Employment Guarantee Act, the Central Government hereby directs the State Governments to set up the office of the Ombudsman in accordance with the instructions enclosed with this order within three months of the date of this order. The expenditure incurred for this purpose will be met out of provision for administrative expenditure under NREGA.

**(Amita Sharma)**
Joint Secretary (NREGA)

Encl: Instructions on Ombudsman

To¸
Principal Secretary/Secretary
State/UT Department (Dealing with NREGA)
(All States/UTs)

Copy to:
(1) Order File.
(2) Grievance Redressal Section
(3) NIC for placing the Order on the NREGA website.
(4) IEC Division.
(5) Director (NIC).

# INSTRUCTIONS ON OMBUDSMAN

The Instructions for NREGS Ombudsman have been formulated under Section 27 of NREG Act with the objective of establishing a system for redressal of grievances and disposal of complaints relating to implementation of the NREG Act and the Schemes made under the Act by the States.

## CHAPTER - I
## PRELIMINARY

**1. Definitions**

In these Instructions unless the context otherwise requires -

1.1 'Authorised representative' means a person duly authorised by a complainant to act on his behalf and represent him in the proceedings before the Ombudsman.

1.2 'Award' means an award passed by the Ombudsman.

1.3 'Chief Secretary' means the Chief Secretary of the State/Union Territory.

1.4 'Complaint' means a representation in writing containing a grievance alleging deficiency in the implementation of NREG Act or Scheme.

1.5 'Department of Personnel' means the Department in the State Government dealing with the cadre management of the members of the Indian Administrative Service.

1.6 'Nodal Department' means the Department of the State Government which deals with the imple mentation of the NREG Act and Schemes.

1.7 'NREGA functionary or authority' means any person or persons who have been vested with powers and functions under the NREG Act and NREG Scheme.

1.8 'Ombudsman' means any person appointed under Clause 3 of the Instructions and includes the Deputy Ombudsman.

2.9 'State' means any State, and includes the Union Territory, of India.

## CHAPTER - II
## ESTABLISHMENT OF THE OFFICE OF NREGS OMBUDSMAN

2\. 2.1 On the recommendations of the Selection Committee consisting of the following persons :-

(a) Chief Secretary of the State Government —— Chairperson

(b) Representative of Union Ministry of Rural Development — Member

(c) Eminent Civil Society Person nominated by Union Ministry of Rural Development.

(d) Secretary, State Nodal Department — Member Convenor the State

Government may appoint one or more persons, but not more than three persons, as the Ombudsman in a District.

2.2 **Appointment, Tenure and Removal.**

2.2.1 The Selection Committee shall prepare a panel of suitable persons for consideration for appointment as Ombudsman. Deputy Ombudsman shall also be appointed from the same panel based on his merit position. Prior to appointment, the panel prepared by the Selection Committee may be published on the official website of the State to invite comments from the public. On expiry of 30 days of publication, the comments may be examined by the Selection Committee. All comments and objections may be settled within 30 days of the date of expiry of the period for inviting comments. Anonymous comments and objections may not be considered.

2.2.2 The selection of Ombudsman shall be made from among persons of eminent standing and impeccable integrity with at least twenty years of experience in public administration, law, academics, social work or management.

2.2.3 No person who is a member of a political party shall be considered for appointment as Ombudsman.

2.2.4 The persons selected as Ombudsman must be physically active and capable of conducting field tours, inspections and visits to remote rural locationsin the districts.

2.2.5 The Ombudsman shall be appointed for a tenure of 2 years extendable by one year based on performance appraisal or till the incumbent attains the age of 65 years, whichever is earlier. There shall be no reappointment. Performance appraisal shall be made by the Selection Committee. A copy of the performance appraisal report shall be furnished to the State Employment Guarantee Council.

2.2.6 On unsatisfactory performance, the Ombudsman may be removed by the State Government on the recommendation of the Selection Committee.

**3 Autonomy of Ombudsman**

The Ombudsman shall be independent of the jurisdiction of the Central or State Government.

**4. Remuneration**

Subject to any notification by the State Government, the Ombudsman shall be allowed a compensation of Rs.500/- per sitting.

**5. Territorial Jurisdiction**

The State Government shall specify the territorial jurisdiction of each Ombudsman in terms of a District.

## 6. Location of offices

The office of NREGS Ombudsman shall be located at the District Headquarters.

## 7. Technical and Administrative Support

In case of heavy load of cases not more than two Deputy Ombudsman may be provided to assist the Ombudsman in disposal of cases in each district. Technical and administrative support will be provided by the DRDA or any other body specified by the State Government in this behalf in whose premises the office of Ombudsman shall be located.

# CHAPTER - III

## 8. Powers and Duties

8.1 The Ombudsman shall have the powers to :

- 8.1.1 Receive complaints from NREGA workers and others on any matters specified in clause 10.
- 8.1.2 Consider such complaints and facilitate their disposal in accordance with law.
- 8.1.3 Require the NREGA Authority complained against to provide any information or furnish certified copies of any document relating to the subject matter of thecomplaint which is or is alleged to be in his possession; provided that in the event of failure of such authority to comply with the requisition without any sufficient cause, the Ombudsman may, if he deems fit, draw the inference that the nformation, if provided or copies if furnished, would be unfavourable to the concerned NREGA Authority.
- 8.1.4 Issue direction for conducting spot investigation.
- 8.1.5 Lodge FIRs against the erring parties.
- 8.1.6 Initiate proceedings suo motu in the event of any circumstance arising within his jurisdiction that may cause any grievance
- 8.1.7 Engage experts for facilitating the disposal of the complaint.
- 8.1.8 Direct redressal, disciplinary and punitive actions.
- 8.1.9 Report his findings to the Chief Secretary of the State and the Secretary, State Nodal Department for appropriate legal action against erring persons.

### 8.2 The Ombudsman shall have the following duties

- 8.2.1 To be responsible for the conduct of business in his office.
- 8.2.2 To maintain confidentiality of any information or document coming into his knowledge or possession in the course of discharging his duties

| 9 | ಬಸ್ರೂರ್ ರಾಜೀವ್ ಶೆಟ್ಟಿ | ನಿವೃತ್ತ ಸಹಾಯಕ ವ್ಯವಸ್ಥಾಪಕರು ವಿಜಯಾ ಬ್ಯಾಂಕ್ ಮತ್ತು ಹಾಲಿ ಉಪಾಧ್ಯಕ್ಷರು ರೆಡ್ ಕ್ರಾಸ್ ಸೊಸೈಟಿ # 37 ಪದ್ಮ ಜ 11.2.70ಇ, ಪ್ರಗತಿನಗರ ಉಡುಪಿ | ಉಡುಪಿ |
| 10 | ನಾಗಶೆಟ್ಟಿ ಅಣ್ಣಾರಾವ್ ಪಾಟೀಲ್ | ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರರು # 4/11/489 ಜ್ಯೋತಿ ಕಾಲೋನಿ ಬೀದರ್ | ಬೀದರ್ |

ಆದ್ದರಿಂದ ಆಯ್ಕೆ ಪಟ್ಟಿಯನ್ನು ಈ ಮೂಲಕ ಪ್ರಕಟಿಸುತ್ತಾ, ಸಾರ್ವಜನಿಕರ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ 3ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು -560001 ಫ್ಯಾಕ್ಸ್ -22353927 ಇ ಮೇಲ್ : nregs_ka@nic.in ಇವರಿಗೆ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಪಿ.ಶಿವಶಂಕರ**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು

5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ತೋಟಗಾರಿಕೆ), ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂಚಾಯತ್‌ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಗುಲ್ಬರ್ಗಾ / ಬೆಳಗಾಂ.
9. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
10. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ) ಎಂಜಿಎನ್‌ಆರ್‌ಇಜಿಎ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
14. ಹೆಚ್ಚಿನ ಪ್ರತಿಗಳು / ರಕ್ಷಾ ಕಡತ.

ಅನಸೂ ರಾಗ್ಯಸಂಪ್ಯ

## RURAL DEVELOPMENT AND PANCHAYAT RAJ SECRETARIAT
## NOTIFICATION

### No. RDP 213 EGS 2009, BANGALORE, DATED:18.01.2011

### APPOINTMENT OF OMBUDSMAN UNDER MAHATMA GANDHI NATIONAL RURAL EMPLOYMENT GUARANTEE SCHEME - 2011

In exercise of the powers conferred by Sub-section (1) of Section 27 of Mahatma Gandhi National Rural Employment Guarantee Act 2005, a selection Committee was constituted by the Central Government under the Chairmanship of a Chief Secretary to Government for the purpose of appointment of Ombudsman. The said Committee after inviting applications, selections eligible candidate duly observing formalities and the list was published in part IV A of Karnataka official gazette vide notification No. RDP: 213: EGS: 2009 on 01-06-2010 inviting objections from public;

And whereas the said gazette was made available to the public on 4th June 2010.

And whereas no objections have been received by the State Government in respect of below candidate of the said notification.

Hence Sri S V Raghavendra Rao, Retired DGM, State Bank of Mysore, 73, Vishnu chitra, 2nd cross, 4th Block, 3rd Phase, 3rd stage, BSK, Bangalore appointed as ombudsman to chikkaballapura district.

The above ombudsman shall contact Chief Executive Officers of the respective Zilla panchayat and report for duty within fifteen days from date of this Notification.

Orders and instructions issued/being issued by the Central/ State Government from time to time shall be the duties and responsibilities of the Ombudsman.

By order and in the Name of Governor of Karnataka

**N S Prasanna Kumar**
Director
MGNREGA & E/o Joint Secretary to Govt.
Rural Development & Panchayat Raj Dept.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೇಮಕವಾಗುವ ಒಂಬುಡ್ಸ್‌ಮನ್‌ರವರಿಗೆ ಕಛೇರಿ ವ್ಯವಸ್ಥೆಯನ್ನು ಕಲ್ಪಿಸುವ ಕುರಿತು.

ಓದಲಾಗಿದೆ: 1. ಕೇಂದ್ರ ಸರ್ಕಾರದ ಸಂ: ಜೆ.11011/21/2001–ಎನ್‌ಆರ್‌ಇಜಿಎ ದಿನಾಂಕ 07.09.2010

2. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯ ಸಭೆಯ ನಡವಳಿಗಳು ದಿನಾಂಕ: 22/05/2010

* * *

**ಪ್ರಸ್ತಾವನೆ**

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005 ರ ಪ್ರಕರಣ 27 ರ ಉಪ ಪ್ರಕರಣ 1ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವೀಕರಿಸಲಾಗುವ ದೂರುಗಳನ್ನು ವಿಲೇ ಮಾಡಿ ಪರಿಹರಿಸಲು ಒಂಬುಡ್ಸ್‌ಮನ್‌ಗಳನ್ನು ನೇಮಿಸುವ ಕುರಿತು ಮೇಲೆ ಓದಲಾದ ಕ್ರಮ ಸಂ.1 ರಡಿ ಆದೇಶವನ್ನು ಹೊರಡಿಸಿದೆ. ಅಲ್ಲದೇ ಈ ಪ್ರಕ್ರಿಯೆಗಾಗಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ರಾಜ್ಯದಲ್ಲಿ ಒಂಬುಡ್ಸ್‌ಮನ್‌ಗಳ ನೇಮಕ ಪ್ರಕ್ರಿಯೆಯು ಮೇಲೆ ಓದಲಾದ ಕ್ರಮ ಸಂ. 2ರಂತೆ ನೇಮಕವಾಗುವ ಒಂಬುಡ್ಸ್‌ಮನ್‌ಗಳಿಗೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸಲು ಅವಶ್ಯ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ:

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 213 ಮಗಾಂಉಖಾಯೋ 2009 ಬೆಂಗಳೂರು.**
**ದಿನಾಂಕ: 26.06.2010**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನೇಮಕವಾಗುವ ಒಂಬುಡ್ಸ್‌ಮನ್‌ಗಳ ಕರ್ತವ್ಯ ನಿರ್ವಹಣೆಗಾಗಿ ಜಿಲ್ಲಾ ಪಂಚಾಯಿತಿಯು ಈ ಕೆಳಕಂಡ ವ್ಯವಸ್ಥೆಗಳನ್ನು ಕಲ್ಪಿಸಲು ಆದೇಶಿಸಿದೆ.

1) ಅಧಿಕೃತಗೊಳಿಸಿದ ಕೆಲಸ ಕಾರ್ಯನಿರ್ವಹಿಸಲು ಅನುವಾಗುವಂತೆ ಸ್ಥಳಾವಕಾಶವನ್ನು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ನೀಡುವುದು.
2) ಮೇಲೆ ಓದಲಾದ ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ 7ರಲ್ಲಿ ತಿಳಿಸಿರುವಂತೆ ಸೂಕ್ತ ತಾಂತ್ರಿಕ ಮತ್ತು ಆಡಳಿತಾತ್ಮಕ ನೆರವು ನೀಡುವುದು (ಪ್ರತಿ ಲಗತ್ತಿಸಿದೆ.)
3) ಕಚೇರಿ ವ್ಯವಸ್ಥೆಯನ್ನು ಕಲ್ಪಿಸಲು ಹಾಗೂ ನಿರ್ವಹಣೆಗಾಗಿ ತಗಲುವ ಇತರ ವೆಚ್ಚಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಶೇಕಡಾ 6ರ ಆಡಳೀತಾತ್ಮಕ ವೆಚ್ಚದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯ ಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ತಮ್ಮ ವಿಶ್ವಾಸಿ,
ಸಹಿ/–
**(ಎನ್.ಎಸ್. ಪ್ರಸನ್ನ ಕುಮಾರ್)**
ನಿರ್ದೇಶಕರು
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

ಮಹಾ ಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು/ಧಾರವಾಡ.

ಪ್ರತಿಯನ್ನು:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರುರವರಿಗೆ ಕಳಹಿಸುತ್ತಾ ಈ ನಡವಳಿಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿ, 500 ಪ್ರತಿಯನ್ನು ಈ ಕಛೇರಿಗೆ ಒದಗಿಸಲು ಕೋರಿದೆ.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರುರವರಿಗೆ ಸಲ್ಲಿಸುತ್ತಾ ಸದರಿ ನಡವಳಿಯನ್ನು ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು.
9. ಕಾರ್ಯದರ್ಶಿಗಳು(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
10. ಕಾರ್ಯದರ್ಶಿಗಳು(ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು.
11. ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು/ಬೆಳಗಾವಿ/ಬೆಂಗಳೂರು/ಗುಲ್ಬರ್ಗಾ.
12. ಆಂತರಿಕ ಆರ್ಥಿಕ  ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
13. ಮುಖ್ಯಸ್ಥರು (ಹ&ಲೆ), ಮಗಾಂ ರಾ.ಗ್ರಾ.ಉಖಾ.ಯೋ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
14. ನಿರ್ದೇಶಕರು, ಅಬ್ದುಲ್‌ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
15. ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.

ಹೆಚ್ಚಿನ ಪ್ರತಿಗಳು/ ರಕ್ಷಾ ಕಡತ.

## RURAL DEVELOPMENT AND PANCHAYAT RAJ SECRETARIAT

## NOTIFICATION

## No. RDP 213EGS 2009, BANGALORE, DATED:31.07.2010

## APPOINTMENT OF OMBUDSMAN UNDER MAHATMA GANDHI NATIONAL RURAL EMPLOYMENT GUARANTEE SCHEME - 2010

In exercise of the powers conferred by Sub-section (1) of Section 27 of Mahatma Gandhi National Rural Employment Guarantee Act, 2005 a selection Committee is constituted under the Chairmanship of Chief Secretary to Government of Karnataka for the purpose of selection and appointment of Ombudsman by the Government of India. The said Committee after inviting applications. selected list of the eligible candidates duly observing formalities and the list was published in Karnataka special gazette dated 04-06-2010 inviting objections from public if any. Selection committee meeting was held on 18-09-2010 to verify the complaints received, after careful verification of the complaint received the selection committee has decided to appoint Shri V B Shiriyannanavar Retd. Dist. Judge, ''Samrudhi'' near old employment office, Vidyanagar, Hubli - 21 as Ombudsman to Dharwad district. Accordingly Shri V B Shiriyannanavar has been appointed as Ombudsman to Dharwad District with immediate effect.

The Ombudsman is required to follow instructions issued/ being issued by the Central / State Government from time to time apart from the regular duties and responsibilities of the Ombudsman.

By Order and in the Name of Governor of Karnataka

**N. S. Prasanna Kumar**
Director
MGNREGA & E/o Joint Secretary to Govt.
Rural Development & Panchayat Raj Dept.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ : ಗ್ರಾಅ ಪ: 213: ಉಖಾಯೋ 2009,ಬೆಂಗಳೂರು, ದಿನಾಂಕ 31-07-2010**

**ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಂಬುಡ್ಸ್‌ಮನ್‌ಗಳ ನೇಮಕಾತಿ -2010**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005ರ ಪ್ರಕರಣ 27ರ ಉಪ ಪ್ರಕರಣ 1ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಒಂಬುಡ್ಸ್‌ಮನ್‌ಗಳನ್ನು ನೇಮಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಸಮಿತಿಯು ನಿಯಮಾನುಸಾರ ಅರ್ಜಿಗಳನ್ನು ಆಹ್ವಾನಿಸಿ, ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಾರ್ವಜನಿಕರ ಆಕ್ಷೇಪಣೆಗಾಗಿ ದಿನಾಂಕ 04-06-2010 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆ /ದೂರುಗಳು ಮತ್ತು ಇತರೆ ವಿಷಯಗಳ ಸಂಬಂಧ ನೇಮಕಾತಿ ಪ್ರಕ್ರಿಯೆಯನ್ನು ಪರಿಶೀಲನೆಗಾಗಿ ಕಾಯ್ದಿರಿಸಿ, ಈ ಕೆಳಕಂಡ ಜಿಲ್ಲೆಗಳಿಗೆ ಒಂಬುಡ್ಸ್‌ಮನ್‌ಗಳನ್ನು ಅಂತಿಮವಾಗಿ ನೇಮಕಾತಿ ಮಾಡಿ ಅಧಿಸೂಚಿಸಿದೆ.

| **ಹೆಸರು ಶ್ರೀ : ಶ್ರೀಮತಿ** | **ವಿವರ** | **ನೇಮಕ ಮಾಡಿರುವ ಜಿಲ್ಲೆಯ ಹೆಸರು** |
|---|---|---|
| ಮಹಿಪಾಲ ದೇಸಾಯಿ | ನಿವೃತ್ತ ಜಿಲ್ಲಾ ನ್ಯಾಯಾಧೀಶರು, # 1444 ಮೈನ್ ಸಾಯಿನಿವಾಸ,1ನೇ 1ನೇ ಕ್ರಾಸ್, ಜುಡಿಷಿಯಲ್ ಲೇಔಟ್, ಬೆಂಗಳೂರು | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ |
| ಬಿಂ ಎಂ ಸಿಂದಗಿ | ನಿವೃತ್ತ ನ್ಯಾಯಾಧೀಶರು, ಪ್ಲಾಟ್ ನಂ 499 ಎಸ್ ಆರ್ ಕಾಲೋನಿ, ಜಿಲ್ಲಾಕೋರ್ಟ್ ಕಾಂಪ್ಲೆಕ್ಸ್ ಹಿಂಭಾಗ, ಬಿಜಾಪುರ | ಬಿಜಾಪುರ |
| ಬಿ. ರಾಮಸ್ವಾಮಿ | ನಿವೃತ್ತ ಮುಖ್ಯ ವ್ಯವಸ್ಥಾಪಕರು, ಕಾರ್ಪೋರೇಷನ್ ಬ್ಯಾಂಕ್ ಚಿಕ್ಕಮಗಳೂರು, ಶಿವಕೃಪಾ 5ನೇ ವಾರ್ಡ್ ಕುವೆಂಪುನಗರ, ಸೆಂಟ್ ಮೇರಿ ಸ್ಕೂಲ್ ಹತ್ತಿರ, ಚಿಕ್ಕಮಗಳೂರು | ಚಿಕ್ಕಮಗಳೂರು |
| ಶೀನ ಶೆಟ್ಟಿ | ಸಮಾಜ ಸೇವೆ, ಫೀಲ್ಡ್ ವ್ಯೂ, ಪಂಪ್‌ವೆಲ್ ಹತ್ತಿರ, ಕಂಕನಾಡಿ, ಮಂಗಳೂರು | ದಕ್ಷಿಣ ಕನ್ನಡ |
| ಎ ಎಂ ಗೌಣಿ | ನಿವೃತ್ತ ಕೆ ಎ ಎಸ್ ಅಧಿಕಾರಿ ಫ್ಲಾಟ್ ನಂ 63 ವಿದ್ಯಾನಗರ (ಬಡೇಪೂರ) ಬಸವೇಶ್ವರ ಆಸ್ಪತ್ರೆ ಎದುರುಗಡೆ, ಗುಲಬರ್ಗಾ | ಗುಲ್ಬರ್ಗಾ |

ಕೇಂದ್ರ ಸರ್ಕಾರವು ಈ ಸಂಬಂಧ ಹೊರಡಿಸಿರುವ ಸೂಚನೆಗಳು ಮತ್ತು ಕೇಂದ್ರ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಒಂಬುಡ್ಸ್‌ಮನ್‌ಗಳ ಕರ್ತವ್ಯ ಮತ್ತು ಜವಾಬ್ದಾರಿಗಳಾಗಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಪಿ. ರವಿಕುಮಾರ್**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ : ಗ್ರಾಅ ಪ: 213 : ಉಖಾಯೋ 2009,ಬೆಂಗಳೂರು, ದಿನಾಂಕ 20-10-2010**

**ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಂಬುಡ್ಸ್‌ಮನ್‌ಗಳ ನೇಮಕಾತಿ -2010**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005 ರ ಪ್ರಕರಣ 27ರ ಉಪ ಪ್ರಕರಣ 1ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ರಾಜ್ಯದಲ್ಲಿ ಒಂಬುಡ್ಸ್‌ಮನ್‌ಗಳ ಆಯ್ಕೆ ಹಾಗೂ ನೇಮಕಾತಿಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿರುತ್ತದೆ. ಸಮಿತಿಯು ಅರ್ಜಿಗಳನ್ನು ಆಹ್ವಾನಿಸಿ, ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ದಿನಾಂಕ 04-06-2010 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುತ್ತಾ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ದಿನಾಂಕ 18-09-2010 ರಂದು ಸಭೆ ಸೇರಿದ ಸಮಿತಿಯು ಸ್ವೀಕರಿಸಲಾದ ಆಕ್ಷೇಪಣೆ / ದೂರುಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಶ್ರೀ ವಿ ಬಿ ಶಿರಿಯಣ್ಣನವರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಸಮೃದ್ಧಿ, ಹಳೆಯ ಉದ್ಯೋಗ ಕಛೇರಿ ಹತ್ತಿರ, ವಿದ್ಯಾನಗರ, ಹುಬ್ಬಳ್ಳಿ - 21 ರವರನ್ನು ಧಾರವಾಡ ಜಿಲ್ಲೆಗೆ ತಕ್ಷಣದಿಂದಲೇ ಜಾರಿಗೆ ಬರುವಂತೆ ಒಂಬುಡ್ಸ್‌ಮನ್ ಆಗಿ ನೇಮಕ ಮಾಡಲು ತೀರ್ಮಾನಿಸಿದೆ. ಅದರಂತೆ ಶ್ರೀ ವಿ. ಬಿ. ಶಿರಿಯಣ್ಣನವರ್‌ರವರನ್ನು ಧಾರವಾಡ ಜಿಲ್ಲೆಗೆ ಒಂಬುಡ್ಸ್‌ಮನ್ ಆಗಿ ನೇಮಕ ಮಾಡಿ ಅಧಿಸೂಚಿಸಿದೆ.

ಒಂಬುಡ್ಸ್‌ಮನ್‌ರವರಿಗೆ ನಿಗದಿಪಡಿಸಿರುವ ಕರ್ತವ್ಯ ಮತ್ತು ಜವಾಬ್ದಾರಿಗಳೊಂದಿಗೆ ಕಾಲಕಾಲಕ್ಕೆ ಭಾರತ / ರಾಜ್ಯ ಸರ್ಕಾರಗಳು ಹೊರಡಿಸಿರುವ / ಹೊರಡಿಸುವ ಸೂಚನೆಗಳನ್ನು ಒಂಬುಡ್ಸ್‌ಮನ್‌ರವರು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎನ್.ಎಸ್. ಪ್ರಸನ್ನ ಕುಮಾರ್**

ನಿರ್ದೇಶಕರು

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ

ಖಾತರಿ ಯೋಜನೆ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ
## ಅಧಿಸೂಚನೆ

**ಸಂಖ್ಯೆ : ಗ್ರಾಅ ಪ : 213: ಉಖಾಯೋ 2009, ಬೆಂಗಳೂರು, ದಿನಾಂಕ 31-12-2010**
**ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಒಂಬುಡ್ಸ್‌ಮನ್‌ಗಳ ನೇಮಕಾತಿ -2010**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005 ರ ಪ್ರಕರಣ 27ರ ಉಪ ಪ್ರಕರಣ 1ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಜಿಲ್ಲೆಗಳಿಗೆ ಒಂಬುಡ್ಸ್‌ಮನ್‌ಗಳನ್ನು ನೇಮಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಸಮಿತಿಯು ನಿಯಮಾನುಸಾರ ಅರ್ಜಿಗಳನ್ನು ಆಹ್ವಾನಿಸಿ, ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಧಿಸೂಚನೆ ಸಂಖ್ಯೆ ಗ್ರಾಅ ಪ / 213 : ಉಖಾಯೋ 2009,01-06-2010 ಮತ್ತು ದಿನಾಂಕ 20-10-2010 ರಂದು ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ IV ಎ ರಲ್ಲಿ ಸಾರ್ವಜನಿಕರಿಂದ, ಇದು ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ಆಕ್ಷೇಪಣೆಗಳನ್ನು/ ದೂರುಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ

ಸದರಿ ರಾಜ್ಯಪತ್ರವು 20ನೇ ಅಕ್ಟೋಬರ್, 2010ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ ಸದರಿ ಅಧಿಸೂಚನೆಯ ಸಂಬಂಧದಲ್ಲಿ ರಾಜ್ಯ ಸರ್ಕಾರವು ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಿಲ್ಲವಾದುದರಿಂದ :

ಈ ಕೆಳಕಂಡವರುಗಳನ್ನು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಜಿಲ್ಲೆಗಳಿಗೆ ಒಂಬುಡ್ಸ್‌ಮನ್ ಆಗಿ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದೆ:

| ಕ್ರಮ ಸಂ. | ಹೆಸರು ಶ್ರೀ / ಶ್ರೀಮತಿ | ವಿವರ | ನಿಗದಿಪಡಿಸಿರುವ ಜಿಲ್ಲೆಯ ಹೆಸರು |
|---|---|---|---|
| 1 | ಬಿ ಬಿ ವಡೆಯರ್ | ನಿವೃತ್ತ ಜಿಲ್ಲಾ ಸೆಷನ್ ನ್ಯಾಯಾಧೀಶರು, ಪ್ಲಾಟ್ ನಂ. 126 ಟಿ ವಿ ಸೆಂಟರ್, ಬೆಳಗಾವಿ | ಬೆಳಗಾವಿ |
| 2 | ಶಂಬಣ್ಣ ಚೆನ್ನಬಸಪ್ಪ ಮತ್ತಿಹಳ್ಳಿ | ನಿವೃತ್ತ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಬಿ ಬ್ಲಾಕ್ ಬಸವೇಶ್ವರ ನಗರ 10ನೇ ಕ್ರಾಸ್ ಹಾವೇರಿ | ಹಾವೇರಿ |
| 3 | ಜಿ ಕೆ ಹಿರೇಮಠ | ನಿವೃತ್ತ ಸಹಾಯಕ ಸೆಕ್ಷನ್ ಕಮಿಷನರ್ ಸದರನ್ ವೆಸ್ಟ್ರನ್ ರೈಲ್ವೆ ಮಾನ್ಸಿ ಚಾಳ್ ಕೋರ್ಟ್ ಹತ್ತಿರ, ಬೆಟಗೇರಿ ಗದಗ | ಗದಗ |
| 4 | ಪಿ. ಮುನಿಸ್ವಾಮಿ | ನಿವೃತ್ತ ಐಪಿಎಸ್ ಅಧಿಕಾರಿ # ಎಂ-1 ಎಲ್ ಐ ಸಿ ಕ್ವಾರ್ಟಸ್ 15ನೇ ಸೆಕ್ಟರ್ ಜೀವನ್ ಭೀಮಾನಗರ ಬೆಂಗಳೂರು | ಕೋಲಾರ |
| 5 | ರಾಚಪ್ಪ ಚಿನಿವಾಲರ | ನಿವೃತ್ತ ನ್ಯಾಯಾಧೀಶರು, ಪ್ಲಾಟ್ ನಂ.4, 3ನೇ ಕ್ರಾಸ್, ಗವಿಶ್ರೀನಗರ ಕೊಪ್ಪಳ | ಕೊಪ್ಪಳ |
| 6 | ಹೆಚ್ ವೆಂಕಟೇಶ್ | ನಿವೃತ್ತ ಡಿಜಿಎಂ ಬಿ ಎಸ್ಎನ್ ಎಲ್ (ಫೈನಾನ್ಸ್) # ಎಂಐಜಿ-II-50 ಶ್ರೀ ಮೂಕಾಂಬಿಕ ಕೆ ಹೆಚ್ ಬಿ ಕಾಲೋನಿ 2ನೇ ಹಂತ, ಶಿವಮೊಗ್ಗ | ಶಿವಮೊಗ್ಗ |

| ಕ್ರಮ ಸಂ. | ಹೆಸರು ಶ್ರೀ / ಶ್ರೀಮತಿ | ವಿವರ | ನಿಗದಿಪಡಿಸಿರುವ ಜಿಲ್ಲೆಯ ಹೆಸರು |
|---|---|---|---|
| 7 | ಕೆ ನಾಗನಗೌಡ | ನಿವೃತ್ತ ಸಿವಿಲ್ ನ್ಯಾಯಾಧೀಶರು (ಸೀನಿಯರ್ ಡಿವಿಜನ್)II-55/138/29 ವೆಂಕಟೇಶ್ವರ ಕಾಲೋನಿ ರಾಯಚೂರು | ರಾಯಚೂರು |
| 8 | ಹೆಚ್ ಪಿ ಮಹೇಶ್‌ಗೌಡ | ನಿವೃತ್ತ ಜಂಟಿ ನಿರ್ದೇಶಕರು ಕೃಷಿ ಇಲಾಖೆ ಹಾಸನ | ಹಾಸನ |
| 9 | ಎಸ್ ಜಿ ಹಿರೇಮಠ | ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರು, ನಂ 125 ಬಿ ಹೆಚ್‌ಇಎಲ್, 2ನೇಹಂತ, ಕೆಂಪೇಗೌಡ ರಸ್ತೆ, ಎಲ್‌ಜಿ ಟೌನ್ ಹಿಂಭಾಗ, ಪಟ್ಟಣಗೆರೆ, ರಾಜರಾಜೇಶ್ವರಿ ನಗರ, ಬೆಂಗಳೂರು | ಬೆಂಗಳೂರು ಗ್ರಾಮಾಂತರ |

ಒಂಬುಡ್ಸ್‌ಮನ್ ಆಗಿ ನೇಮಕಗೊಂಡವರು ಅಧಿಸೂಚನೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ನಿಯುಕ್ತಿಗೊಳಿಸಿದ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಸಂಪರ್ಕಿಸಿ ಕರ್ತವ್ಯಕ್ಕೆ ಹಾಜರಾಗಿ ಕಾರ್ಯಭಾರವನ್ನು ನಿರ್ವಹಿಸತಕ್ಕದ್ದು.

ಕೇಂದ್ರ ಸರ್ಕಾರವು ಈ ಸಂಬಂಧ ಹೊರಡಿಸಿರುವ ಸೂಚನೆಗಳು ಮತ್ತು ಕೇಂದ್ರ / ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಒಂಬುಡ್ಸ್‌ಮನ್‌ಗಳ ಕರ್ತವ್ಯ ಮತ್ತು ಜವಾಬ್ದಾರಿಗಳಾಗಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಎನ್ ಎಸ್ ಪ್ರಸನ್ನಕುಮಾರ್**
ನಿರ್ದೇಶಕರು
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಸೂಚನ

# ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತಿನ ನಿಯಮಗಳು - 2006

ಅನಸಾ ಅನ್ಯಸಂಸ್ಥೆ

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**

**ಭಾಗ – IV-A ಬೆಂಗಳೂರು, ಮಂಗಳವಾರ, ಜೂನ್ ೧೩, ೨೦೦೬ (ಜೇಷ್ಠ ೨೩, ಶಕ ವರ್ಷ ೧೯೨೮) ನಂ. ೭೧೨**

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ : 41 : ಉಖಾಯೋ (ಭಾಗ–1), 05, ಬೆಂಗಳೂರು ದಿನಾಂಕ 13ನೇ ಜೂನ್, 2006**
**ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು ನಿಯಮಗಳು – 2006**

ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು ನಿಯಮಗಳು, 2006ರ ಕರಡನ್ನು ದಿನಾಂಕ 16.05.2006ರ ಕರ್ನಾಟಕ ರಾಜ್ಯ IV-a ಪತ್ರ ಭಾಗ ರಲ್ಲಿ ಪ್ರಕಟಿಸಿ, ಆ ದಿನಾಂಕದಿಂದ 15 ದಿನಗಳೊಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ:

ಮತ್ತು ಸದರಿ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ದಿನಾಂಕ 16.05.2006ರಂದು ಲಭ್ಯವಾಗುವಂತೆ ಮಾಡಿರುವುದರಿಂದ; ಮತ್ತು ಸದರಿ ಕರಡಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಏಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದೇ ಇರುವುದರಿಂದ ಈಗ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ, 42) 12ನೇ ಪ್ರಕರಣದೊಂದಿಗೆ ಓದಲಾದ 32ನೇ ಪ್ರಕರಣದ 2(ಸಿ) ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಗಿನಂತೆ ನಿಯಮಗಳನ್ನು ರಚಿಸುತ್ತದೆ. ಎಂದರೆ;

**1. ಹೆಸರು ಮತ್ತು ಪ್ರಾರಂಭ**

(1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು ನಿಯಮಗಳು, 2006 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:– ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,**

(ಎ) 'ಅಧಿನಿಯಮ' ಎಂದರೆ, ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮ, 2005, (2005 ಕೇಂದ್ರ ಅಧಿನಿಯಮ 42)

(ಬಿ) 'ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ' ಎಂದರೆ, ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ.

(ಸಿ) 'ನಿಧಿ' ಎಂದರೆ, ಅಧಿನಿಯಮದ 21ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ.

(ಡಿ) 'ಕಾರ್ಯಕ್ರಮ ಅಧಿಕಾರಿ' ಎಂದರೆ ತಾಲೂಕಿನ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿ.

(ಇ) 'ಯೋಜನೆ' ಎಂದರೆ, ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಅಧಿಸೂಚಿಸಿದ 'ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'

(ಎಫ್) 'ರಾಜ್ಯ ಪರಿಷತ್ತು' ಎಂದರೆ, ಈ ನಿಯಮಗಳ ಮೇರೆಗೆ ರಚಿಸಲಾಗಿರುವ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು.

3. ರಾಜ್ಯ ಪರಿಷತ್ತಿನ ರಚನೆ – ರಾಜ್ಯ ಸರ್ಕಾರವು ಈ ಕೆಳಕಂಡ ಸದಸ್ಯರುಗಳಿರುವ 'ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತನ್ನು ರಚಿಸುವುದು.

| | | |
|---|---|---|
| **(1)** | **ಈ ಕೆಳಗಿನವರು ರಾಜ್ಯ ಪರಿಷತ್ತಿನ ಅಧಿಕೃತ ಸದಸ್ಯರಾಗಿರುತ್ತಾರೆ.** | |
| (i) | ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಅಧ್ಯಕ್ಷರು |
| (ii) | ಅಭಿವೃದ್ಧಿ ಆಯುಕ್ತರು | ಉಪಾಧ್ಯಕ್ಷರು |
| (iii) | ಪ್ರಧಾನ ಕಾರ್ಯದರ್ಶಿ/ ಕಾಯದರ್ಶಿ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಸದಸ್ಯರು |
| (iv) | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| (v) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| (vi) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | ಸದಸ್ಯರು |
| (vii) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ | ಸದಸ್ಯರು |
| (viii) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, (ಕೃಷಿ), ಕೃಷಿ ಮತ್ತು ತೋಟಗಾರಿಕೆ ಇಲಾಖೆ | ಸದಸ್ಯರು |
| (ix) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, (ತೋಟಗಾರಿಕೆ) ಕೃಷಿ ಮತ್ತು ತೋಟಗಾರಿಕೆ ಇಲಾಖೆ | ಸದಸ್ಯರು |
| (x) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ | ಸದಸ್ಯರು |
| (xi) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ | ಸದಸ್ಯರು |
| (xii) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಾರ್ಮಿಕ ಇಲಾಖೆ | ಸದಸ್ಯರು |
| (xiii) | ಕಾರ್ಯದರ್ಶಿ, ಸಂಪನ್ಮೂಲಗಳು, ಆರ್ಥಿಕ ಇಲಾಖೆ | ಸದಸ್ಯರು |
| (vix) | ಕಾರ್ಯದರ್ಶಿ, ವೆಚ್ಚ ಆರ್ಥಿಕ ಇಲಾಖೆ | ಸದಸ್ಯರು |
| (xv) | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | ಸದಸ್ಯರು |
| (xvi) | ಆಯುಕ್ತ/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| (xvii) | ಆಯುಕ್ತ/ ನಿರ್ದೇಶಕರು, ಕಾರ್ಮಿಕ ಇಲಾಖೆ | ಸದಸ್ಯರು |
| (xviii) | ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಸದಸ್ಯರು |
| (xix) | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ (ಉದ್ಯೋಗ ಖಾತರಿ ಯೋಜನೆಯ ಉಸ್ತುವಾರಿ ವಹಿಸಿಕೊಂಡಿರುವ) | ಕಾರ್ಯದರ್ಶಿ |
| **(2)** | **ಈ ಕೆಳಗಿನವರು ರಾಜ್ಯ ಪರಿಷತ್ತಿನ ಅಧಿಕಾರೇತರ ಸದಸ್ಯರಾಗಿರುವರು** | |
| (i) | ಗ್ರಾಮ ಪಂಚಾಯಿತಿಯ ಐವರು ಅಧ್ಯಕ್ಷರು | ಸದಸ್ಯರು |
| (ii) | ತಾಲ್ಲೂಕು ಪಂಚಾಯಿತಿಯ ಐವರು ಅಧ್ಯಕ್ಷರು | ಸದಸ್ಯರು |
| (iii) | ಜಿಲ್ಲಾ ಪಂಚಾಯಿತಿಯ ಐವರು ಅಧ್ಯಕ್ಷರು | ಸದಸ್ಯರು |
| (iv) | ಕಾರ್ಮಿಕ ಸಂಘಗಳು ಮತ್ತು ಸೌಲಭ್ಯ ವಂಚಿತ ಗುಂಪುಗಳಿಂದ ಮೂವರು | ಸದಸ್ಯರು |
| **(3)** | **ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವ ವಿಧಾನ ಮತ್ತು ಪದಾವಧಿ** | |
| (i) | ರಾಜ್ಯ ಪರಿಷತ್ತಿನ ಅಧ್ಯಕ್ಷರು ಅಧಿಕಾರೇತರ ಸದಸ್ಯರನ್ನು ನಾಮನಿರ್ದೇಶಿಸತಕ್ಕದ್ದು | |
| (ii) | ರಾಜ್ಯ ಪರಿಷತ್ತಿಗೆ ನಾಮ ನಿರ್ದೇಶಿತರಾದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಎರಡು ವರ್ಷ ಪದಾವಧಿಯನ್ನು ಹೊಂದಿರುವರು, ಪದನಾಮಾಂಕಿತ ನಾಮನಿರ್ದೇಶನ ಮಾಡಿರುವಲ್ಲಿ ಉತ್ತರವರ್ತಿಯು ಪದಾವಧಿಯ ಉಳಿದ ಅವಧಿಗೆ ಸದಸ್ಯನಾಗಿರತಕ್ಕದ್ದು. | |
| (iii) | ಕಾರ್ಮಿಕರು ಮತ್ತು ದುರ್ಬಲ ಗುಂಪುಗಳ ಪ್ರತಿನಿಧಿಗಳ ನಾಮನಿರ್ದೇಶನದ ಅವಧಿ ಎರಡು ವರ್ಷಗಳಾಗಿರುತ್ತವೆ. ಪದನಾಮಾಂಕಿತ ನಾಮನಿರ್ದೇಶನದ ಮಾಡಿರುವಲ್ಲಿ ಉತ್ತರವರ್ತಿಯು ಪದಾವಧಿಯ ಉಳಿದ ಅವಧಿಗೆ ಸದಸ್ಯನಾಗಿರತಕ್ಕದ್ದು. | |

(i) ಮೂರನೇ ಒಂದಕ್ಕಿಂತ ಕಡಿಮೆಯಿಲ್ಲದಷ್ಟು ಅಧಿಕಾರೇತರ ಸದಸ್ಯರು ಮಹಿಳೆಯರಾಗಿರತಕ್ಕದ್ದು

(iii) ಮೂರನೇ ಒಂದಕ್ಕಿಂತ ಕಡಿಮೆಯಿಲ್ಲದಷ್ಟು ಅಧಿಕಾರೇತರ ಸದಸ್ಯರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು.

1. ಸಮಿತಿಗಳ ರಚನೆ: ರಾಜ್ಯ ಪರಿಷತ್ತಿನ ಅಧ್ಯಕ್ಷರು, ರಾಜ್ಯ ಪರಿಷತ್ತಿನ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅದಕ್ಕೆ ನೆರವಾಗಲು ಈ ಮುಂದಿನ ಸಮಿತಿಗಳನ್ನು ರಚಿಸತಕ್ಕದ್ದು. ಸಮಿತಿಯು ಅಗತ್ಯವೆನಿಸಿದಾಗಲೆಲ್ಲಾ ಸಭೆ ಸೇರತಕ್ಕದ್ದು. ಸಾಮಾನ್ಯವಾಗಿ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಮುಂಚಿತವಾಗಿ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು. ಅದಾಗ್ಯೂ ಪರಿಷತ್ತಿನ ಅಧ್ಯಕ್ಷರು, ಅಭಿವೃದ್ಧಿ ಆಯುಕ್ತರು, ಪ್ರಧಾನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಪ್ರಧಾನ ಕಾರ್ಯದರ್ಶಿ ಆರ್ಥಿಕ ಇಲಾಖೆ ಇವರ ಶಿಫಾರಸ್ಸುಗಳ ಮೇಲೆ ಪರಿಷತ್ತಿನ ಅನುಸಮರ್ಥನೆಗೊಳಪಟ್ಟು, ಅನುಷ್ಠಾನಕ್ಕೆ ಅನುಮೋದನೆ ನೀಡುತ್ತಾರೆ.

**(1) ಅದ್ಯತಾ ಕಾಮಗರಿಗಳ ಸಮಿತಿ:**

ಈ ಸಮಿತಿಯು, ರಾಜ್ಯ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಯೋಜನಾ ಪ್ರಸ್ತಾವಗಳನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಸಿದ್ದಪಡಿಸುತ್ತದೆ. ಈ ಸಮಿತಿಗೆ ಈ ಕೆಳಕಂಡವರು ಸದಸ್ಯರಾಗಿರುತ್ತಾರೆ.

| | |
|---|---|
| 1) ಅಭಿವೃದ್ಧಿ ಆಯುಕ್ತರು | – ಅಧ್ಯಕ್ಷರು |
| 2) ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | – ಉಪಾಧ್ಯಕ್ಷರು |
| 3) ರಾಜ್ಯ ಪರಿಷತ್ತಿನ ಸದಸ್ಯ ಕಾರ್ಯದರ್ಶಿ | – ಸದಸ್ಯ ಕಾರ್ಯದರ್ಶಿ |

ಇತರ ಸದಸ್ಯರನ್ನು ಸಮಿತಿಯ ಅಧ್ಯಕ್ಷರು ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ನಾಮನಿರ್ದೇಶಿಸತಕ್ಕದ್ದು, ಸಮಿತಿಯು ನಿರ್ದಿಷ್ಟ ಉದ್ದೇಶಗಳಿಗಾಗಿ ಪರಿಷತ್ತಿನ ಸದಸ್ಯರಲ್ಲದ ಇತರ ಸದಸ್ಯರು, ಸಂಸ್ಥೆಗಳು, ತಜ್ಞರನ್ನು ಸಹ ಆಯ್ಕೆ ಮಾಡಿಕೊಳ್ಳಬಹುದು.

(2) ಅಧಿನಿಯಮದ 1ನೇ ಅನುಸೂಚಿಯ 1(...)ನೇ ಖಂಡದ ಮೇರೆಗೆ ಪ್ರಸ್ತಾವಗಳನ್ನು ಅಂತಿಮಗೊಳಿಸುವ ಸಮಿತಿ:

ಈ ಸಮಿತಿಗೆ ಈ ಕೆಳಕಂಡವರು ಸದಸ್ಯರಾಗಿರುತ್ತಾನೆ.

| | |
|---|---|
| 1) ರಾಜ್ಯ ಪರಷತ್ತಿನ ಅಧ್ಯಕ್ಷರು | – ಅಧ್ಯಕ್ಷರು |
| 2) ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | – ಉಪಾಧ್ಯಕ್ಷರು |
| 3) ರಾಜ್ಯ ಪರಿಷತ್ತಿನ ಸದಸ್ಯ ಕಾರ್ಯದರ್ಶಿ | – ಸದಸ್ಯ ಕಾರ್ಯದರ್ಶಿ |

ಪರಿಷತ್ತಿನ ಅಧ್ಯಕ್ಷರು ಸಮಿತಿಯ ಇತರ ಸದಸ್ಯರನ್ನು ನಾಮನಿರ್ದೇಶಿಸತಕ್ಕದ್ದು, ಸಮಿತಿಯು ನಿರ್ದಿಷ್ಟ ಉದ್ದೇಶಗಳಿಗಾಗಿ ರಾಜ್ಯ ಪರಿಷತ್ತಿನ ಸದಸ್ಯರಲ್ಲದಿರುವ ಇತರ ಸದಸ್ಯರು, ಸಂಸ್ಥೆಗಳು, ತಜ್ಞರನ್ನು ಸಹ – ಆಯ್ಕೆ ಮಾಡಿಕೊಳ್ಳಬಹುದು.

**3) ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸಮಿತಿ:–** ಈ ಸಮಿತಿಯು, ಕೂಲಿಗೆ, ಸಾಮಗ್ರಿಗಳಿಗೆ, ನಿರುದ್ಯೋಗ ಭತ್ಯೆ ಮತ್ತು ಆಡಳಿತ ವೆಚ್ಚಗಳಿಗಾಗಿ ಮಾನದಂಡಗಳನ್ನು ರೂಪಿಸುತ್ತದೆ ಮತ್ತು ರಾಜ್ಯ ನಿಧಿಯಿಂದ ನೀಡಿದ ನಿಧಿಗಳ ಬಿಡುಗಡೆ ಬಗ್ಗೆ ಮೇಲ್ವಿಚಾರಣೆ ಮಾಡುತ್ತದೆ. ಈ ಸಮಿತಿಗೆ ಕೆಳಕಂಡವರು ಸದಸ್ಯರಾಗಿರುತ್ತಾರೆ.

| | |
|---|---|
| (1) ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | – ಅಧ್ಯಕ್ಷರು |
| (2) ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | – ಸದಸ್ಯರು |
| (3) ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ | – ಸದಸ್ಯರು |
| (4) ರಾಜ್ಯ ಪರಿಷತ್ತಿನ ಸದಸ್ಯ ಕಾರ್ಯದರ್ಶಿ | –ಸದಸ್ಯ ಕಾರ್ಯದರ್ಶಿ |

ಸಮಿತಿಯು ನಿರ್ದಿಷ್ಟ ಉದ್ದೇಶಗಳಿಗಾಗಿ ರಾಜ್ಯ ಪರಿಷತ್ತಿನ ಸದಸ್ಯರಲ್ಲದ ಇತರ ಸದಸ್ಯರು, ಸಂಸ್ಥೆಗಳು, ತಜ್ಞರನ್ನು ಸಹ – ಆಯ್ಕೆ ಮಾಡಿಕೊಳ್ಳಬಹುದು.

4) **ಕೂಲಿ ಮತ್ತು ದುಡಿಮೆಯ ಗುಣಮಟ್ಟಗಳ ಸಮಿತಿ:–** ಈ ಸಮಿತಿಯು, ವಿವಿಧ ರೀತಿಯ ಕೆಲಸಗಳಿಗಾಗಿ ಕೂಲಿ ಮತ್ತು ದುಡಿಮೆಯ ಗುಣಮಟ್ಟವನ್ನು ಶಿಫಾರಸ್ಸು ಮಾಡುತ್ತದೆ. ಈ ಸಮಿತಿಗೆ ಕೆಳಕಂಡವರು ಸದಸ್ಯರಾಗಿರುತ್ತಾರೆ.

| | | |
|---|---|---|
| (1) | ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಅಧ್ಯಕ್ಷರು |
| (2) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ ಕಾರ್ಮಿಕ ಇಲಾಖೆ | ಸದಸ್ಯರು |
| (3) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ | ಸದಸ್ಯರು |
| (4) | ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ | ಸದಸ್ಯರು |
| (5) | ಕಾರ್ಯದರ್ಶಿ ವೆಚ್ಚ ಆರ್ಥಿಕ ಇಲಾಖೆ | ಸದಸ್ಯರು |
| (6) | ಆಯುಕ್ತರು/ ನಿರ್ದೇಶಕರು, ಕಾರ್ಮಿಕ ಇಲಾಖೆ | ಸದಸ್ಯರು |
| (7) | ಆಯುಕ್ತರು/ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ | ಸದಸ್ಯರು |
| (8) | ಮುಖ್ಯ ಇಂಜೀನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಸದಸ್ಯರು |
| (9) | ಕಾರ್ಮಿಕರ ಸಂಘಗಳನ್ನು ಪ್ರತಿನಿಧಿಸುವ ಅಧಿಕಾರೇತರ ಸದಸ್ಯರು | ಸದಸ್ಯರು |
| (10) | ರಾಜ್ಯ ಪರಿಷತ್ತಿನ ಕಾರ್ಯದರ್ಶಿ | ಸದಸ್ಯ ಕಾರ್ಯದರ್ಶಿ |

ಸಮಿತಿಯು ನಿರ್ದಿಷ್ಟ ಉದ್ದೇಶಗಳಿಗಾಗಿ ರಾಜ್ಯ ಪರಿಷತ್ತಿನ ಸದಸ್ಯರಲ್ಲದ ಇತರ ಸದಸ್ಯರು, ಸಂಸ್ಥೆಗಳು, ತಜ್ಞರನ್ನು ಸಹ–ಆಯ್ಕೆ ಮಾಡಿಕೊಳ್ಳಬಹುದು.

5. **ಆಡ್‌ಹಾಕ್ ಸಮಿತಿಗಳ ರಚನೆ:–** ಪರಿಷತ್ತಿನ ಅಧ್ಯಕ್ಷರು, ಯಾವುದೇ ವಿಷಯವನ್ನು ರಾಜ್ಯ ಪರಿಷತ್ತಿನ ಪರಿಗಣನೆಗೆ ಶಿಫಾರಸ್ಸು ಮಾಡಬಹುದು. ಇದಕ್ಕಾಗಿ ತಾವು ನಿರ್ಧರಿಸಬಹುದಾದಷ್ಟು ಸಂಖ್ಯೆಯ ಮತ್ತು ಸದಸ್ಯರನ್ನೊಳಗೊಂಡ ಅಡ್‌ಹಾಕ್ ಸಮಿತಿಗಳನ್ನು ರಚಿಸಬಹುದು.

6. **ರಾಜ್ಯ ಪರಿಷತ್ತು ಮತ್ತು ಅದರ ಸಮಿತಿಗಳ ಸಭೆಗಳನ್ನು ನಡೆಸುವುದು**

ರಾಜ್ಯ ಪರಿಷತ್ತು ಮತ್ತು ಅದರ ಸಮಿತಿಗಳ ಸಭೆಗಳನ್ನು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ನಡೆಸತಕ್ಕದ್ದು. ಆದರೂ, ರಾಜ್ಯ ಪರಿಷತ್ತಿನ ಅಧ್ಯಕ್ಷ ಅಥವಾ ಸಮಿತಿಗಳ ಅಧ್ಯಕ್ಷರು ಯಾವುದೇ ಜಿಲ್ಲೆಯ ಅಥವಾ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಸಭೆಗಳನ್ನು ನಡೆಸಲು ನಿರ್ಧರಿಸಬಹುದು. ಪರಿಷತ್ತಿನ ಅಧೀಕಾರೇತರ ಸದಸ್ಯರು ತಮ್ಮ ಪ್ರಯಾಣದ ವೆಚ್ಚವನ್ನು ರಾಜ್ಯ ಸರ್ಕಾರದ 1ನೇ ವರ್ಗದ ಅಧಿಕಾರಿಗಳಿಗೆ ಅನ್ವಯವಾಗುವ ದರದಂತೆ ಭರಿಸಿಕೊಳ್ಳಲು ಹಕ್ಕು ಉಳ್ಳವರಾಗಿರತಕ್ಕದ್ದು.

7. **ರಾಜ್ಯ ಪರಿಷತ್ತಿನ ಪ್ರಕಾರ್ಯಗಳು ಈ ಕೆಳಗಿನಂತಿವೆ:**

(1) ಈ ಅಧಿನಿಯಮದ 4ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಲಾದ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ನಿರ್ವಹಿಸುವುದು;

(2) ಯೋಜನೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳು ಮತ್ತು ಅವುಗಳ ಅನುಷ್ಠಾನದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

(3) ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ನಿರ್ವಹಿಸುವುದು;

(4) ಆದ್ಯತೆಯ ಕೆಲಸಗಳನ್ನು ನಿರ್ಧರಿಸುವುದು;

(5) ಮೇಲ್ವಿಚಾರಣೆ ಮತ್ತು ಪರಿಹಾರ ನೀಡಿಕೆ ಕಾರ್ಯವಿಧಾನಗಳನ್ನು ಕಾಲಕಾಲಕ್ಕೆ ಪುನರಾವಲೋಕಿಸುವುದು ಮತ್ತು ಸುಧಾರಣೆಗೆ ಶಿಫಾರಸ್ಸು ಮಾಡುವುದು;

(6) ಈ ಅಧಿನಿಯಮದ ಮತ್ತು ಅದರ ಮೇರೆಗಿನ ಯೋಜನೆಗಳನ್ನು ಕುರಿತ ಮಾಹಿತಿಯನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ಪ್ರಸಾರ ಮಾಡುವುದನ್ನು ಉತ್ತೇಜಿಸುವುದು;

(7) (ಅ) ನೋಂದಾಯಿತ ಕಾರ್ಮಿಕರ, ಸರ್ಕಾರೇತರ ಸಂಸ್ಥೆಗಳ ಮತ್ತು ಸ್ವ-ಸಹಾಯ ಗುಂಪುಗಳನ್ನೊಳಗೊಂಡ ಪಾಲುಗಾರರು ಹಾಗೂ ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವ ಪ್ರಮುಖ ವ್ಯಕ್ತಿಗಳಿಗೆ;

(ಆ) ಪಂಚಾಯತ್ ರಾಜ್ ಸಂಸ್ಥೆಗಳು, ಸ್ವ-ಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳ ಸದಸ್ಯರುಗಳಂಥ ಮುಖ್ಯ ಪಾಲುದಾರರು, ಅಂಚೆ ಕಛೇರಿ ಸಿಬ್ಬಂದಿ, ಬ್ಯಾಂಕಿಂಗ್, ವಿಮೆ, ಲೆಕ್ಕಪರಿಶೋಧಕರುಗಳಂಥ ಬೆಂಬಲ ಸೇವಾ ಗುಂಪುಗಳು, ಸಂಘಟಿತ ಮತ್ತು ಅಸಂಘಟಿತ ಕೃಷಿ ಕಾರ್ಮಿಕರು, ಅಂಗವಿಕಲ ವ್ಯಕ್ತಿಗಳು, ಮಹಿಳೆಯರು ಸಮಾಜದ ಸಾಮಾಜಿಕ, ದುರ್ಬಲ ವರ್ಗಗಳು, ಮುಖ್ಯವಾಗಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ –

– ತರಬೇತಿಗಾಗಿ ಅನುಕೂಲ ಕಲ್ಪಿಸುವುದು, ಸಂಘಟಿಸುವುದು ಮತ್ತು ಸಮನ್ವಯಗೊಳಿಸುವುದು.

(8) ರಾಜ್ಯದಲ್ಲಿ ಅಧಿನಿಯಮ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಮೇಲುಸ್ತುವಾರಿ ಮಾಡುವುದು ಮತ್ತು ಕೇಂದ್ರ ಪರಿಷತ್ತಿನೊಡನೆ ಅಂಥ ಅನುಷ್ಠಾನವನ್ನು ಸಮನ್ವಯಗೊಳಿಸುವುದು.

(9) ರಾಜ್ಯ ಸರ್ಕಾರವು, ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾದ ವಾರ್ಷಿಕ ವರದಿಯನ್ನು ಸಿದ್ಧಪಡಿಸುವುದು;

(10) ಅನುಷ್ಠಾನದ ಪ್ರಕ್ರಿಯೆಯನ್ನು ಮತ್ತು ಪರಿಯೋಜನೆಯ ಅಡಿಯಲ್ಲಿ ಕೈಗೊಳ್ಳಲಾದ ಯೋಜನೆಗಳ ಸಾಮಾಜಿಕ ಪ್ರಯೋಜನಗಳನ್ನು ಸ್ವತಂತ್ರ ಅಧ್ಯಯನಗಳ ಮೂಲಕ ಮೌಲ್ಯನಿರ್ಧರಣೆ ಮಾಡುವುದು.

(11) ರಾಷ್ಟ್ರೀಯ ಉದ್ಯೋಗ ಖಾತರಿ ಪರಿಷತ್ತು ಅಥವಾ ರಾಜ್ಯ ಸರ್ಕಾರ ಅದಕ್ಕೆ ವಹಿಸಬಹುದಾದ ಇತರ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವುದು.

**8. ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ**

(1) ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಈ ಯೋಜನೆಯ ಅನುಷ್ಠಾನಕ್ಕಾಗಿ ಒದಗಿಸಲಾದ ನಿಧಿಗಳನ್ನು ಒಳಗೊಂಡ 'ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ' ಎಂದು ಕರೆಯಲಾಗುವ ನಿಧಿ ಇರತಕ್ಕದ್ದು.

(2) ರಾಜ್ಯ ಪರಿಷತ್ತು ಹೊರಡಿಸಿದ ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳನ್ನು ಆಧರಿಸಿ ನಿಧಿಯಿಂದ ವೆಚ್ಚವನ್ನು ಮಾಡತಕ್ಕದ್ದು.

(3) ನಿಧಿಯು, ಈ ಮುಂದಿನ ಉಪನಿಧಿಗಳನ್ನು ಒಳಗೊಳ್ಳುವುದು.

(i) **ಕೂಲಿ ನಿಧಿ:** ಈ ನಿಧಿಯು, ಪರಿಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗಳಲ್ಲಿ ನಿಯೋಜಿತರಾದ ಕುಶಲಿಗಳಲ್ಲದ ಕಾರ್ಮಿಕರ ವೆಚ್ಚಗಳನ್ನು ಭರಿಸುತ್ತದೆ.

(ii) **ಸಾಮಾಗ್ರಿಗಳ ನಿಧಿ:** ಈ ನಿಧಿಯು, ಪರಿಯೋಜನೆಯಲ್ಲಿ ಅನುಷ್ಠಾನಗೊಳಿಸಲಾದ ಯೋಜನೆಗಳಲ್ಲಿ ತೊಡಗಿಸಿದ ಸಾಮಗ್ರಿಗಳು, ನಿಯೋಜಿತರಾದ ಅರೆಕುಶಲ ಮತ್ತು ಕುಶಲ ಕಾರ್ಮಿಕರುಗಳ ವೆಚ್ಚವನ್ನು ಭರಿಸುತ್ತದೆ.

(iii) **ಆಡಳಿತ ವೆಚ್ಚಗಳ ನಿಧಿ:**

(1) ಈ ನಿಧಿಯು ಪರಿಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಅನುಷ್ಠಾನ ಏಜೆನ್ಸಿಗಳು ಮಾಡಿದ ಆಡಳಿತ ವೆಚ್ಚಗಳನ್ನು ಮತ್ತು

(2) ರಾಜ್ಯ ಪರಿಷತ್ತಿನ ಆಡಳಿತ ವೆಚ್ಚಗಳನ್ನು ಭರಿಸುತ್ತದೆ.

(iv) **ನಿರುದ್ಯೋಗ ಭತ್ಯೆ ನಿಧಿ:** ಈ ನಿಧಿಯು ಈ ಅಧಿನಿಯಮದ ಅಡಿಯಲ್ಲಿ ನೀಡಲಾಗುವ ನಿರುದ್ಯೋಗ ಭತ್ಯೆಯ ವೆಚ್ಚವನ್ನು ಭರಿಸುತ್ತದೆ.

**9. ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿಯ ಅಭಿರಕ್ಷೆ**

(1) ರಾಜ್ಯ ಮಟ್ಟದಲ್ಲಿ ರಾಜ್ಯ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯು ನಿಧಿಯ ಅಭಿರಕ್ಷಕನಾಗಿರತಕ್ಕದ್ದು.

(2) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು, ನಿಧಿಯ ಅಭಿರಕ್ಷಕನಾಗಿರತಕ್ಕದ್ದು.

(3) ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿಯು, ನಿಧಿಯ ಅಭಿರಕ್ಷಕನಾಗಿರತಕ್ಕದ್ದು.

(4) ಎಲ್ಲಾ ಅನುಷ್ಠಾನ ಮತ್ತು ಕಾರ್ಯನಿರ್ವಾಹಕ ಏಜೆನ್ಸಿಗಳು, ನಿಧಿಯಿಂದ ಅವುಗಳಿಗೆ ಬಿಡುಗಡೆಯಾದ ಹಣದ ನಿಜವಾದ, ಸರಿಯಾದ ಮತ್ತು ಸೂಕ್ತವಾದ ಲೆಕ್ಕವನ್ನು ಕಾರ್ಯಕ್ರಮ ಅಧಿಕಾರಿಗೆ, ಜಿಲ್ಲಾ ಕಾರ್ಯಕ್ರಮ

ಸಮನ್ವಯಾಧಿಕಾರಿಗೆ ಮತ್ತು ರಾಜ್ಯ ಸರ್ಕಾರಕ್ಕೆ, ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಹಾಗೆ ಮಾಡಲು ಕೇಳಿದಾಗಲೆಲ್ಲ ಒಪ್ಪಿಸಲು ಬದ್ಧವಾಗಿರತಕ್ಕದ್ದು.

**10. ಅಭಿರಕ್ಷಕನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು**

(1) ಸಾಮಾನ್ಯ ಅಥವಾ ವಿಶೇಷ ಮಾರ್ಗಸೂಚಿಗಳಿಗನುಸಾರವಾಗಿ ಪರಿಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮ ಅಧಿಕಾರಿಗೆ ನಿಧಿಯಿಂದ ಹಣವನ್ನು ಬಿಡುಗಡೆ ಮಾಡುವಂತೆ ಏರ್ಪಾಟು ಮಾಡಲು ಅಭಿರಕ್ಷಕನು ಜವಾಬ್ದಾರನಾಗಿರತಕ್ಕದ್ದು.

(2) ಪ್ರಸ್ತಾವದ ಪೂರ್ವ ಅನುಮೋದನೆಯ ತರುವಾಯ ಕಾರ್ಯಕ್ರಮ ಅಧಿಕಾರಿಗಳಿಗೆ ನಿಧಿಗಳನ್ನು ಬಿಡುಗಡೆ ಮಾಡಲು, ಡೆಸ್ಕ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ, ಪಂಚಾಯತ್ ರಾಜ್‌ನ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿನ ಯಾರೇ ಅಧಿಕಾರಿಗೆ, ಅಭಿರಕ್ಷಕನು ಅಧಿಕಾರಿಗಳನ್ನು ಪ್ರತ್ಯಾಯೋಜಿಸಬಹುದು.

(3) ಅಭಿರಕ್ಷಕನು, ನಿಧಿಯ ಸ್ವೀಕೃತಿಗಳು, ಬಿಡುಗಡೆ ಮಾಡಲಾದ ಹಣ, ವೆಚ್ಚಗಳು ಮತ್ತು ಶಿಲ್ಕುಗಳಿಗೆ ಸಂಬಂಧಪಟ್ಟ ಮಾಸಿಕ ವರದಿಯನ್ನು ಯೋಜನೆಯ ನಮೂನೆ–5ಬಿ ಯಲ್ಲಿ ರಾಜ್ಯ ಪರಿಷತ್ತಿಗೆ ಒದಗಿಸಕ್ಕದ್ದು.

(4) ಅಭಿರಕ್ಷಕನು, ರಾಜ್ಯ ಪರಿಷತ್ತು ನಿರ್ದೇಶಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು, ಅದು, ನಿಧಿಯ ಸ್ವೀಕೃತಿಗಳು ಮತ್ತು ನಿಧಿಯಿಂದ ಅನುಷ್ಠಾನ ಏಜೆನ್ಸಿಗಳಿಗೆ ಬಿಡಗಡೆ ಮಾಡಿದ ಮೊತ್ತ, ನಿಧಿಯಿಂದ ಮಾಡಲಾದ ವೆಚ್ಚ ಮತ್ತು ಒಟವಾಡೆಯಾಗದ ಸ್ವೀಕೃತಿಗಳು ಮತ್ತು ಅನುಷ್ಠಾನ ಏಜೆನ್ಸಿಗಳ ಮಟ್ಟದಲ್ಲಿ ಬಳಕೆಯಾಗದ ಮೊತ್ತಗಳನ್ನೊಳಗೊಂಡ ನಿಧಿಯಲ್ಲಿರುವ ಶಿಲ್ಕು ಇವುಗಳನ್ನು ತೋರಿಸುವ ವಾರ್ಷಿಕ ಹಣಕಾಸು ವಿವರವನ್ನು ಒಳಗೊಂಡಿತಕ್ಕದ್ದು.

(5) ಅಭಿರಕ್ಷಕನು, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಪಡೆದ ನಿಧಿಗಳ ಬೇಡಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಪರಿಷತ್ತು ಅಥವಾ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರಪತ್ರಗಳಲ್ಲಿ ವರದಿಗಳನ್ನು ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು ಅವರ ಹೆಸರಿನಲ್ಲಿ

**ಎನ್. ಶಿವಶೈಲಂ**
ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

# ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಯೋಜನೆ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು - 2006

ಅನುವಾದ ಸಂಸ್ಥೆ

# ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು – 2006

ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳು – 2006ರ ಕರಡನ್ನು ದಿನಾಂಕ 16.05.2006ರ ಕರ್ನಾಟಕ ರಾಜ್ಯ 2-A ಪತ್ರ ಭಾಗ ರಲ್ಲಿ ಪ್ರಕಟಿಸಿ, ಆ ದಿನಾಂಕದಿಂದ 15 ದಿನಗಳೊಳಗಾಗಿ ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ:

ಮತ್ತು ಸದರಿ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ದಿನಾಂಕ 16.05.2006ರಂದು ಲಭ್ಯವಾಗುವಂತೆ ಮಾಡಿರುವುದರಿಂದ; ಮತ್ತು ಸದರಿ ಕರಡಿನ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳು ಬಾರದೇ ಇರುವುದರಿಂದ ಈಗ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ, 42) 32ನೇ ಪ್ರಕರಣದ (1)ನೇ ಉಪ – ಪ್ರಕರಣ 7ನೇ ಪ್ರಕರಣದ (6)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಗಿನಂತೆ ನಿಯಮಗಳನ್ನು ರಚಿಸುತ್ತದೆ. ಎಂದರೆ;

1. **ಹೆಸರು ಮತ್ತು ಪ್ರಾರಂಭ –** ಈ ನಿಯಮಗಳನ್ನು ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು ನಿಯಮಗಳು, 2006 ಎಂದು ಕರೆಯತಕ್ಕದ್ದು.
   (2) ಇವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:– ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,**

(1) 'ಅಧಿನಿಯಮ' ಎಂದರೆ, ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮ, 2005, (2005 ಕೇಂದ್ರ ಅಧಿನಿಯಮ 42)

(2) 'ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ' ಎಂದರೆ, ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ.

(3) 'ನಿಧಿ' ಎಂದರೆ, ಅಧಿನಿಯಮದ 21ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿ.

(4) 'ಕಾರ್ಯಕ್ರಮ ಅಧಿಕಾರಿ' ಎಂದರೆ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿ.

(5) 'ಯೋಜನೆ' ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಅಧಿಸೂಚಿಸಿದ 'ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'

(6) 'ರಾಜ್ಯ ಪರಿಷತ್ತು' ಎಂದರೆ, ಈ ನಿಯಮಗಳ ಮೇರೆಗೆ ರಚಿಸಲಾಗಿರುವ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತು.

(7) 'ನಿರುದ್ಯೋಗ ಭತ್ಯೆ' ಎಂದರೆ, ಈ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ಮಾಡಲಾಗುವ ಸಂದಾಯ.

3. ಗ್ರಾಮ ಪಂಚಾಯಿತಿಯು, ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ರೂಪಿಸಲಾದ ಯೋಜನೆಗನುಸಾರವಾಗಿ ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡಲು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

4. ನಿರುದ್ಯೋಗ ಭತ್ಯೆಯ ಸಂದಾಯದ ಕಾರ್ಯವಿಧಾನ ಮತ್ತು ಸಂದಾಯದ ರೀತಿಯನ್ನು ಈ ಅಧಿನಿಯಮದ 4ನೇ ಪ್ರಕರಣದಮೇರೆಗೆ ರೂಪಿಸಿದ ಯೋಜನೆಯಲ್ಲಿ ನಿಯಮಿಸತಕ್ಕದ್ದು.

**5. ನಿರುದ್ಯೋಗ ಭತ್ಯೆಯನ್ನು ಕ್ಲೇಮು ಮಾಡುವುದಕ್ಕಾಗಿ ಪೂರೈಸಬೇಕಾದ ಅತ್ಯಗತ್ಯ ಷರತ್ತುಗಳು**

(ಎ) ವ್ಯಕ್ತಿಯು, 'ಉದ್ಯೋಗ ಅರಸುವವರು ಹಾಗೂ ಉದ್ಯೋಗ ರಿಜಿಸ್ಟರು' ಪುಸ್ತಕದಲ್ಲಿ ಹೆಸರು ನೋಂದಾಯಿಸಿರತಕ್ಕದ್ದು. ಎಂದರೆ ಆ ಕುಟುಂಬವು ಉದ್ಯೋಗ ಕಾರ್ಡು ಹೊಂದಿರತಕ್ಕದ್ದು ಮತ್ತು ಉದ್ಯೋಗ ಕಾರ್ಡಿನಲ್ಲಿ ಆ ವ್ಯಕ್ತಿಯನ್ನು ವೈಯಕ್ತಿಕ ಸಂಖ್ಯೆಯಿಂದ ಗುರುತಿಸುವಂತಿರತಕ್ಕದ್ದು.

(ಬಿ) ವ್ಯಕ್ತಿಯು, ಕೆಲಸಕ್ಕಾಗಿ ಅರ್ಜಿಹಾಕಿರತಕ್ಕದ್ದು, ಮತ್ತು 'ಉದ್ಯೋಗ ಬೇಡಿಕೆ ರಿಜಿಸ್ಟರು' ಪುಸ್ತಕದಲ್ಲಿ ಅರ್ಜಿಯನ್ನು ನೋಂದಾಯಿಸಿರತಕ್ಕದ್ದು.

(ಸಿ) ಕೆಲಸಕ್ಕಾಗಿ ಸಲ್ಲಿಸಿದ ಅರ್ಜಿಯ ದಿನಾಂಕದಿಂದ ಹದಿನೈದು ದಿನಗಳು ಅಥವಾ ಅವನು/ ಅವಳು ಕೆಲಸಕ್ಕಾಗಿ ಮಾಡಿಕೊಂಡ ಅರ್ಜಿಯ ದಿನಾಂಕ – ಇವುಗಳಲ್ಲಿ ಯಾವುದು ನಂತರದ್ದೋ ಅಂದು – ಉದ್ಯೋಗವನ್ನು ಒದಗಿಸಬಾರದು.

**6. ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡದಿರುವುದಕ್ಕೆ ಇರುವ ಷರತ್ತುಗಳು ಮತ್ತು ಪರಿಸ್ಥಿತಿಗಳು**

ಎ. ಗ್ರಾಮ ಪಂಚಾಯಿತಿ,

i) ಕೆಲಸಕ್ಕಾಗಿ ಅರ್ಜಿ ಮಾಡಿಕೊಂಡ ನೋಂದಾಯಿತ ಕಾರ್ಮಿಕನನ್ನು, ನಡೆಯುತ್ತಿರುವ ಕಾಮಗಾರಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವೆಂದು;

ii) 50 ಜನಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರು ಲಭ್ಯವಿರುವ ಕಾರಣಕ್ಕಾಗಿ ಗ್ರಾಮ ಪಂಚಾಯಿತಿಯೂ ಸೇರಿದಂತೆ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಏಜೆನ್ಸಿಗೆ ಹೊಸ ಕಾಮಗಾರಿಗಳನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲವೆಂದು;

iii) ನೋಂದಾಯಿತ ಕಾರ್ಮಿಕನಿಗೆ ಕೆಲಸವನ್ನು ಒದಗಿಸಬೇಕಾದ ದಿನಾಂಕದಿಂದ ಅಥವಾ ಕಾರ್ಮಿಕನು ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ ಅವಧಿಯಲ್ಲಿ ಅರಣ್ಯೀಕರಣ ಕಾಮಗಾರಿಗಳು ಇಲ್ಲವೆಂದು;

– ಗೊತ್ತುವಳಿಯ ಮೂಲಕ ನಿರ್ಧರಿಸಿದ್ದರೆ,

ಬಿ. ಈ ಅಧಿನಿಯಮದ 7ನೇ ಪ್ರಕರಣದ (3)ನೆಯ ಉಪಪ್ರಕರಣದ ಉಪಬಂಧಗಳಿಗೆ ಸಂಬಂಧಿಸಿದಂತೆ ನಿರುದ್ಯೋಗ ಭತ್ಯೆ ಸಂದಾಯದ ಹೊಣೆಗಾರಿಕೆಯು ನಿಂತುಹೋಗಿದ್ದರೆ;

ಸಿ. ಕೇಂದ್ರ ಸರ್ಕಾರವು, ಈ ಅಧಿನಿಯಮದ 27ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನಿಧಿಗಳನ್ನು ನಿಲ್ಲಿಸಲು ಆದೇಶಿಸಿದೆ,

– ಆಗ ನಿರುದ್ಯೋಗ ಭತ್ಯೆಯನ್ನು ಸಂದಾಯ ಮಾಡಲಾಗುವುದಿಲ್ಲ.

7. ನಿರುದ್ಯೋಗ ಭತ್ಯೆಯು ಕುಟುಂಬದ ಉದ್ಯೋಗ ಹಕ್ಕುದಾರಿಕೆಯನ್ನು ಕಡಿತಗೊಳಿಸತಕ್ಕದ್ದಲ್ಲ ನಿರುದ್ಯೋಗ ಭತ್ಯೆಯು ಒದಗಿಸಿದ್ದರೂ ಸಹ ಆ ಕುಟುಂಬವು ಒಂದು ಹಣಕಾಸು ವರ್ಷದಲ್ಲಿ ಕನಿಷ್ಠ 100 ದಿನಗಳ ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ್ದಲ್ಲಿ ಅದನ್ನು ಪಡೆಯಲು ಹಕ್ಕು ಹೊಂದಿರುವುದು ಮುಂದುವರೆಯತಕ್ಕದ್ದು.

**8. ನಿರುದ್ಯೋಗ ಭತ್ಯೆ ನಿಧಿಯ ಸ್ಥಾಪನೆ**

ನಿರುದ್ಯೋಗ ಭತ್ಯೆ ನಿಧಿಯು, ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ನಿಧಿಯ ಭಾಗವಾಗಿರತಕ್ಕದ್ದು, ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ನಿರುದ್ಯೋಗ ಭತ್ಯೆಯ ಕ್ಲೇಮುಗಳನ್ನು ಭರಿಸಲು ಸದರಿ ನಿಧಿಗೆ ಹಣ ಒದಗಿಸತಕ್ಕದ್ದು.

**9. ನಿಧಿಯಿಂದ ಮಾಡಲಾದ ಬಟವಾಡೆಗಳ ಮಾಸಿಕ ವರದಿ**

1. ಕಾರ್ಯಕ್ರಮ ಅಧಿಕಾರಿಯು, ನಿರುದ್ಯೋಗ ಭತ್ಯೆಗಳ ನಿಧಿಯ ಅಡಿಯಲ್ಲಿ ಮಾಡಲಾದ ವೆಚ್ಚದ ಮಾಸಿಕ ವರದಿಯನ್ನು ಈ ಯೋಜನೆಯ ನಮೂನೆ–4 ಇಯಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
2. ರಾಜ್ಯ ನಿಧಿಯ ಅಭಿರಕ್ಷಕನು, ವೆಚ್ಚದ ಹಾಗೂ ನಿರುದ್ಯೋಗ ಭತ್ಯೆ ನಿಧಿಯಿಂದ ಬಿಡುಗಡೆ ಮಾಡಿದ ಹಣದ ಮಾಸಿಕ ವರದಿಯನ್ನು ಈ ಯೋಜನೆಯ ನಮೂನೆ–5–ಬಿ–ಯಲ್ಲಿ ರಾಜ್ಯ ಪರಿಷತ್ತಿಗೆ ಪರಿಗಣನೆಗಾಗಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು ಅವರ ಹೆಸರಿನಲ್ಲಿ

**ಎನ್. ಶಿವಶೈಲಂ**
ಸರ್ಕಾರದ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

# ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಯೋಜನೆ
# ಕುಂದುಕೊರತೆ ನಿವಾರಣೆ ನಿಯಮಗಳು
# – 2009

# ಕರ್ನಾಟಕ ರಾಜ್ಯಪತ್ರ


**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**

**ಭಾಗ – IV-A ಬೆಂಗಳೂರು, ಬುದವಾರ, ಮಾರ್ಚ ೨೫, ೨೦೦೯ (ಚೈತ್ರ ೪, ಶಕ ವರ್ಷ ೧೯೩೦) ನಂ. ೧೭೩**


## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ : 116 : ಉಖಾಯೋ 07, ಬೆಂಗಳೂರು ದಿನಾಂಕ 13ನೇ ಮಾರ್ಚ್, 2009**

**ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದುಕೊರತೆ ನಿವಾರಣೆ)ನಿಯಮಗಳು – 2009**

ಕರ್ನಾಟಕ ರಾಜ್ಯ ಉದ್ಯೋಗ ಕಾತರಿ ಪರಿಷತ್ತು ನಿಯಮಗಳು, 2005, (2005ರ ಕೇಂದ್ರ ಅಧಿನಿಯಮದ ಸಂಖ್ಯೆ 42)ರ 19ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದು ಕೊರತೆ ನಿವಾರಣೆ) ನಿಯಮಗಳು, 2008ರ ಕರಡನ್ನು ಸದರಿ ಅಧಿನಿಯಮದ 32ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಅಧಿಸೂಚನೆ ಸಂಖೆಯ ಗ್ರಾಅಪ 116 ಉಖಾಯೋ 2007, ದಿನಾಂಕ 28–9–2008ರನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ 6–11–2008ರ ಭಾಗ 4ಎರಲ್ಲಿ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಇದು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ

ಸದರಿ ರಾಜ್ಯಪತ್ರವು 6ನೇ ನವಂಬರ್, 2008ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಸದರಿ ಕರಡಿನ ಸಂಬಂದಲ್ಲಿ ರಾಜ್ಯ ಸರ್ಕಾರವು ಯಾವುದೇ ಅಕ್ಷೇಪಣೆಗಳು ಮತ್ತು ಸಲಹೆಗಳು ಸ್ವೀಕರಿಸಿಲ್ಲದಿರುವುದರಿಂದ;

ಈಗ ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರ (2005ರ ಕೇಂದ್ರ ಅಧಿನಿಯಮ, 42) 19ನೇ ಪ್ರಕರಣದೊಂದಿಗೆ ಓದಲಾದ 32ನೇ ಪ್ರಕರಣದ (1)ನೇ ಉಪ ಪ್ರಕರಣ ಮತ್ತು 2(ಡಿ) ಉಪ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಮುಂದಿನ ನಿಯಮಗಳನ್ನು ರಚಿಸುತ್ತದೆ. ಎಂದರೆ;

**1. ಹೆಸರು ಮತ್ತು ಪ್ರಾರಂಭ**

(1) ಈ ನಿಯಮಗಳನ್ನು ಕರ್ನಾಟಕ ರಾಷ್ಟ್ರಿಯ ಉದ್ಯೋಗ ಖಾತರಿ (ಕುಂದು ಕೊರತೆ ನಿವಾರಣೆ) ನಿಯಮಗಳು, 2006 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು –**

(ಎ) 'ಅಧಿನಿಯಮ' ಎಂದರೆ, ರಾಷ್ಟ್ರೀಯ ಉದ್ಯೋಗ ಖಾತರಿ ಅಧಿನಿಯಮ, 2005, (2005ರ ಕೇಂದ್ರ ಅಧಿನಿಯಮ ಸಂಖ್ಯೆ 42)

(ಬಿ) 'ಮಂತ್ರಾಲಯ' ಎಂದರೆ ಗ್ರಾಮೀಣಾ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ;

(ಸಿ) 'ಕುಂದು ಕೊರತೆ'ಯು, ವೈಯಕ್ತಿಕವಾಗಿ ಲಿಖಿತ ಅಥವಾ ಮೌಖಿಕವಾಗಿ ಸ್ವೀಕರಿಸಲಾದ, ಕಛೇರಿಯ ದೂರವಾಣಿ ಮೂಲಕ, ದೂರವಾಣಿ ಸಹಾಯವಾಣಿ ಮೂಲಕ, ಈ–ಮೇಲ್ ಮೂಲಕ ಎನ್‌ಆರ್‌ಇಜಿಎ ವೆಬ್‌ಸೈಟ್ ಮೂಲಕ ಬರುವ ಎಲ್ಲ ದೂರುಗಳನ್ನು ಒಳಗೊಳ್ಳುತ್ತದೆ.

(ಡಿ) ಈ ನಿಯಮಗಳಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ ಪದಗಳು ಮತ್ತು ವ್ಯಾಖ್ಯಾನಗಳು ಅಧಿನಿಯಮದಲ್ಲಿ ಇವುಗಳಿಗೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

3. **ಕುಂದು ಕೊರತೆ ನಿವಾರಣ ಅಧಿಕಾರಿ (ಜಿಆರ್‌ಓ):** ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಷೇತ್ರ ಮಟ್ಟದಲ್ಲಿ ಕಾರ್ಯಕ್ರಮ ಅಧಿಕಾರಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿ ಮತ್ತು ರಾಜ್ಯಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಮೇರೆಗಿನ ಆಯುಕ್ತರು ಕುಂದು ಕೊರತೆ ನಿವಾರಣಾ ಅಧಿಕಾರಿಗಿದ್ದರತಕ್ಕದ್ದು.

**4. ದೂರುಗಳನ್ನು ಸಲ್ಲಿಸುವ ವಿಧಾನ**

(1) ಯಾರೇ ವ್ಯಕ್ತಿಯು ಈ ಉದ್ದೇಶಕ್ಕಾಗಿ 3ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ವಿವಿಧ ಮಟ್ಟಗಳಲ್ಲಿನ ಕುಂದು–ಕೊರತೆ ನಿವಾರಣ ಆಧಿಕಾರಿಗೆ ತನ್ನ ಕುಂದು ಕೊರತೆಯನ್ನು ಸಲ್ಲಿಸಬಹುದು.

(2) ದೂರುಗಳನ್ನು ವ್ಯಕ್ತಿಯು ಲಿಖಿತದಲ್ಲಿ ಅಥವಾ ಮೌಖಿಕವಾಗಿ ಅಥವಾ ಅಂಚೆ ಮೂಲಕ ಅಥವಾ ದೂರು ಪೆಟ್ಟಿಗೆಗಳ ಮೂಲಕ ಅಥವಾ ಇ–ಮೇಲ್ ಮೂಲಕ ಅಥವಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ವೆಬ್‌ಸೈಟ್ ಮೂಲಕ ಅಥವಾ ಸ್ಥಾಪಿಸಲಾದ ದೂರವಾಣಿ ಸಹಾಯವಾಣಿ ಮೂಲಕ ಸಲ್ಲಿಸಬಹುದು; ದೂರನ್ನು ಮೌಖಿಕವಾಗಿ ಮಾಡಿದರೆ, ಕಾರ್ಯಕ್ರಮ ಅಧಿಕಾರಿ ಅಥವಾ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ದೂರುಗಳ ರಿಜಿಸ್ಟರ್‌ನಲ್ಲಿ ವಿವರಗಳನ್ನು ದಾಖಲಿಸಬೇಕು ಮತ್ತು ಫಿರ್ಯಾದುದಾರರನ ಸಹಿ ಅಥವಾ ಹೆಬ್ಬೆರಳು ಗುರುತನ್ನು ಪಡೆಯಬೇಕು.

(3)ದೂರುಗಳನ್ನು ನಿರ್ಧಿಷ್ಟ ವಿವರಗಳು ಮತ್ತು ಫಿರ್ಯಾದುದಾರ ಸಂಪರ್ಕ ಮಾಹಿತಿ ಸಹಿತ ಸಲ್ಲಿಸತಕ್ಕದ್ದು.

**5. ದೂರುಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ದೂರು ಪೆಟ್ಟಿಗಳನ್ನು ಇಡಬೇಕು**

(ಅ) ದೂರು ಪೆಟ್ಟಿಗೆಗಳನ್ನು ಕುಂದು ಕೊರತೆಗಳ ನಿವಾರಣಾ ಅಧಿಕಾರಿಗಳ ಕಛೇರಿಯಲ್ಲಿ ದೂರುಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಎದ್ದು ಕಾಣುವ ಸ್ಥಳಗಳಲ್ಲಿ ಇಡತಕ್ಕದ್ದು.

(ಆ) ದೂರು ಪೆಟ್ಟಿಗೆಗಳನ್ನು ಕನಿಷ್ಠ ಮೂರು ದಿನಗಳಿಗೆ ಒಮ್ಮೆಯಾದರೂ ತೆರೆಯತಕ್ಕದ್ದು ಮತ್ತು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

**6. ದೂರುಗಳನ್ನು ವಿಚಾರಣೆ ಮಾಡುವುದು**

(1) ಕುಂದುಕೊರತೆ ನಿವಾರಣಾ ಅಧಿಕಾರಿಯು ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇಡಲಾದ ರಿಜಿಸ್ಟರ್‌ನಲ್ಲಿ ದೂರುಗಳ ವಿವರಗಳನ್ನು ನಮೂದಿಸತಕ್ಕದ್ದು. ದೂರನ್ನು ಸ್ವೀಕರಿಸಿದ ಮೇಲೆ ಸ್ಥಳ ಪರಿಶೀಲನೆ ಅಥವಾ ತಪಾಸಣೆಯ ಮೂಲಕ ವಿಚಾರಣೆಯನ್ನು ಏಳು ದಿನಗಳ ಒಳಗಾಗಿ ಪೂರ್ಣಗೊಳಿಸತಕ್ಕದ್ದು. ಮೇಲಿನ ಹಂತದ ದೂರಗಳಿಗೆ ಕೆಳ ಹಂತಗಳವರೆಗಿನ ದೂರುಗಳನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ವೆಬ್ ಸೈಟ್ ಮೂಲಕ ಅಥವಾ ಇ–ಮೇಲ್ ಮೂಲಕ ವರ್ಗಾಯಿಸಬಹುದು. ಒಂದು ಮಟ್ಟದಿಂದ ಮತ್ತೊಂದು ಮಟ್ಟಕ್ಕೆ ದೂರುಗಳ ವರ್ಗಾವಣೆಯಲ್ಲಿನ ವಿಳಂಬವು ದೂರುಗಳ ವಿಲೆಯಲ್ಲಿ ವಿಳಂಬಕ್ಕೆ ಕಾರಣ ಎಂದು ಹೇಳತಕ್ಕದ್ದಲ್ಲ.

(2) ಕುಂದುಕೊರತೆಗಳ ನಿವಾರಣಾ ಅಧಿಕಾರಿಯು, ದೂರುಗಳ ವಿಲೆಗೆ ಹೆಚ್ಚಿನ ಕಾಲ ಬೇಕೆಂದು ಅಭಿಪ್ರಾಯಪಟ್ಟಿದ್ದರೆ, ವಿಳಂಬಕ್ಕೆ ಕಾರಣಗಳನ್ನು ತಿಳಿಸಿ ಫಿರ್ಯಾದುದಾರರಿಗೆ ಮಧ್ಯಂತರ ಉತ್ತರವನ್ನು ನೀಡಬೇಖು. ಕುಂದು – ಕೊರತೆಗಳ ನಿವಾರಣಾ ಅಧಿಕಾರಿಯು ಅಂಥ ದೂರುಗಳ ವಿಲೆ ಮಾಡಲು ಎರಡು ವಾರಗಳಿಗಿಂತ ಹೆಚ್ಚು ಕಾಲ ತೆಗೆದುಕೊಳ್ಳತಕ್ಕದ್ದಲ್ಲ.

**7. ವಿಚಾರಣೆ ನಿರ್ಣಯಗಳ ಮೇಲೆ ಕ್ರಮ**

(1) ಹಣಕಾಸು ಕ್ರಮದೋಷಗಳಿಗೆ ಸಂಬಂಧಿಸಿದಂತೆ ಮೇಲು ನೋಟಕ್ಕೆ ಸಾಕ್ಷ್ಯವಿರುವ ಪ್ರಕರಣದಲ್ಲಿ ಕುಂದು ಕೊರತೆ ನಿವಾರಣಾ ಅಧೀಕಾರಿಯು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸತಕ್ಕದ್ದು.

(2) ಹಿಂಸೆ ಅಥವಾ ಬೆದರಿಕೆಯಂಥ ಭಾರತ ದಂಢ ಸಂಹಿತೆಯ ಇತರ ಉಲ್ಲಂಘನೆಗಳ ಪ್ರಕರಣದಲ್ಲಿ, ಫಿರ್ಯಾದುದಾರನು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸತಕ್ಕದ್ದು. ಕುಂದು – ಕೊರತೆ ನಿವಾರಣಾ ಅಧಿಕಾರಿಯು ಪ್ರಥಮ ಮಾಹಿತಿ ವರದಿ ಸಲ್ಲಿಸಲು ಅನುಕೂಲ ಮಾಡಿಕೊಳ್ಳತಕ್ಕದ್ದು.

(3) ಹಕ್ಕುಗಳ ಉಲ್ಲಂಘನೆಯನ್ನು ಗಮನಿಸಿದ ಪ್ರಕರಣದಲ್ಲಿ ಅದನ್ನು ಬಾಧಿತಗೊಂಡ ವ್ಯಕ್ತಿಗೆ ಅಥವಾ ಪಕ್ಷಕಾರನಿಗೆ ತಿಳಿಸುವುದು ಸಂಬಂಧಪಟ್ಟ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಒಂದು ವಾರದ ಒಳಗಾಗಿ ಮತ್ತು ಹದಿನೈದು ದಿನಗಳು ಮೀರದಂತೆ ಅಂಥ ಕುಂದುಕೊರತೆ ನಿವಾರಣೆಗೆ ಸಂಬಂಧಪಟ್ಟ ಅಧಿಕಾರಿಯು ಜವಾಬ್ದಾರನಾಗಿರುತ್ತಾನೆ.

**8. ಫಿರ್ಯಾದುದಾರನಿಗೆ ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸುವುದು** – ಫಿರ್ಯಾದುದಾರನಿಗೆ ದೂರುಗಳ ಬಗೆಗೆ ಕೈಗೊಂಡ ಕ್ರಮವನ್ನು ಲಿಖಿತದಲ್ಲಿ ಶೀಘ್ರವಾಗಿ ಅಥವಾ ಮೂವತ್ತು ದಿನಗಳ ಒಳಗಾಗಿ ಇದರಲ್ಲಿ ಯಾವುದು ಮೊದಲೋ ಆ ಅವಧಿಯಲ್ಲಿ ತಿಳಿಸತಕ್ಕದ್ದು.

**9. ದೂರುಗಳ ವಿಲೆಯ ಮೇಲ್ವಿಚಾರಣೆ**

(ಎ) ದೂರುಗಳ ವಿಲೆಯ ಮೇಲ್ವಿಚಾರಣೆಗಾಗಿ ಜಿಲ್ಲಾಮಟ್ಟದಲ್ಲಿ ಒಂದು ಸಮಿತಿಯು ಇರಬೇಕು. ಸಮಿತಿಯು ಒಂದು ತಿಂಗಳಲ್ಲಿ ಕನಿಷ್ಠ ಒಂದು ಬಾರಿಯಾದರೂ ವಿಲೆಯ ಪ್ರಗತಿಯನ್ನು ಪರಿಶೀಲಿಸಬೇಕು. ಸದಸ್ಯ ಕಾರ್ಯದರ್ಶಿಯು ಸಮಿತಿಯ ಮುಂದೆ ಯಾವುದೇ ಮಟ್ಟದಲ್ಲಿ ದೂರುಗಳ ವಿಲೆಯಲ್ಲಿನ ವಿಫಲತೆಯ ಬಗ್ಗೆ ಯಾವುದೇ ವರದಿಗಳನ್ನು ಮಂಡಿಸತಕ್ಕದ್ದು. ಈ ಸಮಿತಿಯು, ಪ್ರಕ್ರಿಯೆಯನ್ನು, ಅನುಸರಿಸಿದ ಮೇಲೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ (ಎನ್‌ಆರ್‌ಇಜಿಎ) 25ನೇ ಪ್ರಕರಣದ ಮೇರೆಗೆ ದಂಡಗಳನ್ನು ವಿಧಿಸುವ ಅಧಿಕಾರಗಳನ್ನು ಹೊಂದಿರುತ್ತದೆ.

**(ಬಿ) ಸಮಿತಿಯ ರಚನೆಯು ಈ ಕೆಳಕಂಡಂತೆ ಇರತಕ್ಕದ್ದು:**

| | | |
|---|---|---|
| (i) | ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ii) | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯ |
| (iii) | ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನುಗಳ ಸೇವಾ ಪ್ರಾಧಿಕಾರ | ಸದಸ್ಯ |
| (iv) | ಜಿಲ್ಲೆಯ ಒಬ್ಬ ವಿಭಾಗಾಧಿಕಾರ ಮತ್ತು ಒಬ್ಬ ತಹಶೀಲ್ದಾರ್ (ಅಧ್ಯಕ್ಷರಿಂದ ನಾಮ ನಿರ್ದೇಶಿತ) | ಸದಸ್ಯ |
| (v) | ಜಿಲ್ಲೆಯ ಕಾರ್ಯನಿರ್ವಾಹಕ ಅಧಿಕಾರಿ, (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿಂದ ನಾಮನಿರ್ದೇಶಿತ) | ಸದಸ್ಯ |
| (vi) | ಎನ್.ಆರ್.ಇ.ಜಿ.ಎ. ಜೊತೆಯಲ್ಲಿ ಪಾಲ್ಗೊಂಡ ಯಾವುದೇ ಸ್ವಯಂ ಸೇವಾ ಸಂಸ್ಥೆಯ ಒಬ್ಬ ಸದಸ್ಯ (ಅಧ್ಯಕ್ಷರಿಂದ ನಾಮನಿರ್ದೇಶಿತ) | ಸದಸ್ಯ |
| (vii) | ಎನ್‌ಆರ್‌ಇಜಿಎ ನಿರ್ವಹಿಸುವ ಜಿಲ್ಲಾ ಪಂಚಾಯಿತಿಯ ಉಪ–ಕಾರ್ಯದರ್ಶಿ | ಸದಸ್ಯ ಕಾರ್ಯದರ್ಶಿ |

**10. ಮಾಸಿಕ ವರದಿಗಳು:** ಕೇಂದ್ರ ಸರ್ಕಾರವು ಸಿದ್ಧಪಡಿಸಿದ ನಮೂನೆಗಳಲ್ಲಿ ಮಾಸಿಕ ವರದಿಗಳನ್ನು ಗ್ರಾಮ ಪಂಚಾಯಿತಿಯಿಂದ ಕಾರ್ಯಕ್ರಮ ಅಧಿಕಾರಿಗೆ ಮತ್ತು ಕಾರ್ಯಕ್ರಮ ಅಧಿಕಾರಿಯಿಂದ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಮತ್ತು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯಿಂದ ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರದಿಂದ ಮಂತ್ರಾಲಯಕ್ಕೆ ಕಳುಹಿಸಬಹುದು.

**11. ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ದೂರಿನ ಪ್ರಕಟಣೆ:** ಜಿಲ್ಲಾ ಮಟ್ಟದ ದೂರು ಮೇಲ್ವಿಚಾರಣಾ ಪ್ರಾಧಿಕಾರಿಯು ಪ್ರತಿಯೊಂದು ವಿದ್ಯಾಮಾನವನ್ನು ಸ್ಥಳೀಯ ವೃತ್ತಪತ್ರಿಕೆಯೊಂದರಲ್ಲಿ ಪ್ರಕಟಿಸತಕ್ಕದ್ದು.

**12. ಅಪೀಲುಗಳು**

(1) ಪಂಚಾಯಿತಿ ಮಟ್ಟದ ಗ್ರಾಮ ಕುಂದುಕೊರತೆ ನಿವಾರಣಾ ಅಧಿಕಾರಿಯ ಆದೇಶಗಳ ವಿರುದ್ಧ ಅಪೀಲುಗಳ:ನ್ನು ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸತಕ್ಕದ್ದು. ಕಾರ್ಯಕ್ರಮ ಅಧಿಕಾರಿಯು ಆದೇಶಗಳ ವಿರುದ್ಧ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಗೆ ಸಲ್ಲಿಸತಕ್ಕದ್ದು. ಮತ್ತು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯ ವಿರುದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಮೇರೆಗೆ ರಾಜ್ಯ ಆಯುಕ್ತರಿಗೆ ಸಲ್ಲಿಸತಕ್ಕದ್ದು.

(2) ಎಲ್ಲ ಅಪೀಲುಗಳನ್ನು ಆದೇಶ ನೀಡಿದ 45 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು

(3) ಎಲ್ಲ ಅಪೀಲುಗಳನ್ನು ಒಂದು ತಿಂಗಳ ಒಳಗಾಗಿ ವಿಲೆ ಮಾಡತಕ್ಕದ್ದು.

(ಡಿ) ದೋಷಿಯನ್ನು ಅಧಿನಿಯಮದ ಉಪಬಂಧಗಳ ಪ್ರಕಾರ ಶಿಕ್ಷಿಸತಕ್ಕದ್ದು.

**13. ಹೊಣೆಗಾರಿಕೆ:** ಕಾರ್ಯಕ್ರಮ ಅಧಿಕಾರಿಯು ಗ್ರಾಮ ಪಂಚಾಯಿತಿ ಮತ್ತು ಕ್ಷೇತ್ರ ಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಮತ್ತು ನಿಯಮಗಳ ಪಾಲನೆ ಮತ್ತು ಕಡ್ಡಾಯ ಜಾರಿಗೆಗೆ ಹೊಣೆಯಾಗಿರುತ್ತಾನೆ. ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಜಿಲ್ಲಾ ಮಟ್ಟದಲ್ಲಿ ಪಾಲನೆ ಮತ್ತು ಕಡ್ಡಾಯ ಜಾರಿಗೆಗೆ ಹೊಣೆಯಾಗಿರುತ್ತಾನೆ. ರಾಜ್ಯ ಕುಂದು ಕೊರತೆ ನಿವಾರಣಾ ಅಧಿಕಾರಿಯು ರಾಜ್ಯ ವ್ಯಾಪ್ತಿಯಲ್ಲಿ ಪೂರ್ಣಪಾಲನೆ ಮತ್ತು ಕಡ್ಡಾಯ ಜಾರಿಗೆಗೆ ಹೊಣೆಯಾಗಿರುತ್ತಾನೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಪಿ.ಸಿ. ಜಾಫರ್**
ನಿರ್ದೇಶಕರು
ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ,
ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಯೋಜನೆ ಸಾಮಾಜಿಕ ಲೆಕ್ಕ ಪರಿಶೋಧನೆ ನಿಯಮಗಳು – 2011

ಅನಾಸಾ ರಾಜ್ಯಸಂಸ್ಥೆ

## MINISTRY OF RURAL DEVELOPMENT AND PANCHAYAT RAJ SECRETARIAT, BANGALORE

## NOTIFICATION

### No RDPR 186(1)/ MGNREGA2011 Bangalore Dated 10.01.2012
### Scheme Implementation of Social Audit Rules 2011 in Karnataka

Whereas Government of India enacted the National Rural Employment Guarantee Act 2005 dated 07.09.2005 and framed Audit of Schemes Rules 2011 on 30.06.2011, in exercise of powers conferred in sub-section(1) of section 24 of MGNREGA 2005. Whereas the rule 3 of the said notification makes it compulsory to State Government to notify the Social Audit Scheme Rules 2011, in exercise of the powers coferred under section 32 of MGNREGA 2005 the Government of Karnataka hereby make and notify the following Scheme implementation of Social Audit in Karnataka.

**I. Short-title and comencement**

1. These rules may be called the MGNREGA Scheme implementation of Social Audit rules 2011 in Karnataka.
2. For the purpose of these rules, audit of schemes shall include social audit,
3. They shall come into force on the date of their publication in the official Gazette.

**II. Constitution of Social Audit unit**

For the implementation of Social Audit by Gram Sabhas an independent society would be formed consisting of such facilitators on such terms and conditions as it deems fit. The entire Social Audit Directorate will function under the bye-law provisions of the society to be registered under the Societies Registration act 1960 and also the directions and guidelines issued by Government of India and Government of Karnataka from time to time.

| | | |
|---|---|---|
| 1. | Director | Head of the Organization. |
| 2. | Joint Director | To assist Director. (On deputation/Retd., persons) |
| 3. | State Resource persons | 4 in number. |
| 4. | District Resource Persons | 30 Resource persons (One for each District) |
| 5. | Taluk Resource persons | One resource person for 12 Gram Panchayats. |
| 6. | Gram Panchayat resource | 2 to 5 resource persons for each Gram Panchayat depending on number of works, the number of persons will be notified by the Director. |

A retired all India Service Person /a retired selection grade civil servant of State Service shall be the head of the social audit.

**III. Duties and Responsibilities of Officers and staff of Social Audit Unit :-**

**1. Director**

- To manage day to day functioning of the society.
- To ensure that all policy level decisions related to the society are implemented.
- Undertake all activities necessary to fulfill the objective and vision of the society.
- Undertake all activites necessary to fulfill the Provisions of MGNREGS Audit of Schemes Rules, 2011
- To frame an annual calendar to conduct at least one Social Audit in each Gram Panchayat every six months at the beginning of the year and a copy of the calendar will be sent to all DPC for making necessary arrangements.
- To oversee and responsible for every aspects of Social Audit of the NGREA in the entire State.
- To Recruit Staff, award consulting contracts and incur necessary expenditures to man age the day to day affairs of the Directorate.
- To take disciplinary action over staff as per the contract rules or any other rules applicabel.
- Responsible to take follow up action based on the findings of the Social Audit.
- To create resource base for conducting social audits.
- To assist the State Employment Council to monitor the action taken on Social Audit and prepare action taken report to incorporate in the annual report to be placed before the State Legislative.
- To prepare a summary of findings of social audits conducted during financial year to be submitted from the State Government to CAG of India.

**2. JOINT DIRECTOR**

To assist the Director in discharge of his duties.

**3. STATE RESOURCE PERSONS**

- To assist the Director/ Joint Director in discharge of their duties.
- To oversee and responsible for every aspects of the social Audit process from developing the Social Audit schedule to monitoring the follow up of issues identified through the social audit in their respective regions.
- To monitor District and Taluk Resource persons work in their respective regions.
- To develop and submit reports on the social audit in their respective regions.
- To report and conduct investigations in case of any lapses in the social audit process their respective regions.
- To liaise with officials on different aspects of the Social audit process in their respective regions.
- To prepare a summary of finding of Social audits conducted during financial year of the respective regions.
- To monitor the action taken on the social audit and prepare social audit report of the respective regions.
- To undertake any other relevant administrative functions.

**4. DISTRICT RESOURCE PERSONS**

- To assist the State Resource persons in discharge of their duties.
- To facilitate and conduct social audits in the allotted districts.
